ತಾ॥ ೭-೪-೪೬ ರ ... ೪-೪೬ ರ ವರೆಗೆ ಮೈಸೂರು ... ರವರ ಪ್ರತಿನಿಧಿ ... ಪ್ರತಿಸಿದ್ದಾರೆ ... ಜರುಗುತ್ತದೆ. ... ನಡೆಸಬೇಕಾ... ಗಿದೆ. ... ರ ವರೆಗೆ ... (...) ... ಇದೆ.

ತಾ॥ ... ಕಾರ್ಯಕ್ರಮದ ... ಕರೆದು ... ಶ್ರೀ ... ನ ... ಪ್ರಾರ್ಥನೆ.

ಹಿ. ಕೆ. ಸುಬ್ಬರಾವ್, ...

...-೪-೪೬ ...

ಮಹಿಳೆಯರ ... ಪ್ರಚಾರ

... ಮತ್ತು ದಕ್ಷಿಣ ... ಮಾಡಿದ.

ಅಸೆಂಬ್ಲಿಗೆ ... ಬಹಿಷ್ಕಾರವೇ ?

ಬಡವರ ... ಆಗಮಿಸುವರೇ ?

... ಸಭೆಗೆ ...

[illegible]

ವಾರ ಭವಿಷ್ಯ

ತಾ|| ೮-೪-೪೬ ರಿಂದ ೧೪-೪-೪೬ ರ ವರೆಗೆ

(ಶ್ರೀ ನಿತ್ಯಾನಂದಸ್ವಾಮಿ ಗಳಿಂದ)

ಮೇಷ— ನಿಮ್ಮ ಪ್ರಕೃತಿಯು ಚೆನ್ನಾಗಿರುವುದು, ದುಡ್ಡಿನ ಲಾಭವೂ ಮನಸ್ಸಿಗೆ ಆನಂದವೂ ಉಂಟಾಗುವುದು, ಗೌರವವೂ ಉದ್ಯೋಗ ಪ್ರಾಪ್ತಿಯೂ ಲಭಿಸುವುದು. ಸಾರ್ವಜನಿಕ ಸಂಸ್ಥೆಯಲ್ಲಿ ಭಾಗ ವಹಿಸುವವರಿಗೂ ಲೇಖಕ ಲೇಖಕಿಯರಿಗೂ ಪ್ರಖ್ಯಾತಿ, ಸ್ಥಾನ ಲಭಿಸುವುದು

ವೃಷಭ— ನಿಮ್ಮ ಪ್ರಕೃತಿಯು ಚೆನ್ನಾಗಿರುವುದು, ಖರ್ಚು ಜಾಸ್ತಿಯಾಗುವುದು, ಪ್ರಯಾಣದಲ್ಲಿ ನಿಮ್ಮ ತೊಂದರೆಪಡುವುದು, ಉದ್ಯೋಗ ವ್ಯವಹಾರದಲ್ಲಿ ತೊಂದರೆಗಳೇ ಅಧಿಕವಾಗಿ ಬೆಳೆಯಿಸಿದ ಕಾರ್ಯಗಳು ಮುಂದಕ್ಕೆ ಹೋಗುವವು. ಸಾಲಗಾರರ ತಗಾದೆ ಬರುವುದು

ಮಿಥುನ— ಪ್ರಕೃತಿಯು ಸರಿ ಇರಲಾರದು. ಮನಸ್ಸಿಗೆ ಚಿಂತೆಯುಂಟಾಗುವುದು. ಅನೇಕ ವಿಧವಾದ ಖರ್ಚು ಒದಗುವುದು. ಮಿತ್ರ ಸಹಾಯ ಒದಗಿ ಹೇಗೋ ನಿರ್ವಹಿಸುವಿರಿ, ಉದ್ಯೋಗ ವ್ಯವಹಾರದಿಂದ ಸಮಾಧಾನವಿರದು, ಪತ್ನೀಪುತ್ರಾದಿಗಳ ಆರೋಗ್ಯವು ಸರಿ ಇರದು

ಕರ್ಕಾಟಕ— ಈ ವಾರ ನಿಮಗೆ ನಾನಾ ತರದ ಚಿಂತೆಯೂ ಉದ್ಯೋಗ ಭಂಗವೂ ಧನವ್ಯಯವೂ ಪ್ರತಿಸ್ಪರ್ಧಿಗಳಿಂದ ಅಪವಾದವೂ ಯೋಚಿಸದ ತೀವ್ರತೆಗೆ ನಿಮ್ಮ ಗೃಹದಲ್ಲಿ ಕಲಹವೂ ವಾದ ವಿವಾದದಲ್ಲಿ ಪ್ರತಿಕೂಲವೂ, ಕೋರ್ಟು ಕಛೇರಿ ವ್ಯವಹಾರಗಳಲ್ಲಿ ಅಪಜಯವೂ ಸಾಲಗಾರರ ತಗಾದೆಯೂ ಉಂಟಾಗುವುದು

ಸಿಂಹ— ಈ ವಾರ ನಿಮಗೆ ಜಯವಾಗುವುದು, ಪತ್ನೀಪುತ್ರಾದಿಗಳ ಆರೋಗ್ಯವೂ ಸುಧಾರಿಸುವುದು, ವಿದ್ಯಾರ್ಥಿಗಳಿಗೆ ಯಶ, ಲೇಖಕ ಲೇಖಕಿಯರಿಗೂ ಕೀರ್ತಿ. ನೌಕರಿಯವರಿಗೆ ಉನ್ನತಿಯೂ ಪರಸ್ಥಳ ಪ್ರಯಾಣ ಮೂಲಕ ಲಾಭವೂ ಬಾಲಕ ಬಾಲಕಿಯರಿಗೂ ಸುಖ.

ಕನ್ಯಾ— ಈ ವಾರದಲ್ಲಿ ನಿಮಗೆ ಉತ್ತಮವಿರುವುದು, ಉದ್ಯೋಗ ವ್ಯವಹಾರದಲ್ಲಿ ಧನಲಾಭ, ರಾಜಕೀಯ ಮೇಲ್ಪಂಕ್ತಿಯಲ್ಲಿ ಜಯ, ಪಟ್ಟು ಲಾಟರಿ, ರೇಸ್, ಮೂಲಕ ಧನಲಾಭ. ಹೀರಿನ ಮೂಲಕ ಪ್ರಯಾಣ ಮಾಡುವವರಿಗೂ ವ್ಯಾಪಾರಸ್ಥರಿಗೂ ಬಹು ಲಾಭ, ಸುಖ.

ತುಲಾ— ಪ್ರಕೃತಿಯು ಉತ್ತಮವಿರುವುದು. ಧನ ಪ್ರಾಪ್ತಿಯೂ, ಜಾನುವಾರು ಕೊಳ್ಳುವಿಕೆಯೂ, ಆಫೀಸ್ ವಿಚಾರದಲ್ಲಿ ತೊಂದರೆ [illegible] ಪುತ್ರಾದಿಗಳ [illegible], ಮುಂಗಡ [illegible] ಪ್ರಯಾಣವೂ ಉಂಟಾಗುವುದು.

ವೃಶ್ಚಿಕ— ಆರೋಗ್ಯದ ಕಡೆಗೆ ಹೆಚ್ಚಿನ ಗಮನ ಕೊಡಬೇಕು. [illegible] ಧನನಾಶ, ಉದ್ಯೋಗ [illegible] ಉಂಟಾಗುವುದು.

ಧನುಸ್ಸು— [illegible] ವ್ಯವಹಾರಗಳಲ್ಲಿ [illegible] ಉಂಟಾಗುವುದು.

ಜಿ. ಎಂ. ಸಯ್ಯದ್‌ರವರ ಮರಣ?

ಕರಾಚಿಯ ಮುಸ್ಲಿಂ ಲೀಗ್ ಪಕ್ಷದ ಪತ್ರಿಕೆಯಾದ ಅಲ್‌ವಹೀದ್ ಎಂಬುದು ಕಳೆದ ಒಂದನೇ ತಾರೀಕು, ಸಿಂಧ್ ಮಿತ್ರಪಕ್ಷದ ನಾಯಕರಾದ ಮಿ|| ಜಿ. ಎಂ. ಸಯ್ಯದ್‌ರವರು ವಿಮಾನ ಅಪಘಾತದಲ್ಲಿ ಮೃತಪಟ್ಟರೆಂದೂ, ಮತ್ತು ಅವರೊಡನಿದ್ದ ಇನ್ನಿಬ್ಬರು ಗಾಯಗೊಂಡರೆಂದೂ ಒಂದು ಸುದ್ದಿಯನ್ನು ಪ್ರಕಟಿಸಿದೆ. ಈ ಅಂಶವನ್ನು ಮಿ|| ಸಯ್ಯದ್‌ರವರೇ ಓದಿದರು. "ಮಿ|| ಸಯ್ಯದ್‌ರವರು ಕರಾಚಿಯಿಂದ ದೆಹಲಿಗೆ ಪ್ರಯಾಣ ಮಾಡುತ್ತಾ ಮಧ್ಯೆ ಜೋಧಪುರದ ಬಳಿ ವಿಮಾನ ಅಪಘಾತದಿಂದ ಮೃತರಾದರು, ಅವರು ದೆಹಲಿಯಲ್ಲಿ ಬ್ರಿ|| ಪಾರ್ಲಿಮೆಂಟರಿ ನಿಯೋಗದವರನ್ನು ಭೇಟಿ ಮಾಡಲು ಪ್ರಯಾಣ ಹೊರಟಿದ್ದರು, ಮಿ|| ಸಯ್ಯದ್‌ರವರ ಮೃತ ದೇಹವನ್ನು ಕರಾಚಿಗೆ ತರಲಾಗುತ್ತಿದೆ" ಎಂದೂ ಆ ಪತ್ರಿಕೆಯಲ್ಲಿ ಪ್ರಕಟಿಸಲಾಗಿತ್ತು.

ಮಿ|| ಸಯ್ಯದ್‌ರವರ ಮಿತ್ರರನೇಕರು ನಿಜಾಂಶವನ್ನು ತಿಳಿಯಲು ಅವರ ಮನೆ ಮುಂದೆ ಕಲೆತರು. ಆದರೆ ಯಾವಾಂಶವೂ ತಿಳಿಯಲಿಲ್ಲ. ಇತರ ಯಾವ ವಾರ್ತಾ ಸಂಸ್ಥೆಗಳಿಂದಲೂ ಈ ಸುದ್ದಿಗೆ ಸಮರ್ಥನೆ ದೊರೆಯಲಿಲ್ಲ. ಕಡೆಗೆ ಜನರು ಅಲ್‌ವಹೀದ್ ಪತ್ರಿಕೆಯ ಸಂಪಾದಕರನ್ನೇ ವಿಚಾರಿಸಲು ಅವರು ಇದು ಏಪ್ರಿಲ್ ಕುಚೋದ್ಯ (ಏಪ್ರಿಲ್ ಫೂಲ್ ಜೋಕ್)ವೆಂದು ತಿಳಿಸಿದರು.

ಮಕರ— ಅಕಸ್ಮಾತ್ತಾಗಿ ಧನಲಾಭ, ಕೋರ್ಟು ಕಛೇರಿ ವ್ಯವಹಾರದಿಂದ ಜಯ, ಜಾನುವಾರುಗಳ ಕ್ರಯ ವಿಕ್ರಯಗಳಿಗೂ, ಹಣ್ಣು, ಹೂ, ಫಲಗಳ ವ್ಯಾಪಾರ ಮಾಡುವವರಿಗೂ ಯಶ

ಕುಂಭ— ಆರೋಗ್ಯ ಸರಿ ಇರಲಾರದು, ದುಡ್ಡಿನ ತಗಾದೆ ಬಹಳ, ಉದ್ಯೋಗ ವ್ಯವಹಾರಗಳಲ್ಲಿ ತೊಂದರೆಯೂ, ಪ್ರಯಾಣದಲ್ಲಿ ಪ್ರತಿಕೂಲವೂ, ಪತ್ನಿ ಪುತ್ರಾದಿಗಳಿಗೆ ದೇಹಾಲಸ್ಯವೂ ಉಂಟಾಗುವುದು

ಮೀನ— ಪ್ರಕೃತಿಯು ಸುಧಾರಿಸುವುದು, ನೂತನ ವಸ್ತ್ರಗಳನ್ನೂ, ಪ್ರಯಾಣವೂ, ಉದ್ಯೋಗ ವ್ಯವಹಾರದಲ್ಲಿ ಧನಲಾಭವೂ ಉಂಟಾಗುವುದು. ಆದರೂ ವಿಷ ಜಂತು ಭಯವಾಗಲೀ ಅಗ್ನಿ ಭಯವಾಗಲೀ ಉಂಟಾಗಬಹುದು.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ಜಾಹೀರಾತಿನ ದರಗಳಿಗೆ ವಿಚಾರಿಸಿರಿ

Edited printed and published by A. [illegible] Nagarajan at the Sadhvi Press [illegible]

ಐ. ಎನ್. ಎ ನಿಧಿಗೆ ಸರ್ ಸಿ. ಪಿ. ಯವರಿಂದ ೧೫,೦೦೦ ರೂ.

ತಿರುವಾಂಕೂರಿನ ಪ್ರಧಾನಿಗಳಾದ ಸರ್ ಸಿ. ಪಿ. ಯವರು ಶ್ರೀ ವಲ್ಲಭಾಯಿ ಪಟೇಲರನ್ನು ದಹಲಿಯಲ್ಲಿ ಭೇಟಿ ಮಾಡಿದಾಗ ತಿರುವಾಂಕೂರಿನಲ್ಲಿ ತಾವು ಐ. ಎನ್. ಎ ನಿಧಿಯನ್ನು ಸ್ಥಾಪಿಸುವುದಾಗಿಯೂ, ಇದಕ್ಕೆ ತಾವು ವೈಯಕ್ತಿಕವಾಗಿ ಹತ್ತು ಸಾವಿರ ರೂ ಕೊಡುವುದಾಗಿಯೂ ವಾಗ್ದಾನ ಮಾಡಿರುವರು.

ಬ್ಯಾಡ್‌ಮಿಂಟನ್

ಸ್ವಂ. ವ.] ಮಾಯಸಂದ್ರ ೫

ತಾ|| ೫-೪-೪೬ ನೇ ಶುಕ್ರವಾರ ಮಾಯಸಂದ್ರ ವಿಕ್ಟೋರಿಯಾ ಬ್ಯಾಡ್‌ಮಿಂಟನ್ ಟೀಮಿಗೂ, ನಾಗಮಂಗಲ [illegible] ಬೆಳ್ಳೂರು, ಎವರ್‌ಗ್ರೀನ್ ಬ್ಯಾಡ್‌ಮಿಂಟನ್ ಟೀಮಿಗೂ ಮಾಯಸಂದ್ರದಲ್ಲಿ, ಡಾಕ್ಟರ್ ಶ್ರೀ ಟಿ. ಎನ್. ಸೀತಾರಾಮಯ್ಯನವರ ಅಧ್ಯಕ್ಷತೆಯಲ್ಲಿ ಮ್ಯಾಚ್ ನಡೆದು ಮಾಯಸಂದ್ರ ವಿಕ್ಟೋರಿಯಾ ಟೀಮಿನವರು ಜಯಶೀಲರಾದರು

ಛತ್ರದ ಗಾಡಿ ಪತ್ತೆ

ಸ್ವಂ. ವ.] ಹಿರೇಸಾವೆ ೬

ಕಾಂತರಾಜಪುರದಿಂದ ತಿಪಟೂರಿಗೆ ಸಾಗುತ್ತಿದ್ದ ಒಂದು ಗಾಡಿ ಛತ್ರವನ್ನು ಪ್ರದ್ ಶಿರಸ್ತೇದಾರರಾದ ಶ್ರೀ ರಾಮಕೃಷ್ಣಯ್ಯನವರು ನಿನ್ನೆ ರಾತ್ರಿ ಪತ್ತೆ ಹಚ್ಚಿದರು. ಪಾರ್ಟಿಯವರು ಅವರಿಗೆ ೫೦ ರೂ. ಕೊಡಲು ಆ ಮೊಬಲಗಿನ ಸಮೇತ ಛತ್ರದ ಗಾಡಿಯನ್ನು ಸರ್ಕಾರದವರ ವಶವಹಿಸಿ ಮುಂದಿನ ಕ್ರಮ ನಡೆಸಲು ಏರ್ಪಡಿಸಿರುವರು ಇವರ ಕಾರ್ಯ ತತ್ಪರತೆಯು ಪ್ರಶಂಸನೀಯವಾದುದು.

ಹರಿಕಥೆ

ರಾಜಧಾನಿಯ ಸುಪ್ರಸಿದ್ಧ ಕೀರ್ತನಕಾರರಾದ ಹರಿಕಥಾ ವಿದ್ವಾನ್ ಗಮಕಿ ರಾಮಕೃಷ್ಣಶಾಸ್ತ್ರಿಗಳವರು ಇಲ್ಲಿಗೆ ಆಗಮಿಸಿ ಭೀಷ್ಮ ಪ್ರತಿಜ್ಞೆ ಎಂಬ ಕಥೆಯನ್ನು ಮಾಡಿ ಜನರನ್ನು ಆನಂದ ಗೊಳಿಸಿದರು. ಇವರು ತಾ|| ೬-೪-೪೬ ರಲ್ಲಿ ನಡೆಯುವ ಗಾಯತ್ರಿ ಹೋಮದಲ್ಲಿ ಭಾಗವಹಿಸಲು ಇಲ್ಲಿಯೇ ತಂಗಿರುವರೆಂದು ಗೊತ್ತಾಗಿದೆ.

ಕಾಂಗ್ರೆಸ್ ಸೇರಿದರು

ಪಂಜಾಬಿನ, ಜಮೀನ್ದಾರ್ ಕ್ಷೇತ್ರದಿಂದ ಕೇಂದ್ರ ಶಾಸನ ಸಭೆಗೆ ಚುನಾಯಿತರಾಗಿದ್ದ ಸ್ವತಂತ್ರ ಸದಸ್ಯರಾದ ಸರ್ದಾರ್ ಸುಂದರ ಸಿಂಗ್ ಮಜಿಥಿಯರವರು ಕಾಂಗ್ರೆಸ್ ಪಕ್ಷಕ್ಕೆ ಸೇರಿದರು. ಕೇಂದ್ರ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸಂಖ್ಯೆ [illegible].

ಟಿ. ಸಿ. ನಟರಾಜ್

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ನಮ್ಮ ಶಾಪಿನಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ದುಂಡೂರಿನ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಮೈಸೂರು ಸಂಸ್ಥಾನಕ್ಕೆ ಆಹಾರ ಸರಬರಾಜು

ಭಾರತ ಸರ್ಕಾರದವರು ಮೈಸೂರು ಸಂ[illegible] ಸ್ಥಾನಕ್ಕೆ ಶೀಘ್ರವಾಗಲೇ ಒದಗಿಸಬೇಕಾದ ಆಹಾರ ಪದಾರ್ಥಗಳ ಜೊತೆಗೆ ಹೆಚ್ಚಿನದಾಗಿ ೫೦ ಸಾವಿರ ಟನ್ ಗೋಧಿ, [illegible] ಸಾವಿರ ಟನ್ ಮುಸುಕಿನ ಜೋಳ [illegible] ೩೦ ಸಾವಿರ ಟನ್ ಅಕ್ಕಿಯನ್ನು ಮೇ, ಜೂನ್, ಜುಲೈ ಮತ್ತು ಆಗಸ್ಟ್, ಈ ತಿಂಗಳುಗಳ ಉಪಯೋಗಕ್ಕಾಗಿ ಮೀಸಲಾಗಿಟ್ಟಿರು[illegible]ರು ಈ ಸೈಕಿ ಸ್ವಲ್ಪ ಭಾಗವು ಮುಂದಿನ ತಿಂಗಳು ನಮ್ಮ ಸಂಸ್ಥಾನಕ್ಕೆ ಒದಗುವುದು, ಉಳಿದುದನ್ನು ಆದಷ್ಟು ಬೇಗನೆ ಒದಗಿಸಲಾಗುವುದೆಂದೂ ಗೊತ್ತಾ[illegible]

ಪಾಕಿಸ್ಥಾನಕ್ಕೆ ಒಪ್ಪಿಗೆ ಇ[illegible]

ರಾಷ್ಟ್ರದ ಸಂಚಾರ, ವ್ಯವಹಾರ, [illegible] ರಕ್ಷಣೆಗೆ ಬೇಕಾದ ಎಲ್ಲ ಸವ[illegible]ನ್ನು ಸಂಸ್ಥಾನಗಳು ಭಾರತದ ಕೇಂದ್ರ ಸರ್ಕಾರಕ್ಕೆ ಕೊಡುವುವು ಆದರೆ [illegible]ನಕ್ಕೆ ಒಪ್ಪಲು ಸಾಧ್ಯವಿಲ್ಲ. ದೇಶದ[illegible]ಗೆ ಅವರೂ ಪರವಾಗಿಲ್ಲ. ೧೦ ಕೋಟಿ [illegible] ಸತ್ತರೂ ಸಂಸ್ಥಾನಗಳು ಪಾಕಿಸ್ತಾನ[illegible] ವಿರೋಧಿಸುವುವು ಎಂದು ಸ[illegible] ಷ್ಟವಾಗಿ ತಿಳಿಸಿದ್ದಾರೆ

ನಿಮ್ಮ ಮೈ ಮೊಕವನ್ನು ಹೊಳೆಯಬೇಕೆ? ನಿತ್ಯ ಲಾವಣ್ಯ ಮೋಹಕಗೊಳಿಸಬೇಕೆ!

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್!

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ.

ಎಲ್ಲೆಲ್ಲೂ ದೊರೆಯುತ್ತದೆ

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ

ಬೆಂಗಳೂರು

ಅಮೃತ

ನಿತ್ಯದ ಜ್ವರ ಮಲೇ[illegible] ಜ್ವರ, ಜ್ವರದ ಗಡ್ಡೆ ಇವ[illegible] ಮೇಲೆ ಬಹಳ ಚೆನ್ನಾಗಿ [illegible] ಮಾಡುತ್ತದೆ.

ಕೆ. ಸಿ. ವೆಂಕಟರಾಮ[illegible]

ಡಿಸ್ಟ್ರಿಕ್ಟ್ ಬೋರ್ಡ್ ಸ್ಟ್ರೀ[illegible]

[illegible]

ಫೋ॥ ನಂ 399 ॥ ವಂದೇ ಮಾತರಂ ॥ ಒಂದಿನ ಪತ್ರಿಕೆ 3 ಕಾಸು

ಸಂಪುಟ ೪] ಮಂಗಳವಾರ [illegible] [ಸಂಚಿಕೆ [illegible]

ವಿನಾಶ ಕೃತ್ಯಗಳಿಗೆ ಲೀಗಿನ ಗುಪ್ತ ಸೂಚನೆ?

ಲೀಗಿನ ಒಳ ಸಂಚು ಪತ್ತೆಯಾಯಿತು

[illegible]

ಸೂಚನೆ

ಶ್ರೀ ರಾಮ ನವಮಿ ಪ್ರಯುಕ್ತ "ಸಾಧ್ವಿ" ಪತ್ರಿಕೆಗೆ ನಾಳೆ ರಜಾ ಕೊಡಲಾಗಿದೆ.

— ವ್ಯವಸ್ಥಾಪಕ.

ಪಾಕೀಸ್ಥಾನಕ್ಕೆ ಮಿರ್ಜರವರ ವಿರೋಧ

[illegible]

ಜರ್ಮನಿಯನ್ನು ಭಾಗಮಾಡಲು ಫ್ರಾನ್ಸಿನ ಒತ್ತಾಯ

[illegible]

ಭರತಪುರದ ದೇವಾಲಯಕ್ಕೆ ಹರಿಜನ ಪ್ರವೇಶ

[illegible]

ದಯಪಾಲಿಸಲು ಯಾಚನೆ

[illegible]

ಚಂದ್ರ ಗ್ರಹಣೋದನೆ ಸಂಬಂಧ

[illegible]

ಕುಂಟಟಿಗರ ಶ್ರೀ ರಾಮ ಮಂದಿರ

[illegible]

ಸ್ವತಂತ್ರ ಭಾರತದಲ್ಲಿ ಸಂಸ್ಥಾನಗಳಿಗೆ ಸ್ಥಾನವಿಲ್ಲ

[illegible]

ಸ್ವೇಚ್ಛೆಯವರ ವಿಜಯ

[illegible]

ಶಾಸನ ಸಭೆಯವರ ಸಂಬಳ

[illegible]

ಸ್ಪೇನಿನಲ್ಲಿ ಸೈನ್ಯಾಧಿಕಾರಿಗಳ ದಸ್ತಗಿರಿ

[illegible]

ಹೊಸ ಮಾದರಿಯ ಗೋಷ್ಠಿ

[illegible]

ನೆಲ ಮಾಳಿಗೆಯಲ್ಲಿ ಗಿರಣಿಗಳು

[illegible]

ಸೇಗಾಲರ ಡಾ॥ ಭಾರತ ಪ್ರವಾಸ

[illegible]

ವ್ಯವಸಾಯ ಸಚಿವರ ಪ್ರವಾಸ

[illegible]

ಸಾಧ್ವಿ

೨೪-೯-೪೬ ಮಂಗಳವಾರ

ಪತ್ರಿಕಾ ಸಲಹಾ ಸಮಿತಿ

ಈಗಿರುವ ಪತ್ರಿಕಾ ಸಲಹಾ ಸಮಿತಿಯನ್ನು ರದ್ದು ಮಾಡಬೇಕು; ಅದಕ್ಕೆ ಪ್ರತಿಯಾಗಿ ಪತ್ರಿಕೋದ್ಯೋಗಿ ಸಮ್ಮೇಳನದ ಸ್ಥಾಯೀ ಸಮಿತಿಯನ್ನೇ ಸರ್ಕಾರದವರು ಅಂಗೀಕರಿಸಿ ಅದರ ಸಲಹೆಗಳಂತೆಯೇ ಕೆಲಸಗಳನ್ನು ನಡೆಸಬೇಕು; ಹಾಗಿಲ್ಲದಿದ್ದರೆ ಪತ್ರಿಕಾ ಸಲಹಾ ಸಮಿತಿಯಲ್ಲಿ ಈಗ ಸದಸ್ಯರಾಗಿರುವವರು ರಾಜೀನಾಮೆ ಕೊಡಬೇಕು ಎಂಬ ನಿರ್ಣಯವು ರಾಜಧಾನಿಯಲ್ಲಿ ನಡೆದ ಮೈಸೂರು ಪತ್ರಿಕೋದ್ಯೋಗಿಗಳ ಸಮ್ಮೇಳನದ ವಾರ್ಷಿಕಾಧಿವೇಶನದಲ್ಲಿ ಸಂಗ್ರಹಿಸಲಾಗಿತ್ತು. ಇದು ಆಗಿ ಎರಡು ತಿಂಗಳಾಯಿತು. ಅದರಿಂದ ಮುಂದಿನ ಕಾರ್ಯಕ್ರಮವನ್ನು ಪರಿಶೀಲಿಸಲು ಸಮ್ಮೇಳನದ ಸ್ಥಾಯೀ ಸಮಿತಿಯು ಮೊನ್ನೆ ಸೇರಿತ್ತು. ಈ ಸಂದರ್ಭದಲ್ಲಿ ಸಮಿತಿಯು ಪರವಾಗಿ ಒಂದು ನಿಯೋಗದವರು ದಿವಾನರನ್ನು ಕಂಡು ಮಾತುಕತೆ ನಡೆಸುವಂತೆ ತೀರ್ಮಾನವಾಯಿತು.

ಸರ್ಕಾರದವರು ಸಮ್ಮೇಳನದ ನಿರ್ಣಯಕ್ಕೆ ಸಂಪೂರ್ಣವಾದ ಮನ್ನಣೆಯನ್ನು ಕೊಡುವುದು ಯುಕ್ತವಾಗಿದೆ. ಬ್ರಿಟಿಷ್ ಇಂಡಿಯಾದಲ್ಲಿ ಸಲಹಾ ಸಮಿತಿಗಳು ರಚನೆಯಾಗಿರುವ ಕ್ರಮದಂತೆ ಇಲ್ಲಿಯೂ ಆಗಬೇಕೆಂದು ಸಮ್ಮೇಳನದವರು ಸೂಚಿಸಿದ್ದಾರೆ. ಪತ್ರಿಕಾ ಸಂಪಾದಕರ ಸಮಿತಿಯವರಿಂದ ಚುನಾಯಿತರಾದವರನ್ನೇ ಅಲ್ಲಿ ಸಮಿತಿಗಳ ಸದಸ್ಯರಾಗಿ ತೆಗೆದುಕೊಳ್ಳಲಾಗಿದೆ. ಇಲ್ಲಿ ಚಾಕ್ಕೀದಾರರುಗಳನ್ನೂ, ಹೊರಗಿನ ಪತ್ರಿಕೆಗಳ ಪ್ರತಿನಿಧಿಗಳನ್ನೂ ತೆಗೆದುಕೊಳ್ಳಲಾಗಿದೆ. ಪತ್ರಿಕೆಗಳ ಆಶಿಸಿಗೆ ಸಂಬಂಧಪಟ್ಟ ವಿಷಯಗಳನ್ನು ವಿಮರ್ಶಿಸಲು ಚಾಕ್ಕೀದಾರರುಗಳಿಗೆ ಅರ್ಹತೆಯಿಲ್ಲವೆಂದು ಬೇರೆ ಹೇಳಬೇಕಾಗಿಲ್ಲ.

ಮುಖ್ಯವಾಗಿ ಸಲಹಾ ಸಮಿತಿಯು ಸಾರ್ಥಕ ಕಲ್ಪನೆಗೆ ಸಾಧಕವಾಗಿರಬೇಕು. ಪತ್ರಿಕಾಕರ್ತರುಗಳಿಗೂ ಸರ್ಕಾರಕ್ಕೂ ಸಮನ್ವಯ ಸನ್ನಿವೇಶ ಮಾಡಬೇಕು. ಸಂಬಂಧಪಟ್ಟ ಸಂದರ್ಭಗಳನ್ನು ಕರೆಸಿ ಅವರಿಗೆ ಸೂಕ್ತವಾದ ಸಲಹೆಗಳನ್ನು ಕೊಡಬೇಕು. ಈಗಿನಂತೆ ಸರ್ಕಾರದವರು ಪತ್ರಿಕೆಗಳ ಮೇಲೆ ಗದಾ ಪ್ರಹಾರ ಮಾಡಿ ಅನಂತರ ವಿಷಯವನ್ನು ಸಮಿತಿಯ ಮುಂದೆ ತರುವ ಪದ್ಧತಿಯು ತಪ್ಪಬೇಕು. ಮುಖ್ಯವಾಗಿ ಸಲಹಾ ಸಮಿತಿಯ ಸದಸ್ಯರು ಪತ್ರಿಕಾ ಕರ್ತರುಗಳ ವಿಶ್ವಾಸಕ್ಕೆ ಪಾತ್ರರಾಗಿರಬೇಕು. ಈ ಎಲ್ಲಾ ಅಂಶಗಳನ್ನೂ ಪರಿಶೀಲಿಸಿ ಸಮಿತಿಯನ್ನು ಪುನರ್ರಚಿಸುವುದು ಅಗತ್ಯ. ದಿವಾನರು ನಿಯೋಗದವರೊಡನೆ ಈ ಅಂಶಗಳನ್ನು ಪರಿಶೀಲಿಸಿ ಪತ್ರಿಕೋದ್ಯಮಕ್ಕೆ ಅನುಕೂಲವಾದ ರೀತಿ ಸಮಿತಿಯನ್ನು ರಚಿಸಿ ಪತ್ರಿಕೆಗಳಿಗೂ ಸರ್ಕಾರಕ್ಕೂ ಪರಸ್ಪರ ಸಂಬಂಧ ಸ್ವರೂಪವಾಗಿ ನಡೆಯುವಂತೆ ಏರ್ಪಾಡು ಮಾಡಬೇಕೆಂದು ನಾವು ಕೋರುತ್ತೇವೆ.

* ಮೈಸೂರಿನಲ್ಲಿ ನಾ[illegible] ಪ್ರದರ್ಶನ ನಡೆಸಿ [illegible] ಮುಕ್ತಿಸಿದ ಶ್ರೀ [illegible] ಮತ್ತು ಇವರನ್ನು [illegible] ಪ್ರಶಂಸಿಸಿ[illegible] ಮಾಡಿ[illegible].

ವಾರ್ತಾ ವಾಹಿನಿ

* ಕಲ್ಕತ್ತಾ ವಿಶ್ವವಿದ್ಯಾನಿಲಯದವರು ನಡೆಸುತ್ತಿದ್ದ ಬಿ ಎಸ್ ಸಿ ಪರೀಕ್ಷೆಗೆ ಕೊಟ್ಟಿದ್ದ ಪ್ರಶ್ನೆಗಳು ಬಹಳ ಕಠಿಣವಾಗಿದ್ದುದರಿಂದ ವಿದ್ಯಾರ್ಥಿಗಳೆಲ್ಲರೂ ಪರೀಕ್ಷಾ ಭವನದಿಂದ ಹೊರಕ್ಕೆ ಬಂದರು.

* ಮೈಸೂರು ಸಿವಿಲ್ ಸರ್ವಿಸ್ ಪರೀಕ್ಷೆಯಲ್ಲಿ ಮೊದಲನೆಯವರಾಗಿ ತೇರ್ಗಡೆ ಹೊಂದಿದ ಶ್ರೀ ಆನಂದ ಕೃಷ್ಣರವರನ್ನು ಶ್ರೀಮನ್ಮಹಾರಾಜರು ಪ್ರೊಬೇಷನರೀ ಅಸಿಸ್ಟೆಂಟ್ ಕಮೀಷನರಾಗಿ ನೇಮಿಸಿರುತ್ತಾರೆ.

§ ಪೌರಸಭೆಗೆ ಕೊಡಬೇಕಾದ ಕಂದಾಯವನ್ನು ಕೊಟ್ಟು ಹೊರತು ರೇಷನ್ ಕಾರ್ಡ್ ಕೊಡುವುದಿಲ್ಲವೆಂದು ನರಸಿಂಹರಾಜಪುರದ ಪೌರಸಭಾಧ್ಯಕ್ಷರಾದ ಅಮಲ್ದಾರರು ಟಾಂ ಟಾಂ ಮಾಡಿಸಿರುವುದಾಗಿ ವರದಿಯಾಗಿದೆ. ಇದರಿಂದ ಜನರಿಗೆ ಬಹಳ ತೊಂದರೆಯಾಗಿರುವುದಾಗಿ ತಿಳಿದುಬಂದಿದೆ.

§ ಚಿಕ್ಕಬಳ್ಳಾಪುರದ ಕೋರ್ಟಿನಿಂದ ಬೇರೆ ಕಡೆಗೆ ತನ್ನ ಮೊಕದ್ದಮೆಯನ್ನು ವರ್ಗಾಯಿಸಬೇಕೆಂದು ಶ್ರೀ ಶಿವಸ್ವಾಮಿರೆಡ್ಡಿಯವರು ಹಾಕಿಕೊಂಡಿದ್ದ ಅರ್ಜಿಯನ್ನು ಅಲ್ಲಿನ ಮ್ಯಾಜಿಸ್ಟ್ರೇಟರು ತಿರಸ್ಕರಿಸಿದ್ದಾರೆ.

* ತಿರುವಾಂಕೂರಿನಲ್ಲಿ ಸ್ಥಾಪಿತವಾಗಲಿರುವ ಪಿ. ಎಸ್ ಎ ನಿಧಿ ಸಮಿತಿಗೆ ಅಲ್ಲಿನ ದಿವಾನರಾದ ಸರ್ ಸಿ ಪಿ ರಾಮಸ್ವಾಮಿ ಅಯ್ಯರವರು ಸಪ್ತತಿ ಇಪ್ಪತ್ತು ಸಾವಿರ ರೂ ಧನ ಸಹಾಯವನ್ನು ಮಾಡಿರುವುದಾಗಿ ಗೊತ್ತಾಗಿದೆ.

§ ಮಹಾರಾಜಾ ಕಾಲೇಜು ಪ್ರೊ|| ಈ ಗಬ್‌ಟ‍್ರವರು ಆರು ತಿಂಗಳ ಕಾಲ ಸ್ವದೇಶಕ್ಕೆ ಹೋಗಿ ಬರುವರು. ಆಗ ಶ್ರೀ ಎಸ್ ವಿ. ರಂಗಣ್ಣನವರು ಪ್ರಧಾನ ಪ್ರೊಫೆಸರಾಗಿರುವರು.

§ ನಾಲ್ಕು ವರುಷಗಳಿಂದ ಗುಪ್ತವಾಗಿ ಚಳುವಳಿ ನಡೆಸುತ್ತಿದ್ದ ಮಾಜಿ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರಾದ ಶ್ರೀ ಅಚ್ಯುತ ಪಟ್ವರ್ಧನ್‌ರವರ ಮೇಲಿನ ವಾರಂಟನ್ನು ಕಾಂಗ್ರೆಸ್ ಮಂತ್ರಿಮಂಡಲದವರು ರದ್ದು ಮಾಡಿರುವುದರಿಂದ ಅವರು ಮೊನ್ನೆ ಬೊಂಬಾಯಿಗೆ ಬಂದರು. ಭಾರಿ ಸ್ವಾಗತ ನೀಡಲಾಯಿತು.

§ ಸೀಮಿತ ಸಂಧಾನಗಳ ನಂತರ ಬ್ರಿಟಿಷ್ ನಿಯೋಗದವರು ತಾವಾಗಿಯೇ ಹಲವು ಸೂಚನೆಗಳನ್ನು ಸಿದ್ಧಪಡಿಸಿ ಲೀಗ್ ಮತ್ತು ಕಾಂಗ್ರೆಸ್ ಅಧ್ಯಕ್ಷರನ್ನೂ, ಗಾಂಧೀಜಿಯವರನ್ನೂ ಒಟ್ಟಿಗೆ ಬರಮಾಡಿಕೊಂಡು ಅವರ ಪರಿಶೀಲನೆಗೆ ಒಪ್ಪಿಸಬಹುದೆಂದು ತಿಳಿದುಬಂದಿದೆ.

ಸಾಧ್ವಿ

ಈಗ

ರಾಜಧಾನಿಯ ರಾಷ್ಟ್ರೀಯ

ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ಜಾಹಿರಾತಿನ ದರಗಳಿಗೆ

ಬರೆಯಿರಿ

* ಮುಂದೆ ರಚನೆಯಾಗಲಿರುವ ರಾಷ್ಟ್ರೀಯ ಸರಕಾರಕ್ಕೆ ಸಲಹೆ ಕೊಡಲು ರಾಜಕೀಯ ಮತ್ತು ಆಡಳಿತ, ಆರ್ಥಿಕ ವಿಚಾರ ಮತ್ತು ರಾಷ್ಟ್ರ ಪುನರ್ರಚನೆ-ಇವುಗಳಿಗೆ ಸಂಬಂಧಪಟ್ಟಂತೆ ಮೂರು ಪ್ರತ್ಯೇಕ ಸಮಿತಿಗಳಿರಬೇಕೆಂದು ಸರ್ ಎಂ ವಿಶ್ವೇಶ್ವರಯ್ಯನವರು ಸಲಹೆಯನ್ನಿತ್ತಿರುವರು.

§ ಕಳೆದ ಯುದ್ಧಾನಂತರ ಸ್ಥಾಪಿತವಾದ ಲೀಗ್ ಆಫ್ ನೇಷನ್ಸ್ ಸಂಸ್ಥೆಯನ್ನು ಮುಕ್ತಾಯಗೊಳಿಸಲು ಜಿನೀವಾ ನಗರದಲ್ಲಿ ೪೫ ರಾಷ್ಟ್ರಗಳ ಪ್ರತಿನಿಧಿಗಳು ಸೇರಿರುವರು. ಅದರ ಆಸ್ತಿಪಾಸ್ತಿಗಳನ್ನು ಈಗಿನ ವಿಶ್ವ ಸಂಸ್ಥೆಗೆ ವಹಿಸಲಾಗುವುದು.

§ ಅಲಹಾಬಾದಿನಿಂದ ದೆಹಲಿಗೆ ಕಾಂಗ್ರೆಸ್ ಪ್ರಧಾನ ಕಚೇರಿಯು ವರ್ಗಾಯಿಸಲ್ಪಡುವುದೆಂದು ಗೊತ್ತಾಗಿದೆ. ಅಲ್ಲಿ ಅರಮನೆಯಂತಹ ಒಂದು ಭವನವು ಕಾಂಗ್ರೆಸ್ಸಿಗೆ ದೊರೆತಿದೆ.

§ ಬಾಬು ಸುಭಾಷ್ ಚಂದ್ರ ಬೋಸರು ಬದುಕಿದ್ದರೆಂದೂ, ಇನ್ನೆರಡು ತಿಂಗಳಲ್ಲಿ ವಾಪಸು ಬರುವರೆಂದೂ ಇತ್ತೀಚೆಗೆ ಬಿಡುಗಡೆಯಾಗಿ ಬಂದ ಕೆಲವು ಐ ಎನ್ ಎ ಸೈನಿಕರು ತಿಳಿಸಿರುವರು.

* ಪರ್ಷಿಯಾದ ಎಣ್ಣೆ ಬಾವಿ ರಕ್ಷಣೆಗೆ ಇಂಗ್ಲೆಂಡ್ ಸರ್ಕಾರ ಹಾಗೂ ಪರ್ಷಿಯಾದ ಸರ್ಕಾರದ ಒಂದು ಒಪ್ಪಂದವಾಗಿರುತ್ತದೆ. ಎಣ್ಣೆ ತೆಗೆಯುವ ಜನರನ್ನು ಬ್ರಿಟಿಷರೇ ವಹಿಸುವುದು. ಪರ್ಷಿಯಾದ ಸೈನಿಕರೂ, ಪೊಲೀಸರೂ ರಕ್ಷಣೆ ನಡೆಸುವರು.

* ತಂತಿ ಇಲಾಖೆಯ ನೌಕರರು ತಮ್ಮ ಸಂಬಳಗಳನ್ನು ಏರಿಸಬೇಕೆಂದೂ, ಇಲ್ಲದಿದ್ದರೆ ರಾಜೀನಾಮೆ ಕೊಡುವುದಾಗಿಯೂ ಪಂಜಾಬಿನ ಆಬ್ಕಾರಿ ಇನ್ಸ್‌ಪೆಕ್ಟರುಗಳೂ, ಸಬ್ ಇನ್ಸ್‌ಪೆಕ್ಟರುಗಳೂ ತೀರ್ಮಾನಿಸಿರುತ್ತಾರೆ.

† ಭದ್ರತಾ ಸಮಿತಿಯಲ್ಲಿ ಪರ್ಷಿಯಾದ ಬಗ್ಗೆ ಮಾಡಿರುವ ತೀರ್ಮಾನಕ್ಕಾಗಿ ರಷ್ಯವು ಖಂಡನೆಯನ್ನು ಸೂಚಿಸಿದೆ. ಪರ್ಷಿಯಾಕ್ಕೆ ಸಂಬಂಧಪಟ್ಟ ಎಲ್ಲ ವಿಷಯಗಳನ್ನೂ ಪಟ್ಟಿಯಿಂದ ತೆಗೆದು ಹಾಕಬೇಕೆಂದು ರಷ್ಯವು ಒತ್ತಾಯಪಡಿಸಿದುತ್ತದೆ.

* ರಾಜರುಗಳು ಪ್ರಜೆಗಳ ಪ್ರತಿನಿಧಿಗಳಾಗಿರುವುದಿಲ್ಲ, ಸಂಸ್ಥಾನಗಳ ವಿಚಾರದಲ್ಲಿ ಆಸಕ್ತಿ ಹೊಂದಿರುವ ಪ್ರಜಾ ಪರಿಷತ್ತಿಗೇ ಪ್ರಜೆಗಳ ಪ್ರತಿನಿಧಿಯಾಗಲು ಅಧಿಕಾರವಿರುವುದು ಎಂಬುದಾಗಿ ಪಂಡಿತ ನೆಹರೂರವರು ತಿಳಿಸಿದ್ದಾರೆ.

ಟಿ. ಸಿ. ನಟರಾಜ್

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಡಂಕಲೂರರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

Edited printed and published by A.R. Nagarajan at the Sadhvi Press D Subbiah Road Mysore

ರಾಮೋತ್ಸವ

ಮೊದಲಿನಂತೆ ಶ್ರೀ ರಾಮ[illegible] ಶ್ರೀ|| ಎಸ್ ವಿಠ್ಠಲರಾಯರ ಶ್ರೀ ರಾಮಚಂದ್ರ ದೇವಸ್ಥಾನದಲ್ಲಿ ತಾ|| ೧೦-೪-[illegible]ರ ಆಗಾಯಿತ್ತು ೨೪ರ ಪೌರ್ಣಮಿ ಶ್ರೀರಾಮೋತ್ಸವವು ಪ್ರತಿ ದಿನ ಸಾಯಂಕಾಲ [illegible] ಘಂಟೆಯಿಂದ ವಿದ್ವಾಂಸರುಗಳ ಹರಿಕಥೆ, ಸಂಗೀತ, ಯಕ್ಷಗಾನ ಪ್ರಸಂಗ ಮುಂತಾದುವುಗಳೊಡನೆ ನಡೆಯುತ್ತದೆ.

ರಾಜಧಾನಿಯ ವಿಲ್ಲೆ ಮೊಹಲ್ಲಾ [illegible] ಶಾಮಣ್ಣನವರ ಬೀದಿಯಲ್ಲಿರುವ ಪಾರಮಾರ್ಥಿಕ ಶ್ರೀನಿವಾಸ ರಾಘವೇಂದ್ರ ಗ್ರಂಥ ವಿದ್ಯಾ ಶ್ರೀರಾಮ ಮಂದಿರದಲ್ಲಿ ಮಾಮೂಲು ಮೇರೆ ತಾ|| ೧೦-೪-೪೬ ನೇ [illegible] ವಾರದಿಂದ ೧೫ ದಿನಗಳು ಜೊತೆಗೆ [illegible] ಪೌರ್ಣಮಿ ದಿನ ಸತ್ಯನಾರಾಯಣ ವ್ರತ, ಶ್ರೀ ರಾಘವೇಂದ್ರ ಸ್ವಾಮಿಗಳವರ ದೇವರ ಅರ್ಚನೆಯು ಮೂಲ್ಕ ಗುರುವಾರ [illegible] ಲೋಕ ಕಲ್ಯಾಣ ಪೂಜಾ ಸೇವಾ, [illegible]ದೆ ಸಮುಚ್ಚಯದೊಡನೆ ಮಂಡಲ ಸಮಾರಾಧನಾ, ಶ್ರೀರಾಮ ಪಟ್ಟಾಭಿಷೇಕ ಮಾ[illegible] ಬೇಕಾಗಿರುವುದರಿಂದ ಜನರು [illegible] ಉದಾರ ಸಹಾಯಕ್ಕಾಗಿ [illegible]ಯವರು ಪ್ರಾರ್ಥಿಸಿರುತ್ತಾರೆ.

ಮಿಲ್ಲು ಅಕ್ಕಿಯ ದೋಷಗಳು

ಮಿಲ್ಲುಗಳಲ್ಲಿ ಕುಟ್ಟಿದ ಅಕ್ಕಿಯಲ್ಲಿ ಪುಷ್ಟಿಕರವಾದ ಪದಾರ್ಥಗಳೆಲ್ಲವೂ ನಾಶವಾಗುತ್ತವೆ. ಅದನ್ನು ತಿನ್ನುವುದರಿಂದ [illegible] ರೋಗಗಳು ಬರುತ್ತವೆ. ಆದುದರಿಂದ ಕೊಟ್ಟ ಅಕ್ಕಿಯನ್ನೇ ಉಪಯೋಗಿಸ[illegible]ಕು. ಅಕ್ಕಿಗೆ ಪಾಲಿಷ್ ಮಾಡಬಾರದು. ಪಾಲಿಷ್ ಮಾಡದೆ ಇರುವ [illegible] ತನದ ಅಕ್ಕಿಯಿಂದ ಮಿಲ್ಲಿನ ಅಕ್ಕಿಯಿಂದಾದ ರೋಗಗಳು ನಿವಾರಣೆಯಾಗು[illegible] ಎಂಬುದಾಗಿ ಅಖಿಲ ಭಾರತ [illegible] ದ್ಯೋಗ ಸಮಿತಿಯವರು ಒಂದು [illegible]ಯಲ್ಲಿ ತಿಳಿಸಿರುತ್ತಾರೆ.

ಹಣಗಳಿಗೆ ಪ್ರಾರಂಭ

ಬೊಂಬಾಯಿ, ಕರಾಚಿ, ಮದರಾಸು [illegible]ದ ಬೇರೆ ಕಡೆಗಳಲ್ಲಿ ಮಡಿದ ಅಮೆರಿಕನ್ ಸೈನಿಕರ ದೇಹಗಳನ್ನು [illegible] ಇಡಿಸಿ ಅಮೆರಿಕಕ್ಕೆ ರವಾನಿಸಲಾಗ[illegible] ಇತರ ಪ್ರಯಾಣಿಕರ ಸಂಚಾರಕ್ಕೆ [illegible] ಅವುಗಳಿಗೆ ಹೆಚ್ಚು ಪ್ರಾಮುಖ್ಯತೆ [illegible] ಕೊಡಲಾಗುವುದೆಂದು ತಿಳಿದು[illegible].

ಅಮೃತ

ನಿತ್ಯದ ಜ್ವರ ಮುಂ[illegible] ಜ್ವರ, ಜ್ವರದ ಗಡ್ಡೆ [illegible] ದೋಷ ಇವುಗಳ [illegible] ಮಾಡುತ್ತದೆ.

ಕೆ. ಸಿ. ವೆಂಕಟರಾಮ[illegible] ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯ[illegible] ಅರಕಲವಾಡಿ.

ಫೋನ್ ನಂ 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಗುರುವಾರ ೧೧—೪—೪೬ [ಸಂಚಿಕೆ ೧೮೯

ಕೇಂದ್ರ ಸರ್ಕಾರಕ್ಕೆ ಜಿನ್ನ ಪ್ರಧಾನ ಮಂತ್ರಿ?

ಸಂಧಾನ ಸಫಲವಾಗಲು ಗಾಂಧಿಜಿಯ ಆಚಾರ್ಯತ್ವ

(ನಮ್ಮ ವಿಶೇಷ ಪ್ರತಿನಿಧಿಯಿಂದ)

ದೆಹಲಿ ೯

ಇಡೀ ಭಾರತದ, ನಾನಾ ಮತಗಳ, ಅ ಭಿಪ್ರಾಯಗಳ ಜನ ಜಗುಂಳಿಯ ನಾಯಕರೆಲ್ಲ ಇಲ್ಲಿ ಸಂಗಮಿಸಿರುವುದು ಈ ನಗರದ ಮಹತ್ವಕ್ಕೆ ಮೆರಗು ಕೊಟ್ಟಿದೆ. ಮಂತ್ರಿಗಳ ನಿಯೋಗದ ವ್ಯವಸ್ಥಿತ ಕಾರ್ಯಕ್ರಮಗಳು ಸಾಗುತ್ತಿವೆ. ಇಲ್ಲಿಗೆ ಆಗಮಿಸಿದ ಮತ್ತು ಆಗಮಿಸುವ ಪ್ರತಿನಿಧಿಗಳ ಪ್ರಥಮ ಗಮನ ಜಾಡಮಾಲಿಗಳ ಕೇರಿಯಲ್ಲಿ ಬಿಡಾರ ಮಾಡಿರುವ ಮಹಾತ್ಮಾ ಗಾಂಧಿಯವರ ಕಡೆಗೇ ಇದೆ. ಈ ಬಾರಿ ಸಂಧಾನ ಸಫಲವಾಗಲು ಗಾಂಧಿಜಿಯವರ ಪ್ರಯತ್ನಪಡುತ್ತಿರುವುದಾಗಿ ಇಲ್ಲಿ ಹೇಳಲಾಗುತ್ತಿದೆ. ಮಹಾತ್ಮರು ಇಂದು ಬೆಳಿಗ್ಗೆ ವೈಸ್ರಾಯರ ಭವನಕ್ಕೆ ತೆರಳಿದ್ದು ಪ್ರಧಾನ ಸೇನಾನಿಯ ಭೇಟಿ ಮಾಡಿದ್ದರು. ಈ ರೀತಿಯ ಭೇಟಿ ನಡೆದಿರುವುದು ಇದೇ ಮೊದಲನೇ ಸಲ. ಇಂದು ಮಧ್ಯಾಹ್ನ ಗಾಂಧೀಜಿ ವೈಸ್ರಾಯ್ ಭವನಕ್ಕೆ ಹೋದರು.

ಪಾಕಿಸ್ಥಾನದ ಪ್ರಶ್ನೆಯಲ್ಲಿ ಇತ್ಯರ್ಥವಾದರೆ ಅದನ್ನು ಅಂತರಂಗ್ಯೆಯ ಸಭೆಗೆ ಒಪ್ಪಿಸುವಂತ ಗಾಂಧಿಜಿ ನಿಯೋಗಕ್ಕೆ ಸಲಹೆ ಕೊಟ್ಟಿರುವುದಾಗಿ ತಿಳಿಯಬರುತ್ತದೆ. ದಕ್ಷಿಣ ಭಾರತದ ಪ್ರತಿನಿಧಿಗಳ ಗಮನ ಇಲ್ಲಿಲ್ಲೇ ಕಾಣಬರುತ್ತಿದೆ. ಪ್ರಸ್ತುತದಲ್ಲಿ ಮೈಸೂರಿನ ಶ್ರೀ ನಿಜಲಿಂಗಪ್ಪನವರೂ, ತಿರುವಾಂಕೂರು ತಾಣು ಪಿಳ್ಳೆಯವರೂ ಇಲ್ಲ ಪ್ರಭಾವ ಬೀರುತ್ತಿದ್ದಾರೆ.

ಸರ್. ಸಿ. ಪಿ ಸದಗರ

ಸಂಸ್ಥಾನಗಳ ಆಳರಸರ ಪ್ರತಿನಿಧಿ ಸರ್ ಸಿ. ಪಿ ಯವರು ೨೫ ವರ್ಷದ ತರುಣರಂತೆ ಹುರುಪಿನಿಂದ ಕಾರ್ಯಭಾರ ಸಾಗಿಸುತ್ತಿದ್ದಾರೆ. ಅವರೂ ಸಹ ಇಂದು ನಿಯೋಗವನ್ನು ಭೇಟಿ ಮಾಡಿದ್ದರು.

ಸಿಂಧ್ ಪ್ರಧಾನರ ಆದರ್ಶ

ನಿಯೋಗದವರ ಮೇಲೆ ತಮ್ಮ ಪ್ರಭಾವವನ್ನು ಬೀರಿದವರ ಪೈಕಿ ಸರ್ ಮಹಮ್ಮದ್ ಸಾದುಲ್ಲಾ ಒಬ್ಬರು. ಅವರು ನಿಯೋಗದವರನ್ನು ಭೇಟಿ ಮಾಡಿ ವಾಪಸ್ ಬರುತ್ತಾ ಪತ್ರಿಕೆಯವರೊಡನೆ ಸಂಭಾಷಣೆ ನಡೆಸಿ "ಸಂಸ್ಥಾನದ ಪ್ರತಿನಿಧಿಯಾಗಿ, ಮುಸ್ಲಿಮ್ ಮತಸ್ಥನಾಗಿ ಎಲ್ಲಕ್ಕಿಂತಲೂ ಮೇಲಾಗಿ ಭಾರತೀಯನಾಗಿ ನನ್ನ ಅಭಿಪ್ರಾಯಗಳನ್ನು ನಿಯೋಗ ಮಂಡಲಿಗೆ ತಿಳಿಸಿದೆ" ಎಂದು ಅವರು ಹೇಳಿದರು.

ಹೈದರಾಬಾದ್ ಪ್ರಧಾನಿ ಛತ್ತಾರಿ ನವಾಬರು ನಿಯೋಗದ ಭೇಟಿಮಾಡಿ ಬಂದ ನಂತರ ಮೇಲ್ಕೈಯೇ ಹೈದರಾಬಾದಿನ ಪ್ರಶ್ನೆಯ ಪರಿಹಾರ ಎಂದು ತಿಳಿಸಿದರು.

ಮಹಾರಾಜ ನೇಪಾಳದವರ ಬಿಡಾರಕ್ಕೆ ದೇಶೀಯ ಸಂಸ್ಥಾನಗಳ ಮುಖಂಡರು, ಎಡಬಿಡದೆ ಹೋಗುತ್ತಿದ್ದಾರೆ.

ನಿಜಾಮರ ಮಗ ಇಂದು ರಾತ್ರಿ ನಿಯೋಗದವರೊಡನೆ ಭೋಜನ ಮಾಡುವರು.

ಪರಿಕಥೆ

ಹನುಮಂತಪುರಂ ಶ್ರೀ ಶಂಕರನಾರಾಯಣ ದೇವಾಲಯದಲ್ಲಿ ಇದೇ ೧೩ ನೇ ಶನಿವಾರ ರಾತ್ರಿ ೧೦ ಗಂಟೆಗೆ ಹರಿಕಥಾ ವಿದ್ವಾನ್, ನರಸೀಪುರಂ ಶ್ರೀನಿವಾಸರಂಗಾಚಾರ್ಯರಿಂದ 'ಲವ-ಕುಶ' ಎಂಬ ಹರಿಕಥೆ ನಡೆಯುತ್ತದೆ.

ಜಿನ್ನಾರವರಿಗೆ ಭಾರತದ ಮುಖ್ಯ ಮಂತ್ರಿ ಪದವಿ

ಭಾರತದಲ್ಲಿ ಸದ್ಯದಲ್ಲೇ ಸ್ಥಾಪಿಸಬೇಕೆಂದಿರುವ ತಾತ್ಕಾಲಿಕ ಕೇಂದ್ರ ಸರ್ಕಾರದ ರಚನೆಯ ಬಗ್ಗೆ ನಿಯೋಗದವರೇ ಒಂದು ಯೋಜನೆ ತಯಾರಿಸಿರುವುದಾಗಿ ಸುದ್ದಿ ಬಂದಿದೆ. ಆ ಪ್ರಕಾರ ಮಿ॥ ಜಿನ್ನಾರವರನ್ನು ಮುಂದೆ ರಚಿತವಾಗಲಿರುವ ಮಂತ್ರಿ ಮಂಡಲದ ಪ್ರಧಾನಿಯನ್ನಾಗಿ ನೇಮಿಸುವ ಆಲೋಚನೆ ಇದೆಯೆಂದೂ ಇದಕ್ಕೆ ಕಾಂಗ್ರೆಸ್ ಒಪ್ಪಬಹುದೆಂದೂ, ನಿಯೋಗದವರು ಆಶಾಭಾವಿತರಾಗಿರುವರೆಂದೂ ಆ ಸುದ್ದಿಯ ವಿವರಣೆ ತಿಳಿಸುತ್ತದೆ. ಮಿ॥ ಜಿನ್ನಾರವರು ರಾಜಕೀಯಕ್ಷೇತ್ರದಲ್ಲಿ ಕ್ಷಣಿಕವಾದ ಪಟ್ಟಕ್ಕೆ ಪ್ರಾಧಾನ್ಯತೆ ಕೊಡದೆ ಆಮೂಲಾಗ್ರದ ಕೋರಿಕೆಯ ಸಿಂಧುದರ ಬೆಂಬಲ ಇತ್ತಿರುವುದರಿಂದಲೇ ಅವರ ಪದವನ್ನು ಸೂಚಿಸಿರುವುದಾಗಿ ಹೇಳಲಾಗಿದೆ.

ಭಾರತದ ಮುಂದಿನ ವ್ಯವಸ್ಥೆಯ ಬಗ್ಗೆ ವಿಶ್ವಸಂಸ್ಥೆಯ ಆಶ್ರಯದಲ್ಲಿ ಸಿದ್ಧವಾದ ಪ್ರತಿನಿಧಿಗಳಿಂದ ಕೂಡಿದ ಸಮಿತಿಗೆ ಮಿ॥ ಜಿನ್ನಾರವರು ತಮ್ಮ ಪಾಕಿಸ್ಥಾನದ ಯೋಜನೆಯನ್ನು ಒಪ್ಪಿಸುವಂತೆ ಕೇಳಬಹುದೆಂದು ತಿಳಿದು ಬರುತ್ತದೆ. ರಚಿತವಾಗಲಿರುವ ತಾತ್ಕಾಲಿಕ ಸರ್ಕಾರದಲ್ಲಿ ವೈಸ್ರಾಯರು ಮತ್ತು ಪ್ರಧಾನ ಸೇನಾನಿಗಳು ತಮ್ಮ ಅಧಿಕಾರದೊಂದಿಗೆ ಇದ್ದೇ ಇರುವರು. ವೈಸ್ರಾಯರು ತಮ್ಮ ವಿಶೇಷಾಧಿಕಾರವನ್ನು ವಿಶೇಷ ಸಂದರ್ಭಗಳಲ್ಲಿ ಮಾತ್ರ ಉಪಯೋಗಿಸ ಬಹುದು ಎಂದು ಹೇಳಲಾಗಿದೆ.

ಹೈಸ್ಕೂಲಿಗೆ ಅನುಮತಿ

ಟಿ. ನರಸೀಪುರದಲ್ಲಿ ಗ್ರಾಮ ವಿದ್ಯೋದಯ ಸಂಘದ ಆಶ್ರಯದಲ್ಲಿ ಹೈಸ್ಕೂಲನ್ನು ಸ್ಥಾಪಿಸಿ ನಡೆಸಲು ಸರ್ಕಾರದಿಂದ ಅನುಮತಿ ದೊರಕಿದೆ. ಸಂಘಕ್ಕೆ ಸಹಾಯ ಮಾಡುವ ವಾಗ್ದಾನ ಮಾಡಿರುವ ಮಹನೀಯರು ಕೂಡಾ ಆದಷ್ಟು ಬೇಗನೆ ತಮ್ಮ ವಾಗ್ದಾನದ ಹಣವನ್ನು ಸಂಘಕ್ಕೆ ಸಲ್ಲಿಸಬೇಕೆಂದೂ, ಇತರ ಮಹನೀಯರೂ ಸಹಾಯ ಮಾಡಬೇಕೆಂದೂ ಕಾರ್ಯದರ್ಶಿಗಳಾದ ಶ್ರೀ ಎಂ. ಸಿ. ಶಿವನಂಜಸ್ವಾಮಿಯವರು ಪ್ರಾರ್ಥಿಸಿದ್ದಾರೆ.

ಕೃಷ್ಣರಾಯರವರ ನಿಧನ

ರಾಜಧಾನಿಯ ಭೂದೇವಿ ಪತ್ರಿಕೆಯ ಮಾಲೀಕರಾದ ಶ್ರೀ ಕೃಷ್ಣರಾಯರವರು ಮೊನ್ನೆ ದಿನ ಇದ್ದಕ್ಕಿದ್ದಂತೆಯೇ ಹೃದಯ ಚಲನ ನಿಂತು ಹೋಗಿ ನಿಧನರಾದರೆಂದು ತಿಳಿಸಲು ವಿಷಾದಿಸುತ್ತೇವೆ. ದಿವಂಗತರು ಸರ್ಕಾರಿ ಉದ್ಯೋಗದಲ್ಲಿದ್ದು ನಿವೃತ್ತರಾದ ನಂತರ ಭೂದೇವಿ ಪತ್ರಿಕೆಯನ್ನು ಸ್ಥಾಪಿಸಿ ಹಿಂದೂ ಧರ್ಮ ಸಂಬಂಧವಾದ ಅನೇಕ ಸಂಶೋಧನೆಗಳನ್ನು ಮಾಡಿ ಕೀರ್ತಿಗಳಿಸಿದ್ದರು. ದಸರ ವಸ್ತು ಪ್ರದರ್ಶನದಲ್ಲಿ ಇವರಿಗೆ ಅನೇಕ ಬಹುಮಾನಗಳು ಬಂದಿದ್ದುವು. ಇವರಿಗೆ ಸದ್ಗತಿ ದೊರೆಯಲೆಂದು ನಮ್ಮ ಹಾರೈಕೆ.

ಸಕ್ಕರೆ ಕಂಪನಿ ಕೆಲಸಗಾರರ ಸಂಘ

ಸ್ವಂ ವ] ಮಂಡ್ಯ ೧೦

ಮೈಸೂರು ಸಕ್ಕರೆ ಕಂಪನಿಯ ಕೆಲಸಗಾರರ ಸಂಘದ ೧೯೪೬ ನೇ ಸಾಲಿನ ಕಾರ್ಯ ನಿರ್ವಾಹಕ ಮಂಡಲಿಗೆ ಕೆಳಗೆ ಕಂಡ ಸದಸ್ಯರು ಪ್ರತಿಸ್ಪರ್ಧಿಗಳಿಲ್ಲದೆ ಚುನಾಯಿತರಾಗಿದ್ದಾರೆಂದು ಚುನಾವಣಾಧಿಕಾರಿಗಳಾದ ಲೇಬರ್ ಅಸಿಸ್ಟೆಂಟ್ ಕಮೀಷನರವರು ಪ್ರಕಟಿಸಿದ್ದಾರೆ.

ಶ್ರೀ ಎಂ. ಎ. ಬಲರಾಮ್ (ಅಧ್ಯಕ್ಷರು) ಹೆಚ್ ಎಸ್ ಮಾಸ್ತಿಗೌಡ (ಉಪಾಧ್ಯಕ್ಷ) ಎ. ರಾಮಣ್ಣ (ಕಾರ್ಯದರ್ಶಿ) ಬಿ. ಆರ್. ಲೇಸಗಿರಿ (ಉಪಕಾರ್ಯದರ್ಶಿ) ಬಿ ಎಸ್. ಕೃಷ್ಣಪ್ಪ (ಖಜಾಂಚಿ) ಶ್ರೀಗಳಾದ ಎಂ ಸಿ ಮಾದಯ್ಯ, ಬಿ ನಂಜಯ್ಯ, ಬಿ ಚನ್ನಯ್ಯ, ಹೆಚ್ ಆರ್ ವಾಸುದೇವರಾವ್, ಎಸ್ ಲಕ್ಕೆಗೌಡ, ಎಂ. ಎಸ್ ಪುಟ್ಟಸ್ವಾಮಿ, ಬಿ. ಎ. ಚನ್ನಪ್ಪ, ಹೆಚ್. ಮಾದಯ್ಯ, ಎ. ಕಾಳೇಗೌಡ, ಬಿ. ಎಸ್. ಗಿರಿಯಪ್ಪ, ಆರ್ ರಾಮರಾವ್, ಪಿ ರಾಮ ಚಂದ್ರಯ್ಯ, ಆರ್ ರುದ್ರಪ್ಪ, ಸಿ. ಎಂ ವೆಂಕಟಯ್ಯ, ಕೆ ಪುಟ್ಟಸ್ವಾಮಿ, ಎಸ್ ಕೃಷ್ಣಯ್ಯ

ಪೋಲೀಸರಿಗೂ ಪಠಾಣರಿಗೂ ಹೊಡೆದಾಟ

ಪಾಟಿಯಾಲಕ್ಕೆ ೬೦ ಮೈಲಿ ದೂರದ ಹಳ್ಳಿಯೊಂದರ ಬಳಿ ಪೋಲೀಸರಿಗೂ ಪಠಾಣರಿಗೂ ಹೊಡೆದಾಟ ನಡೆದು ಒಬ್ಬ ಪೋಲೀಸ್ ಡೆಪ್ಯುಟಿ ಸೂಪರಿಂಟೆಂಡೆಂಟರೂ ಮತ್ತು ಒಬ್ಬ ಪೋಲೀಸ್ ಅಧಿಕಾರಿಯೂ ಸತ್ತರು. ೭ ಜನ ಪೋಲೀಸರಿಗೆ ಪೆಟ್ಟು ಗಾಯಗಳಾಗಿವೆ. ಕೊನೆಗೂ ಠಾಣೆ ಮುಂದಾಳುಗಳು ೧೨ ಮಂದಿ ಪಠಾಣರನ್ನು ಬಳಿಕ ಪೋಲೀಸ್ ಪಡೆ ಗುಂಡು ಹಾರಿಸಿ ಕೊಂದರೆಂದು ಸುದ್ದಿ ಬಂದಿದೆ.

ಪಾಕಿಸ್ಥಾನಕ್ಕೆ ಕಲ್ಪಿತ ಕರಾಚಿ ಬಂದರುಗಳು

ಪಾಕಿಸ್ಥಾನಕ್ಕೆ ಕಲ್ಪಿತ ಕರಾಚಿ ಮತ್ತು ಇತರ ಬಂದರುಗಳು ಸೇರಬೇಕೆಂದು ಮಿ॥ ಜಿನ್ನಾರವರು ತಿಳಿಸಿದ್ದಾರೆ.

ಕಾಂ॥ ಮತ್ತು ಲೀಗ್ ನಾಯಕರೊಡನೆ ಸಂಯುಕ್ತ ಭೇಟಿ

ಬ್ರಿ॥ ನಿಯೋಗ ಮಂಡಲಿಯವರು ಇಂಗ್ಲೆಂಡಿಗೆ ಹೊರಡುವ ಮುನ್ನ ಕಾಂಗ್ರೆಸ್ ಮತ್ತು ಲೀಗ್ ನಾಯಕರುಗಳನ್ನು ಒಟ್ಟಿಗೆ ಭೇಟಿ ಮಾಡುವರೆಂದು ದೆಹಲಿಯ ಪ್ರಕಟಣೆ ಹೇಳಲಾಗುತ್ತಿದೆ. ಈ ಸಭೆಯ ದಕ್ಷಿಣದ ಮಹಾತ್ಮಾ ಗಾಂಧಿಜಿಯವರನ್ನು ಹಾಜರಿರುವಂತೆ ಕೋರಿಕೊಳ್ಳಲಾಗುವುದೆಂದು ಗೊತ್ತಾಗಿದೆ. ಬಹುಶಃ ಈ ಭೇಟಿ ೧೬ ನೇ ತಾ॥ ನಡೆಯಬಹುದೆಂದು ಊಹಿಸಲಾಗಿದೆ. ಈ ಸಭೆಯಲ್ಲಿ ಮುಸ್ಲಿಮರಿಗೆ ಸ್ಥಾನಗಳನ್ನು ಕಾದಿಟ್ಟು ಸಂಯುಕ್ತ ಚುನಾವಣೆ ನಡೆಸುವ ವಿಚಾರವನ್ನು ಚರ್ಚಿಸಲು ನಿಯೋಗದವರು ಅಭಿಪ್ರಾಯಪಟ್ಟಿದ್ದಾರೆಂದೂ, ಇದು ಭಾರತದ ಐಕ್ಯತೆಗೆ ಸಹಾಯಕವಾಗುವುದೆಂದೂ ಗೊತ್ತಾಗಿದೆ.

ಅಮೆರಿಕದವರಿಂದ ರೇಷ್ಮೆ ಉದ್ಯಮ

ಮೈಸೂರು ಸಂಸ್ಥಾನದಲ್ಲಿ ಕಚ್ಚಾ ರೇಷ್ಮೆ ಕಾರ್ಖಾನೆಯೊಂದನ್ನು ಸ್ಥಾಪಿಸಲು ಪರಿಶೀಲನೆ ನಡೆಸುವುದಕ್ಕಾಗಿ ಇಬ್ಬರು ಅಮೆರಿಕದ ನಿಪುಣರು ರಾಜಧಾನಿಗೆ ಬಂದು ಸರ್ಕಾರದ ಅಂಗಿಗಳನ್ನು ಕೈಗಾರಿಕಾ ಅಧಿಕಾರಿಗಳಾದ ಶ್ರೀ ಬಿ ಬಿ ಅಪ್ಪಾದೊರೈ ಮೊದಲಿಯಾರವರೊಡನೆ ಸ್ಥಳವನ್ನು ಆಯ್ಕೆ ಮಾಡಿ ಈ ದಿನ ಮಾಸದ್ದು ತರಳದ ಕಡೆ ಹೊರಟು ಬಂದಿದೆ.

ಹೈದರಾಬಾದ್ ನಿಜಾಮರ ಭಾವಮೈದನ ಕೊಲೆ

ಹೈದರಾಬಾದ್ ನಿಜಾಮರ ಭಾವಮೈದುನರಾದ ಮ॥ ಪೇಷ್ ಇನಾಮ್‌ರವರನ್ನು ಕೆಲವು ಮಂದಿ ಬಂದು ಮೊನ್ನೆ ದಿನ ಕೊಲೆ ಮಾಡಿದರೆಂದು ಗೊತ್ತಾಗಿದೆ. ಕೊಲೆ ನಡೆದ ಸ್ಥಳದಲ್ಲಿ ಒಬ್ಬರನ್ನು ಹಿಡಿದಿದ್ದಾರೆ. ಈ ಕೃತ್ಯಕ್ಕೆ ಕಾರಣವೇನೆಂಬುದು ಇದವರೆಗೂ ಪತ್ತೆಯಾಗಿಲ್ಲ. ಹೈದರಾಬಾದಿನಲ್ಲೆಲ್ಲಾ ಈ ಸುದ್ದಿ ಕುತೂಹಲವನ್ನೂ, ಖೇದವನ್ನೂ ಹುಟ್ಟಿಸಿದೆ.

—

ಬಿಹಾರಿನಲ್ಲಿ ಹಿಂದೆ ಇದ್ದಂತೆ ಪುನಃ ಜವಾಬ್ದಾರಿ ಶಾಸನವನ್ನು ಜಾರಿಗೆ ತರಲು ಕಾಂಗ್ರೆಸ್ ಸರ್ಕಾರ ಆರಂಭಿಸುವುದಾಗಿ ಗೊತ್ತಾಗಿದೆ.

ರಾಷ್ಟ್ರೀಯ ವಾರ

ಮೈಸೂರು ೧೧

ರಾಷ್ಟ್ರೀಯ ವಾರದ ಕಡೇ ದಿನದ ಕಾರ್ಯಕ್ರಮದ ಅಂಗವಾಗಿ ೧೩ ನೇ ತಾ॥ ರ ಬೆಳಿಗ್ಗೆ ಸುಬ್ಬರಾಯನ ಕೆರೆ ಮೈದಾನದಲ್ಲಿ ಧ್ವಜ ರೋಹಣವೂ, ಸಂಜೆ ೬॥ ಗಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ಬಹಿರಂಗ ಸಭೆಯೂ, ಭಾಷಣಗಳೂ ನಡೆಯುವುವು. ಶ್ರೀ ಎಸ್ ರಂಗನಾಥಯ್ಯನವರ ಅಧ್ಯಕ್ಷತೆ ವಹಿಸುವರು.

ಹರಿಕಥೆ

ರಾಜಧಾನಿಯ ದೇವೀರಮ್ಮಣ್ಣಿ ಅಗ್ರಹಾರದಲ್ಲಿರುವ ಶ್ರೀ ರಾಮಸೇವಾ ಸಂಘದಲ್ಲಿ ಈ ದಿನ ರಾತ್ರಿ ೯ ಘಂಟೆಗೆ ಹರಿಕಥಾ ವಿದ್ವಾನ್ ಶ್ರೀ ಕೆ ಬಿ ನಾರಾಯಣಾಚಾರ್ಯರವರಿಂದ ಕೌಸಲ್ಯಾ ಪರಿಣಯ ಎಂಬ ಹರಿಕಥೆಯೂ, ನಾಳೆ [೧೨-೪-೪೬] ರಾತ್ರಿ ೯ ಘಂಟೆಗೆ ಶ್ರೀ ಬಾಪೂ ಬದೇಸ್ವರ ಭಜನಾ ಮಂಡಲಿಯವರಿಂದ 'ಪಾದುಕಾ ಪಟ್ಟಾಭಿಷೇಕ' ವೆಂಬ ಪ್ರಸಂಗವು ನಡೆಯಲಿರುವುದು. ಸಾರ್ವಜನಿಕರು ಬಂದು ಕೇಳಬೇಕಾಗಿ ವಿನಂತಿ ಮಾಡಿಕೊಳ್ಳಲಾಗಿದೆ.

ಸಾಧ್ವಿ
... ೧೧-೪-೪೬ ಗುರುವಾರ

ಪಾಕಿಸ್ಥಾನಕ್ಕೆ ದಸ್ತಿದ ಬೆಂಬಲವೇ ?

ದೆಹಲಿಯಲ್ಲಿ ಭಾರತ ಸಮಸ್ಯೆಯ ಸಮುದ್ರ ಮಂಥನವು ಆಗುತ್ತಿದೆ. ಬ್ರಿಟಿಷ್ ನಿಯೋಗದವರ ಸಂಧಾನ ಪ್ರಯತ್ನವೇ ಅಲ್ಲದೆ ಹಿಂದೂಸ್ಥಾನದ ವಿವಿಧ ಪಂಗಡಗಳ ಮುಖ್ಯ ವ್ಯಕ್ತಿಗಳ ಖಾಸಗಿ ಚಟುವಟಿಕೆಗಳೂ ವಿಶೇಷವಾಗಿ ನಡೆಯುತ್ತಿವೆ. ಬೇರೆ ಎಲ್ಲ ಕಡೆಗಿಂತಲೂ ಪ್ರಮುಖ ನಾಯಕರುಗಳು ಅಲ್ಲಿ ಸೇರಿ ತಮ್ಮ ಪ್ರಯತ್ನಗಳನ್ನು ಮುಂದುವರಿಸುತ್ತಿದ್ದಾರೆ. ಎಲ್ಲರೂ ಒಂದು ಬಗೆಯ ಸೌಹಾರ್ದ, ಪ್ರೀತಿ, ಉತ್ಸಾಹ ಮತ್ತು ಮೈತ್ರಿಗಳಿಗಾಗಿ ಹಾತೊರೆಯುತ್ತಿದ್ದಾರೆ. ಆದರೆ ಮುಸ್ಲಿಂ ಲೀಗಿನ ಕಾರ್ಯಕ್ರಮಗಳು ಮಾತ್ರ ಘೋರ ಸಂಗ್ರಾಮದ ಮನೋಭಾವವನ್ನೇ ಸ್ಪಷ್ಟಪಡಿಸುತ್ತಿವೆ. ಅವರ ಕಾರ್ಯವಿಧಾನಗಳು, ಭಾಷಣ, ಘೋಷಣೆ ಮತ್ತು ಎಚ್ಚರಿಕೆಗಳನ್ನೇ ತೋರಿಸುತ್ತಿವೆ.

ಲೀಗಿನವರ ಪಾಕಿಸ್ಥಾನ ಬೇಡಿಕೆಯು ದಿನೇ ದಿನೇ ಕಠಿಣ ಸ್ವರೂಪವನ್ನು ತಾಳುತ್ತಿದೆ. ಮುಸ್ಲಿಂ ಶಾಸನ ಸಭಾ ಸದಸ್ಯರುಗಳ ಸಮ್ಮೇಳನವು ದೆಹಲಿಯಲ್ಲಿ ನಡೆದ ಆ ಬಳಿಕ ಸಂಬಂಧವನ್ನು ... ಭಾಷಣಗಳು ಆಗಿವೆ. ಪಂಜಾಬ್ ಪ್ರಧಾನ ಮಂತ್ರಿ ಮಂಡಲದ ಸದಸ್ಯರಾದ ಸರ್ ಫಿರೋಜ್ ಖಾನ್ ನೂನ್‌ರವರು ಮಿ|| ಜಿನ್ನಾರವರನ್ನು ನವದೆಹಲಿಯಲ್ಲಿ "ಪಾಕಿಸ್ಥಾನದ ಬೇಡಿಕೆಯನ್ನು ಪುರಸ್ಕರಿಸುವವರೇ ನಮ್ಮ ಮಿತ್ರರು. ಹಿಂದೂಗಳು ಅದಕ್ಕೆ ಒಪ್ಪಿದರೆ ಅವರು ನಮ್ಮ ಸ್ನೇಹಿತರು. ಬ್ರಿಟಿಷರು ಒಪ್ಪಿದರೆ ಅವರು ನಮ್ಮ ಮಿತ್ರರುಗಳು. ಇಬ್ಬರೂ ಒಪ್ಪದಿದ್ದರೆ ರಷ್ಯಾ ಅದನ್ನು ನಮಗೆ ದೊರಕಿಸಿಕೊಡುತ್ತದೆ. ಬ್ರಿ|| ಸರ್ಕಾರದವರು ಮುಸಲ್ಮಾನರನ್ನು ಹಿಂದೂ ರಾಜ್ಯಕ್ಕೆ ಒಪ್ಪಿಸಿದರೆ ಅವರು ಚಂಗೀಸ್ ಖಾನ್ ಮುಂತಾದವರಂತೆ ಘೋರ ಕೃತ್ಯಗಳನ್ನು ನಡೆಸಲು ಹಿಂಜರಿಯುವುದಿಲ್ಲ" ಎಂಬುದಾಗಿ ಸರ್ ನೂನ್ ರವರು ಹೇಳಿದ್ದಾರೆ.

ಪಾಕಿಸ್ಥಾನಕ್ಕಾಗಿ ಲೀಗಿನವರು ಒತ್ತಾಯಪಡಿಸುತ್ತಿರುವುದು ಎಲ್ಲರಿಗೂ ಗೊತ್ತಿರುವ ಅಂಶ. ಅವರು ಮೊದಲಿದ್ದರೆ ... ಬೆದರಿಸುತ್ತಿರುವ ... ಎಲ್ಲರ ಅನುಭವದಲ್ಲಿಯೂ ಇದ್ದೇ ಇದೆ. ಅಲಿಘರ್ ಮುಸ್ಲಿಂ ವಿಶ್ವವಿದ್ಯಾಲಯದ ... ವಿದ್ಯಾರ್ಥಿಗಳು ಎಸಗಿದ ಕೃತ್ಯಗಳು ಇದಕ್ಕೆ ಸಾಕ್ಷಿಭೂತವಾಗಿವೆ. ಆದುದರಿಂದ ... ಮುಸಲ್ಮಾನರುಗಳು ... [illegible]

[illegible]

ಕಾಗಬಹುದೆಂದು ಹೇಳಿದ್ದಾರೆ. ಲೀಗಿನವರ ಇಂದಿನ ಮನೋಭಾವವು ಅದೇ ರೀತಿ ಇರುತ್ತದೆ. ಇದು ಕೋಮಿನ ಮನೋಭಾವ; ಆತ್ಮವಿಶ್ವಾಸ ಮತ್ತು ಧೈರ್ಯಶಾಲಿಗಳ ಮನೋಭಾವವಲ್ಲ.

ಪಂಕ್ತೀಯನಾದ ಬ್ರಿ|| ಸರ್ಕಾರದವರ ಅಸ್ತ್ರಶಸ್ತ್ರಗಳು ಇಲ್ಲಿರುವ ವರೆಗೆ ಇಂತಹ ಕೂಸುಗಳು ಬೆಳೆ ಬರುವವೆಂದೂ, ಅವು ಜೊತೆಬಿಟ್ಟೊಡನೆ ಇವುಗಳೂ ತಣ್ಣಗಾಗುವವೆಂದೂ ಸರ್ ಸಿ. ಪಿ. ರಾಮಸ್ವಾಮಿ ಅಯ್ಯರ್‌ರವರೇ ಮೊದಲಾದ ಪ್ರಾಜ್ಞರು ಹೇಳಿದ್ದಾರೆ. ಅಖಂಡ ಭಾರತದ ಹಿತಸಾಧನೆಯಲ್ಲಿ ಎಲ್ಲರೂ ತೊಡಗಬೇಕೆಂದು, ಹಾಗೆ ನೋಡಲು ಭಾರತೀಯರು, ಆನಂತರ ಮುಸಲ್ಮಾನರು ಎಂದರು, ಮುಸ್ಲಿಂ ಲೀಗನ್ನು ಹಿಂದಕ್ಕೆ ತಳ್ಳಿಯಾದರೂ ಸಂಯುಕ್ತ ಭಾರತ ರಾಜ್ಯಾಂಗವನ್ನು ಸ್ಥಾಪಿಸಬೇಕೆಂದೂ ಮುಸಲ್ಮಾನ್ ಧೀಮಾನರಾದ ಸರ್ ಮಿರ್ಜಾ ಇಸ್ಮಾಯಿಲರು ಹೇಳುತ್ತಾರೆ. ರಾಷ್ಟ್ರೀಯ ಮುಸಲ್ಮಾನರೂ ಅಹ್ರಾರರೂ, ಮೋಮಿನರೂ, ಶಿಯಾಗಳೂ ಇವರೇ ಮುಂತಾದ ಕೋಟ್ಯಂತರ ಮುಸಲ್ಮಾನರು ಲೀಗಿನ ನೀತಿಗೆ ವಿರೋಧವಾಗಿದ್ದಾರೆ. ಆದುದರಿಂದ ಲೀಗಿನ ಆರ್ಭಟವೆಲ್ಲಾ ಒಂದು ಕೇವಲ ನಾಟಕದಂತಿದೆ.

ಒಟ್ಟಿನಲ್ಲಿ ಈಗ ಲೀಗಿನವರು ಆದಷ್ಟು ಅಧಿಕಾರಗಳನ್ನೂ ಹಕ್ಕುಗಳನ್ನೂ ಪಡೆದುಕೊಳ್ಳಲು ಹವಣಿಸುತ್ತಿರುವ ಹಂಚಿಕೆ ಇದೆಂದು ಮಾತ್ರ ಹೇಳಬಹುದು. ಪ್ರಪಂಚದಲ್ಲೇ ಅತ್ಯಂತ ಪ್ರಭಾವಶಾಲಿಯಾದ ಬ್ರಿಟಿಷ್ ಚಕ್ರಾಧಿಪತ್ಯವನ್ನು ಎದುರಿಸಿದ ಭಾರತ ದೇಶಾಭಿಮಾನಿಗಳು ಲೀಗಿನ ಈ ಕುತಂತ್ರಗಳನ್ನೂ ಎದುರಿಸಿ ಸರ್ವ ವಿಧದಿಂದಲೂ ದೇಶದ ಕಲ್ಯಾಣವನ್ನು ಸಾಧಿಸುವರೆಂಬುದರಲ್ಲಿ ಸಂದೇಹವಿಲ್ಲ.

ಕಾಶಿಯಲ್ಲಿ ಮಳೆ ಅನಾಹುತ

ಕಾಶಿ ನಗರದಲ್ಲಿ ಮೊನ್ನೆ ರಾತ್ರಿ ಭಾರಿ ಮಳೆ, ಗಾಳಿ ಬಂದು ಭಾರಿ ಅನಾಹುತ ಉಂಟು ಮಾಡಿದೆ. ಊರಿನಲ್ಲಿದ್ದ ಭಾರಿ ಮರಗಳೆಲ್ಲಾ ನೆಲಕ್ಕೆ ಉರುಳಿದುದರಿಂದ ಎಲ್ಲಾ ಎಲೆಕ್ಟ್ರಿಕ್, ಫೋನ್ ಮತ್ತು ಟೆಲಿಗ್ರಾಫ್ ತಂತಿಗಳೂ ಕಿತ್ತು ಹೋಗಿವೆ. ಹಲವಾರು ಕಟ್ಟಡಗಳು ಬಿದ್ದು ಹೋಗಿವೆ. ಮೊದೆ ಹಾಕಿದ್ದ ಧಾನ್ಯಗಳೆಲ್ಲಾ ಪ್ರವಾಹದಲ್ಲಿ ಕೊಚ್ಚಿ ಹೋಗಿವೆ. ಅನೇಕ ಸಾವು ನೋವುಗಳು ಸಂಭವಿಸಿವೆ.

ನೀರಾವರಿ ಅಭಿವೃದ್ಧಿ ಕಾರ್ಯ

ಸಂಸ್ಥಾನದಲ್ಲಿ ೯೩ ಸಾವಿರ ಎಕರೆಗಳ ಜಮೀನನ್ನು ಸಾಗುವಳಿಗೆ ತರಲು ೬ ಕೋಟಿ ರೂಗಳ ವೆಚ್ಚದಿಂದ ಕೂಡಿದ ಒಂದು ಐದು ವಾರ್ಷಿಕ ಯೋಜನೆಯನ್ನು ನೀರಾವರಿ ಅಭಿವೃದ್ಧಿ ಮಂಡಲದ ವ್ಯವಸಾಯ ನೀತಿ ಸ್ಥಿರೀಕರಣ ಸಮಿತಿಯು ಪರಿಶೀಲಿಸಿ ಸರ್ಕಾರಕ್ಕೆ ಕಳುಹಿಸಿದೆ.

ಕೆರೆಗಳ ಜೀರ್ಣೋದ್ಧಾರ

ಸಂಸ್ಥಾನದಲ್ಲಿರುವ ... ಕೆರೆಗಳನ್ನು ... ೨೦ ವರ್ಷಗಳಲ್ಲಿ ಪ್ರತಿ ವರ್ಷವೂ ೧೦ ಲಕ್ಷ ರೂ. ಗಳನ್ನು ... ಮಾಡಿ ... ಯೋಜಿಸಿದೆ.

ಹೊಸಬರಿಗೆ ರೇಷನ್ ಇಲ್ಲ

ಸ್ವಂ.ಸು.] ಬೆಂಗಳೂರು ೧೦

ಆಹಾರ ಪರಿಸ್ಥಿತಿ ಬಿಗುವಾಗಿರುವುದರಿಂದ ದಂಡಿನ ನೌಕರಗಿರಿಯಿಂದ ಬರುವವರಿಗೇ, ಅವರು ತಮ್ಮ ಅಧಿಕಾರದ ಕೆಲಸದ ಸಂಬಂಧದಲ್ಲಿಯಾಗಲೀ ಅಥವಾ ಉದ್ಯೋಗವನ್ನು ಸೇರುವ ಸಂಬಂಧದಲ್ಲಿಯಾಗಲೀ, ಅಥವಾ ಅನಿರೀಕ್ಷಿತವಾಗಿ ... ಕೆಲಸದ ಸಂಬಂಧದಲ್ಲಿಯಾಗಲೀ, ಈ ಸಂದರ್ಭಗಳನ್ನು ಬಿಟ್ಟು, ಉಳಿದ ಯಾವ ಸಂದರ್ಭದಲ್ಲೂ ಹೊಸ ರೇಷನ್ ಪದಾರ್ಥಗಳನ್ನು ಕೊಡುವುದಿಲ್ಲವೆಂದು ರೆಸಿಡೆನ್ಸಿಯ ಪ್ರಕಟನೆ ಆಗಿದೆ.

ವೈಮಾನಿಕ ನಿಯೋಗ

ಬ್ರಿಟಿಷ್ ವೈಮಾನಿಕ ನಿಯೋಗದವರು ಈ ಪ್ರಾತಃಕಾಲ ಬೆಂಗಳೂರಿನಿಂದ ಜಬ್ಬಲ್‌ಪುರಕ್ಕೆ ವಿಮಾನದಲ್ಲಿ ಪ್ರಯಾಣ ಮಾಡಿದರು.

ಖಾಸಗೀ ಇಂ|| ಕಾಲೇಜುಗಳು

ಬೆಂಗಳೂರಿನ ದೇಶೀಯ ಇಂಟರ್ ಕಾಲೇಜು ಮತ್ತು ಇಂ|| ಕಾಲೇಜು ಮೊದಲಾದ ಖಾಸಗೀ ಕಾಲೇಜುಗಳ ಅಧ್ಯಾಪಕ ವರ್ಗದ ಪರವಾಗಿ ಶ್ರೀ ಕೆ. ಸಂಪದ್ಗಿರಿರಾವ್, ಪ್ರೊ|| ಬಿ. ವೆಂಕಟೇಶಾಚಾರ್, ಶ್ರೀ ಪಿ. ಗೋಪಾಲಸ್ವಾಮಿ ಅಯ್ಯಂಗಾರ್ ಮೊದಲಾದವರು ನಿನ್ನೆ ಸಂಜೆ, ಶಿಕ್ಷಣ ಮಂತ್ರಿಗಳಲ್ಲಿ ನಿಯೋಗ ಬಂದಿದ್ದರು. ಬೆಂಗಳೂರಿನಲ್ಲಿರುವ ಖಾಸಗೀ ಇಂ|| ಕಾಲೇಜುಗಳಿಗೆ ಸರ್ಕಾರದವರು ಗ್ರಾಂಟು ಕೊಟ್ಟು ಪ್ರೋತ್ಸಾಹಿಸಬೇಕೆಂದು ಕೇಳುವುದೇ ಅವರ ಉದ್ದೇಶ. ಮಂತ್ರಿಗಳು ನಿಯೋಗದವರ ಮನವಿಯನ್ನು ಕೇಳಿ, ಸಹಾನುಭೂತಿಯ ಉತ್ತರ ಕೊಟ್ಟರೆಂದು ತಿಳಿದುಬಂದಿದೆ.

ಸರ್ವಿಸ್ಸಿನಿಂದ ನಿವೃತ್ತಿ

ಬೆಂಗಳೂರು ಜಿಲ್ಲಾ ಖಜಾನೆ ಅಧಿಕಾರಿಗಳಾದ ಆ|| ಕ|| ಶ್ರೀ ಎಸ್. ... ಯ್ಯನವರು ನಿನ್ನೆ ಸರ್ವಿಸ್ಸಿನಿಂದ ನಿವೃತ್ತರಾದರು. ಸದ್ಯಕ್ಕೆ ಬೆಂಗಳೂರು ಜಿಲ್ಲಾಧಿಕಾರಿಗಳ ಪರ್ಸನಲ್ ಅಸಿಸ್ಟೆಂಟರಾದ ಶ್ರೀ ಎಂ. ಕೆ. ಸುಬ್ಬರಾಯರು ಜಿಲ್ಲಾ ಖಜಾನೆ ಭಾರವನ್ನು ವಹಿಸಲು ಸರ್ಕಾರದ ಅಪ್ಪಣೆಯಾಗಿದೆ.

ಸರ್ಕಾರೀ ಸುದ್ದಿ

೧೯೪೬ರ ಸಲ್‌ಫ್ಯೂರಿಕ್ ದ್ರಾವಕ ಪರ್ಮಿಟ್ ಅಪ್ಪಣೆಯನ್ನು ಇವರೆ ... ತೆಗೆದುಹಾಕಲಾಗಿದೆ.

ಫ್ರೆಂಚ್ ರಾಕ್ಸ್ ಮುನಿಸಿಪಾಲಿಟಿಯನ್ನು ೧೯೪೬ರ ಜನವರಿ ೧ ರಿಂದ ಟೌನ್ ಬೋರ್ಡ್ ಸಭೆಯನ್ನಾಗಿ ಪರಿವರ್ತಿಸಲು ಇಚ್ಛೆಯಿದೆಯೆಂದೂ, ಅದಕ್ಕೆ ಆಕ್ಷೇಪಣೆಯಿರುವವರು, ಎರಡು ತಿಂಗಳೊಳಗಾಗಿ ಮಂಡ್ಯ ಜಿಲ್ಲಾಧಿಕಾರಿಗಳಿಗೆ ಸಕಾರಣವಾಗಿ ಆಕ್ಷೇಪಣೆಗಳನ್ನು ತಿಳಿಸಬೇಕೆಂದೂ ಪ್ರಕಟಿಸಲಾಗಿದೆ.

Morning Shows at
NEW OPERA TALKIES
From 1?-4-46
Tales of
Manhattan
-:Starring:-
Charles Boyer Rita Hayworth
Henry Fonda Charles Laughton
Edward G. Robinson Paul Robeson
Ethel Waters Rochester
Plus 40 Featured Players.

ವಿದ್ಯಾರ್ಥಿ ಕಾಂಗ್ರೆಸ್

ಸ್ವಂ ಸು.] ನಂಜನಗೂಡು ...

ನಂಜನಗೂಡು ವಿದ್ಯಾರ್ಥಿ ಕಾಂಗ್ರೆಸ್ಸಿನ ಸಾಮಾನ್ಯ ಸದಸ್ಯರ ಸಭೆ ನಿನ್ನೆ ಸಂಜೆ ... ೫ ಘಂಟೆಗೆ ಸೇರಿ, ಮುಂದಿನ ವರ್ಷಕ್ಕೆ ಶ್ರೀ ... ಲಿಂಗಣ್ಣನವರನ್ನು ಅಧ್ಯಕ್ಷರನ್ನಾಗಿಯೂ, ಮ|| ರಾ|| ವೇಣುಗೋಪಾಲ್ ಮತ್ತು ಎಸ್. ಕೆಂಡಗಣ್ಣಯ್ಯನವರನ್ನು ಕಾರ್ಯದರ್ಶಿಗಳನ್ನಾಗಿಯೂ, ... ಲಕ್ಷ್ಮೀನಾರಾಯಣಯ್ಯನವರನ್ನು ... ಗಳನ್ನಾಗಿಯೂ ಚುನಾಯಿಸಲಾಯಿತು. ಕಾ. ಕಾ. ಸಮಿತಿ ಸದಸ್ಯರುಗಳ ... ಅಥವಾ ... ಚುನಾಯಿಸಬೇಕೆಂದು ತೀರ್ಮಾನವಾಯಿತು. ... ವಿದ್ಯಾರ್ಥಿಗಳು ಅಕ್ಷರ ಪ್ರಚಾರ ಕಾರ್ಯವನ್ನು ಕೈಕೊಳ್ಳಬೇಕೆಂಬ ನಿರ್ಣಯ... ಯಿತು.

ಲಾರಿಗಳ ಓಡಾಟ

ಸ್ವಂ.ಸು.] ಚಾಮರಾಜನಗರ ...

ಇಲ್ಲಿನ ಅಂಗಡಿ ಬೀದಿಯಲ್ಲಿ ಬಸ್ಸುಗಳ ಓಡಾಟ ಹೆಚ್ಚು. ಇತ್ತೀಚೆಗೆ ಮಿಲಿಟರಿ ಲಾರಿಗಳೂ ವಿಪರೀತವಾಗಿ ... ವೇಗದಿಂದ ಓಡಾಡುತ್ತಿವೆ. ಈ ... ಪ್ರತಿಬಂಧಿಸುವ ನಿರ್ಣಯವಾಗಿದ್ದರೂ ... ಬಂದಿಲ್ಲ. ಅಪಾಯ ... ಇದೆ. ತಕ್ಷಣ ನಿಲ್ಲಬೇಕು.

ಕಳ್ಳತನಗಳು

ಇಲ್ಲಿನ ... ಮೊಹಲ್ಲಾದಲ್ಲಿ ... ಮನೆ ನುಗ್ಗುವ ಕಳ್ಳತನ ... ಹೆಚ್ಚಿ, ಅನಾಹುತಗಳು ನಡೆಯುತ್ತಿವೆ ... ಈ ಭಾಗದಲ್ಲಿ ದೀಪದ ... ಹಾಕಬೇಕೆಂದೂ ದೂರುಗಳು ಬಂದಿವೆ.

ಅಧ್ಯಕ್ಷ ಚುನಾವಣೆ

ಇಲ್ಲಿನ ಪೌರಸಭಾಧ್ಯಕ್ಷ ಚುನಾವಣೆ ... ಮೀಸಲಾದವರಾಗಿರುವವರ ಸ್ಥಾನಕ್ಕೆ ... ಸಾರ್ವಜನಿಕ ಹಿತದೃಷ್ಟಿಯಿಂದ ... ಸೇರುವಾರಿಗೆ ... ತೆಗೆದುಕೊಳ್ಳುವರೆಂದು ತಿಳಿದು ಬಂದಿದೆ.

---

* ರಾಷ್ಟ್ರಪತಿ ಆಜಾದರಿಗೆ ಸ್ವಲ್ಪ ವಿಶ್ರಾಂತಿ ಅಗತ್ಯವೆಂದು ವೈದ್ಯರು ... ತ್ತಿದ್ದಾರೆ. ಆದ್ದರಿಂದ ಅವರು ಮುಸ್ಸೂರಿಯಲ್ಲಿ ವಿಶ್ರಾಂತಿ ಪಡೆಯುವರು.

* ಚೀನಾದಲ್ಲಿ ... ಕ್ಷಾಮ ... ಸುಮಾರು ೪೦ ಲಕ್ಷ ಜನ ಕಷ್ಟಕ್ಕೀಡಾಗಿದ್ದಾರೆ. ಇವರಿಗೆ ವಿಮಾನದ ಮೂಲಕ ಆಹಾರ ಸರಬರಾಜು ನಡೆಯುತ್ತಿದೆ ಎಂದು ಸುದ್ದಿ ಬಂದಿದೆ.

... ನ್ಯೂ ಒಪೇರಾ ಟಾಕೀಸ್
1? -4-46 ರಿಂದ
ಪ್ರತಿದಿನ ೩ ಆಟಗಳು
★ ವಾಲ್ಮೀಕಿ
(ತಮಿಳು ಭಾಷೆ)
* ಹೊನ್ನಪ್ಪ ಭಾಗವತರ್
* ಟಿ. ಆರ್. ರಾಜಕುಮಾರಿ
* ವಸಂತ ಕೋಕಿಲಂ
* ಬಾಲಯ್ಯ
* ... ರಮ್ಯ

Edited, printed and published by ... Natarajan at the Sadhvi ... D Subbiah Road, Mysore

ಫೋನ್ ನಂ ३೬೩ ॥ ವಂದೇ ಮಾತರಂ ॥ ಬಿಡಿ ಪ್ರತಿ ೧ ಕಾಸು

ಸಂಪುಟ ೪] ಶುಕ್ರವಾರ ೧೨—೪—೪೬ [ಸಂಚಿಕೆ ೧೯೦

ಗಾಂಧಿ-ಜಿನ್ನಾ ಭೇಟಿಗೆ -ಭೂಪಾಲರ ಪ್ರಯತ್ನ-

ಜಿಲ್ಲಾ ಕಾಂ॥ ಚುನಾವಣೆ

ಮೈಸೂರು ೧೨

ನಾನಾ ಕಡೆಗಳಿಂದ ಬರತಕ್ಕ ಪ್ರತಿನಿಧಿಗಳು ವಾಪಸ್ಸು ಅದೇ ದಿನ ತೆರಳಲು ಅನುಕೂಲವಾಗುವಂತೆ ೧೪-೪-೪೬ ನೇ ಭಾನುವಾರ ಸಂಜೆ ಆರು ಘಂಟೆಗೆ ಮೈಸೂರು ಕಾಂಗ್ರೆಸ್ ಕಛೇರಿಯಲ್ಲಿ ಏರ್ಪಡಿಸಲಾಗಿದ್ದ ಜಿಲ್ಲಾ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸದಸ್ಯರ ಮತ್ತು ಮೈಸೂರು ಕಾಂಗ್ರೆಸ್ ಕಾರ್ಯಕಾರಿ ಮಂಡಲಿ ಸದಸ್ಯರ ಚುನಾವಣಾ ಸಭೆಯು ಅದೇ ದಿನ ಅದೇ ಸ್ಥಳದಲ್ಲಿ ಆರು ಗಂಟೆಗೆ ಬದಲು ಮಧ್ಯಾಹ್ನ ನಾಲ್ಕು ಘಂಟೆಗೆ ನಡೆಯುವುದೆಂದು ಚುನಾವಣಾಧಿಕಾರಿ ಶ್ರೀ ಎಂ. ವೆಂಕಟಯ್ಯನವರು ತಿಳಿಸುತ್ತಾರೆ.

ಜಿ. ರಾಮಚಂದ್ರರವರ ಭಾಷಣ

ಹಿಂದೂಸ್ಥಾನೀ ತಾಲೀಮಿ ಸಂಘದ ಉಪಕಾರ್ಯದರ್ಶಿಗಳಾದ ಶ್ರೀ ಜಿ. ರಾಮಚಂದ್ರನವರು, ನಾಳೆ ಸಂಜೆ ೬ ಗಂಟೆಗೆ ವಿ. ಬಸವಯ್ಯನವರ ಶಾಲೆಯಲ್ಲಿ ಸಂಸ್ಥಾನದ ಮೂಲ ಶಿಕ್ಷಣ ಸಮಿತಿಯ ಆಶ್ರಯದಲ್ಲಿ 'ಮೂಲ ಶಿಕ್ಷಣ' ಎಂಬ ವಿಷಯವಾಗಿ ಭಾಷಣ ಮಾಡುವರು. ಡಾ॥ ಎಂ. ಸಿದ್ದಲಿಂಗಯ್ಯನವರು ಅಧ್ಯಕ್ಷತೆ ವಹಿಸುವರು. ಸರ್ವರಿಗೂ ಸ್ವಾಗತವಿದೆ.

ಕಳ್ಳತನಕ್ಕೆ ಶಿಕ್ಷೆ

ಮೈಸೂರು ನಗರದಲ್ಲಿ ನಂ. ... ಹಾಗೂ ಕಡೆಗಳಲ್ಲಿ ... ಕಳ್ಳತನ ಮಾಡಿದನೆಂಬ ಆಪಾದನೆಯ ಮೇಲೆ ಆದಿ ಕರ್ನಾಟಕ ... ಮುಂದೆ ವಿಚಾರಣೆ ... ಆರು ತಿಂಗಳ ಕಠಿಣ ಶಿಕ್ಷೆಯನ್ನು ವಿಧಿಸಿರುತ್ತಾರೆ.

ಹರಿಕಥೆ

ದೇವರಾಜ ... ಶ್ರೀ ರಾಮ ಸೇವಾ ಸಂಘದಲ್ಲಿ ನಾಳೆ (೧೩-೪-೪೬) ... ಶ್ರೀ ಶಿವಲಿಂಗಸ್ವಾಮಿಯವರಿಂದ ಶ್ರೀನಿವಾಸ ಕಲ್ಯಾಣ ಎಂಬ ಹರಿಕಥೆ ನಡೆಯುವುದು. ಸರ್ವರೂ ದಯಮಾಡಬೇಕೆಂದು ಕೋರಲಾಗಿದೆ.

ಗಾಂಧಿ-ಜಿನ್ನಾ ಭೇಟಿ

ಕಾಂಗ್ರೆಸ್ಸಿಗೂ ಮುಸ್ಲಿಂ ಲೀಗಿಗೂ ಒಂದು ಒಪ್ಪಂದವನ್ನು ಏರ್ಪಡಿಸುವುದಕ್ಕಾಗಿ ಭೂಪಾಲ್ ನವಾಬರು ತಮ್ಮ ಪ್ರಯತ್ನವನ್ನು ಮುಂದುವರಿಸುವರೆಂದು ತಿಳಿದುಬಂದಿದೆ. ಗಾಂಧೀಜಿಯವರಿಗೂ ಜಿನ್ನಾರವರಿಗೂ ಭೇಟಿ ಮಾಡಿಸಲು ಮೊದಲು ಪ್ರಯತ್ನ ನಡೆಯುವುದೆಂದು ಹೇಳಲಾಗಿದೆ.

ವಿವಿಧ ವಾರ್ತೆಗಳು

* ಸಂಸ್ಥಾನಗಳಲ್ಲಿ ಪ್ರಾಂತ್ಯಗಳಲ್ಲಿರುವಂತೆ ರಾಜ್ಯಾಂಗ ಸಭೆಗೆ ... ತಮಗೆ ಪ್ರತ್ಯೇಕ ಚುನಾವಣೆ ಬೇಕೆಂದು ಸಂಸ್ಥಾನಗಳ ಮುಸ್ಲಿಂ ಲೀಗ್ ವರ್ಕಿಂಗ್ ಕಮಿಟಿ ... ನಿರ್ಧರಿಸಿದೆ.

* ಹೊಸ ಜಗತ್ತು ಯುದ್ಧ ವಿಧಾನಗಳ ಬಗ್ಗೆ ಸ್ಪೇನಿನಲ್ಲಿ ಜರ್ಮನ್ ವಿಜ್ಞಾನಿಗಳು ಸಂಶೋಧನೆ ನಡೆಸುತ್ತಿದ್ದಾರೆಂದೂ, ಇದು ... ವಿಶ್ವ ಶಾಂತಿಗೆ ಅಪಾಯವೆಂದೂ, ಪೋಲೆಂಡ್ ಪ್ರತಿನಿಧಿ ಭದ್ರತಾ ಸಮಿತಿಯಲ್ಲಿ ಆಕ್ಷೇಪಣೆ ಮಾಡಿದ್ದಾರೆ.

* ಮೈಸೂರು ಮಹಾರಾಜಾ ಸಂಸ್ಕೃತ ಕಾಲೇಜಿನಲ್ಲಿ ಸಾಹಿತ್ಯ, ವ್ಯಾಕರಣ, ತರ್ಕ, ಜ್ಯೋತಿಷ ... ಉಪಾಧ್ಯಾಯರುಗಳನ್ನು ... ಪ್ರಿನ್ಸಿಪಾಲರಾದ ಶ್ರೀ ಎ. ಆರ್. ... ಅರ್ಜಿ ಹಾಕಿಕೊಳ್ಳಬಹುದು.

* ಭಾರತದಲ್ಲಿರುವ ... ಮುಸಲ್ಮಾನರು ಪಾಕಿಸ್ಥಾನಕ್ಕೆ ವಿರೋಧವಾಗಿರುವರೆಂದೂ ... ಕಾಂಗ್ರೆಸ್ಸಿನೊಡನೆ ಸಹಕರಿಸಬೇಕೆಂದು ... ನಿರ್ಧರಿಸಿದೆ.

* ಕಲ್ಕತ್ತ ... ಕಳೆದ ತಿಂಗಳಲ್ಲಿ ಕಲ್ಕತ್ತ ನಗರದಲ್ಲಿ ... ಜನ ಸತ್ತಿರುವರೆಂದೂ, ... ಇದೆ.

* ... ಯೋಗ ... ಪ್ರಯತ್ನ ... ಕಳಿಸಿದ್ದಾರೆ.

ಪೈಸ್ಕೂಲ್ ಸ್ಥಾಪನೆ

ಸ್ವಂ. ವ.] ಶ್ರೀರಂಗಪಟ್ಟಣ ೧೧

ಕಳೆದ ವಾರದ ಪ್ರದರ್ಶನಾಧಿವೇಶನದಲ್ಲಿ ಈ ಊರಿನಲ್ಲಿ ಶ್ರೀ ಕಂಠೀರವ ನರಸಿಂಹರಾಜ ಒಡೆಯರ ಹೆಸರಿನಲ್ಲಿ ಹೈಸ್ಕೂಲ್ ಸ್ಥಾಪಿಸಬೇಕೆಂದು ತೀರ್ಮಾನಿಸಲಾಗಿದೆ. ಇದಕ್ಕಾಗಿ ಪುರಸಭೆಯವರು ... ೨೦೦ ರೂ ಗಳನ್ನು ಕೊಡಬೇಕೆಂದು ನಿರ್ಧರಿಸಿ ... ಕಟ್ಟಡಕ್ಕಾಗಿ ನಿವೇಶನವನ್ನು ಗೊತ್ತು ಮಾಡಲಾಯಿತು. ಕಟ್ಟಡ ಆಗುವವರೆಗೆ ಶ್ರೀ ಎನ್. ವಿ. ಚಂದ್ರಶೇಖರಯ್ಯನವರು ... ಕೊಡಲು ಒಪ್ಪಿರುವ ಕಟ್ಟಡದಲ್ಲಿ ಶಾಲೆಯನ್ನು ಆರಂಭಿಸಬೇಕೆಂದು ತೀರ್ಮಾನಿಸಲಾಗಿದೆ. ಹೈಸ್ಕೂಲ್ ... ಗಳನ್ನು ... ೧೦೦೦ ರೂ. ಚಂದಾ ... ನಿರ್ಧರಿಸಿ ಈ ರೀತಿ ಒಂದು ಸಮಿತಿಯನ್ನು ಚುನಾಯಿಸಲಾಗಿದೆ. ... ಶ್ರೀ ... ಕೃಷ್ಣಸ್ವಾಮಿ (ಅಧ್ಯಕ್ಷರು) ... (ಖಜಾಂಚಿಗಳು), ಶ್ರೀ ವಿ ಕೆಂಪೇಗೌಡರು (ಕಾರ್ಯದರ್ಶಿಗಳು)

ಜೀವಾವಧಿ ಶಿಕ್ಷೆ

ಇಲ್ಲಿಯ ಕೋರ್ಟು ... ಮೂರು ಜನರನ್ನು ಖೂನಿ ಮಾಡಿದ ಆಪಾದನೆ ಮೇಲೆ ... ನಡೆದು ... ಜಡ್ಜರು ... ಜೀವಾವಧಿ ಶಿಕ್ಷೆ ವಿಧಿಸಿದರು.

ಖಾದಿ ವಸ್ತ್ರ ವಿತರಣೋತ್ಸವ

ಗಾಂಧಿ ಸೇವಾ ಸಂಘ ... ದಲ್ಲಿ ... ನೇ ಶನಿ ಭಾನುವಾರ ಸಂಜೆ ... ಗಾಂಧಿ ... ಭಾಗವಹಿಸಿದವರಿಗೆ 'ಖಾದಿ ವಸ್ತ್ರ ವಿತರಣೋತ್ಸವ' ಸಮಾರಂಭ ನಡೆಸಲು ಏರ್ಪಡಿಸಿರುತ್ತೆ. ಶ್ರೀ ... ಅಧ್ಯಕ್ಷತೆ ವಹಿಸುವರು. ... ಸರ್ವರಿಗೂ ಆದರದ ಸ್ವಾಗತ ಬಯಸುತ್ತೇವೆ.

ಕಾಂಗ್ರೆಸ್ ಲೀಗ್ ರಾಜಿಗೆ ನಿಯೋಗದ ಪ್ರಯತ್ನ

೧೯೪೪ ನೇ ಸೆಪ್ಟೆಂಬರ್‌ನಲ್ಲಿ ನಡೆದ ಗಾಂಧಿ-ಜಿನ್ನಾ ಭೇಟಿಯ ಸಂದರ್ಭದಲ್ಲಿ ಗಾಂಧಿ ... ಕಾಂಗ್ರೆಸ್ ವರ್ಕಿಂಗ್ ಕಮಿಟಿ ... ಜವಹರಲಾಲ್ ನೆಹರೂರವರು ... ಕೇಂದ್ರದಿಂದ ... ಕಾಂಗ್ರೆಸ್ ... ಗೊತ್ತಾಗಿದೆ.

ಪ್ರಕಟಣೆ

... "ವಾಣಿ" ಪತ್ರಿಕೆ ... — ವ್ಯವಸ್ಥಾಪಕ

[ಎಡ ಅಂಚಿನ ಕಾಲಂ]

... ದಲ್ಲಿ ಮತ್ತೆ ಬಿಕ್ಕಟ್ಟು

... ದ ಮಾಜಿ ಪ್ರಧಾನಿ ಮಿ॥ ... ಪ್ರತಿಭಟನೆಯೊಡನೆ ನಡೆಸಿದ ಸಂಧಾನ ... ವಿಫಲವಾದುದರಿಂದ, ಅವರು ... ಸರ್ಕಾರವನ್ನು ರಚಿಸಿ ... ಲು ಆಲೋಚಿಸಿರುವುದಾಗಿ ... ದೆ. ಗವರ್ನರ ಮಂತ್ರಿಮಂಡಲ ... ತಮ್ಮ ಪಕ್ಷದ ೩ ಮಂತ್ರಿಗಳನ್ನು ... ಕೊಡುವಂತೆ ಅವರು ಸಲಹೆ ... ಅವರು ರಚಿಸುವ ಪ್ರತ್ಯೇಕ ಸರ್ಕಾರದಲ್ಲಿ ಎಲ್ಲ ಪಕ್ಷಗಳ ಪ್ರತಿನಿಧಿ ... ರುವರೆಂದು ಹೇಳಲಾಗಿದೆ.

... ದ ಸ್ವಾತಂತ್ರ್ಯಕ್ಕೆ ಅಮೆರಿ ಬೆಂಬಲ

... ಸ್ವಾತಂತ್ರ್ಯ ಸಾಧಿಸಲು ಯಾ... ಒಪ್ಪಿಕೊಂಡರೆಂಬುದೇ ... ಎಲ್ಲ ಪಕ್ಷಗಳ ಪ್ರಾಮಾಣಿಕ ... ಎಂದು ಭಾರತದ ಮಾಜಿ ... ಮಿ॥ ಎಲ್ ಎಸ್ ಅಮೆರಿಯ ... ನಲ್ಲಿ ತಿಳಿಸಿದ್ದಾರೆ

... ಪ್ರಕಾಶ್-ಲೋಹಿಯಾ ಬಿಡುಗಡೆ

... ಸ್ ಸಮತಾವಾದಿ ಪಕ್ಷದ ಪ್ರಧಾನ ... ರಾದ ಶ್ರೀ ಜಯಪ್ರಕಾಶ್ ನಾ... ಮತ್ತು ಡಾ॥ ರಾಮ ಮನೋಹರ ... ಯಾನವರ ಬಿಡುಗಡೆಗೆ ಕೇಂದ್ರ ... ರದ ಅಪ್ಪಣೆಯಾಗಿದೆ. ಅವರು ... ಆದ ಕೂಡಲೇ ನಾಯಕರ ಭೇಟಿ ... ದೆಹಲಿಗೆ ಧಾವಿಸುವರೆಂದು ಸು... ದೆ

... ಸರು ದಂಡೆತ್ತಿ ಬರುವರೇ?

... ಸ್ ಚಂದ್ರ ಬೋಸರು ಸುಶಿಕ್ಷಿತ ... ಸಜ್ಜಿತವಾದ ಸೇನೆಯೊಡನೆ ... ಯಲ್ಲಿ ಭಾರತದ ಮೇಲೆ ದಂಡೆ... ರೆಂದು ಹೇಳಲಾಗಿದೆ. ಬೋಸ... ಕಳೆದ ೬ ತಿಂಗಳಿಂದ ಅವಿ... ರೆಂದು ಮತ್ತೊಂದು ವಾರ್ತೆ ... ದೆ

... ಡೋನೇಷಿಯಾದಿಂದ ಅಕ್ಕಿ

... ದ ದಾರುಣ ಪರಿಸ್ಥಿತಿಯನ್ನು ... ಡೋನೇಷಿಯಾದ ಪ್ರಧಾನಿ ಮಿ॥ ... ಲಕ್ಷ ಟನ್ ಅಕ್ಕಿ ಕೊಡಲು ... ಅದನ್ನು ಸಾಗಿಸುವ ವ್ಯವಸ್ಥೆ ... ಯವರು ಮಾಡಬೇಕೆಂದು ತಿಳಿಸಿದ್ದಾ... ಒಪ್ಪಿ ಅವಶ್ಯಕತೆ ಇದೆಯೆಂ... ತಿಳಿಸಿದ್ದಾರೆ.

... ನ ಸೀತಾರಾಮ ಮಂದಿರ

... ಪಿ ವಿಚಾರ ಕೃಷ್ಣಪ್ಪನವರ ... ಉತ್ಸವದ ಕಾರ್ಯಕ್ರಮಗ... ಎ. ಬಾಲಸುಬ್ರಹ್ಮಣ್ಯಂರವ ... ದ ಸಂಗೀತವಾಣಿ ಶ್ರೀನಿವಾಸ ... ವಸಂತಕುಮಾರಿ ಮತ್ತು ... ಸುಪ್ರಸಿದ್ಧವಾದ ಸಂಗೀತ ... ನೊನ್ನೆಯಿಂದ ಆರಂಭವಾಗಿವೆ ... ರಿಂದ ೧೧ ಘಂಟೆ ವರೆಗೆ ... ಮಾಲಿಕ ಪ್ರತಿ ದಿನವೂ ... ವನ್ನು ಪ್ರಸಾರ ಮಾಡಲು

... ಯಾದಲ್ಲಿ ಪುನಃ ... ಭವವಾಗಿದೆ. ... ಫೈಟಿಂಗ್-ವರ್ಲ್ಡ್ ... ಮುಂದೆ ಸಾಗುತ್ತಿದೆ.

ಸಾಧ್ವಿ

ತಾ|| ೧೨-೪-೪೬ ಶುಕ್ರವಾರ

ಸಂಧಾನದ ಒರೆಗಲ್ಲು

ಭಾರತಕ್ಕೆ ಬಂದಿರುವ ಬ್ರಿಟಿಷ್ ನಿಯೋಗದವರ ಸಂಧಾನ ಪ್ರಯತ್ನವು ಯಶಸ್ವಿಯಾಗಲು ಸಕಲ ಪಂಗಡದವರೂ ಸಹಕರಿಸುತ್ತಿರುವರಷ್ಟೆ. ಸಂಧಾನದ ಪ್ರಕರಣವು ಯಾವ ರೀತಿಯಲ್ಲಿ ಪರಿಣಮಿಸುವುದೋ ಈಗಲೇ ಹೇಳಲು ಸಾಧ್ಯವಿಲ್ಲ. ಆದರೆ ದೇಶದ ಸ್ವಾತಂತ್ರ್ಯಕ್ಕೆ ಭದ್ರವಾದ ಅಸ್ತಿಭಾರವನ್ನು ಹಾಕಲು ಎಲ್ಲರೂ ಉತ್ಸುಕರಾಗಿರುವರೆಂಬುದು ಧಾರಾಳವಾಗಿ ಹೇಳಬಹುದು. ನಿಯೋಗದವರೂ ಸಹ ಈ ವಿಷಯದಲ್ಲಿ ಸಂಪೂರ್ಣ ಆಸಕ್ತಿಯುಳ್ಳವರಾಗಿರುವರೆಂಬುದು ನಿರ್ವಿವಾದವಾದ ವಿಷಯ.

ದೇಶದ ನಾಯಕರೆಲ್ಲರೂ ಈ ಸಂಧಾನದಲ್ಲಿ ಅತ್ಯಂತ ಸೌಹಾರ್ದಯುತ ವಾತಾವರಣವನ್ನು ಕಲ್ಪಿಸಿದ್ದಾರೆ. ಅಲ್ಲದೆ ತೆರೆದ ಮನಸ್ಸಿನಿಂದ ಮಾತುಕತೆಗಳನ್ನು ನಡೆಸುತ್ತಿದ್ದಾರೆ. ಅಲ್ಲಲ್ಲಿ ಕೆಲವು ತೊಡಕಿನ ಪ್ರಶ್ನೆಗಳು ಕೇಳಿ ಬರುತ್ತಿದ್ದರೂ ಮೂಲ ಧ್ಯೇಯದ ಸಾಧನೆಯಾಗುವುದರಲ್ಲಿ ಯಾವ ಸಂದೇಹವೂ ಇಲ್ಲವೆಂದು ಹೇಳಬಹುದು. ಇದಕ್ಕೆ ಈಗಾಗಲೇ ಅನೇಕ ನಿದರ್ಶನಗಳು ಕಂಡು ಬಂದಿವೆ.

ಮಹಾತ್ಮಾ ಗಾಂಧಿಯವರು ಸಂಧಾನ ಚತುರರೆಂಬುದನ್ನು ಇಡೀ ಜಗತ್ತೇ ಅಂಗೀಕರಿಸಿದೆ. ಉಭಯ ಪಂಗಡಗಳ ಸ್ಥಾನಮಾನಗಳಿಗೆ ಚ್ಯುತಿ ಬಾರದಂತೆ ಪರಸ್ಪರ ಸ್ನೇಹಯುತವಾದ ಒಪ್ಪಂದವನ್ನು ಮಾಡುವುದರಲ್ಲಿ ಅವರು ಅಗ್ರಗಣ್ಯರು. ಶತ್ರುಗಳಿಗೂ ಸಹ ಅವರ ಅಂತಸ್ತಿಗೆ ಸಲ್ಲಬೇಕಾದ ಮಾನ ಮರ್ಯಾದೆಗಳನ್ನು ದೊರಕಿಸಿ ಕೊಟ್ಟು ತಮ್ಮ ಧ್ಯೇಯ ಸಾಧನೆಯನ್ನು ಮಾಡುವುದರಲ್ಲಿ ನಿಪುಣರು. ಅವರ ಮಧ್ಯಸ್ಥಿಕೆಯಲ್ಲಿ ಯಾರಿಗೂ ಕೊರತೆ ಇಲ್ಲದ, ಸರ್ವರಿಗೂ ಸಮರ್ಪಕವಾದ ನಿರ್ಧಾರಗಳು ಆಗುವುದರಲ್ಲಿ ಸಂಶಯವಿಲ್ಲ. ಆದುದರಿಂದಲೇ ಈ ಸಂಧಾನ ಪ್ರಕರಣದಲ್ಲಿ ಅವರು ಕೇವಲ ಒಂದು ಪಕ್ಷದ ಪ್ರತಿನಿಧಿಯಾಗಿರದೆ ಬ್ರಿಟಿಷ್ ನಿಯೋಗದವರಿಗೂ ಭಾರತ ನಾಯಕರುಗಳಿಗೂ ಸಲಹೆಗಾರರಂತೆ ವರ್ತಿಸುವುದಾಗಿ ಹೇಳಿದ್ದಾರೆ. ಅವರ ಸಲಹೆಗಳು ಉದಾತ್ತ ಧ್ಯೇಯಗಳ ಸಾಧನೆಗೆ ಸಹಾಯಕಗಳಾಗಿರುತ್ತವೆಯೇ ಹೊರತು ಅಲ್ಪ ವಿಷಯಗಳಿಗೆ ಸಂಬಂಧಪಟ್ಟಿರುವುದಿಲ್ಲವೆಂಬುದನ್ನು ಹೇಳಬೇಕಾಗಿಲ್ಲ.

ಅತಿ [illegible] ಸಾಧನೆ [illegible] ದಲ್ಲಿ ದೊರಕುವ ಅಗತ್ಯವಾದ ಸೌಲಭ್ಯಗಳಿಗೆ ಮಹಾತ್ಮರು [illegible] ನಿಯೋಗದವರಿಗೆ ಸಲಹೆ ಸೂಚನೆಗಳನ್ನು ಕೊಟ್ಟಿದ್ದಾರೆ. ನಿಯೋಗದ ಸಫಲತೆಗೆ ಇವು ಒರೆಗಲ್ಲೆಂದು ಹೇಳಬಹುದು. ಉಪ್ಪಿನ ತೆರಿಗೆಯನ್ನು ತೆಗೆದು ಹಾಕಬೇಕೆಂದೂ, ರಾಜಕೀಯ ಬಂದಿಗಳನ್ನು ಬಿಡುಗಡೆ ಮಾಡಬೇಕೆಂದೂ ಅವರು ಸೂಚಿಸಿರುವರು. ಇವುಗಳನ್ನು ಸರ್ಕಾರದವರು ಈಡೇರಿಸುವ ಸೂಚನೆಗಳೂ ಕಂಡು ಬರುತ್ತಿವೆ. ಈಗಾಗಲೇ ಪ್ರಾಂತೀಯ ಸರ್ಕಾರಗಳು ರಾಜಕೀಯ ಖೈದಿಗಳ ಬಿಡುಗಡೆಗೆ ಆಜ್ಞೆ ಮಾಡುತ್ತಿವೆ. ಶ್ರೀ|| ಜೈ ಪ್ರಕಾಶ್ ನಾರಾಯಣ್ ಮತ್ತು ಡಾ|| ರಾಮ ಮನೋಹರ ಲೋಹಿಯಾ ಮುಂತಾದ ತೀವ್ರ ಗಾಮಿಗಳ ಬಿಡುಗಡೆಗೆ ಕೇಂದ್ರ ಸರ್ಕಾರದವರು ಆಜ್ಞೆ ಮಾಡಿದ್ದಾರೆ. ಐ ಎನ್ ಎ ಖೈದಿಗಳೆಲ್ಲರನ್ನೂ ಬಿಟ್ಟು ಬಿಡಲು ಒತ್ತಾಯಗಳು ನಡೆಯುತ್ತಿವೆ. ಈ ಬಗ್ಗೆ ಬೇಗನೆ ತಕ್ಕ ಏರ್ಪಾಡುಗಳಾಗುವುವೆಂದು ನಿರೀಕ್ಷಿಸಬಹುದು.

ಹಿಂದೂಸ್ಥಾನದ ಇತಿಹಾಸದಲ್ಲಿ ಉಪ್ಪಿನ ತೆರಿಗೆಗೆ ಒಂದು ವಿಶೇಷ ಸ್ಥಾನವಿದೆ. ಬ್ರಿಟಿಷ್ ಆಡಳಿತಕ್ಕೆ ಇದೊಂದು ಕಳಂಕವಾಗಿದೆಯೆಂದು ಎಲ್ಲರೂ ಖಂಡಿಸಿರುವರು. ಮನುಷ್ಯನ ಜೀವನಕ್ಕೆ ಅತ್ಯಂತ ಅಗತ್ಯವಾದ ಇಂತಹ ಆಹಾರ ವಸ್ತುವಿನ ಮೇಲೆ ಮತ್ತಾವ ನಾಗರಿಕ ದೇಶವೂ ತೆರಿಗೆಯನ್ನು ಹೊರಿಸಿಲ್ಲ. ಇದು ಭಾರತದ ಗುಲಾಮಗಿರಿಯ ಪ್ರತ್ಯಕ್ಷವಾದ ಲಾಂಛನ— ಎಂದು ತಿಳಿದು ಗಾಂಧಿಜಿಯವರು ಇಪ್ಪತ್ತು ವರ್ಷಗಳ ಹಿಂದೆ ನಡೆಸಿದ ಘೋರ ಸತ್ಯಾಗ್ರಹ ಆಂದೋಲನಕ್ಕೆ ಉಪ್ಪಿನ ಶಾಸನದ ಭಂಗವನ್ನೇ ಅಸ್ತಿಭಾರವನ್ನಾಗಿ ಇಟ್ಟುಕೊಂಡಿದ್ದರು. ಆಗ ನಡೆದ ಗಾಂಧಿ-ಇರ್ವಿನ್ ಒಪ್ಪಂದದಲ್ಲಿ ಉಪ್ಪಿನ ಬಗ್ಗೆ ಪ್ರಜೆಗಳಿಗೆ ಅಲ್ಪ ಸ್ವಲ್ಪ ರಿಯಾಯತಿಗಳು ದೊರೆತವು. ಈಗಲೂ ಮಹಾತ್ಮರು ಈ ವಿಷಯವನ್ನೇ ಎತ್ತಿ ಹಿಡಿದಿದ್ದಾರೆ. ಸಂಧಾನದ ಸತ್ವ ಪರೀಕ್ಷೆಗೆ ಉಪ್ಪಿನ ತೆರಿಗೆಯನ್ನೇ ಮಹಾತ್ಮರು ಒರೆಗಲ್ಲಾಗಿ ಇಟ್ಟಿರುವಂತಿದೆ. ಇದರಲ್ಲಿ ನಿಯೋಗದವರು ತೇರ್ಗಡೆ ಹೊಂದಿ ತಮ್ಮ ಮುಂದಿರುವ ಕಾರ್ಯದಲ್ಲಿ ಯಶಸ್ವಿಯಾಗಲೆಂದು ಹಾರೈಸೋಣ.

Morning Shows at

NEW OPERA TALKIES

From 12—4—46

Tales of Manhatten

-:Starring:-

Charles Boyer Rita Hayworth
Henry Fonda Charles Laughton
Edward G Robinson Paul Robeson
Ethel Waters Rochester

Plus 40 Featured Players.

ದೇವಸ್ಥಾನದಲ್ಲಿ ಅಲಕ್ಷ್ಯ

ಚಾಮರಾಜನಗರದ ಶ್ರೀ ಚಾಮರಾಜೇಶ್ವರಸ್ವಾಮಿ ದೇವಸ್ಥಾನದಲ್ಲಿನ ಸ್ಥಿತಿಗತಿಗಳು ಬರುಬರುತ್ತಾ ಹದಗೆಡುತ್ತಿರುವ ವಿಚಾರ ಅತ್ಯಂತ ಶೋಚನೀಯವಾಗಿದೆ. ಸೋಮವಾರ ಮಂಟಪೋತ್ಸವದ ದಿನ ಸ್ವಾಮಿಯವರ ಉತ್ಸವ ಮೂರ್ತಿಯ ಮೇಲಕ್ಕೆ ಪ್ರಭಾವಳಿಯೇ ಇರಲಿಲ್ಲ. ವಿಚಾರಿಸಲಾಗಿ ಕೆಲವು ದಿನಗಳಿಂದ ಹೀಗೆಯೇ ನಡೆದು ಬರುತ್ತಿರುವುದಾಗಿ ತಿಳಿದು ಬಂತು. ರಥೋತ್ಸವದಲ್ಲಿ ದೀವಟಿಕೆಯೇ ಇರಲಿಲ್ಲ. ಹೀಗೆ ಇನ್ನೂ ಅನೇಕ ನ್ಯೂನತೆಗಳು ಕಂಡು ಬಂದವು. ಈಗಲಾದರೂ ಅಧಿಕಾರಿಗಳು ಸ್ವಾಮಿಯವರ ಸೇವೆ ಯಥಾವಿಧಿಯಾಗಿ ಜರುಗಲು ಏರ್ಪಾಡು ಮಾಡುತ್ತಾರೆಂದು ನಂಬುತ್ತೇನೆ —ಕೋಟಿ.

* ಸಂಯುಕ್ತ ಪ್ರಾಂತ್ಯದಲ್ಲಿ ಕಾಂಗ್ರೆಸ್ ಸೋಷಿಯಲಿಸ್ಟ್ ಪಕ್ಷದ ಮೇಲಿದ್ದ ನಿರ್ಬಂಧವನ್ನು ತೆಗೆದುಹಾಕಿರುವುದಾಗಿ ತಿಳಿಯಬರುತ್ತದೆ

ನಿಮ್ಮ ಮೈ [illegible]ನಂತೆ
ಹೊಳೆಯಬೇಕೆ? ನೀವು
ಲಾವಣ್ಯ ಮೂರ್ತಿಗಳಾಗಬೇಕೆ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್ !

ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ. ನಿಮಗೂ
ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ.
ಎಲ್ಲೆಲ್ಲೂ ದೊರೆಯುತ್ತವೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

— ಗ್ರಾಂಡ್ ಔಟ್‌ರೈಟ್ ಹರಾಜು —

1946 ನೇ ಏಪ್ರಿಲ್ 14 ನೇ ಭಾನುವಾರ ಬೆಳಗ್ಗೆ 10 ರಿಂದ 1 ಗಂಟೆ
ಮತ್ತು ಮಧ್ಯಾಹ್ನ 4 ರಿಂದ 6 ಗಂಟೆ ವರೆಗೆ

ಶ್ರೀ|| ಜಿ ಎ. ರಾಮಚಂದ್ರ ಮತ್ತು ಇತರರ ಆಜ್ಞೆ ಮೇರೆಗೆ ಸ್ವಾಟ್ಸ್ ಸ್ಟೋರ್ ನಲ್ಲಿರುವ ನಮ್ಮ ಷೋ-ರೂಂ ಗಳಲ್ಲಿ ಕೆಳಕಂಡ ಸಾಮಾನುಗಳನ್ನು ಮಾರುವೆವು. ಸಿಂಗರ್ ಸ್ಯೂಯಿಂಗ್ ಮೆಷಿನ್, ಸೈಕಲ್ಸ್, ಗ್ರಾಮಫೋನುಗಳು, 6×3½'×20" ಟ [illegible], 7'×3½" ಕನ್ನಡಿಯುಳ್ಳ ವಾರ್ಡ್‌ರೋಬ್, ಮಲಗುವ ಕೊಠಡಿಯ ಲೌಂಜ್, ಆಫೀಸ್ ಟೇಬಲ್, ಊಟದ ಟೇಬಲುಗಳು, ಕುರ್ಚಿಗಳು, ಕ್ಯಾರಂ ಟೇಬಲ್ಲುಗಳು, ಬಾಕ್ಸ್ ಸ್ಪ್ರಿಂಗ್ ಹಾಸಿಗೆಯುಳ್ಳ ಡಬ್ಬಲ್ ಮಂಚಗಳ, ಅರಗಿನ ಮನೆ ಟೇಬಲುಗಳು, ಟೇಬಲ್ ಫ್ಯಾನ್ಸ್, ಎಲೆಕ್ಟ್ರಿಕ್ ಫಿಟ್ಟಿಂಗ್ ಗಳು, ಹಿತ್ತಾಳೆ ಮತ್ತು ತಾಮ್ರದ ಪಾತ್ರೆಗಳು, ಫ್ಯಾನ್ಸಿ ಒಡವೆಗಳು, ಮಕ್ಕಳ ಟ್ರೈಸಿಕಲ್, ಮಕ್ಕಳ ಮೋಟಾರ್ ಕಾರ್, ಮಕ್ಕಳ ಗಾಡಿ ಮತ್ತು ಇತರ ಉಪಯೋಗವಾದ ಸಾಮಾನುಗಳು.

—: 13 ನೇ ತಾರೀಖು ಶನಿವಾರ ಪರೀಕ್ಷಿಸಬಹುದು :—

: ಅಬೀದ್ಸ್ :

ಹರಾಜು ಹಾಕುವವರು ಮತ್ತು ಹೌಸ್ ಫರ್ನಿಷರ್ಸ್,

ಸ್ವಾಟ್ಸ್ ಸ್ಟೋರ್, : : ಮೈಸೂರು

" ಆಹಾರ ಮತ್ತು ಹಾಲು "

ರಾಜಧಾನಿಯ ಡಾ|| ವಿ. ಎನ್. [illegible] ರಾಂರವರ ಸಂಪಾದಕತ್ವದಲ್ಲಿ ಹೊರಟಿರುವ " ಆಹಾರ ಮತ್ತು ಹಾಲು " ಎಂಬ ನಾಮಾಂಕಿತದ ಆಂಗ್ಲ ವಾರ ಪತ್ರಿಕೆಯನ್ನು ಆದರದಿಂದ ಸ್ವೀಕರಿಸಲಾಗಿದೆ. ಪತ್ರಿಕೆಯ ಬೆಲೆ ಕೇವಲ ಮೂರಾಣೆ. [illegible] ಸರ್ವರ ಪ್ರೋತ್ಸಾಹಕ್ಕೂ ಅರ್ಹವಾಗಿದೆ.

* ಭಾರತವನ್ನು ಭಾಗಮಾಡಬೇಕೆಂದು ಕೇಳುತ್ತಿರುವ ಮುಸ್ಲಿಂ ಲೀಗು ಪ್ಯಾಲೆಸ್ಟೈನ್ ವಿಭಜನೆಗೆ ವಿರೋಧ ಸೂಚಿಸಿದೆ.

ಅಮೃತ

ಪಿತ್ತದ ಜ್ವರ ಮಲೇರಿಯಾ ಜ್ವರ, ಜ್ವರದ ಗಡ್ಡೆ ಇವುಗಳ ಮೇಲೆ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆ.

ಕೆ. ವಿ. ವೆಂಕಟರಾಮಯ್ಯ
ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯಶಾಲೆ
ಅರಕಲವಾಡಿ.

ಟಿ. ಸಿ. ನಟರಾಜ್
ಔಷಧಾಲಯ
ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ [illegible] ಔಷಧಿಗಳೂ ಸದಾ ಕಾಲದಲ್ಲೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೆ ಚಿಕಿತ್ಸೆಯು ಬಹು ಸುಲಭ [illegible] ಮಾಡಲ್ಪಡುತ್ತದೆ.

ಮುಂಡೂರವರ ಆಯುರ್ವೇದೀಯ ದ್ರವ್ಯೌಷಧಗಳೆಲ್ಲವೂ ದೊರೆಯುತ್ತವೆ.

ಒಪೇರಾ ಟಾಕೀಸ್
13—4—46 ರಿಂದ
ಪ್ರತಿದಿನ ೩ ಆಟಗಳು

*** ವಾಲ್ಮೀಕಿ**
(ತಮಿಳು ಭಾಷೆ)
* ಹೊನ್ನಪ್ಪ ಭಾಗವತರ್
* ಟಿ. ಆರ್. ರಾಜಕುಮಾರಿ
* ವಸಂತ ಕೋಕಿಲಾ.
* ಬಾಲಯ್ಯ
* ಕಾಳಿ ಎನ್. ರತ್ನ

ಸಾಧ್ವಿ
ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿ
(ತಿಂಗಳಿಗೆ ಚಂದಾ ಎಂಟಾಣೆ
ಜಾಹೀರಾತಿನ ದರಗಳಿಗೆ
ವಿಚಾರಿಸಿರಿ

Edited, printed and published by A. R. Nagarajan at the Sadhvi [illegible] D Subbiah Road, Mysore

ರಾಷ್ಟ್ರೀಯ ವಾರದ

ಮುಕ್ತಾಯ ಸಮಾರಂಭ

ಮೈಸೂರು ೧೪

ರಾಷ್ಟ್ರೀಯ ವಾರದ ಮುಕ್ತಾಯ ಸಮಾರಂಭವನ್ನು ರಾಜಧಾನಿಯ ಕಾಂಗ್ರೆಸ್ ವಲಯದಲ್ಲಿ ನಿನ್ನೆ ಆಚರಿಸಲಾಯಿತು. ಬೆಳಗಿನ ಸುಬ್ಬರಾಯನ ಕೆರೆ ಅಂಗಳದಲ್ಲಿ ಶ್ರೀ ಎಸ್. ರಂಗರಾಮಯ್ಯನವರಿಂದ ರಾಷ್ಟ್ರೀಯ ಧ್ವಜದ ಆರೋಹಣವು ನಡೆಯಿತು. ಸಾಯಂಕಾಲ ಕಾಂಗ್ರೆಸ್ ಭವನದಲ್ಲಿ ಶ್ರೀ ಎಸ್. ರಂಗರಾಮಯ್ಯನವರ ಅಧ್ಯಕ್ಷತೆಯಲ್ಲಿ ಬಹಿರಂಗ ಸಭೆ ನಡೆಯಿತು. ಅಧ್ಯಕ್ಷರು ಮಾತನಾಡಿ ರಾಷ್ಟ್ರೀಯ ವಾರದ ಮಹತ್ವವನ್ನೂ ಅದು ಜಾರಿಗೆ ಬಂದ ಸಂದರ್ಭವನ್ನೂ ವಿವರಿಸಿದರು. ಸಭೆಯಲ್ಲಿ ಮೈಸೂರಿನಲ್ಲಿರುವ ಎಲ್ಲ ರಾಜಕೀಯ ಬಂದಿಗಳ ಬಿಡುಗಡೆ ಮಾಡಿ, ನಿಷೇಧಾಜ್ಞೆಗಳನ್ನೂ, ಪ್ರತಿಬಂಧಕಾಜ್ಞೆಗಳನ್ನು ವಾಪಸ್ ತೆಗೆದುಕೊಳ್ಳಬೇಕೆಂಬ ನಿರ್ಣಯ ಅಂಗೀಕರಿಸಲ್ಪಟ್ಟಿತು.

ಹರಿಭಜನೆ ಹರಿಕಥೆ

ಶ್ರೀರಾಮನವಮಿ ಉತ್ಸವದ ಅಂಗವಾಗಿ ಈ ದಿನ ರಾತ್ರಿ ೯ ಘಂಟೆಗೆ ... ಸುಪ್ರಸಿದ್ಧ ಕೀರ್ತನಕಾರರಾದ ಶ್ರೀ ಸಿ ... ರಾವ ಸ್ವಾಮಿ ಯವರಿಂದ ಹರಿಭಜನೆ ನಡೆಯುತ್ತದೆ.

..., ೧೫-೪-೪೬ ಸೋಮವಾರ ರಾತ್ರಿ ... ಬೆಂಗಳೂರಿನಿಂದ ದಯಮಾಡಿಸುವ ಶ್ರೀಮನ್ಮಹಾರಾಜರಿಂದ ಸನ್ಮಾನಿತ ... ಲಕ್ಷ್ಮೀಪತಿ, ನರಸಿಂಹ ... ಸೋದರರಿಂದ 'ಮಯೂರಧ್ವಜ' ಹರಿಕಥೆ ನಡೆಸಲ್ಪಡುತ್ತದೆ

ವಿದ್ಯುಚ್ಛಕ್ತಿಯಿಂದ ಮರಣ

ನಿನ್ನೆ ... ಗ್ರಾಮದ ಹತ್ತಿರ ... ಗ್ರಾಮದ ಬೊಮ್ಮಯ್ಯನೆಂಬಾತನು ... ದಲ್ಲಿ ಕೆಲಸ ಮಾಡುತ್ತಿದ್ದಾಗ ಅಲ್ಲಿ ... ವಿದ್ಯುತ್ ತಂತಿಯನ್ನು ಮುಟ್ಟಿ ... ಮೃತ ಪಟ್ಟನೆಂದು ಗೊತ್ತಾಗಿದೆ.

ಬಾವಿಗೆ ಬಿದ್ದು ಮರಣ

...ಸೂರು ತಾಲ್ಲೋಕು ದೊಡ್ಡ ಕಾನ್ಯ ... ಕೃಷ್ಣಬಾಬಿ ಮತ್ತು ಒಂಭತ್ತು ... ಗಂಡು ಮಗ ಇಬ್ಬರೂ ಅದೇ ... ಬಾವಿಯೊಂದರಲ್ಲಿ ಬಿದ್ದು ಮೃತರಾದ... ತಿಳಿದು ಬಂದಿದೆ. ಗೃಹಛಿದ್ರ ... ಈ ದ ... ಕ್ಕೆ ಕಾರಣ ... ಗಿದೆ.

ರಾಷ್ಟ್ರೀಯ ಸಪ್ತಾಹ

... ವಿದ್ಯಾಶಾಲೆಯಲ್ಲಿ ರಾಷ್ಟ್ರೀಯ ಸಪ್ತಾಹದ ಆಚರಣೆಯ ... ದಿವಸದ ಕಾರ್ಯ ... ನಿನ್ನೆ ಸಾಯಂಕಾಲ ... ಶ್ರೀ ಜ ... ರವರ ಅಧ್ಯಕ್ಷತೆಯಲ್ಲಿ ಜರುಗಿ ... ಮುಖ್ಯ ... ಭಾಷಣ ಮಾಡಿದರು. ... ನಡೆಯಿತು ... ಜೈ ಹಿಂದ್ ಘೋಷ ... ಸಭೆ ಮುಕ್ತಾಯವಾಯಿತು.

ಮುಮ್ಮಗನಿಗೆ ಶಿಕ್ಷೆ

[illegible]

ಫೋ: ನಂ ೩೪೪ || ವಂದೇ ಮಾತರಂ || ...



ಸಂಪುಟ ೪] ಭಾನುವಾರ ೧೪—೪—೪೬ [ಸಂಚಿಕೆ ೧೯೦

ಭಾರತ ಸ್ವಾತಂತ್ರ್ಯಕ್ಕೆ ಐರೋಪ್ಯರ ಬೆಂಬಲ

ಐರೋಪ್ಯರ ಬೆಂಬಲ

ಐರೋಪ್ಯರು ವ್ಯಾಪಾರಿಗಳಾಗಿ ಭಾರತಕ್ಕೆ ಬಂದರು. ಮುಂದೆಯೂ ಅವರು ವರ್ತಕರಾಗಿಯೇ ಭಾರತೀಯರೊಡನೆ ಸ್ನೇಹ ಸೌಹಾರ್ದಗಳಿಂದ ಇರಲು ಬಯಸುವರು. ಬ್ರಿಟಿಷ್ ನಿಯೋಗದವರೊಡನೆ ಮಾತನಾಡಿ ... ಸ್ಥಾನದಲ್ಲಿ ಕೂಡಲೇ ಸ್ವಯಂ ಆಡಳಿತವು ... ಐರೋಪ್ಯರ ಪರವಾಗಿ ನಾನು ... ಯೂರೋಪಿಯನ್ ಅಸೋಸಿಯೇಷನ್ ... ಸಭೆಯ ಐರೋಪ್ಯ ಪಂಗಡದ ನಾಯಕರಾದ ... ಪಿ. ಜೆ. ಗ್ರಿಫಿತ್ಸ್‌ರವರು ... ದ್ದಾರೆ.

ನಾರಾಯಣರಾಯರು ಅಧ್ಯಕ್ಷರಾದರು

ಸ್ವಂ. ವ.] ... ರಾಜನಗರ ೧೩

ಇಲ್ಲಿಯ ಪೌರಸಭೆಯ ... ಸಭಾಧ್ಯಕ್ಷರನ್ನು ಚುನಾಯಿಸಲು ನಿನ್ನೆ ... ಶ್ರೀ ಕೃಷ್ಣರಾವ ರ ಅಧ್ಯಕ್ಷತೆಯಲ್ಲಿ ಜರುಗಿ ಶ್ರೀ ಸಿ ... ಉಮೇದುವಾರಿಕೆಯನ್ನು ವಾಪಸ ತೆಗೆದುಕೊಂಡರು. ಮೊದಲನೆ ... ಸರ್ವಾನುಮತ ... ಕೊನೆಯಲ್ಲಿ ಶ್ರೀ ಸಿ ... ಶ್ರೀ ಬಿ ನಾರಾಯಣರಾವರಿಗೆ ... ಶ್ರೀ ನಾರಾಯಣರಾಯರು ಇಲ್ಲಿಯ ಪ್ರಥಮ ... ಅಧ್ಯಕ್ಷರಾಗಿ ಚುನಾಯಿತರಾದರು

ಪಾಕಿಸ್ತಾನದ ಇತ್ಯರ್ಥಕ್ಕೆ ಅಮೇರಿಕಾ ಅಭಿಪ್ರಾಯ

ಪಾಕಿಸ್ತಾನದ ಬಗ್ಗೆ ... [illegible]

...

ಮೂಲ ಶಿಕ್ಷಣ ಕ್ರಮದಿಂದಲೇ ದೇಶದ ಪ್ರಗತಿ

ಶ್ರೀ ರಾಮಚಂದ್ರನ್‌ರವರ ಭಾಷಣ

ಮೈಸೂರು ೧೪

ನಿನ್ನೆ ಸಂಜೆ ... ಹಾಲಿನಲ್ಲಿ ... ಅಧ್ಯಕ್ಷತೆಯಲ್ಲಿ ... ಸಂಘದ ಕಾರ್ಯದರ್ಶಿಗಳಾದ ಶ್ರೀ ರಾಮಚಂದ್ರನ್‌ರವರು "ಬೇಸಿಕ್ ಎಜ್ಯುಕೇಷನ್" ವಿಷಯವಾಗಿ ಭಾಷಣ ಮಾಡಿದರು.

... ಭಾಷಣಕಾರರು "ಬೇಸಿಕ್ ಎಜ್ಯುಕೇಷನ್" ದ ... ತತ್ವಗಳನ್ನು ವಿವರಿಸಿದರು. ಈ ಕ್ರಮವು ಭಾರತದಲ್ಲಿ ... ನಡೆಯುತ್ತಿದ್ದರೂ, ... ಈ ಮಾರ್ಗ ತಪ್ಪಿ ... ಮಾರ್ಗಕ್ಕೆ ... ಭಾರತೀಯ ಜನತೆಯ ... ಆಧುನಿಕ ಪದ್ಧತಿಯು ಪ್ರಮುಖ ದೇಶವನ್ನು ... ಯುರೋಪ್ ದೇಶಗಳಲ್ಲಿ ... ಎಂದು ಹೇಳಿದರು. ... ಜೀವನ ... ವರ್ಗಗಳ ... ಈ ವಿಧಾನದಲ್ಲಿ ... [illegible]

...

ಭವಾನಿಯಿಂದ ಬೋಸರಿಗೆ ವಿಜಯಾಸ್ತ್ರ

ಶ್ರೀ ಸುಭಾಸ್ ಚಂದ್ರ ಬೋಸರಿಗೆ ವಿಜಯದ ಶಕ್ತಿಯನ್ನು ಭವಾನಿ ದಯಪಾಲಿಸುತ್ತಿರುವಂತಹ ಪ್ರತಿಮೆಯನ್ನು ಕಾಂಗ್ರೆಸ್ ಕೆಲಸಗಾರರು ... ದಲ್ಲಿ ಪೂಜೆ ಮಾಡುತ್ತಿದ್ದಾರೆಂದು, ಇದನ್ನು ನೋಡಲು ಜನರು ಗುಂಪು ಗುಂಪಾಗಿ ... ಬರುತ್ತಿದ್ದಾರೆಂದು ತಿಳಿದು ಬಂದಿದೆ. ... ವರೆಗೆ ಪೂಜೆ ನಡೆಯಲಿದೆಯೆಂತೆ. ... ಭವಾನಿ ದೇವಿ ... ವಿಜಯವನ್ನು ಇತ್ತಿದ್ದಳೆಂದು ಹೇಳಲಾಗುತ್ತಿದೆ

ಪೋಲೀಸ್ ಮುಷ್ಕರ

... ಪೋಲೀಸ್ ಕಾನ್ಸ್ಟೇಬಲ್‌ಗಳು ಕಳೆದ ... ದಿನಗಳಿಂದ ... ಮುಷ್ಕರ ಮಾಡಿದ್ದಾರೆಂದೂ, ಪೋಲೀಸ್ ... ಭೇಟಿ ... ತಿಳಿದು ಬರುತ್ತದೆ.

ಉಂಡಿಗೆ ತರಗತಿಗಳು

ರಾಷ್ಟ್ರ ಸೇವಾ ದಳದ ... ತರಗತಿಗಳು ... [illegible]

ಉಪ್ಪಿಗೂ ಸಕ್ಕರೆಗೂ ನಿಷೇಧ

ಸ್ವಂ. ವ.] ... [illegible]

...

[illegible]

ಸಾಧ್ವಿ

ತಾ॥ ೧೪-೪-೪೬ ಭಾನುವಾರ

ಅವಿಶ್ವಾಸ

ಬೆಂಗಳೂರು ಪೌರಸಭೆಯು ಇತಿಹಾಸದಲ್ಲಿ ಅಗಬಾರದುದೆಲ್ಲಾ ಆಗುತ್ತಿದೆ. ಇದುವರೆಗೆ ಯಾವ ಅಧ್ಯಕ್ಷರ ಮೇಲೂ ಅವಿಶ್ವಾಸದ ನಿರ್ಣಯವು ಇಲ್ಲಿ ಮಂಡಿಸಲ್ಪಡಲಿಲ್ಲ; ಅದೂ ಇಂತಹ ಸಂದರ್ಭದಲ್ಲಿ, ಅದೂ ಕೇವಲ ಉಪ್ಪು ಕಾರಣಗಳಿಗಾಗಿ ಎಂದು ಹೇಳಬಹುದು. ಅಧ್ಯಕ್ಷರ ಆಡಳಿತ ವಿಚಕ್ಷಣೆಯ ದೃಷ್ಟಿಯಿಂದ ಅಥವಾ ವೈಯಕ್ತಿಕ ವರ್ತನೆಯಿಂದಾಗಲೀ ಯಾವ ಲೋಪದೋಷವನ್ನೂ ಕಂಡು ಈ ನಿರ್ಣಯವು ಆಗಿರುವುದಿಲ್ಲ. ಕೇವಲ ಪಕ್ಷ ಪ್ರತಿಪಕ್ಷಗಳ ಸ್ಪರ್ಧೆಯೇ ಇದಕ್ಕೆ ಮೂಲ ಕಾರಣವೆಂದು ಹೇಳಬಹುದು.

ಅವಿಶ್ವಾಸವನ್ನು ಸೂಚಿಸಿದವರಲ್ಲಿ [illegible] ಅನೇಕ [illegible] ಈ ಸಭೆಯ [illegible] ಕೊಟ್ಟು [illegible]. ಈ ಅವಿಶ್ವಾಸವು ಕೇವಲ [illegible] ಹೇಳಬಹುದು. ಅವರೂ [illegible] ಪೌರಸಭೆಯ [illegible] ಸಂಸ್ಥೆಯ [illegible] ಬೇಕು.

ಅವಿಶ್ವಾಸ ನಿರ್ಣಯವು [illegible] ಸಭೆಯ [illegible] ಬೇಕು. ಇಲ್ಲವಿದ್ದರೆ ಒಂದು ತಿಂಗಳ ನಂತರ ಅದು [illegible] ಕೇವಲ [illegible] ಅದು [illegible]. ಅದ್ದರಿಂದ ಮುಂದಿನ ತಿಂಗಳು [illegible] ಇದು [illegible] ಅಧ್ಯಕ್ಷರು [illegible] ಅಭ್ಯಂತರವಿಲ್ಲ.

ಕೇವಲ [illegible] ಈ ಪ್ರಸಂಗಕ್ಕೆ [illegible] ನಮ್ಮ ಅಭಿಪ್ರಾಯ. ಇದು [illegible] ಅವ್ಯಕ್ತ [illegible] ಕೃತ.

[illegible]

ಮದ್ರಾಸಿನಲ್ಲಿ ೯೩ ನೇ ಸೆಕ್ಷನ್ ಮುಂದುವರಿಯುವುದೇ ?

ಗವರ್ನರ್ ಪ್ರಭುತ್ವದ ಅವಧಿ ಏ. ೩೦ ರ ವರೆಗಿದೆ. ಅದರೊಳಗೆ ಮಂತ್ರಿಮಂಡಲ ರಚಿತವಾಗದಿದ್ದರೆ ಈಗಿರುವ ೯೩ ನೇ ಸೆಕ್ಷನ್ ಮುಂದುವರಿಸಬೇಕಾಗುತ್ತದೆ. ಇದಕ್ಕೆ ಬ್ರಿಟಿಷ್ ಪಾರ್ಲಿಮೆಂಟ್ ಅನುಮತಿ ಬೇಕು. ಪಾರ್ಲಿಮೆಂಟಿಗೆ ೧೮ ರಿಂದ ೩೦ ರ ವರೆಗೆ ರಜ ಇರುವುದರಿಂದ ೧೭ ನೇ ತಾ॥ ನೊಳಗೆ ಮದ್ರಾಸಿನಲ್ಲಿ ನೂತನ ಮಂತ್ರಿಮಂಡಲದ ರಚನೆಯಾಗದಿದ್ದರೆ, ಮದ್ರಾಸ್ ಗವರ್ನರು, ೯೩ ನೇ ಸೆಕ್ಷನ್ ಮುಂದುವರಿಸಲು ಪಾರ್ಲಿಮೆಂಟಿನಲ್ಲಿ ಮಸೂದೆ ಮಂಡಿಸಲು ಭಾರತದ ಉಪರಾಯರವರಿಗೆ ಪ್ರಾರ್ಥಿಸುವವರಾಗಿದ್ದಾರೆಂದು ತಿಳಿದುಬರುತ್ತದೆ.

ಉಪವಾಸದಿಂದ ಸಾವು

ಕೋಲಾರದ ಜಿಲ್ಲಾ ಕಾಂಗ್ರೆಸ್ ಅಧ್ಯಕ್ಷರಾದ ಶ್ರೀ ಕೆ ಎಂ ಹುಸೇನ್‌ರವರು ಈ ರೀತಿ ಬರೆಯುತ್ತಾರೆ:—

೧೧-೪-೪೬ ರಲ್ಲಿ ಬೌರಿಂಗ್‌ಪೇಟೆ ತಾ॥ ಮಾವಹಳ್ಳಿ ಗ್ರಾಮದಲ್ಲಿ ಆಹಾರ ವಿಲ್ಲದೆ ಒಬ್ಬ ಸತ್ತು ಹೋದನೆಂದು ಆ ಊರಿನ ಶ್ಯಾನುಭೋಗ, ಪಟೇಲ್ ಮತ್ತು ೫೦ ಮಂದಿ ಊರಿನ ಪ್ರಮುಖರು ರುಜು ಮಾಡಿದ ಅರ್ಜಿಯೊಂದು ನನಗೆ ತಲುಪಿತು. ನಾನೂ ಮತ್ತು ಕ್ಷಾಮ ಪರಿಹಾರ ಸಮಿತಿ ಸದಸ್ಯರಾದ ಶ್ರೀ ಸಿ ಕೃಷ್ಣಯ್ಯಚೆಟ್ಟಿಯವರೂ ಸ್ಥಳಕ್ಕೆ ಹೋಗಿ ತನಿಖೆ ಮಾಡಿದೆವು. ಅಲ್ಲಿನ ಆದಿ ಕರ್ನಾಟಕರ ಮುನಿ ಹನುಮ ಎಂಬಾತನು ಆಹಾರ ಪದಾರ್ಥಗಳು ಸಿಕ್ಕದೆ ಉಪವಾಸ ಮಾಡಿದ ದರ ಸಲುವಾಗಿ ಸತ್ತು ಹೋದನೆಂದು ತಿಳಿಯಿತು. ಇನ್ನೂ ಕೆಲವರ ಸ್ಥಿತಿ ಚಿಂತಾಜನಕವಾಗಿದೆ.

ಹುದು. ಆದುದರಿಂದ ಅವರು ಆ ಸಂಸ್ಥೆಯ ಮತ್ತು ಮಹಾಜನರ ಮನ್ನಣೆಗೆ ಪಾತ್ರರಾಗಿದ್ದಾರೆ.

ಈ ವಿಶ್ವಾಸ-ಅವಿಶ್ವಾಸಗಳೆರಡನ್ನೂ ಅವರುಗಳು ಸಮವಾಗಿ ಭಾವಿಸಿ ಅವುಗಳನ್ನು ಕಾಂಗ್ರೆಸ್ ಸಂಸ್ಥೆಯ ಇಚ್ಛೆಗೆ ಬಿಟ್ಟುಕೊಟ್ಟು ತಾವು ನಿರ್ಲಿಪ್ತ ದೇಶ ಸೇವಕರಂತೆ ಮುಂದೆಯೂ ವರ್ತಿಸಬೇಕೆಂಬುದೇ ನಮ್ಮ ಹಾರೈಕೆ. ಈ ಪ್ರಕರಣದ ಕಾರಣಕರ್ತರುಗಳಾದ ಮಹನೀಯರುಗಳೆಲ್ಲರೂ ಈಗಲಾದರೂ ಒಟ್ಟು ಪರಿಸ್ಥಿತಿಯನ್ನು ವಿಮರ್ಶಿಸಿ ತಮಗೆಲ್ಲರಿಗೂ ಪರಮ ಪೂಜ್ಯವಾದ ಸಂಸ್ಥೆಯ ಕೀರ್ತಿ ಗೌರವಗಳು ಮುಂದೆ ನಿಂತಿ ಕಳಂಕವಾಗಿ ಬೆಳೆಯಲು ಸಹಕಾರಿಗಳಾಗಲೆಂದು ನಾವು ಕೋರುತ್ತೇವೆ.

ಪೌರಸದಂಗಡಿ ಕೆಲಸಗಾರರ ಮುಷ್ಕರ

ಲಂಡನ್ ನಗರದ ಪೌರಸದಂಗಡಿಗಳ ೫೦೦ ಮಂದಿ ಕೆಲಸಗಾರರು, ಹೆಚ್ಚಿಗೆ ೫ ಶಿಲಿಂಗ್ ಭತ್ಯ ಕೊಡಬೇಕೆಂದು ಮುಷ್ಕರ ಹೂಡಿದ್ದಾರೆ.

* ಇನ್ನು ಮುಂದೆ ಗಾಂಧೀಜಿಯವರ ಹರಿಜನ ಪತ್ರಿಕೆಗೆ ರಾಷ್ಟ್ರಪತಿ ಆಜಾದರು ವಾರವೂ ಲೇಖನ ಬರೆಯುವರೆಂದು ಗೊತ್ತಾಗಿದೆ.

ಟೆಂಡರ್ ನೋಟೀಸು

ಮೈಸೂರು ಅರಮನೆ ಗಜಶಾಲೆ ಇಲಾಖೆಗೆ ೧೯೪೬-೪೭ ನೇ ಸಾಲಿನಲ್ಲಿ ಸಾಮಾನು ಸರಬರಾಜು ಮಾಡಲು ಅಪೇಕ್ಷೆಯುಳ್ಳವರು ಸೀಲ್ಡ್ ಟೆಂಡರ್‌ಗಳನ್ನು ತಾ॥ ೨೨-೪-೧೯೪೬ ನೇ ಮಧ್ಯಾಹ್ನ ೧೨ ಘಂಟೆ ಒಳಗಾಗಿ ಗಜಶಾಲಾ ಅಧಿಕಾರಿಯವರಿಗೆ ಕೊಡತಕ್ಕದ್ದು. ಹೆಚ್ಚಿಗೆ ವಿಷಯಗಳನ್ನು ಗಜ ಶಾಲೆಯಲ್ಲಿ ವಿಚಾರಿಸಿ ತಿಳಿದುಕೊಳ್ಳಬಹುದು.

ಬಿ. ಎಸ್. ನೀಲಕಂಠರಾವ್,
ಆಫೀಸರ್ ಇನ್ ಛಾರ್ಜ್,
ಪ್ಯಾಲೇಸ್ ಗಜಶಾಲ,
ಮೈಸೂರು.

ಜಿ. ಎಸ್. ರಾಜ್ ಸ್ಟೋರ್ಸ್,
ಗಂಜಾಂ

ಹೊಸದಾಗಿ ಗಂಜಾಂನಲ್ಲಿ ಸ್ಥಾಪಿತವಾಗಿರುವ ಜಿ. ನಾಗರಾಜ್ ಸ್ಟೋರ್ಸಿನಲ್ಲಿ ಸುಲಭ ಬೆಲೆಗೆ ಎಲ್ಲಾ ಸಾಮಾನುಗಳೂ ದೊರೆಯುತ್ತವೆ. ಮಹನೀಯರುಗಳು ಒಂದಾವರ್ತಿ ಭೇಟಿ ಕೊಡಿರಿ

ಜಿ. ನಾಗರಾಜ್,
ವ್ಯವಸ್ಥಾಪಕ

ಆಪೇರಾ ಟಾಕೀಸ್
13—4—46 ರಿಂದ
ಪ್ರತಿದಿನ ೩ ಆಟಗಳು

★ ವಾಲ್ಮೀಕಿ ★

(ತಮಿಳು ಭಾಷೆ)
* ಹೊನ್ನಪ್ಪ ಭಾಗವತರ್
* ಟಿ. ಆರ್. ರಾಜಕುಮಾರಿ
* ವಸಂತ ಕೋಕಿಲಂ
* ಬಾಲಯ್ಯ
* ಕಾಳಿ ಎನ್. ರತ್ನ

ಪ್ರಾಣಿ ವಧೆ ನಿಂತಿವು

ಮೈಸೂರು ಜಿಲ್ಲಾ ಕೃಷ್ಣರಾಜ [illegible] ತಾಲ್ಲೂಕು ಮಾವತ್ತೂರು ಗ್ರಾಮ [illegible] ಮ ಹಬ್ಬದಲ್ಲಿ ಇದುವರೆಗೂ ಕೋಣ, ಕುರಿ, ಆಡು ಮೊದಲಾದ ಪ್ರಾಣಿಗಳ ವಧೆ ನಡೆಯುತ್ತಿತ್ತು. ಇನ್ನು ಮುಂದೆ ಪ್ರಾಣಿವಧೆಯನ್ನು ಸಂಪೂರ್ಣ ನಿಲ್ಲಿಸಲಾಗಿದೆ. ಸಾತ್ವಿಕ ಪೂಜೆಯೇ ನಡೆಯುತ್ತದೆ.

ಹರಿಕೆಯನ್ನು ಧನ ರೂಪವಾಗಿ [illegible] ಸಾತ್ವಿಕ ಪೂಜೆಗೆ ಅನುಕೂಲ ಮಾಡಿ [illegible] ಟ್ಟ ಅಮ್ಮನವರ ಕೃಪೆಗೆ ಪಾತ್ರರಾಗ [illegible] ಕೆಂದೂ, ಈ ವರ್ಷ ೧೬-೪-೪೬ [illegible] ರ ನಡೆಯುವ ಅಮ್ಮನವರ ಹಬ್ಬಕ್ಕೆ [illegible] ಮಹನೀಯರುಗಳೆಲ್ಲಾ ಬಂದು [illegible] ರಾಗಬೇಕೆಂದೂ ಗ್ರಾಮಸ್ಥರ ಪರವಾಗಿ [illegible] ಎಂ. ಎಲ್. ನಂಜರಾಜ ಅರಸಿನ [illegible] ಪ್ರಾರ್ಥಿಸುತ್ತಾರೆ.

ವಿದ್ಯಾರ್ಥಿ ಕಾಂಗ್ರೆಸ್

ಅಖಿಲ ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿನ ಕಾರ್ಯಕಾರಿ ಸಮಿತಿಯ ಸಭೆ [illegible] ಪ್ರಿಲ್ ೧೯ ನೇ ತಾ॥ ಶುಕ್ರವಾರ ಮೈಸೂರು ನಗರದಲ್ಲಿ ವಿದ್ಯಾರ್ಥಿ ಕಾಂಗ್ರೆಸ್ [illegible] ರ್ಯಾಲಯದಲ್ಲಿ ಸೇರಲಿದೆ.

Morning Shows at
NEW OPERA TALKIE[S]
From 12—4—46

Tales of Manhatten

-:Starring:-
Charles Boyer
[R]ita Hayworth
Henry Fonda
Charles Laughton
Edward G. Robinson
Paul Robeson
Ethel Waters
Rochester
Plus 40 Featured Players

ಅಮೃತ

ನಿತ್ಯದ ಜ್ವರ ಮಲೇರಿಯಾ ಜ್ವರ, ಶ್ವಾಸದ ಗಡ್ಡೆ ಇವುಗಳನ್ನು ಬಹಳ ಚೆನ್ನಾಗಿ ಗುಣ ಮಾಡುತ್ತದೆ.

ಕೆ. ವಿ. ವೆಂಕಟರಾಮಯ್ಯ
ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯಶಾಲಾ
ಅರಕಲವಾಡಿ.

ಸಾಧ್ವಿ
ಈ ರಾಜಕೀಯ [illegible] ವಾರ್ಷಿಕ [illegible]
[illegible] ಪತ್ರಿಕೆ
ಮುಂಗಡವೇ ಚಂದಾದಾರರಾಗಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)
ಕಾರ್ಯಾಲಯ [illegible]
[illegible]

NIKHILA KARNATAKA CENTRAL AYURVEDIC PHARMACY LTD., MYSORE

ಕಂಪೆನಿಯ ೩ ನೆಯ ಪೈಸೆ ಷೇರುದಾರರ ಸಭೆಯು ಈ ಕೆಳಗೆ ಹೇಳುವ ೫ ಜನ ಡೈರೆಕ್ಟರುಗಳನ್ನು ಆರಿಸಿದ್ದಾರೆ. ಚುನಾವಣೆಯು ತಾ॥ ೧೫-೪-೪೬ ನೇ ಬೆಳಿಗ್ಗೆ ೯ ಘಂಟೆಗೆ [illegible] ನಡೆಯುತ್ತದೆ. [illegible] ಬೆಂಗಳೂರು [illegible] ಮೈಸೂರು [illegible] ಇವರುಗಳು.

ಸ್ವೀ. ಲಕ್ಷ್ಮೀನರಸಿಂಹ ಶಾಸ್ತ್ರಿ,
ಮ್ಯಾನೇಜಿಂಗ್ ಡೈರೆಕ್ಟರ್.

[illegible] ೧೯೪೬.

Edited, printed and published [illegible] Press at the [illegible] D Subedar Road, Mysore.

ಫೋ॥ ನಂ 392 WEEKLY EDITION ಬಿಡಿಸ ಪತ್ರಿಕೆ 6 ಕಾಸು

ಸಂಪುಟ ೧೦] ಸೋಮವಾರ ೧೫—೪—೪೬ [ಸಂಚಿಕೆ ೪೧

ತಾತ್ಕಾಲಿಕ ಸರ್ಕಾರಕ್ಕೆ ಜಿನ್ನಾರವರ ಸಮ್ಮತಿ?

[illegible]ಗ್ರೆಸ್ ವ॥ ಕ॥ ಚುನಾವಣೆ

[illegible]ರಾಜೇಅರಸಿನವರ ಆಯ್ಕೆ

ಮೈಸೂರು ೧೫

[illegible]ಸೂರು ಜಿಲ್ಲೆಯ ನಾನಾ ತಾಲ್ಲೂಕ [illegible] ಕಾರ್ಯಕಾರಿ ಸಮಿ[illegible]ವರು ನಿನ್ನೆ ದಿನ ರಾಜಧಾನಿಯ [illegible] ಕಛೇರಿಯಲ್ಲಿ ಸಭೆ ಸೇರಿ ಜ[illegible] ಕಾಂಗ್ರೆಸ್ ಕಾರ್ಯಕಾರಿ ಸಮಿತಿಯು [illegible]ರ್ಕಿಂಗ್ ಕಮಿಟಿಗೆ ಜಿಲ್ಲಾ ಪ್ರತಿನಿ[illegible]ನ್ನೂ ಆರಿಸಿದರು.

[illegible] ಸಮಿತಿಗೆ ಈ ಕೆಳಗೆ ಕಂಡವರು [illegible]ನುಮತದಿಂದ ಆರಿಸಲ್ಪಟ್ಟರು. ಶ್ರೀ [illegible] ಕೃಷ್ಣಮೂರ್ತಿ, ಶ್ರೀನಿವಾಸ [illegible], ಎಸ್. ನಾರಾಯಣರಾವ್, [illegible] ನಾಗರಾಜ್, ಎಂ. ಎಲ್. ನಂಜರಾ[illegible], ಹೆಚ್. ಕೆ. ಕುಮಾರಸ್ವಾಮಿ, [illegible]ಪ್ಪ, ಡಿ. ದೇವರಾಜೇ ಅರಸ್, [illegible]ಗೌಡ, ಅಂದಾನಪ್ಪ, ಹೆಜ್ಜಗೆ ಲಿಂ[illegible] ಜಿ. ತಿಮ್ಮಪ್ಪ, ಆಗರಂ ಸೂರ್ಯನಾ[illegible] ಪಂಡಿತ್ ಮತ್ತು ಎಸ್ ರಂಗರಾ[illegible]

[illegible] ವರ್ಕಿಂಗ್ ಕಮಿಟಿಗೆ ಚುನಾವ[illegible]ಯಿತು. ಶ್ರೀಗಳಾದ ಎಂ. ಎಲ್. [illegible], ಎಸ್. ರಂಗರಾಮಯ್ಯ[illegible], ಹೆಚ್. ಕೆ. ಕುಮಾರಸ್ವಾಮಿ [illegible] ತಮ್ಮ ಉಮೇದವಾರಿಕೆಯನ್ನು [illegible] ತೆಗೆದುಕೊಂಡರು) ಬ್ಯಾಲಟ್ [illegible] ಚುನಾವಣೆ ನಡೆದು ಶ್ರೀ ನಂಜ[illegible] ಅರಸಿನವರಿಗೆ ೧೧ ಓಟುಗಳೂ, ಶ್ರೀ [illegible]ಸ್ವಾಮಯ್ಯನವರಿಗೆ ೨೯ ಓಟುಗಳೂ [illegible] ಶ್ರೀ ಅರಸಿನವರು ಚುನಾಯಿತರಾ[illegible] ಚುನಾವಣಾಧಿಕಾರಿಗಳಾದ ಶ್ರೀ [illegible]ಸ್ವಾಮಯ್ಯನವರು ಎಲ್ಲ ಏರ್ಪಾಡುಗ[illegible] ಸಮರ್ಪಕವಾಗಿ ಮಾಡಿದ್ದರು

ವಿಶ್ವಕರ್ಮರ ಬೇಡಿಕೆ

[illegible]ಕ್ಯಂಡ ಸಮಾಜದವರು ರಾಜಧಾ[illegible] ತಿಮ್ಮಯ್ಯಾಚಾರ್ ಛತ್ರದ [illegible] ತಾ॥ ಸಾಯಂಕಾಲ ಶ್ರೀ ಟಿ. [illegible]ಚಾರ್ಯರ ಅಧ್ಯಕ್ಷತೆಯಲ್ಲಿ ಸ[illegible] ಮೈಸೂರು ೩ ಲಕ್ಷ ಪ್ರಜಾ ಸಂಖ್ಯೆ [illegible]ಹೊಂದಿದ ತಮ್ಮ ಕೋಮಿನವರಿಗೆ [illegible]ಗೆ ಯಾವ ಪ್ರಾತಿನಿಧ್ಯ ಸ್ಥಾನ [illegible] ಕೊಟ್ಟಿಲ್ಲದಿರುವುದರಿಂದ, ಈ ಸಲ [illegible] ತಮ್ಮ ಮತೀಯರೊಬ್ಬರನ್ನು ಆ[illegible] ನಾಮಕರಣ ಮೂಲಕ ನೇಮಿಸಿ [illegible] ತಮ್ಮ ನ್ಯಾಯವಾದ ಬೇಡಿಕೆಯ [illegible] ಕೊಡುವಂತೆ ಸರ್ಕಾರದವ[illegible] ಪ್ರಾರ್ಥಿಸಿಕೊಳ್ಳಲು ೫ ಜನರ ಒಂ[illegible] ಮುಂದರಿ ಕಳುಹಿಸಬೇಕೆಂ[illegible] ನಿಶ್ಚಯಿಸಿರುವರು.

ಬ್ರಾಹ್ಮಣ ಸಭಾ ಶಾಖೆ

ತಗಡೂರು ೧೨

[illegible] ನಿನ್ನೆ ನಂಜನಗೂಡು [illegible] ಮೈಸೂರು ಬ್ರಾಹ್ಮಣ ಮಹಾ [illegible]ಗಳು ಶ್ರೀ ಎಲ್. ವೆಂಕ[illegible]ನವರ ಅಧ್ಯಕ್ಷತೆಯಲ್ಲಿ ಸೇರಿ [illegible] ಸಭಾ ಸಮಿತಿಯನ್ನು ಸ್ಥಾಪಿ[illegible] ನಿರ್ಮಾಣಿಸಿ ಈ ಕೆಳಗೆ ಕಂ[illegible]ತಿಯನ್ನು ರಚಿಸಿದರು ಶ್ರೀ [illegible] ವೆಂಕಟರಾಮಯ್ಯ [illegible], ಜಿ ಅಶ್ವತ್ಥನಾರಾಯಣ [illegible], ಸೂರ್ಯನಾರಾಯಣ [illegible]ದರ್ಶಿಗಳು ಮತ್ತು ೧೭ [illegible]ಗಳು

ದಿವಂಗತ
ಕೆ. ವಿ. ಅನಂತರಾಮರ್ಯರವರು

ಸ್ವಂ ಸು.] ಬೆಂಗಳೂರು ೧೫

ಮೈಸೂರು ಸಂಸ್ಥಾನದ ನಿವೃತ್ತ ಮಂತ್ರಿಗಳಾದ ರಾಜಮಂತ್ರ ಪ್ರವೀಣ ಕೆ. ವಿ ಅನಂತರಾಮರ್ಯರವರು ನಿನ್ನೆ ಪ್ರಾತಃ ಬೆಂಗಳೂರಿನಲ್ಲಿ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ. ಕೆಲವು ದಿನಗಳಿಂದಲೂ ಇವರು ವ್ಯಾಧಿಗ್ರಸ್ತರಾಗಿದ್ದರು. ಇವರ ಅಂತ್ಯ ಸಂಸ್ಕಾರವು ನಿನ್ನೆ ನಡೆಯಿತು.

ಶ್ರೀ ಅನಂತರಾಮರ್ಯರವರು ಮೈಸೂರು ಸಿವಿಲ್ ಸರ್ವೀಸ್ ಪರೀಕ್ಷೆಯಲ್ಲಿ ಉತ್ತೀರ್ಣರಾಗಿ ಅಸಿಸ್ಟೆಂಟ್ ಕಮೀಷನರಾಗಿ ಕೆಲಸಕ್ಕೆ ಸೇರಿದರು. ತಮ್ಮ ಅಪೂರ್ವವಾದ ಮೇಧಾಶಕ್ತಿಯಿಂದಲೂ ದಕ್ಷತೆಯಿಂದಲೂ ಕ್ರಮಕ್ರಮವಾಗಿ ಇವರು ಮುಂದುವರಿದು ಕಡೆಗೆ ಸಚಿವ ಸ್ಥಾನವನ್ನು ಪಡೆದರು ಕೆಲವು ಕಾಲ ದಿವಾನರಾಗಿಯೂ ಕೆಲಸ ನೋಡಿದರು ಇವರ ಉದ್ಯೋಗದ ಕಾಲದಲ್ಲಿ ಬಹಳ ದಕ್ಷತೆಯಿಂದಲೂ, ನಿಷ್ಠೆಯಿಂದಲೂ ಕೆಲಸಗಳನ್ನು ಮಾಡಿ ಪ್ರಭುಗಳ ಮತ್ತು ಪ್ರಜೆಗಳ ಮೆಚ್ಚಿಗೆಗೆ ಪಾತ್ರರಾಗಿದ್ದರು. ಇವರ ಸೇವೆಯನ್ನು ಮೆಚ್ಚಿ ಹಿಂದಿನ ಪ್ರಭುಗಳವರು ಇವರಿಗೆ ರಾಜಮಂತ್ರ ಪ್ರವೀಣ ಎಂಬ ಬಿರುದು ದಯಪಾಲಿಸಿದ್ದರು. ಇಂದಿನ ಪ್ರಭುಗಳವರೂ ಇವರ ಸೇವಾ ತತ್ಪರತೆಯನ್ನು ಪ್ರಶಂಸಿಸಿದ್ದಾರೆ. - ನಿವೃತ್ತರಾದ ಮೇಲೆ ಶ್ರೀ ಅನಂತರಾಮರ್ಯರವರು ದಕ್ಷಿಣ ಭಾರತದ ರಾಟರಿ ಸಂಸ್ಥೆಯ ಗವರ್ನರಾಗಿ ಕೆಲಸ ಮಾಡುತ್ತಿದ್ದರು. ಅನಂತರ ನರೇಂದ್ರ ಮಂಡಲದ ಸ್ಥಾಯೀ ಸಮಿತಿಗೆ ಡೈರೆಕ್ಟರಾಗಿ ಕೆಲಸ ಮಾಡುತ್ತಿದ್ದರು ಭೂಪಾಲಿನಲ್ಲಿ ಮೇಲಾಲಸ್ಯವಾಗಿ ಇವರು ಅಲ್ಲಿ[illegible] ವಿಮಾನದಲ್ಲಿ ಬೆಂಗಳೂರಿಗೆ ಕರೆತರಲ್ಪಟ್ಟು ವಿಕ್ಟೋರಿಯಾ ಆಸ್ಪತ್ರೆಯಲ್ಲಿ ಚಿಕಿತ್ಸೆ ಹೊಂದುತ್ತಿದ್ದರು

ದಿವಂಗತರಿಗೆ [illegible] ವರ್ಷ ವಯಸ್ಸಾಗಿತ್ತು. ಇವರಿಗೆ ಪತ್ನಿಯವರೂ, ಇಬ್ಬರು ಹೆಣ್ಣು ಮಕ್ಕಳೂ ಇದ್ದಾರೆ. [illegible] ಸರ್ವೀಸ್‌ನಲ್ಲಿ [illegible] ಶ್ರೀ [illegible] ಇದ್ದಾರೆ

ದಿವಂಗತರ [illegible] ಬೇಡುತ್ತೇವೆ. ಇವರ ಬಂಧುಮಿತ್ರರಿಗೆ ಹೃತ್ಪೂರ್ವಕವಾದ ಸಂತಾಪವನ್ನು ಸೂಚಿಸುತ್ತೇವೆ.

ಜಿನ್ನಾರವರ ಸಮ್ಮತಿಯೇ?

ಭಾರತದಲ್ಲಿ ಒಂದು ಹಂಗಾಮಿ ಕೇಂದ್ರ ಸರ್ಕಾರವನ್ನು ಸ್ಥಾಪಿಸುವಂತೆ ಬ್ರಿಟಿಷ್ ನಿಯೋಗದವರು ನಿರ್ಧರಿಸಿರುವುದಾಗಿ ಕಾಂಗ್ರೆಸ್ ಮುಖಂಡರುಗಳಿಗೆ ತಿಳಿದು ಬಂದಿರುವುದೆಂದು ವರದಿಯಾಗಿದೆ. ಮೊದಲು ಕಾಂಗ್ರೆಸ್ಸು ಒಪ್ಪಿದ್ದುದಕ್ಕಿಂತಲೂ ಹೆಚ್ಚು ಸ್ಥಾನಗಳನ್ನು ಮುಸ್ಲಿಂ ಲೀಗಿನವರಿಗೆ ಕೊಡುವುದಾದರೆ ಮಿ॥ ಜಿನ್ನಾರವರು ಈ ಹಂಗಾಮಿ ಸರ್ಕಾರದ ರಚನೆಗೆ ಅಡಚಣೆಯನ್ನು ಒಡ್ಡುವುದಿಲ್ಲವೆಂದೂ ಸಹ ತಿಳಿದು ಬಂದಿದೆ ರಾಜ್ಯಾಂಗ ರಚನೆಗೆ ಒಂದೇ ಒಂದು ಸಮಿತಿಯನ್ನು ರಚಿಸುವುದಕ್ಕೂ, ಪಾಕಿಸ್ಥಾನದ ಪ್ರಶ್ನೆಯನ್ನು ಈಗಲೇ ಇತ್ಯರ್ಥಪಡಿಸದೆ ಇರುವುದಕ್ಕೂ ಮಿ॥ ಜಿನ್ನಾರವರು ಒಪ್ಪಿದರೆ ಕಾಂಗ್ರೆಸ್ಸಿನವರು ಲೀಗಿಗೆ ಹೆಚ್ಚು ಸ್ಥಾನಗಳನ್ನು ಕೊಡಲು ಸಮ್ಮತಿಸಬಹುದೆಂದೂ ಸಹ ಹೇಳಲಾಗಿದೆ.

ಕಾಂಗ್ರೆಸ್-ಕಮ್ಯೂನಿಸ್ಟ್ ಸಂಬಂಧ

ಬ್ರಿಟಿಷ್ ಕಮ್ಯೂನಿಸ್ಟ್ ಪಕ್ಷದ ನಾಯಕರಾದ ಶ್ರೀ ಪಾಮೆದತ್ತರು ಭಾರತಕ್ಕೆ ಆಗಮಿಸಿದ್ದಾರೆ ಇವರು ಮುಸ್ಲಿಂ ಲೀಗಿನ ಪಾಕಿಸ್ಥಾನದ ಯೋಜನೆಯ ನೀತಿಯನ್ನು ಖಂಡಿಸಿ ಲೀಗಿನ ಸಂಯುಕ್ತ ಪ್ರಜಾಪ್ರಭುತ್ವ ಸಿದ್ಧಾಂತಕ್ಕೂ, ರಾಜಕೀಯ ಪ್ರಗತಿಗೂ ವಿರೋಧವಾಗಿದೆಯೆಂದಿದ್ದಾರೆ ಕಾಂಗ್ರೆಸ್ಸಿಗೂ ಕಮ್ಯೂನಿಸ್ಟ್ ಪಕ್ಷಕ್ಕೂ ಇರುವ ತಾತ್ಕಾಲಿಕ ಭಿನ್ನಾಭಿಪ್ರಾಯ ಉಭಯ ಪಕ್ಷಗಳ ಹಿತ ದೃಷ್ಟಿಯಿಂದ, ನ್ಯಾಯವಾಗಿ ಎರಡು ಪಕ್ಷಗಳೂ ಒಂದಾಗಬೇಕೆಂದಿದ್ದಾರೆ.

ಬೋಸ್ ಮತ್ತು ಜೈ ಪ್ರಕಾಶ್ ವರ್ಕಿಂಗ್ ಕಮಿಟಿಗೆ

ಪಂಡಿತ ಪಂತ್ ಮತ್ತು ಮೌಲಾನಾ [illegible] ರವರು, ಮಂತ್ರಿಗಳಾಗಿರುವುದರಿಂದ ಇವರು ವರ್ಕಿಂಗ್ ಕಮಿಟಿಯ ತಮ್ಮ ಸ್ಥಾನಗಳಿಗೆ ರಾಜೀನಾಮೆ ಸಲ್ಲಿಸಿದ್ದಾರೆ ಇವರ ಸ್ಥಾನಗಳಲ್ಲಿ ಶ್ರೀ ಶರಚ್ಚಂದ್ರ ಬೋಸ್ ಮತ್ತು ಜೈ ಪ್ರಕಾಶ್ ನಾರಾಯಣ್ ರವರನ್ನು [illegible] ನೇಮಿಸಲಾಗುವುದೆಂದು ತಿಳಿದು ಬಂದಿದೆ

' ೬೬ ಕೋಟಿ ರೂ [illegible] [illegible] ಇದು [illegible]

ಸೂತ್ರಯಜ್ಞ

ಮೈಸೂರು ೧೫

ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಸೂತ್ರಯಜ್ಞ ಸಮಾರಂಭವು ನಿನ್ನೆ ಸಂಜೆ ಬಸುಮಯ್ಯನವರ ಶಾಲಾವರಣದಲ್ಲಿ ಶ್ರೀಮತಿ ಯಶೋಧರಾ ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ೬೦ ಮಂದಿ ಸ್ತ್ರೀಯರೂ, ೮೯ ಮಂದಿ ಗಂಡಸರೂ ಭಾಗವಹಿಸಿದ್ದರು. ಗಾಂಧಿ ಜಯಂತಿ ವಾರದಲ್ಲಿ ನೂಲು ತೆಗೆಯುವುದರಲ್ಲಿ ಭಾಗವಹಿಸಿದ್ದವರಿಗೆಲ್ಲಾ ಅಧ್ಯಕ್ಷರು ಬಟ್ಟೆಗಳನ್ನು ಹಂಚಿದರು.

ಅಧ್ಯಕ್ಷರು ಮಾತನಾಡುತ್ತಾ, ಗಾಂಧಿ ಸೇವಾ ಸಂಘಗಳ ಮೂಲ ತತ್ವಗಳನ್ನೂ ಅದರ ಧ್ಯೇಯಗಳನ್ನೂ ತಿಳಿಸಿದರು.

[illegible]

ಶ್ರೀ ...ಯವರಿಂದ ನೂತನ ಪತ್ರ ಸಂಪಾದಕರಣೆ

[illegible]

ಅಕ್ಕಿಗಾಗಿ ಸಂಯುಕ್ತ...ದನೆ ಬ್ರಿಟನ್ ಒಪ್ಪಂದ

[illegible]

ಸಾಧ್ವಿ

ತಾ|| ೪-೫-೪೬ ಶನಿವಾರ

ಮೈಸೂರು ಬಂದಿಗಳಿಗೆ ಬಿಡುಗಡೆ ಎಂದು ?

ಭರತ ಖಂಡದ ಎಲ್ಲಾ ಪ್ರಾಂತ್ಯಗಳಲ್ಲಿ ಯೂ ರಾಜಕೀಯ ಬಂದಿಗಳ ಬಿಡುಗಡೆ ಆಗುತ್ತಿದೆ. ಕಾಂಗ್ರೆಸ್ ಮಂತ್ರಿಮಂಡಲಗಳು ಸ್ಥಾಪಿತವಾದೊಡನೆಯೇ ಅವರು ಕೈಗೊಳ್ಳುವ ಮೊದಲನೆ ಕಾರ್ಯಕ್ರಮವೇ ಇದು. ವಿಚಾರಣೆ ಇಲ್ಲದೆ ಬಂಧನದಲ್ಲಿರುವವರನ್ನು ಮಾತ್ರವೇ ಅಲ್ಲದೆ ಅಪರಾಧಗಳಿಗೆ ಶಿಕ್ಷೆಗೆ ಗುರಿಯಾಗಿರುವವರ ಬಿಡುಗಡೆಯೂ ಆಗುತ್ತಿದೆ.

ಮಧ್ಯ ಪ್ರಾಂತ್ಯದಲ್ಲಿಯೂ ಬಿಡುಗಡೆ ಆಯಿತು. "ಪ್ರಾಂತ್ಯದಲ್ಲಿ ಒಬ್ಬ ರಾಜಕೀಯ ಖೈದಿಯೂ ಇಲ್ಲವೆಂದು ಸರ್ಕಾರದವರು ಪ್ರಕಟಿಸಿದ್ದಾರೆ. ಕಾಂಗ್ರೆಸ್ ಮಂತ್ರಿಮಂಡಲಗಳಿರುವ ಇತರ ಎಲ್ಲಾ ಪ್ರಾಂತ್ಯಗಳಲ್ಲಿಯೂ ಉಳಿದಿರುವ ಖೈದಿಗಳನ್ನು ಬಿಡುಗಡೆ ಮಾಡಲು ಏರ್ಪಾಡುಗಳಾಗುತ್ತಿವೆ. ಮಿಶ್ರ ಮಂತ್ರಿ ಮಂಡಲವಿರುವ ಬಂಗಾಳದಲ್ಲಿ ಮಂತ್ರಿಗಳಾದ ಶ್ರೀ ಭೀಮಸೇನ ಸಾಚಾರ್‌ರವರು ತಾವೇ ಖುದ್ದಾಗಿ ಬಂದೀಖಾನೆಗೆ ಹೋಗಿ ಖೈದಿಗಳಿಗೆ ಬಿಡುಗಡೆಯ ಆಜ್ಞೆ ಮಾಡಿ ಅವರುಗಳನ್ನು ಬಿಡುಗಡೆ ಮಾಡಿಸಿದರು. ಇತ್ತೀಚೆಗೆ ರಚಿತವಾದ ಬಂಗಾಳದ ಲೀಗ್ ಮಂತ್ರಿ ಮಂಡಲದವರೂ ಸಹ ಅಲ್ಲಿನ ಖೈದಿಗಳನ್ನು ಬಿಡುಗಡೆ ಮಾಡುತ್ತಿದ್ದಾರೆ. ಸಿಂಧ್ ಪ್ರಾಂತ್ಯದಲ್ಲಿ ರಾಜಕೀಯ ಖೈದಿಗಳು ಇರುವುದೇ ಅತಿ ವಿರಳ.

೧೯೪೨ನೇ ಆಗಸ್ಟ್ ಚಳುವಳಿಯಲ್ಲಿ ಆಷ್ಟಿ, ಚಿಮೂರ್‌ಗಳಲ್ಲಿ ಕೊಲೆಯ ಆಪಾದನೆಗೆ ಗುರಿಯಾಗಿದ್ದ ಖೈದಿಗಳೆಲ್ಲರನ್ನೂ ಈಗ ಸರ್ಕಾರದವರು ಬಿಡುಗಡೆ ಮಾಡಿದ್ದಾರೆ. ಇದಲ್ಲದೆ ಶೂಲಪುರ, ಪಟ್ಟಣ, ಕೆನರಾ, ರ್ ಮತ್ತು ಇತರ ಕಡೆಗಳಲ್ಲಿ ನಡೆದ ಕೊಲೆ ಮುಂತಾದ ಮೊಕದ್ದಮೆಗಳ ಖೈದಿಗಳಿಗೆ ಈ ಹಿಂದೆಯೇ ಬಿಡುಗಡೆ ಆಯಿತು. ರಾಜಕೀಯ ಕೆಲಸಗಾರರ ಮೇಲೆ ಇದ್ದ ಪ್ರತಿಬಂಧಕಗಳೆಲ್ಲಾ ಒಂದೊಂದಾಗಿ ರದ್ದಾಗುತ್ತಿವೆ.

ಇಷ್ಟೆಲ್ಲಾ ಆದರೂ ಸಿ. ಐ. ಡಿ. ಗಳು ಖೈದಿಗಳ ವಿಚಾರಣೆಯನ್ನು ಇನ್ನೂ ಮಾಡಿ ಮುಗಿಸುವುದಿಲ್ಲವೆಂದು ಇಂಡಿಯಾ ಸರ್ಕಾರದವರು ಪ್ರಕಟಿಸಿದ್ದಾರೆ. ಈಗ ಉಳಿದಿರುವ ಮೊಕದ್ದಮೆಗಳನ್ನು ಸಹ ನಿಲ್ಲಿಸಲಾಗುವುದು. ಈ ಸ್ವಸ್ಥಕ್ಕೆ ಸೇರಿದ ಮುಕ್ಕಾಲು ಪಾಲು ಖೈದಿ ಪಾಲು ಜನರನ್ನು ಆಗಲೇ ಬಿಡುಗಡೆ ಮಾಡಲಾಗಿದೆ. ಇನ್ನು ಉಳಿದಿರುವವರೂ ಸಹ ಬೇಗನೆ ಬಿಡುಗಡೆ ಹೊಂದಬಹುದೆಂದು ನಿರೀಕ್ಷಿಸಬಹುದು.

ಭರತಖಂಡದ ವಾತಾವರಣವು ಈ ವಿಷಯದಲ್ಲಿ ತಿಳಿಯಾಗುತ್ತಿದೆ. ಆದರೆ ಮೈಸೂರಿನಲ್ಲಿ ಮಾತ್ರ ಇದಕ್ಕೆ ಇನ್ನೂ ಗಮನ ಕೊಟ್ಟಿಲ್ಲದಿರುವುದು ವಿಷಾದಕರ. ಇಲ್ಲಿನ ಕಾರಾಗೃಹದಲ್ಲಿ ಈಸೂರು, ಕ್ರಮದ ಬೇಗೂರು ಮತ್ತು ಅರಸೀಕೆರೆಯ ಖೈದಿಗಳು ಇನ್ನೂ ಕೊಳೆಯುತ್ತಿದ್ದಾರೆ. ಅವರ ಪೈಕಿ ನೌಕರಸ್ಥರಾದ ಮಹಿಳೆಯರೂ, ತರುಣ ವಿದ್ಯಾರ್ಥಿಗಳೂ ಇರುವರು. ಇವರುಗಳ ಬಿಡುಗಡೆಗಾಗಿ ಮಹಾಜನರು ಅನೇಕ ಬಾರಿ ಒತ್ತಾಯ ಪಡಿಸಿರುತ್ತಾರೆ. ಈಗಾಗಲೇ ಅವರು ಸುಮಾರು ನಾಲ್ಕು ವರ್ಷ ಕಾಲ ಬಂಧನವನ್ನು ಅನುಭವಿಸಿದ್ದಾರೆ. ಅವರು ಮಾಡಿದ ಬಹುದಾದ ಅಪರಾಧವು ನೆರೆಯ ಪ್ರಾಂತ್ಯದವರ ಅಪರಾಧಕ್ಕಿಂತಲೂ ಹೆಚ್ಚಿನದಲ್ಲ. ಬ್ರಿಟಿಷ್ ಇಂಡಿಯಾದ ಸರ್ಕಾರದವರೇ ಇಂತಹ ಬಂದಿಗಳನ್ನು ಬಿಡುಗಡೆ ಮಾಡಿರುವಾಗ ನಮ್ಮ ಸರ್ಕಾರದವರು ಅವರನ್ನು ಇನ್ನು ಮುಂದೆಯೂ ಇಟ್ಟುಕೊಂಡಿರಲು ಕಾರಣವಿಲ್ಲ. ರಾಜಕೀಯ ವಿಷಯದಲ್ಲಿ ಉಂಟಾದ ವಿದ್ಯಮಾನಗಳಿಗೆ ತುತ್ತಾಗಿರುವ ಈ ಬಡಪಾಯಿಗಳನ್ನು ನಮ್ಮ ಸರ್ಕಾರದವರು ಕೂಡಲೇ ಬಿಡುಗಡೆ ಮಾಡಿ ಇಲ್ಲಿಯೂ ಸಮಾಧಾನಕರವಾದ ವಾತಾವರಣವನ್ನು ಕಲ್ಪಿಸಲೆಂದು ನಾವು ಪ್ರಾರ್ಥಿಸುತ್ತೇವೆ.

ಅಮೃತ

ವಿಷಮ ಜ್ವರ ಮಲೇರಿಯಾ ಜ್ವರ, ಜ್ವರದ ಗೆಡ್ಡೆ ಇವುಗಳ ಮೇಲೆ ಬಹಳ ಚನ್ನಾಗಿ ಕೆಲಸ ಮಾಡುತ್ತದೆ.

ಕೆ. ವಿ. ವೆಂಕಟರಾಮಯ್ಯ,
ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯಶಾಲಾ,
ಅರಕಲವಾಡಿ.

Edited, printed and published by A. K. Nagarajan at the Sadhvi Press D. Subbiah Road, Mysore

ಪತ್ರ ವ್ಯವಹಾರ

ಸೀಮೆ ಎಣ್ಣೆ ಬೆಲೆ ವ್ಯತ್ಯಾಸ

ಮೈಸೂರು ನಗರದ ೫ ಮೈಲಿ ಸುತ್ತಳತೆಯಲ್ಲಿ ಬಿಳಿ ಸೀಮೆ ಎಣ್ಣೆ ಸೀಸೆಗೆ ೬ ಆಣೆಯಂತೆಯೂ, ಕೆಂಪು ಎಣ್ಣೆ ೫ ಆಣೆಯಂತೆಯೂ ಮಾರಬೇಕೆಂದು ೧೮-೪-೪೬ ನೇ ಮೈಸೂರು ಗೆಜೆಟ್ ೨೬೭ ನೇ ಪೇಜಿನಲ್ಲಿ ಪ್ರಕಟಿಸಲಾಗಿದೆ. ಆದರೆ ರಾಜಧಾನಿಯ ವಾಣಿ ವಿಲಾಸ ಮಾರ್ಕೆಟ್ ಸೀಮೆ ಎಣ್ಣೆ ಡಿಪೋಗಳಲ್ಲಿ ಏಪ್ರಿಲ್ ಕಾರ್ಡಿಗೆ ಬಿಳಿ ಎಣ್ಣೆ ೬|| ಆಣೆಯಂತೆಯೂ, ಕೆಂಪೆಣ್ಣೆ ೬ ಆಣೆ ಯಂತೆಯೂ ವಿಕ್ರಯ ಮಾಡಲ್ಪಡುತ್ತಿದೆ ಹೀಗೆ ಹೆಚ್ಚು ಹಣ ತೆಗೆದು ಕೊಂಡಿರುವ ಮೊಬಲಗನ್ನು ವಾಪಸ್ ಕೊಡಿಸುವ ವಿಚಾರದಲ್ಲೂ, ಮುಂದೆ ಸರಿಯಾದ ಬೆಲೆಗೆ ಎಣ್ಣೆ ವಿಕ್ರಯ ಆಗುವಂತೆಯೂ ಏರ್ಪಾಡು ಮಾಡಲು ಸರ್ಕಾರದವರು ಕೂಡಲೇ ವಿಚಾರ ಮಾಡಬೇಕಾಗಿ ಪ್ರಾರ್ಥನೆ

ನಾಯುಡ್ ರಘುನಾಥರಾವ್

ನಿಜವೇ ?

ಸ್ವಂ. ವ.] ಚಾಮರಾಜನಗರ ತಾ

ಈ ತಾಲ್ಲೋಕಿನ ಮಾರ್ಡನಾಕೋಡು ಎಂಬ ಗ್ರಾಮದಲ್ಲಿ ೬ ಜನ ರೈತರಿಂದ ಜೋಳ ತೆಗೆದುಕೊಂಡು ನಾಲ್ಕು ತಿಂಗಳಾದರೂ ಇನ್ನೂ ಮೊಬಲಗು ಪಾವತಿ ಮಾಡಿಲ್ಲವೆಂದೂ, ಮೊಬಲಗು ಸರ್ಕಾರದಿಂದ ತೆಗೆದುಕೊಂಡರೂ ಸ್ಪೆಷಲ್ ರೆವಿನ್ಯೂ ಇನ್ಸ್‌ಪೆಕ್ಟರ್ ಮತ್ತು ಗ್ರಾಮದ ಪಿ. ಸಿ. ಫೇರ್‌ವರ್ ಇವರ ವಶದಲ್ಲಿಯೇ ಇದೆಯೆಂದೂ, ಸರ್ಕಾರದಿಂದ ನಿರ್ಧರವಾದುದಕ್ಕಿಂತ ಕಡಿಮೆ ಮೊಬಲಗು ತೆಗೆದು ಕೊಳ್ಳುವಂತೆ ರೈತರಿಗೆ ಹೇಳಿದರೆಂದೂ ತಿಳಿದು ಬಂದಿದೆ.

ಟಿ. ಸಿ. ನಟರಾಜ್

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಜಕ್ಷನ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಛಾರ್ಜಿನಿಂದ ಮಾಡಲ್ಪಡುತ್ತದೆ.

ಮುಂತಾದವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ವಿಶ್ವಕರ್ಮ ಸಮ್ಮೇಳನ

ಸಂಜನಗೂಡು

ಮೊನ್ನೆ ನಡೆದ ಈ ಸಮ್ಮೇಳನ ಮೈಸೂರು ರಾಜ್ಯಾಂಗದಲ್ಲಿ ವಯಸ್ಕ ಮತದಾನ ಪದ್ಧತಿ, ವಿಶ್ವಕರ್ಮ ಮತ ಶಿಲ್ಪ ಮತ್ತು ಕೈಗಾರಿಕೆಗಳಿಗೆ ಪ್ರೋ ಈಗ ನಡೆಯುತ್ತಿರುವ ಅಸೆಂಬ್ಲಿ ಚುನಾವಣೆಯಲ್ಲಿ ವಿಶ್ವಕರ್ಮ ಕೆಯರಿಗೆ ಸ್ಥಾನ ಮುಂತಾದ ವಿಷಯ ಲ್ಲಿ ಸರ್ಕಾರದವರನ್ನು ಕೇಳಿ ಕೊ ಒಗ್ಗೆ ನಿರ್ಣಯಗಳಾದುವು. ಸಭಾ ರಾದ ಬ್ರ||ಶ್ರೀ|| ಎಂ. ಗಂಗಾಧರಸ್ವಾ ವರು ತಮ್ಮ ಅಧ್ಯಕ್ಷ ಭಾಷಣದಲ್ಲಿ ಕನ್ನಡ ಎರಡನೇ ಪುಸ್ತಕದಲ್ಲಿರುವ ಶಿ ನಂತವೆಲ್ಲಾ ನಾಶವಾಗಿರಬೇಕು', ಎ ನ್ನು ತೀವ್ರವಾಗಿ ಖಂಡಿಸಿದರು. ವಿದ್ಯಾನಿಲಯದವರು ತಮ್ಮ ಪ್ರಚಾರ ಶ್ಯಾಸನಗಳಲ್ಲಿ ಶಿಲ್ಪ ವಿಷಯವನ್ನೂ ಸೇ ಬೇಕೆಂತಲೂ ಕನ್ನಡ ಪುಸ್ತಕ ಪ್ರ ಯಲ್ಲಿ ಶಿಲ್ಪ ಗ್ರಂಥಗಳನ್ನೂ ಪ್ರಕಟಿ ಬೇಕೆಂತಲೂ ಹೇಳಿದರು.

§ ಭಾರತಕ್ಕೆ ೧ ಲಕ್ಷ ೮೬ ಸಾವಿ ಅಕ್ಕಿಯನ್ನು ಒದಗಿಸುವುದಾಗಿ ಸಂ ಆಹಾರ ಬೋರ್ಡ್ ಪ್ರಕಟಿಸಿದೆ.

§ ಶ್ರೀ ಭೂಲಾಭಾಯಿ ದೇಸಾ ಪರಸ್ಥಿತಿ ಒಂದೇ ಸಮನಾಗಿದೆ.

§ ಡಾ|| ಓರೋಲನ್ನು ಆಸ್ಟ್ರಿಯಾ ಬಿಟ್ಟು ಕೊಡಲು ನಿರಾಕರಿಸಿದ್ದಾಗಿ ಆಸ್ಟ್ರಿಯಾದಲ್ಲ ಸಾರ್ವತ್ರಿಕ ಮುಷ್ಕ ಡಯುತ್ತಿದೆ.

ಅಪೇರಾ ಟಾಕೀಸ್

4—5—46 ರಿಂದ

ಸಾಲ್ಲನೇ ವಾರ್ತೆ

★ ವಾಲ್ಮೀಕಿ

(ತಮಿಳು ಭಾಷೆ)

* ಹೊನ್ನಪ್ಪ ಭಾಗವತರ್
* ಟಿ. ಆರ್. ರಾಜಕುಮಾರಿ
* ವಸಂತ ಕೋಕಿಲಂ
* ಬಾಲಯ್ಯ
* ಕಾಳಿ ಎನ್. ರತ್ನ

ಮೈಸೂರು ಅರಮನೆಯಿಂದ ಶ್ರೀ ಜಯಚಾಮರಾಜೇಂದ್ರ ಗ್ರಂಥರತ್ನಮಾಲಾ ಎಂಬ ನಾಮಾಂಕಿತದಿಂದ ಕನ್ನಡದ ಪ್ರಕಟಿಸಿರುವ

ಮಹಾ ಪುರಾಣ ಗ್ರಂಥಗಳು

ಮತ್ತು ಇನ್ನೂ ಅನೇಕ ವೇದಾಂತ ಗ್ರಂಥಗಳೂ ಮಹಾ ಪಂಡಿತರುಗಳಿಂದ ರಿಷ್ಕರಿಸಲ್ಪಟ್ಟು ಕನ್ನಡ ಅರ್ಥ ಸಹಿತ ಮುದ್ರಿತವಾಗಿ ಬಿಕರಿಗೆ ಸಿದ್ಧವಾಗಿವೆ

ಗ್ರಂಥಗಳು ದೊರೆಯುವ ಸ್ಥಳ —

ಶ್ರೀ ಚಾಮುಂಡೇಶ್ವರಿ ಎಲೆಕ್ಟ್ರಿಕ್ ಪ್ರೆಸ್, ಕ್ಲಾಕ್ ಟವರ್ ಸ್ಕ್ವೇರ್, ಮೈಸೂರು.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ಜಾಹೀರಾತಿನ ದರಗಳಿಗೆ ಬರೆಯಿರಿ

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವು, ಬಂಜೆತನ ಇತ್ಯಾದಿಗಳಿಗೆ ಗ್ಯಾರಂಟೀ ಔಷಧ

ಕ್ರಯ:—ಎಂಟು ಪೊಟ್ಟಣ "ಸಂತಾನ ಸಿಂಧೂರ" ಮತ್ತು ನಾಲ್ಕು ಗುಳಿಗೆ "ಮದನ ವಿಲಾಸ" ಇವೆರಡು ಒಂದು ಸೆಟ್ ಮೂರು ರೂಪಾಯಿ ಪ್ಯಾಕಿಂಗ್ ಮತ್ತು ಟಪ್ಪಾಲ್ ಖರ್ಚು ಹನ್ನೆರಡಾಣೆ. ರೂ. ೩—೧೨—೦ ಮನಿಯಾರ್ಡರ್ ಮಾಡಿದ ಕೂಡಲೇ ರಿಜಿಸ್ಟರ್ ಪಾರ್ಸಲ್ ರವಾನೆ. ವಿ.ಪಿ. ಇಲ್ಲ. ಕಮೀಷನ್ ಏಜೆಂಟರು ಬೇಕಿಲ್ಲ. ಪತ್ರ ವ್ಯವಹಾರ ಗುಪ್ತ. ಅನುಪಾನ ಪತ್ರ ಔಷಧಿ ಸಂಗಡ ಹೊಸ ಸ್ಯಾಂಪಲ್ ಉಚಿತ.

ಎ. ರಾಮಸ್ವಾಮಿ ಅಯ್ಯಂಗಾರ್,
ಅಂಚೆ, ಯಳಂದೂರು ಪೋಸ್ಟ್,
(ಮೈಸೂರು ಡಿಸ್ಟ್ರಿಕ್ಟ್)

ವೈಸರಾಯರಿಗೆ ಅಜಾದರ ಪತ್ರ

ಭಾರತದ ಕೈಲ್ವೆ ಕೆಲಸಗಾರರ ... [illegible] ... ವೈಸರಾಯರಿಗೆ ಪತ್ರ ಬರೆದು ... [illegible] ... ಪ್ರಾರ್ಥಿಸಿದ್ದಾರೆಂದೂ, ವೈಸರಾಯ ... ವಿಷಯವನ್ನು ಪರ್ಯಾಲೋಚಿಸು ... ಪ್ರಾಪಿಸಿರುವ ಸುದ್ದಿ ಬಂದಿದೆ.

ಪಶುವು ಪುರಾಣ ಶ್ರವಣಕ್ಕೆ ಹೋಗುತ್ತಿದೆ

[illegible] ... ಪಟ್ಟಣದಲ್ಲಿ ಒಂದು ... [illegible] ... ಹೋಗುತ್ತಿದೆ ಎಂದು ... [illegible] ... ಆದು ಹೊರಟುಹೋಗುತ್ತದೆ. ... [illegible] ... ಬಂದು ... ನಿಂತುಬಿಟ್ಟಿತು. ... [illegible] ... ಹೋದ ವೇಳೆ ಆದು ... ತಿಳಿಕು.

ಗಾಂಧಿಜಿ ಪರಿವಾರ ದಲ್ಲಿಗೆ ವಾಪಸು

[illegible] ... ಗಾಂಧಿ ... [illegible] ... ಗಾಂಧಿಜಿಯವರು ... [illegible]

ಹೋಟೆಲು ಕೆಲಸಗಾರರ ವಜಾ

[illegible] ... ಸಮ್ಮೇಳನದಲ್ಲಿ ... ಕೆಲಸಗಾರರನ್ನು ... ವಜಾ ಮಾಡಿ ... ತಿಳಿದುಬಂದಿದೆ.

ಎಂ. ಆರ್. ಸಿ ಬಸಪ್ಪನವರ ಪತ್ರ ವ್ಯವಹಾರ

[illegible] ... ಶ್ರೀ ಎಂ ಆರ್ ಸಿ ಬಸಪ್ಪನವರ ... [illegible] ... ಪತ್ರಿಕೆಗಳಿಗೆ ... [illegible]

ನೋಂ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಧಾರವಾಡ [illegible] [ಸಂಚಿಕೆ ೨೦೪

ಪ್ಯಾಲೆಸ್ಟೈನಿನಲ್ಲಿ ಅರಬ್ಬರ ಧರ್ಮ ಯುದ್ಧ?

ಸ್ಯಾನ್ ಫ್ರಾನ್ಸಿಸ್ಕೊ ಸಭಾಮನೆಯಲ್ಲಿ ದೊಂಬಿ

[illegible] ... ಸ್ಯಾನ್ ಫ್ರಾನ್ಸಿಸ್ಕೋ ... [illegible]

ಮಿ|| ಅಟ್ಲೀಯವರಿಗೆ ಗಾಂಧಿ ಫೋಟೊ ಬೇಕಂತೆ

[illegible] ... ಗಾಂಧಿ ... [illegible]

ತಾತ್ಕಾಲಿಕ ಸರ್ಕಾರ ರಾಷ್ಟ್ರೀಯ ಸರ್ಕಾರವಲ್ಲ

ಕೇಂದ್ರ ಸರ್ಕಾರ ... [illegible]

ಹಿಂದೀ ಪ್ರಚಾರ ಸಭೆ

[illegible] ... ಹಿಂದೀ ಪ್ರಚಾರ ಸಭೆ ... [illegible]

ಸಿಮ್ಲಾ ಸಮ್ಮೇಳನದ ಆರಂಭ

ಸಿಮ್ಲಾದಲ್ಲಿ ... [illegible]

ಲಂಡನ್ನಿಗೆ ನಿಯೋಗದವರು

[illegible] ... ಲಂಡನ್ನಿಗೆ ... [illegible] ... ಸುದ್ದಿ ಬಂದಿದೆ

ಜಪಾನ್ ಶರಣಾಗುವುದರ ಪ್ರಣಯ

[illegible]

ಭಾರತದ ಮೇಲೆ ದಕ್ಷಿಣ ಆಫ್ರಿಕದ ಪ್ರತೀಕಾರ

[illegible]

ಅರಬ್ಬರು ಧರ್ಮ ಯುದ್ಧ ಹೂಡುವರೇ?

ಒಂದು ಲಕ್ಷ ಯಹೂದ್ಯರನ್ನು ಪ್ಯಾಲೆಸ್ಟೈನಿಗೆ ಸೇರಿಸಬೇಕೆಂದು ಆಂಗ್ಲೋ ... [illegible] ... ಯಹೂದ್ಯರನ್ನು ... [illegible]

ಸಿಮ್ಲಾ ಸಮ್ಮೇಳನ ವಿಫಲವಾಗುವುದೇ

[illegible]

ಭಾರತಕ್ಕೆ ಅಮೇರಿಕದ ಸೂಚನೆಯ ರಾಜತಂತ್ರ

[illegible]

ಬಿಹಾರದಲ್ಲಿ ಆಜಾದ್ ಹಿಂದ್ ದಳದವರ ...

[illegible]

ಸಾಧ್ವಿ

ತಾರೀ ೫-೬-೪೬ ಬುಧವಾರ

ಆಹಾರಾಭಾವ

ಎಲ್ಲ ಕಡೆಗಳಿಂದ ಬರುವ ವರದಿಗಳೂ ಆಹಾರಾಭಾವದ ಘೋರ ಚಿತ್ರವನ್ನೇ ಒ ದಗಿಸುತ್ತಿವೆ. ಹಿಂದೂಸ್ಥಾನದಲ್ಲಿ ಮಾತ್ರವಲ್ಲದೆ ಯೂರೋಪ್ ಮತ್ತು ಏಷ್ಯಾ ಖಂಡದ ಇತರ ಭಾಗಗಳಲ್ಲೂ ಆಹಾರದ ಕೊರತೆಯು ಉತ್ಕಟವಾಗಿರುತ್ತದೆ. ನಮ್ಮ ಸಂಸ್ಥಾನದ ದಿವಾನರಿಂದ ಮೊದಲುಗೊಂಡು ಸಂಯುಕ್ತ ಆಹಾರ ಸಮಿತಿಯ ಸೂತ್ರಧಾರಿಗಳವರೆಗೆ ಎಲ್ಲರೂ ಈ ವಿಷಯದಲ್ಲಿ ವಿಸ್ಮಯಗೊಂಡಿದ್ದಾರೆ. ಅಭಾವ ಪ್ರದೇಶಗಳಿಗೆ ಅಗತ್ಯವಾದ ಪರಿಹಾರವು ದೊರೆಯಲಿಲ್ಲವೆಂಬ ಅಸಮಾಧಾನವು ಎಲ್ಲರಲ್ಲಿಯೂ ಮೂಡಿದೆ.

ಈ ತಿಂಗಳ ಆಹಾರ ಸರಬರಾಜು ಪ್ರಮಾಣವನ್ನು ನಿಗದಿ ಮಾಡಲು ವಾಷಿಂಗ್ಟನ್‌ನಲ್ಲಿ ಸೇರಿದ್ದ ಸಂಯುಕ್ತ ಆಹಾರ ಸಮಿತಿ ಸಭೆಯು ಒಡೆಯಗೊಂಡಲದ ನಿರ್ಧಾರವನ್ನೇ ... ಮುಖ್ಯವಾದ ಪ್ರತಿನಿಧಿಗಳೇ ಅದರಲ್ಲಿ ಹಾಜರಿರಲಿಲ್ಲವೆಂದು ಹೇಳಲಾಗಿದೆ. ಸಮಿತಿಯ ಕಾರ್ಯಕಲಾಪಗಳಲ್ಲಿ ಅಸಮಾಧಾನಗೊಂಡು ಪ್ರಮುಖ ಸದಸ್ಯರೊಬ್ಬರಾದ ಲಾ ಗಾರ್ಡಿಯೂರವರು ರಾಜೀನಾಮೆ ನೀಡಬೇಕಾಯಿತು. ಕೋಟ್ಯಂತರ ಜನರ ಪ್ರಾಣವನ್ನು ಕ್ಷಣೇಕರಿಸಿ ಆಟವಾಡುತ್ತಿರುವುದಾಗಿ ಸಮಿತಿಯ ಮೇಲೆ ಅವರು ಆಪಾದನೆ ಮಾಡಿದರು. ಅವರ ಈ ಅಭಿಪ್ರಾಯವು ಅತ್ಯಂತ ಅರ್ಥಗರ್ಭಿತವಾಗಿರುತ್ತದೆ.

ಹಿಂದೂಸ್ಥಾನಕ್ಕೆ ಬೇಕಾದ ಧಾನ್ಯವು ಬೇಕೆಂದು ಸಭೆಯಲ್ಲಿ ಒತ್ತಾಯ ಮಾಡಲಾಯಿತು. ಈ ದೇಶವು ಅಷ್ಟೊಂದು ಬಹಳ ದೂರವಿರುವುದರಿಂದ ಕೂಡಲೇ ಧಾನ್ಯವನ್ನು ಇಲ್ಲಿಗೆ ಕಳುಹಿಸದಿದ್ದರೆ ಹತ್ತು ಕೋಟಿ ಜನರಿಗೆ ಪ್ರಾಣಭಯ ಉಂಟಾಗುವುದೆಂದು ಎಚ್ಚರಿಸಲಾಯಿತು. ಕ್ಷಾಮದ ಸನ್ನಿವೇಶವು ನಮಗೆ ಇದುವರೆಗೆ ತಿಳಿದು ಬಂದಿರುವುದಕ್ಕಿಂತಲೂ ಅತ್ಯಂತ ಭೀಕರವಾಗಿರುವುದೆಂದು ಅಧ್ಯಕ್ಷ ಟ್ರೂಮನ್ನರು ಕೆಲವು ದಿನಗಳ ಹಿಂದೆ ಹೇಳಿದ ಮಾತು ಈಗ ನೆನಪಿಗೆ ಬರುವುದು.

ಇಡೀ ಪ್ರಪಂಚಕ್ಕೇ ಅಭಾವವು ವ್ಯಾಪ್ತವಾಗಿರುವುದು ಎಲ್ಲರಿಗೂ ಗೊತ್ತಾಗಿರುವ ಅಂಶ. ಆದರೆ ಸಂಯುಕ್ತ ಆಹಾರ ಸಮಿತಿಯಿಂದ ಯಾವ ಜನಾಂಗಗಳಿಗೆ ಏನನ್ನು ... ನಿರ್ದಿಷ್ಟವಾಗಿ ತಿಳಿದಿಲ್ಲ. ಎಲ್ಲ ದೇಶಗಳೂ ಈ ಸಮಿತಿಯ ... ಕೊಂಡು ಕುಳಿತಿವೆ. ಆದರೆ ಈಚೆಗೆ ಬರುತ್ತಿರುವ ವರದಿಗಳ ಪ್ರಕಾರ ಈ ಸಮಿತಿಯ ... ನಿಷ್ಕ್ರಿಯವಾಗಿದೆ ... ಸಂಖ್ಯೆ ... ಧಾನ್ಯವನ್ನು ... ಕೊಡುವುದಾಗಿ ಹೇಳಿದ್ದರೂ ... ಒಂದು ಕಾಳನ್ನೂ ಕಳುಹಿಸಿಲ್ಲ. ಭಾರತ ... ಪ್ರತಿನಿಧಿ ...

ಫಸಲು ರಕ್ಷಣೆಗಾಗಿ ಮಂಗಗಳ ಕೊಲೆ

ಕಳೆದ ೧೨ ತಿಂಗಳುಗಳಲ್ಲಿ ಪೂನಾ ಜಿಲ್ಲೆಯಲ್ಲಿ ೧೬೦೦ ಕೋತಿಗಳನ್ನು ಗುಂಡಿನಿಂದ ಹೊಡೆದು ಕೊಂದಿರುವುದಾಗಿ ವರದಿಯಾಗಿದೆ. ಒರಿಸ್ಸಾದ ೬ ಜಿಲ್ಲೆಗಳಲ್ಲಿ ೫ ಸಾವಿರ ಕೋತಿಗಳನ್ನು ಕಳೆದೆರಡು ವರ್ಷದಲ್ಲಿ ಕೊಲ್ಲಲಾಯಿತೆಂದೂ, ಕೊಂದ ಪ್ರತಿಯೊಂದು ಕೋತಿಗೂ ಸರ್ಕಾರ ೩ ರೂ.ಗಳ ಬಹುಮಾನ ಕೊಟ್ಟಿತೆಂದೂ ಹೇಳಲಾಗಿದೆ. ಈ ಹಣವನ್ನು ಹೆಚ್ಚು ಆಹಾರ ಬೆಳೆಯುವ ಯೋಜನೆಯ ಬಾಬಿನಿಂದ ಒದಗಿಸಲಾಗಿದೆ.

ಭೂಲಾಭಾಯಿಯವರ ಸ್ಥಿತಿ

ನಿನ್ನೆ ರಾತ್ರಿ ಶ್ರೀ ಭೂಲಾಭಾಯಿಯವರ ಸ್ಥಿತಿ ವಿಷಮಾವಸ್ಥೆಗೆ ಏರಿತೆಂದು ವರ್ತಮಾನ ಬಂದಿದೆ. ಶ್ರೀಯುತರ ಉಳಿವು ಅಸಂಭವವೆಂದು ಕಂಡು ಬರುತ್ತದೆ.

... ಸಹಾಯವಾಗುತ್ತಿದೆ-ಎಂಬುದಾಗಿ ಆಹಾರ ನಿಯೋಗದ ಸದಸ್ಯರಾದ ಸರ್ ಮನೆಲಾಲ್ ನಾನಾವತಿಯವರು ಆಪಾದನೆ ಮಾಡಿದ್ದಾರೆ. ಮತ್ತೊಬ್ಬ ಪ್ರಮುಖ ಸದಸ್ಯರಾದ ಡಾ|| ವಿ. ಕೆ. ಆರ್. ವಿ. ರಾವ್ ರವರೂ ಸಹ ಇದೇ ರೀತಿ ಖಂಡನೆಯನ್ನು ಸೂಚಿಸಿದ್ದಾರೆ.

ನಮ್ಮ ದಿವಾನರು ನಿನ್ನೆ ಕೊಟ್ಟಿರುವ ಹೇಳಿಕೆಯೂ ಸಹ ಇದೇ ಅಂಶವನ್ನು ಸೂಚಿಸುತ್ತದೆ. ಈಗಾಗಲೇ ನಮ್ಮ ದೇಶದ ಜನರಿಗೆ ದೊರೆಯುತ್ತಿರುವ ಆಹಾರದ ಸತ್ವವು ಇತರ ದೇಶಗಳಿಗಿಂತ ಬಹಳ ಕಡಿಮೆಯಾಗಿದೆಯೆಂಬುದು ಲೋಕ ಪ್ರಸಿದ್ಧವಾಗಿದೆ. ಹೀಗಿರುವಲ್ಲಿ ದಿವಾನರು ಸೂಚಿಸಿರುವಂತೆ ಪಡಿತರವನ್ನು ಇನ್ನೂ ಕಡಿಮೆ ಮಾಡಬೇಕಾಗಿ ಬಂದರೆ ಅದೊಂದು ದುರ್ದೈವವೇ ಸರಿ. ಸಂಯುಕ್ತ ಆಹಾರ ಸಮಿತಿಯವರು ಈಗಲಾದರೂ ತಮ್ಮ ವಾಗ್ದಾನವನ್ನು ಉಳಿಸಿಕೊಂಡು ನಮ್ಮ ದೇಶಕ್ಕೆ ಅಗತ್ಯವಾದ ಪ್ರಮಾಣದಲ್ಲಿ ಧಾನ್ಯವನ್ನು ಕಳುಹಿಸಿ ಇಲ್ಲಿ ಬಹಳ ಶ್ರಮದಿಂದಲೂ ಶ್ರದ್ಧೆಯಿಂದಲೂ ಜಾರಿಗೆ ಬಂದಿರುವ ಪಡಿತರ ಪದ್ಧತಿಯು ನಿರಾತಂಕವಾಗಿ ಮುಂದುವರೆಯುವಂತೆ ಸಹಕರಿಸುವರೆಂದು ಹಾರೈಸಬೇಕಾಗಿದೆ.

Edited, printed and published by A. R. Nagarajan at the Sadhvi Press D. Subbiah Road, Mysore.

ದಾವಣಗೆರೆಯಲ್ಲಿ ಇಂಟರ್ ಕಾಲೇಜು

೧೯೪೬ ನೇ ಜುಲೈ ತಿಂಗಳಿಂದ ದಾವಣಗೆರೆಯಲ್ಲಿ ಇಂಟರ್ ಮೀಡಿಯೇಟ್ ಸೈನ್ಸ್ ಮತ್ತು ಆರ್ಟ್ಸ್ ಶಾಖೆಯನ್ನು ತೆರೆಯಲು ಸರ್ಕಾರವು ಒಪ್ಪಿರುವುದಾಗಿ ಗೊತ್ತಾಗಿದೆ. ಕಾಲೇಜಿಗೆ ಶ್ರೀ ರಾಜನಹಳ್ಳಿ ಹನುಮಂತಪ್ಪನವರ ಹೆಸರನ್ನಿಡಲಾಗುವುದು.

ಫರಿದ್‌ಕೋಟ ಸಂಸ್ಥಾನದಲ್ಲಿ ದಬ್ಬಾಳಿಕೆ

ಫರೀದ್ ಕೋಟೆ ಸಂಸ್ಥಾನದ ಪ್ರಜಾಮಂಡಲದ ಅನೇಕರನ್ನು ದಸ್ತಗಿರಿ ಮಾಡಿ ರಾಷ್ಟ್ರೀಯ ಧ್ವಜವನ್ನು ಸುಟ್ಟು, ಮಹಿಳೆಯರನ್ನೂ ವಿದ್ಯಾರ್ಥಿಗಳನ್ನೂ ಅವಮಾನ ಮಾಡಿ ಅಲ್ಲಿನ ಸರ್ಕಾರ ದಬ್ಬಾಳಿಕೆ ನಡೆಸಿದೆಯೆಂದೂ, ಅದಕ್ಕಾಗಿ ಪಂಚಾಳ ನಡೆದಿದೆಯೆಂದೂ ತಿಳಿದು, ಇದನ್ನು ವಿಚಾರಿಸಲು ಪಂ|| ಜವಹರಲಾಲರು ಶ್ರೀ|| ದ್ವಾರಕಾನಾಥರನ್ನು ಅಲ್ಲಿಗೆ ಕಳುಹಿಸಿದ್ದಾರೆ.

ಕೋರ್ಟುಗಳಲ್ಲಿ 'ಹುಜೂರ್' 'ಸರ್ಕಾರ್' ಕೂಡದು

ಸಂಯುಕ್ತ ಪ್ರಾಂತ್ಯದ ಸುಲ್ತಾನ್‌ಪೇಟೆಯ ವಕೀಲರು ಸಭೆ ಸೇರಿ ಇನ್ನು ಮೇಲೆ ಕೋರ್ಟುಗಳನ್ನು 'ಹುಜೂರ್' ಮತ್ತು 'ಸರ್ಕಾರ್' ಎಂದು ಸಂಬೋಧಿಸಕೂಡದೆಂದೂ, ಅದಕ್ಕೆ ಬದಲಾಗಿ, 'ಶ್ರೀಮಾನ್' 'ಜನಾಬ್' ಅಥವಾ 'ಆಪ್' ಎಂದು ಸಂಬೋಧಿಸಬೇಕೆಂದೂ ತೀರ್ಮಾನಿಸಿದ್ದಾರೆ.

§ ಅರಬ್ ಕಾರ್ಖಾನೆ ಸಂಬಂಧವಾಗಿ ಮುಲ್ತಾನಿನಲ್ಲಿ ಕರ್ಫ್ಯೂ ಆಜ್ಞೆ ಜಾರಿಗೆ ಬಂದಿದೆ.

ಸಾಧ್ವಿ

ಎನ್ನುವ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ಜಾಹೀರಾತಿನ ದರಗಳಿಗೆ ವಿಚಾರಿಸಿರಿ

ವಿವಿಧ ವಾರ್ತೆಗಳು

* ಕ್ಷಾಮ ಪೀಡಿತ ಪ್ರದೇಶಗಳಿಗೆ ... ಕಳುಹಿಸಲು ಬೆಂಗಳೂರಿನ ... ದ ಅಂಗಡಿ ಮಾಲೀಕರಾದ ಶ್ರೀ ... ವೆಂಕಟರಮಣಶೆಟ್ಟರು ೬ ತಿಂಗಳ ... ಮಾಹೆಯಾನ ೧೦೦೦ ರೂ. ಗಳನ್ನು ಕೊಡಲು ಒಪ್ಪಿದ್ದಾರೆ.

* ೪೦೦ ಮೀಟರ್ ದೂರವನ್ನು ... ನಿಮಿಷ ೪೩ ಸೆಕೆಂಡುಗಳಲ್ಲಿ ಓಟ ... ಯುವಕನು ಓಡಿದನೆಂದೂ ಇದೇ ಪ್ರಪಂಚದ ರಿಕಾರ್ಡಿಗಿಂತ ಇದು ೧೮ ಸೆಕೆಂಡು ಮೇಲೆಂದೂ ಗೊತ್ತಾಗಿದೆ.

† ಅಸ್ಸಾಂನಲ್ಲಿ ಕಳ್ಳರು ... ರರು ಮುಸ್ಸಂಜೆ ... ಮಾಡಿರುವುದರಿಂದ ... ರಸ್ತೆ ರೈಲುಗಳ ಓಡಾಟವನ್ನು ... ಮಾಡಲಾಗಿದೆ.

* ಭಾರತಕ್ಕೆ ಕಾರ್ಯತಃ ಇದುವರೆಗೂ ಏನೂ ಸಹಾಯವನ್ನು ಅಮೆರಿಕಾ ... ಸಲ್ಲವೆಂದು ಅಮೆರಿಕಾ ಆಹಾರ ಸರಬರಾಜು ನೀತಿಯನ್ನು ಭಾರತದ ಆಹಾರ ನಿಯೋಗ ಮಂಡಲಿ ಸದಸ್ಯರಾದ ಸರ್ ... ನಾನಾವತಿಯವರು ಖಂಡಿಸಿದ್ದಾರೆ.

* ಬೆಲ್ಜಿಯಂನ ಮಾಜಿ ಫ್ಯಾಸಿಸ್ಟ್ ಮುಖಂಡರುಗಳನ್ನು ಬೆಲ್ಜಿಯಂ ಸರ್ಕಾರಕ್ಕೆ ಒಪ್ಪಿಸಲು ಸ್ಪೇನ್ ನಿರಾಕರಿಸಿದೆ. ... ಸೆಕ್ಯೂರಿಟಿ ಕೌನ್ಸಿಲ್ ಮುಂದೆ ಬೆಲ್ಜಿಯಂ ಖಂಡನೆ ಸೂಚಿಸಿದೆ.

* ಆಂಗ್ಲೋ-ಅಮೆರಿಕನ್ ಸಮಿತಿಯು ಪ್ಯಾಲೆಸ್ಟೈನ್ ಬಗ್ಗೆ ಮಾಡಿರುವ ... ಯನ್ನು ಪ್ರತಿಭಟಿಸಲು ಭಾರತದಲ್ಲಿ ಪ್ಯಾಲೆಸ್ಟೈನ್ ದಿನಾಚರಣೆಯನ್ನು ಇದೇ ... ಸೋಮವಾರ ಆಚರಿಸಬೇಕೆಂದು ಮುಸ್ಲಿಂ ಲೀಗ್ ಕಾರ್ಯದರ್ಶಿ ಮನವಿ ಮಾಡಿಕೊಂಡಿದ್ದಾರೆ.

* ಇಂಡೊನೇಷಿಯದ ಸ್ವಾತಂತ್ರ್ಯವನ್ನು ಒಪ್ಪಲು ಸಾಧ್ಯವಿಲ್ಲವೆಂದು ... ಪಾರ್ಲಿಮೆಂಟಿನಲ್ಲಿ ತಿಳಿಸಲಾಗಿದೆ.

ಸಿಡುಬಿನ ಉಪದ್ರವ

ಕಳೆದ ಏಪ್ರಿಲ್ ತಿಂಗಳಲ್ಲಿ ಮೈಸೂರು ನಗರದಲ್ಲಿ ೧೭ ಮಂದಿಗೆ ಸಿಡುಬು ... ೬ ಮರಣಗಳು ಉಂಟಾಯಿತು ... ೪ ಮಂದಿ ಹೊರಗಡೆಯಿಂದ ಬಂದವರೂ, ಅವರಲ್ಲಿ ಒಬ್ಬ ಸತ್ತನೆಂದು ಗೊತ್ತಾಗಿದೆ. ಏಪ್ರಿಲ್ ತಿಂಗಳಲ್ಲಿ ... ಮಂದಿಗೆ ದೇವಿ ಹಾಕಲಾಗಿದೆ ... ಯಲ್ಲಿ ೧೯೪೬ ನೇ ಜನವರಿ ೧ ... ೯೦,೭೭೫ ಜನರಿಗೆ ದೇವಿ ಹಾಕಲಾಗಿದೆ.

ಮೈಸೂರು ಶ್ರೀಮನ್ಮಹಾರಾಜ ಮುಮ್ಮಡಿ ಕೃಷ್ಣರಾಜ ಒಡೆಯರ ಖಾಸ್ ವೈದ್ಯ ಅಂಬಳೆ ನರಸಿಂಹ ಪಂಡಿತರ ಮನೆತನದ

ಸಂತಾನ ಸಿಂಧೂರ

ಬಹಿಷ್ಟೆ ಸಂಬಂಧದ ಹೊಟ್ಟೆನೋವು, ಬಂಜೆತನ ಇತ್ಯಾದಿಗಳಿಗೆ ಗ್ಯಾರಂಟೀ ಔಷಧ

ಕ್ರಯ:—ಎಂಟು ಪೊಟ್ಟಣ "ಸಂತಾನ ಸಿಂಧೂರ" ಮತ್ತು ನಾಲ್ಕು ಗುಳಿಗೆ "ಮದನ ವಿಲಾಸ" ಇದಕ್ಕೆ ಒಂದು ಸೆಟ್ ಮೂರು ರೂಪಾಯಿ ಪ್ಯಾಕಿಂಗ್ ಮತ್ತು ಪೋಸ್ಟಲ್ ಖರ್ಚು ಪ್ರತ್ಯೇಕವಾಗಿ. ರೂ. ೩—೧೨—೦ ಮನಿಯಾರ್ಡರ್ ಮಾಡಿರಿ. ಕೂಡಲೇ ರಿಜಿಸ್ಟರ್ ಪಾರ್ಸೆಲ್ ರವಾನೆ. ಸೀಸೀ ಇಲ್ಲ. ಕಮೀಷನ್ ಏಜೆಂಟರು ಬೇಕಿಲ್ಲ. ಪತ್ರ ವ್ಯವಹಾರ ಗುಪ್ತ. ಅನುಪಾನ ಪತ್ರ ಔಷಧಿ ಸಂಗಡ ಹೊಸ ಕ್ಯಾಟ್ಲಾಗ್ ಉಚಿತ.

ಎ. ರಾಮಸ್ವಾಮಿ ಅಯ್ಯರ್,

ಅಂಬಳೆ, ಯಳಂದೂರು ಪೋಸ್ಟ್,

(ಮೈಸೂರು ಡಿಸ್ಟ್ರಿಕ್ಟ್)

ಅಮೃತ

ನಿತ್ಯದ ಜ್ವರ ಮಲೇರಿಯ ಜ್ವರ, ಜ್ವರದ ಗಡ್ಡೆ ಇವುಗಳ ಮೇಲೆ ಬಹಳ ಚೆನ್ನಾಗಿ ಕೆಲಸ ಮಾಡುತ್ತದೆ.

ಕೆ. ವಿ. ವೆಂಕಟರಾಮಯ್ಯ

ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯ ...

... ಕಲವಾಡಿ.

ಫೋ ನಂ. 392 WEEKLY EDITION ಈ ದಿನ ಪ್ರತಿಗೆ 6 ಕಾಸು

ಸಂಪುಟ ೧೦] ಸೋಮವಾರ ೬—೫—೪೬ [ಸಂಚಿಕೆ ೩೪

ಭೂಲಾಭಾಯಿ ದೇಸಾ — ಯಿಯವರ ನಿಧನ —

ವಾರ ಭವಿಷ್ಯ

[illegible] ರಿಂದ [illegible] ರ ವರೆಗೆ (ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ — ಆರೋಗ್ಯ ಸಾಧಾರಣವಿರು[illegible] ಆದಾಯ [illegible] ವ್ಯವಹಾರದಲ್ಲಿ ಕಠಿಣ [illegible] ಕೇಳಬೇಕಾಗಬಹುದು. ಬಂಧುಗಳ ಆರೋಗ್ಯ [illegible] ಕಾಣಬರುವುದು.

ವೃಷಭ — ಅನುಕೂಲ [illegible] ಕಾರ್ಯ ಈ ವಾರ [illegible] ಪೂರ್ತಿಗೊಳ್ಳುವುದು. ಮಂಗಳ [illegible] ಜರುಗುವುವು. ಪ್ರವಾಸ [illegible] ಆರೋಗ್ಯ, [illegible] ಉತ್ತಮ.

ಮಿಥುನ — ನಿಮ್ಮ ಕಷ್ಟಗಳು [illegible] ಆರೋಗ್ಯ ಸಾಧಾ[illegible] ವ್ಯವಹಾರಗಳಲ್ಲಿ ವಿಘ್ನಗ[illegible] ಸಂಭವಗಳು ಇವೆ. [illegible] ಆರೋಗ್ಯಕ್ಕಾಗಿ [illegible]

ಕರ್ಕ — ಆರೋಗ್ಯ ಉತ್ತಮವಿಲ್ಲ. [illegible] ಸ್ಥಿತಿಯೂ ಅಸ್ಪಷ್ಟ [illegible] ಬಹಳ [illegible] ಪ್ರವಾಸ ಇಲ್ಲ [illegible] ನಿಮ್ಮ ಮನಸ್ಸನ್ನು [illegible] ಮಾಡುವ [illegible]

ಸಿಂಹ — ಇನ್ನೂ ನಿಮ್ಮ [illegible] ಈ ವಾರ ನಿಮಗೆ [illegible] ನೌಕರಿ [illegible] ಆರ್ಥಿಕ ಸ್ಥಿತಿ ಉತ್ತಮ ವಿಲ್ಲ.

ಕನ್ಯಾ — ಕಳೆದ ವಾರದಂತೆಯೇ [illegible] ಆರೋಗ್ಯ ಉತ್ತಮ, ಎಲ್ಲ ಕೆಲಸ [illegible] ಜಯ [illegible] ಪ್ರವಾಸದಲ್ಲಿ [illegible] ಆರ್ಥಿಕ ಲಾಭ, [illegible]

ತುಲಾ — ಆರ್ಥಿಕ ಸ್ಥಿತಿ ಸಾಧಾರಣ [illegible] ಚೆನ್ನಾಗಿರುವುದು. ನೌಕರಿ [illegible] ಕಾರ್ಯಗಳು ಜರುಗುವುವು. [illegible]

ವೃಶ್ಚಿಕ — ಆರೋಗ್ಯ ಬಹಳ ಚೆನ್ನ[illegible] ವಿವಾಹಗಳು ಈ ವಾ[illegible] ನೆರವೇರುವುವು. [illegible] ಪ್ರಗತಿ, [illegible]

ಧನುಸ್ಸು — ಈ ವಾರದ ಮಧ್ಯಭಾಗದ [illegible] ನಿಮ್ಮನ್ನು [illegible] ವಿಚಾರಗಳಲ್ಲಿ [illegible]

ಮಕರ — ನಿಮ್ಮ ಆರೋಗ್ಯ ಚೆನ್ನಾಗಿ[illegible] ಸ್ಥಿತಿ [illegible] ನೌಕರಿ [illegible]

ಕುಂಭ — [illegible] ನಿಮ್ಮ [illegible] ಆರೋಗ್ಯ ಚೆನ್ನಾಗಿ [illegible] ಆರ್ಥಿಕ ಸ್ಥಿತಿ [illegible] ವಿವಾಹಗಳು ಜರುಗುವುವು.

ಮೀನ — [illegible] ನಿಮ್ಮ [illegible] ಮನೆಯಲ್ಲಿ [illegible]

ಭೂಲಾಭಾಯಿ ದೇಸಾಯಿ ಯವರ ನಿಧನ ವಾರ್ತೆ

ಸ್ವಂ ಸು ಫೋ] ಬೆಂಗಳೂರು ೬

ಕಾಂಗ್ರೆಸ್ ಪ್ರಮುಖರಾದ ಶ್ರೀ ಭೂಲಾಭಾಯಿ ದೇಸಾಯಿಯವರು ಈ ದಿನ [illegible] ನಿಧನರಾದರು. [illegible] ಕಾಂಗ್ರೆಸ್ ವಲಯಗಳಲ್ಲಿ [illegible] ವ್ಯಸನವು ಸೂಚಿಸಲ್ಪಡುತ್ತಿದೆ. [illegible] ತ್ಯಾಗಮಾಡಿದ ಈ ಮಹನೀಯರ ಬಗ್ಗೆ ಎಲ್ಲರೂ ಶ್ರದ್ಧಾ-ಜಲಿಯನ್ನು ಅರ್ಪಿಸುತ್ತಿದ್ದಾರೆ.

ಮಂತ್ರಿ ಪದವಿಗೆ ಅರ್ಹತೆಗಳು

[illegible] ಮಂತ್ರಿ ಪದವಿ [illegible] ಗಾಂಧಿಯವರು [illegible] ಆಧಾರದ ಮೇಲೆ ಮಂತ್ರಿಗಳನ್ನಾಗಿ [illegible] ತೀವ್ರವಾಗಿ [illegible] ದ್ದಾರೆ. [illegible] ಮಂತ್ರಿ ಪದವಿ [illegible]

ವೃತ್ತಿ ಮುಷ್ಕರಕ್ಕೆ ರೆಲ್ವೆ ನೌಕರರ ಮಂದಿ ಹಿಮ್ಮೆಗ

ಅಖಿಲ ಭಾರತ ರೈಲ್ವೆ ಕೆಲಸಗಾರರ [illegible] ಬೇಡಿಕೆಗಳು [illegible] ಭಾರತ ಸರ್ಕಾರ [illegible] ರೈಲ್ವೆ ಕೆಲಸಗಾರರ ಸಂಘದ ಪ್ರತಿನಿಧಿಗಳು [illegible]

[illegible] ಕಾರ್ಯಗಳು [illegible] ಉತ್ತಮ [illegible]

ಮೀನ — ಆರೋಗ್ಯ ಚೆನ್ನಾಗಿ [illegible] ಸ್ಥಿತಿ [illegible] ವಿನಾಕಾರಣ [illegible] ಕಾಣಬರುವುದು.

ಸಂತಾಪ ಸಭೆ

ಮೈಸೂರು ೬

ದಿವಂಗತ ಭೂಲಾಭಾಯಿ ದೇಸಾಯಿ ಯವರ ನಿಧನದ ಬಗ್ಗೆ ಸಂತಾಪವನ್ನು ಸೂಚಿಸಲು [illegible] ಕಾಂಗ್ರೆಸ್ [illegible] ನಡೆಯುವುದು. [illegible] ಸಿದ್ದಪ್ಪ [illegible]

ಆರಂಭವಾಯಿತು

[illegible] ಕಾಂಗ್ರೆಸ್ [illegible] ಕೇಂದ್ರದಲ್ಲಿ [illegible] ಕಾಂಗ್ರೆಸ್ [illegible]

ರಷ್ಯ ಸಹಾಯಕ್ಕಾಗಿ ಅಲೆಜೀರಿಯ ಸಸ್ತಾಪ[illegible]

[illegible]

"ನೇತಾಜಿ" ಆಸ್ಪತ್ರೆ

[illegible]

ಆಲ್ ಕಮಿಷನರುಗಳ ವರ್ಗ

ಸ್ವಂ. ಸು. ಫೋ] ಬೆಂಗಳೂರು ೬

[illegible] ಶ್ರೀ [illegible] ರಾಮಚಂದ್ರರವರನ್ನು [illegible] ಶ್ರೀ [illegible] ಶ್ರೀ ರಾಮಚಂದ್ರ [illegible] ಅಧಿಕಾರಿಗಳನ್ನಾಗಿಯೂ [illegible] ಗಿದೆ.

ವಿವಾಹ

ಈ ದಿನ ರಾತ್ರಿ ಬೆಂಗಳೂರಿನಿಂದ [illegible] ವಿವಾಹವು [illegible]

ಸುಮಾತ್ರದಲ್ಲಿ ಡಚ್ ವಿರೋಧ ಉಗ್ರವಾಗಿದೆ

ಸುಮಾತ್ರ [illegible] ಡಚ್ [illegible] ಸುಲ್ತಾನರುಗಳ [illegible] ಅಧಿಕಾರ [illegible]

ಮಹಾರಾಜ [illegible] ಮುಖಗಟ್ಟು

[illegible] ಮಂತ್ರಿ [illegible]

ಗಿರಿಯವರ ರಾಜೀನಾಮೆ

ಅಖಿಲ ಭಾರತ ರೈಲ್ವೆ ಕೆಲಸಗಾರರ ಸಂ[illegible] ಸಭೆಯ ಅಧ್ಯಕ್ಷತೆಗೆ ಶ್ರೀ ವಿ. ವಿ. ಗಿರಿಯವರು [illegible] ಮಂತ್ರಿಗಳಾಗಿರುವುದರಿಂದ ರಾಜೀನಾಮೆ [illegible] ರೈಲ್ವೆ ಕೆಲಸಗಾರರ ಸಂಘದ ಅಧ್ಯಕ್ಷರಾದ ಶ್ರೀ [illegible] ರನ್ನು ನೇಮಿಸಲಾಗಿದೆ.

[illegible]

ಮಂತ್ರಿಮಂಡಲದ ಸಭೆ

ಸ್ವಂ. ಸು. ಫೋ] ಬೆಂಗಳೂರು ೬

ಈ ದಿನ ಮಂತ್ರಿಮಂಡಲದ ಸಭೆ ನಡೆ[illegible] [illegible]

ಮೈಸೂರು ವಿದ್ಯಾರ್ಥಿ ನಿವೇದನ

[illegible] ವಿದ್ಯಾರ್ಥಿಗಳ [illegible]

[illegible]

[illegible]

ವಿಷಂಗತ ಭೂಲಾಭಾಯಿ ದೇಸಾಯಿ

ಬೊಂಬಾಯಿನ ಪ್ರಸಿದ್ಧ ಕಾಂಗ್ರೆಸ್ ನಾಯಕರಾದ ಶ್ರೀ ಭೂಲಾಭಾಯಿ ದೇಸಾಯಿಯವರು ಈ ದಿನ ಸ್ವರ್ಗಸ್ಥರಾದರೆಂಬ ವಾರ್ತೆಯು ಎಲ್ಲರನ್ನೂ ಶೋಕ ಸಾಗರದಲ್ಲಿ ಮುಳುಗಿಸಿದ್ದಿದೆ. [illegible]

ಭೂಲಾಭಾಯಿಯವರ ಪ್ರಖ್ಯಾತಿಯು ಅವರ ವಕೀಲಿ ವೃತ್ತಿಯಲ್ಲಿ ಪ್ರಕಟವಾಯಿತು. [illegible]

[illegible]

ಭೂಲಾಭಾಯಿಯವರ ಪ್ರತಿಭೆಯು [illegible]

[illegible]

ಧ್ಯೇಯವನ್ನು ನೆರವೇರಿಸಿದರು.

ಇತ್ತೀಚೆ ಐ. ಎನ್. ಎ. ಸೈನಿಕರ ವಿಚಾರಣೆ [illegible] ಭೂಲಾಭಾಯಿಯವರು [illegible] ಸ್ವತಂತ್ರ ಸರ್ಕಾರವನ್ನು [illegible]

[illegible] ಅವರ ಅನ್ಯಾದೃಶವಾದ ದೇಶಾಭಿಮಾನ, ಸ್ವಾತಂತ್ರ್ಯ ಪ್ರೇಮ ಮತ್ತು ಸ್ವಾರ್ಥ ತ್ಯಾಗಗಳು [illegible] ಸ್ವಾತಂತ್ರ್ಯ ಸಾಧನೆಗೆ [illegible] ನಮ್ಮ ಹಾರ್ದಿಕ.

ದಿವಂಗತರ ಆತ್ಮಕ್ಕೆ ಜಗದೀಶನು ಶಾಶ್ವತ ಶಾಂತಿಯನ್ನೀಯಲಿ!

[illegible]

[illegible] ಆಸ್ಪತ್ರೆ [illegible] ಮೈಸೂರು ತಾ|| [illegible]

ಟೆಂಡರ್ ನೋಟೀಸ್

ಮೈಸೂರು [illegible] ಆಸ್ಪತ್ರೆಗೆ [illegible] ನೇ ಇಸವಿ [illegible] (ಎರಡು ದಿವಸಗಳೂ ಸೇರಿ) [illegible] ಆಫೀಸಿನಲ್ಲಿ [illegible] ನೇ ತಾರೀಖು [illegible] ಒಡೆದು [illegible] ಆಫೀಸಿನಲ್ಲಿ ತಿಳಿದುಕೊಳ್ಳಬಹುದು.

ಎಂ. ಬಸಪ್ಪ

ಸೆಕ್ರೆಟರಿ

[illegible]

ಬಸವ ಜಯಂತಿ

ಹೆಗ್ಗಡ ದೇವನಕೋಟೆ ಶಿವಾಲಯದ ಮುಂದೆ ಬಸವ ಜಯಂತಿಯು ಶ್ರೀ ಬಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಶ್ರೀ ನುಗಹಳ್ಳಿ ವೀರಪ್ಪನವರೂ, ಟಿ. ಎಸ್. ಸುಬ್ಬಣ್ಣನವರೂ ಭಾಷಣ ಮಾಡಿದರು. ಶ್ರೀ ಕೆ. ಎಂ. ಶಿವಲಿಂಗಯ್ಯನವರು ವಂದನೆ ಅರ್ಪಿಸಿದ ಮೇಲೆ ಸಭೆಯು ಮುಗಿಯಿತು.

ಗ್ರಾಮಾಭ್ಯುದಯ ಪ್ರಚಾರ

ಸಂಸ್ಥಾನದಲ್ಲಿ ಗ್ರಾಮ ಪುನರುಜ್ಜೀವನ ಕಾರ್ಯವನ್ನು ವಿಶೇಷ ಉತ್ಸಾಹ, ಶ್ರದ್ಧೆಯಿಂದ [illegible] ಲಕ್ಷ ರೂ. [illegible] ಯೋಜನೆಯೊಂದು ತಯಾರಾಗಿದೆ. ಈ ಯೋಜನೆಗೆ ಸರ್ಕಾರ [illegible] ಲಕ್ಷ ರೂಗಳು [illegible] ವರ್ಷಗಳ ಕಾಲ [illegible] ಈ ಯೋಜನೆ ಪ್ರಕಾರ ಗ್ರಾಮಗಳಲ್ಲಿ [illegible] ಜಿಲ್ಲೆಗಳಲ್ಲೂ ಒಂದೊಂದು ಮೋಟಾರ್ ಗಾಡಿಯನ್ನು [illegible] ಲೌಡ್ ಸ್ಪೀಕರ್ ಮತ್ತು ಚಿತ್ರಪ್ರದರ್ಶನಕ್ಕೆ ಬೇಕಾದ ಎಲ್ಲ ಅನುಕೂಲಗಳನ್ನೂ [illegible] ಯೋಚಿಸಲಾಗಿದೆ. ಈ ಕಾರ್ಯದ ಮೇಲ್ವಿಚಾರಣೆಗಾಗಿ ಪ್ರತ್ಯೇಕ ಅಧಿಕಾರಿಗಳನ್ನು [illegible] ಸೇವಿ [illegible]

ದಸ್ಯುವಿಂದ ಕೆನಡಾ ಆಕ್ರಮಣ[illegible]

ಕೆನಡಾ ದೇಶವನ್ನು ಆಕ್ರಮಿಸಲು [illegible] ಅಸಾಧ್ಯವಾದ ಯೋಜನೆಗಳನ್ನು [illegible] ಗೊಳಿಸಿದೆಯೆಂದೂ, ಯಾವ [illegible] ಯಾದರೂ [illegible] ಮಾರ್ಗವಾಗಿ [illegible] ಬೇರ್ ಸರೋವರದ [illegible] ನಡೆಸಬಹುದೆಂದೂ [illegible] ನ ಮಂತ್ರಿಗಳಾದ [illegible] ವರು ಸೂಚಿಸಿದ್ದಾರೆ.

ಪ್ರಾಚೀನ ಅಸ್ಥಿ ಪಂಜ[illegible]

[illegible] ಎಂಬ ಗುಹೆಯಲ್ಲಿ [illegible] ವರ್ಷ [illegible] ಹಿಂದಿನ ಅಸ್ಥಿಪಂಜರ ದೊರೆತಿದೆ [illegible] ಯಲ್ಲಿ [illegible] ವರ್ಷಗಳ ಕಾಲ [illegible]

ಬಾವಿ ತೆಗೆಯಲು ಸಹಾಯ[illegible]

ಸಂಸ್ಥಾನದಲ್ಲಿ ಉಂಟಾಗಿರುವ [illegible] ದ ಕೊರತೆಯನ್ನು ನೀಗಿಸಲು, ಭತ್ತ [illegible] ಮತ್ತು ಜೋಳ ಬೆಳೆಯುವ [illegible] ನೀರಿನ ಸೌಕರ್ಯ ಒದಗಿಸಿ ಕೊಡುವುದಕ್ಕಾಗಿ ಸರ್ಕಾರವು ಧನಸಹಾಯ [illegible] ಒಪ್ಪಿದೆಯೆನ್ನಲಾಗಿದೆ. ಈ [illegible] ಕೆಯುವ ಪ್ರದೇಶಗಳಿಗೆ ಮಾತ್ರ [illegible] ಆಗುವುದು. ತೋಟದ [illegible] ನೆರವು ಅಪೇಕ್ಷಿಸುವವರು [illegible] ಪಡೆಯಬಹುದೆಂದು ಸೂಚಿಸಲಾ[illegible]

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದ

ನೋಟಿಫಿಕೇಷನ್—No. R 4 528/1945-46

[illegible]

ಬ್ರೆಡ್ ರೇಷನಿಂಗ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಮೈಸೂರು ಸಿಟಿಯಲ್ಲಿ ಬ್ರೆಡ್ ಉಪಯೋಗಿಸಬೇಕೆಂದು ಅಪೇಕ್ಷಿಸುವ [illegible] (೧) ಬ್ರೆಡ್ಡನ್ನು [illegible] ಮಾಡುವ ಹೋಟೆಲು ಮಾಲೀಕರು, [illegible] ಸ್ಟೇಷನರಿ [illegible] ಫಾರಂನಲ್ಲಿ [illegible] Food Inspector [illegible] ನೇ ತಾರೀಖು [illegible] ಗಂಟೆ ಒಳಗೆ ಅರ್ಜಿ [illegible]

೨. ಅಪೇಕ್ಷಿಸುವ ಬ್ರೆಡ್‌ನ ಪರಿಮಾಣವನ್ನು [illegible] ಲ್ಲಿ ಮೋಕಾ ಮಾಡಲ್ಪಡುತ್ತದೆ.

೩. ಬ್ರೆಡ್ ರೇಷನ್ ಕಾರ್ಡು [illegible] ಫುಡ್‌-ಇನ್ಸ್‌ಪೆಕ್ಟರ್ ಆಫೀಸಿನಲ್ಲಿ [illegible] ನೇ ತಾರೀಖಿನಿಂದ ಕೊಡಲಾಗುತ್ತದೆ.

೪. ಈ ರೀತಿ ಕಾರ್ಡು ಇಲ್ಲದೆ ಬ್ರೆಡ್ ದೊರೆಯುವುದಿಲ್ಲ.

೫. [illegible] ಬ್ರೆಡ್‌ಗೆ [illegible] ರೇಷನ್ [illegible] ನಲ್ಲಿ ಮೋಕಾ ಮಾಡಿ ಕಾರ್ಡು ಕೊಡಲ್ಪಡುತ್ತದೆ.

(ರುಜು) ಅಬ್ದುಲ್ [illegible]

ರೇಷನಿಂಗ್ ಆಫೀ[illegible]

ಮೈಸೂರು ಸಿಟಿ.

ಅರ್ಜಿ ಫಾರಂ ನಮೂನೆ

೧. ಅರ್ಜಿದಾರನ ಹೆಸರು.

೨. a) ಮನೆ ನಂಬರು

b) ಬೀದಿ

c) ಮೊಹಲ್ಲಾ

೩. (a) ಮನೆ ರೇಷನ್ ಕಾರ್ಡ್ ನಂಬರು

b) ಮನೆಯಲ್ಲಿರುವವರ ಸಂಖ್ಯೆ

ದೊಡ್ಡವರು, ಚಿಕ್ಕವರು

c) ಯಾವ ಅಂಗಡಿಗೆ ಕಾರ್ಡು [illegible]

೪. [illegible] ಪ್ರತಿದಿನವೂ [illegible] ಬ್ರೆಡ್‌ನ ಪರಿಮಾಣ

೫. ಯಾವ ಬ್ರೆಡ್ [illegible] ವರು ಅಪೇಕ್ಷಿಸುತ್ತಾರೆ [illegible] ಅಂಗಡಿಯವರ ಹೆಸರು

೬. ಅರ್ಜಿದಾರರ ರುಜು

ರಿಜಿ|| ನಂ. ೩೯೭ || ವಂದೇ ಮ[illegible]   [illegible] ಪತ್ರಿಕೆ ೩ ಕಾಸು

ಸಂಪುಟ ೪]   ಮಂಗಳವಾರ ೭—೫—೪೬   [ಸಂಚಿಕೆ ೨೦೫

ರಷ್ಯ-ಇಂಗ್ಲೆಂಡ್ ಯುದ್ಧ ಅನಿವಾರ್ಯವೇ?

ರಾಷ್ಟ್ರ ನಾಯಕರ ಕಣ್ಣೀರು

ಶ್ರೀ ಭುಲಾಭಾಯಿ ದೇಸಾಯಿಯವರ [illegible] ಬಗ್ಗೆ ರಾಷ್ಟ್ರ ನಾಯಕರುಗಳೆಲ್ಲಾ [illegible]ಜಲಿಯನ್ನು ಬೀರಿದ್ದಾರೆ— "[illegible] ಕಾರಣವಿಲ್ಲ. ಅವರು [illegible] ಸ್ವರ್ಗ ಸೇರಿದ್ದಾರೆ" ಎಂದಿದ್ದಾರೆ [illegible] "ವಕೀಲರಲ್ಲೆಲ್ಲಾ ಅದ್ವಿತೀಯ [illegible]ನಾಯ" ಎಂದು ಜಿನ್ನಾ ಪ್ರಶಂಸಿಸಿ[illegible] "ದೇಸಾಯಿಯವರ ನಿಧನದಿಂದ [illegible] ಅಪಾರ ನಷ್ಟವಾಗಿದೆ" ಎಂದು [illegible]ದ್ದಾರೆ ರಾಷ್ಟ್ರಪತಿ ಆಜಾದರು.

[illegible] ಮುಷ್ಕರ ನಿಶ್ಚಯ

[illegible] ೨೭ ರ ಒಳಗಾಗಿ ತಮ್ಮ ಬೇಡಿಕೆ[illegible] ಭಾರತಾದ್ಯಂ[illegible] ಕೆಲಸಗಾರರು ಮುಷ್ಕರ ಹೂಡ[illegible] ಕೆಲಸಗಾರರ [illegible] ನಿರ್ಧರಿಸಿದೆ. ಮುಷ್ಕರ [illegible]ವಾದರೆ ಅದಕ್ಕಾಗಿ ಕಾರ್ಯಕ್ರಮ[illegible] ೧೬ ಜನರನ್ನೊಳಗೊಂಡ [illegible] ಸಮಿತಿಯನ್ನು ಜನರಲ್ ಕೌನ್ಸಿಲ್ [illegible]ಿದೆ.

ಕಾಣಿಕೆಗಳು

[illegible]ನ ಶ್ರೀ ಡಿ. ಸಿದ್ದಯ್ಯನವ[illegible] ಮದುವೆ ಸಮಾರಂಭದ ಸಮ[illegible] ಮೈಸೂರು ಕಾಂಗ್ರೆಸ್ಸಿಗೆ [illegible] ಕಳುಹಿದ್ದಾರೆ.

[illegible] ಸಿ. ಕೆ. ಕೃಷ್ಣಸ್ವಾಮಿ [illegible]ವರ ಮಗಳು [illegible] ಮತ್ತು [illegible] ಶ್ರೀ [illegible] ಕೃಷ್ಣ[illegible]ವರ ವಿವಾಹದಲ್ಲಿ [illegible] ಕಾಣಿಕೆ [illegible]

[illegible] ನಿರ್ಣಯವಾದ ಪ್ರಶ್ನೆ [illegible]

[illegible] ವರ್ಷಗಳಾಗಿವೆ [illegible]

ನೋಟಿಫಿಕೇಷನ್

[illegible] ರೇಷನಿಂಗ್ ಆಫೀಸಿನಿಂದ

No. R 1-051/45-46

Dated 6-5-46

[illegible] ಸಮಸ್ತ ಜನಗಳಿಗೂ ಮತ್ತು [illegible] ಪ್ರವಾಸಿಗಳಿಗೂ ತಿಳಿಸು[illegible]

[illegible] ಪರಿಸ್ಥಿತಿಯಿಂದ [illegible] ಮೈಸೂರು ಸಿಟಿಗೆ [illegible] ಬರುತ್ತಿರುವುದರಿಂದ, [illegible] ಊಟ ಉಪಹಾರಗಳಿಗೆ [illegible] ಆಧಾರವೆಂದು [illegible] ಕಾರ್ಡುಗಳನ್ನು [illegible] ಹೋಟೆಲುಗಳಲ್ಲಿ [illegible] ಕೊಡುವುದಿಲ್ಲ.

(Sd) ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ

[illegible]

ಕಲ್ಕತ್ತಾದಲ್ಲಿ ಮಿಲಿಟರಿ ಆಡಳಿತವೇ?

[illegible] ಮಾತುಕತೆಗಳು ಫಲವಾಗದಿದ್ದ[illegible] ಭಾರತದಲ್ಲಿ ಒಂದು ದೊಡ್ಡ ಗಲಭೆ [illegible] ಸರ್ಕಾರವು [illegible] ಕಾರ್ಯಕ್ರಮವನ್ನು ಕೈಕೊಳ್ಳುವುದಕ್ಕೆ [illegible] ಕಲ್ಕತ್ತಾದಲ್ಲಿ [illegible] ಮಿಲಿಟರಿ ಆಡಳಿತಕ್ಕೆ [illegible]

[illegible]

ಮೌಲಾನ ಆಜಾದರ ಬಿಡಾರದಲ್ಲಿ ಕಳ್ಳತನ

[illegible] ಮೌಲಾನ ಆಜಾದ ಬಿ[illegible] ಕಳ್ಳನು ಅವರ [illegible] ಬೆಳ್ಳಿ [illegible]

'ಬಾಪು ದರ್ಶನ'

ಪಡೆದವರು-ನಾವಿಗ [illegible]

[illegible] ಗಾಂಧಿಯವರ ದರ್ಶನ ಪಡೆದ [illegible] ಶ್ರೀ [illegible] ಕೃಷ್ಣ[illegible]

[illegible]

ಸರ್ ಹೈದರಿಯವರು ಗವರ್ನರಾಗುವರೇ

[illegible] ಸರ್ [illegible] ನಾಲ್ಕು [illegible] ಸರ್ ಅಕ್ಬರ್ ಹೈದರಿಯವರು [illegible]

[illegible]ಗೆ ಅಕ್ಕಿ

[illegible]

ಭಾರತ ಮಾತನ

ಶ್ರೀ [illegible] "ಭಾರತ ಮಾತನ" [illegible]

ರಷ್ಯಾದಿಂದ ಬ್ರಿಟನ್ನಿಗೆ ಬೆಣ್ಣೆಯ ಸಾಲವೇ?

[illegible]

ರಷ್ಯ-ಬ್ರಿಟನ್ ಯುದ್ಧ ಸಾಗುವುದೇ?

[illegible] ರಷ್ಯ ಮತ್ತು ಬ್ರಿಟನ್ನುಗಳು [illegible] ಈ ಎರಡು ರಾಷ್ಟ್ರಗಳಿಗೂ ಯುದ್ಧ [illegible]

[illegible]

[illegible] ಗಳು ಮಿಲಿಟರಿ

[illegible]

ಮಹಾರಾಜರ ಆಗಮನ

ಮೈಸೂರು [illegible]

[illegible] ಬೆಂಗಳೂರಿ[illegible]

[illegible]

ಜಿಲ್ಲಾ ಪ್ರಜಾಸಂಘಗಳ ನೇಮಕ

[illegible] ಬೆಂಗಳೂರು, [illegible] ಶ್ರೀಯುತ ಎಂ. ನಾಗೇಶರಾವ್, [illegible] ಕೃಷ್ಣಸ್ವಾಮಿ, [illegible]

[illegible]

ಸಾಧ್ವಿ

ಶುಕ್ರವಾರ ೭-೬-೪೬ ಮಂಗಳವಾರ

ಸಿಮ್ಲಾ ರಂಗ

ಸಂಧಾನದ ರಂಗಸ್ಥಳವು ದೆಹಲಿಯಿಂದ ಸಿಮ್ಲಾಗೆ ವರ್ಗವಾಗಿದೆ. ಅಲ್ಲಿ ದೆಹಲಿಯಷ್ಟು ಉಷ್ಣಾಂಶವಿರುವುದಿಲ್ಲ. ವಾತಾವರಣವು ತಣ್ಣಗಿದ್ದು ಮಾತುಕತೆಗಳಿಗೆ ಬಹಳ ಅನುಕೂಲವಾಗಿದೆ. ಸಂಧಾನದ ಹೊಸ ಪರ್ವವು ಸೋಮವಾರದಿಂದ ಆರಂಭವಾಗಿದೆ. ಭಾರತದ ಪ್ರಮುಖ ರಾಜಕೀಯ ಪಕ್ಷಗಳು ತನ್ನ ತಮ್ಮ ನಿರ್ಧಾರಗಳನ್ನು ಬ್ರಿಟಿಷ್ ನಿಯೋಗದವರು ಸೂಚಿಸಿದ ಯೋಜನೆಯನ್ನು ಸಿದ್ಧಗೊಳಿಸಿದ್ದಾರೆ. ಅದನ್ನು ಉಭಯ ಪಕ್ಷಗಳ ಮುಂದೆ ಇಟ್ಟಿದ್ದಾರೆ.

ಭಾರತ ಮಧ್ಯದ ವಿಧಾನಸಭೆಗೆ ಕಾಂಗ್ರೆಸ್ ಎಂದಿಗೂ ಒಪ್ಪಲಾರದೆಂದು ಮೌಲಾನಾ ಆಜಾದರು ತಿಳಿಸಿದ್ದಾರೆ. ಪಾಕಿಸ್ತಾನದ ಬೇಡಿಕೆಯ ಒತ್ತಾಯದ ವಿಷಯದಲ್ಲಿ ಲೀಗು ತನ್ನ ಹಿಡಿಯನ್ನು ಸ್ವಲ್ಪವೂ ಸಡಿಲಿಸಿಲ್ಲವೆಂದು ಗೊತ್ತಾಗಿದೆ. ಆದುದರಿಂದ ನಿಯೋಗದವರ ಅಂತಿಮ ಸಲಹೆಯು ಅವರ ಸಾಧ್ಯವಾಗುವ ಸೂಚನೆಗಳಲ್ಲಿ ಸಿಮ್ಲಾದಲ್ಲಿ ಸಮ್ಮೇಳನದಲ್ಲಿಯೇ ಬಿಕ್ಕಟ್ಟು ತಲೆದೋರಿ ಒಡಂಬಡಿಕೆ ಕಠಿಣವಾಗುವ ಸೂಚನೆ ಉಂಟಾಗಿದೆ.

ಸಂಧಾನಗಳು ಸಫಲವಾಗಲು ಭಾರತದ ನಾಯಕರುಗಳೆಲ್ಲರೂ ತಮ್ಮ ಕೈಲಾದ ಸಹಕಾರವನ್ನೆಲ್ಲಾ ನೀಡಿದ್ದಾರೆ. ಹಿಂದೆ ಸರ್ ಸ್ಟಾಫರ್ಡ್ ಕ್ರಿಪ್ಸರವರೊಬ್ಬರೇ ಬಂದು ಸಂಧಾನ ನಡೆಸಿದಾಗ ಅದೊಂದು ಏಕಾಂಕ ನಾಟಕವಾಗಿ ಪರಿಣಮಿಸಿತು. ಈ ಸಾರಿ ಹಾಗೆ ಆಗಲಾರದೆಂದು ಎಲ್ಲರೂ ನಂಬಿರುವರು. ಆದರೂ ಸಹ ದೆಹಲಿಯಲ್ಲಿ ಒಂದು ತಿಂಗಳ ಕಾಲ ನಡೆದ ಪ್ರಯತ್ನಗಳಿಂದ ಏನೂ ಫಲವಾದಂತೆ ಕಾಣುವುದಿಲ್ಲ. ಸಂಧಾನ ಕ್ಷೇತ್ರವು ದೆಹಲಿಯಿಂದ ಸಿಮ್ಲಾಗೆ ವರ್ಗವಾಗಬೇಕಾಯಿತು. ಅಲ್ಲಿಯೂ ಸಹ ಆಶಾಭಾವನೆಗಳು ಮಲಿನವಾಗುತ್ತಿವೆ.

ಈಗ ಉಂಟಾಗಿರುವ ಬಿಕ್ಕಟ್ಟು ಹೊಸದೇನೂ ಅಲ್ಲ. ಹಿಂದಿನ ಈ ವರ್ತನೆಯು, ಇದೀ ಪ್ರಸಂಗಕ್ಕೆ ಗೊತ್ತಿದೆ. ಅಖಂಡ ಭಾರತದ ಬಗ್ಗೆ ಅದು ತನ್ನ ವಿರೋಧವನ್ನು ಸೂಚಿಸುತ್ತಲೇ ಇದೆ. ಅಕ್ಷರಶಃ ಕಾಂಗ್ರೆಸ್ಸಿನ ನೀತಿಯೂ ಸ್ಪಷ್ಟವಾಗಿಯೇ ಇದೆ. ಈ ಎರಡು ಪಕ್ಷಗಳೂ ಒಂದು ಕಡೆ ಕಲೆತು ಮಾತನಾಡಲು ಮುಂದೆ ಬಂದ ಮೇಲೆ ಒಂದು ದೊಡ್ಡ ರಾಜ್ಯ ಸಂಘಟನೆಯೊಂದು ಭಾವಿಸಿದವರೂ ಇದ್ದಾರೆ. ಆದರೆ ಹಿಂದಿನ ಅಂತರಂಗದ ಪ್ರೀತಿ ವಿಶ್ವಾಸಗಳಿಂದ ಒಪ್ಪಂದವಾಗುವ ಮಾರ್ಗಗಳಲ್ಲಿದೆ. ಈ ಸ್ಥಿತಿಯಲ್ಲಿ ಒಂದು ಕಡೆ ಕಲೆಯುವ ಇಂತಹ ಪ್ರಸಂಗಗಳಿಗೆ ಹೆಚ್ಚು ಬೆಲೆ ಇರುವುದಿಲ್ಲ.

ಬ್ರಿಟಿಷ್ ಸರ್ಕಾರದವರ ಕರ್ತವ್ಯವು ಬಹಳ ಕಠಿಣವಾಗಿರುತ್ತದೆ. ಅವರ ಭರವಸೆಗಳು ಸ್ಪಷ್ಟವಾಗಿವೆ. ಭಿನ್ನಾಭಿಪ್ರಾಯದ ನೆಪವನ್ನು ಮುಂದಿಟ್ಟು ಅವರು ಹೇಳುವಂತೆ ಭಾರತ ಸ್ವತಂತ್ರ್ಯಾಸ್ಥಾಪನೆಗೆ ತಾತ್ಕಾಲಿಕ ಸಂಸ್ಥೆಯ ಸ್ಥಾಪನೆಗೂ ಅವರು ಕಟ್ಟುಬಿದ್ದಿದ್ದಾರೆ. ಧೈರ್ಯ ಸಂಗಡಗಳಲ್ಲಿ ಒಪ್ಪಂದವಾದರೆ ಪರಸ್ಪರ ಸಮ್ಮತಿಯಿಂದಲೂ ತಪ್ಪಿದರೆ ಒತ್ತಾಯದಿಂದಲಾದರೂ ಈ ಕಾರ್ಯಕ್ರಮಗಳನ್ನು ಅವರು ಸಾಧಿಸಲೇಬೇಕು. ಇದರಿಂದ ವಿನಾ

ಪ್ರಜಾಪ್ರತಿನಿಧಿ ಸಭೆ ಉಪ ಚುನಾವಣೆ

ಶ್ರೀರಂಗಪಟ್ಟಣದ ಗ್ರಾಮಾಂತರ ಕ್ಷೇತ್ರದಿಂದ ಡಾ॥ ಸಿ. ಬಂದೀಗೌಡರು (ಕಾಂ) ಮತ್ತು ಶ್ರೀ ಬಿ. ಸಾಮಯ್ಯ (ಸ್ವ) ಚುನಾಯಿತರಾದರು.

ದೊಡ್ಡಬಳ್ಳಾಪುರದ ನಗರ ಕ್ಷೇತ್ರದಿಂದ ಶ್ರೀ ಮುನಿಸ್ವಾಮಯ್ಯ (ಸ್ವ) ಚುನಾಯಿತರಾದರು.

ಪರೀಕ್ಷೆ ಉತ್ತರಗಳನ್ನು ಕೋತಿ ಹರಿಯಿತು

ಬಂಡಿ ನೌಕರನೊಬ್ಬನು ಕಾನ್ಪುರದಿಂದ ಬಂದಿದ್ದ ಪಾರ್ಸಲ್ ಒಂದನ್ನು ಲಕ್ನೋ ನಗರದಲ್ಲಿ ಹಂಚಲು ಪ್ರಯತ್ನಿಸುತ್ತಿದ್ದಾಗ, ಕೋತಿಯೊಂದು ಹಾರಿಬಂದು ಅವನ ಬಳಿ ಇದ್ದ ಭಾಂಗಿಯನ್ನು ಹಾರಿಸಿಕೊಂಡು ಹೋಗಿ ಅದನ್ನು ಚಿಂದಿ ಚಿಂದಿಯಾಗಿ ಹರಿದು ಹಾಕಿತು. ಆ ಭಾಂಗಿಯಲ್ಲಿದ್ದುದು ಲಕ್ನೋ ಇಂಟರ್ ಮೀಡಿಯೇಟ್ ಪರೀಕ್ಷೆಯ ಉತ್ತರದ ಪತ್ರಿಕೆಗಳು.

ದೇಶೀ ಸಂಸ್ಥಾನಗಳು ಸಭೆಯಲ್ಲಿ ಉಂಟಾದರೆ ಅವುಗಳ ಯೋಗಕ್ಷೇಮ ಭಾರತೀಯರಿಗೆ ಸೇರಿದ್ದು. ಆದುದರಿಂದ ಬ್ರಿಟಿಷರು ಹೊರಟರೆ ಕೇಂದ್ರ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸುವುದಲ್ಲದೆ, ರಾಜ್ಯಾಂಗದ ರಚನೆಗೆ ವ್ಯವಸ್ಥೆಯನ್ನೂ ಮಾಡುವುದು ಅವರ ಆದ್ಯ ಕರ್ತವ್ಯವಾಗಿದೆ.

ಪ್ರಮುಖ ಕೈಗಾರಿಕೆಗಳೆಲ್ಲಾ ಸರ್ಕಾರದ ಅಧೀನ

ಹತ್ತಿ, ಸೆಣಬು, ಭಾರಿ ರಸಾಯನಿಕ, ಸಕ್ಕರೆ, ಆಲ್‌ಕೊಹಾಲ್, ಕಾಗದ, ಟಂಗಾಣ, ಗಾಜು, ಮತ್ತು ಹೈಡ್ರೋ ಎಲೆಕ್ಟ್ರಿಕ್ ಶಕ್ತಿ ಇವೇ ಮುಂತಾದ ಪ್ರಮುಖ ಕೈಗಾರಿಕೆಗಳನ್ನು ರಾಷ್ಟ್ರೀಯವನ್ನಾಗಿ ಮಾಡಲು ಅಸ್ಸಾಂ ಕಾಂಗ್ರೆಸ್ ಸರ್ಕಾರ ನಿರ್ಧರಿಸಿದೆ.

ತಾಲ್ಲೂಕು ಕಾಂಗ್ರೆಸ್ ಸಮಿತಿ

ಸ್ವಂ. ಸು.] ನಂಜನಗೂಡು ೬

ಈ ತಾಲ್ಲೂಕಿನ ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಸಭೆಯು ನಿನ್ನೆ ದಿನ ಸಾಯಂಕಾಲ ನಡೆದು, ಪ್ರಚಾರ ಕಾರ್ಯ, ರಾಷ್ಟ್ರ ಸೇವಾದಳದ ಸ್ಥಾಪನೆ, ಮತ್ತು ರಚನಾತ್ಮಕ ಕಾರ್ಯಕ್ರಮಗಳ ಮೇಲ್ವಿಚಾರಣೆಗಾಗಿ ಒಂದೊಂದು ಉಪಸಮಿತಿಯನ್ನು ರಚಿಸಲಾಯಿತು. ಗ್ರಾಮಗಳಲ್ಲಿ ರಾಜಕೀಯ ಜ್ಞಾನ ಪ್ರಚಾರವನ್ನುಂಟುಮಾಡಲು 'ಗ್ರಾಮವಾಣಿ' ಎಂಬ ವಾರ ಪತ್ರಿಕೆಯೊಂದನ್ನು ಹೊರಡಿಸಲು ಯೋಜನೆ ತಯಾರಿಸಬೇಕೆಂದು ನಿರ್ಧರಿಸಲಾಯಿತು. ದೈ॥ ಡಾ॥ ಶ್ರೀನಿವಾಸ ಶಾಸ್ತ್ರಿಗಳ ನಿಧನದ ಬಗ್ಗೆ ಸಂತಾಪ ಸೂಚಿಸಲಾಯಿತು.

Edited, printed and published by A. R. Nagarajan at the Sadhvi Press D Subbiah Road Mysore

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದ

ನೋಟಿಫಿಕೇಷನ್ —No R 4 593/1945 46

ತಾ॥ ೩-೬-೧೯೪೬

ಬ್ರೆಡ್ ರೇಷನಿಂಗ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಮೈಸೂರು ಸಿಟಿಯಲ್ಲಿ ಬ್ರೆಡ್ ಉಪಯೋಗಿಸಬೇಕೆಂದು ಅಪೇಕ್ಷಿಸುವ ಜನರೆಲ್ಲರೂ, (೧) ಬ್ರೆಡ್ಡನ್ನು ಊಟಕ್ಕೆ ಸಪ್ಲೈ ಮಾಡುವ ಹೋಟಲು ಮಾಲೀಕರು,ಮತ್ತು (೩) ರೈಸ್ ಸ್ಟೋರ್ಸ್ ಕ್ಲಾಪ್ ಕಾರ್ಡಿನಲ್ಲಿ ನಮೂದಿಸಿರುವರು ಸಹಾ ತಮಗೆ ಬೇಕಾಗುವ ಬ್ರೆಡ್ ಎಷ್ಟು ಎಂಬುದನ್ನು ಕೆಳಕಂಡ ನಮೂನೆಯಲ್ಲಿ Food Inspector ರವರ ಆಫೀಸಿಗೆ ಕಳಗೆ ನಮೂದಿಸಿರುವ ಫಾರಂನಲ್ಲಿ ಇದೇ ಮೇ ಮಾಹೆ ೧೦ ನೇ ತಾರೀಖು ಸಾಯಂಕಾಲ ೫ ಗಂಟೆ ಒಳಗೆ ಅರ್ಜಿ ಗುಜರಾಯಿಸಿಕೊಳ್ಳತಕ್ಕದ್ದು.

೨. ಅಪೇಕ್ಷಿಸುವ ಬ್ರೆಡ್‌ನ ಪರಿಮಾಣವನ್ನು ಇತರ ಬಿಟ್ಟು ರೇಷನ್ ಪದಾರ್ಥಗಳಲ್ಲಿ ಕೋತಾ ಮಾಡಲ್ಪಡುತ್ತೆ.

೩. ಬ್ರೆಡ್ ರೇಷನ್ ಕಾರ್ಡ್ ಅರ್ಜಿಯು ನೋಡಲ್ಪಟ್ಟು ಫುಡ್-ಇನ್ಸ್‌ಪೆಕ್ಟರ್‌ರವರ ಆಫೀಸಿನಲ್ಲಿ ಇದೇ ಮೇ ಮಾಹೆ ೧೫ ನೇ ತಾರೀಖಿನಿಂದ ಕೊಡಲಾಗುತ್ತೆ.

೪. ಈ ರೀತಿ ಕಾರ್ಡು ಇಲ್ಲದೆ ಬ್ರೆಡ್ ದೊರೆಯುತ್ತದಿಲ್ಲ.

೫. ಪ್ರತಿ ೮ ಔನ್ಸ್ ಬ್ರೆಡ್‌ಗೆ ೬ ಔನ್ಸ್ ರೇಷನ್ ಪರಿಮಾಣದ ಧಾನ್ಯವನ್ನು ಕಾರ್ಡಿನಲ್ಲಿ ಕೋತಾ ಮಾಡಿ ಕಾರ್ಡ್ ಕೊಡಲ್ಪಡುತ್ತೆ.

(ರುಜು) ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ.

ಅರ್ಜಿ ಫಾರಂ ನಮೂನೆ

೧. ಅರ್ಜಿದಾರನ ಹೆಸರು
೨. a) ಮನೆ ನಂಬರು
b) ಬೀದಿ
c) ಮೊಹಲ್ಲಾ
೩. ೧) ಮನೆ ರೇಷನ್ ಕಾರ್ಡ್ ನಂಬರು
೨) ಮನೆಯಲ್ಲಿರುವವರ ಸಂಖ್ಯೆ ದೊಡ್ಡವರು, ಚಿಕ್ಕವರು
೩) ಯಾವ ಡಿಪೋವಿಗೆ ಕಾರ್ಡ್ ಸೇರಿಯತ್ತೆ
೪. ಹಾಲಿ ಪ್ರತಿದಿನವೂ ಬೇಕಾಗುವ ಬ್ರೆಡ್‌ನ ಪರಿಮಾಣ
೫. ಯಾವ ಬ್ರೆಡ್ ಅಂಗಡಿಯಲ್ಲಿ ಕೊಳ್ಳಲು ಅಪೇಕ್ಷಿಸುತ್ತೀರಿ? ಸದರಿ ಅಂಗಡಿಯವರ ಹೆಸರು, ವಿಳಾಸ
೬. ಅರ್ಜಿದಾರರ ರುಜು

ನೈ ಭಾರತದ ಕ್ರಿಕೆಟ್ ಟೀಂನವರು ವೋರ್ಸ್ಟರ್‌ನೊಡನೆ ಮೊನ್ನೆ ಆಟ ಆರಂಭಿಸಿದರು. ಮೊದಲನೆ ದಿನ ಆಟ ಮುಗಿಯುವಾಗ ೧೧೬ ರನ್ನುಗಳ ಟಿಕೆಟು ಮಾಡಲಾಗಿದೆ.

ಪ್ರಸಿದ್ಧ ಪತ್ರಿಕೆ

ನಂಜನಗೂಡು ತಾಲ್ಲೂಕ್ ಚಿಕ್ಕ ಛತ್ರದ ಹೋಬಳಿ ಹದಿನಾರು ಗ್ರಾಮದ ಮುದ್ದಯ್ಯನ ಶಿವಪ್ಪನ ಮಗ ಮಾದಪ್ಪ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ನನಗೆ ಸುಮಾರು ೩೪ ವರ್ಷ ... ಸ್ವಾಮಿ ಮಾದಪ್ಪ ಎಂಬ ಹಿರೀ ಮಗ ಮತ್ತು ಸುಮಾರು ೧೩ ವರ್ಷ ವಯಸ್ಸಿನ ಶಿವಪ್ಪನೆಂಬ ಕಿರಿ ಮಗನೂ ಇದ್ದಾರೆ. ಇವರೂ ನಾನೂ ಒಂದೇ ಅವಿಭಕ್ತ ಕುಟುಂಬದಲ್ಲಿರುತ್ತೇವೆ. ನನಗೆ ಅಲ್ಲಿನ್ನು ... ರಾಜಿತ ಸ್ವತ್ತು, ಬಾಕಿ ಸ್ವಯಾರ್ಜಿತ ಸ್ವತ್ತು, ಇರುತ್ತವೆ. ನನ್ನ ಹಿರೀ ಮಗ ಮಾದಪ್ಪನು ಕೆಲವು ದುಷ್ಟರ ಪ್ರೇರಣೆ ... ಸ್ವತ್ತುಗಳನ್ನು ಆಧಾರ, ಭೋಗ್ಯ, ಕ್ರಯ ಮುಂತಾದ ಪರಭಾರೆಗಳನ್ನು ಮಾಡಲು ಪ್ರಾರಂಭ ಮಾಡಿರುತ್ತಾನೆ. ... ಬುದ್ಧಿ ಭ್ರಮಣೆಯುಳ್ಳವನಾಗಿರುತ್ತಾನೆ. ಇವನು ತನ್ನ ... ಯನ್ನೂ ನೋಡಿಕೊಳ್ಳಲು ಅಶಕ್ತನು. ಬುದ್ಧಿ ಶೂನ್ಯತೆಯಿಂದ ಇತರರು ಪ್ರೇರಣೆ ಮಾಡಿದರೆ ಅದಕ್ಕೆ ಒಳಗಾಗುವವನಾಗಿದ್ದಾನೆ. ಇವನಿಂದ ಪರಭಾರೆ ಮಾಡಿಸಿಕೊಳ್ಳುವವರು ಯಾವ ಪ್ರಯೋಜನವನ್ನೂ ಹೊಂದಲಾರರೆಂದು ಈ ಮೂಲಕ ಸಮಸ್ತ ಜನಗಳಿಗೂ ತಿಳುವಳಿಕೆ. ಈ ಸಾಧ್ವಿ ಪತ್ರಿಕೆಯು ನೂರಾರು ಪ್ರತಿಗಳು ಈ ಗ್ರಾಮದಲ್ಲೂ ... ದಲ್ಲೂ ಹಂಚುತ್ತೇನೆ.

"ಮಾದಪ್ಪನ ಎಡಗೈ ಹೆಬ್ಬೆಟ್ಟಿನ ಗುರುತು"

ನಿಮ್ಮ ಮೈ ಮೊಗಮಲ್ಲಿನಂತೆ ಹೊಳೆಯಬೇಕೆ? ನೀವು ಲಾವಣ್ಯ ಮೂರ್ತಿಗಳಾಗಬೇಕೆ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ.
ಮೈಸೂರು ಸ್ಯಾಂಡಲ್ ಸೋಪ್!
ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿ.
ಎಲ್ಲೆಲ್ಲೂ ದೊರೆಯುತ್ತದೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ
ಬೆಂಗಳೂರು.

ಫೋ। ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೮ ಕಾಸು

ಸಂಪುಟ ೪] ಬುಧವಾರ ೮—೫—೪೬ [ಸಂಚಿಕೆ ೨೦೬

ಮದ್ರಾಸ್ ಹೈಕೋರ್ಟ್ ಜಡ್ಜರ ಬಿಡುಗಡೆ

ಸಂತಾಪ ಸಭೆ

ಮೈಸೂರು ೮

[illegible]

ರೇಷನ್ ಹೋಟೆಲು ಬಂದು ; ಮಿಲ್ಲುಗಳ ವಶ

ಟಿ. ಎಸ್. ರಾಜಗೋಪಾಲ್‌ರವರ ಸಲಹೆ

[illegible]

ಶ್ರೀನಿವಾಸ ಕಲ್ಯಾಣ

[illegible]

ಜ॥ ಬಂಯರ್‍ಸ್‌ರವರ ಬಿಡುಗಡೆ

ಮದ್ರಾಸಿನಲ್ಲಿ ನಡೆದ ಗಲಭೆ ಸಂದರ್ಭದಲ್ಲಿ ...

[illegible]

ನಿಯೋಗವರ್ನ ಸ್ಥಾನದಿಂದ ಗಾಂಧಿಜಿಗೆ ಅಸಮಾಧಾನ

[illegible]

ಕ್ರಿಕೆಟ್ ಸಂಧ್ಯ

[illegible]

ಅರಬ್ಬರ ಅಸಾಧ್ಯ ಸಿದ್ಧತೆಗಳು

[illegible]

ಭಾರತ ಸರ್ಕಾರಕ್ಕೆ ಅಸಮಾಧಾನ

[illegible]

ಇಂಡೋನೇಷ್ಯದಿಂದ ಬ್ರಿಟಿಷ್ ಸೈನ್ಯ ವಾಪಸು

[illegible]

ಈಜಿಪ್ಟಿನಿಂದ ಬ್ರಿಟಿಷ್‌ಸೈನ್ಯ ವಾಪಸು

[illegible]

ಯಹೂದ್ಯರಿಗೆ ರಷ್ಯದ ಆಶ್ರಯ

[illegible]

ಹಿಂದೂ ಸಮ್ಮೇಳನ

[illegible]

ಸಾಧ್ವಿ

ತಾ॥ ೮-೫-೪೬ ಬುಧವಾರ

ಪ್ರತಿಬಂಧಕಗಳ ರದ್ದು

ನಮ್ಮ ಸಂಸ್ಥಾನದಲ್ಲಿ ಹಲವು ವ್ಯಕ್ತಿಗಳ ಮೇಲೆ ಇರುವ ನಿಷೇಧಾಜ್ಞೆಗಳನ್ನು ಸರ್ಕಾರದವರು ರದ್ದು ಮಾಡುವ ಆಲೋಚನೆಯನ್ನು ಮಾಡುತ್ತಿರುವರೆಂದು ವರದಿಯಾಗಿದೆ. ಇದು ನಿಜವಿದ್ದರೆ ಬಹಳ ಸಂತೋಷ. ಇಂದು ಉಚಿತವಾದ ಕಾರ್ಯವನ್ನು ಮಾಡದೇ ಇರುವುದಕ್ಕಿಂತಲೂ ಕಾಲಾತೀತವಾಗಿಯಾದರೂ ಮಾಡುವುದು ಲೇಸು, ಎಂಬ ನಾಣ್ಣುಡಿಯು ನೆನಪಿಗೆ ಬರುತ್ತದೆ. ಇದರ ಪೂರ್ವ ಸೂಚನೆಯೋ ಎಂಬಂತೆ ಸರ್ಕಾರದವರು ಇತ್ತೀಚೆಗೆ ಹಲ ಕೆಲವು ರಿಯಾಯಿತಿಗಳನ್ನು ಕೊಟ್ಟಿರುವಂತೆ ಗೊತ್ತಾಗಿದೆ.

ಸುಪ್ರಸಿದ್ಧ ಕಾರ್ಮಿಕ ಕೆಲಸಗಾರರಾದ ಶ್ರೀ ಎಂ. ಎ. ಶ್ರೀನಿವಾಸನ್ ರವರು ಸಂಸ್ಥಾನ ಪ್ರವೇಶಕ್ಕೆ ಇಂದಿನವರೆಗೆಂದು ಆಕ್ಷೇಪ ತನಗಳ ಹಿಂದೆ ಜಾರಿ ಮಾಡಿದ್ದ ಆಜ್ಞೆಯನ್ನು ಸ್ವಲ್ಪ ಸಡಲಿಸಿರುವಂತೆ ಗೃಹಕೃತ್ಯದ ನಿಮಿತ್ತ ದೊಡ್ಡ ಬಳ್ಳಾಪುರಕ್ಕೆ ಒಂದು ಪೋಗಲು ಅವರಿಗೆ ಒಂದು ವಾರ ಕಾಲ ಮಾತ್ರ ಅವಕಾಶ ಕೊಡಲಾಗಿದೆ. ಗಡೀಪಾರುಗಳ ಪ್ರಕರಣದಲ್ಲಿ ಶ್ರೀ ಶ್ರೀನಿವಾಸನ್ ರವರು ಒಂದು ಪ್ರಧಾನ ಸ್ಥಾನವನ್ನು ಪಡೆದಿರುತ್ತಾರೆ. ಹತ್ತಾರು ವರ್ಷ ಕಾಲ ಇವರು ಬೆಂಗಳೂರಿನಲ್ಲಿ ವಾಸವಾಗಿದ್ದು ಕಾರ್ಮಿಕರ ಹಿತಚಿಂತನೆಗಾಗಿ ವಿಶೇಷ ಶ್ರಮ ಪಟ್ಟಿದ್ದಾರೆ. ಅಂತಹವರು ಪರಕೀಯರೆಂದು ಹೇಳಿ ಅವರನ್ನು ಹೊರಗೆ ಬಲಾತ್ಕಾರವಾಗಿ ಕಳುಹಿಸಲಾಯಿತು. ಆ ಪ್ರತಿಬಂಧವನ್ನು ಉಲ್ಲಂಘಿಸಿ ಅವರು ಹಲವು ಸಲ ಬೆಂಗಳೂರಿಗೆ ಬಂದರು. ಅವರ ಪುನರ್ಬಂಧನ, ವಿಚಾರಣೆ, ಗಡೀಪಾರು, ಅನಂತರ ಕೋರ್ಟು ವಿಚಾರಣೆ, ಆ ಮೇಲೆ ಶಿಕ್ಷೆ ಇವುಗಳೆಲ್ಲವೂ ನಡೆದವು. ಗಳಿಗೆ ರ ಗಲಭೆಯ ಕಾಲದಲ್ಲಿ ಅವರು ರಾಜ ಬಂದಿಗಳಾಗಿದ್ದರು. ಬಿಡುಗಡೆಯಾದ ಮೇಲೆಯೂ ಅವರಿಗೆ ಸಂಸ್ಥಾನದಲ್ಲಿರಲು ಅವಕಾಶ ಕೊಡಲಿಲ್ಲ. ತನ್ನ ಹೆಂಡತಿ ಬಂಧು ಮಿತ್ರರನ್ನು, ಸಂಸಾರವನ್ನು ಬೆಂಗಳೂರಿನಲ್ಲೇ ಬಿಟ್ಟು ಅಂತಹ ಪರಿಸ್ಥಿತಿಯಾಗಿ ಹಿಂದೂ ಪುರ ಸಮೀಪದ ಕಡೆ ಇರಬೇಕಾಯಿತು. ಗೃಹಕೃತ್ಯದ ಮೇಲೆ ಒಂದೆರಡು ದಿನ ಬೆಂಗಳೂರಿಗೆ ಬಂದು ಹೋಗಲು ಅವಕಾಶ ಬೇಕೆಂದು ಅವರು ಅನೇಕ ಸಲ ಮಾಡಿಕೊಂಡ ಪ್ರಾರ್ಥನೆಯು ತಿರಸ್ಕರಿಸಲ್ಪಟ್ಟಿತು. ಈಗ ಅವರಿಗೆ ಒಂದು ವಾರ ಕಾಲವಾದರೂ ಅವಕಾಶ ಕೊಟ್ಟಿರುವುದು ಶುಭ ಸೂಚನೆಯೆಂದು ನಾವು ಭಾವಿಸುತ್ತೇವೆ.

ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರು ಸಂಸ್ಥಾನದೊಳಕ್ಕೆ ಬರಕೂಡದೆಂಬ ಆಜ್ಞೆಯೊಂದು ಇರುವ ಕಾರಣದಿಂದ ಜಾರಿಯಲ್ಲಿದೆ. ಆದರೆ ಅವರು ತಮ್ಮ ಸ್ವಂತ ಸದ್ಯಕ್ಕಾದ ಮಂಗಳೂರಿನಿಂದ ಉತ್ತರ ಕರ್ನಾಟಕ ಪ್ರಾಂತಕ್ಕೆ ಹೋಗಲು ಮೈಸೂರಿನ ಮಾರ್ಗವಾಗಿ ಪ್ರಯಾಣ ಮಾಡಬೇಕು. ಈಗ ಅವರಿಗೂ ಸಹ ಬೆಂಗಳೂರಿಗೆ ಬರಲು ಅವಕಾಶ ದೊರೆತಿರುವುದು ಸಂತೋಷದ ವಿಷಯ. ಈ ಇವರಲ್ಲದೆ ಶ್ರೀಗಳಾದ ಪ್ರಭುದೇವ್, ವಿ.

೭೦೦೦ ಕಮ್ಯೂನಿಸ್ಟರ ಮರಣ

ಮಂಚೂರಿಯಾವನ್ನು ರಷ್ಯದ ಸೈನ್ಯಗಳು ತ್ಯಜಿಸಿದ ಕೂಡಲೇ ಆ ಪ್ರದೇಶಗಳನ್ನು ಕಮ್ಯೂನಿಸ್ಟ್ ಪಡೆಗಳು ಆಕ್ರಮಿಸಿದ್ದವು. ಈಗ ರಾಷ್ಟ್ರೀಯ ಸೈನಿಕರು ಮುಕ್ಡನ್ನಿಗೆ ೪೦ ಮೈಲಿ ದೂರದಲ್ಲಿರುವ ಪೆನ್ಸಿ ಎಂಬ ಊರನ್ನು ಮುತ್ತಿ ಕಾಳಗ ನಡೆಸಿ ಅದನ್ನು ಆಕ್ರಮಿಸಿದ್ದಾರೆ. ಈ ಕಾಳಗದಲ್ಲಿ ೭ ಸಾವಿರ ಕಮ್ಯೂನಿಸ್ಟರು ಸತ್ತರೆಂದು ವರದಿಯಾಗಿದೆ.

ಣ್ಣಯ್ಯ, ಎಂ. ಎಚ್. ಸಾ, ಮುಂತಾದವರುಗಳ ಮೇಲೂ ಗಡೀಪಾರು ಆಜ್ಞೆಗಳು ಇನ್ನೂ ಜಾರಿಯಲ್ಲಿವೆ. ಚಿನ್ನದ ಗಣಿ ಪ್ರದೇಶದಿಂದ ಇತ್ತೀಚೆಗೆ ಕೆಲವರನ್ನು ಹೊರಗೆ ಹಾಕಲಾಗಿದೆ. ಅಲ್ಲದೆ ಗಣಿ ಪ್ರದೇಶಕ್ಕೆ ಬರದಂತೆ ಇನ್ನೂ ಅನೇಕರ ಮೇಲೆ ನಿರ್ಬಂಧವಿದೆ. ಈ ಆಜ್ಞೆಗಳು ಇನ್ನು ಮುಂದೆ ಒಂದು ಕ್ಷಣವೂ ಇರುವುದು ಉಚಿತವಲ್ಲ.

ಬ್ರಿಟಿಷ್ ಇಂಡಿಯಾದಲ್ಲಿ ಇಂತಹ ಪ್ರತಿಬಂಧಕಗಳನ್ನೆಲ್ಲಾ ರದ್ದು ಮಾಡಲಾಗಿದೆ. ಮರಣ ದಂಡನೆಗೆ ಗುರಿಯಾಗಿದ್ದವರು ಕೂಡ ಬಿಡುಗಡೆ ಹೊಂದುತ್ತಿದ್ದಾರೆ. ಹೀಗಿರುವಲ್ಲಿ ಸಣ್ಣಪುಟ್ಟ ಪ್ರತಿಬಂಧಕಗಳನ್ನು ನಮ್ಮ ಸರ್ಕಾರದವರು ಸಂಪೂರ್ಣವಾಗಿ ರದ್ದು ಮಾಡಲು ಸ್ವಲ್ಪವೂ ಹಿಂಜರಿಯಬಾರದು.

ಆಯುರ್ವೇದ ಮತ್ತು ಯುನಾನಿ ಪರೀಕ್ಷೆ

1946ರ ಎಲ್. ಎ. ಎಂ. ಎಸ್. ಮತ್ತು ಎಲ್. ಯು. ಎಂ. ಎಸ್. ಪರೀಕ್ಷೆಗಳಲ್ಲಿ ಈ ಕೆಳಗೆ ಕಂಡ ರಿಜಿಸ್ಟರ್ ನಂಬರಿನವರು ಉತ್ತೀರ್ಣರಾಗಿದ್ದಾರೆ.

ಆಯುರ್ವೇದದ ಭಾಗ

ಮೊದಲನೇ ವರ್ಷ :-1, 2, 3, 5, 6, 7, 9, 10, ಮತ್ತು 11. ಎರಡನೇ ವರ್ಷ- 13, 14, 15, 17, 18, 19 ಮತ್ತು 20 ಮೂರನೇ ವರ್ಷ-22, 23, 24, 25, 27 28, 29, 30, 31 ಮತ್ತು 34. 26ನೇ ನಂ. ಫಲಿತಾಂಶ ತಡೆಯಲಾಗಿದೆ. ನಾಲ್ಕನೇ ವರ್ಷ-34, 35, 36, 37, 39, 40, 41, 42 ಮತ್ತು 43.

ಯುನಾನಿ ಭಾಗ

ಮೊದಲನೇ ವರ್ಷ- 14 ಮತ್ತು 48
ಎರಡನೇ ವರ್ಷ-51, 52 ಮತ್ತು 53
ಮೂರನೇ ವರ್ಷ-54, 55 ಮತ್ತು 56
ನಾಲ್ಕನೇ ವರ್ಷ-57 ಮತ್ತು 58.

ಕೇಂದ್ರ ಸರ್ಕಾರದಲ್ಲಿ ಸೇರಲು ಯಾವುದಾದರೂ ಪ್ರಾಂತ್ಯಗಳು ಒಪ್ಪದಿದ್ದರೆ ಆ ಪ್ರಾಂತಗಳನ್ನು ಬಿಟ್ಟು ಒಪ್ಪತಕ್ಕ ಪ್ರಾಂತ್ಯಗಳನ್ನೇ ಒಂದುಗೂಡಿಸಿ ರಾಷ್ಟ್ರೀಯ ಸರ್ಕಾರವನ್ನು ರಚಿಸಬೇಕೆಂಬ ಹೊಸ ಸಲಹೆಯನ್ನು ಶ್ರೀ ಸಿ. ರಾಜಗೋಪಾಲಾಚಾರ್ಯರವರು ಮುಂದಿಟ್ಟಿದ್ದಾರೆ.

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದ

ನೋಟಿಫಿಕೇಷನ್ —No R 4—623/1945 46

ತಾ॥ ೬-೫-೧೯೪೬

ಬ್ರೆಡ್ ರೇಷನಿಂಗ್

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಮೈಸೂರು ಸಿಟಿಯಲ್ಲಿ ಬ್ರೆಡ್ ಉಪಯೋಗಿಸಬೇಕೆಂದು ಅಪೇಕ್ಷಿಸುವ ಜನರೆಲ್ಲರೂ, (೨) ಬ್ರೆಡ್ಡನ್ನು ಊಟಕ್ಕೆ ಸಪ್ಲೈ ಮಾಡುವ ಹೋಟೆಲು ಮಾಲೀಕರು, ಮತ್ತು (೩) ವೈಲ್ಡ್ ಸ್ಟೇರ್ ಫ್ಲೋರ್ ಫಾರಂನಲ್ಲಿ ಮಾರತಕ್ಕವರು ಸಹಾ ತಮಗೆ ಬೇಕಾಗುವ ಬ್ರೆಡ್ ಎಷ್ಟು ಎಂಬುದನ್ನು ಕುಂಬಾರ ಕೊಪ್ಪಲಿನಲ್ಲಿರುವ Food Inspector ರವರ ಆಫೀಸಿಗೆ ಕೆಳಗೆ ನಮೂದಿಸಿರುವ ಫಾರಂನಲ್ಲಿ ಇದೇ ಮೇ ಮಾಹೆ ೧೦ ನೇ ತಾರೀಖು ಸಾಯಂಕಾಲ ೫ ಗಂಟೆ ಒಳಗೆ ಅರ್ಜಿ ಗುಜರಾಯಿಸಿಕೊಳ್ಳತಕ್ಕದ್ದು.

೨. ಅಪೇಕ್ಷಿಸುವ ಬ್ರೆಡ್‌ನ ಪರಿಮಾಣವನ್ನು ಇತರ ಒಟ್ಟು ರೇಷನ್ ಪದಾರ್ಥಗಳಲ್ಲಿ ವಜಾ ಮಾಡಲ್ಪಡುತ್ತೆ.

೩. ಬ್ರೆಡ್ ರೇಷನ್ ಕಾರ್ಡು ಅಂತ್ಯಾಯ ವೊಪಲ್ಲಾ ಫುಡ್-ಇನ್ಸ್‌ಪೆಕ್ಟರ್‌ರವರ ಆಫೀಸಿನಲ್ಲಿ ಇದೇ ಮೇ ಮಾಹೆ ೧೫ ನೇ ತಾರೀಖಿನಿಂದ ಕೊಡಲಾಗುತ್ತೆ.

೪. ಈ ರೀತಿ ಕಾರ್ಡು ಇಲ್ಲದೆ ಬ್ರೆಡ್ ದೊರೆಯುವುದಿಲ್ಲ.

೫. ಪ್ರತಿ ೮ ಔನ್ಸು ಬ್ರೆಡ್‌ಗೆ ೬ ½ ಔನ್ಸ್ ರೇಷನ್ ಪರಿಮಾಣದ ಧಾನ್ಯವನ್ನು ಕಾರ್ಡಿನಲ್ಲಿ ವಜಾ ಮಾಡಿ ಕಾರ್ಡು ಕೊಡಲ್ಪಡುತ್ತೆ.

(ರುಜು) ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ.

ಅರ್ಜಿ ಫಾರಂ ನಮೂನೆ

೧. ಅರ್ಜಿದಾರನ ಹೆಸರು
೨. a) ಮನೆ ನಂಬರು
b) ಬೀದಿ
c) ಮೊಹಲ್ಲಾ
೩. (೧) ಮನೆ ರೇಷನ್ ಕಾರ್ಡು ನಂಬರು
(೨) ಮನೆಯಲ್ಲಿರುವವರ ಸಂಖ್ಯೆ
ದೊಡ್ಡವರು, ಚಿಕ್ಕವರು
(೩) ಯಾವ ಡಿಪೋದಿಗೆ ಕಾರ್ಡು ಸೇರಿರುತ್ತೆ
೪. ದಿನಾ ಪ್ರತಿದಿನವೂ ಬೇಕಾಗುವ ಬ್ರೆಡ್‌ನ ಪರಿಮಾಣ
೫. ಯಾವ ಪ್ರೆಸ್ ಅಂಗಡಿಯಲ್ಲಿ ಕೊಳ್ಳಲು ಅಪೇಕ್ಷಿಸುತ್ತೀರಿ? ಸದರಿ ಅಂಗಡಿಯವರ ಹೆಸರು, ವಿಳಾಸ
೬. ಅರ್ಜಿದಾರನ ರುಜು

....

ವಿವಿಧ ವಾರ್ತೆಗಳು

† ಯುದ್ಧಕ್ಕೆ ಮುಂಚೆ ವ್ಯಾಪ... ಕೊಡಲಾಗಿದ್ದ ಅಧಿಕಾರಿಗಳನ್ನೆ... ಲೂ ಕೊಡದಿದ್ದಲ್ಲಿ ಅವರು ರಾಜೀ... ಕೊಡಬೇಕೆಂದು ಬರ್ಮದಲ್ಲಿ ನಡೆ... ಬಳ್ ಸಂಗಡದ ಸಮ್ಮೇಳನದಲ್ಲಿ ತೀ... ಮಾನಾಯಿತು

§ ಇನ್ನು ೫೫ ವರ್ಷಗಳಲ್ಲಿ ಅಮೇ... ಇನ್ನೊಂದು ಭಾರಿ ಯುದ್ಧದಲ್ಲಿ ಭಾಗ... ಬೇಕಾಗುವುದೆಂದು ಅಲ್ಲಿ ನಡೆದ ಚ... ಅಭಿಪ್ರಾಯ ನಿರ್ಣಯದ ಸಂಸ್ಥೆ... ಕೊಂಡ ಅಭಿಪ್ರಾಯದ ಎಣಿಕೆಯಿಂ... ತ್ತಾಗುವುದು.

§ ಹೆಬ್ಬಾಳದಲ್ಲಿರುವ ವ್ಯವಸಾಯ... ಲೆಯನ್ನು ಕಾಲೇಜಾಗಿ ಪರಿವರ್ತಿಸ... ಆಲೋಚನೆ ನಡೆಯುತ್ತಿದೆ. ಮುಂದಿ... ಗಳಿಂದ ಈ ಕಾಲೇಜು ಆರಂಭವಾಗು... ರೀಕ್ಷಣೆ ಇದೆ.

* ಇನ್ನು ಮುಂದೆ ಬೊಂಬಾಯಿನ... ಕೆಗಳಲ್ಲಿ ಕೋಮುವಾರು ಗಲಭೆಗ... ಗಳನ್ನು ಪ್ರಕಟಿಸುವುದಿಲ್ಲವೆಂದು ಪ... ಸಂಪಾದಕರುಗಳು ನಿರ್ಧರಿಸಿದ್ದಾರೆ

§ ಅಮೇರಿಕದ ಮೇಲೆ ಬಹಳ ದ... ದ ದೊಡ್ಡ ಶಸ್ತ್ರಾಸ್ತ್ರಗಳನ್ನು ಪ್ರಯೋ... ಸರ್ ನಾಶವಾದ ಬಳಿಕ ... ಯೆಂದೂ, ಇಂತಹ ಸಾಮಗ್ರಿಗ... ಲ್ಲಿ ಬೇಕಾದಷ್ಟು ಸೇರಿಸಲ್ಪಟ್ಟಿವೆ... ಇವುಗಳನ್ನು ತಡೆಗಟ್ಟಲು ಸದಾ ಸ... ಅಶ್ಯಕವೆಂದೂ ಮಿತ್ರ ಸೇನಾ ... ಜೋನ್ಸ್ ಎಚ್ಚರಿಕೆ ಇತ್ತಿದ್ದಾರೆ

§ ತಮ್ಮ ತಾಯಿಯವರ ಶ್ರಾದ್ಧ... ಗಾಗಿ ಶ್ರೀಮತಿ ಕಮಲಾದೇವಿ ಚ... ಪಾಧ್ಯಾಯರವರು ಬೆಂಗಳೂರಿಗೆ ಬ... ನರು.

*ಇಂಡಿಯಾ ಸರ್ಕಾರದವರು ಮ... ಗೆ ೫೦ ಲಕ್ಷ ಮತ್ತು ಮೈಸೂರಿಗೆ ... ಟನ್ ಒದಗಿಸಿದ ಅಲೂಗೆಡ್ಡೆ ... ರಾಜು ಮಾಡುವರೆಂದು ಗೊತ್ತಾಗಿ...

ಉತ್ತಮ ವರ್ಗದ

ಅರಗಿನ ಪದಾರ್ಥಗ...

ಸಿದ್ಧನಿಧಿ ನಗರದ ಮೊಹರಿನ ಅ...
ಗುಂಡಿ ಅರಗು, ಹೊಂಬಣ್ಣದ
ವ್ಯಾರ್ನಿಷ್ ಸ್ಪಿರಿಟ್ ಮತ್ತು ಬ್ಲೀಚ್
ಮಾಡಿದ ಅರಗು, ಬಣ್ಣರಹಿತ ಸಾ...
ಫ್ರೆಂಚ್ ಪಾಲಿಶ್‌ಗಳು, ಬಣ್ಣದ
ಪಾಲಿಶ್‌ಗಳು ಮತ್ತು ಇತರ
ಅರಗಿನ ಪದಾರ್ಥಗಳು

ವಿವರಗಳಿಗಾಗಿ ಬರೆಯಿರಿ:—

ಸರಕಾರದ ಅರಗು ಮ...
ಬಣ್ಣದ ಕಾರ್ಖಾನೆ
ಕೂದಿಗಾ, : : ಮೈಸೂ...

Edited, printed and publish...
A. R. Nagarajan at the Sadhvi P...
D Subbiah Road Mysore

ಫೋನ್ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಗುರುವಾರ ೯—೫—೪೭ [ಸಂಚಿಕೆ ೨೦೮

— ಅಗತ್ಯ ಬಿದ್ದರೆ — ಮತ್ತೊಮ್ಮೆ ಹೋರಾಟ

ಕಾಂಗ್ರೆಸ್ ಪ್ರತಿನಿಧಿಗಳು

ಅಖಿಲ ಭಾರತ ಕಾಂಗ್ರೆಸ್ ಮಹಾಧಿವೇಶನಕ್ಕೆ ಮೈಸೂರು ಸಂಸ್ಥಾನದಿಂದ ಈ ಕೆಳಗೆ ಕಂಡ ಮಹನೀಯರುಗಳು ಪ್ರತಿನಿಧಿಗಳಾಗಿ ಆರಿಸಿ ಬಂದಿದ್ದಾರೆ. ಶ್ರೀಗಳಾದ ಕೆ ಟಿ. ಭಾಷ್ಯಂ, ಹೆ. ಸಿ ರೆಡ್ಡಿ, ಆರ್. ದೇವರ ಕೊಂಡಪ್ಪ, ಕೆ ಸುಬ್ಬರಾವ್ (ಬೆಂಗಳೂರು) ಎಸ್. ಸಿದ್ದಲಿಂಗಪ್ಪ, ಟಿ. ಎಂ ಗುರುಸಿದ್ದಪ್ಪ, ಸಿ ಚಿನ್ನರೆಡ್ಡಿ (ಚಿತ್ರದುರ್ಗ) ಟಿ. ಸಿ ರುದ್ರಪ್ಪ (ಕಡೂರು) ಕೆ. ಆರ್. ಮಾಧವರಾವ್, ಕೆ ಚ. ವಡೆಯರ್, ಟಿ ಎಸ್. ಶಿವಪ್ಪ (ಶಿವಮೊಗ್ಗ) ಎ. ಶಂಕರಸಿಂಗ್ (ಹಾಸನ) ಹೆ ಎಂ. ಮಾದಲಿಂಗಗೌಡ (ತುಮಕೂರು) ಎಂ ಎಲ್. ನಂಜರಾಜೇಅರಸು, ಎಚ್. ಲಿಂಗಣ್ಣ, ಎ ರಾಮಣ್ಣ, ಎ ಶಿವಣ್ಣ (ಮೈಸೂರು) ಹೆಚ್. ಕೆ ವೀರಣ್ಣಗೌಡ (ಮಂಡ್ಯ)

ಅವಶ್ಯ ಬಿದ್ದರೆ ಮತ್ತೊಮ್ಮೆ ಹೋರಾಟ

ಭಾರತೀಯರಲ್ಲೇ ಒಪ್ಪಂದವಾಗಲೀ ಬಿಡಲಿ, ಅಧಿಕಾರ ವರ್ಗಾಯಿಸಲು ಸರಕಾರ ಸಿದ್ಧವಿದೆ ಎಂದು ಘೋಷಿಸಿದ ಬ್ರಿ|| ಪ್ರಧಾನಿ ಮಿ|| ಅಟ್ಲಿಯವರ ಆಶೀರ್ವಾದದಿಂದ ಈ ಬ್ರಿ|| ನಿಯೋಗ ಭಾರತಕ್ಕೆ ಬಂದಿದೆ. ಆಚಾರವಾಗಿ ಅವರಲ್ಲಿ ಅಪನಂಬಿಕೆ ಸೂಚಿಸುವುದು, ಗೌರವವಲ್ಲ. ಬ್ರಿಟಿಷರು ತಮ್ಮ ಕರ್ತವ್ಯವನ್ನು ನಿರ್ವಹಿಸದಿದ್ದಲ್ಲಿ ಕಳೆದ ೨೫ ವರ್ಷಗಳಿಂದಲೂ ಪ್ರಭಾವ ಶಾಲಿಯಾದ ಸಾಮ್ರಾಜ್ಯಶಾಹಿಯ ಮೇಲೆ ಅಹಿಂಸಾತ್ಮಕ ಹೋರಾಟ ಹೂಡಿರುವವರು ನಿರಾಶೆಗೊಂಡು ಕೈಗಟ್ಟಿ ಕೂಡಿರುವರೇನು? ಎಂದು ಗಾಂಧೀಜಿ ಮೊನ್ನೆ ಸಂಜೆ ಪ್ರಾರ್ಥನಾ ಸಭೆಯಲ್ಲಿ ತಿಳಿಸಿದರು. ನಮಗೆ ದೇವರಲ್ಲೂ ನಮ್ಮ ಶಕ್ತಿಯಲ್ಲೂ ಸಂಪೂರ್ಣ ವಿಶ್ವಾಸವಿದೆ. ನಾವು ಕಳೆದ ೨೫ ವರ್ಷಗಳಿಂದ ಬ್ರಿಟಿಷರ ಮೇಲೆ ಹೋರಾಟ ನಡೆಸಿಲ್ಲವೇ? ಅವಶ್ಯ ಬಿದ್ದರೆ ನಾವು ಹೋರಾಡುವುದಿಲ್ಲವೇ? ಎಂದ ಅವರು ಮತ್ತೊಂದು ಹೋರಾಟವಾಗಬಹುದೆಂದು ಗಾಂಧೀಜಿ ಎಚ್ಚರಿಸಿದ್ದಾರೆ

* ಪ್ರಯಾಣ ಮಾಡುವ ಮಹಿಳೆಯರಿಗೆ ಟಿಕೇಟು ಕೊಡುವುದು ಮತ್ತು ಸಾಮಾನುಗಳನ್ನು ಒಗ್ಗೇಜು ಮಾಡಿಸುವುದೇ ಮುಂತಾದ ಕೆಲಸಗಳಲ್ಲಿ ಸಹಾಯ ಮಾಡಲು ಸೌತ್ ಇಂಡಿಯನ್ ರೈಲ್ವೆಯವರು ಮಹಿಳಾ ಕಾನ್ಸ್‌ಟೇಬಲ್‌ಗಳನ್ನು ನೇಮಕ ಮಾಡಲಿದ್ದಾರೆ.

ಪಬ್ಲಿಸಿಟಿ ಆಫೀಸರಾಗಿ ಹೊರಗಿನವರ ಆಮದೇ?

ಸ್ವಂ. ಸು. ಪ್ರೋ] ಬೆಂಗಳೂರು ೯

ಮೈಸೂರು ಸರ್ಕಾರದ ಪಬ್ಲಿಸಿಟಿ ಆಫೀಸರಾದ ಶ್ರೀ ನಂಜರಾಜಯ್ಯಂಗಾರರವರನ್ನು ಆಹಾರದ ಅಸಿಸ್ಟೆಂಟ್ ಡೈರೆಕ್ಟರ್‌ಗಳಾಗಿ ನೇಮಕ ಮಾಡಲ್ಪಟ್ಟಿದ್ದಾರೆ. ಸದ್ಯಕ್ಕೆ ಶ್ರೀ ಜಿ ವಿ ರಾಜರತ್ನಂರವರು ಆಸ್ಥಾನಕ್ಕೆ ನೇಮಿಸಲ್ಪಟ್ಟಿದ್ದಾರೆ. ಹೊರಗಿನ ದ ಸುದ್ದಿ ಒಬ್ಬ ಪ್ರಮುಖರನ್ನು ಶಾಶ್ವತ ಪಬ್ಲಿಸಿಟಿ ಆಫೀಸರನ್ನಾಗಿ ನೇಮಿಸುವ ಆಲೋಚನೆ ನಡೆದಿದೆಯೆಂದು ಅಧಿಕಾರಿ ವಲಯದಲ್ಲಿ ಕೇಳಬರುತ್ತಿದೆ.

ಪುರಸಭಾ ಕಾಂಗ್ರೆಸ್ ಪಕ್ಷ

ಬೆಂಗಳೂರು ಪೌರಸಭೆಯ ಕಾಂಗ್ರೆಸ್ ಪಕ್ಷದ ಸಭೆ ನಿನ್ನೆ ದಿನ ನಡೆದು ಸದ್ಯದಲ್ಲೇ ನಡೆಯುವ ಅಧ್ಯಕ್ಷ ಚುನಾವಣೆಯಲ್ಲಿ ಕಾಂಗ್ರೆಸ್ ಅಭ್ಯರ್ಥಿಯನ್ನು ನಿಲ್ಲಿಸಬಾರದೆಂದೂ, ಬೆಂಬಲ ಕೊಡಬೇಕೆಂದೂ ನಿರ್ಧರಿಸಲ್ಪಟ್ಟಿದೆ ಎಂದು ತಿಳಿದುಬಂದಿದೆ. ಅಧ್ಯಕ್ಷ ಚುನಾವಣಾ ಸಭೆ ನಡೆದ ಕೂಡಲೇ ಉಪಾಧ್ಯಕ್ಷ ಶ್ರೀ ರಾಮಚಂದ್ರಗುಪ್ತರೂ ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸುವರು.

ಹೋಟೆಲು ಪರ್ಮಿಟ್ ಅರ್ಜಿ

ಕಳೆದ ತಿಂಗಳ ೭ನೇ ತಾ ಹೊರಬಿದ್ದ ಹೋಟೆಲು ಪರ್ಮಿಟ್ ಆಜ್ಞೆಯ ಬಗ್ಗೆ ಸ್ಪಷ್ಟ ವಿವರವಾದ ಮತ್ತೊಂದು ಪ್ರಕಟಣೆ ಹೊರಬಿದ್ದಿದೆ. ಅದರಲ್ಲಿ ಊಟದ ಪ್ರಮಾಣ ಮತ್ತು, ಗುಣಗಳನ್ನು ವಿವರಿಸಲಾಗಿದೆ. ಒಂದು ಊಟ ೬ ಔನ್ಸಿನ ಪದಾರ್ಥಗಳ ಕೂಡಿದೆಂದು ತಿಳಿಸಲಾಗಿದೆ. ಹಲವು ಊಟದ ಹೋಟೆಲು ಬೆಳಗ್ಗೆ ೧೧ರಿಂದ ೨ರವರೆಗೂ ಸಾಯಂಕಾಲ ೭ರಿಂದ ೧೦ರವರೆಗೂ ತೆರೆದಿರಬೇಕೆಂದು ನಮೂದಿಸಲಾಗಿದೆ

ಕೇಂದ್ರ ಸರ್ಕಾರದ ಆರೋಗ್ಯ ಕಮೀಷನರ ಆಗಮನ

ಇದೇ ೧೭ ನೇ ತಾ|| ಕೇಂದ್ರ ಸರ್ಕಾರದ ಆರೋಗ್ಯ ಕಮೀಷನರು ಬೆಂಗಳೂರಿಗೆ ಬರುವರು. ಸಂಸ್ಥಾನದಲ್ಲಿ ಆಹಾರಾಭಾವದಿಂದ ಜನಗಳಿಗೆ ಪ್ರಾಪ್ತವಾಗಿರಬಹುದಾದ ರೋಗ ರುಜಿನಾದಿಗಳ ಬಗ್ಗೆ ಏನೇನು ಎಚ್ಚರಿಕೆ ಕಾರ್ಯಕ್ರಮಗಳನ್ನು ಇಲ್ಲಿ ತೆಗೆದುಕೊಳ್ಳಲಾಗುತ್ತಿದೆ ಎಂಬ ಬಗ್ಗೆ ಚರ್ಚೆ ನಡೆಸುವುದೇ ಇವರ ಆಗಮನದ ಉದ್ದೇಶವೆಂದು ತಿಳಿದು ಬಂದಿದೆ.

ಭಾರತಕ್ಕೆ ಸ್ವಿಟ್ಜರ್‌ಲೆಂಡಿನ ರಾಜ್ಯಾಂಗವೇ?

ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಮೊನ್ನೆಯ ದಿನ ಸಿಮ್ಲಾದಲ್ಲಿ ನಡೆದು ಸ್ವಿಟ್ಜರ್‌ಲೆಂಡಿನಲ್ಲಿನ ರಾಜ್ಯಾಂಗವನ್ನು ಭಾರತಕ್ಕೆ ಅನ್ವಯಿಸಲು ಸಾಧ್ಯವೇ ಎಂಬುದನ್ನು ಪರಿಶೀಲಿಸಿದರು.

ಕ್ರಿಕೆಟ್ ಪಂದ್ಯ

ವರ್ಸೆಸ್ಟರ್ ಮೇಲೆ ಭಾರತೀಯ ಕ್ರಿಕೆಟ್ ಟೀಂನವರು ವಿದೇಶದಲ್ಲಿ ತಮ್ಮ ಮೊದಲನೇ ಪಂದ್ಯದಲ್ಲಿ ಕೇವಲ ೧೧ ರನ್ನುಗಳಿಂದ ಪರಾಜಿತರಾದರು. ವರ್ಸೆಸ್ಟರ್ ೧೯೧ ಮತ್ತು ೨೮೪ ಭಾರತ ೧೯೨ ಮತ್ತು ೨೭೨ ಭಾರತದವರು ನಿನ್ನೆಯಿಂದ ಆಕ್ಸ್‌ಫರ್ಡ್ ಟೀಂನವರ ಮೇಲೆ ಎರಡನೇ ಪಂದ್ಯವನ್ನು ಆರಂಭಿಸಿದ್ದಾರೆ

ಸಿಮ್ಲಾ ಸಮ್ಮೇಳನ ಮತ್ತೆ ಮುಂದುವರಿಯಿತು

ಸಿಮ್ಲಾ ಸಮ್ಮೇಳನ ನಿನ್ನೆ ಮಧ್ಯಾಹ್ನ ೩ ಘಂಟೆಗೆ ಸೇರಬೇಕಾಗಿದ್ದುದು ಮತ್ತೆ ಈ ದಿನ ೩ ಘಂಟೆಗೆ ಮುಂದುವರಿದಿರುವುದಾಗಿ ಸುದ್ದಿ ಬಂದಿದೆ. ಬ್ರಿ|| ನಿಯೋಗದವರು ಹೊಸ ಯೋಜನೆಯೊಂದನ್ನು ಕಾಂಗ್ರೆಸ್ ಮತ್ತು ಲೀಗ್ ಪ್ರತಿನಿಧಿಗಳಿಗೆ ಕೊಟ್ಟಿರುವುದೇ ಇದಕ್ಕೆ ಕಾರಣವೆಂದು ಹೇಳಲಾಗಿದೆ.

ಉದಾರ ದಾನ

ಕಂಚಿಟಿಗರ ಶ್ರೀರಾಮ ಮಂದಿರದ ಕಾರ್ಯದರ್ಶಿ ಶ್ರೀ ಎಂ ಸಿ. ನರಸಿಂಹಯ್ಯನವರು ತಮ್ಮ ಮಗಳಾದ ಶ್ರೀಮತಿ ಕಮಲಮ್ಮನವರನ್ನು ಶ್ರೀ ಲಕ್ಷ್ಮೀನಾರಾಯಣಪ್ಪನವರಿಗೆ ಕೊಟ್ಟು ವಿವಾಹ ನಡೆಸಿದ ಸಂದರ್ಭದಲ್ಲಿ ಕಂಚಿಟಿಗರ ಸಂಘಕ್ಕೆ ೧೦ ರೂ, ಮೈಸೂರು ಕಾಂಗ್ರೆಸ್ಸಿಗೆ ೧೦, ಮೈಸೂರು ಪತ್ರಿಕೆಗೆ ೫ ರೂ, ಸಾಧ್ವಿ ಪತ್ರಿಕೆಗೆ ೫ರೂ. ಪತ್ರಿಕೋದ್ಯೋಗಿಗಳ ಸಂಘಕ್ಕೆ ೫ ರೂ. ದಾನಕೊಟ್ಟಿರುತ್ತಾರೆ.

ಮಂತ್ರಿಮಂಡಲದ ಸಭೆ ನಾಳೆ ದಿನ ಸೇರಿ ೬-೫-೪೭ ನೇ ತಾರಿನ ಬಡ್ಜೆಟ್ಟನ್ನು ಪರಿಶೀಲಿಸುವುದು

• • • •

ಶ್ರೀ ಎಂ ಎಸ್ ಸ್ವಾಮಿನಾಥರವರನ್ನು ಗುಪ್ತ ಪೋಲೀಸ್ ವಿಭಾಗ ಅಧಿಕಾರಿಗಳನ್ನಾಗಿಯೂ, ಶ್ರೀ ಪೇಟ್. ಜಿ ರಾಜರೀಯರ ಜಾಗೆಯನ್ನು ತುಮಕೂರು ಜಿಲ್ಲಾ ಪೋಲೀಸ್ ಅಧಿಕಾರಿಗಳನ್ನಾಗಿಯೂ ವರ್ಗಾಯಿಸಲಾಗಿದೆ.

• • • •

ಹೊಸ ಬ್ರೆಡ್ ರೇಷನಿಂಗ್ ಆಜ್ಞೆಯು, ಮೈಸೂರು, ಬೆಂಗಳೂರು ಮತ್ತು ಕೆ ಜಿ ಎಫ್‌ನಲ್ಲಿ ಜಾರಿಗೆ ಬಂದಿದೆ.

• • • •

ಶ್ರೀ ಕರುಣಾಕರ ಮೆನನ್, ಮಿ|| ಕಿಬೆ, ಮತ್ತು ಮಿ|| ಭಾರತದ ರೀಜನಲ್ ಫುಡ್ ಕೌನ್ಸಿಲ್ ಪ್ರತಿನಿಧಿಗಳ ಗೌರವಾರ್ಥವಾಗಿ ದಿವಾನರು ನಿನ್ನೆ ಅವರಿಗೆ ಸತ್ಕಾರವಿತ್ತರು.

• • • •

ಬೆಂಗಳೂರು ಕನ್ನಡ ಸಾಹಿತ್ಯ ಸಂಘದವರು ತಮ್ಮ ಕೇಂದ್ರದ ವಿದ್ಯಾರ್ಥಿಗಳಿಗೆ ನೆ... ಪರೀಕ್ಷೆಯಲ್ಲಿ ಮತ್ತು ವಿದ್ಯಾಭ್ಯಾಸ, ಪರಿಶ್ರಮ ಒದಗಿಸಿದವರು, ಕೊಟ್ಟ ೭೫ ರೂ. ೧೫ ದಾನವನ್ನು ಸ್ವೀಕರಿಸಿದೆ

...ಗಾಲ್‌ರವರಿಗೆ ಸ್ವಾಗತ

ಮೈಸೂರು ೮

...ಗಾಲ್‌ರವರು ಲಕ್ಷ್ಮಣತೀರ್ಥದಿಂ... ಇದೇ ೧೪ ನೇ ತಾ|| ಸುಂ... ಬೆಗ್ಗೆ ಆಗಮಿಸುವರು. ರಾಜ... ಅವರಿಗೆ ಅದ್ಭುತ ಸ್ವಾಗತ ನೀಡಲು ಕಾಂಗ್ರೆಸ್ ಸಮಿತಿಯವರು ಅಸಾಧ್ಯ... ಗಳನ್ನು ಮಾಡುತ್ತಿದ್ದಾರೆ!

ಪುರಾಣ

...ವಿಲಾಸ ಅಗ್ರಹಾರದಲ್ಲಿರುವ ಶ್ರೀ ...ಮುದಾಕರವರ ಶ್ರೀ ಪ್ರಸನ್ನ ವೆಂಕ...ಸ್ವಾಮಿ ದೇವಸ್ಥಾನದಲ್ಲಿ ಶ್ರೀನಿ...ವಾಸರ ಕಲ್ಯಾಣೋತ್ಸವದ ಪ್ರಯು... ಸಂಜೆ ೬|| ಗಂಟೆಗೆ ಚಿ|| ವೇ|| ...ಪುರಾಣಾಚಾರ್ಯರವರಿಂದ "ವೆಂಕ...ಟೇಶ" ಪುರಾಣ ನಡೆಯುತ್ತದೆ.

...ಲ ಮೃತ್ತಿಕೆ ವಿನಿಯೋಗ

...ತು ಕ್ಷೇತ್ರದಿಂದ ಅನುಗ್ರಹವಾಗಿ ...ಲ ಮೃತ್ತಿಕೆ ಮತ್ತು ಕಾವೇರಿ ...ವನ್ನು ಈ ದಿನ ಶ್ರೀ ಟಿ. ಕೆ. ಸು...ನರವರು ಪಲ್ಲಕ್ಕಿಯೊಡನೆ ವೀಣೆ ...ನವರ ಬೀದಿಯ ಶ್ರೀನಿವಾಸ ಗಾ...ನ್ನ ಗಾಂಧರ್ವ ವಿದ್ಯಾ ಶ್ರೀರಾಮ ...ದಲ್ಲಿ ಪ್ರಯೋಗಿಸಿದರು.

ವಿವಾಹ

...ಪೇಟೆಯಲ್ಲಿರುವ ವರ್ತಕರಾದ ...ಪ್ಪನವರ ಮಗ ಚಿ|| ಎಸ್. ನಾ...ಸ್ವಾಮಿಯವರ ವಿವಾಹವು ಚನ್ನ...ಪಟ್ಟಣದ ಶ್ರೀ ಸಿ. ಎಚ್. ಪುಟ್ಟ...ರ ಸೋದರಿ ಚಿ|| ಸೌ|| ಲಕ್ಷ್ಮಮ್ಮರ ...ತೆ ೬-೫-೪೭ ರಲ್ಲಿ ಶಿವರಾಂಪೇಟೆ ...ವೈಭವದಿಂದ ನೆರವೇರಿತು.

ಸಂಗೀತ

...ಶಂಕರ ಜಯಂತೀ ಮಹೋತ್ಸವ ...ಆಶ್ರಯದಲ್ಲಿ ನಾಳೆ ಸಾಯಂಕಾಲ ...ಟೆಗೆ ಸಂಸ್ಕೃತ ಮಹಾಪಾಠಶಾಲೆಯ ...ವಿದ್ವಾನ್ ಬಿ. ಕೇಶವಯ್ಯಂಗಾರ್ ...ರವರ ವಾದನವು ನಡೆಯುತ್ತದೆ

...ಚಿತ ಸಿನಿಮ

...ಪ್ರಚಾರ ಸಮಿತಿ ಆಶ್ರಯದಲ್ಲಿ ...ಬೆಗ್ಗೆ ೧೦|| ಗಂಟೆಗೆ ರಂಜಿತ್ ಟಾ...ನಲ್ಲಿ ವಿದ್ಯಾಭ್ಯಾಸಕ್ಕೆ ಸಂಬಂಧಪಟ್ಟ ...ಗಳು ಉಚಿತವಾಗಿ ಪ್ರದರ್ಶಿಸಲ್ಪಡು... ಮೈಸೂರು ವಿಶ್ವವಿದ್ಯಾಲಯ ಸಂ...ಸ್ಥೆಯಲ್ಲಿ ವಿದ್ಯಾರ್ಥಿಗಳೂ ಇತರ... ಉಚಿತವಾಗಿ ಟಿಕೇಟುಗಳನ್ನು ಪಡೆ...ಯುದು

...ಸೇವಾದಳದ ಶಿಕ್ಷಣ ಶಿಬಿರ

...ಸೇವಾದಳ ಶಿಕ್ಷಣ ಶಿಬಿರವನ್ನು ...ನಡೆಯಲು ತೊಡಗಿದೆಯೆಂದ ...ವಿದ್ಯಾರ್ಥಿಗಳು ಮತ್ತು ಯುವಕರು ...ಅವಧಿಯಾದ ಒಂದು ತಿಂಗಳಿಗೆ ...ಸುವಷ್ಟು ತಮ್ಮ ಹೆಸರನ್ನು ...ಗಿ ವ್ಯವಸ್ಥಾಪಕರಾದ ಶ್ರೀ ಕಾಳ... ಪ್ರಾರ್ಥಿಸುತ್ತಾರೆ.

ಅಕ್ಷರ ಪ್ರಚಾರ

...ಅಕ್ಷರ ಪ್ರಚಾರಕರು ಈ ದಿನ ...ಗಂಟೆಗೆ ಅಸ್ಪೃಶ್ಯರಕೇರಿಯಲ್ಲಿಯೂ, ...ಕೊಪ್ಪಲಿನಲ್ಲೂ ಬಹಿರಂ... ನಡೆಸುವರು

ಬ್ಲೂಸ್ ವಿಜಯ

...ಗಳೂರು ಎಲೆಕ್ಟ್ರಿಕ್ ಫ್ಯಾಕ್ಟರಿ ಕ್ಲಬ್... ವಿಸ್ಡಂ ಟೋರ್ನಮೆಂಟ್... ...ಪಂದ್ಯದಲ್ಲಿ ಮೈಸೂರು ಬ್ಲೂಸ್‌ನವ...ರು ...ಗೋಲುಗಳಿಂದ ಸೋಲಿಸಿದರು.

ಸಾಧ್ವಿ

ತಾ॥ ೯-೫-೪೬ ಗುರುವಾರ

ಪೊಲೀಸಿನವರ ಸ್ಥಿತಿ

ಕಾಂಗ್ರೆಸ್ ಮಂತ್ರಿಮಂಡಲಗಳು ಸ್ಥಾಪನೆಯಾದ ಮೇಲೆ ಸರ್ಕಾರಿ ನೌಕರರ ಮನೋಭಾವನೆಯು ಕ್ರಾಂತಿಕಾರಕವಾದ ಬದಲಾವಣೆಯನ್ನು ಹೊಂದುತ್ತಿದೆ. ಅಧಿಕಾರಿಗಳು ಪ್ರಜೆಗಳ ಸೇವಕರೆಂದು ಕೇವಲ ಮಾತ್ರ ಹೇಳುತ್ತಿದ್ದರೂ ಅನೇಕ ಸಂದರ್ಭಗಳಲ್ಲಿ ಪ್ರಭುಗಳಂತೆ ವರ್ತಿಸುತ್ತಿರುತ್ತಾರೆ. ಪೊಲೀಸಿನವರ ಮೇಲೆ ಈ ದೂರು ಇನ್ನೂ ಹೆಚ್ಚಾಗಿ ಹೊರಿಸಲ್ಪಟ್ಟಿದೆ. ಜನರ ರಕ್ಷಣೆಗೆಂದು ನೇಮಕವಾದ ಇವರು ಪ್ರಜಾ ಭಕ್ಷಕರಾಗಿರುವರೆಂಬ ಅಪವಾದವೂ ಬಂದಿರುತ್ತದೆ. ಮುಖ್ಯವಾಗಿ ಸಾರ್ವಜನಿಕರ ಬಗ್ಗೆ ಅವರು ನಡೆದುಕೊಳ್ಳುವ ರೀತಿನೀತಿಗಳು ಕೇವಲ ಹೀನಾಯಕರವಾಗಿ ಇರುವುವೆಂಬ ಆಕ್ಷೇಪಣೆಗಳು ಕೇಳಬರುತ್ತಿವೆ.

ಪೊಲೀಸ್ ನೌಕರರು ವಿಶೇಷವಾಗಿ ವ್ಯವಹರಿಸಬೇಕಾಗಿರುವ ದುಷ್ಟ ಜನರ ಸಂಪರ್ಕದಿಂದ ಅವರಿಗೆ ಈ ಬಗೆಯ ಕಳಂಕವು ಪ್ರಾಪ್ತವಾಗಿರುವುದೆಂದು ಭಾವಿಸಬಹುದು; ಕಳ್ಳರು-ಕಾಕರು, ಪುಂಡರು-ಪೋಕರಿಗಳು ಮತ್ತು ಇತರ ದುಷ್ಟರನ್ನು ಕಂಡು ಹಿಡಿದು ಬಂದೋಬಸ್ತು ಮಾಡುವುದೇ ಅವರ ಪಾಲಿಗೆ ಬಂದಿರುವ ದಿನಚರಿಯ ಕರ್ಮ. ಬಂಧನದೊಡನೆ ಹೊಡೆದಾಡುವ ಅವರ ಮಾರ್ಗಗಳಿಂದಲೇ ಅವರನ್ನು ವಿಮುಖಗೊಳಿಸಬೇಕಾಗುವುದು. ಇದರಿಂದ ಸ್ವಪ್ರವೃತ್ತಿಗೆ ಈ ಇಲಾಖೆಯ ನೌಕರರ ಸ್ವಭಾವವು ಕಠಿಣವಾಗಲು ಕಾರಣವಾಗುವುದು. ಆದರೆ ಪೊಲೀಸಿನವರು ಕೇವಲ ದುಷ್ಟರನ್ನು ಅಡಗಿಸುವುದರಲ್ಲಿಯೇ ತಮ್ಮ ಕರ್ತವ್ಯವು ಮುಗಿಯಿತೆಂದು ತಿಳಿಯಬಾರದು. ನಾಗರಿಕ ಜೀವನದ ಅನೇಕ ವ್ಯವಹಾರಗಳಲ್ಲಿ ಶಾಂತಿ ಮತ್ತು ಶಿಸ್ತಿನ ಪಾಲನೆಗೂ ಅವರು ಸಹಾಯಕರಾಗಬೇಕಾಗಿದೆ. ರಸ್ತೆಗಳ ಸಂಚಾರದ ಹತೋಟಿ, ಗುಂಪುಗಳ ವ್ಯವಸ್ಥೆ, ಪ್ರದರ್ಶನ, ಮೆರವಣಿಗೆ ಮುಂತಾದ ಸನ್ನಿವೇಶಗಳಲ್ಲಿ ಶಾಂತಿ ಪಾಲನೆ ಮತ್ತು ನಗರಗಳ ಕಟ್ಟೆ, ರಸ್ತೆ, ಅಂದ, ಚಂದಗಳ ರಕ್ಷಣೆ ಇವೇ ಮುಂತಾದ ಕಾರ್ಯಗಳಲ್ಲಿ ಅವರು ಪ್ರಜೆಗಳಿಗೆ ಮಾರ್ಗದರ್ಶಕರಾಗಬೇಕಾಗುವುದು. ಆದುದರಿಂದ ವಿಶೇಷವಾಗಿ ಅವರ ಕರ್ತವ್ಯವು ಜನ ಜೀವನದ ದಿನಚರಿ ವ್ಯವಹಾರದಲ್ಲಿಯೇ ಮೀಸಲಾಗಿರುತ್ತದೆ. ಪೊಲೀಸಿನವರು ಪ್ರಜೆಗಳೊಡನೆ ಗೌರವದಿಂದಲೂ ಸಭ್ಯತೆಯಿಂದಲೂ ನಡೆದುಕೊಳ್ಳುವುದು ಅತ್ಯಗತ್ಯವಾಗಿದೆ.

ಬೊಂಬಾಯಿ ಸರ್ಕಾರದವರು ಈ ಬಗ್ಗೆ ಒಂದು ಪ್ರಾಮುಖ್ಯವಾದ ಪ್ರಕಟಣೆಯನ್ನೇ ಹೊರಡಿಸಿದ್ದಾರೆ. ಪೊಲೀಸ್ ದಳದ ಪ್ರತಿಯೊಬ್ಬನೂ ತಾನು ಸಾರ್ವಜನಿಕರ ಸೇವಕನೆಂದು ತಿಳಿಯಬೇಕು, ಎಲ್ಲಾ ಪ್ರಜೆಗಳನ್ನೂ ಅವರ ಸ್ಥಾನಮಾನಗಳ ಭೇದವಿಲ್ಲದೆ ಸಮಾನತೆಯಿಂದ ಕಾಣಬೇಕು, ತಮ್ಮ ಬಳಿ ಕೊರತೆಗಳನ್ನು ಹೇಳಲು ಬರುವ ಜನರಿಗೆ ಉತ್ತೇಜನ ಕೊಡಬೇಕು. ಮತ್ತು ಬೇಗನೆ ಅವುಗಳಿಗೆ ಗಮನ ಕೊಡಬೇಕು. ಸಲಹೆಯನ್ನೂ ಸಹಾಯವನ್ನೂ ಕೋರಿದವರಿಗೆ ಯಾವಾಗಲೂ ಅವುಗಳನ್ನು ನೀಡ

ಗ್ರಾಮಾಧಿಕಾರಿಗೆ ಕೊಡಲಿ ಪೆಟ್ಟು

ಸ್ವಂ ಸು.] ಹಿರೀಸಾವೆ, ೮

ಈ ಊರಿನ ಪಟೇಲರು ರಾತ್ರಿವೇಳೆ ಬಹಿರ್ದೆಸೆಗೆ ಹೋಗುತ್ತಿದ್ದಾಗ ಇಲ್ಲದೆ ಕಳ್ಳತನದಲ್ಲಿ ರಾಗಿ ಸಾಗಿಸುತ್ತಿದ್ದವರನ್ನು ಪತ್ತೆ ಹಚ್ಚಿ ಹಿಡಿಯಲು ಹೋದಾಗ ಗಾಡಿಯವರು ಕೊಡಲಿಯಿಂದ ಪಟೇಲರ ಬುರುಡೆಗೆ ಪೆಟ್ಟು ಕೊಟ್ಟರಾಗಿ ಪಟೇಲರನ್ನು ಹಾಸನದ ಆಸ್ಪತ್ರೆಗೆ ಸಾಗಿಸಲಾಗಿದೆ.

* ಕರಾಚಿಗೆ ೧೫೦ ಮೈಲಿ ದೂರದಲ್ಲಿರುವ ಹಾಂಡೊ ಆದಮ್ ಎಂಬಲ್ಲಿ ಲೈಸೆನ್ಸ್ ಇಲ್ಲದೆ ೧೦ ಸಾವಿರ ರೂ ಬೆಲೆಬಾಳುವ ಬಟ್ಟೆಯನ್ನು ಸಾಗಿಸುತ್ತಿದ್ದರೆಂದು ೧೦ ಮಂದಿಯು ದಸ್ತಗಿರಿ ಆಗಿದೆ.

§ ಕಾಂಗ್ರೆಸ್ ಉಮೇದುವಾರರಾದ ವಿಶ್ವಂಭರ ದಯಾಳ್ ತ್ರಿಪಾಠಿಯವರು ಕರಾಚಿ ಮೇಯರಾಗಿ ಆರಿಸಲ್ಪಟ್ಟಿದ್ದಾರೆ.

ಬೇಕು—ಎಂಬುದಾಗಿ ಸದರಿ ಪ್ರಕಟಣೆ ತಿಳಿಸುತ್ತದೆ. ಸಾರ್ವಜನಿಕರಿಗೆ ಪೊಲೀಸಿನವರು ತೋರಿಸಬಹುದಾದ ಅಸಭ್ಯತೆ ಅವರ ಕರ್ತವ್ಯ ಲೋಪವೆಂದು ಭಾವಿಸಲ್ಪಟ್ಟು ಅದಕ್ಕೆ ತಕ್ಕ ಶಿಕ್ಷೆಯನ್ನು ವಿಧಿಸಲಾಗುವುದೆಂದು ಎಚ್ಚರಿಸಲಾಗಿದೆ.

ಪೊಲೀಸಿನವರೂ ನಮ್ಮವರೇ, ನಮ್ಮ ನೆರೆ ಬಾಂಧವರೇ, ನಮ್ಮ ಅಣ್ಣ ತಮ್ಮಂದಿರೇ, ಆದರೂ ಇದುವರೆಗೆ ಪರಂಪರಾಗತವಾಗಿ ಬಂದ ಪರಕೀಯ ಪ್ರಭುತ್ವದ ಪಾಶಕ್ಕೆ ಒಳಗಾಗಿ ಅವರು ಅನೇಕ ಅನುಚಿತ ವರ್ತನೆಗಳನ್ನು ಮಾಡಿದ್ದಾರೆ. ಇದಕ್ಕಾಗಿ ಅಪಖ್ಯಾತಿಯನ್ನೂ ಪಡೆದಿದ್ದಾರೆ. ಇನ್ನು ಮುಂದೆ ಇವೆಲ್ಲಾ ಬದಲಾಯಿಸುವ ಕಾಲ ಬಂದಿದೆ. ಇತ್ತ ಜನರೂ ಎಚ್ಚೆತ್ತಿದ್ದಾರೆ. ತಮ್ಮ ಹಕ್ಕು ಬಾಧ್ಯತೆಗಳನ್ನು ಅರಿತಿದ್ದಾರೆ. ಅಸ್ತಲಾಗಿ ಅಳರಸರ ಮನೋಭಾವವೂ ಮಾರ್ಪಾಡಾಗುತ್ತಿದೆ. ಹಿಂದಿನ ನಿರಂಕುಶ ಪ್ರವರ್ತನೆಗೆ ಅವಕಾಶ ಇನ್ನು ಮುಂದೆ ದೊರೆಯುವುದಿಲ್ಲ. ಬೊಂಬಾಯಿ ಪ್ರಾಂತವು ಮೇಲ್ಪಂಕ್ತಿಯನ್ನು ಹಾಕಿದೆ. ಇತರ ಕಡೆಗಳಲ್ಲಿಯೂ ಇದನ್ನು ಅನುಸರಿಸಲಾಗುವುದು. ಪೊಲೀಸಿನವರು ತಮ್ಮ ನಿಜವಾದ ಕರ್ತವ್ಯವನ್ನು ಅರಿತುಕೊಂಡು ಪ್ರಜಾ ಸೇವಕರಾಗಿ ಕೃತಕೃತ್ಯರಾಗುವರೆಂದು ನಂಬೋಣ.

ರಣಜಿತ್

10—5—1946 ರಿಂದ

★ ಗರೀಬ್ ★

(ಹೊಸ ಪ್ರಿಂಟ್)

ಪಾತ್ರ: — ಸುರೇಂದ್ರ, ರೋಸ್

ಪ್ರತಿದಿನ ೩ ಆಟಗಳು

ಬೆಳಗಿನ ಪ್ರದರ್ಶನ— ಜವಾಬ್ ೧೨-೫-೪೬

ವಿವಿಧ ವಾರ್ತೆಗಳು

§ ಜರೂರು ಸಂದರ್ಭಗಳಲ್ಲಿ ಉಪಯೋಗಿಸಲು ಮದ್ರಾಸ್ ಪೊಲೀಸ್ ಖಾತೆಗೆ ಒಂದು 'ವೈರ್‌ಲೆಸ್' ಸೆಟ್ಟನ್ನು ಸರ್ಕಾರವು ಒದಗಿಸಿದೆ.

* ಈ ತಿಂಗಳ ಕೊನೆಯ ವಾರದಲ್ಲಿ ಭಾರತದಿಂದ ಲಂಡನ್ನಿಗೆ ವಿಮಾನದಲ್ಲಿ ಬ್ರಿ॥ ಸಿಪಾಯಿಗಳು ತೆರಳಲು ವಿಮಾನದಲ್ಲಿ ಸ್ಥಳವನ್ನು ಮೀಸಲಾಗಿಡಲಾಗಿದೆಯೆಂದು ವರದಿಯಾಗಿದೆ.

* ಗಾಂಧೀಜಿಯವರ ಬಳಿ ಆಥವಾ ಅವರ ಆಶ್ರಮದಲ್ಲಿರಲು ಅವಕಾಶ ಕೊಟ್ಟರೆ ಅಗ್ಗ ತಾನು ಗಾಂಧೀಜಿಯವರ ವಿಗ್ರಹದ ಪೂಜೆ ಮಾಡುವುದನ್ನು ನಿಲ್ಲಿಸುವುದಾಗಿ ಗಾಂಧೀಜಿ ಪ್ರತಿಮೆಯನ್ನು ಪೂಜಿಸುತ್ತಿರುವ ಬಂಕಿ ಭಗತ್‌ರವರು ತಿಳಿಸಿದ್ದಾರೆ.

* ತುಮಕೂರು ಜಿಲ್ಲೆಯ ಮಧುಗಿರಿ, ಕೊರಟಗೆರೆ, ಸಿರಾ, ಮುಂತಾದ ತಾಲ್ಲೂಕುಗಳ ೨೧ ಗ್ರಾಮಗಳಲ್ಲಿ ಪರಿಹಾರ ಕಾರ್ಯಕ್ರಮಗಳನ್ನು ಕೈಗೊಳ್ಳಲು ಸರ್ಕಾರದವರು ೧ ಲಕ್ಷದ ೧೫ ಸಾವಿರ ರೂಗಳನ್ನು ಮಂಜೂರು ಮಾಡಿದ್ದಾರೆ.

* ಸ್ವಸ್ಥದಿಂದ ನಿವೃತ್ತರಾದವರ ಸಹಾಯಾರ್ಥವಾಗಿ ೫ ಮತ್ತು ೩ ವರ್ಷಗಳ ಯೋಜನೆಗಳನ್ನು ಮೈಸೂರು ಸರ್ಕಾರ ಸಿದ್ಧಗೊಳಿಸಿದೆ. ಒಂದಕ್ಕೆ ೧ ಲಕ್ಷವೂ ಮತ್ತೊಂದಕ್ಕೆ ೩ ಲಕ್ಷವೂ ಖರ್ಚು ತಗಲಲಿದೆ.

§ ನಂಜನಗೂಡು ಶ್ರೀ ದಾಸಪ್ಪನವರು ಅಲ್ಲಿನ ಶಂಕರಮಠದ ವಿದ್ಯಾರ್ಥಿಗಳಿಗೆ ಊಟದ ಸೌಕರ್ಯಕ್ಕಾಗಿ ೫೦ ರೂಗಳನ್ನು ಉದಾರವಾಗಿ ದಾನಮಾಡಿದ್ದಾರೆ.

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದ

ನೋಟಿಫಿಕೇಷನ್

No R 1-681/45-16

Dated 6-5-46

ಇದರಿಂದ ಸಮಸ್ತ ಜನಗಳಿಗೂ ಪರಸ್ಥಳದಿಂದ ಬರತಕ್ಕ ಪ್ರವಾಸಿಕರಿಗೂ ತಿಳಿಯಪಡಿಸುವುದೇನೆಂದರೆ...

ಈಗಿನ ಆಹಾರದ ಪರಿಸ್ಥಿತಿಯಿಂದ ಅನೇಕ ಜನಗಳು ಮೈಸೂರು ಸಿಟಿಗೆ ಮಿತಿಯಿಲ್ಲದೆ ಬರುತ್ತಿರುವುದರಿಂದ, ಬರತಕ್ಕವರೆಲ್ಲರೂ ತಮ್ಮ ಊಟ ಉಪಚಾರಗಳಿಗೆ ಹೋಟೆಲುಗಳೇ ಆಧಾರವೆಂದು ಪರಿಗಣಿಸಬೇಕೆ ಹೊರತು ಸಾಮಾನ್ಯವಾಗಿ ರೇಷನ್ ಕಾರ್ಡುಗಳನ್ನು ಹೊಂದಬಹುದೆಂದು ನಿರೀಕ್ಷಿಸಬಾರದು. ೧೫ ದಿವಸ ಕಾಲಕ್ಕೆ ಕಡಿಮೆಯಾಗಿ ತಂಗುವವರಿಗೆ ರೇಷನ್ ಕಾರ್ಡುಗಳನ್ನು ವಿಶೇಷ ಅಗತ್ಯ ಅಥವಾ ಸಾಧಾರಣ ಸಂದರ್ಭಗಳಲ್ಲಿ ಕೊಡಲಾಗುವುದಿಲ್ಲ.

(Sd.) ಅಬ್ದುಲ್ ರಜಾಕ್,
ರೇಷನಿಂಗ್ ಆಫೀಸರ್,
ಮೈಸೂರು ಸಿಟಿ

ಗಾಂಧಿಜಿಯವರ ಉಪವಾಸ

ವಿಲಿಂಗ್ಡನ್ ಆಗಿ ಸಂಧಾನದಲ್ಲಿ ಭಾಗವಹಿಸಲು ... ಗಳು ಗಾಂಧಿಜಿಯವರು ತಮ್ಮ ... ವರನ್ನು ದೆಹಲಿಗೆ ವಾಪಸು ಕಳುಹಿ ... ರಷ್ಟೆ. ಆದರೆ ಇದು ಯಾರಿಗೂ ... ರ್ಣವಾಗಿ ಸಮಾಧಾನವಾದಂತೆ ಕಾಣ ... ದಿಲ್ಲ. ಇದೊಂದು ಕಟ್ಟು ಕಥೆ ... ದೇ ಕೆಲವರು ಭಾವಿಸಿದ್ದಾರೆ ... ಗಳು ನಿರಾಶಾ ರೂಪವನ್ನು ತಾಳ ... ರಿಂದ ಮಹಾತ್ಮರು ಉಪವಾಸವನ್ನು ... ಸುವ ಆಲೋಚನೆ ಮಾಡಿರಬೇಕೆಂದು ... ಲವರು ಊಹಿಸಿರುವರು.

* ರೀಜನಲ್ ಆಹಾರ ಕಮೀಷನರ್ ... ದಿವಾನ್ ಬಹದ್ದೂರ್ ಕರುಣಾಕರ ಮೆ... ಮತ್ತು ಭಾರತ ಸರ್ಕಾರದ ಬೇಸಾಯ ... ಸಲಹೆಗಾರರಾದ ಮಿ॥ ಕರ್ಬಿಯವರು ... ದುರ್ಗ, ತುಮಕೂರು ಮತ್ತು ಕೋಲಾರ ... ಜಿಲ್ಲೆಗಳಲ್ಲಿ ಇಂದು ಮತ್ತು ನಾಳೆ ಪ್ರ... ಮಾಡುವರು.

* ಇಟಲಿಯ ರಾಜರಾದ ವಿಕ್ಟರ್ ಇಮ್ಯಾ... ನುಯೆಲ್‌ರವರು ಸಿಂಹಾಸನ ತ್ಯಜಿಸ ... ಯಾದ ಸಮಯ ನಿರೀಕ್ಷಿಸುತ್ತಿರುವ ...

* ನ್ಯಾಟಲಿಂದ ಹಿಂದೂಸ್ಥಾನಕ್ಕೆ ... ಕವಾಗಿ ೨೩ ಸಾವಿರ ಪೌಂಡುಗಳಷ್ಟು ... ೧ ಲಕ್ಷದ ೧೩ ಪೌಂಡ್ ಸಾವಿರ ... ೩ ಮತ್ತು ೩ ಕೋಟಿ ೩ ಲಕ್ಷದ ... ವಿ ಸ್ವತ್ತನ್ನು ಕೊಡಲು ಒಪ್ಪಿದೆ.

* ಪ್ಯಾರಿಸ್ಸಿನಲ್ಲಿ ನಡೆಯುವ ... ಶ್ನಗಳಲ್ಲಿ ಭಾಗ ವಹಿಸಲು ... ಮುಖ್ಯಮಂತ್ರಿ ಕಳಿಸಿದ್ದ ಆಹ್ವಾನವನ್ನು ... ಗಾಲ್‌ರವರು ನಿರಾಕರಿಸಿದ್ದಾರೆ.

* ಹೈದರಾಬಾದಿನಿಂದ ಧಾನ್ಯಗಳ ... ತರಲು ಇಂಡಿಯಾ ಸರ್ಕಾರವು ಮೈಸೂರು ... ಸಂಸ್ಥಾನಕ್ಕೆ ೩೦೦ ವ್ಯಾಗನ್ನುಗಳನ್ನು ... ಇಂಜಿನ್ನುಗಳನ್ನು ಸಾಲವಾಗಿ ಕೊಡ...

ನಿಮ್ಮ ಮೈ ಬೆಳಕುಮಲ್ಲಿಗೆಯಂತೆ ಹೊಳೆಯಬೇಕೆ? ನಿಮ್ಮ ಲಾವಣ್ಯ ಮೋಹಕಗೊಳ್ಳಬೇಕೆ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್!

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ. ಪರೀಕ್ಷಿಸಿ ನೋಡಿರಿ. ಎಲ್ಲೆಲ್ಲೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ.

ಬೆಂಗಳೂರು.

:: ABIDS ::

Grand Auction Sale

On SUNDAY 12-5-46

9-30 A. M. to 1 P. M. & 4 to 6 P. M.

Inspection on 11-5-46 At Our Show Rooms

Edited, printed and published by A. F. Nagarajan at the Sadhvi Press, D. Subbiah Road, Mysore

ಫೋನ್ ನಂ 392 ॥ ವಂದೇ ಮಾತರಂ ॥ ಕಂದಿನ ಪತ್ರಿಕೆ 3 ಕಾಸು

ಸಂಪುಟ ೪] ಶುಕ್ರವಾರ ೧೦—೫—೪೬ [ಸಂಚಿಕೆ ೨೦೯

ಕೇಂದ್ರ ಸರ್ಕಾರದ ಸಚಿವರ ರಾಜೀನಾಮೆ

ಅವಿರೋಧವಾಗಿ ಆರಿಸ ಬಂದ ಅಧ್ಯಕ್ಷ ನೆಹರು

ಸ॥ ಪಟೇಲ್, ಆ॥ ಕೃಪಲಾನಿಯವರು ತಮ್ಮ ಉಮೇದುವಾರಿಕೆಯನ್ನು ವಾಪಸ್ ಪಡೆದದ್ದರಿಂದ ಪಂ॥ ಜವಹರಲಾಲ್ ನೆಹರು ರವರ ಅವಿರೋಧವಾಗಿ ಭಾರತ ಕಾಂಗ್ರೆಸ್ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವುದಾಗಿ ಅಧಿಕಾರಿ ಪ್ರಕಟಣೆ ಹೊರಬಿದ್ದಿದೆ. ನೆಹರೂರವರು ೧೯೨೯ರಲ್ಲಿ ಮೊದಲು ಅಧ್ಯಕ್ಷತೆಗೆ ಏರಿದ್ದರು. ನಂತರ ೧೯೩೬ ರಲ್ಲೂ ೧೯೩೭ ರಲ್ಲೂ ಅಧ್ಯಕ್ಷರಾಗಿದ್ದರು. ಅಧ್ಯಕ್ಷ ಸ್ಥಾನಕ್ಕೆ ನಾಲ್ಕನೆಯ ಬಾರಿ ಪಂ॥ ನೆಹರೂರವರು ಆರಿಸಲ್ಪಟ್ಟಿದ್ದಾರೆ.

ಭಾರತದಲ್ಲಿ ಬ್ರಿಟಿಷ್ ವ್ಯಾಪಾರಕ್ಕೆ ರಕ್ಷಣೆ

ಭಾರತದಲ್ಲಿರುವ ಬ್ರಿಟಿಷ್ ವ್ಯಾಪಾರಕ್ಕೆ ತಕ್ಕ ರಕ್ಷಣೆಯನ್ನು ಇಂಡೋ ಬ್ರಿಟಿಷ್ ಒಪ್ಪಂದದಲ್ಲೇ ಸಮಾವೇಶಗೊಳಿಸಬೇಕೆಂದು ಲಂಡನ್ನಿನಲ್ಲಿ ಹೇಳಲಾಗಿದೆ. ಭಾರತದಲ್ಲಿ ಬ್ರಿಟಿಷರ ವ್ಯಾಪಾರದ ಬಂಡವಾಳ ... ಕೋಟಿ ಪೌಂಡುಗಳೆಂದು ಗೊತ್ತಾಗಿದೆ.

ಅಣು ಸಂಶೋಧನೆಗೆ ಸಹಾಯ

ಬ್ರಿಟನ್ನಿನ ವಿಜ್ಞಾನ ಸಮಿತಿಯು ಅಣುವನ್ನು ಇನ್ನೂ ಹೆಚ್ಚಾಗಿ ಸಂಶೋಧಿಸಲು ೧,೯೦,೦೦೦ ಪೌಂಡನ್ನು ... ಮತ್ತು ಗ್ಲಾಸ್ಗೋ ವಿಶ್ವವಿದ್ಯಾನಿಲಯದ ಪ್ರಯೋಗ ಪ್ರದೇಶಗಳಿಗೆ ಕೊಟ್ಟಿದೆ.

ವೈಸರಾಯ್ ಮಂತ್ರಿಮಂಡಲದ ಸದಸ್ಯರ ರಾಜೀನಾಮೆ

ಬ್ರಿಟಿಷ್ ನಿಯೋಗ ಮಂಡಲಿಯವರೂ ವೈಸರಾಯರೂ, ಸಿಮ್ಲಾದಲ್ಲಿ ಕಾಂಗ್ರೆಸ್ ಮತ್ತು ಲೀಗ್ ಪ್ರತಿನಿಧಿಗಳೊಡನೆ ಕೇಂದ್ರದಲ್ಲಿ ಕೂಡಲೇ ತಾತ್ಕಾಲಿಕ ರಾಷ್ಟ್ರೀಯ ಸರ್ಕಾರವನ್ನು ರಚಿಸುವ ಬಗ್ಗೆ ನಡೆಸುತ್ತಿರುವ ಸಂಧಾನಕ್ಕೆ ನೆರವು ನೀಡಿ, ಅದು ಯಶಸ್ವಿಯಾಗುವ ಸಲುವಾಗಿ, ಹಾಲಿ ವೈಸರಾಯ್ ಮಂತ್ರಿಮಂಡಲದಲ್ಲಿರುವ ಸರ್ಕಾರಿ ಅಧಿಕಾರಿಗಳೂ ಮತ್ತು ಸದಸ್ಯರುಗಳೂ ತಮ್ಮ ಅಧಿಕಾರವನ್ನು ಚಕ್ರವರ್ತಿಗಳಿಗೂ ಮತ್ತು ವೈಸರಾಯರಿಗೂ ಸಮರ್ಪಿಸಿರುವರೆಂದು ... ವಾಪಸು ಪಡೆದುಕೊಳ್ಳಬಹುದೆಂದು ವರದಿಯಾಗಿದೆ.

ಭಾರತದಲ್ಲಿ ರೇಷನಿಂಗ್ ವ್ಯವಸ್ಥೆ ಸಡಿಲಗೊಳ್ಳುವುದೇ

ಭಾರತಕ್ಕೆ ಸಂಯುಕ್ತ ಆಹಾರ ಸಮಿತಿಯಿಂದ ಸಹಾಯ ... ದೊರೆತಿರುವ ಹಾಗೆ ಭಾರತದಲ್ಲಿ ಈಗಿರುವ ರೇಷನ್ ಪದ್ಧತಿ ಸಡಿಲಗೊಳ್ಳುವುದಿಲ್ಲವೆ, ಸುಮಾರು ೧೦ ಕೋಟಿ ಜನರು ಸಾಯುವುದು ತಪ್ಪಿತೆಂದು ವಾಷಿಂಗ್ಟನ್ನಿನಲ್ಲಿರುವ ಭಾರತೀಯ ಅಧಿಕಾರಿಗಳು ಅಭಿಪ್ರಾಯಪಟ್ಟಿದ್ದಾರೆ.

ಸಿಮ್ಲಾದಲ್ಲಿ ಸ್ವಲ್ಪ ಆಶಾಕಿರಣ ಮೂಡಿದೆ

ಸಂಧಾನ ಪೂರ್ಣವಾಗಿ ಭಗ್ನವಾಯಿತೇ ಎನ್ನುವಷ್ಟು ನಿರಾಶಾದಾಯಕವಾಗಿದ್ದ ಎಲ್ಲರ ಮುಖಗಳೂ ಶಾಂತಿಪೂರ್ಣವಾಗಿದ್ದವು. ಅವರ ನಿನ್ನೆ ದಿನದ ಮಾತುಕತೆ ಸ್ವಲ್ಪ ಬೇರೆ ರೀತಿಯನ್ನು ಕೊಟ್ಟು ಆಶಾಕಿರಣಕ್ಕೆ ಎಡೆ ಕೊಟ್ಟಿದೆ. ಕ್ರಿಪ್ಸ್‌ರೊಡನೆ ಆಜಾದರ ಎರಡು ಬಾರಿ ಭೇಟಿಯೂ, ವೈಸರಾಯರೊಡನೆ ಜಿನ್ನಾರವರ ಭೇಟಿಯೂ ಈ ಶುಭ ವಾತಾವರಣಕ್ಕೆ ಸಾಧನವಾಯಿತು. ಮಿ॥ ಜಿನ್ನಾರವರು, ಪಂ॥ ನೆಹರೂರವರು, ನಿನ್ನೆ ಭೇಟಿಯಾದ ಮೇಲೆ ಇದಕ್ಕೆ ಪುಷ್ಟಿ ದೊರೆತಂತಾಗಿದೆ. ಈ ವಾರ್ತೆ ವೈಸರಾಯರ ಸಚಿವ ಮಂಡಲಿ ಅಧಿಕಾರ ವರ್ಗಾಯಿಸಲು ತಮ್ಮ ನಿರ್ಧಾರ ಮಾಡಿದ್ದನ್ನು ನೋಡಿದರೆ ಕೇಂದ್ರದಲ್ಲಿ ಇನ್ನು ಒಂದೆರಡು ದಿವಸಗಳಲ್ಲೇ ತಾತ್ಕಾಲಿಕ ಸರ್ಕಾರ ರಚನೆಯಾಗಬಹುದೆಂದು ಹೇಳಲಾಗುತ್ತಿದೆ.

...ಸ್ವಭಾವ ಶಾಂತಿ ಮಹೋತ್ಸವ

ಮೈಸೂರು ೧೦

... ವೈದಿಕ ಪ್ರವೀಣ ಎ. ವೆಂಕಟ... ಶಾಸ್ತ್ರಿಗಳವರು ತಮ್ಮ ಷಷ್ಠ್ಯಬ್ದ ಪೂರ್ತಿ ಶಾಂತಿ ಮಹೋತ್ಸವವನ್ನು ಇಂದು ಮಾಡಿದರು. ಈ ಸಮಾರಂಭಕ್ಕೆ ಅನೇಕ ... ಅವರನ್ನು ಆಹ್ವಾನಿಸಿ ಸತ್ಕರಿಸಿ...

ಚರಂಡಿ ರಿಪೇರಿ

... ಬೀದಿ ಶಾಸ್ತ್ರಿಯಾ ಮನೆ ... ಎದುರಿಗಿರುವ (೧೦೬ನೇ ನಂ ಮನೆ ಎದುರಿಗೆ) ಚರಂಡಿಯನ್ನು ರಿಪೇರಿ ಮಾಡಿಸಬೇಕು ... ಪಕ್ಕದ ನಿವಾಸಿಗಳು, ... ಅಧ್ಯಕ್ಷರಲ್ಲೂ, ... ಅನೇಕ ಸಲ ಪ್ರಾರ್ಥಿಸಿದರೂ ಈ ಬಗ್ಗೆ ಯಾರೂ ಗಮನ ಕೊಡದಿರುವುದು ಶೋಚನೀಯವೆಂದೂ ಕೂಡಲೇ ರಿಪೇರಿ ಅವಶ್ಯಕವೆಂದೂ ... ನಿವಾಸಿ ಶ್ರೀ ಬಿ. ಬಾಲಯ್ಯನವರು ಪ್ರಾರ್ಥಿಸುತ್ತಾರೆ.

...ಕರ್ಮ ಮಹೋತ್ಸವ

... ಪವರ್ ಪ್ರೆಸ್ಸಿನ ಮಾಲೀಕ ಶ್ರೀ ಕೆ. ವೆಂಕಟಸುಬ್ಬಯ್ಯನವರು ... ಚಿ॥ ರಾಮಪ್ರಸಾದನಿಗೆ ಈ ... ಕರ್ಮ ಮಹೋತ್ಸವವನ್ನು ... ಸಿದರು.

...ಸದನದ ವಾರ್ಷಿಕೋತ್ಸವ

... ವನಿತಾ ಸದನದ ವಾರ್ಷಿಕೋತ್ಸವದ ಕಾರ್ಯಕ್ರಮಗಳು ನೊನ್ನೆ ಆರಂಭವಾಗಿವೆ. ಶ್ರೀ ಬಿ. ರಾಜೇ... ರವರಿಂದ ಶಿಕ್ಷಣ ಪ್ರದರ್ಶನ ... ಮಹೋತ್ಸವ ಮೊನ್ನೆ ಸಂಜೆ ಜರುಗಿತು. ನಿನ್ನೆ ಸಂಜೆ ಗೃಹ ಕೈಗಾರಿಕೆ ಪ್ರದರ್ಶನ ... ಶ್ರೀಮತಿ ಲೀಲಾವತಿ ಆಜನ... ನೆರವೇರಿಸಿದರು. ಇಂದು ಶ್ರೀ ... ಆರ್. ಲಕ್ಷಮ್ಮನವರ ಅಧ್ಯಕ್ಷತೆ ... ಚರ್ಚಾ ಕೂಟ, ನಾಳೆ ಸಂ... ಶ್ರೀ ರಾಮಚಂದ್ರರಾವ್ ... ರವರ ಅಧ್ಯಕ್ಷತೆಯಲ್ಲಿ ವಾ... ತ್ಸವ ನಡೆಯುವುವು.

...ದಲ್ಲಿ ಮೂವತ್ತು ಗುಂಡುಗಳು

... ಸಂಪೂರ್ಣವಾಗಿ ನಾಶದ ... ದ ಮೊದಲನೆ ವಾರ್ಷಿಕೋತ್ಸವದಲ್ಲಿ ಮಾಸ್ಕೋ ನಗರ ... ಮತ್ತು ... ಪಟ್ಟಣಗಳಲ್ಲಿ ಮೂವತ್ತು ಗುಂಡು ... ಬೇಕೆಂದು ಸ್ಟಾಲಿನರು ... ಹೊರಡಿಸಿದ್ದಾರೆ.

...ದಲ್ಲಿ ವಯಸ್ಕರಿಗೆಲ್ಲಾ ಓಟಿನ ಹಕ್ಕು

... ವರ್ಷ ಮೇಲ್ಪಟ್ಟ ಪ್ರತಿಯೊಬ್ಬ... ನಡೆಯುವಲ್ಲಿ ತಮ್ಮ ಓಟು ... ಹಕ್ಕನ್ನು ಕೊಡುವ ಶಾಸನ ... ಸಭೆಯಲ್ಲಿ ಮಂಜೂರಾ...

ಸರ್ಕಾರದ ಕಳವಳ

... ಸರಬರಾಜು ಕೃಷಿ ... ಈ ವಿಷಯ ಬ್ರಿಟಿಷ್ ಸರ್ಕಾರ... ವನ್ನು ಚಿಂತಿಸುತ್ತಿದೆ ಎಂದು ... ಮಿ॥ ಅಟ್ಲೀಯವರು ಮಂತ್ರಿ ಸಭೆಯಲ್ಲಿ ತಿಳಿಸಿದ್ದಾರೆ.

ಸ್ಪೇನಿನ ಮೇಲೆ ಬೆಲ್ಜಿಯಂ ಆಕ್ರೋಶ

ಬೆಲ್ಜಿಯಂ ದೇಶದ ರಾಜದ್ರೋಹಿಯಾದ ಲೀಸ್ ಡಿಗ್ರೆಲ್ ಎಂಬುವನಿಗೆ ಸ್ಪೇನ್ ಸರ್ಕಾರವು ಆಶ್ರಯವನ್ನು ಕೊಟ್ಟಿರುವುದನ್ನು ಖಂಡಿಸಿ ಸ್ಪೇನಿನ ಮೇಲೆ ತೀವ್ರ ಪ್ರತಿಭಟನೆಗಳನ್ನು ಹೊರಿಸಿ ಬೆಲ್ಜಿಯಂ ಸರ್ಕಾರವು ಒಂದು ಕಾಗದವನ್ನು ... ಕ್ಕೆ ಬರೆದಿದೆ.

ಕ್ಯಾ॥ ಬಹರುದ್ದೀನರವರ ಅಪೀಲು ನಿರಾಕರಣೆ

ಪಂಜಾಬ್ ಹೈಕೋರ್ಟು ತಮ್ಮ 'ಹೆಬಿಯಸ್ ಕಾರ್ಪಸ್' ಅರ್ಜಿಯ ಬಗ್ಗೆ ಕೊಟ್ಟಿದ್ದ ತೀರ್ಮಾನದ ಮೇಲೆ ಐ. ಎನ್. ಎ. ದಳದ ಕ್ಯಾ॥ ಬಹರುದ್ದೀನರವರು ಪ್ರಿವಿ ಕೌನ್ಸಿಲಿಗೆ ಅಪೀಲು ಹಾಕಿದ್ದರು. ಅದು ತಿರಸ್ಕರಿಸಲ್ಪಟ್ಟಿದೆ.

ಮದರಾಸ್ ಗವರ್ನರ್

ಸ್ವಂ ಸು ಫೋನ್] ಬೆಂಗಳೂರು ೧೦

ಮದರಾಸಿನ ಗವರ್ನರಾದ ಸರ್ ಆರ್ಚಿಬಾಲ್ಡ್ ನೈರವರು ನಿನ್ನೆ ಸಂಜೆ ಮದರಾಸಿನಿಂದ ಬೆಂಗಳೂರಿಗೆ ವಿಮಾನದಲ್ಲಿ ಆಗಮಿಸಿ ... ಕೈನಲ್ಲಿ ... ಕಡೆಗೆ ಪ್ರಯಾಣ ಮಾಡಿದರು. ದಿವಾನರು ಗವರ್ನರನ್ನು ಭೇಟಿ ಮಾಡಿದ್ದರು.

ದಿವಾನರ ಪ್ರವಾಸ

ದಿವಾನರು ಈ ತಿಂಗಳ ೧೩ ನೇ ತಾ॥ ... ವರೆಗೆ ತುಮಕೂರು ಮತ್ತು ಚಿತ್ರದುರ್ಗ ಜಿಲ್ಲೆಗಳಲ್ಲಿ ಪ್ರವಾಸ ಮಾಡುವ ಸಂಭವವಿದೆ.

ಹಂಗಾಮಿ ರೈಲ್ವೆ ಜನರಲ್ ಮ್ಯಾನೇಜರ್

... ಲೋಕೋ ಮತ್ತು ಕ್ಯಾರೇಜ್ ಸೂಪರಿಂಟೆಂಡೆಂಟರಾದ ಶ್ರೀ ಎಂ. ವೆಂಕಟೇಶರವರನ್ನು ರೈಲ್ವೆ ಆಕ್ಟಿಂಗ್ ಜನರಲ್ ಮ್ಯಾನೇಜರನ್ನಾಗಿ ನೇಮಕ ಮಾಡಲಾಗಿದೆ.

ಸರ್ ಮಿರ್ಜಾರವರು

ಸರ್ ಮಿರ್ಜಾ ಇಸ್ಮಾಯಿಲ್‌ರವರು ಜೂನ್ ಮೊದಲನೆ ವಾರದಲ್ಲಿ ಬೆಂಗಳೂರಿಗೆ ಬಂದು ಕೆಲವು ವಾರಗಳು ಇರುವುದಾಗಿ ಗೊತ್ತಾಗಿದೆ.

ಕೇಂದ್ರದಲ್ಲಿ ಭದ್ರವಾದ ಸರ್ಕಾರ

ಕೇಂದ್ರದಲ್ಲಿ ಭದ್ರವಾದ ಸರ್ಕಾರವನ್ನು ಸ್ಥಾಪಿಸಿ ಅದಕ್ಕೆ ಹೆಚ್ಚು ಅಧಿಕಾರ ವಹಿಸಬೇಕೆಂದು ಬ್ರಿಟಿಷ್ ನಿಯೋಗ ಮಂಡಲಿಯವರು ಹೊಸ ಸಲಹೆಯನ್ನು ಸಿಮ್ಲಾ ಸಮ್ಮೇಳನದಲ್ಲಿ ಮಂಡಿಸಿರುವುದಾಗಿ ವರದಿಯಾಗಿದೆ. ಈ ಹೊಸ ಯೋಜನೆಯನ್ನು ನಿನ್ನೆ ಸಂಜೆ ಸೇರಿರುವ ಸಭೆಯಲ್ಲಿ ಪರಿಶೀಲಿಸಲ್ಪಡುತ್ತದೆಂದು ಹೇಳಲಾಗಿದೆ.

ಯುದ್ಧ ನಿಧಿ ಮುಕ್ತಾಯ

ವೈಸರಾಯರ ಯುದ್ಧ ನಿಧಿ ಸಂಗ್ರಹಣೆಯು ಮುಕ್ತಾಯಗೊಂಡಿದೆ. ಇದುವರೆಗೆ ... ರೂಪಾಯಿಗಳು ವಸೂಲಾಗಿವೆ.

ಕ್ರಿಕೆಟ್ ಪಂದ್ಯ

ಭಾರತದ ಕ್ರಿಕೆಟ್ ತಂಡದವರು ಆಕ್ಸ್‌ಫರ್ಡಿನವರೊಡನೆ ಮೊನ್ನೆ ಆರಂಭಿಸಿದ್ದ ... ಪಂದ್ಯ ... ನಿನ್ನೆ ... ಆಕ್ಸ್‌ಫರ್ಡಿನವರು ಮೊದಲು ಆಟ ಆರಂಭಿಸಿ ... ವಿಕೆಟ್ಟಿಗೆ ... ರನ್ನುಗಳನ್ನು ...

ಸಾಧ್ವಿ

ತಾ|| ೧೦-೫-೪೬ ಶುಕ್ರವಾರ

ಖಾಸಗೀ ಅನ್ನಾಲಯಗಳು

ಸಂಸ್ಥಾನದಲ್ಲಿರುವ ಕ್ಷಾಮ ಪೀಡಿತ ಪ್ರದೇಶಗಳಲ್ಲಿ ಇನ್ನೂ ಹೆಚ್ಚು ಅನ್ನಾಲಯಗಳನ್ನು ಸ್ಥಾಪಿಸುವುದಾಗಿ ದಿವಾನರು ತಿಳಿಸಿದ್ದಾರೆ. ಮತ್ತು ಅವುಗಳ ಮೇಲ್ವಿಚಾರಣೆಯನ್ನು ಖಾಸಗೀ ಮಹಾಶಯರಿಗೇ ವಹಿಸುವುದಾಗಿಯೂ ಸೂಚಿಸಿದ್ದಾರೆ. ಈ ನಿರ್ಧಾರಗಳನ್ನು ನಾವು ಹೃತ್ಪೂರ್ವಕವಾಗಿ ಸ್ವಾಗತಿಸುತ್ತೇವೆ. ಅನ್ನವಿಲ್ಲದೆ ಬಳಲುತ್ತಿರುವವರ ಸಹಾಯಕ್ಕಾಗಿ ಸರ್ಕಾರದವರ ಮತ್ತು ಸಾರ್ವಜನಿಕರ ಸತ್ಪ್ರಯತ್ನಗಳಿಗೂ ನಾವು ಸದಾ ಕಾಲದಲ್ಲಿಯೂ ಯಶಸ್ಸನ್ನು ಕೋರುತ್ತೇವೆ.

ಬಡ ಬಗ್ಗರಿಗೆ ಅನ್ನದಾನ ಮಾಡುವ ಏರ್ಪಾಡು ಸರ್ಕಾರಿ ಅಧಿಕಾರಿಗಳ ಮೇಲ್ವಿಚಾರಣೆಯಲ್ಲಿ ನಡೆಯುವುದಕ್ಕಿಂತಲೂ ಖಾಸಗೀ ಮಹಾಶಯರ ನೇತೃತ್ವದಲ್ಲಿ ಹೆಚ್ಚು ಯಶಸ್ವಿಯಾಗಿ ನಡೆಯುವುದೆಂಬುದೇ ನಮ್ಮ ಅಭಿಮತ. ರಾಜಧಾನಿಯಲ್ಲಿ ಕಳೆದ ಎರಡು ವರ್ಷಗಳಿಂದ ನೂರಾರು ಜನ ಬಡವರಿಗೆ ನಡೆಯುತ್ತಿರುವ ಅನ್ನದಾನವೇ ಇದಕ್ಕೆ ಉದಾಹರಣೆ

ಸರ್ಕಾರಿ ನೌಕರರಿಗೆ ಇಂತಹ ಕೆಲಸಗಳನ್ನು ಸಂಪೂರ್ಣ ಶ್ರದ್ಧೆಯಿಂದ ನಿರ್ವಹಿಸಲು ಅವಧಾನವಿರುವುದಿಲ್ಲ. ತಮ್ಮ ದಿನಚರಿಯ ಕಾಗದ ಪತ್ರಗಳನ್ನೂ, ಸರ್ಕಾರಿ ವ್ಯವಹಾರಗಳನ್ನೂ ಏಲಿ ಮಾಡುವುದರಲ್ಲಿಯೇ ಅವರು ಬಳಲಿ ಬೆಂಡಾಗುವರು. ಅದರ ಜೊತೆಗೆ ವಿಶೇಷ ಜವಾಬ್ದಾರಿಯುತವಾದ ಅನ್ನದಾನದ ಕೆಲಸವನ್ನೂ ನಿರ್ವಹಿಸುವುದು ಅವರಿಗೆ ಶ್ರಮ ಸಾಧ್ಯವೇ ಸರಿ. ಅಲ್ಲದೆ ಕಾನೂನು ಕಟ್ಟಳೆಗಳ ಮಾಮೂಲಿಗೆ ಕಟ್ಟು ಬಿದ್ದಿರುವ ಅವರುಗಳಿಗೆ ಕಾರ್ಯ ಸಾಧನೆಗಿಂತಲೂ ಲೆಖ್ಖಾಚಾರಗಳ ಕಡೆಗೇ ಹೆಚ್ಚು ಗಮನವಿರುತ್ತದೆ. ಅವರು ಮಾಡುವ ಕೆಲಸಗಳು ನಿರ್ಜೀವ ಯಂತ್ರದಂತೆ ಇರುತ್ತವೆ.

ಖಾಸಗೀ ಜನರಿಗಾದರೋ ಯಾವ ನಿರ್ಬಂಧವೂ ಇರುವುದಿಲ್ಲ; ಅವರು ತಮ್ಮ ಕಾಲವನ್ನೆಲ್ಲಾ ಈ ಕೆಲಸಕ್ಕಾಗಿ ವಿನಿಯೋಗಿಸಬಹುದು ಮತ್ತು ಹೆಚ್ಚಾದ ಆಸಕ್ತಿಯನ್ನು ತೋರಿಸಬಹುದು.

ದಿವಾನರು ಸೂಚಿಸಿರುವಂತೆ ಅಭಾವದ ಪ್ರದೇಶಗಳಲ್ಲಿ ಸ್ಥಾಪಿತವಾಗುವ ಹೆಚ್ಚಿನ ಅನ್ನಾಲಯಗಳು ಖಾಸಗೀ ಮಹಾಶಯರ ಮೇಲ್ವಿಚಾರಣೆಯಲ್ಲಿ ಮತ್ತಷ್ಟು ಹೆಚ್ಚಿನ ಸೇವೆಯನ್ನು ಸಲ್ಲಿಸುವುದರಲ್ಲಿ ಸಂಶಯವಿಲ್ಲ. ಇದುವರೆಗೆ ಖಾಸಗೀ ಜನರು ನಡೆಸುತ್ತಿದ್ದ ಸಂಸ್ಥೆಗಳಿಗೆ ಅಧಿಕಾರಿಗಳು ಅಷ್ಟಾಗಿ ನೆರವು ನೀಡಿಲ್ಲವೆಂಬ ಪುಕಾರುಗಳು ಬರುತ್ತಿವೆ. ಹೊಟ್ಟೆಗಿಲ್ಲದ ಜನರಿಗಾಗಿ ಶೇಖರಿಸಿಟ್ಟಿದ್ದ ಧಾನ್ಯವನ್ನು ಅಲ್ಲಿಗೆ ಕಳುಹಿಸಲು ಹಲವು ಅಧಿಕಾರಿಗಳು ಅವಕಾಶವಿತ್ತಿಲ್ಲ. ಆದರೆ ಸರ್ಕಾರದವರ ಆಶ್ರಯದಲ್ಲಿ ಸ್ಥಾಪಿತವಾದ ಸಮಿತಿಗಳಿಗೆ ಖಾಸಗೀ ಜನರು ಯಾವ ಭೇದವೂ ಇಲ್ಲದೆ ಧನ ಧಾನ್ಯ ಸಹಾಯವನ್ನು ನೀಡಿದ್ದಾರೆ.

ಇನ್ನು ಮುಂದೆ ಆ ಭೇದವು ಹೋಗಿ ಖಾಸಗೀಯವರ ನೇತೃತ್ವದಲ್ಲಿ ಈ ಸಮಿತಿಗಳು ಇನ್ನು ಮುಂದೆ ನಡೆಯಲಿವೆ. ಇದಕ್ಕೆ ಸರ್ಕಾರದವರೂ, ಅಧಿಕಾರಿ ವರ್ಗದವರೂ, ಮಹಾಜನರೂ ಸಂಪೂರ್ಣವಾದ ಸಹಕಾರವನ್ನು ನೀಡಿ ಆ ಯಶಸ್ವಿಯಾಗುವಂತೆ ಮಾಡುವರೆಂದು ನಂಬುತ್ತೇವೆ

ರೈಲ್ವೆ ಸ್ಟೇಷನ್ನಿನಲ್ಲಿ ಲಾಠಿ ಪ್ರಯೋಗ

ರೈಲ್ವೆ ಗಾಡಿಯ ಪ್ಲಾಟ್‌ಫಾರಂನ ಮೇಲೆ ಪ್ರಯಾಣ ಮಾಡುತ್ತಿದ್ದರೆಂದು ಮಿಲಿಟರಿ ಕಂಟ್ರೋಲ್ ಅಕೌಂಟ್ಸ್ ಇಲಾಖೆಯ ಗುಮಾಸ್ತರಿಬ್ಬರನ್ನು ರೈಲ್ವೆ ಪೋಲೀಸರು ದಸ್ತಗಿರಿ ಮಾಡಿದ್ದನ್ನು ಪ್ರತಿಭಟಿಸಿ ಅದೇ ಇಲಾಖೆಗೆ ಸೇರಿದ ನೂರಾರು ಗುಮಾಸ್ತರುಗಳು ಲಾಹೋರ್ ರೈಲ್ವೆ ಸ್ಟೇಷನ್ನಿನಲ್ಲಿ ಸೇರಿದ್ದಾಗ್ಯೆ ಆ ಗುಂಪನ್ನು ಚದುರಿಸಲು ಪೋಲೀಸರು ಲಾಠಿ ಪ್ರಯೋಗ ಮಾಡಿದರೆಂದೂ ಅನೇಕರಿಗೆ ಪೆಟ್ಟಾಗಿದೆಯೆಂದೂ ಸುದ್ದಿ ಬಂದಿದೆ. ಸ್ವಲ್ಪ ಕಾಲಾನಂತರ ಮಿಲಿಟರಿ ಕಂಟ್ರೋಲರೇ ಬಂದು ದಸ್ತಗಿರಿ ಆಗಿದ್ದ ಗುಮಾಸ್ತರನ್ನು ಖುಲಾಸೆ ಮಾಡಿದರೆಂದು ವರದಿಯಾಗಿದೆ.

ಹೋಟೆಲು ಮಾಲೀಕರಿಗೆ ಜುಲ್ಮಾನೆ

ಸ್ವಂ. ಸು.] ಚಾಮರಾಜನಗರ ೮

ಇಲ್ಲಿನ ಹೋಟೆಲೊಂದರ ಮಾಲೀಕರುಗಳಾದ ಶ್ರೀ ಬಾಲಾಜಿಸಿಂಗ್ ಮತ್ತು ಶ್ರೀಮತಿ ನಾಗಮ್ಮ ಎಂಬುವರು ಕಾನೂನಿಗೆ ವಿರೋಧವಾಗಿ ದೋಸೆ ಮಾಡಿದರೆಂದು ಹೂಡಿದ್ದ ಮೊಕದ್ದಮೆಯಲ್ಲಿ ಎಕ್ಸ್ ಅಫೀಷಿಯೋ ಮ್ಯಾಜಿಸ್ಟ್ರೇಟರಿಂದ ವಿಚಾರಣೆ ಜರುಗಿ ತಲಾ ೧ ಮತ್ತು ೫ ರೂ. ಜುಲ್ಮಾನೆ ವಿಧಿಸಲಾಗಿದೆಯೆಂದು ತಿಳಿದುಬಂದಿದೆ. ಈ ಆಜ್ಞೆ ಜಾರಿಗೆ ಬಂದ ಮೇಲೆ ಇದೇ ಇಲ್ಲಿ ಮೊದಲನೇ ಮೊಕದ್ದಮೆ.

ನೀರಿನ ಅಭಾವ

ಸ್ವಂ. ಸು.] ನಾಗಮಂಗಲ ೭

ಈ ಊರಿನಲ್ಲಿ ನೀರಿನ ಅಭಾವ ಹೇಳತೀರದಾಗಿದೆ. ಸರ್ಕಾರದವರು ಕೊಟ್ಟಿರುವ ಗ್ರಾಂಟನ್ನು ಉಪಯೋಗಿಸಿಕೊಂಡು ಸರಿಯಾದ ವಸತಿ ಇರುವ ಪ್ರದೇಶದಿಂದ ನೀರು ಸರಬರಾಜು ಮಾಡಿ ಪುರಸಭೆಯವರು ನಾಲ್ಕು ಸಾವಿರ ಪ್ರಜೆಗಳಿಗೆ ನೀರಿನ ಸೌಕರ್ಯವನ್ನು ತಕ್ಷಣ ಒದಗಿಸಿಕೊಡಬೇಕಾಗಿದೆ

ಅಧಿಕಾರಿಗಳಲ್ಲಿ ಪ್ರಾರ್ಥನೆ

ಈ ತಾಲ್ಲೂಕಿನ ಚಿಕ್ಕ ಗ್ರಾಮಕ್ಕೆ ಡಿಸ್ಪೆನ್ಸರೀ ಇಲ್ಲ. ಆಸ್ಪತ್ರೆಯನ್ನು ಕಳೆದ ಕೆಲವು ತಿಂಗಳಿಂದ ಕಾಂಪೌಂಡರೇ ನಡೆಸಿಕೊಂಡು ಹೋಗುತ್ತಿದ್ದರು. ಈಗ ಆ ಕಾಂಪೌಂಡರನ್ನು ಬೇರೆ ಕಡೆಗೆ ವರ್ಗಾಯಿಸಿರುವುದರಿಂದ ಗ್ರಾಮಸ್ಥರಿಗೆಲ್ಲಾ ಬಹಳ ತೊಂದರೆಯಾಗಿದೆ.

ಅಪೇರಾ ಟಾಕೀಸ್

11—5—46 ರಿಂದ

ಎರಡನೇ ವಾರ

★ ವಾಲ್ಮೀಕಿ ★

(ತಮಿಳು ಭಾಷೆ)

* ಹೊನ್ನಪ್ಪ ಭಾಗವತರ್,

* ಟಿ. ಆರ್. ರಾಜಕುಮಾರಿ

ಮುಂತಾದವರು.

Edited, printed and published by A. K. Nagarajan at the Sadhvi Press D. Subbiah Road, Mysore.

ವಾರ್ತಾ ವಾಹಿನಿ

§ ಸೇಲಂ ಸೆಂಟ್ರಲ್ ಜೈಲಿನಲ್ಲಿದ್ದ ಕಟ್ಟಿಗೆ ಮತ್ತು ಉಪ್ಪನ್ನು ಕಳ್ಳತನದಲ್ಲಿ ಮಾರಿದರೆಂದು ಅಲ್ಲಿನ ಸೂಪರಿಂಟೆಂಡೆಂಟ್ ಮತ್ತು ೮ ಮಂದಿಯ ಮೇಲೆ ಮೊಕದ್ದಮೆ ಹೂಡಲಾಗಿದೆ.

§ ಬಡ ಜನರಿಗೆ ಅಗ್ಗವಾಗಿ ಆಹಾರವನ್ನು ಒದಗಿಸಲು ಹೈದರಾಬಾದ್ ಸರ್ಕಾರವು ೬೦ ಸಾವಿರ ರೂ ಖರ್ಚಿನಲ್ಲಿ ಊಟದ ಗೃಹಗಳನ್ನು ತೆರೆದಿದೆ. ಒಂದು ಊಟಕ್ಕೆ ೩ ಆಣೆ ತೆಗೆದುಕೊಳ್ಳಲಾಗುವುದು. ಇದರಲ್ಲಿ ಸಸ್ಯಾಹಾರ ಮತ್ತು ಮಾಂಸಾಹಾರ ಎರಡು ಬಗೆಯೂ ಉಂಟು.

* ಬೊಂಬಾಯಿ ವಾರ ಪತ್ರಿಕೆಯಾದ "ಫೋರಂ" ಕಳೆದ ಜುಲೈನಲ್ಲಿ ಇತ್ತಿದ್ದ ೩ ಸಾವಿರ ರೂ ಗಳ ಠೇವಣಿಯನ್ನೂ, ಹಿಂದೂಸ್ಥಾನ್ ಮುದ್ರಣಾಲಯದವರು ಕೊಟ್ಟಿದ್ದ ೧ ಸಾವಿರ ರೂ ಠೇವಣಿಯನ್ನೂ ಕಾಂಗ್ರೆಸ್ ಸರ್ಕಾರ ಹಿಂದಕ್ಕೆ ಕೊಟ್ಟಿದೆ.

* ಪ್ಯಾಲೆಸ್ಟೈನ್ ಭವಿಷ್ಯ ಕುರಿತು ಚರ್ಚಿಸಲು ಅರಬ್ ಲೀಗ್, ಭಾರತ, ಅಫಘಾನಿಸ್ಥಾನ ಮತ್ತು ವ್ಯಾಟಿಕನ್‌ಗಳಿಗೆ ರಾಯಭಾರಿಗಳನ್ನು ಕಳಿಸಲು ನಿರ್ಧರಿಸಿದೆ.

* ಸ್ವತಂತ್ರ ಭಾರತದಲ್ಲಿ ಸಂಸ್ಥಾನಗಳಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪನೆಯಾಗುವುದು ಖಂಡಿತ. ನರೇಂದ್ರರು ರಾಜಕೀಯ ನಾಯಕರಾಗಲಿ, ಅವರ ಬಗ್ಗೆ ನಮಗೆ ದ್ವೇಷ ಭಾವನೆ ಇಲ್ಲವೆಂದು ನಾವು ಪದೇ ಪದೇ ಹೇಳಿದ್ದೇವೆ-ಎಂದು ಫರೀದ್‌ಕೋಟೆ ದಿನಾಚರಣೆಯಲ್ಲಿ ನೆಹರು ಸಂದೇಶ ಇತ್ತಿದ್ದಾರೆ

* ೧೯೪೭ ರ ಸುಗ್ಗಿಯ ವರೆಗೂ ಆಹಾರ ಅಭಾವದ ಬಿಕ್ಕಟ್ಟು ಇರುವುದೆಂದು ಹೇಳಲಾಗಿದೆ

§ ಮಳೆಯ ಕಾರಣದಿಂದ ಆಕ್ಸ್‌ಫರ್ಡ್‌ಗೂ ಭಾರತೀಯ ಟೀಮಿಗೂ ಮೊನ್ನೆ ದಿನ ಆರಂಭವಾಗಬೇಕಾಗಿದ್ದ ಕ್ರಿಕೆಟ್ ಪಂದ್ಯ ಮುಂದುವರೆದಿದೆ

* ರೆವಿನ್ಯೂ ಕಮೀಷನರಾದ ಶ್ರೀ ಓ. ಪುಟ್ಟರೆಡ್ಡಿಯವರು ನಾಳೆಯಿಂದ ೧೩ ನೇ ತಾ|| ವರೆಗೆ ಮಂಡ್ಯ ಮತ್ತು ಮೈಸೂರು ಜಿಲ್ಲೆಗಳ ಪ್ರವಾಸ ಕೈಗೊಳ್ಳುವರು.

* ೫,೫೦೦ ಟನ್ ಗೋಧಿ, ೫೦೦ ಟನ್ [illegible], ವಿದೇಶಗಳಿಂದಲೂ, ೭೦೬೩ ಟನ್ ಅಕ್ಕಿ ಅಸ್ಸಾಮಿನಿಂದಲೂ, ೮೫೦ ಟನ್ ಆಲೂಗೆಡ್ಡೆ ಸಂಯುಕ್ತ ಪ್ರಾಂತ್ಯದಿಂದಲೂ ಮೈಸೂರು ಸಂಸ್ಥಾನಕ್ಕೆ ಇನ್ನು ೧೫ ದಿನಗಳಲ್ಲಿ ಬರಲಿವೆ

* ಈಜಿಪ್ಟಿನೊಡನೆ ನಡೆಯುತ್ತಿರುವ ಸಂಧಾನವು ಯಶಸ್ವಿಯಾಗಿ ಜರುಗಲು ಅಲ್ಲಿರುವ ಬ್ರಿಟಿಷ್ ಸೈನ್ಯವನ್ನು ವಾಪಸು ಕರೆಸಬೇಕೆಂದು ೩೨೭-೧೯೪ ಓಟುಗಳಿಂದ ಬ್ರಿಟಿಷ್ ಕಾಮನ್ಸ್ ಸಭೆ ನಿರ್ಧರಿಸಿದೆ.

ರಂಜಿತ್

10—5—1946 ರಿಂದ

★ ಗರೀಬ್ ★

(ಹೊಸ ಪ್ರಿಂಟ್)

ಪಾತ್ರ:- * ಸುರೇಂದ್ರ, ರೋಸ್

ಪ್ರತಿದಿನ ೩ ಆಟಗಳು

ಬೆಳಗಿನ ಪ್ರದರ್ಶನ— ಜವಾಬ್

ಪ್ರಜಾಪ್ರತಿನಿಧಿ ಸಭಾ ಉಪಚುನಾವಣೆ

ಹರಿಹರ

ಶ್ರೀ ಎಂ. ಮಲ್ಲಿಕಾರ್ಜುನಪ್ಪ ಮತ್ತು ಶ್ರೀ ಪಟೇಲ್ ಶಿವಪ್ಪ [ಸ್ವ] ಗಳು ಚುನಾಯಿತರಾದರು.

ಕೊಪ್ಲೇಸ್‌ಪೇಟೆ

ಶ್ರೀ ಬಿ. ಚೂಡೇಗೌಡ [ಕಾಂ] ಎಂ.ಬಿ. ಗುರುಲಿಂಗಯ್ಯ [ಸ್ವ] ಇವರು ಚುನಾಯಿತರಾದರು.

ಕಾನಕಾನಹಳ್ಳಿ

ಶ್ರೀಗಳಾದ ಕರಿಯಪ್ಪ [ಕಾಂ] ಲಿಂಗೇಗೌಡ [ಕಾಂ] ಮತ್ತು ಬಿ. ವ್ಯ [ಸ್ವ] ಇವರುಗಳು ಚುನಾಯಿತರಾ

ಉಪನಯನ

ನಂಜನಗೂ

ನರಸೀಪುರದ ಕೃಷ್ಣಶಾಸ್ತ್ರಿಗಳ ಮ ಮುನಿಸಿಪಲ್ ಕೌನ್ಸಿಲರ್ ಶ್ರೀ ಚಿ ದಂಬರಶಾಸ್ತ್ರಿಗಳವರು ತಮ್ಮ ದ್ವಿತೀಯ ಚಿ|| ಸೌ|| ಶ್ರೀಕಂಠನಿಗೆ ಬ್ರಹ್ಮೋಪದೇಶವನ್ನು ಇಂದು ತಮ್ಮ ಸ್ವಗೃಹವಾದ ಶ್ರೀನಿಲಯದಲ್ಲಿ ನೆರವೇರಿಸಿದರು.

ಮೀರಜ್‌ನಲ್ಲಿ ಪೋಲೀಸ್ ಮುಷ್ಕರ

ಸಂಬಳವನ್ನು ಹೆಚ್ಚಿಸಬೇಕೆಂದು ಮೀರಜ್ ಪೋಲೀಸಿನವರು ಈಗ್ಗೆ ವಾರದಿಂದ ತಮ್ಮ ಸಂಬಳ ತೆಗೆದುಕೊಳ್ಳಲು ಸಾಮೂಹಿಕವಾಗಿ ನಿರಾಕರಿಸಿದ್ದಾರೆ.

ಗೀ ರಾಜಕೀಯ ಗಲಭೆಗಳನ್ನು ಟ್ಟಲು ದಕ್ಷಿಣ ಪ್ರಾಂತೀಯ ಪೋಲೀಸರಿಗೆ, ಮೆಷಿನ್, ಶಸ್ತ್ರ ಸಜ್ಜಿತವಾದ ಗಳೇ ಮೊದಲಾದ ಆಧುನಿಕ ಸಲಕರಣೆಗಳನ್ನು ಒದಗಿಸಲಾಗುವುದು.

§ ಬೆಂಗಳೂರು ಪುರಸಭೆಯ ಸ್ ಪಕ್ಷದ ನಾಯಕರಾಗಿ ಶ್ರೀ ಹೆಚ್ ಸತ್ಯನಾರಾಯಣರಾಯರು ಟ್ಟಿದ್ದಾರೆ

City Municipal Office Mysore Dated the 8th Ma

NOTIFICATION.

Notice is hereby given the inhabitants of Mys City Municipality that Municipal Council have solved to levy Octroi at the playing cards and 3 p in the rupee on brush all varieties under Sche II Class VIII

Any person having objection in respect of above may prefer the in writing to the undersig within one month from date after which no ob tions will be heard

R. Ramachandra Ra Bomb

President

City Municipal Coun

Mysore.

ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಶನಿವಾರ ೧೧—೫—೪೬ [ಸಂಚಿಕೆ ೨೧೦

ಪಂಡಿತ ನೆಹರುರವರು ಭಾರತದ ಪ್ರಧಾನಿಯೇ?

ಪುರಸಭಾ ಕಾಂಗ್ರೆಸ್ ಪಕ್ಷದ ಅಧಿಕಾರ ವರ್ಗ

ಮೈಸೂರು ೧೧

ರಾಜಧಾನಿಯ ಪುರಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರ ಸಭೆಯು ನಿನ್ನೆ ಸಂಜೆ ಸಮಾವೇಶಗೊಂಡು ಮುಂದಿನ ಸಾಲಿಗೆ ಶ್ರೀ ನಾರಾಯಣಸ್ವಾಮಿಯವರನ್ನು ನಾಯಕರನ್ನಾಗಿಯೂ, ಶ್ರೀ ಅಗರಂ ರಂಗಯ್ಯನವರನ್ನು ಉಪನಾಯಕರನ್ನಾಗಿಯೂ, ಶ್ರೀ ಟಿ. ವೆಂಕಟರಮಣಯ್ಯನವರನ್ನು ಕಾರ್ಯದರ್ಶಿಗಳನ್ನಾಗಿಯೂ, ಶ್ರೀ ವಿ. ಎಚ್. ದಾಸಪ್ಪನವರನ್ನು ಖಜಾಂಚಿಗಳನ್ನಾಗಿಯೂ, ಮತ್ತು ಶ್ರೀ ಕೆ. ಎಸ್. ಸತ್ಯನಾರಾಯಣರಾಯರನ್ನು ವ್ಹಿಪ್‌ರನ್ನಾಗಿಯೂ ಶ್ರೀ ವಿ. [illegible] ದಾಸಪ್ಪನವರನ್ನು ಖಜಾಂಚಿಯಾಗಿಯೂ ಚುನಾಯಿಸಲಾಗಿದೆ.

ಶ್ರೀ ಕನ್ಯಕಾಪರಮೇಶ್ವರೀ ವರ್ಧಂತಿ

ಅಶೋಕ ರಸ್ತೆಯಲ್ಲಿರುವ ಶ್ರೀ ಕನ್ಯಕಾಪರಮೇಶ್ವರೀ ದೇವಸ್ಥಾನದಲ್ಲಿ ಅಮ್ಮನವರ ವರ್ಧಂತಿ ಉತ್ಸವವು ನಿನ್ನೆಯಿಂದ ಆರಂಭವಾಗಿದೆ. ಈ ದಿನ ರಾತ್ರಿ ನಾರದಾ ಅವತಾರ ಮತ್ತು ಹರಿಕಥೆಯೂ, ನಾಳೆ ರಾತ್ರಿ ಅನ್ನಪೂರ್ಣಾ ಅಲಂಕಾರ ಮತ್ತು ಮಂಗಳಾರತಿಯೂ ಜರುಗುವುವು.

ವಿವಾಹ

ರಾಜಧಾನಿಯ ಪ್ರಸಿದ್ಧ ವ್ಯಾಪಾರಿಗಳಾದ ಶ್ರೀ ಎಂ. ಎಲ್. ಶ್ರೀನಿವಾಸರಾಯರು ತಮ್ಮ ಬಾಲಿನ ಪುತ್ರಿ ಚಿ|| ಸೌ|| ಲಲಿತಾಬಾಯಿಯನ್ನು ಕ್ಯಾಪ್ಟನ್ ಸಿ. ಆರ್. ರಂಗರಾಯರಿಗೆ ಕೊಟ್ಟು ವಿವಾಹವನ್ನು ನಾಳೆ ಮಧ್ಯಾಹ್ನ ಶ್ರೀ ಧನಲಕ್ಷ್ಮಮ್ಮನವರ ಛತ್ರದಲ್ಲಿ ನೆರವೇರಿಸುವರು.

ಚರಕಾ ಕೂಟ

"ಕಸಬರ ಸಂಘಗಳ ಕಾರ್ಯ ನಿರ್ವಾಹಕ ಸಮಿತಿಗಳಲ್ಲಿ ಐಕಮತ್ಯಕ್ಕಿಂತಲೂ ಭಿನ್ನತೆಗಳು ಇರುವುದೇ ಮೇಲು" ಎಂಬ ವಿಷಯವಾಗಿ ಇದೇ ಗುರುವಾರ ಸಂಜೆ [illegible] ಗಂಟೆಗೆ [illegible] ಭವನದಲ್ಲಿ ಚರಕಾ ಕೂಟ ನಡೆಯುವುದು. ಸರ್ವರಿಗೂ ಪ್ರವೇಶ ಉಂಟು.

ಫುಟ್‌ಬಾಲ್

[illegible] ಟೂರ್ನಮೆಂಟಿನ ಆಶ್ರಯದಲ್ಲಿ ನಿನ್ನೆ ಸಂಜೆ ಮೈಸೂರು ಮುಸ್ಲಿಮ್ ಟೀಮಿಗೂ ಮತ್ತು ಊಟಿ ರೋವರ್ಸ್ ಟೀಮಿಗೂ ಫುಟ್‌ಬಾಲ್ ಪಂದ್ಯ ನಡೆದು ಮೈಸೂರು ಮುಸ್ಲಿಂ ಟೀಮಿನವರು ೬-೧ ಗೋಲುಗಳಿಂದ ಗೆದ್ದರು.

ಗಾಯತ್ರಿ ಹೋಮದ ಆರಂಭ

[illegible] ಹಿರೀಸಾವೆ [illegible]

[illegible] ಗ್ರಾಮದಲ್ಲಿ ಶ್ರೀ ರಾಮ [illegible] ಸಾಮ್ರಾಜ್ಯ ಪಟ್ಟಾಭಿಷೇಕ ಮತ್ತು ಗಾಯತ್ರಿ ಹೋಮ ಸಮಾರಂಭಗಳು ನಿ[illegible] ಕಲಶ ಸ್ಥಾಪನೆಯೊಡನೆ ೧೦ ಜನ ಋತ್ವಿಕರಿಂದ ಪ್ರಾರಂಭಿಸಲ್ಪಟ್ಟಿತು.

ವಾರ್ಷಿಕ ಸಭೆ

[illegible] ಸಕ್ಕರೆ ಕಂಪೆನಿ ಕೆಲಸಗಾರರ [illegible] ವಾರ್ಷಿಕ ಸಭೆಯು ೧೩-೫-೪೬ ಸೋಮವಾರ ಸಂಜೆ ೫ ಗಂಟೆಗೆ ಸಕ್ಕರೆ [illegible] ಭಾಗದಲ್ಲಿ ಶ್ರೀ ಹೆಚ್. [illegible] ಅಧ್ಯಕ್ಷತೆಯಲ್ಲಿ ಜರುಗುವುದು. ಶ್ರೀ ಪಾಲಕ್ಕಾ [illegible] ರವರು ಆರಂಭ ಭಾಷಣ ಮಾಡುವರು.

ಪಕ್ಷದಿಂದ ವಜಾ

ಮೈಸೂರು ೧೧

ಶ್ರೀಗಳಾದ ಎಂ. ಆರ್. ಸಿ. ಬಸಪ್ಪ ಮತ್ತು ಬಿ. ಜನಾರ್ಧನ ನಾಯ್ಡುರವರುಗಳಿಗೆ ಮುನಿಸಿಪಲ್ ಕಾಂಗ್ರೆಸ್ ಪಾರ್ಟಿಯಿಂದ ಕೊಟ್ಟಿದ್ದ "ಷೋ" ಕಾಸ್ ನೋಟೀಸುಗಳಿಗೆ ಸಮರ್ಪಕವಾದ ಉತ್ತರವು ಬಾರದಿರುವುದರಿಂದಲೂ ಮತ್ತು ಅವರುಗಳು ಪಾರ್ಟಿ ನಿಯಮಗಳನ್ನು ಉದ್ದೇಶಪೂರ್ವಕವಾಗಿ ವಿರೋಧಿಸುತ್ತಲೂ, ಪಾರ್ಟಿಯ ಮತ್ತು ಪಾರ್ಟಿಯಿಂದ ಅಧಿಕಾರ ಹೊಂದಿದವರ ಆಜ್ಞೆಗಳನ್ನು ಉಲ್ಲಂಘನೆ ಮಾಡುತ್ತಿದ್ದುದರಿಂದಲೂ ಇವರುಗಳನ್ನು ಪಾರ್ಟಿಯಿಂದ ತೆಗೆದುಹಾಕತಕ್ಕದ್ದೆಂದು ಸರ್ವಾನುಮತದಿಂದ ತೀರ್ಮಾನಿಸಲಾಯಿತೆಂದು [illegible] ನಿನ್ನೆ ಸಂಜೆ ನಡೆದ ಮೈಸೂರು ಪುರಸಭೆಯ ಕಾಂಗ್ರೆಸ್ ಪಕ್ಷದ ವಿಶೇಷ ಸಭೆಗಳಲ್ಲಿ ಮಂಜೂರಾಗಿರುವುದಾಗಿ ಪಕ್ಷದ ನಾಯಕರಾದ ಶ್ರೀ ಬಿ. ನಾರಾಯಣಸ್ವಾಮಿಯವರು ತಿಳಿಸಿದ್ದಾರೆ.

ಕ್ಯಾಪ್ಟನ್ ಸೈಗಾಲರ ಕಾರ್ಯಕ್ರಮ

ಆಜಾದ್ ಹಿಂದ್ ಫೌಜ್ ಸ್ವಯಂ ಸೇವಕರಾಗಿದ್ದ ಕ್ಯಾ|| ಸೈಗಾಲರವರು [illegible] ನೇ ಮಂಗಳವಾರ ತಲಚೇರಿಯಿಂದ ಕಾರಿನಲ್ಲಿ ಹೊರಟು, ಗುಂಡ್ಲುಪೇಟೆ, ನಂಜನಗೂಡು ಮಾರ್ಗವಾಗಿ ಮೈಸೂರಿಗೆ ಆಗಮಿಸುವರು. ಅವರನ್ನು ಕಾಂಗ್ರೆಸ್ ಆಫೀಸ್ ಬಳಿ ಸ್ವಾಗತಿಸಲಾಗುವುದು. ಸಾಯಂಕಾಲ ಆರು ಘಂಟೆಗೆ ಅವರು ಕಾಂಗ್ರೆಸ್ ಆಫೀಸಿಗೆ ಭೇಟಿ ಕೊಡುವರು ಮತ್ತು ಏಳು ಘಂಟೆಗೆ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುವರು. ವಿದ್ಯಾರ್ಥಿ ಕಾಂಗ್ರೆಸ್ಸಿನವರು ಏರ್ಪಡಿಸಿರುವ ರಾಷ್ಟ್ರೀಯ ಸೇವಾದಳದ ಆರಂಭೋತ್ಸವವನ್ನು [illegible] ನೇ ಬೆಳಗ್ಗೆ ಎಂಟು ಘಂಟೆಗೆ ನೆರವೇರಿಸುವರು. ಈ ಮೇಲ್ಕಂಡ ಸಮಾರಂಭಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರೂ, ವಿದ್ಯಾರ್ಥಿಗಳೂ, ಸಾರ್ವಜನಿಕರೂ ಭಾಗವಹಿಸಬೇಕೆಂದು ನಗರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ಬಿ. ನಾರಾಯಣಸ್ವಾಮಿಯವರು ಪ್ರಾರ್ಥಿಸುತ್ತಾರೆ.

ಹರಿಕಥೆ

ನಾಳೆ ಸಾಯಂಕಾಲ ೬ ಘಂಟೆಗೆ ಒಂಟಿಕೊಪ್ಪಲು ಶ್ರೀನಿವಾಸದೇವರ ದೇವಸ್ಥಾನದಲ್ಲಿ ವೇ|| ಹೆಚ್. ಕೆ. ಕಾಮಣ್ಣನವರಿಂದ "ಲಕ್ಷ್ಮಣ ಮೂರ್ಛೆ" ಎಂಬ ಹರಿಕಥೆ ನಡೆಯುವದು. ಸರ್ವರಿಗೂ ಆಹ್ವಾನವುಂಟು.

ನೆಹರುರವರು ಭಾರತದ ಮಹಾ ಪ್ರಧಾನರೇ?

ಭಾರತ ಕಾಂಗ್ರೆಸ್ಸಿನ ಅಧ್ಯಕ್ಷರಾಗಿ ಆರಿಸಲ್ಪಟ್ಟಿರುವ ಪಂ|| ಜವಾಹರಲಾಲರವರೇ ದಿಲ್ಲಿ [illegible] ಕೇಂದ್ರದಲ್ಲಿ ತಾತ್ಕಾಲಿಕ ರಾಷ್ಟ್ರೀಯ ಸರ್ಕಾರವನ್ನು ರಚಿಸುವಂತೆ ಆಹ್ವಾನಿಸಲ್ಪಡಬಹುದಾಗಿ ವಿಶ್ವಸ್ತ ಆಧಾರಗಳಿಂದ ಸ್ಪಷ್ಟವಾಗುತ್ತಿರುವುದಾಗಿ ವರದಿಯಾಗಿದೆ. ಹೊಸ ಸರ್ಕಾರದ ಮಂತ್ರಿಗಳ ಪಟ್ಟಿ ಈಗಾಗಲೇ ಸಿದ್ಧವಾಗಿದೆಯೆಂದೂ, ಅದು ಇಂದು ಸೇರುವ ತ್ರಿಪಕ್ಷ ಸಮ್ಮೇಳನದ ಮುಂದೆ ಮಂಡಿಸಲ್ಪಡುತ್ತದೆಂದೂ ಹೇಳಲಾಗಿದೆ.

—

ಆಕ್ಸ್‌ಫರ್ಡ್—ಭಾರತದ ಕ್ರಿಕೆಟ್ ಪಂದ್ಯ

ಭಾರತೀಯ [illegible] ತಮ್ಮ ಮೊದಲನೇ ಇನ್ನಿಂಗ್ಸಿನಲ್ಲಿ [illegible] ರನ್ನುಗಳನ್ನು ಮಾಡಿದ್ದಾರೆ. ಆಕ್ಸ್‌ಫರ್ಡ್‌ನವರು ಮೊದಲನೇ ಇನ್ನಿಂಗ್ಸಿನಲ್ಲಿ [illegible] ರನ್ನುಗಳನ್ನು ಮಾಡಿದ್ದರು. ಇವರು ತಮ್ಮ ಎರಡನೇ ಇನ್ನಿಂಗ್ಸನ್ನು ಆರಂಭಿಸಿದ್ದಾರೆ. [illegible] "ಡ್ರಾ" ಆಗಬಹುದೆಂದು ಹೇಳಲಾಗಿದೆ.

ತಾವೇ ಶಾಸನ ಭಂಗ ಮಾಡುವುದಾಗಿ ನೆಹರು ಎಚ್ಚರಿಕೆ

ಫೆಡರಲ್ ಕೋರ್ಟ್ ವಜ್ರಾಳ್ ಜಗ್ಗ ರೆಲ ವಿಮಾನವು ತಮ್ಮ ಪ್ರತಿನಿಧಿ ಶ್ರೀ ಕಿಚ್ಲು ರವರಿಗೆ ಅಲ್ಲಿನ ಸರ್ಕಾರ ಪ್ರತಿಬಂಧಕಾಜ್ಞೆ ಹಾಕಿರುವುದರಿಂದ ಪಂ|| ನೆಹರೂರವರು ಒಂದು ಎಚ್ಚರಿಕೆ ಇತ್ತು, ಅವಶ್ಯ ಬಿದ್ದರೆ ಫರೀದ್‌ಕೋಟಿಗೆ ತಾವೇ ಭೇಟಿ ಇತ್ತು ಪ್ರತಿಬಂಧಕಾಜ್ಞೆಯನ್ನು ಮುರಿಯುವುದಾಗಿ ತಿಳಿಸಿದ್ದಾರೆ.

ಸಿಮ್ಲಾ ಸಮ್ಮೇಳನ

ಮೊನ್ನೆ ದಿನ ಮುಕ್ತಿ ಸೇರಿದ್ದ ಸಿಮ್ಲಾ ಸಮ್ಮೇಳನ ಇಂದು ಮಧ್ಯಾಹ್ನ ೩ ಘಂಟೆವರೆಗೆ ಮುಂದುವರಿಸಲ್ಪಟ್ಟಿತು. ವೈಸರಾಯ್ ಮಂತ್ರಿಮಂಡಲದ ನಿಯೋಗ [illegible] ಕಾಂಗ್ರೆಸ್ ಪ್ರತಿನಿಧಿಗಳನ್ನು [illegible] ಲೀಗ್ ಪ್ರತಿನಿಧಿಗಳ [illegible] ಅಭಿಪ್ರಾಯ [illegible] ವ್ಯಕ್ತಪಡಿಸುತ್ತಿದ್ದಾರೆ. ಈ [illegible] ಸರ್ಕಾರದ ಕೇಂದ್ರದ [illegible] ಹೊಗಲಾಗುತ್ತಿದೆ.

ಟೈಪಿಸ್ಟ್ ಸ್ಟೇಷನ್ ಮಾಸ್ಟರುಗಳ ಮುಷ್ಕರ

ತಮ್ಮ ಸಂಬಳ ಮತ್ತು ಭತ್ಯವನ್ನು ಹೆಚ್ಚು ಮಾಡಬೇಕೆಂದು ಕೋರಿದ್ದನ್ನು ಇನ್ನೂ ಪರಿಶೀಲಿಸದಿರುವುದರಿಂದ ದಕ್ಷಿಣ ಇಂಡಿಯಾ ಟೈಪಿಸ್ಟ್ ಸ್ಟೇಷನ್ ಮಾಸ್ಟರುಗಳು ಮೇ ೨೫ರಿಂದ ಮುಷ್ಕರ ಹೂಡಬೇಕೆಂದು ನಿರ್ಧರಿಸಿದ್ದಾರೆ.

ಹುಲಿಯಿಂದ ರೈಲು ತಡ

ಜಯಕೋಟೆಯ ಸ್ಟೇಷನ್ನಿನ ಕಂಬಿಯ ಮೇಲೆ ಒಂದು ಹುಲಿಯು ಮಲಗಿದ್ದುದರ ಫಲವಾಗಿ ಬೊಂಬಾಯಿಗೆ ಬರಬೇಕಾಗಿದ್ದ ಫ್ರಂಟಿಯರ್ ಮೇಲ್ ಟ್ರೈನು ಎರಡು ಘಂಟೆ ಕಾಲ ತಡವಾಗಿ ಬಂದಿತು. ಟೈಪಿಸ್ಟ್ ಗ್ಯಾಂಗಿನವರು ಮತ್ತು ಇಂಜನ್ನಿನ ಡ್ರೈವರ್ ಕೂಗಾಡಿದಾದರೂ ಆ ಹುಲಿಯು ಸ್ವಲ್ಪವೂ ಕದಲಲಿಲ್ಲ.

ಮೇವಿಗಾಗಿ ಜೋಳದ ಕಡ್ಡಿ ಕತ್ತರಿಸಕೂಡದು

ಮೈಸೂರು ೧೧

[illegible] ನಂಜನಗೂಡು, ಮೈಸೂರು, ಹುಣಸೂರು ತಾಲ್ಲೂಕುಗಳ ಪ್ರದೇಶದಿಂದ ದನದ ಮೇವಿಗಾಗಿ ಬಿಳಿ ಜೋಳದ ಕಡ್ಡಿಗಳನ್ನು ಕತ್ತರಿಸಿ ರವಾನೆ ಮಾಡಕೂಡದೆಂದು ಮೈಸೂರು ಜಿಲ್ಲಾಧಿಕಾರಿಗಳು ಭಾರತ ರಕ್ಷಣಾ ಶಾಸನದ ರೀತ್ಯಾ ಒಂದು ಆಜ್ಞೆ ಹೊರಡಿಸಿದ್ದಾರೆ.

ಉಪನ್ಯಾಸ

ಶ್ರೀ ಶಂಕರ ಜಯಂತೀ ಮಹೋತ್ಸವ ಸಭೆಯ ಆಶ್ರಯದಲ್ಲಿ ನಾಳೆ ಸಾಯಂಕಾಲ [illegible] ಘಂಟೆಗೆ ಸಂಸ್ಕೃತ ಪಾಠಶಾಲೆಯಲ್ಲಿ ವಿದ್ವಾನ್ ವೈ. ಚಂದ್ರಶೇಖರ ಶಾಸ್ತ್ರಿಗಳವರು "ಶ್ರೀ ಶಂಕರಾಚಾರ್ಯರ ಚರಿತ್ರೆ ಮತ್ತು ಉಪದೇಶ" ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡುತ್ತಾರೆ.

ಶಿವಶಂಕರರಾವರೇ ಅಧ್ಯಕ್ಷರು

[illegible] ಬೆಂಗಳೂರು ೧೧

ಬೆಂಗಳೂರು ಪುರಸಭೆ ಅಧ್ಯಕ್ಷಸ್ಥಾನಕ್ಕೆ ಇದುವರೆವಿಗೆ ಶ್ರೀ ಶಿವಶಂಕರರಾವರ ಉಮೇದುವಾರಿಕೆ ಮಾತ್ರ ಬಂದಿದೆ. ಆದ್ದರಿಂದ ಅವರೇ ಪ್ರತಿಸ್ಪರ್ಧೆ ಇಲ್ಲದೆ ಅಧ್ಯಕ್ಷರಾಗಿ ಆರಿಸಲ್ಪಡುವರು.

ಸರ್. ವಿಶ್ವೇಶ್ವರಯ್ಯನವರ ಯೂರೋಪು ಪ್ರವಾಸ

ಕಳೆದ ಪ್ರಮುಖ ಕೈಗಾರಿಕೋದ್ಯಮಿಗಳ [illegible] ಸರ್ ಎಂ. ವಿಶ್ವೇಶ್ವರಯ್ಯನವರು ಸದ್ಯದಲ್ಲಿಯೇ ಯೂರೋಪ್ ಮತ್ತು ಅಮೇರಿಕಕ್ಕೆ ಹೋಗಿ ಅಲ್ಲಿ [illegible] ಕೈಗಾರಿಕೆಗಳ ಅಭಿವೃದ್ಧಿಯನ್ನು ಪರಿಶೀಲಿಸುವರೆಂದು ತಿಳಿದು ಬಂದಿದೆ.

"ಬೆಂಗಳೂರಿನ ಪುರಸಭೆಯ [illegible] ಅಧಿ[illegible] ಶ್ರೀ [illegible] ಅಧ್ಯಕ್ಷ [illegible], [illegible] ಎಸ್. ಶ್ರೀ [illegible] ಅಂಗೀಕರಿಸಿದೆ.

ಶ್ರೀ [illegible] ಬೆಂಗಳೂರು [illegible] ಶ್ರೀ [illegible]

[illegible]

ಸಾಧ್ವಿ
ತಾ॥ ೧೧-೫-೪೬ ಶನಿವಾರ

ಸಂಧಾನದ ಸಫಲತೆ

ಸಿಮ್ಲಾದಿಂದ ಬರುತ್ತಿರುವ ಇತ್ತೀಚಿನ ಸುದ್ದಿಗಳು ಸಮಾಧಾನಕ್ಕೆ ಎಡೆ ಕೊಟ್ಟಿವೆ. ಆರು ವಾರಗಳಿಂದ ನಡೆಯುತ್ತಿರುವ ಸಂಧಾನವು ಸಫಲವಾಗುವ ಸೂಚನೆಗಳು ಬರುತ್ತಿವೆ. ಮಾತುಕತೆಗಳು ಪ್ರತಿದಿನವೂ ಒಂದೊಂದು ಹೆಜ್ಜೆ ಮುಂದೆ ಹೋಗುತ್ತಿವೆ. ಇವುಗಳ ಪರಿಣಾಮವಾಗಿ ಒಪ್ಪಂದಕ್ಕೆ ಬರಲು ಸಹಾಯಕವಾದ ಹಲವು ಕಾರ್ಯಕ್ರಮಗಳೂ ಜರುಗುತ್ತಿವೆ. ವೈಸರಾಯರ ಮಂತ್ರಿಮಂಡಲದವರು ತಮ್ಮ ಸ್ಥಳಗಳಿಗೆ ರಾಜೀನಾಮೆಯನ್ನು ಸಲ್ಲಿಸುವುದು ಇವುಗಳಲ್ಲಿ ಅತ್ಯಂತ ಮುಖ್ಯವಾದುದು.

ರಾಷ್ಟ್ರೀಯ ಸರ್ಕಾರದ ರಚನೆಗೆ ಸರ್ವವಿಧದಲ್ಲಿಯೂ ದಾರಿಯು ಮಾಡಲ್ಪಡುತ್ತಿದೆಯೆಂದು ಹೇಳಬಹುದು. ಈಗ ನಡೆಯುತ್ತಿರುವ ಚಿಂತನ, ಸಮಾಲೋಚನೆಗಳು ಮುಗಿದರೆ ಇನ್ನು ಒಂದೆರಡು ದಿನಗಳಲ್ಲೇ ರಾಷ್ಟ್ರೀಯ ಸರ್ಕಾರವು ಏರ್ಪಡಬಹುದೆಂಬ ನಿರೀಕ್ಷಣೆಯೂ ಇದೆ. ಅದೂ ಒಂದು ವಾರದೊಳಗೆ ಇದು ಆಗಬಹುದೆಂದೂ ಸಹ ಹೇಳಲಾಗಿದೆ. ಗವರ್ನರುಗಳು ಕಳೆದ ಹಲವು ವರ್ಷಗಳಲ್ಲಿ ಭಾರತ ರಾಜ್ಯಾಂಗದ [illegible] ಕಲಮಿನ ಪ್ರಕಾರ ಆಡಳಿತವನ್ನು ನಡೆಸಿದಂತೆ ವೈಸರಾಯರು ಮಾಡಲು ಸಾಧ್ಯವಿಲ್ಲ. ಆದುದರಿಂದ ವಿಶೇಷ ಸಾವಕಾಶವಿಲ್ಲದೆ ರಾಜಕೀಯ ಪ್ರಮುಖ ಪಕ್ಷಗಳ ಪ್ರತಿನಿಧಿಗಳಿಂದೊಡಗೂಡಿದ ಹೊಸ ಕೇಂದ್ರ ಸರ್ಕಾರವು ಸ್ಥಾಪಿಸಲ್ಪಡಲೇಬೇಕು.

ಈಗ ಎಲ್ಲರ ಮನಸ್ಸು ಕೇಂದ್ರ ಸರ್ಕಾರದ ರಚನೆಯ ಕಡೆಗೇ ಹರಿಗಿರುತ್ತದೆ. ಭಾರತ ಖಂಡದ ಹೊಸ ರಾಜ್ಯಾಂಗ ರಚನೆಯ ವಿಚಾರವು ಇನ್ನೂ ಸ್ವಲ್ಪ ಸಾವಕಾಶವಾಗಿ ತೀರ್ಮಾನವಾಗಬಹುದು. ಆದರೆ ರಾಷ್ಟ್ರೀಯ ಸರ್ಕಾರದ ಬಗ್ಗೆ ಸಕಲರೂ ತೀವ್ರಾಸಕ್ತಿ ಉಳ್ಳವರಾಗಿದ್ದಾರೆ. ಲೀಗಿನವರೂ ಸಹ ಇದಕ್ಕೆ ಸಹಕಾರಿಗಳಾಗಿ ಬರುತ್ತಿರುವಂತಿದೆ. ಆದುದರಿಂದ ಬಹಳ ಬೇಗನೆ ಹೊಸ ಕೇಂದ್ರ ಸರ್ಕಾರವು ಸ್ಥಾಪಿತವಾಗಲು ಯಾವ ಅಡ್ಡಿಯೂ ಇರುವುದಿಲ್ಲ. ಇಷ್ಟು ಮಾತ್ರವನ್ನು ಬ್ರಿಟಿಷ್ ನಿಯೋಗದವರು ಸಾಧಿಸುವುದರಿಂದ ತಮ್ಮ ಸಂಧಾನ ಪ್ರಯತ್ನಕ್ಕೆ ವಿಶೇಷ ಸಫಲತೆಯನ್ನು ಉಂಟುಮಾಡಿದಂತೆಯೇ ಸರಿ. ಇದರಿಂದಲೇ ರಾಜ್ಯಾಂಗ ರಚನಾ ವಿಧಾನವನ್ನು ಸಹ ಅವರು ಸುಗಮವಾಗಿ ನಿರ್ಧರಿಸುವರೆಂದು ನಂಬಬಹುದು.

ಎಲ್ಲಾ ಕಡೆಯೂ ಆಹಾರ ಕೊರತೆಯು ಹೆಚ್ಚುತ್ತಿದೆ. ಕಾರ್ಪೋರೇಷನಿಂದ [illegible] 'ರೇಷನನ್ನು' [illegible] ದಣಕ್ಕೆ [illegible]. ಇನ್ನು [illegible] ದಿನಗಳಲ್ಲಿ [illegible] ಸುದ್ದಿ [illegible] ಹೇಳಿರುವರು. [illegible] ವನ್ನು [illegible] ಕೊಟ್ಟು [illegible]. ನೆಹರೂ, ಪಟೇಲ್ [illegible] ನವರನ್ನು [illegible] ಸಡಲಿ [illegible] ನಡೆ

ಯೂರೋಪಿನ ಸಂಯುಕ್ತ ಸಂಸ್ಥಾನಗಳ ರಚನೆ

ವಿಶ್ವ ಸಂಸ್ಥೆಯ ಆಶ್ರಯದಲ್ಲಿ ಯೂರೋಪಿನ ಪೂರ್ವ ಮತ್ತು ಪಶ್ಚಿಮ ರಾಷ್ಟ್ರಗಳೆಲ್ಲಾ ಸೇರಿಕೊಂಡು "ಯೂರೋಪಿನ ಸಂಯುಕ್ತ ಸಂಸ್ಥಾನಗಳನ್ನು" ಏರ್ಪಡಿಸಿದ್ದೇ ಆದರೆ ಅದರಿಂದ ಈ ಖಂಡದ ಏಳಿಗೆ ಉಂಟಾಗುತ್ತದಲ್ಲದೆ, ನ್ಯಾಯಯುತ ಸ್ಥಾಯಿಕವಾಗಿ ಚಿರಶಾಂತಿ ಸ್ಥಿರವಾಗಿ ನಿಲ್ಲುವುದು ಎಂದು ಮಿ॥ ಚರ್ಚಿಲ್‌ರವರು ಡಚ್ ಪಾರ್ಲಿಮೆಂಟಿನಲ್ಲಿ ಭಾಷಣ ಮಾಡುತ್ತಾ ತಿಳಿಸಿದರು.

ದೆಹಲಿಯಲ್ಲಿ ದಬ್ಬಾಳಿಕೆಯ ಅಂಕುರಾರ್ಪಣ

ಜಮಯತ್ ಉಲೇಮಾ ಮತ್ತು ಮಜ್ಲಿಸ್ ಅಹ್ರಾರ್ ಸಂಸ್ಥೆಗಳ ಆಶ್ರಮದಲ್ಲಿ ದೆಹಲಿಯ ಪಲ್ಲಿನಾರ್ ಎಂಬಲ್ಲಿ ನಿನ್ನೆ ರಾತ್ರಿ ಸೇರಿದ್ದ ಭಾರಿ ಸಾರ್ವಜನಿಕ ಸಭೆಯನ್ನು ಅಲ್ಲಿಯ ಡೆಪ್ಯುಟಿ ಕಮೀಷನರು ಅಕ್ರಮ ಕೂಟವೆಂದು ಘೋಷಿಸಿ ಸಭೆ ಚದುರಿಸಲು ಲಾಠಿ ಪ್ರಯೋಗವನ್ನೂ, ಟಿಯರ್ ಗ್ಯಾಸನ್ನೂ ನಿರ್ದಯೆಯಿಂದ ಉಪಯೋಗಿಸಿ ದಬ್ಬಾಳಿಕೆಯ ಅಂಕುರಾರ್ಪಣ ಮಾಡಿದ್ದಾರೆ. ಮೌ॥ ಅಹಮದ್ ಸೈಯದ್‌ರು, ನೆಹರೂ, ಆಜಾದ್, ಆಸಫ್ ಅಲಿಯವರಿಗೆ ಈ ಬಗ್ಗೆ ತಂತಿ ಕಳಿಸಿದ್ದಾರೆ. ದೆಹಲಿಯಲ್ಲಿ ರಾತ್ರಿ ೧೦ರಿಂದ ಬೆಳಗಿನ ಜಾವ ೫ ಘಂಟೆವರೆಗೆ ಕೆಲವೆಡೆ ಕರ್ಫ್ಯೂ ಆಜ್ಞೆ ಜಾರಿಯಲ್ಲಿದೆ

ಜಿ॥ ಬಯರ್ಸ್‌ರವರ ಮೊಕದ್ದಮೆ

ಮೊನ್ನೆ ತಾನೆ ಬಿಡುಗಡೆ ಹೊಂದಿದ ಜಿ॥ ಬಯರ್ಸ್‌ರವರ ಮೊಕದ್ದಮೆ ಮತ್ತು ನ್ಯಾಯಾಧೀಶರ ತೀರ್ಪು ಇವುಗಳ ಪೂರ್ತ ದಾಖಲೆಗಳನ್ನು ಸಂಸ್ಥಾನದವರು ಪರಿಶೀಲನೆಗಾಗಿ ಕೇಳುವರೆಂದು ಗೊತ್ತಾಗಿದೆ

ಇದು ಅತ್ಯಂತ ಮಹತ್ವದ ವಿಷಯ. ಬ್ರಿಟನರು ಈ ಸಮಯದಲ್ಲಿ ತಮ್ಮ ಮಾತನ್ನು ಉಳಿಸಿಕೊಂಡು ಸ್ವಾತಂತ್ರ್ಯ ಘೋಷಣೆಯನ್ನು ಖಂಡಿತವಾಗಿಯೂ ಮಾಡುವರೆಂದು ಶ್ರೀ ದೇವದಾಸ ಗಾಂಧಿಯವರು ಅಮೆರಿಕದಲ್ಲಿ ಹೇಳಿರುವರು. ಎಲ್ಲ ದೃಷ್ಟಿಯಿಂದಲೂ ಶುಭ ಸೂಚನೆಗಳು ತೋರ ಬರುತ್ತಿವೆ. ನಿಯೋಗದವರ ಪ್ರಯತ್ನವೂ, ಭಾರತೀಯರ ಆಕಾಂಕ್ಷೆಯು ಬೇಗನೆ ಈಡೇರಲೆಂಬುದೇ ಸಕಲರ ಹಾರೈಕೆಯಾಗಿದೆ.

ಮೈಸೂರು ಅರಮನೆಯಿಂದ
ಶ್ರೀ ಜಯಚಾಮರಾಜೇಂದ್ರ
ಗ್ರಂಥರತ್ನಮಾಲಾ
ಎಂಬ ನಾಮಾಂಕಿತದಿಂದ ಕನ್ನಡದಲ್ಲಿ
ಮುದ್ರಿಸಿರುವ
ಮಹಾ ಪುರಾಣ ಗ್ರಂಥಗಳು
ಮತ್ತು ಇನ್ನೂ ಅನೇಕ ವೇದಾಂತಾದಿ ಗ್ರಂಥಗಳೂ ಮಹಾ ಪಂಡಿತರುಗಳಿಂದ ಪರಿಷ್ಕರಿಸಲ್ಪಟ್ಟು ಕನ್ನಡ ಅರ್ಥ ಸಹಿತ ಮುದ್ರಿತವಾಗಿ ಬಿಕರಿಗೆ ಸಿದ್ಧವಾಗಿವೆ.
ಗ್ರಂಥಗಳು ದೊರೆಯುವ ಸ್ಥಳ:—
ಶ್ರೀ ಚಾಮುಂಡೇಶ್ವರಿ ಎಲೆಕ್ಟ್ರಿಕ್ ಪ್ರೆಸ್
ಕ್ಲಾಕ್ ಟವರ್ ಸ್ಕ್ವೇರ್,
ಮೈಸೂರು.

ಬ್ರಿಟನ್ನಿನಲ್ಲಿ ರೇಷನ್ ಖೋತಾ

ಪ್ರಪಂಚದ ಆಹಾರ ಪರಿಸ್ಥಿತಿ ಉಲ್ಬಣಿಸಿರುವುದರಿಂದಲೂ, ಸರಬರಾಜು ವ್ಯವಸ್ಥೆ ಸಡಲಿ ಹೋಗಿರುವುದರಿಂದಲೂ ಬ್ರಿಟನ್ನಿನಲ್ಲಿ ಹಾಲಿ ಕೊಡುತ್ತಿರುವ ರೇಷನ್ ಪ್ರಮಾಣವನ್ನು ಶೇಕಡ ೧೦ರಷ್ಟು ಇಳಿಸಿರುವುದಾಗಿ ಬ್ರಿಟಿಷ್ ಮಂತ್ರಿಮಂಡಲದ ಪ್ರಕಟಣೆ ಹೊರಟಿದೆ

ಇಟಲಿ ಭವಿಷ್ಯ ಪ್ರಜೆಗಳೇ ನಿರ್ಧರಿಸುವರು

ಇಟಲಿ ರಾಜರಾದ ವಿಕ್ಟರ್ ಇಮ್ಯಾನುಯಲ್ ರಾಜ ಪೀಠವನ್ನು ತ್ಯಜಿಸಿ ನೇಪಲ್ಸಿನಿಂದ ನೆಟಲಿಯನ್ ಕ್ರೂಸರ್ ಹಡಗಿನಲ್ಲಿ ಈಜಿಪ್ಟಿಗೆ ತೆರಳಿದರು. ರಾಜಕುಮಾರ ಉಂಬರ್ಟೋರವರು ಇಟಲಿ ರಾಜರಾಗಲು ಮಂತ್ರಿಮಂಡಲ ಒಪ್ಪಿದೆ. ಇಟಲಿಯ ಭವಿಷ್ಯ ರಾಜ್ಯಾಂಗ ವ್ಯವಸ್ಥೆಯನ್ನು ಪ್ರಜೆಗಳೇ ನಿರ್ಧರಿಸಬೇಕೆಂದೂ, ಈ ಬಗ್ಗೆ ಪ್ರಜಾಭಿಪ್ರಾಯ ಗಣನೆ ಮಾಡಬೇಕೆಂದೂ ಇಟಲಿ ಮಂತ್ರಿಮಂಡಲ ತೀರ್ಮಾನಿಸಿದೆ

ವ್ಯವಸಾಯ ವರಮಾನ ತೆರಿಗೆ

ಒರಿಸ್ಸದಲ್ಲಿ ವ್ಯವಸಾಯದ ಮೇಲೆ ವರಮಾನ ತೆರಿಗೆ ವಿಧಿಸುವ ಬಗ್ಗೆ ಮಂತ್ರಿಮಂಡಲ ಆಲೋಚಿಸುತ್ತಿರುವುದಾಗಿ ವರದಿಯಾಗಿದೆ

ಲಂಚ ನಿರ್ಮೂಲ ಪ್ರಯತ್ನ

ಪ್ರಾಂತ್ಯದ ಆಡಳಿತದಲ್ಲಿರಬಹುದಾದ ಕಳ್ಳ ವ್ಯಾಪಾರ ಮತ್ತು ಲಂಚ ಪದ್ಧತಿಯನ್ನು ನಿರ್ಮೂಲ ಮಾಡಲು ಬೊಂಬಾಯಿ ಸರ್ಕಾರವು ಒಂದು ಇಲಾಖೆಯನ್ನು ತೆರೆದಿದೆ.

ಕಾಮನ್ಸ್ ಸಭೆಯಲ್ಲೇ ನಿದ್ದೆ

[illegible] ಮತ್ತು ರಕ್ಷಣೆಯ ಶಾಸನವೊಂದನ್ನು ಬ್ರಿಟಿಷ್ ಕಾಮನ್ಸ್ ಸಭೆಯಲ್ಲಿ ಏಕ ಪ್ರಕಾರವಾಗಿ ೧೫ ಘಂಟೆಗಳ ಕಾಲ ಸೇರಿ ೩ ವಾಚನಗಳಲ್ಲೂ ಅಂಗೀಕರಿಸಲಾಯಿತು. ಈ ಸಭೆ ಇಷ್ಟು ದೀರ್ಘಕಾಲ ನಡೆದದ್ದು ಇದೇ ಮೊದಲು. ಸಭೆಯಲ್ಲಿ ಹಲವು ಸದಸ್ಯರು ನಿದ್ದೆ ಹೊಡೆಯುತ್ತಿದ್ದುದೂ ವರದಿಯಾಗಿದೆ.

ನಿಮ್ಮ ಮೈ [illegible]
ಹೊಳೆಯಬೇಕೆ? ನೀವು
ಲಾವಣ್ಯ ಮೂರ್ತಿಗಳಾಗಬೇಕೆ?
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!
ಮೈಸೂರು
ಸ್ಯಾಂಡಲ್
ಸೋಪ್!
ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ. ನಿಮಗೂ
ಸಂಪಾದಿಸಿ ಕೊಡುತ್ತದೆ.
ಪರೀಕ್ಷಿಸಿ ನೋಡಿರಿ.
ಎಲ್ಲೆಲ್ಲೂ ದೊರೆಯುತ್ತದೆ.
ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,
ಬೆಂಗಳೂರು.

ವಾರ್ತಾ ವಾಹಿನಿ

§ ಕಳೆದ ಯುದ್ಧದಲ್ಲಿ ಆಹಾರ ಸ[illegible] ಲ್ಲಿಸಿದರೆಂದು ಪಂಜಾಬಿನ ಪ್ರಧಾನಿ [illegible] ಸರ್ ಖಿಜರ್ ಹಯಾತ್ ಖಾ[illegible] ರವರಿಗೆ ಆಕ್ಸ್‌ಫರ್ಡ್ ವಿಶ್ವವಿದ್ಯಾನಿಲ[illegible] ಗೌರವ ಡಾಕ್ಟರೇಟ್ ಪ್ರಶಸ್ತಿ ಕೊಡಲು [illegible] ರ್ಧರಿಸಿದೆ. ಮಿ॥ ತಿವಾನರವರು [illegible] ಯಲ್ಲಿ ಅಲ್ಲಿಗೆ ತೆರಳಲಿದ್ದಾರೆ

§ ಕನ್ನಡದಲ್ಲಿ ಗೆಜೆಟೆಡ್ ಅಧಿಕಾ[illegible] ರುವ ಪ್ರಾವೀಣ್ಯತೆಯನ್ನು ಪರೀಕ್ಷಿ[illegible] ಸರ್ಕಾರಕ್ಕೆ ಎರಡು ಬಾರಿ ಮೇ ಮತ್ತು [illegible] ಬರ್ ತಿಂಗಳುಗಳಲ್ಲಿ ಪರೀಕ್ಷೆಗಳನ್ನು [illegible] ಲಾಗುವದು ಎಂದು ಸರ್ಕಾರದ ಆಜ್ಞೆ [illegible] ರಟಿದೆ

§ ಕೈರೋವಿಗೆ ಸಮೀಪದಲ್ಲಿರುವ [illegible] ರಿಕಾ ಜಿಲ್ಲೆಯೊಂದ [illegible] ಟನೆಂಹಾಮ್‌ರವರು ೭ ಲಕ್ಷ ಪೌಂಡ [illegible] ಬೆಲೆ ಇರುವ ಒಂದು ಭಾರಿ [illegible] ನ್ನು ಕೊಂಡಿದ್ದಾರೆ.

§ ಪಾಟ್ನದಲ್ಲಿ ಬಾಟಾ ಕಂಪೆನಿಯ [illegible] ಸಗಾರರು ಕಳೆದ ೬ನೇ ತಾ॥ ನಿಂದ [illegible] ಡಿದ್ದ ಮುಷ್ಕರವನ್ನು, ಮಾಲೀಕರು [illegible] ಳಿದ ವಿಚಾರದಲ್ಲಿ ಪರಿಶೀಲಿಸುತ್ತಿರುವ[illegible] ವರೆ ಇತ್ತದ್ದರಿಂದ, ಮುಕ್ತಾಯ[illegible] ದ್ದಾರೆ.

§ ಮಧ್ಯಪ್ರಾಂತ್ಯದ ಮಂತ್ರಿಗಳಿ[illegible] ವಿರ ರೂಪಾಯಿ ಕೊಡಬಹುದೆಂದು [illegible] ಸಭೆ ತೀರ್ಮಾನಿಸಿದೆ.

* ಭಾರತದ ಎಲ್ಲಾ ಪ್ರಾಂತ್ಯಗಳ [illegible] ಮಂತ್ರಿಗಳ ಸಮ್ಮೇಳನವೊಂದನ್ನು [illegible] ಯುದ್ಧಾನಂತರದ ಪುನರ್ರಚನೆಯ [illegible] ಅಭಿವೃದ್ಧಿ ಕಾರ್ಯಗಳನ್ನು ಯೋಜ[illegible] [illegible] ಮತ್ತು ಸಂಯುಕ್ತ [illegible] ಮಂತ್ರಿಗಳು [illegible] ಸಿದ್ದಾರೆ.

* ಅಜರ್‌ಬೈಜಾನ್ ಪ್ರಾಂತ್ಯ[illegible] ಸೇರಿ ಬಿಟ್ಟು ಪರ್ಷಿಯಾವನ್ನೆಲ್ಲಾ [illegible] ಸೈನ್ಯಗಳು ಬಿಟ್ಟು ಹೋಗಿವೆ ಎಂದು [illegible] ಯಾ ಮುಖ್ಯ ಮಂತ್ರಿ ತಿಳಿಸಿದ್ದಾರೆ

* ಹರ್ಬರ್ಟ್ ಮಾರಿಸನ್‌ರವರು [illegible] ರಿಕಾಕ್ಕೆ ಆಹಾರ ಸರಬರಾಜಿನ ಬಗ್ಗೆ [illegible] ಪ್ರ ಟ್ರೂಮನ್ನರೊಡನೆ ಮಾತುಕತೆ [illegible] ಲು ತೆರಳುವರು. ಭಾರತ ಮತ್ತು [illegible] ನಿಗೆ ಜರೂರು ಸರಬರಾಜು ಅವಶ್ಯ[illegible] ದು ಅವರು ತಿಳಿಸಿದ್ದಾರೆ.

ನೆಹರು ಪ್ರತಿನಿಧಿಗೆ ಆ[illegible]

ಫರೀದ್‌ಕೋಟ್ ಸಂಸ್ಥಾನದ [illegible] ಕೆಯ ಬಗ್ಗೆ ಪ್ರತ್ಯಕ್ಷವಾಗಿ ನೋಡಿ [illegible] ಮಾಡಲು ಪಂ॥ ನೆಹರೂರವರು ಶ್ರೀ [illegible] ನಾಥ ಕಿಚ್ಲುರವರನ್ನು [illegible] ಸಂಸ್ಥಾನಕ್ಕೆ ಕಳಿಸಿದಂತೆ ಆದ[illegible] ಆಜ್ಞೆ ಹೊರಡಿಸಲಾಗಿದೆ.

ಆಪೇರಾ ಟಾಕೀ[illegible]
11—5—46 ರಿಂ[illegible]
ಐದನೇ ವಾರ
★ ವಾಲ್ಮೀ[illegible]
(ತಮಿಳು ಭಾಷೆ)
* ಹೊನ್ನಪ್ಪ ಭಾಗವತರ್
* ಟಿ. ಆರ್. ರಾಜಕುಮಾರಿ
[illegible]

Edited, printed and publ[illegible]
A. R. Nagarajan at the Sa[illegible]
D Subbiah Road, Mysore

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೮] ಭಾನುವಾರ ೧೨—೫—೪೬ [ಸಂಚಿಕೆ ೨೧೧

ಕಾಂಗ್ರೆಸ್-ಬ್ರಿ॥ನಿಯೋಗ ದವರ ಒಪ್ಪಂದವೇ?

ರಾಷ್ಟ್ರ ಭಾವನೆಯೇ ಪ್ರಜಾ ಪ್ರಭುತ್ವದ ಆಧಾರ

ಶ್ರೀ ಟಿ. ರಾಮಯ್ಯನವರ ಭಾಷಣ

ಮೈಸೂರು ೧೧

ಸಂಸ್ಥಾನದ ಅಕ್ಷರ ಪ್ರಚಾರ ಸಮಿತಿಯು ... ದೀನ್ನೆ ದೇಗ್ಗೆ ಮೈಸೂರು ಚಾಮ... ಟಕ್ರಮಂದಿರದಲ್ಲಿ ವಿದ್ಯಾ ಪ್ರಚಾ ... ಸಂಬಂಧವಾದ ಹಲವು ಉಪಯುಕ್ತ ... ಗಳನ್ನು ಉಚಿತವಾಗಿ ಪ್ರದರ್ಶಿಸಲು ... ಡು ಮಾಡಿದ್ದರು. ಶ್ರೀಮನ್ಮಹಾ ... ಜನರ ಹುಜೂರು ಸೆಕ್ರೆಟರಿಗಳಾದ ಶ್ರೀ ... ರಾಮಯ್ಯನವರು ಅಧ್ಯಕ್ಷತೆ ವಹಿಸಿ ... ಸ್ವಾರಸ್ಯವಾದ ಭಾಷಣವನ್ನು ಮಾ ... ಕೆಳಗೆ ಕಂಡ ಅಂಶಗಳನ್ನು ತಿಳಿಸಿ ...

... ನಾಗರಿಕ ಜೀವನಕ್ಕೂ ವಿದ್ಯೆಯೇ ... ಪಶ್ಚಿಮ ದೇಶಗಳಲ್ಲಿ ವಿದ್ಯಾ ಸಂ ... ಶತಮಾನದಿಂದ ಬೆಳೆದು ಬಂದಿದೆ. ... ಪ್ರತಿ ಮಗುವಿಗೂ ಪೂರ್ಣ ಬೆಳ ... ಸಾಕಾಗುವಷ್ಟು ಅವಕಾಶಗಳಿವೆ. ... ಕಡ್ಡಾಯವಾಗಿ ಕೆಲವು ವರ್ಷಗಳ ... ಶಾಲೆಗೆ ಹೋಗಲೇ ಬೇಕೆಂಬ ಶಾ ... ಇದೆ. ಆದರೆ ನಮ್ಮ ದೇಶದಲ್ಲಿ ... ಕಡಿಮೆ ಇರ ವಾಗ, ಶಾಲೆಗ ... ಸಾಧ್ಯವಾದಷ್ಟು ಇಲ್ಲದಿರುವಾಗ, ... ಮನ ಪ್ರಾಥಮಿಕ ಶಿಕ್ಷಣವಿಲ್ಲದಿರುವಾ ... ದೇಶದ ತುಂಬಾ ಮುಖ್ಯವಾಗಿ ಗ್ರಾಮ ... ಅಜ್ಞಾನವು ತಾಂಡವವಾಡುತ್ತಿದೆ ನ ... ಸ್ವರಾಜ್ಯವು ಬರುತ್ತಿರುವಾಗಿ ಇಂತಹ ... ಇರುವುದು ಬಹಳ ಶೋಚನೀಯ. ... ವಯಸ್ಕನಲ್ಲಿಯೂ ರಾಷ್ಟ್ರ ಭಾವನೆ ಎ ... ವರೆಗೆ ಹುಟ್ಟುವುದಿಲ್ಲವೋ ಅಲ್ಲಿಯ ... ಪ್ರಜಾಪ್ರಭುತ್ವವು ಹಾಸ್ಯಾಸ್ಪದ ಎಂ ... ವನ್ನು ನೆನಪಿನಲ್ಲಿಡಬೇಕು

ಶಿಕ್ಷಣ ಶಾಲೆಗಳ ವಿದ್ಯಾಭ್ಯಾಸವನ್ನೇ ... ನಂಬಿದರೆ, ಸರಿಯಾದ ವಾತಾವರಣ ... ಪಡೆಯಲು ಶತಮಾನಗಳು ಬೇಕಾದೀತು ... ಮಾಂತರದಲ್ಲಿ ಇರುವ ಅನಕ್ಷರಸ್ಥರಾದ ... ವಯಸ್ಕರಲ್ಲಿ ವಿದ್ಯಾ ಪ್ರಚಾರ ಕಾರ್ಯವು ... ನಿಂದ ಸಾಗಬೇಕಾದರೆ ಮತ್ತು ಅವರಲ್ಲಿ ... ಷ್ಟ್ರೀಯ ಭಾವನೆಯೂ, ತಿಳುವಳಿಕೆ ... ಉಂಟಾಗಬೇಕಾದರೆ ನಾವು ಕೈಗೊಂ ... ವಂತಹ ವಯಸ್ಕರ ಶಿಕ್ಷಣ ಯೋಜನೆ ... ಸರಿ, ಆದರೆ ಇದು ಇನ್ನೂ ಹೆಚ್ಚು ... ಪ್ರವಾಗಿ ನಡೆಯಬೇಕು

ವಿದ್ಯೆಯು ಮೊದಲನೇ ಹೆಜ್ಜೆ ಅಕ್ಷರ ... ನೆ ಈ ಹೆಜ್ಜೆಯನ್ನಿಡುವುದರಲ್ಲಿ ಮೊ ... ಸಿರುವರೆಂಬ ಕೀರ್ತಿಯು ೧೯೩೭ರಲ್ಲಿ ... ಪ್ರಾಂತ್ಯಗಳಲ್ಲಿ ರಚನೆಯಾದ ಕಾಂಗ್ರೆ ... ಮಂತ್ರಿಮಂಡಲಗಳಿಗೆ ಸಲ್ಲಬೇಕು ... ಬೊಂಬಾಯಿಯಲ್ಲಿ ದೊಡ್ಡ ಚಳು ... ನಡೆಯಿತು. ಅದು ನಮ್ಮನ್ನು ಯೋ ... ಪರರನ್ನಾಗಿ ಮಾಡಿತು-ಎಂಬುದಾಗಿ ... ಟಿ. ರಾಮಯ್ಯನವರು ತಿಳಿಸಿ ಅಕ್ಷರ ... ರದ ಸಮಿತಿಯವರು ಮಾಡುತ್ತಿರ ವ ... ಪ್ರಯತ್ನಗಳನ್ನು ಪ್ರಶಂಸಿಸಿದರು. ... ಅದು ಇನ್ನೂ ಚೆನ್ನಾಗಿ ನಡೆಯಲೆಂ ... ಹಾರೈಸಿದರು

... ಪ್ಯಾಲೆಸ್ಟೈನಿನಲ್ಲಿ ಯಹೂದ್ಯರು ನೆಲೆ ... ಲು ಅಗ ಕಲ್ಪಿಸಿರುವ ಅವಕಾಶದ ಬಗ್ಗೆ ... ಪ್ರಟನೆಯನ್ನು ಸೂಚಿಸಲು ಮೊನ್ನೆ ದಿ ... ಪಿಟ್, ಈಜಿಪ್ಟ್ ಮತ್ತು ಇಂಡಿಯಾ ... ಗಳಲ್ಲಿ ಮುಸಲ್ಮಾನರು ಹರಿತಾಳವನ್ನು ... ಸಿದರು

ಕರ್ನಾಟಕದಲ್ಲಿ ಜೈ ಪ್ರಕಾಶ್ ಮತ್ತು ಅರುಣರವರ ಪ್ರವಾಸ

ಈ ತಿಂಗಳ ಕೊನೆವಾರದಲ್ಲಿ ಶ್ರೀ ಜಯ ಪ್ರಕಾಶ್ ನಾರಾಯಣ್‌ರವರೂ, ಮತ್ತು ಶ್ರೀಮತಿ ಅರುಣ ಅಸಫ್ ಅಲಿಯವರೂ, ಕರ್ನಾಟಕದಲ್ಲಿ ಪ್ರವಾಸ ಮಾಡುವರೆಂದು ಹುಬ್ಬಳ್ಳಿಯಲ್ಲಿರುವ ಕರ್ನಾಟಕದ ಸೋಷಿ ಯಲಿಸ್ಟ್ ಪಕ್ಷದ ಕಾರ್ಯದರ್ಶಿಯಿಂದ ತಿಳಿದು ಬಂದಿದೆ

ಸೆಹಗಲರ ಕಾರ್ಯಕ್ರಮ

ಅಜಾದ್ ಹಿಂದ್ ಫೌಜ್ ಸೈನ್ಯಾಧಿಕಾರಿಗಳಾಗಿದ್ದ ಕ್ಯಾ॥ ಸೆಹಗಲ್‌ರವರು ತಾ॥ ೧೪-೫-೪೬ ನೇ ಮಂಗಳವಾರ ಕಲ್ಲೀಕೋಟೆಯಿಂದ ಕಾರಿನಲ್ಲಿ ಹೊರಟು, ಗುಂಡ್ಲುಪೇಟೆ, ನಂಜನಗೂಡು ಮಾರ್ಗ ವಾಗಿ ಮೈಸೂರಿಗೆ ಆಗಮಿಸುವರು. ಅವರನ್ನು ಕಾಂಗ್ರೆಸ್ ಆಫೀಸ್ ಬಳಿ ಸ್ವಾಗತಿಸಲಾಗುವುದು ಸಾಯಂಕಾಲ ಆರು ಘಂಟೆಗೆ ಅವರು ಕಾಂಗ್ರೆಸ್ ಆಫೀಸಿಗೆ ಭೇಟಿ ಕೊಡುವರು ಮತ್ತು ಏಳು ಘಂಟೆಗೆ ಸಾರ್ವಜನಿಕ ಸಭೆಯಲ್ಲಿ ಭಾಷಣ ಮಾಡುವರು. ವಿದ್ಯಾರ್ಥಿ ಕಾಂಗ್ರೆಸ್ಸಿನವರು ಏರ್ಪಡಿಸಿರುವ ರಾಷ್ಟ್ರೀಯ ಸಪ್ತಾಹದ ಆರಂಭೋತ್ಸವವನ್ನು ಅವರು ೧೫-೫-೪೬ ನೇ ಬೆಳಗ್ಗೆ ಎಂಟು ಘಂಟೆಗೆ ನೆರವೇರಿಸುವರು ಈ ಸಮಾರಂಭಗಳಲ್ಲಿ ಕಾಂಗ್ರೆಸ್ ಕಾರ್ಯಕರ್ತರೂ, ವಿದ್ಯಾರ್ಥಿಗಳೂ, ಸಾರ್ವಜನಿಕರೂ ಭಾಗ ವಹಿಸಬೇಕೆಂದು ನಗರ ಕಾಂಗ್ರೆಸ್ ಸಮಿತಿಯ ಕಾರ್ಯದರ್ಶಿ ಶ್ರೀ ಬಿ ನಾರಾಯಣಸ್ವಾಮಿಯವರು ಪ್ರಾರ್ಥಿಸುತ್ತಾರೆ

ಕರಾಚಿಯಲ್ಲಿ ಹಗಲು ದರೋಡೆ

ಕರಾಚಿ ಕೇಂದ್ರ ಪೋಸ್ಟಾಫೀಸಿನಿಂದ ಪೋಲೀಸ್ ಇನ್ಸ್‌ಪೆಕ್ಟರ್ ಮತ್ತು ಒಬ್ಬ ಡವಾನನ ಜೊತೆಯಲ್ಲಿ ೮೦ ಸಾವಿರ ರೂಗಳನ್ನು ಇಂಪೀರಿಯಲ್ ಬ್ಯಾಂಕಿಗೆ ತೆಗೆದುಕೊಂಡು ಹೋಗುತ್ತಿದ್ದಾಗ್ಯೆ ಹಠಾತ್ತನೆ ಕೊಂಚ ಹಾಕಿಕೊಂಡಿದ್ದ ದರೋಡೆಕೋರರು ೩ ಗುಂಡು ಹಾರಿಸಿ ಜವಾನನ ಬಳಿ ಇದ್ದ ಹಣದ ಗಂಟನ್ನು ಅಪಹರಿಸಿ ತಯಾರಾಗಿ ನಿಂತಿದ್ದ ತಮ್ಮ ಕಾರಿನಲ್ಲಿ ಪರಾರಿಯಾಗಿದ್ದಾರೆ ಈ ಸಂಬಂಧದ ದರೋಡೆಕಾರರನ್ನು ಸುಳುಹು ಹಿಡಿದು ಕೊಡುವವನಿಗೆ ೫ ಸಾವಿರ ರೂಗಳ ಬಹುಮಾನ ಕೊಡುವುದಾಗಿ ಪೋಸ್ಟಾಫೀಸ್ ಡೈರೆಕ್ಟರ್ ಜನರಲ್ ಪ್ರಕಟಿಸಿದ್ದಾರೆ

ಬ್ರಿ॥ ನಿಯೋಗ ಮಂತ್ರಿಗಳಿಗೇ ಪೂರ್ಣಾಧಿಕಾರ

ವೈಸರಾಯ್ ಮಂತ್ರಿಮಂಡಲದ ಸದಸ್ಯರು ಇತ್ತೀಚಿನ ರಾಜನೀತಿಯನ್ನು ಅಂಗೀಕರಿಸುವ ಮತ್ತು ಬಿಡುವ ಅಧಿಕಾರವನ್ನು ಬ್ರಿ॥ ನಿಯೋಗ ಮಂತ್ರಿಗಳಾದ ಆ ಮೂವರಿಗೇ ವಹಿಸಲಾಗಿದೆ ಪೂರ್ಣ ಬ್ರಿ॥ ಮಂತ್ರಿಮಂಡಲ ಅದನ್ನು ಅಂಗೀಕರಿಸ ಬೇಕಾದ್ದೇ ಇಲ್ಲ ಭಾರತದ ಸ್ವತಂತ್ರ್ಯಕ್ಕೋಸ್ಕರ ಯೋಜನೆಯೊಂದನ್ನು ಪ್ರಕಟಿಸಿದಾಗಲೇ ಭಾರತದ ಪ್ರಮುಖ ಪಕ್ಷಗಳ ಬೆಂಬಲ ಪಡೆದ ಸರ್ಕಾರವನ್ನು ರಚಿಸಲು ಅವಕಾಶ ಕೊಡಲಾಗಿದೆಯೆಂದು ಸ್ಪಷ್ಟವಾಗಿ ತಿಳಿಸಿದ್ದೇವೆ ಎಂದು ಬ್ರಿ॥ ಪ್ರಧಾನಿಗಳಾದ ಮಿ॥ ಅಟ್ಲಿಯವರು ಕಾಮನ್ಸ್ ಸಭೆಯಲ್ಲಿ ತಿಳಿಸಿದ್ದಾರೆ

ಸುಭಾಷ್-ಜೈ ಪ್ರಕಾಶ ಭೇಟಿ

ಶ್ರೀ ಜಯಪ್ರಕಾಶ ನಾರಾಯಣ್‌ರವರು ಅಜ್ಞಾತವಾಸದಲ್ಲಿದ್ದಾಗ ಇ ಫಾಲ ಮಾರ್ಗವಾಗಿ ಹೋಗುತ್ತಿದ್ದ ಶ್ರೀ ಸ ಬಾಸ್ ಚಂದ್ರ ಬೋಸರನ್ನು ಭೇಟಿ ಮಾಡಿದ್ದರೆಂದೂ, ಬಾಯಿಲೆ ದೆಸೆಯಿಂದ ಪ್ರಕಾಶರು ಬಂಗಾಳಕ್ಕೆ ಹಿಂತಿರುಗಬೇಕಾಯಿತೆಂದೂ ಗೊತ್ತಾಗಿ ಇದೆ

ಯುಗೊಸ್ಲಾವ್-ಚೆಕೋ ಒಪ್ಪಂದ

ಯುಗೋಸ್ಲಾವಿಯ ಮತ್ತು ಚೆಕೋಸ್ಲೊವೇಕಿಯಗಳಿಗೆ ಸ್ನೇಹ ಮತ್ತು ಪರಸ್ಪರ ಸಹಾಯದ ಒಪ್ಪಂದವು ಮೊನ್ನೆ ದಿನ ಯುಗೋಸ್ಲಾವಿನ ರಾಜಧಾನಿಯಲ್ಲಿ ಸಹಿಯಾಯಿತು ಇದು ೨೦ ವರ್ಷಗಳ ಜಾರಿಯಲ್ಲಿರುವುದು

ತಿರುವಡ್ಡಯಾರ್ ಮಠದ ಕಿರಿಯ ಸ್ವಾಮಿಗಳ ಖೂನಿ

ಕುಂಭಕೋಣದ ಬಳಿ ಇರುವ ತಿರುವೈಯಾರ್ ಮಠದ ಕಿರಿಯ ಸ್ವಾಮಿಗಳಾದ ಶ್ರೀಲ ಶ್ರೀ ಸೋಮಸುಂದರ ತಂಬಿರಾನ್‌ರವರು ಕೊಲೆ ಮಾಡಲ್ಪಟ್ಟಿರುವುದಾಗಿ ಸುದ್ದಿ ಬಂದಿದೆ ಮಠದಲ್ಲೇ ಹಿಂದೆ ಕೆಲಸದಲ್ಲಿದ್ದ ಒಬ್ಬಾತನು ಈ ಕೃತ್ಯ ಎಸಗಿದನೆಂದೂ ಅ ತನನ್ನು ಪೋಲೀಸರು ವಶಪಡಿಸಿಕೊಂಡಿದ್ದಾರೆಂದೂ ಹೇಳಲಾಗಿದೆ

* ಬೊಂಬಾಯಿ ಸರ್ಕಾರದ ಮಂತ್ರಿಗಳಾದ ಶ್ರೀ ಎಂ ಕೆ ಪಾಟೀಲರನ್ನೂ, ಉಪಮಂತ್ರಿಗಳಾದ ಶ್ರೀ ಕೆ ಎಫ್. ಪಾಟೀಲರನ್ನು ದಾವಣಗೆರೆ ನಗರ ಕಾಂಗ್ರೆಸ್ಸಿನವರು ೧೩ ನೇ ತಾ॥ ಸತ್ಕರಿಸುವರು

ಹಸಿವಿನ ಶಮನ ಗುಳಿಗೆ

ಮುಂದಿನ ೩ ತಿಂಗಳ ಕಾಲದಲ್ಲಿ ಆಹಾರಾಭಾವದ ಸಲುವಾಗಿ ಉಂಟಾಗಬಹುದಾದ ರೋಗ ರುಜಿನಾದಿಗಳನ್ನು ತಡೆಗಟ್ಟಲು ಹೆಚ್ಚು ಆಹಾರಾಂಶಗಳನ್ನೊಳಗೊಂಡ ೩ ಕೋಟಿ ಮಾತ್ರೆಗಳನ್ನು ಮದ್ರಾಸಿಗೆ ತರಿಸಲಾಗುವುದು ತಿಂಗಳಿಗೆ ೧ ಕೋಟಿ ಮಾತ್ರೆ ಜನರಿಗೆ ಹಂಚಲು ಏರ್ಪಾಟಾಗಿದೆ

ಸತ್ಯಾಗ್ರಹಿಗಳ ದಂಡಯಾತ್ರೆ

ಫರೀದ್‌ಕೋಟೆಯಲ್ಲಿ ಸತ್ಯಾಗ್ರಹ ನಡೆಸಲು ಪಾಟಿಯಾಲದಿಂದ ೧೦೧ ಮಂದಿ ಸತ್ಯಾಗ್ರಹಿಗಳು ನಿನ್ನೆ ದಿನ ಫರೀದ್‌ಕೋಟೆಗೆ ತೆರಳಿದರು.

ಲಂಚಕ್ಕಾಗಿ ಜುಲ್ಮಾನೆ

ಮಾಜಿ ಗ್ಯಾರಿಸನ್ ಇಂಜನೀಯರಾದ ಕಾರ್ಸ್ಟ್ ಆರ್ ಡಬ್ಲ್ಯು ವಿ... ಯವರು ಕಂಟ್ರಾಕ್ಟರೊಬ್ಬನಿಂದ ಲಂಚ ತೆಗೆದುಕೊಂಡರೆಂದು ಬಂದಿದ್ದ ಅಪವಾದನೆ ಸ್ಥಿರಪಟ್ಟುದರಿಂದ ಶ್ರೀ ... ನಗರದ ಮೊದಲನೆ ಪ್ರೆಸಿಡೆನ್ಸಿ ಮ್ಯಾಜಿಸ್ಟ್ರೇಟರು, ೩ ವರ್ಷಗಳ ಕಠಿಣ ಸಜಾ ಮತ್ತು ೩೦ ಸಾವಿರ ರೂಗಳ ದಂಡ ವಿಧಿಸಿದ್ದಾರೆ

ಮುಯ್ಯಿಗೆ ಮುಯ್ಯಿ

"ದಕ್ಷಿಣ ಆಫ್ರಿಕನ್ನರಿಗೆ ಪ್ರವೇಶವಿಲ್ಲ" ಎಂಬ ಬೋರ್ಡನ್ನು ಬೊಂಬಾಯಿ ನಗರದ ಹೋಟೆಲೊಂದರ ಬಾಗಿಲಿನಲ್ಲಿ ತೂಗಲಾಗಿದೆ ಇದು ಪ್ರತೀಕಾರದ ಪ್ರಥಮ ...

ಕಾಂಗ್ರೆಸ್ಸಿನೊಡನೆ ಬ್ರಿ॥ ನಿಯೋಗದ ಒಪ್ಪಂದವೇ?

ಬ್ರಿ॥ ನಿಯೋಗದವರು ಕಾಂಗ್ರೆಸ್ಸಿನೊಡನೆ ಒಂದು ವಿಧವಾದ ಅಂತರಂಗ ಒಪ್ಪಂದಕ್ಕೆ ಬಂದಿರುವರು, ಅದು ಸದ್ಯದಲ್ಲೇ ಬಹಿರಂಗವಾಗುವುದು, ಇನ್ನು ೧೦ ದಿನಗಳೊಳಗೆ ಕೇಂದ್ರದಲ್ಲಿ ತಾತ್ಕಾಲಿಕ ರಾಷ್ಟ್ರೀಯ ಸರ್ಕಾರ ಸ್ಥಾಪನೆ ಆಗುವುದು. ಪಂಡಿತ ನೆಹರು ಪಟೇಲರು ಈ ಸರ್ಕಾರದ ಮಂತ್ರಿಗಳ ಪಟ್ಟಿ ತಯಾರಿಸುತ್ತಿರುವರು-ಎಂದು ಲಂಡನ್ನಿನ ಅನೇಕ ಪತ್ರಿಕೆಗಳ ಪ್ರತಿನಿಧಿಯಾಗಿ ಸಿಮ್ಲಾ ಸಂಧಾನವನ್ನು ವರದಿ ಮಾಡಲು ಲಂಡನ್ನಿನಿಂದಲೇ ಬಂದಿರುವ ಭಾರತೀಯ ಪತ್ರಿಕೋದ್ಯೋಗಿಯೊಬ್ಬರು ವರದಿ ಮಾಡಿದ್ದಾರೆ

ಕುಮಾರಸ್ವಾಮಿ-ರತ್ನಮ್ಮ

ರಾಜಧಾನಿಯ ಪತ್ರಿಕೋದ್ಯೋಗಿಗಳೂ, ವಿದ್ಯಾರ್ಥಿ ಮುಖಂಡರೂ, ಕಾಂಗ್ರೆಸ್ಸಿನವರೂ ಆದ ಶ್ರೀ ಹೆಚ್ ಕೆ ಕುಮಾರಸ್ವಾಮಿಯವರ ವಿವಾಹವು, ಡಾ॥ ಗೋದಾವರಿ ಜಿಲ್ಲೆಯ ನರಸಾಪುರದಲ್ಲಿ ರೈಲ್ವೆ ಸ್ಟೇಷನ್ ಮಾಸ್ಟರಾಗಿರುವ ಶ್ರೀ ಕೆ ಶ್ರೀನಿವಾಸಯ್ಯನವರ ಮಗಳು ಶ್ರೀಮತಿ ರತ್ನಮ್ಮನೊಡನೆ ಇದೇ ೧೭ ನೇ ತಾ॥ ಶುಕ್ರವಾರ ಮಧ್ಯಾಹ್ನ ರಾಜಧಾನಿಯ ಪೈಕರಾಯರ್ ರಸ್ತೆಯಲ್ಲಿರುವ ಹಯ ... ದಲ್ಲಿ ಜರುಗುವುದು

ರೈಲ್ವೆ ನೌಕರರ ಅಸಮಾಧಾನ

ರೈಲ್ವೆ ಕೆಲಸಗಾರರ ಬೇಡಿಕೆಗಳ ಅನ್ಯಾಯವಾದವು, ಭಾರತದ ಇಂದಿನ ರಾಜಕೀಯ ಮತ್ತು ಆರ್ಥಿಕ ಪರಿಸ್ಥಿತಿಯಲ್ಲಿ ಮಧ್ಯದ ಪರಿಶೀಲನೆ ಬೇಜವಾಬ್ದಾರಿಯಿಂದ ಕೂಡಿರುವುದಾಗಿದೆ ಎಂದು ರೈಲ್ವೆ ಬೋರ್ಡ್ ತಿಳಿಸಿ ಕೆಲಸಗಾರರ ಬೇಡಿಕೆಯನ್ನು ನ್ಯಾಯ ಪಂಚಾಯಿತಿಗೆ ಬಿಡಲು ನಿರಾಕರಿಸಿದೆ

ಸಾಧ್ವಿ

ತಾ|| ೧೨-೫-೪೬ ಭಾನುವಾರ

ಸಂಸ್ಥಾನಗಳಿಗೆ ಕಳಂಕ

ಫರೀದ್‌ಕೋಟೆ ಸಂಸ್ಥಾನದ ವಿದ್ಯಮಾನಗಳು ಭರತ ಖಂಡದ ಎಲ್ಲಾ ದೇಶೀಯ ಸಂಸ್ಥಾನಗಳಿಗೂ ಕಳಂಕ ಉಂಟು ಮಾಡುತ್ತಿವೆ. ಹಲವು ರಾಜರುಗಳ ನಿರಂಕುಶ ಆಳಿಕೆಯನ್ನು ಎತ್ತಿ ಹಿಡಿಯುತ್ತಿವೆ. ನಮ್ಮ ನಡೆಸಿಸಿದ ಅಧಿಕಾರಿಗಳು ನಡೆಸುತ್ತಿರುವ ದಬ್ಬಾಳಿಕೆಯನ್ನು ಪ್ರಕಟಗೊಳಿಸುತ್ತಿವೆ. ಇದರ ಬಗ್ಗೆ ಪಂಡಿತ ಜವಹರಲಾಲ್ ನೆಹರುರವರು ಅತ್ಯಂತ ಉಗ್ರರಾಗಿದ್ದಾರೆ. ಅವಶ್ಯಕವಿದ್ದರೆ ತಾವೂ ಸಂಸ್ಥಾನ ಪ್ರಜಾ ಸಮ್ಮೇಳನದವರೂ ಅಲ್ಲಿಗೆ ಹೋಗಿ ಸತ್ಯಾಗ್ರಹವನ್ನು ಆರಂಭಿಸುವುದಾಗಿಯೂ ಸಹ ಎಚ್ಚರಿಸಿದ್ದಾರೆ.

ಫರೀದ್‌ಕೋಟೆ ಸಂಸ್ಥಾನದಲ್ಲಿ ದಬ್ಬಾಳಿಕೆಯು ಮಿತಿ ಮೀರುತ್ತಿದೆ. ಪ್ರಜಾ ಮಂಡಲದ ನಾಯಕರನ್ನು ಸೆರೆ ಹಿಡಿಯಲಾಗಿದೆ. ನಾಗರಿಕ ಹಕ್ಕುಗಳಿಗೆ ಧಕ್ಕೆ ಬಂದಿದೆ. ಪ್ರಜೆಗಳು ಹಲವು ದಿನಗಳಿಂದಲೂ ಹರತಾಳ ನಡೆಸುತ್ತಿದ್ದಾರೆ. ಅಲ್ಲಿನ ವಿದ್ಯಮಾನಗಳನ್ನು ಅರಿಯಲು ಪಂಡಿತ ನೆಹರೂರವರು ಸಂಸ್ಥಾನದ ಪ್ರಜಾ ಸಮ್ಮೇಳನದ ಕಾರ್ಯದರ್ಶಿಗಳಾದ ಶ್ರೀ ದ್ವಾರಕನಾಥ ಕಚ್ರುರವರನ್ನು ಕಳುಹಿಸಿದ್ದರು. ಸಂಸ್ಥಾನದ ಅಧಿಕಾರಿಗಳು ಅವರ ಪ್ರವೇಶಕ್ಕೆ ಅವಕಾಶವನ್ನು ನಿರಾಕರಿಸಿದ್ದಾರೆ. ಇದರಿಂದ ಉರಿಯುವ ಬೆಂಕಿಗೆ ತುಪ್ಪವನ್ನು ಹಾಕಿದಂತಾಗಿದೆ.

ಆ ಸಂಸ್ಥಾನದೊಳಗೆ ಒಂದು ಸತ್ಯಾಗ್ರಹ ಚಳುವಳಿಯು ನಡೆಯುತ್ತಿದೆ. ಅಲ್ಲಿನ ಪ್ರಜೆಗಳೇ ಅಲ್ಲದೆ ಹೊರಗಿನವರೂ ಅದರಲ್ಲಿ ಭಾಗವಹಿಸುತ್ತಿದ್ದಾರೆ. ನೆರೆಯ ಪ್ರದೇಶಗಳಿಂದ ಸ್ವಯಂಸೇವಕರ ತಂಡಗಳು ಸತ್ಯಾಗ್ರಹವನ್ನು ಹೂಡಲು ಅಲ್ಲಿಗೆ ಬರುತ್ತಿವೆ. ಅವರುಗಳನ್ನು ದಸ್ತಗಿರಿ ಮಾಡಲಾಗುತ್ತಿದೆ. ಬಂಧಿತರಾದ ಕೆಲಸಗಾರರಿಗೂ, ಕಾರಾಗೃಹದಲ್ಲಿರುವ ಬಂದಿಗಳಿಗೂ ಚಿತ್ರಹಿಂಸೆಗಳು ಕೊಡಲ್ಪಡುತ್ತಿವೆ. ಇವುಗಳನ್ನು ಕಂಡು ಪಂಡಿತ ನೆಹರುರವರು ಅಲ್ಲಿನ ಅಧಿಕಾರಿಗಳಿಗೆ ಒಂದು ಉಗ್ರವಾದ ಪತ್ರವನ್ನು ಬರೆದಿದ್ದಾರೆ.

ನಮ್ಮ ಜನರನ್ನು ಈ ರೀತಿ ತುಳಿಯುತ್ತಿರುವಾಗ ನಾವು ಮೌನವಾಗಿರಲೂ, ದೂರನಾಗಿಯೂ ಇರಲು ಸಾಧ್ಯವಿಲ್ಲ. ಫರೀದ್‌ಕೋಟೆ ಸಂಸ್ಥಾನದಲ್ಲಿ ನಾಚಿಕೆಗೇಡಿನ ಮತ್ತು ಅನಾಗರಿಕ ಪದ್ಧತಿಯಲ್ಲಿ ಅಧಿಕಾರಿಗಳು ತೊಡಗಿರುವರೆಂದು ವರದಿಗಳು ಬರುತ್ತಿವೆ; ಇವನ್ನು ಸಹಿಸಲಾಗುವುದಿಲ್ಲ; ತಪ್ಪಿತಸ್ಥರು ಎಷ್ಟೇ ದೊಡ್ಡವರಾಗಲಿ ಅವರನ್ನು ವಿಚಾರಣೆ ಮಾಡಿ ಶಿಕ್ಷೆಗೆ ಗುರಿಪಡಿಸಲೇಬೇಕು. ನಾಗರಿಕ ಹಕ್ಕುಗಳಿಗೆ ಒದಗಿದ ಧಕ್ಕೆಯನ್ನು ರದ್ದು ಮಾಡದಿದ್ದರೆ ಅವುಗಳನ್ನು ಪಡೆಯ ಬೇಕಾಗುವುದು. ನಾನೇ ಸ್ವತಃ ಅಲ್ಲಿಗೆ ಬರುತ್ತೇನೆಂಬುದಾಗಿ ನೆಹರೂರವರು ಆ ಸಂಸ್ಥಾನದ ಚೀಫ್ ಸೆಕ್ರೆಟರಿಯವರಿಗೆ ಬರೆದಿದ್ದಾರೆ.

ಹಲವು ಸಂಸ್ಥಾನಗಳು ಇಂದಿರುವ ಆ ಥೋರಣೆಗೆ ಫರೀದ್‌ಕೋಟೆಯೇ ಒಂದು ಪತಾಕೆಯಾಗಿ ನಿಂತಿರುವ ಈ ಕಾಲದ ಸಂಸ್ಥಾನಗಳು ನಿರಂತರ ನಡೆಸುತ್ತಿ-ಲ್ಲದಿದ್ದರೆ ಅವುಗಳನ್ನು ಸಂಪೂರ್ಣವಾಗಿ ವಿನಾಶಗೊಳಿಸಬೇಕಾಗುವುದು. ಸ್ವಾತಂತ್ರ್ಯವನ್ನು ಹಿತವಾಗಿರುವ ಹಿಂದೂಸ್ಥಾನದಲ್ಲಿ ನಾವುಗಳು ಈಗ ಇರುತ್ತೇವೆ. ಮಾನವನ ಹಕ್ಕಿಗೆ ಒದಗುವ ಅಪಮಾನವನ್ನೂ, ಅವಮಾನವನ್ನೂ ಯಾರೂ ಸಹಿಸುವುದಿಲ್ಲ. ಅನಾಗರಿಕ ಕಾಲವು ಕಳೆದುಹೋಯಿತು. ಅದು ಇನ್ನೂ ಇರುವುದೆಂದು ಭಾವಿಸುವವರು ತಪ್ಪು ತಿಳಿದುಕೊಂಡವರಾಗುವರೆಂಬುದಾಗಿ ನೆಹರೂರವರು ಎಚ್ಚರಿಸಿದ್ದಾರೆ.

ಸಂಸ್ಥಾನಗಳ ಬಗ್ಗೆ ಇರುವ ದುರಭಿಪ್ರಾಯಕ್ಕೆ ಇಂತಹ ನಿದರ್ಶನಗಳೂ ಸಹಕಾರಿಯಾಗುತ್ತವೆ. ನರೇಂದ್ರ ಮಂಡಲದವರು ಇವುಗಳನ್ನು ತಡೆಗಟ್ಟಲೇ ಬೇಕಾದುದು ಅವರ ಮುಖ್ಯ ಕರ್ತವ್ಯ. ಸಂಸ್ಥಾನಗಳಲ್ಲಿ ನಾಗರಿಕ ಹಕ್ಕುಗಳನ್ನು ರಕ್ಷಿಸಲು ನರೇಂದ್ರ ಮಂಡಲದ ಅಧ್ಯಕ್ಷರು ಮೊನ್ನೆ ತಾನೆ ಹೊರಡಿಸಿದ ಘೋಷಣೆಗೆ ಫರೀದ್‌ಕೋಟೆಯ ವಿದ್ಯಮಾನಗಳು ತೀರಾ ವಿರೋಧವಾಗಿವೆ. ಇತರ ನರೇಂದ್ರರ ಮೇಲೆಯೂ, ಸಂಸ್ಥಾನಗಳ ಆಡಳಿತಗಾರರ ಮೇಲೆಯೂ ಕಳಂಕವನ್ನು ಬೀರುವ ಇಂತಹ ಪ್ರಸಂಗಗಳನ್ನು ತಡೆಗಟ್ಟುವುದು ಅವರೆಲ್ಲರ ಕರ್ತವ್ಯ

ಧಾನ್ಯದ ಮೊಬಲಗು ಪಾವತಿಯಲ್ಲಿ ಕಿರುಕುಳವೇ ?

ನಾನು ಹೆಗ್ಗಡದೇವನಕೋಟೆ ತಾಲ್ಲೂಕು ದಡಗೂರು ಹೋಬಳಿ ಕುಂಟನ ಬೆಳತೂರು ನಿವಾಸಿ. ಬಾಲ್ಯದಲ್ಲಿರುವ ಆಹಾರದ ಇಲಾಖಾ ಅಪ್ಪಣೆಯಂತೆ ನನ್ನ ಮುತ್ತು ಮುತ್ತಿಣ್ಣರ ಜಮೀನಿನಲ್ಲಿ ಬೆಳೆದ ಗಿಡ್ಡ ಪ್ಲಾ ಳ ಸೇರು ರಾಗಿಯನ್ನು ೨೭-೪-೪೬ ರಲ್ಲಿ ಹೆಗ್ಗಡದೇವನಕೋಟೆ ಕಸಬಾ ಸರ್ಕಾರ ಫುಡ್ ಡಿಪೋಗೆ ಅಳೆದುಕೊಟ್ಟು ಸದರಿ ಕಾಲವಾದ್ದರಿಂದ ಮೊಬಲಗನ್ನು ಆ ದಿನವೇ ತೆಗೆದುಕೊಳ್ಳಲು ಸಾಧ್ಯವಾಗಲಿಲ್ಲ. ಮಾರನೇ ದಿನ ಹೋಗಿ ಮೊಬಲಗು ಕೊಡಿಸಿಕೊಡಬೇಕೆಂದು ತಾಲ್ಲೂಕು ಅಮಲ್ದಾರರನ್ನು ಕೇಳಿದಲ್ಲಿ ರಶೀದನ್ನು ಕಂದಾಯ ಬೇಬಾಕಿಗೆ ಪಾವತಿ ಮಾಡಿರುವುದಕ್ಕೆ ಶ್ಯಾನುಭೋಗರಿಂದ ಬರೆಸಿಕೊಂಡು ಬಂದರೆ ರಾಗಿಯ ಮೊಬಲಗು ಕೊಡುವುದಾಗಿ ಹೇಳಿದರು. ಮೊದಲೇ ಪಾವತಿಯಾಗಿದ್ದ ಕಂದಾಯದ ರಸೀತಿಯು ಹಿಂದುಗಡೆ ಪುನಃ ಶ್ಯಾನುಭೋಗರಿಂದ ಕಂದಾಯ ಪೂರ್ತಿ ಪಾವತಿಯಾಗಿರುತ್ತೆಂದು ಬರೆಸಿಕೊಂಡು ಹೋಗಿ ೨೯-೪-೪೬ ರಲ್ಲಿ ಪುನಃ ಅಮಲ್ದಾರರನ್ನು ನೋಡಿ ರಸೀತಿಯ ಹಿಂಭಾಗದ ಶ್ಯಾನುಭೋಗರ ಬರವಣಿಗೆಯನ್ನು ತೋರಿಸಲಾಗಿ ನಿರ್ದಯವನ್ನು ನೋಡಬೇಕೆಂದು ಸ್ವದಸ್ತೂರು ಬರೆದು ಕೊಟ್ಟಿದ್ದಾರೆ. ಅಲ್ಲದೆ ವಿಲೇಜ್ ಪಂಚಾಯಿತಿ ಕಂದಾಯವನ್ನು ಬೇಬಾಕಿ ಪಾವತಿ ಮಾಡಿ ಬರಬೇಕೆಂದು ಕಳುಹಿಸಿದರು. ನಮ್ಮ ಗ್ರಾಮದಿಂದ ಕಸಬಾಕ್ಕೆ ಹೋಗಿ ಬರಲು ೧೬ ಮೈಲಿ ಫಾಸಲೆಯಾಗುತ್ತೆ. ಒಂದಾವರ್ತಿ ಹೋಗಿಬರಲು ಈ ದುರ್ಭಿಕ್ಷ ಕಾಲದಲ್ಲಿ ನಾಲ್ಕು ರೂಪಾಯಿ ಖರ್ಚಾಗುತ್ತೆ. ಅಮಲ್ದಾರರು ಡಿಪೋಕ್ಕೆ ಸಪ್ಲೈಮಾಡಿದ ರಾಗಿಯ ಹಣವನ್ನು ಕೂಡಲೇ ಪಾವತಿ ಮಾಡದೆ ನನ್ನನ್ನು ಕಷ್ಟನಷ್ಟಗಳಿಗೆ ಗುರಿಪಡಿಸಿರುವುದು ಸರಿಯೇ ? ಮಳೆ ಬೆಳೆಗಳಿಲ್ಲದೆ ರೈತರು ನಾನಾ ವಿಧದಲ್ಲಿ ಕಷ್ಟಪಡುತ್ತಿರುವುದು ಸರ್ಕಾರಕ್ಕೆ ವೇದ್ಯವಾಗಿರುವಲ್ಲಿ ಅಧಿಕಾರಿಗಳು ಈ ರೀತಿಯ ನಿಸ್ಪೃಹ ತೊಂದರೆ ನಡೆಸುವುದು ಧರ್ಮವೇ ?

ಅಶ್ವತ್ಥನಾರಾಯಣಶಾಸ್ತ್ರಿ
೭-೫-೪೬

ಹೈಸ್ಕೂಲಿಗೆ ಉದಾರ ದಾನ

ಸ್ವಂ. ವ] ಗುಂಡ್ಲುಪೇಟೆ

ಈ ಊರಿನಲ್ಲಿ ಹೈಸ್ಕೂಲನ್ನು ಸ್ಥಾಪಿಸಲು ಮಾಜಿ ಪ್ರಜಾಪ್ರತಿನಿಧಿಸಭಾ ಸದಸ್ಯರಾದ ಶ್ರೀ ಸಾಹುಕಾರ್ ಭೋಗಪ್ಪನವರು ೫೦೦೦೦ ರೂವನ್ನು ದಾನ ಮಾಡಿ ಈಗಾಗಲೇ ೨೦ ಸಾವಿರ ರೂ ಕೊಟ್ಟಿರುತ್ತಾರೆ. ಇವರನ್ನು ಸತ್ಕರಿಸಲು ಶ್ರೀಕೃಷ್ಣರಾಜೇಂದ್ರ ಪುರಭವನದಲ್ಲಿ ಸಭೆ ಸೇರಿತ್ತು. ಶ್ರೀ ಭೋಗಪ್ಪನವರ ಮಕ್ಕಳಾದ ಶ್ರೀ ಮಲ್ಲಪ್ಪನವರಿಗೂ ಈ ಕಾರ್ಯದಲ್ಲಿ ಸಹಕರಿಸಿದ ನಂಜನಗೂಡು ವಕೀಲರಾದ ಶ್ರೀ ಎಸ್. ನಾರಾಯಣರಾಯರಿಗೂ ಮತ್ತು ಶ್ರೀ|| ಆ ಮಲ್ಲಾರರಿಗೂ ಸನ್ಮಾನ ಮಾಡಲಾಯಿತು.

* ಬ್ರಿಟನ್ನಿಗೆ ಸಾಲ ಕೊಡುವ ಬಗ್ಗೆ ಬಂದಿದ್ದ ಮಸೂದೆಯನ್ನು ಅಮೆರಿಕದ ಸೆನೆಟ್ ಅಂಗೀಕರಿಸಿತು.

ಶ್ರೀ ಜಗದಂಬಾ ಶಿಶು ವಿಹಾರ

೨೦೫, ದಿವಾನ್ಸ್ ರೋಡ್, ಮೈಸೂರು

ಬೇಸಿಗೆ ವಿಶ್ರಾಂತಿಗಾಗಿ ಮುಚ್ಚಿದ್ದ ಶ್ರೀ ಜಗದಂಬಾ ಶಿಶು ವಿಹಾರವು ೧೫-೫-೪೬ ನೇ ಬುಧವಾರದಿಂದ ತೆರೆಯಲ್ಪಡುವುದೇ ಅಲ್ಲದೆ ೧) ನವ ವೈಶಿಷ್ಟ್ಯದಿಂದಲೂ, ೨) ಶಿಕ್ಷಣ ಹೊಂದಿದ ಪಾಠೋಪಕರಣಗಳಿಂದಲೂ, ೩) ಆಧುನಿಕ ಶಿಶು ವಿದ್ಯಾಭ್ಯಾಸದ ಮಾದರಿಗಳಿಂದಲೂ, ೪) ಮಕ್ಕಳ ಶಾರೀರಕ ವಯೋಧರ್ಮಕ್ಕೂ ಮತ್ತು ಮಾನಸಿಕ ವಯೋಧರ್ಮಕ್ಕೂ ಅನುಗುಣವಾದ ವೈಯಕ್ತಿಕ ವಿದ್ಯಾಭ್ಯಾಸದ ಮಾದರಿಗಳಿಂದಲೂ (Individual Methods, according to the Physical and Mental age of children) ಮತ್ತು ೫) ವಯೋಧರ್ಮಕ್ಕನುಸಾರವಾದ ನೃತ್ಯ, ಗೀತ, ವಾದ್ಯಾದಿಗಳ ಸಹಾಯದಿಂದ ಕಾರ್ಯ ನಿರ್ವಾಹ ಮಾಡಲುಪಕ್ರಮಿಸುವುದು.

ಮಕ್ಕಳ ಪುರೋಭಿವೃದ್ಧಿಯೇ ಮಹದ್ಧ್ಯೇಯವೆಂದು ತಿಳಿದಿರುವ ಮಾತಾಪಿತೃಗಳು ಕಾಲ ವಿಳಂಬ ಮಾಡದೆ ಮಕ್ಕಳನ್ನು ಮೇಲ್ಕಂಡ ಶಾಲೆಗೆ ಸೇರಿಸಿ ಪ್ರಯೋಜನವನ್ನು ಪಡೆಯುವುದೇ ಅಲ್ಲದೆ ಶಾಲೆಯ ವ್ಯವಸ್ಥಾಪಕರ ಧ್ಯೇಯವನ್ನು ಸಾಧಿಸುವರೆಂದು ಆಶಿಸಲಾಗಿದೆ.

ತಮ್ಮ ಮುದ್ದು ಮಕ್ಕಳ ಹಿತೈಷಿ,
ಕೃಷ್ಣಮೂರ್ತಿ ದೇಶಮುಖ್.

ಅಪೇರಾ ಟಾಕೀಸ್
11—5—46 ರಿಂದ
ಐದನೇ ವಾರ
ವಾಲ್ಮೀಕಿ
(ತಮಿಳು ಭಾಷೆ)
* ಹೊನ್ನಪ್ಪ ಭಾಗವತರ್,
* ಟಿ. ಆರ್. ರಾಜಕುಮಾರಿ
ಮುಂತಾದವರು

Edited, printed and published by A. R. Nagarajan at the Sadhvi Press D Subbiah Road, Mysore

ಸಯಾಂನಲ್ಲಿ ಹೊಸ ಸುಧಾರಣೆ

ಚುನಾಯಿತ ಪ್ರತಿನಿಧಿಗಳಿಂದ ಪ್ರತಿನಿಧಿಸಭೆ ಮತ್ತು ಒಂದು ಸೆನೆಟ್ ರಚಿಸಲಾಗಿದೆಯೆಂದು ಸಯ್ಯಾಂ ರಾಜ ಆನಂದ ಮಹಿಡೋಲ್‌ರವರು ಮೊನ್ನೆ ಹೊಸ ಸುಧಾರಣೆಗಳನ್ನು ಘೋಷಿಸಿ... ಚುನಾವಣೆಗಳಾದ ನಂತರ ಇನ್ನು ... ಗಳೊಳಗಾಗಿ ಹೊಸ ಮಂತ್ರಿಮಂಡಲ ನೇಮಿಸಲಾಗುವುದು.

ಈಜಿಪ್ಟ್ ರಕ್ಷಣೆಗೆ ಬ್ರಿಟಿಷ್ ಪೋಲೀಸ್ ಪಡೆ

ಈಜಿಪ್ಟ್ ದೇಶದ ಸೈನ್ಯ ಮತ್ತು ... ರುಗಳನ್ನು ಕಾಪಾಡುವ ನಲುವಾಗಿ ... ಭದ್ರತಾ ಸಮಿತಿಯ ಸಹಾಯವನ್ನು ... ಕ್ಷಿಸುವುದಾಗಿ ಈಜಿಪ್ಟಿನ ಪ್ರಧಾನ ಮ... ಸಿದ್ದಿಕಿ ಪಾಷರವರು ತಿಳಿಸಿರುವರು. ... ರು ಸಪ್ತಾಹದಲ್ಲಿಯೇ ಒಪ್ಪಂದದ ಮಾತು... ಗಳನ್ನು ಆರಂಭಿಸುವರೆಂದು ಪ್ರಕಟಿ... ವರು

* ಬೆಂಗಳೂರು ಪುರಸಭೆಯ ಅ... ಚುನಾವಣೆಗೆ ಶ್ರೀ ಸಿ. ಶಿವಶಂಕರ... ದೆ ಸಿನ್ನ ಪಂಚಿ ಶ್ರೀ ಎಲ್ 'ಎಸ್' ... ರವರೂ ಸಹ ತಮ್ಮ ಉಮೇದುವಾ... ಸಲ್ಲಿಸಿರುತ್ತಾರೆ.

ಸಾಧ್ವಿ
ಈ
ರಾಜಧಾನಿಯ ರಾಷ್ಟ್ರೀಯ
ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿ
(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)
ಜಾಹೀರಾತಿನ ದರಗಳಿಗೆ
ವಿಚಾರಿಸಿರಿ

ಅಮೃತ
ವಿಷಮ ಜ್ವರ ಮಲೇರಿಯಾ ಜ್ವರ, ಜ್ವರದ ಗಡ್ಡೆ ಇವು... ಮೇಲೆ ಬಹಳ ಚೆನ್ನಾಗಿ ಕೆ... ಮಾಡುತ್ತದೆ.
ಕೆ. ವಿ. ವೆಂಕಟರಾಮಯ್ಯ
ಡಿಸ್ಟ್ರಿಕ್ಟ್ ಬೋರ್ಡ್ ವೈದ್ಯಶಾ... ಅರಕಲವಾಡಿ.

ಟಿ. ಸಿ. ನಟರಾಜ
ಔಷಧಾಲಯ
ನೇತ್ರ ಪರೀಕ್ಷೆಯು ಉಚಿತವಾ... ಮಾಡಲ್ಪಡುತ್ತದೆ.
ಅಗತ್ಯವಾಗಿ ಬೇಕಾದ ಎಲ್ಲಾ ... ಷ್ಟ ಔಷಧಿಗಳೂ ಸದಾ ಕಾಲದಲ್ಲಿ ದೊರೆಯುವುದಲ್ಲದೆ ಸಮಸ್ತ ವ್ಯಾಧಿಗ... ಚಿಕಿತ್ಸೆಯು ಬಹು ಸುಲಭ ಛಾರ್ಜ... ಮಾಡಲ್ಪಡುತ್ತದೆ.
ಝಂಡುಪರವರ ಆಯುರ್ವೇದಿಕ ದ್ರವ್ಯಾಷಧಗಳೆಲ್ಲವೂ ದೊರೆಯುತ್ತವೆ.

ರೋ॥ ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೦] ಸೋಮವಾರ ೧೯—೫—೪೬ [ಸಂಚಿಕೆ ೩೫

ಸಿಮ್ಲಾ ಸಂಧಾನವು — — ಮುರಿದು ಬಿತ್ತು

ರುದ್ರಭೂಮಿಗೂ ಪಲ್ಲಟವೆ ?

ಮೈಸೂರು ೧೫. ಚಾಮುಂಡಿ ಬೆಟ್ಟದ ತಪ್ಪಲು ಬಳಿ ಕೃಷ್ಣ ಕೋಟೆಯ ಎದುರಿನಲ್ಲಿ ಸುಮಾರು ವಿವಿಧ ವರ್ಗಗಳಿಂದ ಇರುವ ರುದ್ರಭೂಮಿ ... ಯಾವುದೋ ಜಾಗಕ್ಕೆ ಸ್ಥಳ ಪಲ್ಲಟ ಮಾಡಲ್ಪಡುವ ... ನಗರಾಭಿವೃದ್ಧಿ ಸಮಿತಿಯು ... ಸರ್ಕಾರ ವರ್ಗ ಸಂಬಂಧದಲ್ಲಿ ಪೌರಸಭೆ ... ಸಾವಿರ ರೂಗಳನ್ನು ... ಈಗಲೇ ಇರುವ ... ಲಕ್ಷ್ಮೀ, ಜಯನಗರ, ... ಸ್ಥಳಗಳಿಗೆ ದೂರ ಭಾಸಲೆಯಲ್ಲಿರು ... ಮತ್ತು ಒಂದು ಒಂದೂವರೆ ಮೈಲಿ ... ಮುಂದುವರೆಯುವುದಾದರೆ ... ಅವರಲ್ಲೂ ಶಕ್ತ್ಯರಗಳಾಗಿತಕ್ಕ ... ಚಿಕ್ಕ ಪುಟ್ಟ ಬಾಲಕರಿಗೂ, ... ಬಹುಮುಟ್ಟಿನ ತೊಂದರೆಯುಂ ... ಈ ಕಷ್ಟ ನಿಷ್ಟುರಗಳನ್ನೆ ... ಮತ್ತು ಸರ್ಕಾರದವರ ... ಉದ್ದಿಶ್ಯವಾಗಿ, ... ರುದ್ರಭೂಮಿಯನ್ನು ... ಬ್ರಾಹ್ಮಣ, ವೈಶ್ಯ, ... ಮರಾಠಾ ... ಶ್ರೀವೈಷ್ಣವ, ಚಿಟ್ಟಿ ನಾಯಕ, ... ಇವರ ಕಾರ್ಯೋಪಕಾರಿಗಳೂ ... ಮತೀಯರೆಲ್ಲರೂ ಪೌರಸಭಾಧ್ಯಕ್ಷರ ... ಮನವಿ ಮಾಡಿಕೊಳ್ಳಲು ಏರ್ಪಾಡು ಮಾಡುತ್ತಿದ್ದಾರೆಂದು ಗೊತ್ತಾಗಿದೆ.

ಮೈಸೂರಿನಲ್ಲೂ ಬಿಡುಗಡೆಯೇ ?

... ಬಂಧನದಲ್ಲಿರುವ ರಾಜಕೀಯ ಖೈದಿಗಳ ... ಬಿಡುಗಡೆ ಮಾಡಿ ಪ್ರತಿಬಂಧಕಾಜ್ಞೆ ... ವಾಪಸು ತೆಗೆದುಕೊಳ್ಳಲು ಮೈ ... ಸರ್ಕಾರವು ಆಲೋಚಿಸುತ್ತಿದೆ ಎಂ ... ಮದ್ರಾಸಿನ ಪತ್ರಿಕೆಯೊಂದರಲ್ಲಿ ... ಪ್ರಕಟವಾಗಿದೆ.

ಪಿಟೀಲು ವಾದನ

... ರವಿವಾರದ ಬಿಡಾರಂ ಕೃಷ್ಣಪ್ಪನವರ ... ಸೀತಾರಾಮಮಂದಿರದಲ್ಲಿ ಈ ದಿನ ... ಏಳು ಘಂಟೆಗೆ ಪ್ರದೋಷದ ಪ್ರಯು ... ನವಜ್ಯೋತಿ ಸ್ಮೃತಿರೋ ಆರ್ಟಿಸ್ಟ್ ... ಮತ್ತು ರಾಜಯ್ಯಂಗಾರ್ರಿಂದ ... ವಿದ್ವಾನ್ ಶೇಷಪ್ಪನವರ ವೃಂದಗ ... ಆಕಾಶವಾಣಿ ವಿದ್ವಾನ್ ಕೇಶವ ... ಕಂಚೀರಿ ಸಹ ನಡೆಯುತ್ತವೆ.

ಕ್ರಿಕೆಟ್ ಪಂದ್ಯ

... ಭಾರತದ ಟೀಮಿಗೂ ಇಂಗ್ಲೆಂಡಿನ ಸರ್ರೆ ... ಗೂ ನಡೆಯುತ್ತಿರುವ ಕ್ರಿಕೆಟ್ ಸಂ ... ಭಾರತದವರು ಮೊದಲನೇ ಇನ್ನಿಂಗ್ಸ್ ... ವಿಕೆಟ್ಟುಗಳಿಗೆ ... ರನ್ನುಗಳ ... ಮಾಡಿರುವರು ... ಬ್ಯಾನರ್ಜಿ ಮತ್ತು ... ಮೂವರು ಹೆಚ್ಚು ರನ್ನುಗಳನ್ನು ಮಾ ... ಡಿದರು.

... ಟಿ ಭಾಷ್ಯಂರವರು ಮೊನ್ನೆ ದಿ ... ಆಹಾರ ಪರಿಸ್ಥಿತಿ, ಶಾಸನ ... ಮತ್ತು ಪ್ರತಿಬಂಧಕಾಜ್ಞೆಗಳ ವಿ ... ಸಂಗ ಮಾತನಾಡಿದರು. ಅವರು ಪು ... ವರನ್ನು ಭೇಟಿ ಮಾಡಬಹುದು ... ಬೊಂಬಾಯಿನಲ್ಲಿ ಕಾಂಗ್ರೆಸ್ಸಿಗೆ ಸೇರ ... ದವರನ್ನು ... ಬಂದ ಅಧ್ಯಕ್ಷ ... ಹಿಸುವುದಕ್ಕಾಗಿ ಅಲ್ಲಿನ ಪ್ರಧಾನ ಮಂ ... ಎರಡು ಲಕ್ಷ ರೂ ಹಣ ... ಕಾಂಗ್ರೆಸ್ಸಿನವರು ದಾನ ಮಾ ... ಡಿದರೆ

ಸೈಗಾಲರಿಗೆ ಸ್ವಾಗತದ ಏರ್ಪಾಡು

ನಂಜನಗೂಡು, ೧೬.

ಕ್ಯಾಪ್ಟನ್ ಸೈಗಾಲರಿಗೆ ನಂಜನಗೂಡು ಕಾಂಗ್ರೆಸ್ ಸಮಿತಿಯವರು ಆಹ್ವಾನವನ್ನು ಕಳುಹಿಸಿದ್ದಾರೆ. ಮ್ಯಾಜಿಸ್ಟ್ರೇಟ್ ಕೋರ್ಟಿನ ಹತ್ತಿರ ಅವರನ್ನು ಸ್ವಾಗತಿಸಿ ಮೆರವಣಿಗೆಯಲ್ಲಿ ಸಾಹುಕಾರ್ ಲಿಂಗಣ್ಣನವರ ಛತ್ರಕ್ಕೆ ಕರೆತರಲಾಗುವುದು. ಅನಂತರ ಬಹಿರಂಗ ಸಭೆಯಲ್ಲಿ ಅವರು ಭಾಷಣ ಮಾಡುವರು. ಮಹಾಜನರೂ, ವಿದ್ಯಾರ್ಥಿಗಳೂ ಭಾಗ ವಹಿಸಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸುತ್ತಾರೆ.

ಚೀನಾದಲ್ಲಿ ಶಾಂತಿ

ಸರ್ಕಾರೀ ಸೈನ್ಯ ಮತ್ತು ಕಮ್ಯೂನಿಸ್ಟ್ ಸೈನ್ಯಗಳಿಗೆ ನಡೆಯುತ್ತಿದ್ದ ಕಾಳಗ ನಿಲ್ಲಬೇಕೆಂದು ಉಭಯಪಕ್ಷಗಳೂ ಒಪ್ಪಂದಕ್ಕೆ ಬಂದಿವೆ. ಈ ಸಂಧಾನದ ಫಲಿತಾಂಶವನ್ನು ಅನೇಕ ಮಧ್ಯಸ್ಥಗಾರರು ಪ್ರಕಟಿಸಿದ್ದಾರೆ.

ಉಪ್ಪಿನ ಶಾಸನ ರದ್ದಾಗುವುದಿಲ್ಲ

ಹಿಂದೂಸ್ಥಾನದಲ್ಲಿ ಉಪ್ಪಿನ ಕರವಂ ... ಕಡಿಮೆಯಾಗಿಲ್ಲ ... ಈ ಕಾಲದಲ್ಲಿ ಉಪ್ಪಿನ ಶಾಸನವನ್ನು ರದ್ದುಮಾಡಲು ಸಾಧ್ಯವಿಲ್ಲವೆಂದು ವೈಸರಾಯರು ಮಹಾತ್ಮಾ ಗಾಂಧಿಯವರಿಗೆ ತಿಳಿಸಿರುವರೆಂದು ಗೊತ್ತಾಗಿದೆ.

ಚಕ್ರವರ್ತಿ ಕುಮಾರಿಗೆ ಮದುವೆ

ಬ್ರಿಟಿಷ ಚಕ್ರವರ್ತಿ ಕುಮಾರಿಯಾದ ... ಎಲಿಜಬೆತ್‌ರವರು ಡ್ಯೂಕ್ ಆಫ್ ಗ್ಲಾಸ್ಟರ್‌ರವರ ಮಕ್ಕಳು ... ಅರ್ಲ್ ಆಫ್ ... ರವರನ್ನು ಮದುವೆಯಾಗಲಿರುವರೆಂದು ವರದಿಯಾಗಿದೆ.

* ... ವೀರರಾದ ಸಾ॥ ಸಹಾಯ್ ... ಸೈಗಾಲ್ ಮತ್ತು ಧಿಲಾನ್‌ರವರ ದಕ್ಷಿಣ ಆಫ್ರಿಕದ ಸತ್ಯಾಗ್ರಹ ಚಳವಳಿಯ ನಾಯಕತ್ವವನ್ನು ವಹಿಸಲು ಒಪ್ಪಿರುವುದಾಗಿ ತಿಳಿದು ಬಂದಿದೆ.

ರಾಜಕೀಯ ಬಂಧಿಗಳ ಬಿಡುಗಡೆ ... ಯುಕ್ತ ಪ್ರಾಂತದ ಗೌರ್ನರು ... ನ್ನು ಪ್ರಕಟಿಸಿರುವರೆಂದೂ ಇದನ್ನು ಪ್ರತಿಭಟಿ ... ಕಾಗ್ರೆಸ್ ... ನ್ಯಾಯಾಂಗ ಮಂತ್ರಿ ರಫಿ ಅಹಮದ್ ಕಿದ್ವಾಯಿಯವರು ಗೌರ್ನರಿಗೆ ಪತ್ರ ಬರೆದಿರುವರೆಂದೂ ... ಬಂದಿದೆ.

ಸಂಧಾನ ಮುರಿದು ಬಿತ್ತು — ಸಿಮ್ಲಾ ಸಮ್ಮೇಳನದ ಮುಕ್ತಾಯ

ಸಿಮ್ಲಾದಲ್ಲಿ ನಡೆಯುತ್ತಿದ್ದ ಸಮ್ಮೇಳನ ನೆನ್ನೆ ಸಂಜೆ ಮುಕ್ತಾಯವಾಯಿತು. ಲೀಗಿಗೂ ಕಾಂಗ್ರೆಸ್ಸಿಗೂ ಒಪ್ಪಂದವುಂಟು ಮಾಡುವ ಪ್ರಯತ್ನವು ವಿಫಲವಾಯಿತು. ಇನ್ನು ಮುಂದೆ ಸಮ್ಮೇಳನವನ್ನು ಮುಂದುವರಿಸುವುದರಿಂದ ಯಾವ ಪ್ರಯೋಜನವೂ ಇಲ್ಲವೆಂದು ಉಭಯ ಸಂಘದವರೂ ತಿಳಿಸಿದ್ದಾರೆ. ಯಾವ ಕಾರಣದಿಂದ ಸಂಧಾನವು ಮುರಿಯಿತೆಂಬುದನ್ನು ಯಾರೂ ಹೇಳಲಿಲ್ಲ. ಆದರೆ ಪೋಷಕಗಳಲ್ಲಿ ತೊಡಗದಂತೆ ಎಲ್ಲರನ್ನೂ ಪ್ರಾರ್ಥಿಸಲಾಗಿದೆ. ಈ ಸಂಬಂಧದಲ್ಲಿ ನಡೆದಿರುವ ಪತ್ರವ್ಯವಹಾರಗಳೆಲ್ಲ ಸಮ್ಮದಲ್ಲಿಯೇ ಪ್ರಕಟಿಸಲಾಗುವುವು. ಅನಂತರ ಸಾರ್ವಜನಿಕರು ತಮ್ಮ ಅಭಿಪ್ರಾಯವನ್ನು ರೂಪುಗೊಳಿಸಬಹುದು. ಕಾಂಗ್ರೆಸ್ಸನ್ನೂ ಲೀಗನ್ನೂ ಒಂದುಗೂಡಿಸಲು ಮಾಡಿದ ಈ ಪ್ರಯತ್ನವು ವಿಫಲವಾದುದಕ್ಕೆ ಎಲ್ಲರೂ ಅತ್ಯಂತ ವಿಷಾದಪಡುತ್ತಿದ್ದಾರೆ. ಆದರೆ ಹೀಗೆಯೇ ಆಗಬಹುದೆಂದು ಅನೇಕರು ಭಾವಿಸಿದ್ದರು.

ವೈಸರಾಯರ ಮಂತ್ರಿಮಂಡಲದ ಸದಸ್ಯರ ಹೆಸರುಗಳ ಪಟ್ಟಿಯ ಬಗ್ಗೆ ... ಸಂಬಂಧದ ಒಪ್ಪಂದದ ಸಂಭಾವನೆಗಳು ... ಅವರು ವೈಸರಾಯರು ನಾಳೆ ದೆಹಲಿಗೆ ಹಿಂದಿರುಗುವರು. ಇತರ ನಾಯಕರು ತಮ್ಮ ತಮ್ಮ ಸ್ಥಳಗಳಿಗೆ ತೆರಳುವರು.

ಮಹಾತ್ಮಾ ಗಾಂಧಿಯವರು ಇದಿನ ಸಂಜೆ ನಿಯೋಗದವರನ್ನು ... ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ... ನಿಯೋಗದವರು ಮುಂದಿನ ... ಕ್ರಮದ ಬಗ್ಗೆ ಸಮ್ಮದಲ್ಲಿಯೇ ತಮ್ಮ ಅಭಿಪ್ರಾಯಗಳನ್ನು ಪ್ರಕಟಿಸುವರು. ಅವರು ತಮ್ಮ ಘೋಷಣೆಗೆ ... ಕೇಂದ್ರ ಸರ್ಕಾರವನ್ನು ರಚಿಸಿ ರಾಷ್ಟ್ರೀಯ ... ಸೂಚನೆ ... ವಿರುಗುವರೆಂದು ... ವಿಲ್ಲವೆಂದು ... ಲಂಡನ್ನಿನಲ್ಲಿ ... ಬ್ರಿಟಿಷ್ ಮಂತ್ರಿಗಳೊಡನೆ ಮುಂದಿನ ... ಕಾರ್ಯಕ್ರಮದ ಬಗ್ಗೆ ನಿಯೋಗದವರು ಸಮಾಲೋಚನೆ ನಡೆಸುತ್ತಿರುವುದಾಗಿ ತಿಳಿದಿದೆ.

... ಸಂಧಾನವು ವಿಫಲವಾಗಿ ... ವರನಿಗೆ ... ಬೇಗ ... ಹೇಳಲಾಗಿದೆ

ಸಂಧಾನ ಭಂಗಕ್ಕಾಗಿ ಅಸಮಾಧಾನ

ಸ್ವಂ ಸು ವ್ಸೋ॥] ಬೆಂಗಳೂರು ೧೬.

ಸಿಮ್ಲಾ ಸಮ್ಮೇಳನವು ಮುರಿದು ಬಿದ್ದು ಸಂಧಾನವು ವಿಫಲವಾದುದಕ್ಕಾಗಿ ಸಕಲರೂ ಸಂತಾಪವನ್ನು ಸೂಚಿಸುತ್ತಿರುವರು.

ಕಾಫಿ ಬೋರ್ಡಿನಂತೆಯೇ ಟೀ ಬೋರ್ಡನ್ನು ಸ್ಥಾಪಿಸಲು ... ಮಾಡಲು ಕೇಂದ್ರ ಸರ್ಕಾರದ ಮಾರ್ಕೆಟಿಂಗ್ ಅಧಿಕಾರಿ ... ರವರು ಬೆಂಗಳೂರಿಗೆ ಬಂದಿದ್ದಾರೆ.

ಸ್ತ್ರೀ ಅಪಹಾರಕ್ಕೆ ಶಿಕ್ಷೆ

ಮೈಸೂರು, ೧೬.

ಚಾಮುಂಡಿ ಬೆಟ್ಟದ ಶಾಸಯ್ಯನ ಮಗ ... ಎಂಬುವನು ೧೯೧೦-೪೫ರಲ್ಲಿ ಅಲ್ಲಿನ ... ಒಬ್ಬ ಗೌರಮ್ಮನೆಂಬಾಕೆಯನ್ನು ಎತ್ತಿಕೊಂಡು ಹೋಗಲು ಪ್ರಯತ್ನಿಸಿದನೆಂಬ ಮೊಕದ್ದಮೆಯಲ್ಲಿ ಎರಡನೇ ಮ್ಯಾಜಿಸ್ಟ್ರೇಟರು ಆತನಿಗೆ ಈ ದಿನ ಆರು ತಿಂಗಳು ಕಠಿಣ ಸಜಾ ವಿಧಿಸಿದರು.

ವೈಸರಾಯರಿಂದ ಕೇಂದ್ರ ಸರ್ಕಾರದ ರಚನೆ

ಆದಷ್ಟು ಬೇಗ ವೈಸರಾಯರು ಕೇಂದ್ರ ಮಂತ್ರಿ ಸರ್ಕಾರವನ್ನು ರಚಿಸಲು ಆಲೋಚಿಸುತ್ತಿರುವರೆಂದು ತಿಳಿದು ಬಂದಿದೆ. ಈ ಸರ್ಕಾರವು ಬಹುಮಟ್ಟಿಗೆ ... ರಾಜಕೀಯ ಸ್ವರೂಪವನ್ನು ಉಳ್ಳದ್ದಾಗಿರುತ್ತದೆ. ಈ ಬಗ್ಗೆ ವೈಸರಾಯರು ನಾಯಕರುಗಳಿಗೂ, ರಾಜಕೀಯರಿಗೂ ಸೂಚನೆ ಇತ್ತಿರುವರೆಂದು ಹೇಳಲಾಗಿದೆ. ಆ ಸರ್ಕಾರಕ್ಕೆ ರಾಷ್ಟ್ರಾಂಗ ರಚನಾ ಸಮಿತಿ ... ನೇಮಿಸುವ ಅಧಿಕಾರವನ್ನು ಕೊಡಲಾಗುವುದು. ಬ್ರಿಟಿಷ್ ನಿಯೋಗದವರು ಈ ಬಗ್ಗೆ ಸಮ್ಮದಲ್ಲಿಯೇ ಒಂದು ಹೇಳಿಕೆ ಹೊರಡಿಸುವರು.

ಟರ್ಕಿಯಲ್ಲಿ ಪ್ರವಾಹದ ಹಾವಳಿ

ವಿಪರೀತ ಮಳೆ ಬಿದ್ದುದರಿಂದ ಟರ್ಕಿಯ ... ಸ್ಥಳದಲ್ಲಿ ಭಾರಿ ಪ್ರವಾಹವು ಒಂದು ಮೂವತ್ತು ಗ್ರಾಮಗಳು ... ನಾಶಹೊಂದಿವೆ. ನೂರು ಜನರು ಮಡಿದರು. ಎರಡು ಸಾವಿರಕ್ಕಿಂತಲೂ ಹೆಚ್ಚು ಜನರು ಮನೆಗಳನ್ನು ಕಳೆದುಕೊಂಡು ನಿರಾಶ್ರಿತರಾಗಿರುವರು.

ಮಧುರೆಯಲ್ಲಿ ಗುಂಡೇಟು

ಪ್ರಾಂತಿಕ ಸಮ್ಮೇಳನದ ಸ್ವಯಂ ಸೇವಕ ದಳದ ... ಸಮ್ಮೇಳನವಾಂ ... ದ ಪೈಗೆ ... ನಡೆಯುತ್ತಿದ್ದಾಗ ... ಪೋಲೀಸಿನವರು ... ಇನ್ಸ್ಪೆಕ್ಟರಿಗೆ ಗಾಯ ... ಜನರನ್ನು ಚದುರಿಸಲು ... ಸಮ್ಮೇಳನದ ... ಮುಚ್ಚಲಾಯಿತು.

... ವಯಸ್ಸಿನ ... ಇವರು ಅಲ್ಲಿಯ ... ಸರ್ಕಾರದ ... ಬಂಧನದಿಂದ ಬಿಡುಗಡೆಯಾಗಿರುವರು.

* ... ಅಗ್ನಿಯ ಕಾಲಿಕ್ಕಿಂತ ... ಬಂದುದರಿಂದ ... ಅಲ್ಲಿನ ... ಪ್ರಮುಖರ ... ಹೇಳಿದ್ದಾರೆ

ಸಾಧ್ವಿ

ತಾ॥ ೧೩-೫-೪೬ ಸೋಮವಾರ

ಸಂಧಾನ ಭಂಗ

ಬ್ರಿಟಿಷ್ ನಿಯೋಗದವರು ಒಂದೂವರೆ ತಿಂಗಳಿಂದ ನಡೆಸಿದ ಸಂಧಾನವು ಭಂಗವಾಯಿತೆಂದು ವರದಿಯಾಗಿದೆ. ಕಾಂಗ್ರೆಸ್ ಮತ್ತು ಲೀಗುಗಳಿಗೆ ಒಪ್ಪಂದವಾಗಲಿಲ್ಲವೆಂದು ತಿಳಿದು ಬಂದಿದೆ. ಭಾರತ ಸಮಸ್ಯೆಯ ಪರಿಹಾರಕ್ಕಾಗಿ ನಡೆಯುವ ಪ್ರಯತ್ನಗಳು ಈ ಸಾರಿ ಕಟ್ಟ ಕಡೆಯದಾಗಿ ಯಶಸ್ವಿಯಾಗುವುವೆಂದು ನಂಬಿದ್ದವರ ನಿರೀಕ್ಷಣೆಯು ವಿಫಲವಾಗಿದೆ.

ಇದಕ್ಕೆ ಯಾವ ಕಾರಣದಿಂದು ಈಗಲೇ ಹೇಳಲು ಸಾಧ್ಯವಿಲ್ಲ. ಇದುವರೆಗೆ ನಡೆದಿರುವ ಪತ್ರ ವ್ಯವಹಾರಗಳು ಹೊರಬಿದ್ದ ಮೇಲೆ ಅದನ್ನು ವಿಮರ್ಶಿಸಬೇಕಾಗಿದೆ. ಸಂಧಾನವನ್ನು ಇನ್ನು ಮುಂದುವರಿಸುವುದರಿಂದ ಯಾವ ಪ್ರಯೋಜನವೂ ಇರುವುದಿಲ್ಲವೆಂದು ಉಭಯ ಪಂಗಡದವರೂ ತಿಳಿಸಿರುತ್ತಾರೆ ಎಂದ ಮೇಲೆ ಅವರು ಮಾಡಬೇಕಾದ ಪ್ರಯತ್ನಗಳನ್ನೆಲ್ಲಾ ಮಾಡಿಯಾದರೂ ವಿಫಲವಾಗಿರುವರೆಂದು ಗೊತ್ತಾಗುತ್ತದೆ. ಸಿಮ್ಲಾ ನಗರದಲ್ಲಿ ನಡೆದ ಈ ಎರಡನೇ ಪ್ರಯತ್ನವೂ ವ್ಯರ್ಥವಾದುದಕ್ಕಾಗಿ ಎಲ್ಲರೂ ವಿಷಾದಿಸುವರು. ಆದರೆ ಈ ಫಲಿತಾಂಶವು ಅನಿರೀಕ್ಷಿತವಾದುದಲ್ಲವೆಂದು ಹೇಳಬಹುದು. ಕಾಂಗ್ರೆಸ್ಸಿನವರು ಎಷ್ಟೇ ರಿಯಾಯಿತಿಗಳನ್ನು ತೋರಿದರೂ, ಜಿನ್ನಾ ರವರು ಮಾತ್ರ ಎಳ್ಳಷ್ಟೂ ಜಗ್ಗುವುದಿಲ್ಲವೆಂದು ಎಲ್ಲರೂ ಸಂಶಯ ಪಡುತ್ತಿದ್ದರು. ಈಗ ಆ ಸಂದೇಹವು ನಿಜವಾಯಿತು. ಆದರೂ ಯಾವ ಕಾರಣದಿಂದ ಈ ಪ್ರಯತ್ನವು ವಿಫಲವಾಯಿತೆಂಬುದನ್ನು ಖಚಿತವಾಗಿ ತಿಳಿಯಲು ಇನ್ನು ಸ್ವಲ್ಪ ಕಾಲ ಬೇಕು.

ಹಿಂದೆ ಸಿಮ್ಲಾದಲ್ಲಿ ನಡೆದ ಸಂಧಾನಕ್ಕೂ ಇಂದಿನ ಪ್ರಯತ್ನಕ್ಕೂ ಒಂದು ವ್ಯತ್ಯಾಸವಿದೆ. ಅದು ವಾಸಗೀ ಮಂಡಳದ ಪ್ರಯತ್ನದಿಂದ ನಡೆಯಿತು. ಇದು ಬ್ರಿಟಿಷ್ ಸರ್ಕಾರದವರಿಂದಲೇ ಆರಂಭವಾಯಿತು. ಆಗ ಸರ್ಕಾರದವರ ಕಡೆಯಿಂದ ಯಾವ ಭರವಸೆಯೂ ಇರಲಿಲ್ಲ. ಈಗ ಬ್ರಿಟಿಷ್ ಪ್ರಧಾನಿಗಳ ಘೋಷಣೆಯು ಸಂಕಲ್ಪವೇ ಇಂದಿನ ಪ್ರಕರಣವು ಸಾಗಿದೆ. ಅದಕ್ಕೆ ಭಾರತದ ನಾಯಕರು ಮನ್ನಣೆಯಿತ್ತಿದ್ದಾರೆ. ಸಂಧಾನವನ್ನೂ ಸಂಪೂರ್ಣ ಸಹಕಾರವನ್ನು ನೀಡಿದ್ದಾರೆ. ಪಕ್ಷ ಶಕ್ತಿಗಳು ಮುರಿದು ಬಿದ್ದರೂ ಸಂಧಾನವು ಮಾತ್ರ ಮುಂದುವರಿಯುವುದೆಂದು ಹೇಳಲಾಗಿದೆ. ಮಹಾತ್ಮ ಗಾಂಧಿ ಮುಂತಾದವರು ಈ ಪ್ರಯತ್ನದ ಒಳ್ಳೆ ಇನ್ನು ಸದ್ಭಾವನೆಯುಳ್ಳವರಾಗಿಯೇ ಇದ್ದಾರೆ. ಏಕೆಂದರೆ ಭಾರತದ ಸಮಸ್ಯೆಯ ಪರಿಹಾರಕ್ಕೆ ಬ್ರಿಟಿಷ್ ಸರ್ಕಾರದವರು ಉತ್ತರವಾದಿಗಳೇ ವಿನಾ ಲೀಗಿನವರಲ್ಲವೆಂಬುದು ಅವರ ಅಭಿಮತ. ಅಧಿಕಾರವನ್ನು ಭಾರತೀಯರಿಗೆ ವರ್ಗಾಯಿಸುವುದಾಗಿ ಬ್ರಿಟಿಷರು ಕೊಟ್ಟಿರುವ ವಚನವನ್ನು ಪಾಲಿಸುವರೆಂದೂ, ನಿಯೋಗದವರು ಮೋಸ ಮಾಡಲು ಇಲ್ಲಿಗೆ ಬಂದಿಲ್ಲವೆಂದೂ ಮಹಾತ್ಮರು ಇನ್ನೂ ನಂಬಿದ್ದಾರೆ.

ಈ ದಿನ ಸಂಜೆ ಮಹಾತ್ಮರು ನಿಯೋಗದವರನ್ನು ಕಂಡು ತಮ್ಮ ಅಭಿಪ್ರಾಯ ಸಲಹೆಗಳನ್ನು ಕೊಡಲಿದ್ದಾರೆ. ಅನಂತರ ನಿ

ಪೌರನೀತಿಶಿಕ್ಷಣ ವಿದ್ಯಾಲಯ

ಅಖಿಲ ಕರ್ನಾಟಕ ವಿದ್ಯಾರ್ಥಿ ಕಾಂಗ್ರೆಸ್ಸಿನ ವತಿಯಿಂದ ಪೌರನೀತಿ ಶಿಕ್ಷಣ ವಿದ್ಯಾಲಯವನ್ನು ಮೇ ೨೫ ರಿಂದ ಬೆಳಗಾವಿಯಲ್ಲಿ ಪ್ರಾರಂಭಿಸಲಾಗುವುದು. ಇದಕ್ಕೆ ಶ್ರೀ ಗಂಗಾಧರ ಅಧ್ಯಕ್ಷ ಪಟವರ್ಧನ್, ಅಶೋಕ ಮೆಹತ, ರಂಗನಾಥ ದಿವಾಕರ್, ಕೆ. ಟಿ. ಭಾಷ್ಯಂ ಮುಂತಾದವರು ಬಂದು ಪ್ರವಚನವನ್ನು ನಡೆಸುವರು. ಈ ವಿದ್ಯಾಲಯಕ್ಕೆ ಬರಲಿಚ್ಛಿಸುವ ವಿದ್ಯಾರ್ಥಿಗಳು ಮೇ ೧೮ ನೇ ತಾರೀಖಿನೊಳಗೆ ೧೧ ರೂ ಗಳೊಂದಿಗೆ ಕಾರ್ಯದರ್ಶಿ, ಅ-ಕ-ವಿ-ಕಾಂಗ್ರೆಸ್ ಲಾ ಕಾಲೇಜು ಹಾಸ್ಟೆಲ್, ಬೆಳಗಾವಿ- ಈ ವಿಳಾಸಕ್ಕೆ ಅರ್ಜಿ ಬರೆದುಕೊಳ್ಳಬೇಕು. ಅಂತಹ ವಿದ್ಯಾರ್ಥಿಗಳಿಗೆ ಊಟವಸತಿಗಳನ್ನೊದಗಿಸಲಾಗುವುದು.

ಉಪವಾಸ ಮುಷ್ಕರದಿಂದ ಸೆರೆಮನೆಯಲ್ಲೇ ಮರಣ

ಸರ್ಕಾರಕ್ಕೆ ವಿರೋಧವಾದ ಐರಿಷ್ ಪ್ರತಿಪಕ್ಷದ ಸದಸ್ಯ ಎಂಬುವರು ಐರ್ಲೆಂಡಿನ ಸೆರೆಮನೆಯಲ್ಲಿ ೧೯೪೧ ರಿಂದ ಬಂಧಿತರಾಗಿದ್ದಾರೆ. ಅವರು ತಮ್ಮ ಬಿಡುಗಡೆಗಾಗಿ ಕಳೆದ ೧೭ ದಿವಸಗಳಿಂದ ಉಪವಾಸ ಮುಷ್ಕರ ಹೂಡಿದ್ದು ಮೊನ್ನೆ ದಿನ ಜೈಲಿನಲ್ಲೇ ಪ್ರಾಣಬಿಟ್ಟರು. ಅಸ್ವಸ್ಥ ಡಿ ವೇಲರಾ ರವರು ಇಂಥ ಉಪವಾಸ ಮುಷ್ಕರಕ್ಕೆ ಬಗ್ಗಿದರೆ ಅನ್ಯಾಯಕ್ಕೆ ಶರಣಾದಂತೆ ಆಗುವುದೆಂದು ಹೇಳಿ ಇವರನ್ನು ಬಿಡುಗಡೆಮಾಡಲು ನಿರಾಕರಿಸಿದ್ದರು.

§ ಫ್ರೆಂಚ್ ಚುನಾವಣೆ ನಡೆದಿರುವ ಜಾತಿಪ್ರತಿನಿಧಿ ಸರ್ಕಾರವನ್ನು ಅದಷ್ಟು ಬೇಗ ಸ್ಥಾಪಿಸಲು ಮೈಸೂರಿಗೆ ಅವಶ್ಯಕವಾಗಿರುವುದೆಂದು ವರದಿಯಾಗಿದೆ. ರಾಜ್ಯಾಂಗ ರಚನಾ ಸಮಿತಿಯನ್ನು ಈ ಸರ್ಕಾರವು ಸ್ಥಾಪಿಸುವುದು.

§ ಬರುವ ವರ್ಷ ಸಂಸ್ಥಾನದ ಆದಾಯ ಒಂಭತ್ತೂವರೆ ಕೋಟಿ ರೂ, ವೆಚ್ಚ ಒಂಭತ್ತೂಕಾಲು ಕೋಟಿ ರೂ ಆಗುವುದೆಂದೂ, ೨೫ ಲಕ್ಷ ರೂ. ಉಳಿತಾಯವಾಗುವುದೆಂದೂ ವರದಿಯಾಗಿದೆ.

ನಿಯೋಗದವರು ಮುಂದಿನ ಕಾರ್ಯಕ್ರಮದ ಬಗ್ಗೆ ತಮ್ಮ ಕಾರ್ಯನೀತಿಯನ್ನು ಸೂಚಿಸುವರು. ಅದಾದ ಮೇಲೆ ದೇಶದ ಪ್ರಕೃತಿಯು ಹೇಗೆ ಆಗುವುದೋ ನೋಡಬೇಕು.

ಇನ್ನೊಂದು ಕೋನದಿಂದ ನೋಡಿದರೂ, ಭಿನ್ನಾಭಿಪ್ರಾಯದಿಂದ ಆರಂಭವಾದ ಸಂಧಾನ ಪ್ರಯತ್ನವು ಕೇವಲ ನಿರರ್ಥಕವಾಗಿ ಪರಿಣಮಿಸಲು ಸಾಧ್ಯವಿಲ್ಲ. ತಮ್ಮ ಕಾರ್ಯವನ್ನು ಸಾಧಿಸದ ಹಿಂದಿರುಗುವುದಿಲ್ಲವೆಂದು ನಿಯೋಗದವರು ಹೇಳಿರುವ ಮಾತನ್ನು ಉಳಿಸಿಕೊಳ್ಳಬೇಕು. ಲೀಗಿಗೂ ಕಾಂಗ್ರೆಸ್ಸಿಗೂ ಭಿನ್ನಾಭಿಪ್ರಾಯವಿದ್ದರೂ, ಕಾಂಗ್ರೆಸ್ಸಿಗೂ ನಿಯೋಗದವರಿಗೂ ಯಾವ ಭಿನ್ನಾಭಿಪ್ರಾಯವೂ ಕಂಡು ಬರುವುದಿಲ್ಲ. ಆದುದರಿಂದ ನಿಯೋಗದವರು ರಾಷ್ಟ್ರೀಯ ಸರ್ಕಾರ ಸ್ಥಾಪನೆಗೆ ಕೂಡಲೇ ವ್ಯವಸ್ಥೆ ಮಾಡಬೇಕು. ಈಗಾಗಲೇ ರಾಜೀನಾಮೆ ಇತ್ತಿರುವ ಸಚಿವರ ಸ್ಥಾನಗಳಲ್ಲಿ ಪ್ರಜಾನಾಯಕರನ್ನು ಸ್ಥಾಪಿಸಬೇಕು. ಅನಂತರ ರಾಜ್ಯಾಂಗ ರಚನಾ ವ್ಯವಸ್ಥೆಗೆ ಏರ್ಪಾಡು ಮಾಡಬೇಕು. ಇಷ್ಟನ್ನೂ ಮಾಡದಿದ್ದರೆ ನಿಯೋಗದವರ ಪ್ರಯತ್ನವು ಸಾರ್ಥಕವಾಗುವುದಿಲ್ಲ.

ಗಾಯಿತ್ರಿ ಹೋಮ

ಸ್ವಂ ಸು] ಹಿರೀಸಾವೆ ೧೦

ಚನ್ನರಾಯ ಪಟ್ಟಣದ ತಾಲ್ಲೂಕು ಬಾಳಗಂಚಿ ಗ್ರಾಮದಲ್ಲಿ ಲೋಕಕಲ್ಯಾಣಾರ್ಥವಾಗಿ ನಡೆಯುತ್ತಿರುವ ಶ್ರೀರಾಮ ಮಹಾಸಾಮ್ರಾಜ್ಯ ಪಟ್ಟಾಭಿಷೇಕ ಪುರಸ್ಸರ ಶ್ರೀ ಗಾಯತ್ರೀ ಹೋಮವು ಯಥಾವಿಧಿಯಾಗಿ ಪ್ರಾರಂಭಿಸಲ್ಪಟ್ಟು, ದಿನವೂ ಸುತ್ತಿನ ಮಹಾಜನಗಳಿಂದ ಪಾರಾಯಣಗಳೂ, ಶ್ರೀಮಾನ್ ಕೃಷ್ಣಸ್ವಾಮಿ, ರಾಮಾನುಜಯ್ಯಂಗಾರ್, ಸಂಪತ್ಕುಮಾರಯ್ಯ ಇವರುಗಳಿಂದ ಧರ್ಮಶಾಸ್ತ್ರವಿಚಾರದಲ್ಲಿ ಉಪನ್ಯಾಸಗಳೂ, ಶ್ರೀ ಗಮಕಿ ರಾಮಕೃಷ್ಣಶಾಸ್ತ್ರಿಗಳವರಿಂದ ಪುರಾಣಪ್ರವಚನಗಳೂ, ಸಾಂಗವಾಗಿ ನೆರವೇರುತ್ತಿವೆ. ಶ್ರೀ ಶಂಕರಾನಂದ ಭಾರತೀ ಸ್ವಾಮಿಗಳವರು ದಯಮಾಡಿಸಿರುತ್ತಾರೆ. ತಾ॥ ೧೧-೫-೪೬ ರಿಂದ ಪ್ರತಿನಿತ್ಯವೂ ಧಾರ್ಮಿಕ ವಿಚಾರದಲ್ಲಿ ಅವರು ಉಪನ್ಯಾಸ ಮಾಡುವವರಾಗಿದ್ದಾರೆ. ಆಸ್ತಿಕ ಮಹಾಜನರು ಪ್ರೋತ್ಸಾಹವನ್ನು ಕೋರಲಾಗಿದೆ.

ಜಯಕರ್‌ರವರಿಗೆ ಪ್ರೀವಿ ಕೌನ್ಸಿಲ್ಲಿನ ಆಹ್ವಾನ

ಬೇಸಗೆಯಲ್ಲಿ ನಡೆಸಲಿರುವ ಭಾರತದ ಅಪೀಲುಗಳ ವಿಚಾರಣೆಯಲ್ಲಿ ಭಾಗವಹಿಸಬೇಕೆಂದು ಜಯಕರ್ ರವರನ್ನು ಇಂಗ್ಲೆಂಡಿನ ಪ್ರೀವಿ ಕೌನ್ಸಿಲ್‌ನವರು ಆಹ್ವಾನಿಸಿರುವರು.

ಅಮೆರಿಕ ಸಲಹೆಗೆ ರಷ್ಯದ ಅಸಮ್ಮತಿ

ಜೂನ್ ೧೫ನೇ ತಾ॥ ಶಾಂತಿ ಸಮ್ಮೇಳನವನ್ನು ಸೇರಿಸಬೇಕೆಂದು ಅಮೆರಿಕ ಮಾಡಿದ್ದ ಸಲಹೆಯನ್ನು ರಷ್ಯ ಒಪ್ಪಲಿಲ್ಲವೆಂದೂ, ಜೂನ್ ೫ನೇ ತೇದಿ ವಿದೇಶಾಂಗ ಸಚಿವರ ಸಭೆ ಪ್ಯಾರಿಸ್ಸಿನಲ್ಲಿ ನಡೆದು ಪೂರ್ವಭಾವಿ ಸಿದ್ಧತೆ ಮಾಡಬೇಕೆಂದೂ ಸೂಚಿಸಿದೆ.

ಉತ್ತಮ ವರ್ಗದ
ಅರಗಿನ ಪದಾರ್ಥಗಳು

ವಿಧವಿಧ ವರ್ಗದ ಮೊಹರಿನ ಅರಗು, ಗುಂಡಿ ಅರಗು, ಹೊಂಬಣ್ಣದ ಟ್ರಾನ್ಸ್‌ಫರ್ ಸ್ಟಿಕ್ ಮತ್ತು ಬ್ಲೀಚು ಮಾಡಿದ ಅರಗು, ಬಣ್ಣರಹಿತ ಪಾಲಿಶ್ ಫ್ರೆಂಚ ಪಾಲಿಶ್‌ಗಳು, ಬಣ್ಣದ ಪಾಲಿಶ್‌ಗಳು ಮತ್ತು ಇತರ ಅರಗಿನ ಪದಾರ್ಥಗಳು

ವಿವರಗಳಿಗಾಗಿ ಬರೆಯಿರಿ:—

ಸರಕಾರದ ಅರಗು ಮತ್ತು ಬಣ್ಣದ ಕಾರಖಾನೆ

ಈದಿಗಾ, :: ಮೈಸೂರು

Edited, printed and published by A. R. Nagarajan at the Sadhvi Press D Subbiah Road, Mysore.

ವಾರ್ತಾ ವಾಹಿ

* ಗಂಟೆಗೆ ೫೦೦ ಮೈಲಿ ವೇಗದ ಸಲಕ್ಕೆ ೫ ಸಾವಿರ ಮೈಲಿ ದೂರ ಹೋಗುವ "ಸೆಟಲೈಟ್" ಗಳನ್ನು ಪತ್ರಗಳನ್ನು ಸಾಗಿಸುವುದಕ್ಕಾಗಿ ಪೋಸ್ಟ್ ಆಫೀಸಿನವರು ಉಪಯೋಗಿಸಲು ವ್ಯವಸ್ಥೆ ಮಾಡಿದ್ದಾರೆ. ಲಂಡನ್ನಿನಿಂದ ನ್ಯೂಯಾರ್ಕಿಗೆ ೫ ಗಂಟೆ, ಕಲ್ಕತ್ತಕ್ಕೆ ೯ ಗಂಟೆ, ಸಿಡ್ನಿಗೆ ೨೪ ಗಂಟೆಗಳಲ್ಲಿ ಅಂಚೆ ತಲುಪುವುದು.

* ದಕ್ಷಿಣ ಆಫ್ರಿಕದಲ್ಲಿ ಭಾರತೀಯರು ಅನುಭವಿಸುತ್ತಿರುವ ತೊಂದರೆಗಳ ವಿಷಯದಲ್ಲಿ ವಿಶ್ವ ಸಂಸ್ಥೆಯವರು ಪರಿಶೀಲಿಸಿ ದಕ್ಷಿಣಾಫ್ರಿಕ ಸರ್ಕಾರಕ್ಕೆ ತಿಳಿಸಬೇಕೆಂದು ತಾ॥ ಖರೆಯವರು ಕೇಳಿರುವರು.

§ ಮದರಾಸಿನಲ್ಲಿ ಪುರಸಭೆಯವರು ಊರಿನ ಬೀದಿಗಳಿಗೆ ಸುಭಾಷ್ ಬೋಸ್, ಪ್ರಧಾನಿ ಪ್ರಕಾಶಂ, ಕ್ಯಾಪ್ಟನ್ ಲಕ್ಷ್ಮಿ ಸೇಗಾಲ್, ಮಿಸ್ ಜಿನ್ನಾ ರವರುಗಳ ಹೆಸರಿಟ್ಟಿದ್ದಾರೆ.

† ಚೀನಾ ದೇಶಕ್ಕೆ ಆಕ್ರಮಣ ನಡೆಸಿದ, ಪ್ರಮುಖನಾದ ಹೊನ್ಹಾನ್ ಪ್ರಾಂತ್ಯವನ್ನು ಕಾಂಡವಾಡುತ್ತಿದೆ. ಇದರಿಂದ ಆಹಾರ ತಲುಪಿಸಲು ಸಾಧ್ಯವಿಲ್ಲದೆ ಜನ ಸಾಯುತ್ತಿದೆ.

* ಆಫ್ರಿಕಾದಲ್ಲಿ ಇಟಲಿಯ ವಸಾಹತುಗಳನ್ನು ಬಿಟ್ಟು ಕೊಡಲೂ, ಟ್ರೈಸ್ಟನ್ನು ಹಂಚಲೂ ಸಾಧ್ಯವಿಲ್ಲವೆಂದು ಮುಖ್ಯಮಂತ್ರಿ ಪ್ಯಾರಿಸ್ಸಿನ ಪಡೀ ಸಮ್ಮೇಳನಕ್ಕೆ ತಿಳಿಸಿದ್ದಾರೆ.

§ ಪ್ರೊ॥ ಪ್ರೊ॥ ಸಭೆಯ ಸದಸ್ಯರಾದ ಜಿ. ಎಸ್. ದೇವದಾಸ್‌ರವರ ಪತ್ನಿಯವರು ಶ್ರೀಮತಿ ಕಮಲಮ್ಮ ಯವರು ಕೆಲವು ದಿನಗಳಿಂದ ಉಪವಾಸದ ೯ ನೇ ತಾ॥ ಸ್ವರ್ಗಸ್ಥರಾದರೆಂದು ತಿಳಿಸಲು ವಿಷಾದಿಸುತ್ತೇವೆ.

ಸಾಧ್ವಿ

ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ಜಾಹೀರಾತಿನ ದರಗಳಿಗೆ ವಿಚಾರಿಸಿರಿ

ಟಿ. ಸಿ. ನಟರಾಜ

ಔಷಧಾಲಯ

ಶೀಘ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ

ಅವಶ್ಯವಾಗಿ ಬೇಕಾದ ಎಲ್ಲಾ ಶ್ರೇಷ್ಠ ಔಷಧಿಗಳೂ ಸದಾ ಕಾಲದಲ್ಲೂ ದೊರೆಯುವುವಲ್ಲದೆ ಸಮಸ್ತ ವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಧಾರಣೆಯಲ್ಲಿ ಮಾಡಲ್ಪಡುತ್ತದೆ

ಧುಂಡೂರಾವ್ ನಮ್ಮವರೇ ಔಷಧಗಳಲ್ಲೂ ಚೂರಿಯಲ್ಲೂ...

[illegible]　　॥ ವಂದೇ ಮಾತರಂ ॥　　ಇಂದಿನ ಪತ್ರಿಕೆ 3 ಕಾಸು

ಸಂಪುಟ ೪]　　ಮಂಗಳವಾರ ೧೪—೫—೪೬　　[ಸಂಚಿಕೆ ೨೧೨

ನಾಳೆ ನಿಯೋಗದವರ ಹೇಳಿಕೆ ಪ್ರಕಟಣೆ

ಕಷ್ಟಕರದ ಅವಕಾಶವೆಂದು ನೆಹರು ಎಚ್ಚರಿಕೆ

ಅವಶ್ಯವಿದ್ದರೆ ನಾನು ಫರೀದ್‌ಕೋಟೆಗೆ ಹೋಗುವೆನು ಆದರೆ ಸಿವ್ಲಾದಲ್ಲಿರುವ ಮಹತ್ವದ ಕಾರ್ಯ ನನ್ನನ್ನು ತಡೆದಿದೆ. ಫರೀದ್‌ಕೋಟೆ ಅಧಿಕಾರಿಗಳಿಗೂ, ರಾಜಕೀಯ ಇಲಾಖೆಯವರಿಗೂ, ಆ [illegible] ಸಾಮಾನ್ಯವಾಗಿ ಎಲ್ಲಾ ನರೇಂದ್ರರಿಗೂ, ಇಂದಿನ ತೀವ್ರ ಪರಿಸ್ಥಿತಿ ಅರಿಯಲು ಕಷ್ಟಕರದ ಅವಕಾಶ ಕೊಟ್ಟಿದ್ದೇನೆ ಎಂದು ಪಂ॥ ನೆಹರು ಫರೀದ್‌ಕೋಟೆ ಬಗ್ಗೆ ಒಂದು ಎಚ್ಚರಿಕೆಯ ಸಂದೇಶ ಇತ್ತಿದ್ದಾರೆ.

ಉಪ್ಪಿನ ತೆರಿಗೆ ರದ್ದಾಗುವುದಿಲ್ಲ

ಭಾರತದಲ್ಲಿ ಸಿಕ್ಕುವ ಉಪ್ಪಿನ ಪ್ರಮಾಣ ಬಹಳ ಕಡಿಮೆಯಾಗಿರುವುದರಿಂದ ಈ ಕರೇ ಉಪ್ಪಿನ ತೆರಿಗೆಯನ್ನು ತಪ್ಪಿಸಲು ಸಾಧ್ಯವಿಲ್ಲವೆಂದು ಮ॥ ಗಾಂಧಿಯವರಿಗೆ ವೈಸರಾಯರು ತಿಳಿಸಿರುವುದಾಗಿ ವರದಿಯಾಗಿದೆ

ಕೂದಲಿಂದ ಆಹಾರ

[illegible] ನ ಆಸ್ಪತ್ರೆಯೊಂದರಲ್ಲಿ [illegible] ಕೂದಲನ್ನು ಸಂಗ್ರಹಿಸಿ ಆಹಾರವನ್ನು ತಯಾರಿಸುತ್ತಿರುವರು. [illegible] ಕೂದಲನ್ನೆಲ್ಲಾ ಕೇಬಿನಿಸುವಂತೆ [illegible] ಮಾಡಿದ್ದಾರೆ. ಕೂದಲಿಂದ ತಯಾರಿಸಿದ ಆಹಾರವು ಬಹಳ ಪುಷ್ಟಿಕರವಾಗಿರುವುದೆಂದು ಹೇಳಲಾಗಿದೆ

ಬೆಟ್ಟಾಲೆ ಸೂರ್ಯನಾರಾಯಣರಾಯರಿಗೆ ಶಿಕ್ಷೆ

ಸ್ವಂ॥ ವ॥]　　ಹಾಸನ ೧೬

ಭಾರತ ರಕ್ಷಣಾ ಶಾಸನದ [illegible] ಪ್ರಕಾರ ಶ್ರೀ ಬೆಟ್ಟಾಲೆ ಸೂರ್ಯನಾರಾಯಣರಾಯರಿಗೆ ಫಸ್ಟ್‌ಕ್ಲಾಸ್ ಮ್ಯಾಜಿಸ್ಟ್ರೇಟರು [illegible] ರೂ. ಗಳ ಜುಲ್ಮಾನೆ, ತಪ್ಪಿದರೆ [illegible] ತಿಂಗಳ ಕಠಿಣ ಶಿಕ್ಷೆ ವಿಧಿಸಿದರು. ಶ್ರೀ ಸೂರ್ಯನಾರಾಯಣರಾಯರು ಜುಲ್ಮಾನೆ ಕೊಡಲು ಒಪ್ಪದೆ ಜೈಲಿಗೆ ಹೋದರು

ಫುಟ್‌ಬಾಲ್ ಪಂದ್ಯ

ಮೈಸೂರು ೧೪

[illegible] ಟೋರ್ನಮೆಂಟಿನ ಆಶ್ರಯದಲ್ಲಿ ನೆನ್ನೆ ನಡೆದ ಫುಟ್‌ಬಾಲ್ ಪಂದ್ಯದಲ್ಲಿ ಮೈಸೂರು ಕೋರಿಂಥಿಯನ್ಸ್‌ನವರು ಮಹಮಡನ್ಸ್ ಸ್ಪೋರ್ಟಿಂಗ್‌ನವರನ್ನು ಒಂದು ಗೋಲಿನಿಂದ ಸೋಲಿಸಿದರು. ಕೊರಿಂಥಿಯನ್ಸ್ ಕಡೆ [illegible] ಮುರುಗೇಶನವರು ಗೋಲು ಹೊಡೆದರು.

* ಹಬ್ಬ ಮನುಷ್ಯನನ್ನು ಬಹಳವಾಗಿ [illegible] ದಿಂದ ಅವನಿಗೆ ಇರುವ ತೀವ್ರವಾದ ಕಣ್ಣಿನ ರೋಗವನ್ನು ಹೋಗಲಾಡಿಸಬಹುದೆಂದು ಅಮೆರಿಕದ ವೈದ್ಯರೊಬ್ಬರು ಕಂಡುಹಿಡಿದಿದ್ದಾರೆ.

* ತಾಯಿಯ ಮಾತನ್ನು ಕೇಳ ಕಂಡ [illegible] ಮಗನನ್ನು ಹೊಡೆದನೆಂದು ಎಡ್ವಿನ್ ಜೇಮ್ಸ್ [illegible] ಎಂಬುವನಿಗೆ ೫ ಪೌಂಡ್ ಜುಲ್ಮಾನೆ ವಿಧಿಸಲಾಯಿತು.

* ಆಗಸ್ಟ್ ತಿಂಗಳಲ್ಲಿ ವಿಶ್ವದ ಕ್ಷಾಮಪೀಡಿತ ಪ್ರದೇಶಗಳಲ್ಲಿ ಸುಧಾರಣೆ ಕಂಡು [illegible] ಅಮೆರಿಕದಲ್ಲಿ ಪುನಃ ರೇಷನಿಂಗ್ ಜಾರಿಗೆ ಬರುವ ಸಂಭವವಿದೆ.

ಭಾರತ ಸ್ವಾತಂತ್ರ್ಯದ ಬಗ್ಗೆ ಬ್ರಿ॥ ನಿಯೋಗದವರ ಹೇಳಿಕೆ

ನಾಳೆ ದಿನ ಬ್ರಿ॥ ನಿಯೋಗ ಮಂತ್ರಿಯವರು ಒಂದು ಹೇಳಿಕೆ ಹೊರಡಿಸುವರು. ಅದರಲ್ಲಿ ಭಾರತದ ಸ್ವಾತಂತ್ರ್ಯವು ಇಂಥ ಹಾದೀ ದಿನದೊಳಗಾಗಿ ಕೊಡಲಾಗುವುದೆಂದು ಅವರು ಪ್ರಕಟಿಸಬಹುದೆಂದು ಊಹಿಸಲಾಗಿದೆ. ಮೌಲಾನಾ ಆಜಾದರೂ, ಗಾಂಧಿಜಯವರೂ ಇಂತಹ ಘೋಷಣೆ ಅತ್ಯಂತ ಅಗತ್ಯವೆಂದು ಒತ್ತಾಯಪಡಿಸಿದ್ದರೆಂದೂ ಹೇಳಲಾಗಿದೆ. ಬ್ರಿ॥ ನಿಯೋಗದವರು ಹೇಳಿಕೆ ಕೊಡುವ ಸಮಯದಲ್ಲೇ ಲಂಡನ್ನಿನಲ್ಲಿ ಮಿ॥ ಅಟ್ಲಿಯವರೂ ಸಹ ಅದೇ ತರದ ಹೇಳಿಕೆಯೊಂದನ್ನು ಕೊಡುವರು

ಸೈಗಾಲರ ಕಾರ್ಯಕ್ರಮ

ಮೈಸೂರು ೧೪

ಕ್ಯಾಪ್ಟನ್ ಸೈಗಾಲರು ಈ ದಿನ ಸಂಜೆ [illegible] ಗಂಟೆಗೆ ಮೈಸೂರಿಗೆ ಬರುವುದಾಗಿ ತಂತಿ ಕಳುಹಿಸಿದ್ದಾರೆ. ನಾಳೆ ಬೆಳಿಗ್ಗೆಯೇ ಇಲ್ಲಿಂದ ಬೆಂಗಳೂರಿಗೆ ಹೊರಡುವರು. ಆದ್ದರಿಂದ ಅವರ ಕಾರ್ಯಕ್ರಮಗಳನ್ನೆಲ್ಲಾ ಈ ದಿನವೇ ಮುಗಿಸಲಾಗುವುದು. ಸಂಜೆ ನಾಲ್ಕೂವರೆ ಗಂಟೆಗೆ ಅವರು ಕೃಷ್ಣಮೂರ್ತಿಪುರದ ದೇಶೀಯ ವಿದ್ಯಾಶಾಲೆಗೆ ಭೇಟಿ ಕೊಡುವರು. ಅನಂತರ ದಸ್ಸರ ಮೈದಾನದಲ್ಲಿ ರಾಷ್ಟ್ರ ಸೇವಾದಳದ ಅರುಣೋದಯವನ್ನು ನೆರವೇರಿಸುವರು. ಸಂಜೆ [illegible] ಗಂಟೆಗೆ ಕಾಂಗ್ರೆಸ್ ಕಛೇರಿಗೆ ಭೇಟಿ ಕೊಡುವರು. [illegible] ಗಂಟೆಗೆ ಟೌನ್‌ಹಾಲಿನಲ್ಲಿ ಏರ್ಪಡಿಸಲಾಗಿರುವ ಸಭೆಯಲ್ಲಿ ಭಾಷಣ ಮಾಡುವರು.

ಹನುಮಂತೋತ್ಸವ

ಹಳ್ಳಿಕೆರೆಯಲ್ಲಿ [illegible] ಹನುಮಂತನ ಬೀದಿಯಲ್ಲಿರುವ ಶ್ರೀನಿವಾಸ ರಾಘವೇಂದ್ರ ಗಾಂಧರ್ವ ವಿದ್ಯಾಶ್ರಮದ ಮಂದಿರದಲ್ಲಿ ನೆನ್ನೆ ಹನುಮಂತೋತ್ಸವವು ಜರುಗಿತು.

ಕಾಂಗ್ರೆಸ್ಸಿಗೆ ಕಾಣಿಕೆ

ಚಿಕ್ಕನಾಯಕನಹಳ್ಳಿ ತಾಲ್ಲೂಕು [illegible] ಕೃಷ್ಣನ್ ಅವರು [illegible] ಮೊನ್ನೆ [illegible] ಸಂಬಂಧವಾಗಿ [illegible] ನಡೆದ ಸಮಾರಂಭದಲ್ಲಿ ೧ ರೂ. ಯನ್ನೂ, ಪೌರಸಭಾ ಸದಸ್ಯರಾದ ಶ್ರೀ ಕೆ. [illegible] ಅವರು ಚಿ॥ ರಾಮಸ್ವಾಮಿಗೆ ನಡೆಸಿದ ವಿವಾಹದ ಸಂಬಂಧದಲ್ಲಿ ೫ ರೂ. ಯನ್ನೂ ಮೈಸೂರು ಕಾಂಗ್ರೆಸ್ಸಿಗೆ ಕಾಣಿಕೆಯಾಗಿ ಸಲ್ಲಿಸಿರುತ್ತಾರೆ.

ಶ್ರೀ ಅಪರಾಧಿಗೆ ಶಿಕ್ಷೆ
ಚಾಮುಂಡಿ ಬೆಟ್ಟದ ಮೋಕದ್ದಮೆ ತೀರ್ಪಿನ ವಿವರ

ಮೈಸೂರು ೧೬

ದಿವ್ಯವಾದ ಪ್ರಕೃತಿಯಿಂದ ಕೂಡಿ ಶ್ರೀ ಚಾಮುಂಡೇಶ್ವರಿಯವರ ನಿವಾಸಸ್ಥಾನವಾಗಿ ಪವಿತ್ರಕ್ಷೇತ್ರವೆಂದು ಸಕಲರ ಮನ್ನಣೆಗೂ ಪಾತ್ರವಾದ ಚಾಮುಂಡಿ ಬೆಟ್ಟದಲ್ಲಿ ಅಪರಾಧವು ನಡೆದಿರುವುದು [illegible] ಇಂಥಹ ಅಪವಿತ್ರ ಕೃತ್ಯಗಳನ್ನು [illegible] ಅದರ [illegible] ಅದ್ದರಿಂದಲೇ ಇದೇ ಅವರ ಮೊದಲನೇ ಅಪರಾಧವಾಗಿರುವುದರಿಂದಲೂ ಅವನಿಗೆ [illegible] ಕಠಿಣ ಶಿಕ್ಷೆಯನ್ನು ವಿಧಿಸದೆ ನ್ಯಾಯ ನಿರ್ವಹಣೆಯ ಉದ್ದೇಶವು [illegible] ಆದರಂತೆಯೇ [illegible] ಎಂಬುದಾಗಿ ಮೈಸೂರು ಎರಡನೇ ಮ್ಯಾಜಿಸ್ಟ್ರೇಟರಾದ ಶ್ರೀ ಎಚ್. ನರಸಿಂಹಮೂರ್ತಿಯವರು [illegible] ಚಾಮುಂಡಿ ಬೆಟ್ಟದ ಪ್ರಕರಣ ಕ್ರಯಕ್ಕದ ಮೊಕದ್ದಮೆಯಲ್ಲಿ ನೆನ್ನೆ ತೀರ್ಪಿತ್ತು [illegible] ವಿವರಗಳು ಕೆಳಕಂಡಂತಿವೆ.

* ಮೈಸೂರು ಸಿಟಿಯಲ್ಲಿ ಈಗ ಕಟ್ಟಲಾಗುತ್ತಿರುವ ಭಾವಸಾರ ಕ್ಷತ್ರಿಯ ಸೋಶಿಯಲ್ ಇನ್‌ಸ್ಟಿಟ್ಯೂಟ್ ಕಟ್ಟಡದ ನಿಧಿಗೆ ಬೆಂಗಳೂರಿನ ಶ್ರೀ|| ಗಳಾದ ಎಸ್ ವೈ ಟಸ್ಸೆ, ಕೃಷ್ಣ ಶಂಕರರಾವ್ ಎಲ್. ಜಂಗಾಡೆ, ಇವರು ರೂ ೧೦೦೧ ರೂ ಗಳನ್ನೂ, ಪಿ ಎಂ. ... ರಂಗರಾವ್ ರವರು ೨೫೧ ರೂ ಗಳನ್ನು ಕೊಟ್ಟಿರುತ್ತಾರೆ. ಇವರಿಗೆ ಶ್ರೀ||ಯುತ ರಾಮಚಂದ್ರ ರಾವ್ ರವರು ಸಮಿತಿ ಪರವಾಗಿ ವಂದನೆಗಳನ್ನು ಅರ್ಪಿಸಿದ್ದಾರೆ.

* ಕೇಂದ್ರ ಸರ್ಕಾರದವರು ಮೈಸೂರು ಸಂಸ್ಥಾನಕ್ಕೆ ಜೂನ್ ತಿಂಗಳಲ್ಲಿ ೯ ಸಾವಿರ ಟನ್ ಗೋಧಿ, ೯ ಸಾವಿರ ಟನ್ ಗೋಧಿ ಹಿಟ್ಟು ೬ ಸಾವಿರ ಟನ್ ಅಕ್ಕಿ ಮತ್ತು ೬ ಸಾವಿರ ಟನ್ ಮುಸುಕಿನ ಜೋಳ ಸರಬರಾಜು ಮಾಡುವುದಾಗಿ ಗೊತ್ತಾಗಿದೆ

* ಸರ್ಕಾರದವರು ಆ|| ಕಮೀಷನರುಗಳ ನೇತ್ರ ಇತರ ಪ್ರೊಬೇಷನರ್ ಅಧಿಕಾರಿಗಳಿಗೆ ನಾಮಕರಣ ಮಾಡುವಾಗ ... ಕೋಮಿನ ಉನ್ನತ ಪದವೀಧರರಿಗೂ ಸಹ ಸ್ಥಾನಗಳನ್ನು ಕೊಡಬೇಕೆಂದು ಒತ್ತಾಯಿಸಬೇಕೆಂದು ... ಕಾರ್ಯಕಾರಿ ಸಮಿತಿಯು ಪ್ರಾರ್ಥಿ...

ಪೆಟ್ರೋಲು ರೇಷನಿಂಗ್ ರದ್ದು

... ಒಂದನೇ ತಾ|| ನಿಂದ ಪೆಟ್ರೋಲ್ ರೇಷನಿಂಗ್ ಆಜ್ಞೆಯು ರದ್ದಾಗುವುದಾಗಿ ತಿಳಿದುಬಂದಿದೆ. ಅಲ್ಲಿಂದ ಮುಂದೆ ... ವಾಗಿ ಪೆಟ್ರೋಲು ದೊರೆಯುವುದು ... ಲಾಗಿದೆ ರೇಷನ್ ನಿಯಮ ... ಕೂಪನ್ನುಗಳನ್ನು ಕೊಡಲು ಈ ... ರ್ವೇ ಕೊನೆಯ ದು

ರಷ್ಯದೊಡನೆ ಬ್ರಿಟನ್-ಅಮೆರಿಕಗಳ ಘರ್ಷಣೆಯೇ ?

ಈಗಿನ ಪ್ರಮಾಣದಲ್ಲಿ ರಷ್ಯ ಬ್ರಿಟನ್ ಮತ್ತು ಅಮೇರಿಕಗಳಿಗಿರುವ ಪರಸ್ಪರ ಸಂಶಯಗಳು ಇನ್ನು ಕೆಲವು ವರ್ಷಗಳ ಕಾಲ ಮುಂದುವರಿದರೆ ಅದರಿಂದ ಭಾರಿ ಆಸ್ಫೋಟನೆಯಾಗಲು ಸಾಧ್ಯವಾದಷ್ಟು ಅವಕಾಶವಿದೆ, ಈ ಆಸ್ಫೋಟನೆಯಿಂದ ಜಗತ್ತು ಒಂದು ಗೊಂದಾರಣ್ಯವಾಗಿ ಪರಿಣಮಿಸುವುದು ಎಂಬುದಾಗಿ ಲಂಡನ್ನಿನ "ಡೈಲಿ ಹೆರಾಲ್ಡ್" ಪತ್ರಿಕೆಯು ಹೇಳಿರುತ್ತದೆ. ಭಯ ಮತ್ತು ಅಭಾವದಿಂದ ವಿನೋಚನೆಯು ಕಳೆದ ಮಹಾ ಯುದ್ಧದ ಪರಿಣಾಮವಾಗಿ ಲಭಿಸುವುದೆಂದು ಮಿತ್ರ ರಾಷ್ಟ್ರದವರು ನಿರೀಕ್ಷಿಸಿದ್ದರು. ಆದರೆ ಇದುವರೆವಿಗೆ ಹಾಗೆ ಆಗಲಿಲ್ಲ. ಅಭಾವವು ಸರ್ವ ವ್ಯಾಪಿಯಾಗಿದೆ. ಭೀತಿಯು ರೂಢವಾಗಿದೆ. ರಾಜಕೀಯ ಸ್ವಾತಂತ್ರ್ಯಕ್ಕಾಗಿ ಪ್ರಮುಖ ರಾಷ್ಟ್ರಗಳು ನಡೆಸುತ್ತಿರುವ ಹೋರಾಟವನ್ನು ನಿಲ್ಲಿಸದಿದ್ದರೆ ಮೂರನೇ ಮಹಾ ಯುದ್ಧವು ತಪ್ಪುವುದಿಲ್ಲ— ಎಂದು ಸದರೀ ಪತ್ರಿಕೆಯ ಅಭಿಪ್ರಾಯ ಪಟ್ಟಿರುತ್ತದೆ

ಅಸ್ಪೃಶ್ಯತಾ ನಿವಾರಣೆಗೆ ಕಾನೂನು

ಹಿಂದುಳಿದ ವರ್ಗದವರ ಕೇಂದ್ರ ಸಮಿತಿಯು ಸಭೆಯು ಮೊನ್ನೆ ಬೆಂಗಳೂರಿನಲ್ಲಿ ಡಾ|| ... ಅವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಸ್ಪೃಶ್ಯತೆಯನ್ನು ನಿವಾರಿಸಲು ಅಗತ್ಯವಾದ ಕಾನೂನನ್ನು ಮಾಡುವಂತೆ ಸರ್ಕಾರದವರನ್ನು ಪ್ರಾರ್ಥಿಸುವುದು, ಹಿಂದುಳಿದ ವರ್ಗದವರ ಏಳಿಗೆಗಾಗಿ ಪಂಚವಾರ್ಷಿಕ ಯೋಜನೆಯೊಂದನ್ನು ತಯಾರಿಸಲು ಒಂದು ಉಪಸಮಿತಿಯನ್ನು ರಚಿಸುವುದು. ಇವೇ ಮುಂತಾದ ನಿರ್ಣಯಗಳು ಮಂಜೂರಾದುವು

* ಲಂಡನ್ನಿನಲ್ಲಿ ನಡೆಯುವ ಬ್ರಿಟಿಷ್ ಕಾರ್ಮಿಕರ ಸಮ್ಮೇಳನಕ್ಕೆ ಡಾ|| ರಾಮ ಮನೋಹರ ಲೋಹಿಯ, ಆಕೋಕ ಮೆಹತಾ ಶ್ರೀಮತಿ ಪೂರ್ಣಿಮ ಬ್ಯಾನರ್ಜಿ ಮತ್ತು ಜಯಪ್ರಕಾಶ ನಾರಾಯಣರು ಸಹ ಭಾರತದ ಪ್ರತಿನಿಧಿಗಳಾಗಿ ತೆರಳಿರುವರು

ಜವಾನಿ ಹಿಂದೀ ಪರೀಕ್ಷೆ

ಮೌಖ್ಯಂತ ಪರೀಕ್ಷೆಯು ... ಬನುಮಯ್ಯನವರ ಹೈ ಸ್ಕೂಲಿನಲ್ಲಿ ನಾಳೆ ಬೆಳಗ್ಗೆ ೯ ರಿಂದ ೧೨ ರ ವರೆಗೆ ನಡೆಯುವುದು.

ಮುಸ್ಲಿಂ ಲೀಗಿನವರ ರಾಜಭಕ್ತಿ ವಿಚಾರ

ಹಕ್ಕು ಬಾಧ್ಯತೆಗೆ ಸಂಬಂಧಪಟ್ಟಿದ್ದಲ್ಲ

(ನಮ್ಮ ವಿಶೇಷ ಪ್ರತಿನಿಧಿಗಳಿಂದ ಫೋನ್)

ಬೆಂಗಳೂರು ೧

ಮೈಸೂರು ಸಿಂಹಾಸನವು ಮುಸ್ಲಿಮರಿಗೆ ಸೇರಬೇಕೆಂದು ಮುಖ್ಯವಾಗಿ ದೆಹಲಿಯ 'ಡಾನ್' ಪತ್ರಿಕೆಯಲ್ಲಿ ಮೈಸೂರು ಮುಸ್ಲಿಂ ಲೀಗಿನವರು ಪ್ರಕಟನೆ ಮಾಡಿರುವ ಅಂಶವು ಈ ಸಭೆಯಲ್ಲಿ ಸದಸ್ಯರಾಗಿರುವ ಡಾ|| ಗಳಾದ ಒ ಎಸ್ ಎಗ ಪರೀಖ್ ಮತ್ತು ಎ ಜೆ ಖಲೀಲ್ ಸಾಹೇಬರವರುಗಳಿಂದ ಖಂಡಿಸಲ್ಪಟ್ಟಿಲ್ಲವಾದುದರಿಂದ ಈ ಸಭೆಯು ಹಕ್ಕು ಬಾಧ್ಯತೆಗೆ ಧಕ್ಕೆ ಒಂದಿರುವುದೆಂಬುದಾಗಿ ಶ್ರೀ|| ಭೂಪಾಳಂ ಚಂದ್ರಶೇಖರಯ್ಯನವರು ಮಾಡಿದ್ದ ಸೂಚನೆಯು ಈ ದಿನ ಪ್ರಜಾ ಪ್ರತಿನಿಧಿ ಸಭೆಯಲ್ಲಿ ಚರ್ಚೆಗೆ ಬಂದಿತು. ಅನೇಕ ಸದಸ್ಯರು ತಮ್ಮ ಅಭಿಪ್ರಾಯಗಳನ್ನು ತಿಳಿಸಿದರು. ಈ ಅಂಶವನ್ನು ಸಭೆಯು ಚರ್ಚಿಸಲು ಅವಕಾಶವಿದೆಯೋ ಎಂಬ ಬಗ್ಗೆ ಬಹಳ ಚರ್ಚೆಯಾಯಿತು. ಈ ವಿಚಾರದಲ್ಲಿ ಕೋರ್ಟಿನಲ್ಲಿ ... ಮೊಕದ್ದಮೆ ನಡೆಯುತ್ತಿರುವುದರಿಂದಲೂ ಮತ್ತು ಇದರಲ್ಲಿ ಸದಸ್ಯರ ಹಕ್ಕು ಬಾಧ್ಯತೆಯು ಅಡಕ ಇರುವುದಿಲ್ಲವಾದುದರಿಂದಲೂ ದಿವಾನರು ಅದನ್ನು ಚರ್ಚಿಸುವುದು ಅವಶ್ಯಕವಿಲ್ಲವೆಂದು ತಿಳಿಸಿದರು.

ಅನಂತರ ಡಾ|| ಎ. ಜೆ. ಖಲೀಲರು ವೆ ... ಸೂಚನೆಯನ್ನು ದಿವಾನರಿಗೆ ಕೊಟ್ಟು ಶ್ರೀ ಭೂಪಾಳಂ ಚಂದ್ರಶೇಖರಯ್ಯನವರು ವಿಸ್ತಾರಾಂಶಗಳನ್ನೆಲ್ಲಾ ಸರಿಯಾಗಿ ತಿಳಿದುಕೊಳ್ಳದೆ ಮುಸಲ್ಮಾನರ ರಾಜಭಕ್ತಿಗೆ ಅಪಚಾರವನ್ನುಂಟುಮಾಡುವ ಟೀಕೆಗಳನ್ನು ಮಾಡಿರುವುದಕ್ಕಾಗಿ ಅಸಮಾಧಾನವನ್ನು ವ್ಯಕ್ತಪಡಿಸಿದರು

ಕಳೆದ ಅಧಿವೇಶನಕ್ಕೆ ತಂದು ಕಳುಹಿಸಿದ್ದ ಹಲವು ವಿಷಯಗಳನ್ನು ಅಧಿವೇಶನದ ವರದಿಯಲ್ಲಿ ನಮೂದು ಮಾಡಿಲ್ಲದೇ ಇರುವ ಅಂಶವನ್ನು ... ಶ್ರೀ ಎಂ. ಎ. ರಾವ ರಾಯರು ತಿಳಿಸಿದರು. ಸಭೆಯ ಅಭಿಪ್ರಾಯವನ್ನು ತಿಳಿದು ಅನಂತರ ವಿಷಯಗಳನ್ನು ಸೇರಿಸುವುದಾಗಿ ದಿವಾನರು ಹೇಳಿದರು

ತಿರುಮಕೂಡಲು ನರಸೀಪುರದ ತಾಲ್ಲೂಕಿಗೆ ಕೊಡುತ್ತಿರುವ ಸಕ್ಕರೆ ಮತ್ತು ಸೀಮೆ ಎಣ್ಣೆ ಕೋಟ ಸಾಲದೆಂಬ ಬಗ್ಗೆ ಪ್ರಶ್ನೋತ್ತರಗಳಾದುವು

ಪತ್ರಿಕೋದ್ಯೋಗಿಗಳ ಸಂಘ

ಮೈಸೂರು ೧

ರಾಜಧಾನಿಯ ಪತ್ರಿಕೋದ್ಯೋಗಿಗಳ ಸಂಘದ ಸಾಧಾರಣ ಸಭೆಯು ನಿನ್ನೆ ಸಂಜೆ ಶ್ರೀ ಆಗರಂ ರಂಗಯ್ಯನವರ ಅಧ್ಯಕ್ಷತೆಯಲ್ಲಿ ನಡೆದು ಸಂಘಕ್ಕೆ ಟೆಲಿಫೋನನ್ನು ಕೂಡಲೇ ಹಾಕಿಸಿಕೊಡಬೇಕೆಂದು ಸರ್ಕಾರವನ್ನು ಪ್ರಾರ್ಥಿಸುವ ನಿರ್ಣಯವನ್ನು ಅಂಗೀಕರಿಸಲಾಯಿತು. ಆಕಾಶವಾಣಿ ಪ್ರತಿನಿಧಿಗಳಾದ ಶ್ರೀ ಅಳಸಿಂಗರಾಚಾರ್ ರವರು ಸದಸ್ಯತನಕ್ಕಾಗಿ ಹಾಕಿದ್ದ ಅರ್ಜಿಯನ್ನು ಅಂಗೀಕರಿಸಲಾಯಿತು

ಕರ್ನಾಟಕವು ಪ್ರತ್ಯೇಕವಾಗುವುದು

ಭಾರತ ರಾಜ್ಯಾಂಗ ರಚನಾ ಸಮಿತಿಯು ತನ್ನ ಕೆಲಸವನ್ನು ಆರಂಭಿಸಿದ ಕೂಡಲೇ ಎ, ಬಿ, ಮತ್ತು ಸಿ ಗುಂಪುಗಳ ತಮ್ಮ ರಾಜ್ಯಾಂಗವನ್ನು ರೂಪಿಸುವುವು. ಆಗ್ಗೆ ಕಾಂಗ್ರೆಸ್ ಬಹು ಮತವಿರುವ ಎ ಗುಂಪು, ಭಾಷಾವಾರು ಪ್ರಾಂತ್ಯಗಳಾಗುವುವು- ಎಂದು ಡಾ|| ಪಟ್ಟಾಭಿ ಸೀತಾರಾಮಯ್ಯನವರು ತಿಳಿಸಿರುವರು.

ಬಿಳಿ ಅಧಿಕಾರಿಗಳು ಮನೆ ಕಡೆಗೆ

ಇಂಡಿಯಾ ಸರ್ಕಾರದ ಆರ್ಥಿಕ ಸಚಿವರಾಗಿದ್ದ ಸರ್ ಎ ರೌಲೆಂಡ್ಸ್‌ರವರು ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತು ಪಕ್ಷೇಪಸಮೇತರಾಗಿ ಇಂಗ್ಲೆಂಡಿಗೆ ಹೊಸ್ತೆ ಪ್ರಯಾಣ ಮಾಡಲು ನಿನ್ನೆದಿನ ಬೊಂಬಾಯಿಗೆ ಬಂದಿದ್ದಾರೆ. ಅಲ್ಲಿಂದ ನಾಳೆ ಹಡಗೇರಲಿದ್ದಾರೆ ಮೈಸರಾಯರೇ ಆರ್ಥಿಕ ಖಾತೆಯನ್ನು ತಾತ್ಕಾಲಿಕ ಸರ್ಕಾರ ರಚನೆ ಆಗುವವರೆಗೆ ತಾವೇ ವಹಿಸಿಕೊಳ್ಳುವರೆಂದು ಹೇಳಲಾಗಿದೆ.

ಮೈಸೂರು ಸಂಸ್ಥಾನದ ಕೆಲಸಗಾರರ ಹಿತಾರಕ್ಷೆ ಸಂಬಂಧಪಟ್ಟ ಕಾನೂನು ... ತಮ್ಮ ಸಂಘಗಳನ್ನು ರಿಜಿಸ್ಟರ್ ಮಾಡಿಸಬೇಕೆಂದು. ಬೆಂಗಳೂರು ಸಿಟಿ ಹೋಟಲು ಕೆಲಸಗಾರರ ಸಂಘ ಮತ್ತು ಇಂಟೀರಿಯಲ್ ಡೈರ್ಫಾರಂ ಕೆಲಸಗಾರರ ಸಂಘದಿಂದ ಲೇಬರ್ ಅಧಿಕಾರಿಗಳಿಗೆ ಬಂದಿದ್ದ ಅರ್ಜಿ ಬಗ್ಗೆ ಕೇಳಿದ ಪ್ರಶ್ನೆಗೆ ಸರ್ಕಾರದವರ ಜನರಲ್ ಕಾರ್ಯದರ್ಶಿಗಳು ಉತ್ತರವಿತ್ತು ಹೋಟೆಲು ಕೆಲಸಗಾರರ ಸಂಘವನ್ನು ರಿಜಿಸ್ಟರು ಮಾಡಲು ಕಾನೂನಿನ ಪ್ರಕಾರ ಅವಕಾಶವಿದೆಯೆಂದು ಜನರಲ್ ... ಲೇಬರ್ ಕಮೀಷನರಿಗೆ ತಿಳಿಸಿದ್ದಾರೆಂದೂ, ಪ್ರತಿಯೊಂದು ಸಂದರ್ಭಗಳಲ್ಲಿಯೂ ಲೇಬರ್ ಸಂಘದ ಕಾರ್ಯದರ್ಶಿಯವರು ಕಾನೂನು ವಿಧಿಗಳಿಗನುಸಾರವಾಗಿ ನಡೆಯುತ್ತಿರುವುದನ್ನೆಲ್ಲ ... ಎಂದು ತಿಳಿಸಿದರು.

ವಿದ್ಯಾರ್ಥಿ ... ಸ್ಥಾನಿಕ ... ಹಿಂದೀ ... ಪ್ರಶ್ನೆಗೆ ... ವಿದ್ಯಾರ್ಥಿ ... ತಿಳಿಸಿದರು.

ಸಾಧ್ವಿ

ತಾ. ೧-೬-೪೬ ಶನಿವಾರ

ಪತ್ರಿಕಾ ಸಲಹಾ ಸಮಿತಿ

ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನದಲ್ಲಿ ನಿರ್ಣಯವಾದಂತೆ ಸರ್ಕಾರದವರು ಪತ್ರಿಕಾ ಸಲಹಾ ಸಮಿತಿಯ ಪುನರ್ರಚನೆಯನ್ನು ಮಾಡದಿಲ್ಲವಾದುದರಿಂದ ಅದರ ಸದಸ್ಯರು ರಾಜೀನಾಮೆ ಕೊಡಬೇಕೆಂದು ತೀರ್ಮಾನವಾಯಿತಷ್ಟೆ. ಹಲವು ಸದಸ್ಯರು ರಾಜೀನಾಮೆ ಇತ್ತಿರುವರೆಂದೂ, ಇನ್ನು ಕೆಲವರು ಕೊಟ್ಟಿಲ್ಲವೆಂದೂ ವರದಿಯಾಗಿದೆ. ಸಮ್ಮೇಳನದ ನಿರ್ಧಾರದ ಬಗ್ಗೆ ಕೆಲವರು ವ್ಯಾಖ್ಯಾನ ಮಾಡಲು ತೊಡಗಿದ್ದಾರೆಂದೂ ತಿಳಿಬಂದಿದೆ. ಇದು ಸಮಾಧಾನಕರವಾದ ವಿಷಯವಲ್ಲ.

ಈ ವಿಷಯದಲ್ಲಿ ಸರ್ಕಾರದವರೇನೋ ಒಂದು ನೀತಿಯನ್ನು ಅನುಸರಿಸಿ ತ್ತಿದ್ದಾರೆ. ಪತ್ರಿಕೋದ್ಯೋಗಿಗಳು ಯಾವ ರೀತಿ ವರ್ತಿಸಬೇಕೆಂಬ ಬಗ್ಗೆ ಸಮ್ಮೇಳನದಲ್ಲಿ ವಿಶೇಷ ಚರ್ಚೆ ನಡೆದು ಒಂದು ತೀರ್ಮಾನಕ್ಕೆ ಬರಲಾಯಿತು. ಇದರ ಬಗ್ಗೆ ಕೆಲವರಿಗೆ ಎಷ್ಟೇ ಭಿನ್ನಾಭಿಪ್ರಾಯಗಳಿದ್ದರೂ ಸಮ್ಮೇಳನದ ಸದಸ್ಯರೆಲ್ಲರೂ ಅದಕ್ಕೆ ಬದ್ಧರು. ಸಾರ್ವಜನಿಕ ಜೀವನವನ್ನು ನಡೆಸುತ್ತಿರುವ ಪತ್ರಿಕೋದ್ಯೋಗಿಗಳೆಲ್ಲರೂ ಇದಕ್ಕೆ ಮನ್ನಣೆಯನ್ನು ಕೊಡುವುದು ಅವರ ಕರ್ತವ್ಯ. ಅದರಲ್ಲೂ ಪ್ರಮುಖ ಪತ್ರಿಕಾ ಕರ್ತರಾಗಲೂ ಸ್ಥಾಯೀ ಸಮಿತಿಯ ಸದಸ್ಯರೂ ಮುಖ್ಯವಾಗಿ ಅದನ್ನು ಪಾಲಿಸಬೇಕು. ಅದು ನಿಜವಾದ ಪ್ರಜಾ ಜೀವನದ ಲಕ್ಷಣ.

ತಮಗೆ ತೋಚಿದಂತೆ ನಡೆಯಲು ಅವಕಾಶ ಬೇಕೆಂದು ಹೇಳಿ ಒಬ್ಬ ಸದಸ್ಯರು ಸಲಹಾ ಸಮಿತಿಗೂ, ಸಮ್ಮೇಳನಕ್ಕೂ ರಾಜೀನಾಮೆ ಇತ್ತಿರುವುದಾಗಿ ತಿಳಿದು ಬಂದಿದೆ. ಸಾಮಾನ್ಯವಾಗಿ ನಾಯಕತ್ವ ಗೌರವಗಳಿಗೆ ಬೆಲೆಕೊಡುವವರು ಯಾರೂ ಹೀಗೆ ಮಾಡಬಾರದು. ಇದರಿಂದ ಅವರು ಯಾವ ಪುರುಷಾರ್ಥವನ್ನೂ ಸಾಧಿಸಿದಂತಾಗುವುದಿಲ್ಲ. ಅದಕ್ಕೆ ಬದಲಾಗಿ ಒಡಕನ್ನು, ಚಿಕ್ಕ ದನ್ನು ಉಂಟುಮಾಡಲು ಕಾರಣರಾಗುತ್ತಾರೆ. ಒಂದೊಂದು ಸಂಸ್ಥೆಯಲ್ಲಿಯೂ ಇರುವ ಸದಸ್ಯರು ತಮ್ಮ ತಮ್ಮ ಇಷ್ಟ ಬಂದಂತೆ ನಡೆಯಲು ಬಿಡುವುದಾದರೆ ಸಂಘಸ್ಥಾಪನೆ, ಸಮಾಜಸ್ಥಾಪನೆ ಇವು ಯಾವ ಉದ್ದೇಶವನ್ನೂ ಸಾಧಿಸಿದಂತಾಗುವುದಿಲ್ಲ. ಒಂದು ಸಮಾಜದಲ್ಲಿರುವಾಗ ತಾವು ಸೂಕ್ತವೆಂದು ತಿಳಿದ ಮಾರ್ಗಕ್ಕೆ ಇತರರನ್ನು ಒಲಿಸಿಕೊಳ್ಳಲು ಪ್ರಯತ್ನಿಸಬೇಕು. ಬಹುಮತ ಇತರರ ವಿಚಾರವಾಗಿ ತಾವು ನಡೆಯಬೇಕು. ಪತ್ರಿಕಾ ಜನರಿಗಿಂತ ದೊಡ್ಡವರು ಯಾರೂ ಇಲ್ಲ. ಒಪ್ಪಿಕೊಂಡರೂ ತಮ್ಮ ತಮ್ಮ ದಾರಿಯನ್ನು ಹಿಡಿಯುವುದು. ಆತ್ಮಸ್ಥೈರ್ಯವಾಗಿ ಸಮ್ಮೇಳನದಲ್ಲಿ ನಿರ್ಣಯವಾಗಿ ಮೂರು ತಿಂಗಳು ಕಳೆದಿರುವಾಗ ಇದುವರೆಗೆ ಅದರ ಸದಸ್ಯರಾಗಿದ್ದವರು ನಿರ್ಣಯದ ಬಗ್ಗೆ ಭಿನ್ನಾಭಿಪ್ರಾಯ ತೋರಿಸಿ ಈಗ ಸಮ್ಮೇಳನಕ್ಕೆ ರಾಜೀನಾಮೆ ಕೊಡುವುದು ಸಮಾಧಾನಕರವಲ್ಲ.

ಈ ರೀತಿ ಭಿನ್ನಾಭಿಪ್ರಾಯಗಳು ಉಂಟಾಗುವುದು ಸಹಜವಾದರೂ ಒಮ್ಮತಾಭಿಪ್ರಾಯ ಗಳಿಸ್ಪದರೂ ಕಟ್ಟುಂಬದಲ್ಲಿ ಒಪ್ಪಿದಂತೆ ಎಲ್ಲ ವರ್ಗಗಳೂ ಅವಕಾಶವಿದ್ದೇ ಇದೆ. ವೃತ್ತಿಬಾಂಧವರೆಲ್ಲರೂ ಸಂಘಟನೆ, ಐಕಮತ್ಯ ಮತ್ತು ಪರಸ್ಪರ ಸಹಕಾರ ಮಾರ್ಗವನ್ನವಲಂಬಿಸಲೆಂದು ನಾವು ಕೋರುತ್ತೇವೆ. ಸಮ್ಮೇಳನದ ಉದ್ದೇಶವೂ ಇದೇ ಆಗಿದೆ. ಅದನ್ನು ಸಾಧಿಸಬೇಕಾದರೆ ಅದರ ಸದಸ್ಯರೆಲ್ಲರೂ ಶಿಸ್ತು ವ್ಯವಸ್ಥೆಯಿಂದ ವರ್ತಿಸಬೇಕು. ಸಮಾಜದ ಎಲ್ಲಾ ವ್ಯವಹಾರಗಳನ್ನೂ ಟೀಕಿಸುವವರು ತಾವೇ ಟೀಕೆಗೆ ಒಳಗಾಗಬಹುದೇ?

ಈ ವಿಷಯದಲ್ಲಿ ಸರ್ಕಾರದವರ ಕರ್ತವ್ಯವು ಸ್ಪಷ್ಟವಾಗಿದೆ. ಪತ್ರಿಕಾ ಸಲಹಾ ಪದ್ಧತಿಯನ್ನು ರದ್ದು ಮಾಡಬೇಕೆಂದು ಯಾರೂ ಕೇಳುವುದಿಲ್ಲ. ಈಗಿನ ಸಮಿತಿಯ ರಚನೆ ಯಾವರೀತಿ ಆಕ್ಷೇಪಣೆ ಇದೆ. ಬ್ರಿಟಿಷ್ ಇಂಡಿಯದಲ್ಲಿರುವಂತೆ ಇಲ್ಲಿಯೂ ಸಮಿತಿಯ ವಿಸ್ತಾರವಾದರೆ ಎಲ್ಲರಿಗೂ ಸಮಾಧಾನವಾಗುವುದು. ಹಾಗೆ ಮಾಡದಿದ್ದರೆ ಈಗ ಇರುವ ಸಮಿತಿಯನ್ನು ಇದ್ದು ಪಡಿಸಿದರೂ ಏನೂ ಬಾಧಕವಿಲ್ಲ. ಈ ಪದ್ಧತಿಯಲ್ಲಿ ಪ್ರಾರಂಭಿಸಿದಾಗ ಪತ್ರಿಕಾ ಕರ್ತರುಗಳಿಂದ ಚುನಾಯಿತರಾದವರನ್ನೇ ಸರ್ಕಾರದವರು ಸಮಿತಿಗೆ ನೇಮಿಸುತ್ತಿದ್ದರು. ಈಗ ಹಾಗೆ ಮಾಡಲು ಯಾವ ಅಡ್ಡಿಯಿರುವುದೋ ಗೊತ್ತಿಲ್ಲ. ಇದರಿಂದ ಇಲ್ಲದ ಸಲ್ಲದ ಸಂದೇಹಗಳಿಗೆ ಕಾರಣವಾಗುತ್ತದೆ. ಇದು ಸರ್ಕಾರದವರಿಗೂ ಹಿತವಲ್ಲ; ಪತ್ರಿಕೋದ್ಯೋಗಿಗಳಿಗೂ ಹಿತವಲ್ಲ.

ಪತ್ರಿಕಾ ಕರ್ತರೂ ಸರ್ಕಾರದವರೂ ಪರಸ್ಪರ ಸೌಹಾರ್ದದಿಂದ ನಡೆಯಬೇಕು. ಇದಕ್ಕೆ ಅವಕಾಶ ಕಲ್ಪಿಸುವುದೇ ಪತ್ರಿಕಾ ಸಲಹಾ ಪದ್ಧತಿಯ ಮುಖ್ಯ ಉದ್ದೇಶ. ಇದು ಎಷ್ಟು ಮಟ್ಟಿಗೆ ಈಗ ಸಾಧಿತವಾಗಿದೆ ಎಂಬುದು ಸಂದೇಹದ ವಿಷಯ. ಅದು ದರಿಂದಲೇ ಈಗಿರುವ ಸಮಿತಿಯು ರದ್ದಾಗಬೇಕೆಂದು ಸಮ್ಮೇಳನದವರು ನಿರ್ಧರಿಸಿರುತ್ತಾರೆ. ಅದಕ್ಕೆ ಅನುಗುಣವಾಗಿ ನಡೆದುಕೊಂಡವರನ್ನೆಲ್ಲಾ ನಾವು ಅಭಿನಂದಿಸುತ್ತೇವೆ. ಸರ್ಕಾರದವರು ಎಲ್ಲಾ ಅಂಶಗಳನ್ನು ಪರಿಶೀಲಿಸಿ ನೆರೆಯ ಪ್ರಾಂತಗಳಂತೆ ಪತ್ರಿಕಾ ಕರ್ತರಿಂದ ಚುನಾಯಿತರಾದವರನ್ನು ಒಳಗೊಂಡ ಬೇರೊಂದು ಸಮಿತಿಯನ್ನು ರಚಿಸುವುದು ಸೂಕ್ತವಾಗಿದೆ. ಅವರು ಅದಕ್ಕೆ ಒಪ್ಪದೆ ಈಗಿರುವ ಸಮಿತಿಯು ರದ್ದಾದರೆ ಅದಕ್ಕಾಗಿ ಯಾರೂ ವ್ಯಸನಪಡುವುದಿಲ್ಲ.

ಕ್ರಯಕ್ಕಿದೆ

ಚಾಮುಂಡಿ ಎಕ್ಸ್ಟೆನ್ಷನ್ ಸೀನೀರು ಕಟ್ಟೆ ೩೪ನೇ ನಂಬರು ಮನೆ. ದೀಪ, ನಲ್ಲಿ, ಘಾನಿ ಇದೆ. ೪೦'×೬೦' ಸೈಟಿನಲ್ಲಿ ಕಟ್ಟಿದೆ. ಕ್ರಯ ೩,೦೦೦ ರೂ.

—: ನೋಡಬೇಕಾದ ವಿಳಾಸ :—

ಆರ್. ಗುಂಡೂರಾವ್,

ಬಳಿ ಮೈಸೂರು ಬ್ಯಾಂಕ್ ಕಟ್ಟಡ,

ಮೈಸೂರು

Edited, printed and published by A. K. Nagaraja at the Sadhvi Press D... ... Road Mysore

ವಿದ್ಯಾಪೀಠ

ದೇಶದ ರೈತ ತರುಣರು ತಮ್ಮ ಸುತ್ತ ಮುತ್ತಣ ಜನರಿಗೆ ಆದರ್ಶವಾಗಿರುವಂತೆ ಶಿಕ್ಷಣಕೊಡಲು 'ವಿದ್ಯಾಪೀಠ' ಒಂದನ್ನು ಸಂಸ್ಥಾನದ ವಯಸ್ಕರ ಶಿಕ್ಷಣ ಸಮಿತಿಯು ಮೈಸೂರು ಜಿಲ್ಲೆಯ ನಂಜನಗೂಡಿನ ಬಳಿ ಸ್ಥಾಪಿಸಿದೆ. ಇಲ್ಲಿ ರೈತಾಪಿ ಜನರಿಗೆ ಉಪಯುಕ್ತವಾದ ಶಿಕ್ಷಣವನ್ನು ಐದು ತಿಂಗಳ ಕಾಲ ಕೊಡಲಾಗುವುದು. ಶಿಕ್ಷಣವು ಜೂನ್ ತಿಂಗಳ ಕೊನೆಯಲ್ಲಿ ಪ್ರಾರಂಭವಾಗಲಿದೆ. ಮೊದಲನೆಯ ಗುಂಪಿನಲ್ಲಿ ೨೫ ಮಂದಿಯನ್ನು ಸೇರಿಸಿಕೊಳ್ಳಲಾಗುವುದು. ಬರಬೇಕೆಂದಿರುವವರು ಅರ್ಜಿಯನ್ನು ಜೂನ್ ೫ನೆಯ ತಾ॥ ಒಳಗೆ ಕಳುಹಿಸಿಕೊಡಬೇಕು. ಮೊದಲನೆಯ ಗುಂಪಿನ ವಿದ್ಯಾರ್ಥಿಗಳ ಊಟ ವಸತಿ ವೆಚ್ಚವನ್ನು ವಿದ್ಯಾಪೀಠವೇ ವಹಿಸಿಕೊಳ್ಳುವುದು. ಈ ಪೀಠಕ್ಕೆ ಸೇರಲಿರುವವರು ಸಾಮಾನ್ಯವಾಗಿ ಓದು ಬರಹ ಬಲ್ಲವರಾಗಿರಬೇಕು. ಹಳ್ಳಿಗಳಲ್ಲಿ ನೆಲಸಿ ಗ್ರಾಮ ಸೇವೆಯನ್ನು ಕೈಗೊಳ್ಳಲು ಆಸಕ್ತರಾದವರಾಗಿರಬೇಕು. ಬೇಸಾಯಗಾರರಾದ ವಯಸ್ಕರಾಗಿರಬೇಕು. ವಿದ್ಯಾಪೀಠಕ್ಕೆ ಸೇರಲಿರುವವರ ಹೆಸರು, ವಯಸ್ಸು, ವಿಳಾಸ ಅರ್ಜಿಯಲ್ಲಿ ನಮೂದಾಗಿರಬೇಕು. ಊರ ಮುಂದಾಳುಗಳ ಶಿಫಾರಸು ಪತ್ರ ಒಂದು ಅದರೊಡನಿರಬೇಕು.

ನಿಮ್ಮ ಮೈ ಮೋಹವುಳ್ಳದಂತೆ ಬೆಳೆಯಬೇಕೆ? ನೀವು ಲಾವಣ್ಯ ಮೂರ್ತಿಗಳಾಗಬೇಕೆ?

ಹಾಗಾದರೆ

ನಮ್ಮ ಮೈಸೂರು ಸ್ಯಾಂಡಲ್ ಸೋಪನ್ನೇ ಉಪಯೋಗಿಸಿ!

ಮೈಸೂರು ಸ್ಯಾಂಡಲ್ ಸೋಪ್!

ಅನೇಕರಿಗೆ ಸೌಂದರ್ಯವನ್ನು ಸಂಪಾದಿಸಿ ಕೊಟ್ಟಿದೆ. ನಿಮಗೂ ಸಂಪಾದಿಸಿ ಕೊಡುತ್ತದೆ.

ಪರೀಕ್ಷಿಸಿ ನೋಡಿರಿ

ಎಲ್ಲೆಲ್ಲೂ ದೊರೆಯುತ್ತದೆ.

ಗವರ್ನಮೆಂಟ್ ಸೋಪ್ ಫ್ಯಾಕ್ಟರಿ,

ಬೆಂಗಳೂರು

ವಿವಾಹ ಮಹೋತ್ಸವಗಳು

ಕೋಲಾರದ ಚಿನ್ನದ ಗಣಿಯ ಡಾ॥ ಎಸ್. ವಿ. ರಾಜು ರವರು ತಮ್ಮ ... ಗಳು ಚಿ॥ ಸೌ॥ ಗೌರಮ್ಮನನ್ನು ಹೊಳ್ಳೆ ಶ್ರೀ॥ ಅನಂತರಾಮಯ್ಯನವರ ಚಿ॥ ಅಚ್ಯುತರಾಂ ರವರಿಗೆ ಕೊಟ್ಟು ... ತಾರೀಖು ಭಾನುವಾರ ಕೋಲಾರದಲ್ಲಿ ... ವಾಹ ನೆರವೇರಿಸುವರು.

ಕೋಲಾರದ ಜಿಲ್ಲಾ ಪೋಲೀಸ್ ಸೂಪರಿಂಟೆಂಡೆಂಟ್ ಶ್ರೀ॥ ಬಿ ಎಸ್ ... ದಯ್ಯನವರು ತಮ್ಮ ಕುಮಾರಿ ... ರದನ್ನು ಶ್ರೀ॥ ಸೀತಾರಾಮಯ್ಯ... ಗೆ ಕೊಟ್ಟು ವಿವಾಹವನ್ನು ೨ನೇ ತಾ॥ ಭಾನುವಾರ ಕೋಲಾರದಲ್ಲಿ ನಡೆಸುವರು.

* ಬೆಂಗಳೂರಿನಲ್ಲಿ ವಿಮಾನ ಕೇಂದ್ರವೊಂದನ್ನು ಸ್ಥಾಪಿಸಲು ... ಕಾರರವು ನಿರ್ಧರಿಸಿದೆ. ಇದು ಸಂಪೂರ್ಣವಾಗಲು ೨೦ ವರ್ಷ ಬೇಕು ... ವುದು.

§ ಬ್ರಿಟಿಷ್ ನಿಯೋಗದ ಸೂಚನೆ ... ತ ಆಸ್ಸಾಮನ್ನು ಪಾಕಿಸ್ಥಾನದ ... ಬಲವಂತದಿಂದ ಸೇರಿಸಲು ಕಾಂಗ್ರೆಸ್ ಒಪ್ಪುವುದಾದರೆ ತಾವು ಅದರ ... ವಾಸ ಕೈಗೊಳ್ಳುವುದಾಗಿ ಅಸ್ಸಾಂ ... ಯ ಸಂಘದ ಕಾರ್ಯದರ್ಶಿ ಶ್ರೀ॥ ... ಹರಿರಾಯ್ ಚೌಧುರಿಯವರು ... ದ್ದಾರೆ.

§ ಕಾಂಗ್ರೆಸ್ಸಿನ ಮಾಜಿ ಅಧ್ಯಕ್ಷ ... ಟಿ. ಸುಬ್ರಹ್ಮಣ್ಯಂ ರವರು ತಾವು ... ಲ್ಲಿ ಆದಾಯ ಪರಿಸ್ಥಿತಿ ವಿಚಾರ ... ಕೈಗೊಂಡಿದ್ದ ಪ್ರವಾಸದಲ್ಲಿ ಮಾಡಿ... ಣಗಳ ಬಗ್ಗೆ ವಿವರಣೆ ಪಡೆಯಲು ... ಕೂರಿನ ಸಬ್ ಇನ್ಸ್ಪೆಕ್ಟರವರನ್ನು ... ೨೮ನೇ ತಾರೀಖು ಭೇಟಿ ಮಾಡಿ... ತಿಳಿದುಬಂದಿದೆ.

ಆಪೇರಾ ಟಾಕೀಸ್

1—6—46 ರಿಂದ

ಎಂಟನೇ ವಾರ

★ ವಾಲ್ಮೀಕಿ

(ತಮಿಳು ಭಾಷೆ)

50 ನೇ ದಿನ

- ಹೊನ್ನಪ್ಪ ಭಾಗವತ...

- ಟಿ. ಆರ್. ರಾಜಕುಮಾರಿ

ಮುಂತಾದವರು

ಹೊಸ ಅಂಗಡಿ : : ಹೊಸ ಸರಕು

ಪ್ರಭಾತ್ ಬ್ಯಾಂಗಲ್ಸ್ ಸ್ಟೋರ್ಸ್

ಚಾಮುಂಡೇಶ್ವರೀ ಟಾಕೀಸಿನ ಮುಂದೆ, ಸಯ್ಯಾಜಿರಾವ್ ರೋಡ್, ಮೈಸೂರು

ನಮ್ಮಲ್ಲಿ ಹೊಸ ನಮೂನೆಯ ಫ್ಯಾನ್ಸಿ ಬಳೆಗಳು, ಮುತ್ತು ಗಾಜಿನ, ಸಿಲ್ಕ್, ರಬ್ಬರ್, ಸಿಲ್ವರ್, ಕ್ರೋಮಿಯಂ

ಬಳೆಗಳು

ಮತ್ತು ಫ್ಯಾನ್ಸಿ ಲೋಲಕ್ಕುಗಳು, ಮೈಸೂರು ಸಿಲ್ಕ್ ರಿಬ್ಬನ್‌ಗಳು ದೊರೆ... ಸ್ಪಿಗರ್‌ಸೀಮ ಬಳೆಗಳೂ ಬಂದಿರುತ್ತವೆ.

ಫೋನ್ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಆಣೆ

ಸಂಪುಟ ೪] ಭಾನುವಾರ ೨—೬—೪೭ [ಸಂಚಿಕೆ ೨೧೦

ಜೂನ್ ೨೭ ರಿಂದ ರೈಲ್ವೆ ಕೆಲಸಗಾರರ ಮುಷ್ಕರ

ನಿಲುವಳಿ ಸೂಚನೆಗಳಿಗೆ ಅವಕಾಶವಿಲ್ಲ

೨ ಜೂ] ಬೆಂಗಳೂರು ೧
ಈ ದಿನ ಪ್ರಜಾ ಪ್ರತಿನಿಧಿ ಸಭೆಯಲ್ಲಿ ದಿವಾನರು ಮೂರು ಅವಸರದ ನಿರ್ಣಯಗಳನ್ನು ತಳ್ಳಿ ಹಾಕಿದರು. ಸಂಯುಕ್ತ ಸಂವಿಧಾನ ರಚನೆಯ ಸಮಿತಿಯಲ್ಲಿ ಸಂಸ್ಥಾನದ ಪ್ರಜೆಗಳ ಪ್ರಾತಿನಿಧ್ಯವಿರುವಂತೆ ಪ್ರಜಾ ಪ್ರಭುತ್ವವನ್ನು ತೆಗೆದುಕೊಳ್ಳದೆ ಸರ್ಕಾರದವರು ವ್ಯವಹಾರ ನಡೆಸುತ್ತಿರುವ ವಿಷಯದಲ್ಲಿ ಶ್ರೀ ಹೆಚ್. ಎಸ್. ಹೊಯ್ಸಳರು ನಿಲುವಳಿ ನಿರ್ಣಯವನ್ನು ತಂದಿದ್ದರು. ಬ್ರಿಟಿಷ್ ಪ್ರವಾಸ್ತ್ಯಕ್ಕೆ ಸಂಬಂಧವಾದ ಈ ಪ್ರಶ್ನೆಗೆ ಅವಕಾಶಕೊಡಲು ಸಾಧ್ಯವಿಲ್ಲವೆಂದು ಹೇಳಿ ದಿವಾನರು ಅದನ್ನು ತಳ್ಳಿ ಹಾಕಿದರು.

ಮೈಸೂರು ಮುಸ್ಲಿಂ ಲೀಗಿನವರು ಬ್ರಿ॥ ಇಂಡಿಯಾದವರಿಗೆ ಕೊಟ್ಟಿರುವ ವಿಜ್ಞಾಪನಾ ಪತ್ರಿಕೆಯಲ್ಲಿ ಮೈಸೂರು ಸಂಸ್ಥಾನವು ಪಾಕಿಸ್ತಾನಕ್ಕೆ ಸೇರಬೇಕೆಂದು ಸೂಚಿಸಿರುವ ಅಂಶವನ್ನು ಪ್ರಸ್ತಾಪಿಸಲು ಶ್ರೀಯುತರಾದ ಭೂಪಾಳಂ ಚಂದ್ರಶೇಖರಯ್ಯ ಮತ್ತು ಲಿಂಗೇಗೌಡರು ಮತ್ತೊಂದು ನಿಲುವಳಿ ನಿರ್ಣಯವನ್ನು ಕಳುಹಿಸಿದ್ದರು. ಸರ್ಕಾರದಲ್ಲಿ ಈ ಬಗ್ಗೆ ವ್ಯವಹಾರ ನಡೆಯುತ್ತಿರುವುದರಿಂದ ಇದಕ್ಕೆ ಅವಕಾಶ ಕೊಡುವುದಿಲ್ಲವೆಂದು ದಿವಾನರು ಇದನ್ನೂ ತಳ್ಳಿ ಹಾಕಿದರು.

ರಾಜ್ಯಾಂಗ ರಚನಾ ಸಮಿತಿಗೆ ಮೈಸೂರು ಸಂಸ್ಥಾನದಿಂದ ಪ್ರತಿನಿಧಿಗಳನ್ನು ಚುನಾಯಿಸುವ ಕಾರ್ಯವನ್ನು ಗೊತ್ತು ಮಾಡದೇ ಇರುವ ವಿಷಯದಲ್ಲಿ ಶ್ರೀ ಎಸ್. ವಿ. ಕೃಷ್ಣಮೂರ್ತಿಯವರ ಇನ್ನೊಂದು ನಿಲುವಳಿ ನಿರ್ಣಯವನ್ನೂ ಸಹಾ ತಳ್ಳಿಹಾಕಿದರು. ಈ ನಿರ್ಣಯದಲ್ಲಿ ನಿರ್ದಿಷ್ಟವಾದ ಉದ್ದೇಶವೇ ಇಲ್ಲವೆಂದೂ, ಈ ವಿಚಾರದಲ್ಲಿ ವ್ಯವಹಾರವು ಇನ್ನೂ ಕೊನೆಗೊಂಡಿಲ್ಲವೆಂದೂ ದಿವಾನರು ಅದನ್ನೂ ಸಹಾ ತಳ್ಳಿ ಹಾಕಿದರು.

ಉಪಹಾರಾನಂತರ ಸಭೆಯು ಶ್ರೀ ಪುಟ್ಟಣ್ಣಯ್ಯನವರ ಅಧ್ಯಕ್ಷತೆಯಲ್ಲಿ ಮುಂದುವರಿಯಿತು. ಸಭೆಯಲ್ಲಿ ಕೋರಮ್ಮಿಗೆ ಬೇಕಾದಷ್ಟು ಸದಸ್ಯರಿರಲಿಲ್ಲವೆಂದು ಒಬ್ಬರು ತಿಳಿಸಿದರು. ಕೋರಂ ಇದೆಯೆಂದು ಅಧ್ಯಕ್ಷರು ಹೇಳಿದರು.

ಹಕ್ಕು ಬಾಧ್ಯತಾ ಸಮಿತಿ

ಪ್ರಜಾಪ್ರತಿನಿಧಿ ಸಭೆಯ ಹಕ್ಕು ಬಾಧ್ಯತಾ ಸಮಿತಿಗೆ ಶ್ರೀಗಳಾದ ಎಂ. ವಿ. ಕೃಷ್ಣಪ್ಪ, ಟಿ. ಬಸಪ್ಪ, ಬಿ. ಎಸ್. ಗ ಪ್ಪ, ಎಚ್. ಮಲ್ಲೀಕಾರ್ಜುನಪ್ಪ, ನರಸಿಂಹೇಗೌಡ, ಡಿ. ಹಿಲ್ಟನ್, ಎಂ. ಲಿಂಗೇಗೌಡ, ಎಂ. ಇಸ್ಮಾಯಿಲ್ ಇವರುಗಳು ಸದಸ್ಯರಾಗಿ ಚುನಾಯಿತರಾಗಿದ್ದಾರೆ.

ಪ್ರಭುಗಳಿಗೆ ಪ್ರಜಾಪಕ್ಷದ ಬಿನ್ನಹ

ನಿನ್ನೆ ದಿನ ಪ್ರತಿನಿಧಿ ಸಭೆಯ ಪ್ರಜಾಪಕ್ಷದವರು ಸಭೆ ಸೇರಿ ಶ್ರೀಮನ್ಮಹಾರಾಜರಿಗೆ ಪ್ರತ್ಯೇಕವಾದ ಮೆಮೋರಿಯಲ್ ಕಳುಹಿಸಬೇಕೆಂದು ತೀರ್ಮಾನಿಸಿದ್ದಾರೆ. ಇದರಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕೆಂದೂ ಪ್ರತಿನಿಧಿ ಸಭೆಗೆ ಹೊಸ ಅಧ್ಯಕ್ಷರನ್ನು ಚುನಾಯಿಸಿಕೊಳ್ಳಲು ಅವಕಾಶಕೊಡಬೇಕೆಂದೂ ಅದರಲ್ಲಿ ನಮೂದಿಸಲಾಗಿದೆ ಎಂದು ಗೊತ್ತಾಗಿದೆ.

ರಾಜಸಿಂಹಾಸನ

ಮೈಸೂರಿನ ರಾಜ ಸಿಂಹಾಸನವನ್ನು ದುರಸ್ತಿ ಮಾಡಿಸಲು [illegible] ಬಜೆಟಿನಲ್ಲಿ ೧,೫೫,೦೦೦ ರೂಗಳ ವೆಚ್ಚ ನಿಗದಿ ಮಾಡಲಾಗಿದೆ.

ಜೂನ್ ೨೭ ರಿಂದ ರೈಲ್ವೆ ಕೆಲಸಗಾರರ ಮುಷ್ಕರವೇ ?

ಕೇಂದ್ರ ಸರ್ಕಾರದಿಂದ ನೇಮಿಸಲ್ಪಟ್ಟಿದ್ದ ಸಂಧಾನದ ಅಧಿಕಾರಿಗಳ ಪ್ರಯತ್ನ ವಿಫಲವಾದುದರಿಂದ ರೈಲ್ವೆ ಕೆಲಸಗಾರರು ಜೂನ್ ೨೭ ರಿಂದ ಮುಷ್ಕರ ಹೂಡಲು ನಿರ್ಧರಿಸಿ ಜಿ. ಐ. ಪಿ., ಎಸ್. ಐ. ಆರ್., ಎಂ. ಅಂಡ್ ಎಸ್. ಎಂ. ಮತ್ತು ಬಿ. ಬಿ. ಮತ್ತು ಸಿ. ರೈಲ್ವೆ ಕೆಲಸಗಾರರ ಸಂಘಗಳು ನಿನ್ನೆ ದಿನ ಅಧಿಕಾರಿಗಳಿಗೆ ನೋಟೀಸು ಸಲ್ಲಿಸಿರುತ್ತಾರೆ. ರೈಲ್ವೆ ಕೆಲಸಗಾರರ ಸಂಘದ ಬೇಡಿಕೆಗಳು ಸಲ್ಲಿಸಲ್ಪಡಬೇಕಾದರೆ ೩ ನೇ ತರಗತಿ ಪ್ರಯಾಣದ ದರವನ್ನು ಏರಿಸಬೇಕಾಗುತ್ತದೆಂದು ರೈಲ್ವೆ ಬೋರ್ಡಿನವರು ತಿಳಿಸಿದರೆಂದೂ, ಆದರೆ ಕೆಲಸಗಾರರ ಪ್ರತಿನಿಧಿಗಳು ಅದಕ್ಕೊಪ್ಪದೆ, ರೈಲ್ವೆ ನಿಧಿಯಿಂದಲೇ ಈ ಬದಲಾವಣೆ ಮಾಡಬೇಕೆಂದು ಒತ್ತಾಯ ನಡೆಸಿದರೆಂದೂ, ತತ್ಪರಿಣಾಮವಾಗಿ ಸಂಧಾನ ವಿಫಲವಾಯಿತೆಂದು ವರದಿಯಾಗಿದೆ.

ರೈಲ್ವೆ ಕೆಲಸಗಾರರ ಬೇಡಿಕೆ

ನಿನ್ನೆ ಸಾಯಂಕಾಲ ಮೈಸೂರು ಸ್ಟೇಟ್ ರೈಲ್ವೆ ಲೋಕೋ ಷೆಡ್ ಕೆಲಸಗಾರರ ಸಂಘದ ಸಭೆಯು ಶ್ರೀ ಮನೆ ಹೊಂದನವರ ಅಧ್ಯಕ್ಷತೆಯಲ್ಲಿ ನಡೆಯಿತು. ಎರಡು ತಿಂಗಳ ವಿಶ್ವಾಸ ಬೋನಸ್, ಯುದ್ಧದ ಬೋನಸ್ ಮತ್ತು ೭೨ ದಿನ ಕೆಲಸ ಮಾಡಿದವರಿಗೆ ಒಂದು ದಿನದ ಹೆಚ್ಚು ಬೋನಸ್ ಕೊಡಿಸಬೇಕೆಂದೂ ಲೇಬರ್ ಕಮಿಷನರು ಸಂಘವನ್ನು ಬೇಗನೆ ರಿಜಿಸ್ಟರ್ ಮಾಡಬೇಕೆಂದೂ ಪ್ರತಿನಿಧಿಸುವ ನಿರ್ಣಯಗಳು, ನಮ್ಮ ನರ್ಸಿಂಗ್ ಸಂಘದ ಕಛೇರಿಯು ಸಹ ಮಿ|| ರಾಜಗೋಪಾಲರವರ ಅಧ್ಯಕ್ಷತೆಯಲ್ಲಿ ಜರುಗಿ ಮೇಲ್ಕಂಡ ಮೂರು ನಿರ್ಣಯಗಳಾದುವು.

ರಾಜಕುಮಾರರ ಸಂಪತ್ತಿಗೆ ವೇತನ

ದಿವಂಗತ ರಾಜಕುಮಾರ ದೇಶರಾಜೇ ಅರಸಿನವರ ಪುತ್ರರಾದ ಶ್ರೀ ಪ್ರಭಾಕರ ಅರಸರಿಗೆ ೫ ಸಾವಿರ ರೂ. ಶ್ರೀ ದೇಶರಾಜೇ ಅರಸ್, ೮ ಸಾವಿರ ರೂ. ಮತ್ತು ಪುತ್ರಿ ಶ್ರೀಮತಿ ಗೀತಾದೇವಿಯವರಿಗೆ ೫ ಸಾವಿರ ರೂ. ವಾರ್ಷಿಕ ಅಲೊಯನ್ಸ್ ಕೊಡುವುದಾಗಿ ೧೯೪೭-೪೮ ನೇ ಬಜೆಟ್ಟಿನಲ್ಲಿ ಸೂಚಿಸಲಾಗಿದೆ.

ಭಾರತಕ್ಕೆ ಆಹಾರ

ಬ್ರಿಟಿಷ್ ಪ್ರತಿನಿಧಿಗಳಾದ ಮಿ|| ಮೂರಿಸ್‌ರವರು ಅಮೇರಿಕಾಕ್ಕೆ ತೆರಳಿ ನಡೆಸಿದ ಸಂಧಾನದ ಫಲವಾಗಿ ಭಾರತಕ್ಕೆ ಸ್ವಲ್ಪ ಆಹಾರ ಬರುವ ಸಂಭವಗಳಿವೆ. ಮೇ ತಿಂಗಳಿಂದ ಸೆಪ್ಟೆಂಬರ್ ತಿಂಗಳವರೆಗೆ ೧೧೬,೫೦೦ ಟನ್ ಧಾನ್ಯವನ್ನು ಸರಬರಾಜು ಮಾಡಲು ಕೇಂದ್ರ ಆಹಾರ ಸಮಿತಿ ಒಪ್ಪಿರುವುದಾಗಿ ವರದಿ ಬಂದಿದೆ. ಇಂಡೋನೇಷಿಯಾದ ಬಂದರುಗಳಲ್ಲಿ ಭಾರತಕ್ಕೆ ಬರಲು ಅಕ್ಕಿ ಸಿದ್ಧವಾಗಿದೆ. ಆದರೆ ಅದರ ಸಾಗಾಣಿಕೆ ಭಾರತವೇ ವ್ಯವಸ್ಥೆ ಮಾಡಬೇಕೆಂದು ಮಿ|| ಮೂರಿಸ್‌ರವರು ತಿಳಿಸಿದ್ದಾರೆ.

ಆಸ್ಟ್ರೇಲಿಯಾ ಗವರ್ನರ್ ಗಿರಿಗೆ ಮೌಂಟ್‌ಬ್ಯಾಟನ್

ಆಸ್ಟ್ರೇಲಿಯಾದ ಗವರ್ನರ್ ಜನರಲ್ ಆಗಿರುವ ಡ್ಯೂಕ್ ಆಫ್ ಗ್ಲೌಸ್ಟರ್‌ರವರು ಇಂಗ್ಲೆಂಡಿಗೆ ವಾಪಸು ಬರುವರೆಂದೂ, ಅವರ ಸ್ಥಾನದಲ್ಲಿ ಲಾರ್ಡ್ ಮೌಂಟ್ ಬ್ಯಾಟನ್ನರವರನ್ನು ನೇಮಿಸಬಹುದೆಂದೂ ಹೇಳಲಾಗಿದೆ.

ಬರ್ಮಾದಲ್ಲಿ ಬಿಕ್ಕಟ್ಟು

ರಂಗೂನಿನ ಸ್ವಾತಂತ್ರ್ಯ ಪಕ್ಷದ ನಾಯಕರಾದ ಮಿ|| ಯು. ಸ ರವರಿಗೆ ಸರ್ಕಾರದಿಂದ ಬಂದಿರುವ ಉತ್ತರ ಸಮರ್ಪಕವಾಗಿಲ್ಲವೆಂದು, ಗವರ್ನರ್ ಮಂತ್ರಿಮಂಡಲದಲ್ಲಿರುವ ತಮ್ಮ ಪಕ್ಷದವರನ್ನೆಲ್ಲಾ ವಾಪಸು ಕರೆಯಲು ನಿರ್ಧರಿಸಿರುವುದರಿಂದ ಬರ್ಮಾದಲ್ಲಿ ಮತ್ತೆ ಬಿಕ್ಕಟ್ಟು ಉಂಟಾಗಿದೆ. ಬಿ. ಪ್ರಧಾನ ಮಂತ್ರಿಗಳು ಮಂತ್ರಿಮಂಡಲದ ಕೆಲವು ಅಧಿಕಾರಿಗಳನ್ನೆಲ್ಲಾ ಕೂಡಲೇ ಪ್ರತ್ಯೇಕ ಆದೇಶ ನಮಗೆ ಕೊಡುವಂತೆ ಯು. ಸ. ರವರು ಗವರ್ನರಿಗೆ ಪತ್ರ ಬರೆದಿದ್ದರು.

ಬಾವಿಯಲ್ಲಿ ಬಿದ್ದು ಮರಣ

ಗುಂಡ್ಲುಪೇಟೆ ತಾಲ್ಲೂಕು ಬೇಗೂರಿನ ಕೆ. ಮಲ್ಲಯ್ಯನೆಂಬುವನು ತನ್ನ ಹಿಂದಿನ ಮನೆಯ ಪಕ್ಕದಲ್ಲಿರುವ ಬಾವಿಯಲ್ಲಿ ನೀರು ಸೇದಲು ಹೋದಾಗ ಕಾಲು ಜಾರಿ ಬಾವಿಯೊಳಗೆ ಬಿದ್ದನು. ಅವನ ತಾಯಿಯ ಕೂಗಾಟವನ್ನು ಕೇಳಿ ಅಕ್ಕಪಕ್ಕದವರು ಬಂದು ಅವನನ್ನು ಬಾವಿಯಿಂದ ಮೇಲಕ್ಕೆ ಎತ್ತಿದರು. ಆತನು ಪ್ರಜ್ಞೆ ತಪ್ಪಿದ್ದುದರಿಂದ ಆತನನ್ನು ಚಿಕಿತ್ಸೆಗಾಗಿ ಮೈಸೂರು ಆಸ್ಪತ್ರೆಗೆ ದಾಖಲು ಮಾಡಿದರೂ ಮರಣಹೊಂದಿದನೆಂದು ವರದಿಯಾಗಿದೆ.

ಕಲ್ಕತ್ತ ವಿಮಾನ ಸಂಗ್ರಹಣಾ ಆಲಯದ ನಿರ್ಮೂಲ

ಇತ್ತೀಚೆಗೆ ಅಮೇರಿಕದವರಿಂದ ಕೇಂದ್ರ ಸರ್ಕಾರಕ್ಕೆ ವಹಿಸಿಕೊಡಲ್ಪಟ್ಟಿದ್ದ ಕಲ್ಕತ್ತ ವಿಮಾನ ಸಂಗ್ರಹಣಾಲಯವು ಬರುಗಾಲ ಮಳೆ ಹೊಡೆತಕ್ಕೆ ಸಿಕ್ಕಿ ನಿರ್ಮೂಲವಾಯಿತೆಂದು ವರದಿ ಬಂದಿದೆ. ಆ ಸ್ಥಳದಲ್ಲಿ ೭೭ ಹತ್ತುಕೋಟಿ ವಿಮಾನಗಳೂ, ನೂರಾರು ಸಣ್ಣ ವಿಮಾನಗಳೂ ಇದ್ದುವೆಂದು ಹೇಳಲಾಗಿದೆ. ಈ ಅನಾಹುತ ಬರೀ ಆಕಸ್ಮಿಕ ಒಂದೇ ಅಲ್ಲವೆಂದೂ, ಭಾರಿ ಒಳಸಂಚೂ ನಡೆದಿರಬಹುದೆಂದೂ ಊಹಿಸಲಾಗಿದೆ. ಇದರಿಂದಾಗಿ ಇಂಡಿಯಾ ಸರ್ಕಾರಕ್ಕೆ ೧ ಕೋಟಿ ರೂಗಳ ನಷ್ಟ ಉಂಟಾಗಿದೆ.

ಅಮೇರಿಕಕ್ಕೆ ಬಾಂಬಿನ ಭೀತಿ

ವಾಷಿಂಗ್ಟನ್, ಅಮೇರಿಕದ ರಾಜಧಾನಿಯು ಶತ್ರುಗಳ ಅಣು ಬಾಂಬನ್ನು ಪ್ರಯೋಗಿಸಲ್ಪಡುವ ಸಂಭವದ ಮುಂದಾಲೋಚನೆಯಿಂದ ಇಲ್ಲಿನ ಕಾಂಗ್ರೆಸ್ ಸಭೆಯ ಸದಸ್ಯರಾದ ಜೇಮ್ಸ್ ಟ್ರಂಡಲ್ ಎಂಬುವರು ಹೊಸ ಸರ್ಕಾರದ ರಚನೆಗೆ ಸಾಧಕವಾಗುವ ಒಂದು ಮಸೂದೆಯನ್ನು ಮಂಡಿಸಿದ್ದಾರೆ. ಏಕಕಾಲದಲ್ಲಿ ಅಮೇರಿಕದ ಅಧ್ಯಕ್ಷರೂ, ಉಪಾಧ್ಯಕ್ಷರೂ ಮಂತ್ರಿಗಳೂ ಅಣು ಬಾಂಬಿನಿಂದ ಸತ್ತರೆ ಆಡಳಿತವನ್ನು ನಡೆಸಲು ಈ ಮಸೂದೆ ಯೋಜನೆಯನ್ನು ತಯಾರಿಸಲಾಗಿದೆ.

ಬೊಂಬಾಯಿಯಲ್ಲಿ ಪೂರ್ಣ ಪಾನ ನಿರೋಧ

ಬೊಂಬಾಯಿ ಪ್ರಾಂತ್ಯದಲ್ಲಿ ಪೂರ್ಣ ಪಾನನಿರೋಧವನ್ನು ಜಾರಿಗೆ ತರಲು ಶಾಸನ ಸಿದ್ಧವಾಗಿರುವುದಾಗಿಯೂ ಮುಂದಿನ ಶಾಸನ ಸಭಾಧಿವೇಶನದಲ್ಲಿ ಅದನ್ನು ಮಂಡಿಸುವುದಾಗಿಯೂ ಮಂತ್ರಿಗಳಾದ ಶ್ರೀ ಎಲ್. ಎಂ. ಪಾಟೀಲ್‌ರವರು ತಿಳಿಸಿರುತ್ತಾರೆ.

ಬೊಂಬಾಯಿನಲ್ಲಿ ಶಾಂತಿ !

ನಿನ್ನೆ ನಗರದಲ್ಲಿಯೂ ಹಿಂದೂಗಳಿಗೂ ನಡೆದ ಧರ್ಮಯುದ್ಧ ಪ್ರಕರಣ ಮುಗಿದು ಪರಿಸ್ಥಿತಿ ಹದಕ್ಕೆ ಬರುತ್ತಿದೆ. ಅಲ್ಲಲ್ಲೇ ಹಲವು ಇರಿತದ ಪ್ರಸಂಗಗಳು ವರದಿಯಾಗಿವೆ. ಇದುವರೆಗೆ ೫ ಜನ ಸತ್ತರೆಂದೂ ೬೦ ಮಂದಿಗೆ ಗಾಯಗಳಾದುವೆಂದೂ ಹೇಳಲಾಗಿದೆ.

ಆಂಧ್ರ ಸಮ್ಮೇಳನದ ಕಾರ್ಯದರ್ಶಿ ದಸ್ತಗಿರಿ

ಶ್ರೀ ಅಕ್ಕಸ್ವಾಮಿ ಎಂಬ ಹೈದರಾಬಾದ್ ಸಂಸ್ಥಾನದ ಆಂಧ್ರ ಮಹಾಸಭೆಯ ಕಾರ್ಯದರ್ಶಿಗಳನ್ನು ಸಿಕಂದರಾಬಾದ್ ಪೋಲೀಸರು, ಭಾರತ ರಕ್ಷಣಾ ಶಾಸನದ ಪ್ರಕಾರ ದಸ್ತಗಿರಿ ಮಾಡಿದ್ದಾರೆ. ಸಂಸ್ಥಾನದ ಪ್ರಜೆಗಳ ಶೋಚನೀಯ ಸ್ಥಿತಿಯ ವಿಷಯ ತಿಳಿಸುವ ಪ್ರಚಾರ ಪತ್ರಿಕೆಗಳನ್ನು ಸಂಸ್ಥಾನದಲ್ಲೆಲ್ಲಾ ನಿಷೇಧಿಸಲಾಗಿದೆ.

ವಿಶ್ವ ವಿದ್ಯಾನಿಲಯದ ಇಂಟರ್ ಪರೀಕ್ಷೆ ಫಲಿತಾಂಶ

ಮೈಸೂರು ೩
ಕಳೆದ ಏಪ್ರಿಲ್ ತಿಂಗಳು ನಡೆದ ಇಂಟರ್ ಪರೀಕ್ಷೆಯ ಫಲಿತಾಂಶವು [illegible] ಪ್ರಕಟವಾಗುವುದೆಂದು [illegible] ನಿರೀಕ್ಷಿಸಲಾಗಿದೆ.

ಸಾಧ್ವಿ

ತಾ|| ೨-೬-೪೬ ಭಾನುವಾರ !

ಜಿನ್ನರವರ ಹೊಸ ವರಸೆ

ಮುಸ್ಲಿಂ ಲೀಗ್ ಅಧ್ಯಕ್ಷರಾದ ಮಿ|| ಜಿನ್ನರವರಿಗೆ ಇದ್ದಕ್ಕಿದ್ದಂತೆ ಪ್ರಾಜ್ಞತೆಯು ಒಂದಿರುವಂತಿದೆ. ನಿಯೋಗದವರ ಸಲಹೆಗಳ ವಿಚಾರದಲ್ಲಿ ಅವರು ಈಚೆಗೆ ಒಂದು ಹೇಳಿಕೆಯನ್ನಿತ್ತಿದ್ದಾರೆ. ಅದರಲ್ಲಿ ಅವರ ಸ್ವಭಾವಕ್ಕೆ ವಿರುದ್ಧವಾದ ಸೌಜನ್ಯದ ಮಾತುಗಳನ್ನು ಆಡಿದ್ದಾರೆ. ಸದಾ ಕಾಲದಲ್ಲಿಯೂ ಹಿಂದೂಗಳೂ ಮುಸಲ್ಮಾನರೂ ಜಗಳವಾಡಿಕೊಂಡು ಇರುತ್ತಿರಲು ಸಾಧ್ಯವಿಲ್ಲವೆಂಬ ಆದರ್ಶ ವಾಕ್ಯಗಳನ್ನು ನುಡಿದಿದ್ದಾರೆ. ಅಂತರಂಗ ಸಮಸ್ಯೆಯನ್ನು ಸ್ನೇಹದಿಂದಲೂ ಸೌಹಾರ್ದದಿಂದಲೂ ಪರಿಹರಿಸಿಕೊಳ್ಳಲು ಸಾಧ್ಯವಿದೆಯೆಂದು ಹೇಳಿದ್ದಾರೆ. ಮತ್ತು ಅದೇ ನಂಬಿಕೆಯಿಂದಲೇ ತಾವು ದೆಹಲಿಗೆ ತೆರಳುತ್ತಿರುವುದಾಗಿಯೂ ತಿಳಿಸಿದ್ದಾರೆ. ಈ ಸದ್ಭಾವನೆಯು ಅವರಿಗೆ ಹಠಾತ್ತಾಗಿ ಹೇಗೆ ಬಂತೋ ತಿಳಿಯದಾಗಿದೆ.

ಹಿಂದೂ, ಮತ್ತು ಮುಸಲ್ಮಾನರಲ್ಲಿ ಐಕಮತ್ಯವನ್ನುಂಟುಮಾಡಲು ಒದಗಬಹುದಾದ ಪ್ರಸಂಗಗಳನ್ನು ತಪ್ಪಿಸಲು ಹಿಂದೂಸ್ಥಾನದ ನಾಯಕರುಗಳೆಲ್ಲರೂ ಅರ್ಧ [illegible]ಕ್ಕೆ ಹೋಗಿಬಿಟ್ಟು ಶ್ರಮಿಸುತ್ತಿದ್ದಾರೆ. ಇದಕ್ಕಾಗಿ ಮಹಾತ್ಮ ಗಾಂಧಿಯವರು ತಮ್ಮ ಕಾಲವನ್ನೆಲ್ಲಾ ವಿನಿಯೋಗಿಸುತ್ತಿದ್ದಾರೆ. ಹಿಂದೂ-ಮುಸ್ಲಿಂ ಐಕಮತ್ಯವೇ ಸ್ವರಾಜ್ಯ ಸ್ಥಾಪನೆಗೆ ಆಧಾರವೆಂದು ಮೊದಲಿನಿಂದಲೂ ಸಾರುತ್ತಿದ್ದಾರೆ. ಐಕಮತ್ಯವನ್ನು ಸಾಧಿಸಲು ಮುಸಲ್ಮಾನರಿಗೆ ಸಲ್ಲಬೇಕಾದುದಕ್ಕಿಂತಲೂ ಹೆಚ್ಚಿನ ರಿಯಾಯಿತಿಗಳನ್ನು ಕೊಡುವುದಕ್ಕೂ ಸಿದ್ಧರಾಗಿದ್ದಾರೆ. ಒಂದು ಬಾರಿ ಹಿಂದೂ ಮುಸ್ಲಿಂ ಐಕಮತ್ಯದ ಸಾಧನೆಗಾಗಿ ಘೋರ ಉಪವಾಸವನ್ನೂ ಸಹ ಅವರು ಆಚರಿಸಿದ್ದರು.

ಮಿ|| ಜಿನ್ನರವರು ಮುಸ್ಲಿಂ ಲೀಗಿನ ನಾಯಕತ್ವವನ್ನು ವಹಿಸಿದಂದಿನಿಂದಲೂ ಐಕಮತ್ಯದ ಪ್ರಯತ್ನಕ್ಕೆ ಕುಠಾರ ಪ್ರಯೋಗವಾಗುತ್ತಿದೆ. [illegible] ಸೌಹಾರ್ದಗಳಿಗಿಂತಲೂ ವಿರೋಧಭಾವನೆಗಳೇ ಬೆಳೆಯುತ್ತಿವೆ. ಹಿಂದೂಗಳೂ, ಮುಸಲ್ಮಾನರೂ ಪ್ರತ್ಯೇಕ [illegible] ಸ್ವತಂತ್ರ [illegible] ಮಿ|| ಜಿನ್ನರವರು ಬಿತ್ತುವುದೇ ಇದಕ್ಕೆ ಮೂಲ [illegible] ಪ್ರಬಲಿಸಿ [illegible] ಘೋರ [illegible] ಮುಸ್ಲಿಮರ [illegible] ದೇಶದ ಅನೇಕ [illegible] ಸಂದರ್ಭಗಳಲ್ಲಿ [illegible] ಜಿನ್ನರವರು [illegible] ರವರಿಂದ ಮೇಲೆ [illegible] ಇದರ ಪ್ರತಿಕ್ರಿಯೆ [illegible] ಘೋರವಾಗಿ [illegible] ಪಾಕಿಸ್ಥಾನ [illegible] ಸರ್ಕಾರ, [illegible], ಮತ್ತು [illegible] [illegible] [illegible] [illegible]

ದ|| ಆಫ್ರಿಕದಲ್ಲಿ ಪಾದ್ರಿಗಳ ಕರನಿರಾಕರಣ ಚಳುವಳಿ

ಜ|| ಸ್ಮಟ್ಸ್‌ರವರ ಸರ್ಕಾರವು ಯೂರೋಪಿಯನ್ನರಲ್ಲದವರ ವಿಚಾರದಲ್ಲಿ ಜಾರಿಗೆ ತಂದಿರುವ ಶಾಸನವನ್ನು ವಿರೋಧಿಸುವ ಸಲುವಾಗಿ ತಾವು ಸರ್ಕಾರಕ್ಕೆ ಯಾವ ಕಂದಾಯ ತೆರಿಗೆಗಳನ್ನೂ ಕೊಡುವುದಿಲ್ಲವೆಂದು ಸೋಫಿಯಾ ನಗರದ ಸೇಂಟ್ ಜೋಸೆಫ್ ಚರ್ಚಿನ ಪಾದ್ರಿಗಳಾದ ಮೈಕೇಲ್ ಸ್ಕಾಟ್ ರವರು ಘೋಷಿಸಿದ್ದಾರೆ

* [illegible] ನಿಯುಕ್ತ ಅಮೇರಿಕಕ್ಕೆ ಒಲಿಯಲು ಸಾಧ್ಯವಿಲ್ಲೆಂದು ಸೋವಿಯಟ್ ರಷ್ಯದಿಂದ ಒಂದಿಷ್ಟು ಆಹ್ವಾನವನ್ನು ಜ|| ಸ್ಟಾಲಿನ್ನರು ನಿರಾಕರಿಸಿದ್ದಾರೆ

† ಫ್ರಾಂಕೋ ಪ್ರಭುತ್ವದಿಂದ ಜಗತ್ತಿನ ಶಾಂತಿಗೆ ಲೋಪವಿಲ್ಲವೆಂದು ಬ್ರಿಟಿಷ್ ಸರ್ಕಾರ ಅಮೇರಿಕನ್ ಸರ್ಕಾರಕ್ಕೆ ತಿಳಿಸಿದೆ

ಲ್ಲಾ ನೋಡಿ ಈಗಲಾದರೂ ಮಿ|| ಜಿನ್ನರವರಿಗೆ ಮನಸ್ಸು ಕರಗಿದ್ದರೆ ಅವರು ಧನ್ಯರಾದರೆಂದೇ ಭಾವಿಸಬೇಕು

ಬ್ರಿ|| ನಿಯೋಗದವರು ಪಾಕಿಸ್ಥಾನಕ್ಕೆ ಪ್ರಯೋಗಿಸಿದ ಕೊಡಲಿಯ ಪೆಟ್ಟು ಜಿನ್ನರವರ ಈ ಮನಃಪರಿವರ್ತನೆಗೆ ಮುಖ್ಯ ಕಾರಣವೆಂದು ಭಾವಿಸಬಹುದು. ನಿಯೋಗ ಸಂಧಾನವು ಮುರಿದು ಬಿದ್ದು ಎಲ್ಲರೂ ತಮ್ಮ ತಮ್ಮ ಸ್ಥಳಗಳಿಗೆ ತೆರಳಿದ ಮೇಲೆ ಒಬ್ಬಂಟಿಗರಾಗಿ ಉಳಿದ ಮಿ|| ಜಿನ್ನರವರು ತಮ್ಮ ಅಂತರಂಗವನ್ನೂ ಎಲ್ಲ ವಿದ್ಯಮಾನಗಳನ್ನೂ ವಿಮರ್ಶಿಸಿಕೊಂಡು, ಈ ನಿರ್ಧಾರಕ್ಕೆ ಬಂದಿದ್ದರೆ ಒಳ್ಳೆಯದೇ ಸರಿ. ಆದರೆ ಅವರ ಹಿಂದಿನ ರಾಜಕೀಯ ಪರಿಸ್ಥಿತಿ ಇತಿಹಾಸವನ್ನು ಬಲ್ಲವರೆಲ್ಲರೂ ಇದಕ್ಕೆ ಸುಲಭವಾಗಿ ಬೆರಗಾಗುವುದು ಸಾಧ್ಯವಿಲ್ಲ. [illegible] ರಾಜಕೀಯ ಮಾತುಕತೆಗಳಿಗೆ ಹೇಳಿಕೆಗಳನ್ನು ಕೊಟ್ಟು ಪುನಃ ತಮ್ಮ ಕಾರ್ಯ ಸಾಧನೆಗೆ ಬೇರೊಂದು ಉಪಾಯವನ್ನು ಅವರು ಹುಡುಕಿರಬಹುದೆಂಬ ಸಂಶಯವೂ ಎದ್ದಿದೆ.

ಹಿಂದೂಸ್ಥಾನದ ರಾಜಕೀಯ ರಂಗದಲ್ಲಿ ಜಿನ್ನರವರ ಪಾತ್ರವು ಎಂದೋ ಮುಕ್ತಾಯವಾದಂತೆಯೇ ಸರಿ. ಕಾಂಗ್ರೆಸ್ ಮತ್ತು ಇತರ ಪ್ರಜಾ ಪಕ್ಷಗಳ ಪಾತ್ರರಾದ ನಾಯಕರುಗಳೇ ಇಂದಿನ ರಾಜಕೀಯ ಸೂತ್ರಗಳನ್ನು ಹಿಡಿದಿರುವರು. ಅವರೊಡನೆಯೇ ಬ್ರಿಟಿಷರು ಅಂತಿಮ ಒಪ್ಪಂದಕ್ಕೆ ಬರಬೇಕಾಗಿದೆ. ದೇಶದ ನಿಜವಾದ ನಾಯಕರ ಮಾರ್ಗವನ್ನು ಜಿನ್ನರವರೂ ಅನುಸರಿಸಿದರೆ ಅವರಿಗೂ ಪುರಸ್ಕಾರ ದೊರೆತೀತು. ಇಲ್ಲವಾದರೆ ಅವರನ್ನು ಹಿಂದುಗೊತ್ತಿ ಇತರರೇ ದೇಶದ ಪ್ರಗತಿಯನ್ನು ಇತ್ಯರ್ಥ ಮಾಡುವುದು ಖಂಡಿತ.

ಭದ್ರತಾ ಸಮಿತಿಗೆ ಅಮೆರಿಕ ಪ್ರತಿನಿಧಿ ರಾಜೀನಾಮೆ

ವಿಶ್ವದ ಭದ್ರತಾ ಸಮಿತಿಯಲ್ಲಿ ಸಂಯುಕ್ತ ಸಂಸ್ಥಾನದ ಪ್ರತಿನಿಧಿಯಾಗಿದ್ದ ಮಿ|| ಸ್ಟೆಟಿನಿಯಸ್ ರವರು ಸ್ಟೇಟ್ ಇಲಾಖೆಯೊಡನೆ ತಮ್ಮ ಬಾಂಧವ್ಯ ಸರಿಯಿಲ್ಲವೆಂದೂ ತಮ್ಮನ್ನು ಅಂಚೆ ಜವಾನನಂತೆ ಕಾಣಲಾಗುತ್ತಿದೆಯೆಂದೂ ಆಕ್ಷೇಪಿಸಿ ತಮ್ಮ ಸ್ಥಾನಕ್ಕೆ ರಾಜೀನಾಮೆ ಇತ್ತಿದ್ದಾರೆ.

ಉಪನಯನಗಳು

ನಂಜನಗೂಡಿನ [illegible] ಬಿ ಪಿ. ಪಂಡಿತರು ತಮ್ಮ ಕುಮಾರ ಚಿ|| ವೆಂಕಟೇಶಮೂರ್ತಿಗೆ ಜೂನ್ ೩ ನೇ ತಾ|| ಉಪನಯನವನ್ನು ನಂಜನಗೂಡಿನಲ್ಲಿ ನೆರವೇರಿಸುವರು

ಎ|| ಡಿ|| ಪೋಸ್ಟ್ ಮಾಸ್ತರಾದ ಶ್ರೀ|| ಎಂ. ಶ್ರೀನಿವಾಸರಾಯರು ತಮ್ಮ ಮೊಮ್ಮಗ ಚಿ|| ಎಂ. ನಾಗೇಶರಾವ್ ಗೆ ಜೂನ್ ೬ನೇ ತಾರೀಖು ಉಪನಯನವನ್ನು ಮೈಸೂರಿನಲ್ಲಿ ನಡೆಸುವರು.

ಶ್ರೀ ಕೆ. ರಂಗಣ್ಣನವರು ತಮ್ಮ ತಮ್ಮ ಮಂಡ್ಯದ ಜಿಲ್ಲಾ ಇನ್ಸ್ಪೆಕ್ಟರ್ ಶ್ರೀ ಎಸ್. ಎಸ್. ನಾರಾಯಣರಾಯರ ಎರಡನೇ ಮಗ ಚಿ|| ಕೃಷ್ಣಸ್ವಾಮಿಗೆ ಜೂನ್ [illegible]ನೇ ತಾ|| ಸಲ್ಲಾ ಮೂರನೇ ಮಗ ಚಿ|| ರಾಮಸ್ವಾಮಿಗೆ ಜೂನ್ ೧೦ನೇ ತಾ|| ಸಲ್ಲಾ ಮಂಡ್ಯದಲ್ಲಿ ಉಪನಯನವನ್ನು ನೆರವೇರಿಸುವರು

† ಐ. ಎನ್. ಎ. ಬಂದಿಗಳ ಕೊನೇ ತಂಡವನ್ನು ಬಿಡುಗಡೆ ಮಾಡಲಾಗಿದೆ. ಈಗ ಸೆರೆಯಲ್ಲಿರುವವರೆಂದರೆ ಸಿಗ್ನಲರ್ ಹೇರ್ ಬಹದ್ದೂರ್ ರವರೊಬ್ಬರೇ ಒಬ್ಬರು

ಅಪೇರಾ ಟಾಕೀಸ್

1—6—46 ರಿಂದ

ಎಂಟನೇ ವಾರ

* ವಾಲ್ಮೀಕಿ *

(ತಮಿಳು ಭಾಷೆ)

ಬರುವ ಕಾರ್ಯಕ್ರಮ ಗಮನಿಸಿ

ಲವಂಗಿ

(ತಮಿಳು)

-: ಪಾತ್ರ :-

* ವೈ. ವಿ. ರಾವ್
* ಕುಮಾರಿ ರುಕ್ಮಿಣಿ
* ಜಯಮ್ಮ
* ನಾರಂಗಪಾಣಿ
* ರಾಮಚಂದ್ರ

ಹೊಸ ಅಂಗಡಿ : : ಹೊಸ ಸರಕುಗಳು

ಬೆಲೆ ಕಡಿಮೆ : : ಬಾಳಿಕೆ ಹೆಚ್ಚು

ಪ್ರಭಾತ್ ಬ್ಯಾಂಗಲ್ಸ್ ಸ್ಟೋರ್ಸ್

ಚಾಮುಂಡೇಶ್ವರಿ ಟಾಕೀಸಿನ ಹತ್ತಿರ, ಸಯ್ಯಾಜಿರಾವ್ ರೋಡ್, ಮೈಸೂರು

ನಮ್ಮಲ್ಲಿ

ಹೊಸ ನಮೂನೆಯ ಫ್ಯಾನ್ಸಿ ಬಳೆಗಳು, ಮುತ್ತು ಗಾಜಿನ, ಸೆಲ್ಯುಲೈಡ್, ರಬ್ಬರ್, ಕ್ರೋಮಿಯಂ

ಬಳೆಗಳು

ಮತ್ತು ಫ್ಯಾನ್ಸಿ ಲೋಲಕ್ಕುಗಳು, ಮೈಸೂರು ಸಿಲ್ಕ್ ರಿಬ್ಬನುಗಳು ದೊರೆಯುತ್ತ

ಸ್ಟಾಂಡರ್ಡ್ ಬಳೆಗಳೂ ಬಂದಿರುತ್ತವೆ

ವಾರ್ತಾ ಸಾರಾಂಶ

* ಆಜಾದ್ ಹಿಂದ್ ಸರ್ಕಾರದ ನೇತಾಜಿ ನಿಧಿ ಸಮಿತಿ ಸದಸ್ಯರ [illegible] ರಂಗೂನಿಗೆ ಶ್ರೀ ಶರತ್ ಚಂದ್ರ ಬೋಸ್‌ರು ತೆರಳಲು ಕೇಂದ್ರ ಸರ್ಕಾರವು ಸಿದ್ಧತೆಗಳನ್ನು ಮಾಡುತ್ತಿದೆ

§ ರಾಜಧಾನಿಯ ಸುತ್ತೂರು [illegible] ವಿದ್ಯಾರ್ಥಿನಿಲಯಕ್ಕೆ ಸೇರಬಯಸುವವರು ಜೂನ್ ೩೦ನೇ ತಾ|| ಒಳಗಾಗಿ ಅರ್ಜಿ ಹಾಕಿಕೊಳ್ಳಬೇಕೆಂದು ತಿಳಿಸಲಾಗಿದೆ.

§ [illegible] ಯಲ್ಲಿ ಪ್ರೊಫೆಸರ[illegible] ಇದ್ದದ್ದನ್ನು ೪ ತಾಸಿಗೆ [illegible] ಲಾಗಿದೆ

† ಸರ್ಕಾರದ [illegible] ದಲ್ಲಿ [illegible] ಗಳನ್ನು ವೈದ್ಯಕೀಯ ಸೌಕರ್ಯಕ್ಕಾಗಿ ಉಪಯೋಗಿಸಬೇಕೆಂದು [illegible] ಮತ್ತು ಮೆಡಿಕಲ್ ಸರ್ವೀಸನ್ನು [illegible] ತೀರ್ಮಾನವಾಗಿದೆ

[ಕಳೆದ ೪ ವರ್ಷಗಳಿಂದ ಅಮೇರಿಕ ಸಂಯುಕ್ತ ಸಂಸ್ಥಾನದ [illegible] ವಶಕ್ಕೆ ಕೊಟ್ಟಿದ್ದ [illegible] ವಿಮಾನ [illegible]ವನ್ನು ಕಳೆದ ೨೯ ನೇ ತಾ|| ಭಾರತ ಸರ್ಕಾರಕ್ಕೆ ವಾಪಸು ವಹಿಸಲಾಗಿದೆ

* ಭಾರತ ರಾಜ್ಯಾಂಗ ಸಭೆಗೆ [illegible] ಸೀಟಿಗೆ ಕೆನರಾದಿಂದ ಶ್ರೀ ಪ್ರಾಣಾಚಾರ್ಯರು ಅವಿರೋಧವಾಗಿ ಆರಿಸಲ್ಪಟ್ಟಿದ್ದು ಇವರು ಕಾಂಗ್ರೆಸ್ಸಿನವರು.

* ಪೆಟ್ರೋಲ್ ರೇಷನ್ ಪದ್ಧತಿ ಸದ್ಯ [illegible] ವಜಾ ಆಗುವುದಿಲ್ಲವೆಂದು ಕೇಂದ್ರ ಸರ್ಕಾರದ ಪ್ರಕಟಣೆ ತಿಳಿಸಿದೆ.

ಬಡ ವಿದ್ಯಾರ್ಥಿಗಳಿಗೆ ಸಹಾಯ

ರಾಜಧಾನಿಯ ಪ್ರಾರ್ಥನಾ ಸಭೆಯ ಆಶ್ರಯದಲ್ಲಿ ಬಡ ವಿದ್ಯಾರ್ಥಿಗಳಿಗೆ ಊಟದ ವ್ಯವಸ್ಥೆ ಏರ್ಪಡಿಸಲಾಗಿದೆ. ಸಹಾಯ ಅಪೇಕ್ಷಿಸುವವರು ಶಾಲಾ, ಕಾಲೇಜ್ ಮುಖ್ಯಾಧಿಕಾರಿಗಳ [illegible] ಕಾರ್ಯದರ್ಶಿಗಳಾದ ಶ್ರೀ ಚೌಡಯ್ಯನವರಿಗೆ [illegible] ತಿಳಿಸುತ್ತಾರೆ.

ಬ್ರಿ|| ಅಧಿಕಾರಿಗಳ ಸಂಬಳ ಮೋಟಾ

ಜುಲೈ ೧ ನೇ ತಾ|| ರಿಂದ ಭಾರತದ ಬ್ರಿಟಿಷ್ ಅಧಿಕಾರಿಗಳ ಸಂಬಳ 'ಬ್ರಿಟಿಷ್ ಸಂಬಳದ ಕಾನೂನು' ಪ್ರಕಾರ ಕೊಡಲಾಗುವುದೆಂದು ಕಾಮನ್ಸ್ ಸಭೆಯಲ್ಲಿ ಪ್ರಧಾನಿಗಳು ತಿಳಿಸಿದ್ದಾರೆ. ಇದರಿಂದ ಅಧಿಕಾರಿಗಳ [illegible] ಸಂಬಳದಲ್ಲಿ ಮೋಟಾ ಬೀಳುವುದು.

ಪತ್ರಿಕೋದ್ಯೋಗಿಗಳ ಸ[illegible]

[ಸ್ವಂತ ವರದಿ] ಬೆಂಗಳೂರು

ಸಂಸ್ಥಾನದ ಪತ್ರಿಕೋದ್ಯೋಗಿಗಳ ಸಮ್ಮೇಳನದ ಸ್ಥಾಯೀ ಸಮಿತಿಯ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಕೆ [illegible] ರಾಜೀನಾಮೆ ಕೊಟ್ಟಿರುವ ಪ್ರಯುಕ್ತ ಪಿ. ಬಿ ಶ್ರೀನಿವಾಸರವರನ್ನು [illegible] ಅಧ್ಯಕ್ಷರು ಚುನಾಯಿಸಿ[illegible]

Edited, printed and publish[ed by] A. R. Nagarajan at the Sadhvi [Press,] D Subbiah Road, Mysore.

ಪೋ॥ ನಂ. 392 WEEKLY EDITION ಇಂದಿನ ಪತ್ರಿಕೆ ೬ ಕಾಸು

ಸಂಪುಟ ೧೦] ಸೋಮವಾರ ೩—೬—೪೬ [ಸಂಚಿಕೆ ೩೮

ಮುಷ್ಕರ ಅಕ್ರಮವೆಂದು ರೈಲ್ವೆ ಸಚಿವರ ಸೂಚನೆ

ಬ್ರಿಟನ್ನು ಸ್ವಾತಂತ್ರ್ಯವನ್ನು ನೀಡಿಲ್ಲ

ಭಾರತ ರಾಜ್ಯಾಂಗದ ಶಿಫಾರಸಿಗಾಗಿ ಬ್ರಿಟನ್ನಿನ ಸ್ವತಂತ್ರ ಲೇಬರ್ ಪಕ್ಷದ ಅಧ್ಯಕ್ಷರಾದ ಮಿ॥ ಎಡ್ವರ್ಡ್ಸ್‌ರವರು ಒಂದು ಪ್ರಣಾಳಿಕೆಯನ್ನು ತಯಾರಿಸಿದ್ದಾರೆ. ಅದು ಈ ರೀತಿ ಇದೆ:—

ಬ್ರಿಟಿಷ್ ಸರ್ಕಾರವು ನಿಜವಾಗಿಯೂ ಭಾರತಕ್ಕೆ ಸ್ವಾತಂತ್ರ್ಯ ಕೊಡಬೇಕೆಂದಿದ್ದರೆ ಈ ಬಗ್ಗೆ ತಡಮಾಡದೆ ಒಂದು ಘೋಷಣೆ ಹೊರಡಿಸಬೇಕು; ಭಾರತದಲ್ಲಿರುವ ಬ್ರಿ॥ ಪಲಟನಿಯನ್ನು ವಾಪಸು ಕರೆಸಬೇಕು, ...

ಇಂಟರ್ ಮೀಡಿಯಟ್ ಪರೀಕ್ಷೆ ಫಲಿತಾಂಶ

ದೇವಸ್ಥಾನದಲ್ಲಿ ...

ಕಾಶ್ಮೀರದ ದಿನಾಚರಣೆ

ಮೈಸೂರು ೩

ಪಂ॥ ಜವಹರಲಾಲ್ ನೆಹರೂರವರ ...

ಪಾನ ನಿರೋಧಕ್ಕೆ ಮದ್ಯದ ರೇಷನಿಂಗ್

ತರಕಾರಿ ರಫ್ತಿಗೆ ಪ್ರತಿಬಂಧಕ

ನಿಯುಕ್ತ ಸೂಚನೆಗಳಿಗೆ ಅವಕಾಶವಿಲ್ಲ

ಸ್ವಂ ಸು ಪ್ರೋ] ಬೆಂಗಳೂರು ೩

ರೈಲ್ವೆ ಮುಷ್ಕರವು ಕಾನೂನು ವಿರುದ್ಧವೇ

ಕೇಂದ್ರ ಸರ್ಕಾರದ ಸಚಿವಂಡಲದ ಮಿ॥ ಎಡ್ವರ್ಡ್ ಬೆಂಥಾಲರು ಒಂದು ... ಹೊರಡಿಸಿ ಕೆಲಸಗಾರರ ಬೇಡಿಕೆಗಳ ... ರೈಲ್ವೆ ಕೆಲಸಗಾರರ ... ವಿರುದ್ಧವಾಗಿರುವುದೆಂದು ... ಸಿದ್ದಾರೆ. ...

ಮುಷ್ಕರದ ಮುಕ್ತಾಯ ಗೊಂದಲ

ಮೈಸೂರು ೩

ಪ್ರಭುಗಳಿಗೆ ಬಿನ್ನವತ್ತಳೆ

ಬೆಂಗಳೂರು ೩

ಪ್ರೊ ... ಸಂದೇಶ

ಸಾಧ್ವಿ

ತಾ|| ೩-೬-೪೮ ಸೋಮವಾರ

ರೈಲ್ವೆ ಮುಷ್ಕರದ ಸಂಭವ

ಭರತಖಂಡದ ಪ್ರಮುಖ ರೈಲ್ವೆ ಸಂಸ್ಥೆಗಳ ಕೆಲಸಗಾರರೆಲ್ಲರೂ ಮುಷ್ಕರ ಹೂಡುವುದಾಗಿ ಸರ್ಕಾರದವರಿಗೆ ಸೂಚನೆ ಕೊಟ್ಟಿದ್ದಾರೆ. ಈ ತಿಂಗಳ ೨೭ ನೇ ತಾರೀಖು ಮಧ್ಯರಾತ್ರಿಯಿಂದ ಮುಷ್ಕರವು ಆರಂಭವಾಗುವಂತೆ ತಿಳಿಸಲಾಗಿದೆ. ಇದಕ್ಕಾಗಿ ಕೆಲಸಗಾರರು ಸಕಲಸಿದ್ಧತೆಗಳನ್ನೂ ಮಾಡಿಕೊಂಡಿದ್ದಾರೆ. ಈ ಕೆಲಸದಲ್ಲಿ ತೊಡಗಿರುವ ಹತ್ತು ಲಕ್ಷ ಜನರು ತಮ್ಮ ತಮ್ಮ ಉದ್ಯೋಗಗಳನ್ನು ಬಿಟ್ಟು ಹೊರಬರುತ್ತಾರೆ. ಆ ಸಮಯದಲ್ಲಿ ಯಾವ ಜನದ ರೈಲುಗಳು ಎಲ್ಲೆಲ್ಲಿದ್ದರೆ ಅಲ್ಲಲ್ಲಿಯೇ ನಿಲ್ಲುವವು. ಪ್ರತಿಯೊಂದು ರೈಲ್ವೆ ನಿಲ್ದಾಣವೂ ಮುಷ್ಕರ ಕಳೇಬರವಾಗಿ ಪರಿಣಮಿಸುವುದು. ರೈಲುಗಳಿಗೆ ಸಂಬಂಧಪಟ್ಟ ಪೋಸ್ಟ್ ಮತ್ತು ಸ್ಟೇಷನ್‌ಗಳ ಇಲಾಖೆಗಳೂ ಮುಷ್ಕರ ಹೂಡುವುವು. ಈ ಸಂದರ್ಭದಲ್ಲಿ ದಸ್ತಗಿರಿಯಾಗಬಹುದಾದವರಿಗೆ ಅಗತ್ಯವಾದ ಸೌಲಭ್ಯಗಳನ್ನು ಕಲ್ಪಿಸಿಕೊಡಲು ಏರ್ಪಾಡಾಗಿದೆ. ಇಂದಿನ ಮುಂದಾಳುಗಳು ಬಂಧಿಸಲ್ಪಟ್ಟರೆ ಅವರನಂತರ ಬರಬೇಕಾದವರನ್ನು ಗೊತ್ತು ಮಾಡಲಾಗಿದೆ. ಮುಷ್ಕರವು ಶಾಂತವಾಗಿಯೂ, ಶಿಸ್ತಿನಿಂದಲೂ ನಡೆಯಲು ಬೇಕಾದ ಏರ್ಪಾಡುಗಳನ್ನೆಲ್ಲಾ ಕೈಗೊಳ್ಳಲಾಗಿದೆ.

ಅಖಿಲ ಭಾರತ ರೈಲ್ವೆ ಮುಷ್ಕರವು ಇಷ್ಟು ವ್ಯವಸ್ಥಿತವಾಗಿ ನಡೆಯಲು ಹಿಂದೆ ಯಾವಾಗಲೂ ಏರ್ಪಾಡಾಗಿರಲಿಲ್ಲವೆಂದು ಹೇಳಬಹುದು. ರೈಲ್ವೆ ಕೆಲಸಗಾರರು ಬಹಳ ತಾಳ್ಮೆಯಿಂದಲೂ, ಸಹಕಾರಭಾವನೆಯಿಂದಲೂ ಮುಂದುವರಿಯುತ್ತಿದ್ದಾರೆ. ಈ ನೂತನ ಪ್ರಕಾರ ಅನುಸರಿಸಬೇಕಾದ ಎಲ್ಲಾ ಕ್ರಮಗಳನ್ನು ಸಂಪೂರ್ಣವಾಗಿ ಪಾಲಿಸುತ್ತಿದ್ದಾರೆ. ತಮ್ಮ ಬೇಡಿಕೆಗಳು ಎಷ್ಟು ನ್ಯಾಯವಾಗಿವೆಯೆಂಬುದನ್ನು ಪ್ರಪಂಚಕ್ಕೆ ತೋರಿಸಿದ್ದಾರೆ. ಅವರ ಬೇಡಿಕೆಯು ನ್ಯಾಯವಾಗಿರುವುದರಿಂದಲೇ ಸಕಲರ ಸಹಾನುಭೂತಿಯೂ ಅವರಿಗೆ ದೊರಕಿದೆ.

ಈಗ ರೈಲ್ವೆ ಕೆಲಸಗಾರರಿಗೆ ದೊರೆಯುತ್ತಿರುವ ವೇತನ, ಭತ್ಯ ಮತ್ತು ಇತರ ಸೌಲಭ್ಯಗಳು ಇಂದಿನ ಕಾಲಕ್ಕೆ ಸ್ವಲ್ಪವೂ ಸಾಲದೆಂದು ಅವರು ಹೇಳುತ್ತಿದ್ದಾರೆ. ಅವುಗಳನ್ನು ಉತ್ತಮಪಡಿಸಲು ಅವರು ತಮ್ಮ ಸಂಸ್ಥೆಯ ಮೂಲಕ ಅನೇಕ ಬಾರಿ ಪ್ರಯತ್ನಗಳನ್ನು ನಡೆಸಿದ್ದಾರೆ. ಆದರೆ ಅವು ನಿಷ್ಫಲವಾಗಿದ್ದುದರಿಂದ ತಮ್ಮ ಬೇಡಿಕೆಗಳನ್ನು ಪಂಚಾಯಿತಿಗೆ ಒಪ್ಪಿಸಿ ತೀರ್ಮಾನ ಮಾಡಬೇಕೆಂದು ಕೇಳಿದ್ದಾರೆ. ಕೆಲಸಗಾರರಿಗೂ ಆಳುವ ವರ್ಗದವರಿಗೂ ಉಂಟಾಗುವ ಭಿನ್ನಾಭಿಪ್ರಾಯಗಳನ್ನು ಬಗೆಹರಿಸಲು ಪಂಚಾಯಿತಿ ಸಂಸ್ಥೆಯನ್ನು ಗವರ್ನಮೆಂಟಿನವರು ಸ್ಥಾಪಿಸಿದ್ದಾರೆ. ಈಗ ಪಂಚಾಯಿತಿಯ ಕಾರ್ಯಕ್ರಮಕ್ಕೆ ಇದನ್ನು ಒಪ್ಪಿಸಲು ಅವರು ಬಯಸಿದ್ದಾರೆ. ಆದರೆ ಪ್ರಕೃತ ಕೆಲಸಗಾರರ ಬೇಡಿಕೆಯ ವಿಚಾರವನ್ನು ಪಂಚಾಯಿತಿಗೆ ಒಪ್ಪಿಸಲು ಸರ್ಕಾರದವರು ಇದಕ್ಕೆ ಒಪ್ಪಿರುವುದಿಲ್ಲ. ಆದುದರಿಂದ ತಮ್ಮ ಕಡೆಯ ಅಸ್ತ್ರವಾದ ಮುಷ್ಕರವನ್ನೇ ಪ್ರಯೋಗಿಸುವುದಾಗಿ ಕೆಲಸಗಾರರು ನಿರ್ಧರಿಸಿರುತ್ತಾರೆ.

ಕೆಲಸಗಾರರ ಬೇಡಿಕೆಗಳನ್ನು ಈಡೇರಿಸಲು ಕೇವಲ ಮೂರೂವರೆ ಕೋಟಿ ರೂಪಾಯಿ ಮಾತ್ರ ಬೇಕಾಗುವುದು. ಇದನ್ನು ಕೊಡಬೇಕಾದರೆ ಇಂದಿನ ಸರ್ಕಾರದ ಆದಾಯವು ಕಡಿಮೆಯಾಗುವುದೆಂದೂ, ಅದನ್ನು ತಪ್ಪಿಸಲು ಮೂರನೇ ದರ್ಜೆ ಪ್ರಯಾಣಿಕರ ಮೇಲೆ ಹೆಚ್ಚಿನ ತೆರಿಗೆಯನ್ನು ಹೊರಿಸಬೇಕಾಗುವುದೆಂದೂ ಅಧಿಕಾರಿಗಳು ಹೇಳುವರು. ಆದರೆ ಸರ್ಕಾರದವರು ರೈಲ್ವೆ ಇಲಾಖೆಯಲ್ಲಿ ಕೂಡಿಹಾಕಿರುವ ನಿಧಿಗಳಲ್ಲಿ ಕೋಟ್ಯಂತರ ರೂಪಾಯಿಗಳು ಸಂಗ್ರಹವಾಗಿವೆಯೆಂದೂ ಮತ್ತು ಅವರು ಈಗ ಸಾಲಗಳ ಮೇಲೆ ಕೊಡುತ್ತಿರುವ ಬಡ್ಡಿಯು ಬ್ಯಾಂಕುಗಳ ಬಡ್ಡಿ ದರಕ್ಕಿಂತಲೂ ಅತ್ಯಂತ ದುಬಾರಿಯಾಗಿರುವುದೆಂದೂ, ಅವುಗಳನ್ನು ಸ್ವಲ್ಪಮಟ್ಟಿಗಾದರೂ ಕಡಿಮೆ ಮಾಡಿದರೆ ಕೆಲಸಗಾರರ ಬೇಡಿಕೆಗಳನ್ನೆಲ್ಲಾ ಪೂರೈಸಿ ಇನ್ನೂ ಹಣವನ್ನು ಉಳಿಸಬಹುದೆಂದು ಕೆಲಸಗಾರರ ಮುಖಂಡರು ಅಂಕೆ ಅಂಶಗಳಿಂದ ತೋರಿಸಿ ಕೊಟ್ಟಿರುತ್ತಾರೆ.

ಪರಿಸ್ಥಿತಿಯು ವಿಷಮಸ್ಥಿತಿಗೆ ಬಂದಿದೆ. ಆಹಾರದ ಅಭಾವ, ರಾಜಕೀಯ ಸಂಘರ್ಷ, ಕೇಂದ್ರ ಸರ್ಕಾರದ ಸ್ಥಾಪನೆಯ ಸಂಭವ, ಇವೇ ಮುಂತಾದ ಹಲವು ಈ ಸಂದಿಗ್ಧ ಪರಿಸ್ಥಿತಿಯಲ್ಲಿ ಅಖಿಲ ಭಾರತದ ರೈಲ್ವೆ ಮುಷ್ಕರದ ಪರಿಣಾಮವನ್ನು ದೇಶವು ಅನುಭವಿಸುವುದು ಅತ್ಯಂತ ಕಠಿಣವಾದ ವಿಷಯ. ಮುಷ್ಕರವು ಆರಂಭವಾದರೆ ಪರಿಸ್ಥಿತಿಯು ಹೇಗೆ ತಿರುಗುತ್ತದೋ ಹೇಳಲು ಸಾಧ್ಯವಿಲ್ಲ. ಅನೇಕ ಅನುಚಿತ ಪ್ರಸಂಗಗಳು ನಡೆಯಬಹುದು. ಜನಸಾಧಾರಣ ಇತರ ಎಲ್ಲಾ ಭಾಗಗಳಿಗೂ ಇದರ ಪರಿಣಾಮ ತಟ್ಟಬಹುದು. ದೇಶದ ಎಲ್ಲಾ ಕಾರ್ಮಿಕರೂ ತಮ್ಮನ್ನು ಬೆಂಬಲಿಸುವಂತೆ ರೈಲ್ವೆಯವರು ಕೇಳಿರುವುದಾಗಿಯೂ ತಿಳಿದುಬಂದಿದೆ. ಅಲ್ಲಿಗೆ ದೇಶದ ಪರಿಸ್ಥಿತಿಯು ಅಲ್ಲೋಲಕಲ್ಲೋಲವಾಗುವುದು.

ಇಂತಹ ಕಠಿಣ ಪ್ರಸಂಗವನ್ನು ತಪ್ಪಿಸುವುದು ಸಕಲ ದೇಶಾಭಿಮಾನಿಗಳ ಕರ್ತವ್ಯ. ಪ್ರೈಸಂಬಾರ್ ಪಂ|| ನೆಹರೂ ಮತ್ತು ಮೌ|| ಲಿಯಾಖತ್ ಅಲೀ ಖಾನರನ್ನು ಕರೆಸಿ ಈ ಪ್ರಶ್ನೆಯನ್ನು ಬಿಡಿಸಲು ನೆರವನ್ನು ಬೇಡಿರುವರು. ಆದರೆ ಪಂಚಾಯಿತಿಗೆ ಸರ್ಕಾರದವರು ಒಪ್ಪದಿರುವುದರಿಂದ ತೊಡಕು ಹೆಚ್ಚಾಗಿದೆ. ರೈಲ್ವೆಯವರಿಗೆ ಸೌಲಭ್ಯಗಳನ್ನು ಕೊಟ್ಟರೆ ಇತರ ಸರ್ಕಾರಿ ನೌಕರರಿಗೂ ಕೊಡಬೇಕಾಗುವುದೆಂಬ ಅಂಜಿಕೆಯು ಅಧಿಕಾರಿಗಳಿಗೆ ಇರುವುದು. ಆದರೆ ರೈಲ್ವೆ ಜನರು ಇತರ ನೌಕರರಂತೆ ಕೇವಲ ಆಫೀಸಿನವರಲ್ಲವೆಂದೂ, ಅವರು 'ಕುಶಲ' ಕೆಲಸಗಾರರೆಂದೂ ಅವರ ಪ್ರಶ್ನೆಯು ಇತರರಿಗೆ ಅನ್ವಯಿಸುವುದಿಲ್ಲವೆಂದೂ ಸಮಾಧಾನವನ್ನು ಹೇಳಲಾಗಿದೆ.

ಕೆಲಸಗಾರರ ಬೇಡಿಕೆಗಳೇನೋ ಸಾಧುವಾಗಿವೆ. ಆದರೆ ಮುಷ್ಕರವನ್ನು ಹೂಡಲು ಇದು ಸರಿಯಾದ ಸಮಯವಲ್ಲವಾಗಿದೆ. ದೇಶದ ಭವಿಷ್ಯದ ಸಮಸ್ಯೆಗಳನ್ನು ಬಗೆಹರಿಸಲು ತೊಡಗಿರುವ ನಾಯಕರು ಈ ಪ್ರಶ್ನೆಯನ್ನೂ ಬಗೆಹರಿಸಿ ಒಡನೆ ಕೆಲಸಗಾರರ ಬೇಡಿಕೆಯನ್ನು ಈಡೇರಿಸುವರೆಂದೂ ಮುಷ್ಕರವಾಗದಂತೆ ಮಾಡುವರೆಂದೂ ಹಾರೈಸೋಣ.

ವಾರ ಭವಿಷ್ಯ

(ಶ್ರೀ ನಿತ್ಯಾನಂದಸ್ವಾಮಿಗಳಿಂದ)

ತಾ|| ೩-೬-೪೮ ರಿಂದ ೯-೬-೪೮ ರ ವರೆಗೆ

ಮೇಷ— ಯೋಚನೆಗಳು ವೃದ್ಧಿಗೊಳ್ಳುವುವು. ಆರೋಗ್ಯ ಚೆನ್ನಾಗಿರುವುದಿಲ್ಲ. ನೌಕರಿ, ವ್ಯಾಪಾರದಲ್ಲಿ ಲಾಭ ಕಡಮೆ. ಖರ್ಚು ಹೆಚ್ಚು, ಪ್ರವಾಸ ನಿಷ್ಫಲ, ಮನಸ್ಸ ಪಶ್ಚಾತ್ತಾಪ ಪ್ರಿಯಜನರ ಅಗಲುವಿಕೆ.

ವೃಷಭ— ಮಿತ್ರ ವೃಂದದಲ್ಲಿ ವಿವಾದಗಳು ಜರುಗುವುವು. ಶರೀರ ಪ್ರಕೃತಿ ಚೆನ್ನಾಗಿರುವುದು. ನ್ಯಾಯಸ್ಥಾನದಲ್ಲಿ ವ್ಯವಹಾರಗಳು ನಿಮ್ಮ ಕಡೆಗೆ ಆಗುವುವು. ಶತ್ರುಗಳ ತೊಂದರೆ ಮುಂದುವರಿಯುವುದು. ಆದಾಯ ವ್ಯಯಗಳು ಸಮ.

ಮಿಥುನ— ಇದುವರೆಗಿನ ಕಷ್ಟಗಳನ್ನೆಲ್ಲಾ ಪರಿಹರಿಸುವ ಸದವಕಾಶ ಒದಗಿದೆ. ಧನ ಲಾಭ. ಆರೋಗ್ಯ ಹೆಚ್ಚಾಗಿರುವುದು. ವ್ಯಾಪಾರ, ಉದ್ಯೋಗಗಳಲ್ಲಿ ಯಶಸ್ಸು. ಶುಭ ಕಾರ್ಯಗಳು ಜರುಗುವುವು. ಆಪ್ತರ ಭೇಟಿ. ಮನಶ್ಶಾಂತಿ.

ಕಟಕ— ಹೆಚ್ಚು ಜವಾಬ್ದಾರಿಗಳನ್ನು ಹೊರಬೇಕಾಗುವುದು. ಆದಾಯಕ್ಕಿಂತ ವೆಚ್ಚ ಅಧಿಕ. ನಿಮ್ಮ ವಿರೋಧಿಗಳು ಶತ್ರುತ್ವವಾದ ನಡೆಸುವರು. ಮನಸ್ಸಿನ ಅಶಾಂತಿ ಹೆಚ್ಚುವುದು. ಕಲಹವೂ ಉಂಟಾಗಬಹುದು.

ಸಿಂಹ— ಆದಾಯ ವ್ಯಯದ ತಕ್ಕಡಿ ಸರಿ ತೂಗುವುದಿಲ್ಲ. ವ್ಯಾಪಾರ, ಉದ್ಯೋಗದಲ್ಲಿ ನೋಡಬೇಕಾದ ಹಾನಿ ಬೇಗ ವುದು. ಆರೋಗ್ಯ ಚೆನ್ನಾಗಿರುವುದಿಲ್ಲ. ವಿದ್ಯಾರ್ಥಿ, ವಿದ್ಯಾರ್ಥಿನಿಯರಿಗೆ ಉದಾಸೀನ. ಯೋಚಿಸಿದ ಕಾರ್ಯದಲ್ಲಿ ಫಲವಿಲ್ಲ.

ಕನ್ಯಾ— ಇಷ್ಟ ಮಿತ್ರರ ವಿವಾಹವು ಜರುಗುವುದರಿಂದ ಪ್ರವಾಸ. ಕಾರ್ಯಸಿದ್ಧಿ. ಒಳ್ಳೆ ಸಹವಾಸ ಸಿಗುವುದರಿಂದ ಮನಸ್ಸಿಗಾನಂದ. ವಿದ್ಯಾರ್ಥಿ ದೆಸೆಯಲ್ಲಿರುವವರಿಗೆ ಉತ್ತೀರ್ಣತೆ. ಸ್ತ್ರೀಯರಿಂದ ಲಾಭ. ಮಿತ್ರರ ಭೇಟಿ.

ತುಲಾ— ವಿವಾಹಾದಿಗಳ ಬಗ್ಗೆ ಒದಗಿದ್ದ ಅಡಚಣೆಗಳೆಲ್ಲಾ ಈ ವಾರ ದೂರವಾಗಿ, ಕಾರ್ಯ ಜರುಗುವುವು. ಶರೀರ ಸೌಖ್ಯ ಚೆನ್ನಾಗಿರುವುದು. ನೌಕರಿಯಲ್ಲಿ ಸಂಪ್ರೀತ, ಅಧಿಕ. ಮಿತ್ರರಿಂದ ಪ್ರೋತ್ಸಾಹ. ಮಹತ್ವ ಪತ್ರಾಗಮನ.

ವೃಶ್ಚಿಕ— ನಿಮ್ಮ ಆರೋಗ್ಯ ಚೆನ್ನಾಗಿದ್ದು ಉತ್ಸಾಹ ಹೆಚ್ಚಿ ಹೊಸ ಯೋಜನೆಗಳನ್ನು ಕೈಗೊಳ್ಳುವಿರಿ. ಪ್ರವಾಸದಲ್ಲಿ ಉತ್ತಮ ಫಲ. ಹಣಕಾಸಿನ ಪರಿಸ್ಥಿತಿಯಲ್ಲಿ ಶುಭ ಕಾರ್ಯಗಳು ಜರುಗುವುವು. ಆಪ್ತರ ಭೇಟಿ.

ಧನುಸ್ಸು— ವ್ಯವಹಾರದಲ್ಲಿ ಕಹಿ ಅನುಭವಗಳ ಸೃಷ್ಟಿ. ಮೇಲಧಿಕಾರಿಗಳಿಂದ ಅಸಮ್ಮತಿಯ ಚುಚ್ಚು ಮಾತುಗಳು; ಆಪ್ತ ಮಿತ್ರರೊಬ್ಬರ ನೆರವಿನಿಂದ ಇವೆಲ್ಲಾ ದೂರವಾಗುವುವು. ಕಾಲ ನೋವು ತೀರುವುದು. ಆರೋಗ್ಯ ಉತ್ತಮ.

ಮಕರ— ಕಾಳ್ಗಿಚ್ಚಿನಿಂದ ವರ್ಷಕ್ಕೆ ಈ ವಾರವನ್ನು ದಾಟಬೇಕಾಗಿದೆ. ವ್ಯಾಪಾರ, ವ್ಯವಹಾರಗಳಲ್ಲಿ ಅವಮಾನ ಉಂಟಾಗಬಹುದು. ಮನಸ್ಸಿನ ಅತೃಪ್ತಿ ಹೆಚ್ಚುವುದು. ಸ್ವಜನರೇ ತಿರುಗಿ ಬೀಳುವರು. ಪ್ರವಾಸ ನಿಷ್ಫಲ. ಖರ್ಚಿನಲ್ಲಿ ಹಿಡಿತ ಮಾಡಿ.

ಘೂರ್ಕರ ದಂಗೆ

ಕಳೆದ ಮಾರ್ಚ್ ತಿಂಗಳಲ್ಲಿ ಡೆಹರಾಡೂನಿನಲ್ಲಿ ಘೂರ್ಖಾ ಸಿಪಾಯಿಗಳು ದಂಗೆ ಎದ್ದಿದ್ದರೆಂದು ಅವರನ್ನು ವಿಚಾರಣೆಗೆ ಗುರಿಪಡಿಸಲಾಗಿದ್ದಿತು. ಆ ಪೈಕಿ ೧೨ ಮಂದಿಗೆ ಒಂದು ವರ್ಷದಿಂದ ೭ ವರ್ಷಗಳ ಶಿಕ್ಷೆಯನ್ನು ವಿಧಿಸಿ ಮಿಲಿಟರಿ ಕೆಲಸದಿಂದ ವಜಾ ಮಾಡಲಾಗಿದೆ.

ಕುಂಭ— ಆರೋಗ್ಯ ಉತ್ತಮವಾಗಿರುವುದು. ಮನಸ್ಸಿನ ಹರ್ಷ ಹೆಚ್ಚುವುದು. ಯೋಚಿಸಿದ ಕಾರ್ಯಗಳೆಲ್ಲಾ ಜಯ. ವಿವಾಹಾದಿಗಳು ಸ್ವಲ್ಪ ಗಡಿಬಿಡಿಯಿಂದ ಜರುಗುವುವು. ದಾಂಪತ್ಯಕ್ಕಾಗಿ ವೆಚ್ಚ. ನೌಕರಿ, ಉದ್ಯೋಗಗಳಲ್ಲಿ ಯಶಸ್ಸು.

ಮೀನ— ಒಂದು ಮಹತ್ವ ಪತ್ರ ಕೈಗೆ ಸಿಕ್ಕಿ ನಿಮ್ಮ ಯೋಚನೆ ಫಲಿಸುವುದು. ಆರೋಗ್ಯ ಉತ್ತಮ. ಮನೆಯಲ್ಲಿ ಶುಭಕಾರ್ಯಗಳಿಗಾಗಿ ಸಡಗರ. ನೌಕರಿಯ ಆರ್ಥಿಕ ಸ್ಥಿತಿ ಉತ್ತಮವಾಗಿರುವುದು. ಮಿತ್ರರ ಭೇಟಿ. ಮನಸ್ಸಿಗೆ ಆನಂದ.

ಸದರ್ನ್ ಇಂಡಿಯಾದಲ್ಲಿ
ಹೆಸರುವಾಸಿಯಾದ
'ಕಣ್ಣನ್'
ಸುಗಂಧ ಅಡಿಕೆಯ ಪುಡಿ
ಅರ್ಧ ಸೇರು ಟಿನ್ನುಗಳು
ಮತ್ತು ಪೊಟ್ಟಣಗಳು
-: ಹೋಲ್ ಏಜೆಂಟ್ :-
ಮಂಜುನಾಥ ಸ್ಟೋರ್ಸ್,
ಎಸ್. ಮಾಧವರಾವ್ ಸರ್ಕಲ್, ಮೈಸೂರು
-: ತಯಾರಿಸುವವರು :-
ಎಂ. ಕಣ್ಣಪ್ಪ ಚೆಟ್ಟಿಯಾರ್
32, ಪೀರಾಬಲ್ಲಿ ಸ್ಟ್ರೀಟ್,
ಬೆಂಗಳೂರು ದಂಡು.

ನಿಮ್ಮ ಮೈ ಮೊಕವುಳ್ಳ
ಹೊಳೆಯಬೇಕೆ? ನಿಮ್ಮ
ಲಾವಣ್ಯ ಮೋಹಕವಾಗಬೇಕೆ
ಹಾಗಾದರೆ
ನಮ್ಮ ಮೈಸೂರು ಸ್ಯಾಂಡಲ್
ಸೋಪನ್ನೇ ಉಪಯೋಗಿಸಿ!
ಮೈಸೂರು-
ಸ್ಯಾಂಡಲ್
ಸೋಪ್!
ಅನೇಕರಿಗೆ ಸೌಂದರ್ಯವನ್ನು
ಸಂಪಾದಿಸಿ ಕೊಟ್ಟಿದೆ. ನಿಮಗೂ
ಸಂಪಾದಿಸಿ ಕೊಡುತ್ತದೆ.
ಜನರಲ್ ಸ್ಟೋರು
, ಎಲ್ಲೆಲ್ಲೂ ದೊರೆಯುತ್ತದೆ.
ಗವರ್ನಮೆಂಟ್ ಸೋಪ್ ಫ್ಯಾ
ಬೆಂಗಳೂರು

Edited, printed and publi
A. R. Nagarajan at the Sadh
D Subbiah Road, Mysore

ಫೋನ್ ನಂ. 392 || ವಂದೇ ಮಾತರಂ || ಬಿಡಿಪ್ರತಿ 3 ಕಾಸು



ಸಂಪುಟ ೪] ಮಂಗಳವಾರ ೪—೬—೪೬ [ಸಂಚಿಕೆ ೩೩೧

ಇಂಡಿಯಾ ಸಚಿವರಾದ ಉಸ್ಮಾನರ ರಾಜೀನಾಮೆ

ವಯಸ್ಕರ ವಿದ್ಯಾಭ್ಯಾಸಕ್ಕೆ ಪ್ರೋತ್ಸಾಹ

(ಸ್ವಂತ ವರದಿ) [ಬೆಂಗಳೂರು ೪

ಈ ಮಧ್ಯಾಹ್ನ ದಿವಾನರ ಅಧ್ಯಕ್ಷತೆಯು ಪ್ರಜಾ ಪ್ರ|| ಸಭೆ ಆರಂಭವಾಯಿತು. ವಯಸ್ಕರ ವಿದ್ಯಾಭ್ಯಾಸಕ್ಕಾಗಿ ೩,೪೪,೦೦೦ ರೂ. ಕಳೆದ ಸಾಲಿನಲ್ಲಿ ಮಂಜೂರಾಯಿತು. ಗಂಡಸರಿಗೆ ೪೨೧೯, ಹೆಂಗಸರಿಗೆ ೩೧೧ ಶಾಲೆಗಳು ತೆರೆಯಲ್ಪಟ್ಟುವು. ೮೬,೭೪೮ ಗಂಡಸರೂ, ೩,೨೦೮ ಹೆಂಗಸರೂ ಅವುಗಳಲ್ಲಿ ಓದಿದವರು. ೧೩೬೧ ಜನ ಉಪಾಧ್ಯಾಯರು, ೬೫೭ ಜನ ಖಾಸಗಿಯವರೂ ಕೆಲಸ ಮಾಡಿದರು. ಅಕ್ಷರಸ್ಥನಾದ ಪ್ರತಿಯೊಬ್ಬ ವಿದ್ಯಾರ್ಥಿಗೂ ತಲೆಗೆ ಎರಡು ರೂಪಾಯಿ ಯಂತೆ ಉಪಾಧ್ಯಾಯರುಗಳಿಗೆ ಸಂಭಾವನೆ ಕೊಡಲಾಗುತ್ತಿದೆ- ಎಂದು ಸರ್ಕಾರದವರು ಪ್ರಶ್ನೋತ್ತರ ಕಾಲದಲ್ಲಿ ತಿಳಿಸಿದರು.

ವೈಟ್ ಫೀಲ್ಡಿನಿಂದ ದೇವನಗುಂದಿಗೆ ಹೋಗುವ ರಸ್ತೆಯಲ್ಲಿ ದಕ್ಷಿಣ ಪಿನಾಕಿನಿ ನದಿಗೆ ಸೇತುವೆಯನ್ನು ಕಟ್ಟಿಸಲು ಜಿಲ್ಲಾಬೋರ್ಡಿನಿಂದ ಪ್ಲಾನು ಬಂದ ಮೇಲೆ ಅದನ್ನು ಪರಿಶೀಲಿಸಲಾಗುವುದೆಂದೂ ಸಹ ಸರ್ಕಾರದವರು ತಿಳಿಸಿದರು.

ಬಜೆಟ್ ಭಾಷಣ

ಶ್ರೀ|| ಎಸ್. ಟಿ. ಸುಬ್ಬಯ್ಯನವರು ಬಜೆಟ್ಟಿನ ಮೇಲೆ ಭಾಷಣ ಮಾಡುತ್ತಾ, ನಮಗೆ ನಿಮ್ಮಲ್ಲಿ ವಿಶ್ವಾಸವಿಲ್ಲ, ನಿಮಗೆ ನಮ್ಮಲ್ಲಿ ನಂಬಿಕೆಯಿಲ್ಲ. ಪ್ರಜಾಪ್ರತಿನಿಧಿ ಸರ್ಕಾರವನ್ನು ಸ್ಥಾಪಿಸುವುದೇ ಇದಕ್ಕೆ ಪರಿಹಾರ ಎಂದು ಹೇಳಿದರು.

ಮಿ|| ಮಹಬೂಬ್ ಸಾಬ್ ಎಂಬುವರು ಮಾತನಾಡಿ ಮುಸಲ್ಮಾನರಿಗೆ ಪ್ರತ್ಯೇಕ ಚುನಾವಣೆ ಬೇಕೆಂದೂ, ದಂಡಿನಲ್ಲಿ ಈ ಪದ್ಧತಿ ಇರುವುದರಿಂದ ಯಾವ ತೊಂದರೆಯೂ ಇರುವುದಿಲ್ಲವೆಂದೂ ಹೇಳಿದರು.

ಶ್ರೀ|| ಬಿ. ಎಲ್. ನಾರಾಯಣಸ್ವಾಮಿಯವರು ಕೇಂದ್ರದಿಂದ ಬರುವ ವರಮಾನವು ಧರ್ಮಸ್ವಾಧ್ಯ ಆದಾಯವಲ್ಲವೆಂದೂ ಅದನ್ನು ತಪ್ಪಿಸಬೇಕೆಂದೂ, ಚಿನ್ನದ ಗಣಿಗಳನ್ನು ನಮ್ಮ ಸ್ವಾಧೀನಕ್ಕೆ ತೆಗೆದುಕೊಳ್ಳಬೇಕೆಂದೂ ಸೂಚಿಸಿದರು. ಎಲ್ಲಾ ಜಿಲ್ಲೆಗಳಲ್ಲೂ ಕಾಲೇಜುಗಳನ್ನು ಸ್ಥಾಪಿಸಬೇಕು, ಪ್ರತಿಯೊಬ್ಬ ಪ್ರಜೆಗೂ ಆಹಾರವನ್ನು ಒದಗಿಸಬೇಕು, ಇದಕ್ಕೆ ಜವಾಬ್ದಾರಿ ಸರ್ಕಾರವು ಕೂಡಲೇ ಸ್ಥಾಪನೆಯಾಗಬೇಕು ಎಂದು ಹೇಳಿದರು.

ಭೂಪಾಲಂರವರ ಮೇಲೆ ಮಾನನಷ್ಟ ಮೊಕದ್ದಮೆ

(ಸ್ವಂತ ವರದಿ) ಬೆಂಗಳೂರು ೪

ಮುಸ್ಲಿಂಲೀಗ್ ಕಾರ್ಯದರ್ಶಿಗಳೂ ಪ್ರ|| ಪ್ರ|| ಸಭೆಯ ಸದಸ್ಯರೂ ಆದ ಮಿ|| ಎ. ವಿ. ಒಲಿಯವರು ಶ್ರೀ ಭೂಪಾಲಂ ಚಂದ್ರಶೇಖರಯ್ಯನವರ ಮೇಲೆ ಮೊದಲನೇ ಮ್ಯಾಜಿಸ್ಟ್ರೇಟ್ ಕೋರ್ಟಿನಲ್ಲಿ ಮಾನನಷ್ಟದ ಮೊಕದ್ದಮೆ ಹೂಡಿರುವರು. ಮೈಸೂರು ಮುಸಲ್ಮಾನರ ವಿಚಾರದಲ್ಲಿ ಮುಸ್ಲಿಂ ಲೀಗಿನವರ ವರ್ತನೆ ಬಗ್ಗೆ ಭೂಪಾಲಂರವರು ಕೊಟ್ಟಿರುವ ಹೇಳಿಕೆಗಳೇ ಇದಕ್ಕೆ ಕಾರಣವೆಂದು ತಿಳಿದುಬಂದಿದೆ.

ಅಧ್ಯಕ್ಷ ಚುನಾವಣೆ ಮುಂದಕ್ಕೆ

ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯನ್ನು ಮುಂದೂಡಲಾಗಿದೆಯೆಂದು ಗೊತ್ತಾಗಿದೆ. ಬರುವ ೧೧, ೧೭ನೇ ತಾರೀಖುಗಳಲ್ಲಿ ನಡೆಯುವ ಕಾಂ|| ಕಾರ್ಯಕಾರಿ ಸಭೆ

ಜವಾಬ್ದಾರಿ ಸರ್ಕಾರಕ್ಕಾಗಿ ಮಹಾಸ್ವಾಮಿಗಳಲ್ಲಿ ಮನವಿ

ಪ್ರ|| ಪ್ರ|| ಸಭೆಯಲ್ಲಿ ಸಮರ್ಪಣೆ

ಬೆಂಗಳೂರು ೩

ಶ್ರೀಮನ್ ಮಹಾರಾಜರವರಿಗೆ ಒಪ್ಪಿಸುವುದಕ್ಕಾಗಿ ಪ್ರ|| ಪ್ರ|| ಸಭೆಯ ೬೦೩ ಜನ ಸದಸ್ಯರು ರುಜು ಮಾಡಿದ ಈ ಕೆಳಗೆ ಕಂಡ ಮನವಿಯನ್ನು ವಿರೋಧ ಕಾಂ|| ಪಕ್ಷದ ನಾಯಕರಾದ ಶ್ರೀ ಕೆ. ಹನುಮಂತಯ್ಯನವರು ಈ ದಿನ ಸಭೆಯಲ್ಲಿ ದಿವಾನರಿಗೆ ಸಲ್ಲಿಸಿದರು. —

ಶ್ರೀಮನ್ಮಹಾಸ್ವಾಮಿಯವರೂ ಕರ್ನಾಟಕ ಸಿಂಹಾಸನಾಧೀಶ್ವರರೂ ಆದ ಶ್ರೀ ಜಯಚಾಮರಾಜೇಂದ್ರ ಒಡೆಯರ್ ಬಹದ್ದೂರ್ ರವರ ದಿವ್ಯ ಸನ್ನಿಧಿಯಲ್ಲಿ, ಮೈಸೂರು ಸಂಸ್ಥಾನದ ನಾನಾ ಭಾಗಗಳಿಂದ ಪ್ರತಿನಿಧಿ ಸಭೆಗೆ ಚುನಾಯಿತರಾಗಿ ಬಂದಿರುವ ಸದಸ್ಯರುಗಳು ಅತ್ಯಂತ ರಾಜಭಕ್ತಿಯಿಂದಲೂ ವಿನಯದಿಂದಲೂ ವಿಜ್ಞಾಪಿಸಿಕೊಳ್ಳುವುದೇನೆಂದರೆ, ಮಹಾಸ್ವಾಮಿ,

ಸಮಗ್ರ ಭಾರತದ ಭಾವಿ ರಾಜ್ಯ ಸ್ವರೂಪುಗೊಳ್ಳುತ್ತಿರುವ ಈ ಪರ್ವಕಾಲದಲ್ಲಿ ದೇಶೀಯ ಸಂಸ್ಥಾನಗಳು ತಮ್ಮ ತಮ್ಮ ಹಿತದೃಷ್ಟಿಯಿಂದ ಆ ರಾಜ್ಯಾಂಗ ಘಟನಾ ಕಾರ್ಯದಲ್ಲಿ ಸೇರಲು ಅನುಕೂಲಿಸುವಂತೆ ಸಂಸ್ಥಾನಗಳಲ್ಲಿಯೂ ಬ್ರಿಟಿಷ್ ಪ್ರಾಂತ್ಯಗಳ ರಾಜ್ಯಾಂಗದ ಸ್ವಾತಂತ್ರ್ಯದ ಮಟ್ಟಕ್ಕೆ ಸಮಾನವಾಗ ಬೇಕೆಂದು ದೇಶೀಯ ಸಂಸ್ಥಾನಗಳನ್ನು ಕೇಳಿಕೊಳ್ಳುವುದೂ ಎಂದು ಹೇಳುವುದು ಅವಶ್ಯಕವಾಗಿದೆ.

ಜಗತ್ತಿನ ಕಣ್ಣುಗಳು ಭಾರತದ ಕಡೆಗೂ ಭಾರತದ ಕಣ್ಣುಗಳು ದೇಶೀಯ ಸಂಸ್ಥಾನಗಳ ಕಡೆಗೂ ಇವೆ. ಭಾರತದಲ್ಲಿ

.....

ಯಲ್ಲಿ ಚುನಾವಣೆ ದಿನವನ್ನು ಗೊತ್ತು ಮಾಡಲಾಗುವುದು

ಗೃಹ ಸಮಿತಿ

ಪ್ರ|| ಪ್ರ|| ಸಭೆಯ ಗೃಹ ಸಮಿತಿಗೆ ಶ್ರೀ ಶ್ರೀಗಳಾದ ಬಿ. ಎಲ್. ನಾರಾಯಣಸ್ವಾಮಿ, ಮಂಡಲಗಿರಿಗೌಡ, ದೇವರ ಕೊಂಡಪ್ಪ, ಶ್ರೀನಾಥ ಸುಬ್ಬಣ್ಣ ಈ ನಾಲ್ವರು ಕಾಂಗ್ರೆಸ್ ಸದಸ್ಯರೂ ಶ್ರೀಗಳಾದ ಪುಟ್ಟಯ್ಯ, ಮರುಳಪ್ಪ, ನಾಗಿನಾಳ್ ಪಟ್ಟಮೊತ್ತು ರವರೂ ಚುನಾಯಿತರಾಗಿದ್ದಾರೆ.

ದೇವನಹಳ್ಳಿಯಲ್ಲಿ ಒಂದು ಪ್ರೈಸ್ಕೂಲ್ ಸ್ಥಾಪಿಸಲು ಸರ್ಕಾರದವರು ಅನುಮತಿ ಇತ್ತಿದ್ದಾರೆ.

ಎಲ್ಲಿಯೂ ಪ್ರಜಾಪ್ರತಿನಿಧಿ ಸಭೆಗಳು ಇಲ್ಲದಿದ್ದ ಕಾಲದಲ್ಲಿ ಅರವತ್ತು ವರ್ಷಗಳ ಹಿಂದೆ ಮೈಸೂರು ಸಂಸ್ಥಾನಾಧೀಶರು ಪ್ರಜಾಪ್ರತಿನಿಧಿ ಸಭೆಯನ್ನು ಸ್ಥಾಪಿಸಿ ಮೈಸೂರು ಸಂಸ್ಥಾನದ ಅದಲಿಕ ಶ್ರೇಷ್ಠತೆಯನ್ನು ವ್ಯಕ್ತಪಡಿಸಿ ಕೀರ್ತಿಗಳಿಸಿದರು. ಇತ್ತೀಚೆಗೆ ಪ್ರಜಾಪ್ರತಿನಿಧಿ ಸಂಸ್ಥೆಗಳನ್ನು ಪಡೆದ ಪ್ರಾಂತ್ಯಗಳು ಬಹುಮಟ್ಟಿಗೆ ಸ್ವಾತಂತ್ರ್ಯವನ್ನು ಅನುಭವಿಸುವುದರಿಂದ ಇದುವರೆಗ ಸಂಸ್ಥಾನದ ಪ್ರಜೆಗಳು ಮಹಾಸ್ವಾಮಿಯವರ ಆಶ್ರಯದಲ್ಲಿ ಪ್ರಜಾಪ್ರತಿನಿಧಿ ಪ್ರಭುತ್ವವನ್ನು ಅಪೇಕ್ಷಿಸುವುದು ಸಹಜವೂ ಸ್ವಾಭಾವಿಕವೂ ಆಗಿದೆ.

ಮಹಾಸ್ವಾಮಿಯವರು ಸಹ ಈ ಸಭೆಯಲ್ಲಿ ತಮ್ಮ ದಿವ್ಯವಾಣಿಯಿಂದ ಪ್ರಜಾಪ್ರಭುತ್ವದಲ್ಲಿಯೂ ಮತ್ತು ಮೈಸೂರಿನ ಜನರ ಗುಣ ವಿಶೇಷಗಳಲ್ಲಿಯೂ ನಂಬುಗೆ ಇರುವುದಾಗಿ ಅಪ್ಪಣೆ ಕೊಡಿಸಿರುವರಾಗಿದೆ.

ಪ್ರಜಾಪ್ರತಿನಿಧಿ ಸಭೆಯೂ ಇಂದಿನ ಮಂತ್ರಿಮಂಡಲವನ್ನು ಅನೇಕ ಬಾರಿ ಸೋಲಿಸಿ ಮಂತ್ರಿಮಂಡಲದಲ್ಲಿ ತನ್ನ ಅವಿಶ್ವಾಸವನ್ನು ವ್ಯಕ್ತಪಡಿಸಿದೆ. ಆದ್ದರಿಂದ, ಯುದ್ಧಾನಂತರದ ಯೋಜನೆಗಳ ಬಗ್ಗೆ ನಿಸ್ಸಂದೇಹವಾಗಿ ಪ್ರಜೆಗಳ ... ಸ್ವಾತಂತ್ರ್ಯದ ಸಮಸ್ಯೆಗಳನ್ನು ಬಗೆಹರಿಸಬೇಕಾದರೆ ಪ್ರಜಾಪ್ರತಿನಿಧಿ ಸಭೆಗೆ ಜವಾಬ್ದಾರಿಯಾದ ಮಂತ್ರಿಮಂಡಲದಿಂದಲೇ ಸಾಧ್ಯ. ಈ ದಿನದ ಮಂತ್ರಿಮಂಡಲದಿಂದ ಅದು ಸಾಧ್ಯವಾಗಲಾರದು.

ಆದ್ದರಿಂದ ಮಹಾಸ್ವಾಮಿಯವರು ವಿದ್ಯಾವಂತರನ್ನು ಕಾರ್ಯಾಂಗಕ್ಕೆ ತಂದು ಸಂಸ್ಥಾನದ ಪ್ರಜೆಗಳ ಅಪೇಕ್ಷೆಗಳನ್ನು ಈಡೇರಿಸುವುದು ಅತ್ಯಗತ್ಯವಾಗಿದೆ.

ಮಹಾಸ್ವಾಮಿಯವರು ಅಸ್ತಿತ್ವದಲ್ಲಿ ಜವಾಬ್ದಾರಿ ಸರ್ಕಾರವನ್ನು ಕೂಡಲೇ ಸ್ಥಾಪಿಸಬೇಕು.

ಪ್ರಜಾಪ್ರತಿನಿಧಿ ಸಭೆಗೆ ಅಧ್ಯಕ್ಷರನ್ನು ಆರಿಸಿಕೊಳ್ಳುವ ಹಕ್ಕನ್ನು ದಯಪಾಲಿಸಬೇಕು.

ಭಾರತದ ರಾಜ್ಯಾಂಗ ಘಟನೆ ಸಭೆಗೆ ಬ್ರಿಟಿಷ್ ಪ್ರಾಂತ್ಯಗಳ ಪ್ರತಿನಿಧಿಗಳಂತೆ ಬ್ರಿಟಿಷ್ ಪ್ರಾಂತ್ಯಗಳಲ್ಲಿ ಏರ್ಪಡಿಸಿರುವಂತೆ ಸದಸ್ಯರನ್ನು ಕಳುಹಿಸಲು ಏರ್ಪಾಟು ಮಾಡಬೇಕು.

ಇದೇ ಸಂಸ್ಥಾನದ ಪ್ರಜೆಗಳ ಪ್ರಾರ್ಥನೆ ಮತ್ತು ಇದನ್ನು ಮಹಾಸ್ವಾಮಿಯವರು ನೆರವೇರಿಸುತ್ತಾರೆಂದು ಆಶಿಸುತ್ತೇವೆ.

ಮಹಾಸ್ವಾಮಿಯವರ ನೈಜ ರಾಜ್ಯಭಕ್ತ ಪ್ರಜಾಪ್ರತಿನಿಧಿಗಳಾದ ನಮ್ಮ ...

ಭಾರತ ಸಚಿವರ ರಾಜೀನಾಮೆ

ವೈಸರಾಯ್ ಮಂತ್ರಿಮಂಡಲದ ಸದಸ್ಯರಾದ ಸರ್|| ಮಹಮದ್ ಉಸ್ಮಾನರು ದೆಹಲಿಯನ್ನು ಬಿಟ್ಟು ತಮ್ಮ ಸ್ವಸ್ಥಾನವಾದ ಮದರಾಸಿಗೆ ವಾಪಸು ತೆರಳಲು ನಿರ್ಧರಿಸಿದ್ದಾರೆ. ರಾಜಕೀಯ ಪಕ್ಷಗಳ ಇಷ್ಟಾನುಸಾರ ತಮ್ಮ ರಾಜೀನಾಮೆಯು ಅಂಗೀಕಾರವಾಗಲು ಅಥವಾ ಆಗದಿರಲು ಸಿದ್ಧರಾಯಿರಾರೆಂದು ಅವರು ಅಭಿಪ್ರಾಯಪಟ್ಟಿರುವಂತೆ ವರದಿಯಾಗಿದೆ. ಇನ್ನೊಬ್ಬ ಸಚಿವರಾದ ಸರ್|| ಆರ್ದೇಶರ್ ದಲಾಲ್ ರವರೂ ಡಾಕ್ಟರಿಂಗಿನ ತಜ್ಞರಿರುವ ನಿವಾಸದಲ್ಲಿ ವಿಶ್ರಾಂತಿ ಪಡೆಯುತ್ತಿದ್ದಾರೆ. ದೆಹಲಿಗೆ ಅವರು ಹಿಂತಿರುಗುವ ಅಭಿಪ್ರಾಯವಿಲ್ಲ. ಇತ್ತರು ಸರ್ಕಾರದ ಸದಸ್ಯರು ಆಗಲೇ ತಮ್ಮ ಊರಿಗೆ ತೆರಳಿದ್ದಾರೆ. ಸರ್ ಎಡ್ವರ್ಡ್ ಬೆಂಥಾಲರು ಶೀಘ್ರವೇ ಹೋಗಲು ಸಿದ್ಧರಾಗುತ್ತಿದ್ದಾರೆ. ಸರಬರಾಜು ಮಂತ್ರಿಗಳಾದ ಸರ್ ಪಾಣಂದಿಕರ್ ತಮ್ಮ ಹಳೆಯ ಸ್ಥಾನಕ್ಕಾಗಲೀ ಅಥವಾ ಆಸ್ಟ್ರೇಲಿಯಾ ಗೌರ್ನರಾಗಿಯಾಗಲೀ ಹೋಗಬಹುದೆಂದು ವರದಿಯಾಗಿದೆ.

ತುರ್ಕಿಯಲ್ಲಿ ಭೂಕಂಪ

ಪೂರ್ವ ತುರ್ಕಿಯ ಮುಷ್ ಎಂಬಲ್ಲಿ ಕಳೆದ ಶನಿವಾರ ಸಂಭವಿಸಿದ ಭಾರೀ ಭೂಕಂಪದಿಂದ ೬೨೦ ಜನರು ಮಡಿದು ೧೭೪ ಜನರಿಗೆ ಗಾಯಗಳಾದವೆಂದೂ ಹನ್ನೊಂದು ಗ್ರಾಮಗಳಿಗೆ ಬಹಳ ನಷ್ಟ ಉಂಟಾಯಿತೆಂದೂ ವರದಿಯಾಗಿದೆ.

ಪ್ರಜಾ ಪಕ್ಷದವರ ಮನವಿ

(ಸ್ವಂತ ವರದಿ) ಬೆಂಗಳೂರು ೪

ನಿನ್ನೆ ಪ್ರ|| ಪ್ರ|| ಸಭೆಯ ಸದಸ್ಯರು ಒಪ್ಪಿಸಿದಂತೆಯೇ ಪ್ರಭುಗಳಿಗೆ ಒಪ್ಪಿಸಲು ಪ್ರಜಾ ಪಕ್ಷದವರೂ ಒಂದು ಮನವಿಯನ್ನು ಈ ದಿನ ದಿವಾನರಿಗೆ ಅವರ ಕೊಠಡಿಯಲ್ಲಿ ಅರ್ಪಿಸಿದರು. ಪಕ್ಷದ ನಾಯಕರಾದ ಶ್ರೀ ವೈ. ಧರ್ಮಪ್ಪನವರು ಅದನ್ನು ಸಲ್ಲಿಸಿದರು. ದಿವಾನರಲ್ಲಿ ಕೇಂದ್ರೀಕೃತವಾಗಿರುವ ಅಧಿಕಾರಗಳನ್ನು ತಕ್ಷಣ ಮಂತ್ರಿಗಳಿಗೆ ಹಂಚುವುದು ಮತ್ತು ಕೋಮುವಾರು ಸಂಖ್ಯೆಯ ಗುಣವಾಗಿ ಸ್ಥಾನಗಳನ್ನು ಹಂಚುವುದು ಈ ಎರಡು ಅಂಶಗಳನ್ನು ಅವರು ಮುಖ್ಯವಾಗಿ ಸೂಚಿಸಿದ್ದರು.

ಈ ಶಿಫಾರಸುಗಳನ್ನು ಅಧ್ಯಕ್ಷರು ಈ ದಿನ ತಿಳಿಸಿದರು.

ಕೆಳಕಂಡ ಸಂಸ್ಥಾನದ ವಯಸ್ಕರ ಶಿಕ್ಷಣ ಕಾರ್ಯಕ್ರಮವನ್ನು ಜಾರಿಗೆ ತರುವ ಸಲುವಾಗಿ ಪ್ರತಿ ಜಿಲ್ಲೆಗೆ ಒಬ್ಬ ಪ್ರತಿನಿಧಿಯ ಸ್ಥಾನಕ್ಕೆ ... ೧೦೦೦ ರೂ. ವೆಚ್ಚದಲ್ಲಿ ಯೋಜಿಸಿದ್ದಾರೆ.

ಜಬೀರ್ ಜು ... ಪ್ರಾರ್ಥನೆಯನ್ನು ... ಮಹತ್ವದ ಸಂಸ್ಥಾನಿಕರ ಮಹಾರಾಜರನ್ನು ... ಕೇಂದ್ರ ಸರ್ಕಾರದ ಭಾರತೀಯರನ್ನು ... ಕೊಂಡಿಸಿ ಪ್ರಜೆಗಳ ಹಿತ ... ನೆರವೇರಿಸಬೇಕೆಂದೂ, ಕನ್ನಡ ... ಸ್ಥಾನಗಳನ್ನು ... ಸಂಸ್ಥಾನದ ದೇಶೀಯ ... ಪ್ರಾರ್ಥಿಸಿದ್ದಾರೆ.

ಜನಾಭಿಪ್ರಾಯ ... ಕಾಲ ... ದ ಒದಗಿಸಬೇಕೆಂದು ... ತಿಳಿಸಿದ್ದಾರೆ.

ಸಾಧ್ವಿ

ತಾ|| ೪-೬-೪೬ ಮಂಗಳವಾರ

ಪ್ರಭುಗಳಲ್ಲಿ ಮೊರೆ

"ನನ್ನ ಪ್ರಜೆಗಳಲ್ಲಿ ನನಗೆ ಸಂಪೂರ್ಣವಾದ ನಂಬಿಕೆ ಇದೆ; ಪ್ರಜಾಪ್ರಭುತ್ವದಲ್ಲಿ ನನಗೆ ಅಚಲವಾದ ವಿಶ್ವಾಸವಿದೆ", ಎಂದು ಹೇಳುವ ಪ್ರಭುಗಳು ಒಪ್ಪಿಗೆ ಕೊಟ್ಟು ಐದು ವರ್ಷಗಳಾಗುತ್ತ ಹೊಸ ರಾಜ್ಯಾಂಗ ಶಾಸನದ ಪ್ರಕಾರ ಸ್ಥಾಪಿತವಾದ ಪ್ರಜಾಪ್ರತಿನಿಧಿ ಮತ್ತು ನ್ಯಾಯ ವಿಧಾಯಕ ಸಭೆಗಳ ಜಂಟಿ ಅಧಿವೇಶನದ ಆರಂಭೋತ್ಸವದ ಕಾಲದಲ್ಲಿ ಅವರು ಈ ವಾಕ್ಯಗಳನ್ನು ನುಡಿದರು. ಸಂಸ್ಥಾನದ ರಾಜಕೀಯ ಪ್ರಗತಿಯನ್ನು ಸಾಧಿಸಲು ಪ್ರಭುಗಳ ಭಾವನೆಯು ಅಸ್ತಿಭಾರ ಪ್ರಾಯವಾಗಿರುವುದೆಂಬ ಅಭಿಪ್ರಾಯವನ್ನು ಎಲ್ಲರಲ್ಲಿಯೂ ಮೂಡಿಸಿತು. ಅದಕ್ಕೆ ಅನುಗುಣವಾಗಿ ದಿವಾನರೂ, ನವ ಪ್ರಜಾಪ್ರತಿನಿಧಿ ಸಭೆಯ ಆರಂಭದಲ್ಲಿ ಭಾಷಣ ಮಾಡಿದಾಗ ಹೊಸ ಸುಧಾರಣೆಗಳನ್ನು ಅತ್ಯಂತ ಉದಾರವಾದ ರೀತಿಯಲ್ಲಿ ಜಾರಿಗೆ ತರಲಾಗುವುದೆಂದು ತಿಳಿಸಿದರು.

ಮೇಲ್ಕಂಡ ಭರವಸೆಗಳನ್ನನುಸರಿಸಿ ಸಂಸ್ಥಾನದ ಸಕಲ ಪಂಗಡಗಳ ನಾಯಕರೂ ಸರ್ಕಾರದವರಲ್ಲಿ ಜವಾಬ್ದಾರಿ ಸರ್ಕಾರದ ಸ್ಥಾಪನೆಗಾಗಿ ಒತ್ತಾಯವನ್ನು ಮಾಡುತ್ತ ಬಂದಿದ್ದಾರೆ. ಇದರಲ್ಲಿ ಯಾವ ಜಾತಿ, ಮತ ಕೋಮು ವ ಪಕ್ಷ ಪಂಗಡಗಳ ಭೇದವೂ ಇಲ್ಲ. ಕಾಂಗ್ರೆಸ್ಸಿನವರೂ, ಹಿಂದೂ ಮಹಾಸಭೆಯವರೂ, ರಾಷ್ಟ್ರೀಯ ಪಕ್ಷದವರೂ, ಮುಸ್ಲಿಂ ಲೀಗಿನವರೂ ಮತ್ತು ಇತರ ಸ್ವತಂತ್ರರೂ ಸಹ ಈ ಬೇಡಿಕೆಯನ್ನು ಮಂಡಿಸುತ್ತಲೇ ಬಂದಿದ್ದಾರೆ. ಇದುವರೆಗೆ ಈ ಕೋರಿಕೆಯು ಸಾರ್ವಜನಿಕ ಕ್ಷೇತ್ರದಲ್ಲಿ ನಡೆಯುತ್ತಿತ್ತು. ಈಗ ಶಾಸನ ಬದ್ಧವಾದ ರೀತಿಯಲ್ಲಿ ಶಾಸನ ಸಭೆಯೊಂದರಲ್ಲಿ ಚುನಾಯಿತ ಪ್ರಜಾಪ್ರತಿನಿಧಿಗಳ ಮೂಲಕ ಕ್ರಮ ಪ್ರಕಾರವಾಗಿ ನಡೆದಿರುತ್ತದೆ. ಪ್ರಜಾಪ್ರತಿನಿಧಿ ಸಭೆಯ ಸದಸ್ಯರಲ್ಲಿ ಇನ್ನೂರಕ್ಕೆ ಮೇಲ್ಪಟ್ಟ ಸದಸ್ಯರು ರುಜು ಹಾಕಿ ಪ್ರಭುಗಳಿಗೆ ಸಲ್ಲಿಸಲು ಒಂದು ಮನವಿಯನ್ನು ದಿವಾನರಿಗೆ ಒಪ್ಪಿಸಿದ್ದಾರೆ. ಈ ಸಭೆಯ ಇತಿಹಾಸದಲ್ಲಿ ಇದೊಂದು ಮುಖ್ಯ ಪ್ರಕರಣವೆಂದು ನಾವು ಭಾವಿಸುತ್ತೇವೆ. ಈ ರೀತಿ ಕ್ರಮ ಪ್ರಕಾರವಾಗಿ ಈ ಸಭೆಯವರು ಪ್ರಭುಗಳಿಗೆ ಮೊರೆಯಿಡುತ್ತಿರುವುದು ಇದೇ ಮೊದಲೆಂದು ತಿಳಿದುಬಂದಿದೆ.

ಸಭೆಯ ಎಲ್ಲಾ ಸದಸ್ಯರ ಬೆಂಬಲವೂ ಈ ಮನವಿಗೆ ಇದೆಯೆಂದು ಧಾರಾಳವಾಗಿ ಹೇಳಬಹುದು. ಮುಸ್ಲಿಂ ಲೀಗಿನವರು ಮಾತ್ರ ಇದಕ್ಕೆ ಸೇರದಿರುವುದು ವಿಷಾದಕರ. ಆದ ಮಾತ್ರಕ್ಕೆ ಈ ಮನವಿಯ ಉದ್ದೇಶಕ್ಕೆ ಅವರು ವಿರೋಧವಾಗಿರುವರೆಂದು ಹೇಳಲು ಕಾರಣವಿಲ್ಲ. ಅವರೂ ರಾಜಭಕ್ತಿಯುತರಾದ ಮೈಸೂರಿನ ಪ್ರಜೆಗಳೇ. ಅವರಿಗೂ ಶ್ರೀಮನ್ಮಹಾರಾಜರವರ ಛತ್ರಛಾಯೆಯಲ್ಲಿ ಜವಾಬ್ದಾರಿ ಸರ್ಕಾರವು ಬೇಡವೆಂದಿಲ್ಲ. ಆದರೆ ಪ್ರಸ್ತುತದಲ್ಲಿ ಎದ್ದಿರುವ ಹಲವು ಸಣ್ಣಪುಟ್ಟ ಸಮಸ್ಯೆಗಳ ಪ್ರತಿಕ್ರಿಯೆಯ ಪರಿಣಾಮವಾಗಿ ಅವರು ಹೀಗೆ ಮಾಡಿದರೆ ಬೇರೊಂದು ಉದ್ದೇಶದಿಂದ ಅಲ್ಲ, ಸ್ಥರಾಗಿರುವರೆಂದು ಭಾವಿಸಬೇಕಾಗಿದೆ. ಆದರೂ ಸಂಸ್ಥಾನದ ಸಕಲ ಪ್ರಜೆಗಳ ಅಭ್ಯುದಯ ಸಾಧನೆಗೂ ಸಂಬಂಧಪಟ್ಟ ಈ ಪ್ರಯತ್ನದಲ್ಲಿ ತಾತ್ಕಾಲಿಕವಾದ ಅಲ್ಪ ವಿಚಾರಗಳನ್ನು ಬದಿಗೊತ್ತಿ ಅವರೂ ಸಹಕರಿಸಿ, ಸಮ್ಮತರಾಗಿದ್ದರೆ ಚೆನ್ನಾಗಿತ್ತು. ಅವರು ಬೇರೆ ರೀತಿಯಲ್ಲಾದರೂ ಈ ಪ್ರಯತ್ನಕ್ಕೆ ತಮ್ಮ ಬೆಂಬಲವಿರುವುದೆಂಬುದನ್ನು ಪ್ರದರ್ಶಿಸುವುದು ಒಳ್ಳೆಯದು.

ಪ್ರಜಾಪ್ರತಿನಿಧಿ ಸಭೆಯು ಸ್ಥಾಪಿತವಾಗಿ ಅರವತ್ತು ವರ್ಷಗಳ ಮೇಲಾಯಿತು. ಇಡೀ ಹಿಂದೂಸ್ಥಾನದಲ್ಲಿಯೇ ಮೊದಲನೆಯದಾಗಿ ಆರಂಭವಾದ ಈ ಬಗೆಯ ಸಭೆಯು ಇದೇ ಎಂದು ಗೊತ್ತಾಗಿದೆ. ಇಷ್ಟು ದೀರ್ಘಕಾಲದ ಅವಧಿಯಲ್ಲಿ ಇದು ಸಂಸ್ಥಾನದ ಪ್ರಗತಿಯ ಅಭಿವೃದ್ಧಿಯಲ್ಲಿ ಅಪಾರವಾದ ಸೇವೆಯನ್ನು ಸಲ್ಲಿಸಿದೆ. ಆದರೆ ಸಭೆಯ ರೂಪ ರೇಖೆಗಳು ಮಾತ್ರ ಹುಟ್ಟಿದಾಗ ಹೇಗೆ ಇದ್ದವೋ ಈಗಲೂ ಬಹುಮಟ್ಟಿಗೆ ಹಾಗೆಯೇ ಇವೆ. ಅದು ಇನ್ನೂ ಒಂದು ಅಂಕೆಯ ಕೂಟವಾಗಿಯೇ ಇರುವುದು ಅತ್ಯಂತ ಶೋಚನೀಯ ವಿಚಾರ. ಮೊನ್ನೆ ಮೊನ್ನೆ ಆರಂಭವಾದ ನೆರೆಹೊರೆಯ ಶಾಸನ ಸಭೆಗಳು ತಮ್ಮ ತಮ್ಮ ಮಂತ್ರಿ ಮಂಡಲಗಳನ್ನು ರಚಿಸಿ ಪ್ರಾಂತಗಳ ಆಡಳಿತವನ್ನೆಲ್ಲಾ ನಿರ್ವಹಿಸುತ್ತಿವೆ. ನಮ್ಮಲ್ಲಿ ಖಾಸಗೀ ಅಧ್ಯಕ್ಷರಿಗಾಗಿ ಇನ್ನೂ ಪ್ರಾರ್ಥನೆ ಸಲ್ಲಿಸಬೇಕಾಗಿರುವ ಸನ್ನಿವೇಶವು ಸಮರ್ಪಕವಲ್ಲ. ಈ ಬೇಡಿಕೆಯು ಈ ಕೂಡಲೇ ನೆರವೇರಬೇಕಾದದ್ದು.

ಭಾರತ ರಾಜ್ಯಾಂಗ ಸಮಿತಿಗೆ ಚುನಾಯಿತ ಪ್ರತಿನಿಧಿಗಳನ್ನೇ ಕಳುಹಿಸಬೇಕೆಂಬುದು ಮನವಿಯಲ್ಲಿನ ಇನ್ನೊಂದು ಅಂಶ. ಬ್ರಿಟಿಷ್ ಹಿಂದೂಸ್ಥಾನದಲ್ಲಿ ಚುನಾಯಿತರಾದವರನ್ನೇ ಕಳುಹಿಸಲಾಗುತ್ತಿದೆ. ಪ್ರಗತಿಪರರಾದ ನಮ್ಮ ಪ್ರಭುಗಳೂ ಅದರಂತೆಯೇ ಮಾಡಬೇಕೆಂದು ನಾವು ಬೇಡುತ್ತೇವೆ.

ಜವಾಬ್ದಾರಿ ಸರ್ಕಾರದ ಸ್ಥಾಪನೆಯು ಮನವಿಯಲ್ಲಿನ ಮುಖ್ಯ ಅಂಶ. ಇದಕ್ಕಾಗಿ ಎಲ್ಲಾ ಸಂಸ್ಥಾನಗಳೂ ಅನೇಕ ವರ್ಷಗಳಿಂದಲೂ ಶ್ರಮಿಸುತ್ತಿವೆ. ಇದರ ಸಾಧನೆಗೆ ಕಾಲವು ಸನ್ನಿಹಿತವಾಗಿದೆ. ನಮ್ಮ ಮಹಾಪ್ರಭುಗಳವರು ಪ್ರಜೆಗಳ ಇಂಗಿತವನ್ನು ಚಿತ್ತಕ್ಕೆ ತಂದುಕೊಂಡು ತಮ್ಮ ಭರವಸೆಯನ್ನು ಉದ್ಘೋಷಿಸಿ ಇಡೀ ಹಿಂದೂಸ್ಥಾನಕ್ಕೆ ಮೇಲ್ಪಂಕ್ತಿಯನ್ನು ಹಾಕಲು ಇದು ಅತ್ಯಂತ ಅನುಕೂಲವಾದ ಸಮಯವಾಗಿದೆ. ನಮ್ಮ ಸರ್ಕಾರದವರೂ ಈ ಬಗ್ಗೆ ಸೂಕ್ತ ಸಲಹೆಗಳನ್ನು ಕೊಟ್ಟು ಪ್ರಜೆಗಳ ಕೋರಿಕೆಗೆ ಪ್ರಭುಗಳ ಅನುಗ್ರಹವು ದೊರೆಯುವಂತೆ ಮಾಡಬೇಕೆಂದು ನಾವು ಕೋರುತ್ತೇವೆ.

Edited, printed and published by A. R. Nagarajan at the Sadhvi Press, D. Subbiah Road, Mysore.

ರೈಲ್ವೆ ಕೆಲಸಗಾರರ ಕೊರತೆ

ಮೈಸೂರು ರೈಲ್ವೆ ಕೆಲಸಗಾರರ ಸಂಘದ ಮಾಜಿ ಉಪಾಧ್ಯಕ್ಷರಾದ ಶ್ರೀ ಜಿ. ಎಸ್. ಬೈರೋಜಿರಾಯರು ಈ ರೀತಿ ಬರೆಯುತ್ತಾರೆ:—

ರೈಲ್ವೆ ಕೆಲಸಗಾರರ ಸಂಘವು ಸ್ಥಾಪನೆಯಾಗಿ ಒಂದೂವರೆ ವರ್ಷಗಳಾದರೂ ಏನೂ ಪ್ರಯೋಜನವಾಗಿಲ್ಲ. ಕೆಲಸಗಾರರ ಕಷ್ಟಗಳು ದಿನೇ ದಿನೇ ಹೆಚ್ಚುತ್ತಿವೆ; ಸಂಬಳದ ವ್ಯವಸ್ಥೆ ಒಬೀರಾಯನ ಕಾಲದ್ದಾಗಿದೆ; ರಿಜರ್ವ್ ಫಂಡಿನಿಂದ ದುಡ್ಡು ತೆಗೆದು ಈ ಕಷ್ಟ ಕಾಲದಲ್ಲಿ ಕೆಲಸಗಾರರಿಗೆ ಕೊಡಬೇಕು, ಇಲ್ಲವೇ ಮೈಲಿಗೆ ಅರ್ಧ ಕಾಸಿನಂತೆ ರೈಲ್ವೆ ದರ ಹೆಚ್ಚಿಸಿಯಾದರೂ ಕೆಲಸಗಾರರ ಗ್ರೇಡುಗಳನ್ನು ಪುನರ್ವ್ಯವಸ್ಥೆ ಮಾಡಿ, ತುಟ್ಟಿಭತ್ಯ ಹೆಚ್ಚಿಸಬೇಕು.

ಭದ್ರತಾ ಸಮಿತಿ ಮುಂದೆ ಫ್ರಾನ್ಸ್ ಮೇಲೆ ಸಯ್ಯಾಂ ದೂರು

ಸಯ್ಯಾಂ ಗಡಿಯೊಳಕ್ಕೆ ಫ್ರೆಂಚ್ ಇಂಡೋ ಚೈನಾದಲ್ಲಿರುವ ಫ್ರಾನ್ಸಿನ ಅಧಿಕಾರಿಗಳು ನುಗ್ಗಿ, ಲೂಟಿ, ದರೋಡೆ, ಮುಂತಾದುವುಗಳನ್ನು ಮಾಡುತ್ತ ವಿಪರೀತ ತೊಂದರೆ ಉಂಟುಮಾಡುತ್ತಿರುವರೆಂದು ಭದ್ರತಾ ಸಮಿತಿಯ ಮುಂದೆ ಸಯ್ಯಾಂ ಅಧಿಕಾರಿಗಳು ಒಂದು ಮನವಿಯನ್ನು ಸಲ್ಲಿಸಿದ್ದಾರೆ.

ಪ್ರಭಾತ್ ಬ್ಯಾಂಗಲ್ಸ್ ಸ್ಟೋರ್ಸ್

ಚಾಮುಂಡೇಶ್ವರೀ ಟಾಕೀಸಿನ ಮಳಿಗೆ, ಸಯ್ಯಾಜಿರಾವ್ ರೋಡ್, ಮೈಸೂರು

ಬೆಲೆ ಕಡಿಮೆ ! : : ಬಾಳಿಕೆ ಹೆಚ್ಚು !!

ಒಂದಾವರ್ತಿ ಪರೀಕ್ಷಿಸಿರಿ

ಗಾಜಿನ ಮತ್ತು ರಬ್ಬರ್, ಸೆಲ್ಯುಲಾಯ್ಡ್, ಕ್ರೋಮಿಯಂ, ಎನಾಮಲ್ ಮತ್ತು ತರತರವಾದ ಗಾಜಿನ ಬಳೆಗಳೂ, ಫ್ಯಾನ್ಸಿ ಬಳೆಗಳೂ, ಮೈಸೂರು ಸಿಲ್ಕ್ ರಿಬ್ಬನ್ನುಗಳೂ, ಬಗೆಬಗೆಯ ಸ್ಟಾಂಡರ್ಡ್ ಬಳೆಗಳೂ ಬಂದಿರುತ್ತವೆ.

ನಿಯೋಗದ ಸಲಹೆ ಬಗ್ಗೆ ಗಾಂಧಿಜಿ ಟೀಕೆ

ಬ್ರಿ|| ನಿಯೋಗದವರ ಇತ್ತೀಚಿನ ವಿವರಣೆಯು ಸಾರ್ವಜನಿಕರ ಅರ್ಥಕ್ಕೆ ವಿರುದ್ಧವಾಗಿದೆ. ಹಾಗಿದ್ದು ಅದಕ್ಕೆ ಬೆಲೆ ದೊರೆಯುವುದಾದರೆ ಅದೊಂದು ಕೆಟ್ಟ ಶಕುನವೇ ಸರಿ ಎಂದು ಮಹಾತ್ಮಾ ಗಾಂಧಿಯವರು ಹರಿಜನ ಪತ್ರಿಕೆಯಲ್ಲಿ ಬರೆದಿದ್ದಾರೆ. ದೇಶದಲ್ಲಿ ಆಹಾರ ಮತ್ತು ಬಟ್ಟೆ ಕೊರತೆಯಿಂದ ಹಾಹಾಕಾರ ಎದ್ದಿರುವಾಗ ಇನ್ನೂ ತಾತ್ಕಾಲಿಕ ಸರ್ಕಾರದ ರಚನೆ ಆಗದಿರುವುದೂ, ಸಾಮ್ರಾಜ್ಯದ ಅಧಿಕಾರ ಬದಲಾವಣೆ ಪ್ರತ್ಯಕ್ಷ ಪೂರ್ಣವಾಗಿ ಅರ್ಥವಾಗದಿರುವುದೂ, ಬ್ರಿ|| ಸೈನ್ಯವನ್ನು ಇಟ್ಟುಕೊಂಡಿರಬೇಕೆನ್ನುವುದೂ ನಿಯೋಗದ ಹೇಳಿಕೆಯಲ್ಲಿ ಮುಖ್ಯ ಕೊರತೆಗಳೆಂದು ಗಾಂಧಿಜಿಯವರು ತಿಳಿಸಿದ್ದಾರೆ.

ಸ್ಪೇನ್ ಸಂಬಂಧ ತ್ಯಜಿಸುವಂತೆ ಭದ್ರತಾ ಸಮಿತಿಗೆ ವರದಿ

ವಿಶ್ವದ ಭದ್ರತಾ ಸಮಿತಿಯು ಜ|| ಫ್ರಾಂಕೋವಿನ ಆಡಳಿತದ ಬಗ್ಗೆ ವರದಿ ಮಾಡಲು ಒಂದು ಉಪಸಮಿತಿಯನ್ನು ರಚಿಸಿತ್ತು. ಜ|| ಫ್ರಾಂಕೋವಿನ ಅಧಿಕಾರ ಬದಲಾವಣೆ ಆಗುವ ವರೆಗೆ ಸಂಯುಕ್ತ ರಾಷ್ಟ್ರಗಳು ಸ್ಪೇನಿನೊಡನೆ ಸಂಬಂಧವನ್ನು ತ್ಯಜಿಸಬೇಕೆಂದು ಆ ಸಮಿತಿಯು ಸಲಹೆ ಕೊಟ್ಟಿದೆ.

ಪ್ರಭುಗಳ ಭೇಟಿ

ಧರ್ಮಪ್ರವರ್ತ ಎ. ಎಸ್. ರಾಮಯ್ಯಂಗಾರ್ರವರು ನಿನ್ನೆ ಬೆಳಗ್ಗೆ ಶ್ರೀಮನ್ಮಹಾರಾಜರವರ ಸಂದರ್ಶನವನ್ನು ಪಡೆದುಕೊಂಡರು. ಇಪ್ಪತ್ತು ನಿಮಿಷ ಮಾತುಕತೆ ಆಯಿತು. ಪ್ರಭುಗಳ ಆರೋಗ್ಯವನ್ನು ವಿಚಾರಿಸಿ ತಮ್ಮ ಗೌರವನ್ನು ಸಲ್ಲಿಸಿ ಐಯ್ಯಂಗಾರ್ರವರು ಹಿಂದಿರುಗಿದರು.

ವಿವಾಹ

ಶ್ರೀನಿವಾಸ ಪ್ರೆಸ್ ಮಾಲೀಕರಾದ ವಿ. ಎಸ್. ಕೃಷ್ಣಸ್ವಾಮಯ್ಯಂಗಾರ್ರವರು ತಮ್ಮ ಕುಮಾರ ಚಿ|| ಕೆ. ರಾಮುವಿಗೆ ಬೆಂಗಳೂರಿನ ಶ್ರೀ ಎಸ್. ರಂಗನಾಥಯ್ಯಂಗಾರ್ಯರ ಪುತ್ರಿ ಸೌ|| ರುಕ್ಮಿಣಿಯನ್ನು ನಾಳಿದ್ದು ತ್ಯಾಗರಾಜ ರಸ್ತೆಯ [illegible]ದಲ್ಲಿ ವಿವಾಹವನ್ನು ನೆರವೇರಿಸುವರು.

ಬ್ರಾಹ್ಮಣ ವಿದ್ಯಾರ್ಥಿ ನಿಲಯ

ಅಖಿಲ ಮೈಸೂರು ಬ್ರಾಹ್ಮಣ ಮಹಾಸಭೆಯ ಮೈಸೂರು ಶಾಖೆಯ ವಿದ್ಯಾರ್ಥಿ ನಿಲಯದಲ್ಲಿ ಮುಂದಿನ ಸಾಲಿಗೆ ವಸತಿ ಸೌಕರ್ಯವನ್ನು ಸದ್ಯಕ್ಕೆ ೨೪ ಜನ ವಿದ್ಯಾರ್ಥಿಗಳಿಗೆ ಏರ್ಪಡಿಸಲಾಗಿದೆ. ಇದಕ್ಕೆ ಅಪೇಕ್ಷಿಸುವವರು ಇದೇ ೨೦ನೇ ತಾರೀಖಿನೊಳಗಾಗಿ ನಿಯಮಿತವಾದ ಅರ್ಜಿ ನಮೂನೆಯಲ್ಲಿ ಕಾರ್ಯದರ್ಶಿಗಳಾದ ಶ್ರೀ ಆರ್. ಕೆ. ಲಿಂಗಪ್ಪಯ್ಯನವರಿಗೆ ಬರೆದುಕೊಳ್ಳಬಹುದು.

ಕ್ರಿಕೆಟ್ ಪಂದ್ಯ

ಇಂಗ್ಲೆಂಡಿನಲ್ಲಿ ಪ್ರವಾಸ ಮಾಡುವ ಭಾರತದ ಟೀಮಿಗೂ ಹ್ಯಾಂಪ್‌ಷೈರ್ ಟೀಮಿಗೂ ನಡೆದ ಕ್ರಿಕೆಟ್ ಪಂದ್ಯದಲ್ಲಿ ಹ್ಯಾಂಪ್‌ಷೈರಿನವರೆಲ್ಲರೂ ಔಟಾಗಿ [illegible] ರನ್ನುಗಳನ್ನು ಮಾಡಿರುವರು. ಭಾರತ ಟೀಮಿನವರು ಆಟವಾಡಲು ಆರಂಭಿಸಿ ೪ ವಿಕೆಟ್ಟುಗಳಿಗೆ ೯೬ ರನ್ನುಗಳನ್ನು ಮಾಡಿರುವರು.

ಕಾಂಗ್ರೆಸ್ ನಿಧಿ ವಾಪಸ್ಸು

೧೯೪೨ ರಲ್ಲಿ ಬೊಂಬಾಯಿ ಸರ್ಕಾರದವರು ಮುಟ್ಟುಗೋಲು ಹಾಕಿಕೊಂಡ ಅಖಿಲ ಭಾರತ ಕಾಂಗ್ರೆಸ್ ಕಮಿಟಿ ೬೫,೦೦೦ ರೂ. ನ ನಿಧಿಯನ್ನು ಕಾಂಗ್ರೆಸ್ಸಿಗೆ ವಾಪಸ್ ಕೊಡಲು ಕಾಂಗ್ರೆಸ್ ಮಂತ್ರಿಮಂಡಲವು ನಿರ್ಧರಿಸಿದೆ.

ಉತ್ತಮ ವರ್ಗದ

ಅರಗಿನ ಪದಾರ್ಥಗಳು

ವಿಧವಿಧ ವರ್ಗದ ಮೊಹರಿನ ಅರಗು, ಗುಂಡಿ ಅರಗು, ಹೊಂಬಣ್ಣದ ಪಾಲಿಶ್ ಸ್ಟಿಕ್ ಮತ್ತು ಬ್ಲೀಚ್ ಮಾಡಿದ ಅರಗು, ಬಣ್ಣರಹಿತ ಪಾಲಿಶ್ ಫ್ರೆಂಚ್ ಪಾಲಿಶ್‌ಗಳು, ಬಣ್ಣದ ಪಾಲಿಶ್‌ಗಳು ಮತ್ತು ಇತರ ಅರಗಿನ ಪದಾರ್ಥಗಳು

ವಿವರಗಳಿಗಾಗಿ ಬರೆಯಿರಿ:—

ಸರಕಾರದ ಅರಗು ಮತ್ತು ಬಣ್ಣದ ಕಾರಖಾನೆ

ಈದಿಗಾ, : : ಮೈಸೂರು

ಫೋನ್ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಬುಧವಾರ ೫—೬—೪೬ [ಸಂಚಿಕೆ ೨೩೩

ಈ ತಿಂಗಳ ಮಧ್ಯದಲ್ಲಿ ನಿಯೋಗದ ಪ್ರಯಾಣ

ಬೆಂಕಿ ಕಡ್ಡಿ ಕಾರ್ಖಾನೆ

ಮೈಸೂರು ೫

ಕ್ಲೋಸ್‌ಪೇಟೆಯಲ್ಲಿ ಸ್ಥಾಪಿತವಾಗಿರು ಬೆಂಕಿ ಕಡ್ಡಿ ಕಾರ್ಖಾನೆ ಶಾಖೆಯೊಂದ ರಾಜಧಾನಿಯು ಚನ್ನೆಗೌಡನಕೊಪ್ಪ ಪ್ರತಿಷ್ಠೆಯುಲು ಅದರ ವ್ಯವಸ್ಥಾಪಕರಾ ಶ್ರೀ ಗುರುದೇವಾಚಾರ್ಯರು ಏರ್ಪಡಿಸಿ ಶ್ರೀ ರಾಮಚಂದ್ರರಾವ್ ಬೊಂ ಟ್ರಿಯವರು ಇದರ ಆರಂಭೋತ್ಸವವ ನಡೆಸಿದರು. ಜಿಲ್ಲಾಧಿಕಾರಿಗಳಾದ ರಣಜೋಧಸಿಂಗ್‌ರವರು ಅಧ್ಯಕ್ಷತೆ ವ ಹ್ಸಿದ್ದರು. ಶ್ರೀ ಬೊಂಭೋರೆಯವರು, ಒಗೆಯ ಗೃಹ ಕೈಗಾರಿಕೆಗಳು ಸಂಸ್ಥಾ ನದ ಅಭಿವೃದ್ಧಿಗೆ ಬರುವುದು ಅಗತ್ಯ ಎಂದು ಹೇಳಿ ಈ ಉದ್ಯಮವು ಅಭಿವೃದ್ಧಿ ಹೊಂದಿ ಸಾರ್ವಜನಿಕರಿಗೆ ಉಪಯೋಗಕಾ ರಿಯಾಗಲೆಂದು ಹಾರೈಸಿದರು.

ಸ್ವರ್ಣೋತ್ಸವ

ಅರ್ಧ ಶತಮಾನಕ್ಕಿಂತಲೂ ಹಿಂದಿನಿಂದ ಪ್ರಮುಖ ಶಾಲೆಯಾಗಿಯೇ ಇದ್ದು ಕಳೆ ವರ್ಷ ಹೈಸ್ಕೂಲಿಗೆ ಪರಿವರ್ತನವಾಗಿ ಸ್ವರ್ಣೋತ್ಸವ ಕಾಲ ನಿರೀಕ್ಷಿಸುತ್ತಿರುವ ರಾಜ ನಿಯ ದಳವಾಯಿ ಹೈಸ್ಕೂಲಿನವರು ಮುಂದಿನ ತಿಂಗಳಲ್ಲಿ ನಡೆಯಲಿರುವ ಶ್ರೀ ಮನ್ಮಹಾರಾಜರವರ ವರ್ಧಂತ್ಯುತ್ಸವ ಪ್ರಾರಂಭ ಕಾಲದಲ್ಲಿ ತಮ್ಮ ಶಾಲೆಯ ಸ್ವರ್ಣೋತ್ಸವ ಸಮಾರಂಭವನ್ನು ನಡೆಸಲು ನಿಸುತ್ತಿದ್ದಾರೆಂದೂ, ಈ ಶಾಲೆಯ ಈ ಮತ್ತು ಹಿಂದಿನ ವಿದ್ಯಾರ್ಥಿಗಳೂ, ಪ್ರೋತ್ಸಾಹಕರೂ ಅಭಿಮಾನಿಗಳೂ ತಮ್ಮ ಧನಾದಿಗಳಿಂದ ಸಹಕರಿಸಿ ಸಮಾ ರಂಭವನ್ನು ಯಶಸ್ವಿಗೊಳಿಸಬೇಕೆಂದೂ ಅಭಿಮಾನಿಗಳೋರ್ವರು ಮನವಿ ಮಾಡಿದ್ದಾರೆ ನಾಳಿದ್ದಿನಿಂದ ಶಾಲೆಯಲ್ಲಿ ಐದನೇ ಫಾರಂ ಆರಂಭ ವಾಗುತ್ತದೆ

ನಿಧನ

ನಂಜನಗೂಡು ೩

ಅರಮನೆ ವಿದ್ವಾಂಸರಾಗಿದ್ದ ವೇ|| ವೇ ಸುಬ್ಬಸೋಮಯಾಜಿಗಳು ನಿನ್ನೆ ರಾ ೧೧ ಗಂಟೆಯಲ್ಲಿ ಸ್ವರ್ಗಸ್ಥರಾದರು. ಇವರು ಪುತ್ರರೂ ಒಬ್ಬ ಪುತ್ರಿ ಇದ್ದಾರೆ ಮೃತರ ಆತ್ಮಕ್ಕೆ ಭಗ ಶಾಂತಿ ಕೊಡಲೆಂದು ಪ್ರಾರ್ಥಿಸು ವೆ

ಮಕ್ಕಳ ಕೂಟ

ನೀಲಗಿರಿಯಲ್ಲಿರುವ ಮಾದರ್ ಹಿಂದೂ ಹೋಟೆಲಿನ ಮಾಲೀಕರಾದ ಶ್ರೀ ಕೆ ಸಿ ರಾಮಾಚಾರ್ಯರು ಪದ್ಧತಿಯಂತೆ ಈ ವರು ಷ ತಾ|| ೩೦ ೫-೪೬ ರಲ್ಲಿ ಮಕ್ಕಳ ಕೂ ಟವನ್ನು ಏರ್ಪಡಿಸಿದ್ದರು ಈ ಸಮಾರಂ ಭಕ್ಕಾಗಿ ಹೋಟೆಲಿನ ಆವರಣವು ನೇತ್ರಾ ನಂದಕರವಾಗಿ ಅಲಂಕರಿಸಲ್ಪಟ್ಟಿತ್ತು. ಲೇ ಡಿ ಬೂಟಿಸ್ಟೆಯವರು ಅಧ್ಯಕ್ಷತೆ ವಹಿಸಿ ಸ್ಪರ್ಧೆಗಳಲ್ಲಿ ಗೆದ್ದವರಿಗೆ ಬಹುಮಾನಗಳ ನ್ನು ಕೊಟ್ಟರು ಅಧ್ಯಕ್ಷಿಣಿಯವರು ಭಾ ಷಣ ಮಾಡುತ್ತಾ ಶ್ರೀ ಸೀತಾರಾಮಾಚಾ ರ್ಯರು ಮಕ್ಕಳ ಮೇಲಿಟ್ಟಿರುವ ಪ್ರೀತಿ, ಸತ್ಕಾರ್ಯಗಳಿಗಾಗಿ ಅವರನ್ನೂ, ಭಾಗ ವ ಹಿಸಿದವರೆಲ್ಲರನ್ನೂ ಅಭಿನಂದಿಸಿದರು 'ಮದರಾಸ್' ಪ್ರಾಂತದ ಎಲ್ಲ ಜಿಲ್ಲೆ ಗಳಲ್ಲಿಯೂ ಎರಡಾಣೆಗೆ ಒಂದು ಊಟ ಸಿಗುವಂತೆ ಏರ್ಪಾಡು ಮಾಡ ಲಾಗಿದೆ

ಈಸೂರು ಖೈದಿಗಳ ಬಿಡುಗಡೆಗೆ ಮನವಿ

ಸ್ವಂ ಸು. ಫೋ|] ಬೆಂಗಳೂರು ೫

ಈಸೂರು ಮತ್ತು ಶ್ರವಣಬೆಳಗೊಳದ ಖೈದಿಗಳ ಬಿಡುಗಡೆಗೆ ಒಂದು ಮನವಿಯ ನ್ನು ಸಲ್ಲಿಸಲು ಪ್ರ|| ಪ್ರ|| ಸಭೆಯ ಸದಸ್ಯ ರುಗಳ ರುಜುಗಳನ್ನು ತೆಗೆದುಕೊಳ್ಳಲಾಗುತ್ತಿದೆ ಈ ಅಪರಾಧಿಗಳಿಗೆ ಕೊಲೆಯ ಉದ್ದೇಶವಿರ ಲಿಲ್ಲ; ಸಾಮೂಹಿಕ ಉದ್ರೇಕದಲ್ಲಿ ಅಚಾ ತುರ್ಯ ನಡೆದಿದೆ; ಅಸ್ಸಾಂ, ಚೀಮೂರು, ಕುಲಶೇಖರಂ ಪಟ್ಟಣಗಳಲ್ಲಿ ಇದೇ ಬಗೆಯ ಖೈದಿಗಳನ್ನು ಬಿಡುಗಡೆ ಮಾಡಲಾಗಿದೆ. ಇವರುಗಳನ್ನೂ ಬಿಡಬೇಕು ಎಂದು ಒತ್ತಾ ಯಪಡಿಸಲಾಗಿದೆ ಐ ಎನ್ ಎ ಯಲ್ಲಿ ಶಿಕ್ಷಕರಾಗಿರುವ ಮೈಸೂರಿನ ಟಿ ಜಿ ಗೌಡ ರನ್ನೂ ಬಿಡುಗಡೆ ಮಾಡುವಂತೆ ಕೋರ ಲಾಗಿದೆ.

ಐ. ಎನ್. ಎ. ಯವರು ಪೋಲೀಸಿಗೆ

ಬೊಂಬಾಯಿನ ೫ ಗೃಹಮಂತ್ರಿ ಮಂಡಲಿ ಯವರು ಐ. ಎನ್ ಎ ಸಿಪಾಯಿಗಳನ್ನು ಪೋಲೀಸ್ ಇಲಾಖೆಗೆ ಸೇರಿಸಿಕೊಳ್ಳುವುದಾ ಗಿ ನಿರ್ಧರಿಸಿದ್ದಾರೆ. ಆಯಮರು ಬಾದಿನಲ್ಲಿ ಹಲವರನ್ನು ಈಗಾಗಲೇ ಸೇರಿಸಲಾಗಿದೆ. ಇಂಡಿಯಾ ಸರ್ಕಾರದ ಉದ್ಯೋಗ ಶಾಖೆ ಯವರೂ ಸಹ ಐ. ಎನ್ ಎ. ಯವರನ್ನು ಕೆಲಸಕ್ಕೆ ತೆಗೆದುಕೊಳ್ಳುವ ತರಪೂ ದು ಮಾಡುತ್ತಿರುವುದಾಗಿ ಗೊತ್ತಾಗಿದೆ

LATEST NEWS

ಪ್ರ|| ಪ್ರ|| ಸಭೆಯಲ್ಲಿ ಸಭಾ ತ್ಯಾಗ

ಸ್ವಂ ಸು ಫೋ|] ಬೆಂಗಳೂರು ೫

ತಮ್ಮ ಪಕ್ಷದವರಿಗೆ ಭಾಷಣ ಮಾಡಲು ಸರಿಯಾದ ಅವಕಾಶವನ್ನು ಅಧ್ಯಕ್ಷರು ಕೊ ಡುತ್ತಿಲ್ಲವೆಂದು ಹೇಳಿ ಈ ದಿನ ಸಂಜೆ ೪. ೪೫ಕ್ಕೆ ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಹನುಮಂತಯ್ಯನವರು ಸ ಮಾರು ನೂರು ಜನ ತಮ್ಮ ಅನುಯಾಯಿಗಳೊಡ ನೆ ಪ್ರ|| ಪ್ರ|| ಸಭೆಯಲ್ಲಿ ಸಭಾ ಪರಿತ್ಯಾಗ ಮಾಡಿದರು

ಶ್ರೀ ಎಂ ಬಿ ಕೃಷ್ಣಪ್ಪನವರು ಇದಕ್ಕೆ ಮುಂಚೆ ಮಂತ್ರಿಗಳೊಬ್ಬರು ನಿದ್ದೆ ಮಾಡು ತ್ತಿದ್ದಾರೆಂದು ಹೇಳಿ ಪ್ರಿಯಾಲೋಪ ಸೂ ಚಿಸಿದರು ನೀವೇ ನಿದ್ದೆ ಮಾಡುತ್ತಿರುವಿ ರೆಂದ ಅಧ್ಯಕ್ಷರು ಹೇಳಿದರು.

ನಿಯೋಗದವರ ನಿರ್ಗಮನ

ಈ ತಿಂಗಳ ಮಧ್ಯದಲ್ಲಿ ಬ್ರಿಟಿಷ್ ನಿ ಯೋಗದವರು ತಮ್ಮ ದೇಶಕ್ಕೆ ವಾಪಸು ಹೊರಡುವ ಸೂಚನೆ ಬಂದಿದೆ ಅಷ್ಟು ಹೊತ್ತಿಗೆ ಅವರ ಸಂಧಾನದ ಅಂತಿಮ ಫಲ ವು ಗೊತ್ತಾಗುತ್ತದೆಂದು ನಂಬಲಾಗಿದೆ ೧೪ ನೇ ತಾ|| ಹಡಗಿನಲ್ಲಿ ಸರ್ ಕ್ರಿಪ್ಸರು ಪ್ರಯಾಣ ಮಾಡುವರು ಅಷ್ಟು ಹೊತ್ತಿ ಗೆ ಅವರ ಪತ್ನಿಯೂ ಒಂದು ಅವರನ್ನು ಸೇರುವರು ಉಳಿದ ಇಬ್ಬರೂ ಅವರ ಪ ರಿವಾರದೊಂದಿಗೆ ವಿಮಾನದಲ್ಲಿ ಹಿಂದಿರುಗುವರು.

ಲಕ್ಷ್ಮೀಕಾಂತಂ ಕೊಲೆ ಅಪೀಲಿಗೆ ಅವಕಾಶ

ಲಂಡನ್ ಪ್ರಿವಿ ಕೌನ್ಸಿಲ್ಲಿನಲ್ಲಿ ಅಪೀಲು ಮಾಡಲು ಲಕ್ಷ್ಮೀಕಾಂತಂ ಕೊಲೆಯ ಅ ಪಾದಿತರಾದ ತ್ಯಾಗರಾಜ ಭಾಗವತರ್ ಎನ್ ಎಸ್. ಕೃಷ್ಣನ್‌ರಿಗೆ ವಿಶೇಷ ಅನುಮ ತಿ ದೊರೆತಿದೆ ಇವರಿಬ್ಬರೂ ಈಗ ಜೀವಾ ವಧಿ ಶಿಕ್ಷೆ ಅನುಭವಿಸುತ್ತಿದ್ದಾರೆ.

ಭಾರತದ ಪ್ರಶ್ನೆಯಲ್ಲಿ ರಷ್ಯದ ಕೈವಾಡವೇ ?

ರಷ್ಯವು ಚೆಟ್ಟು ಅಧಿಕಾರವನ್ನು ಪಡೆ ಯುವ ಉದ್ದೇಶದಿ ಮರೀ ಬ್ರಿಟಿಷ್ ನಿ ಯೋಗದವರ ಸಲಹೆಗಳನ್ನು ಆಮೂಲಾಗ್ರ ವಾಗಿ ಟೀಕಿಸುತ್ತಿದೆ ಎಂದೂ ಭಾರತದ ಸ ಮಸ್ಯೆಯಿಂದ ಪ್ರಶ್ನೆಯನ್ನು ಹಾರಾಗಿಸಲೆಂ ಬುದೇ ಅವರ ಇಚ್ಛೆಯೆಂದೂ ಶ್ರೀ ಸಿ ರಾ ಜಗೋಪಾಲಾಚಾರಿಯವರು ಅಭಿಪ್ರಾಯ ಪಟ್ಟಿರುತ್ತಾರೆ

ರೈಲು ನೊಗಚಿಕೊಂಡಿತು

ಮೈಸೂರು ೫

ನಿನ್ನೆ ಮಧ್ಯಾಹ್ನ ಫಂಟೆಗೆ ಚಿತ್ರಮು ಗ ಮತ್ತು ಚಿಕ್ಕಜಾಜೂರು ಮಧ್ಯೆ ಮಿಕ್ಸೆಡ್ ರೈಲುಗಾಡಿ ಇಂಜನ್ ಮತ್ತು ಒಂದು ವ್ಯಾಗಿನ ವಿನಾ ಪೂರ್ತಿಯಾಗಿ ನೊಗಚಿಕೊಂಡಿತೆಂ ದೂ, ಗಾಯಗೊಂಡ ಪ್ರಯಾಣಿಕರನ್ನು ಚ ರುಗಳಲ್ಲಿಯೂ, ಲಾರಿಗಳಲ್ಲಿಯೂ ಆಸ್ಪತ್ರೆ ಗೆ ಸಾಗಿಸಲಾಗುತ್ತಿದೆ ಎಂದು ತಿಳಿದುಬಂ ದಿದೆ ರೈಲ್ವೆ ಛೀಫ್ ಇಂಜನೀಯರೂ ಇ ತರ ನೌಕರರೂ ಸ್ಥಳಕ್ಕೆ ಹೋಗಿದ್ದಾರೆ ರೈಲಿನ ಅಂಡರ್ ಗಾರ್ಡ್ ವೆಂಕಟರಾವ್‌ರವ ರು ಮೃತರಾದರೆಂದು ವರ್ತಮಾನಬಂದಿದೆ

ಎರಡು ವ್ಯಾಗನ್ನುಗಳು ಕೆಟ್ಟ ಸ್ಥಿತಿ ಯಲ್ಲಿ ನಾಲ್ಕು ಗಾಡಿಗಳು ಜಖಂ ಆಗಿ ವೆ ಈ ಘಟನೆ ಜನರಿಗೆ ಭಾರಿ ಗಾಯ ಗಳಾಗಿವೆ ಸಮೀಪದ ಆಸ್ಪತ್ರೆಗೆ ಶ್ರೀ ಮನ್ನು ಕಳುಹಿಸಲಾಗಿದೆ

ಸ್ಕೂಲು ಫೀ ಕಡಿಮೆಮಾಡುವ ಉದ್ದೇಶವಿಲ್ಲ

ಪ್ರತಿನಿಧಿ ಸಭೆಯಲ್ಲಿ ಸರ್ಕಾರದವರ ಉತ್ತರ

ಸ್ವಂ ಸು. ಫೋ|] ಬೆಂಗಳೂರು ೫

ದಿವಾನರು ಬೊಂಬಾಯಿಗೆ ಪ್ರಯಾಣ ಮಾಡಿರುವ ಪ್ರಯುಕ್ತ ಈದಿನ ಪ್ರ|| ಪ್ರ|| ಸಭೆಯು ಶ್ರೀ ಎಂ. ಎ. ಶ್ರೀನಿವಾಸನ್‌ರವರ ಅಧ್ಯಕ್ಷತೆಯಲ್ಲಿ ಆರಂಭವಾಯಿತು ವೈದ್ಯ ಕೀಯಕ್ಕೆ ಸಂಬಂಧಪಟ್ಟ ವಿಷಯಗಳನ್ನು ಪಾ ಶ್ಚಾತ್ಯ ದೇಶಗಳಲ್ಲಿ ತಿಳಿದುಕೊಂಡ ಬರಲು ಯಾವ ಯಾವ ವರ್ಷದಲ್ಲಿ ಯಾವ ಯಾ ವ ಕೋರ್ಸಿನವರಿಗೆ ವೇತನಗಳನ್ನು ಕೊಡ ಲಾಗಿವೆಯೆಂದು ಶ್ರೀ ಹೆಚ್ ಸಿದ್ದವೀರಪ್ಪ ನವರು ಹಾಕಿದ ಪ್ರಶ್ನೆಗೆ ಉತ್ತರವಾಗಿ ನಾ ಲ್ಕು ಜನ ಡಾಕ್ಟರುಗಳಿಗೂ, ಇಬ್ಬರು ಒಕ್ಕ ಲಿಗರಿಗೂ, ಒಬ್ಬರು ಮುಸಲ್ಮಾನರಿಗೂ ಕೊಡಲಾಗಿದೆಯೆಂದು ಸರ್ಕಾರದವರು ಉ ತ್ತರವಿತ್ತರು

ಸಂಸ್ಥಾನದಲ್ಲಿ ಬಾಲಕಿಯರಿಗಾಗಿ ೧೫ ಹೈಸ್ಕೂಲುಗಳಿವೆ ಅವುಗಳಲ್ಲಿ ೧೬೭೭ ಹಿಂದೂ ಬಾಲಕಿಯರು ಓದುತ್ತಾರೆ, ಇವ ರಿಂದ ೧೦೫೩೪ ರೂ. ಫೀ ವಸೂಲಾಗು ತ್ತಿದೆ ಸ್ಕೂಲು ಫೀಗಳನ್ನು ಕಡಿಮೆಮಾ ಡಬೇಕೆಂದು ಪ್ರ|| ಪ್ರ|| ಸಭೆ ಮತ್ತು ಶಾಸ ನ ಸಭೆಯವರು ಒತ್ತಾಯ ಮಾಡುತ್ತಲೇ ಇದ್ದಾರೆ ಆ ದರೆ ಅಂತಹ ಕಡಿಮೆ ಮಾಡುವ ಉದ್ದೇಶವಿಲ್ಲ ಎಂಬುದಾಗಿ ಶ್ರೀ ಎ ಎನ್ ರಾಮರಾವ್‌ರ ಪ್ರಶ್ನೆಗೆ ಉತ್ತ ರವಾಗಿ ಸರ್ಕಾರದವರು ತಿಳಿಸಿದರು.

ಸರ್ಕಾರದ ಮತ್ತು ಸರ್ಕಾರದ ಸಹಾ ಯಪಡೆದ ಶಾಲೆಗಳಲ್ಲಿರುವ ಬಾಲಕಿಯರ ಸಂಖ್ಯೆಯ ಬಗ್ಗೆ ಶ್ರೀಮತಿ ಲಕ್ಷ್ಮೀದೇವಿ ರಾಮಣ್ಣನವರು ಪ್ರಶ್ನೆ ಹಾಕಿ ಉತ್ತರ ಪಡೆ ದರು.

ಆಜಾದ್ ಎಂಬ ಉರ್ದು ಪತ್ರಿಕೆಯಲ್ಲಿ ತಪ್ಪಾಗಿ ವರದಿ ಬಂದಿರುವ ಅಂಶವನ್ನು ಮಿ|| ನೂರ್ ಹುಸೇನರು ತೋರಿಸಿದರು ವಿಚಾ ರಿಸಾತ್ತದಾಗಿ ಅಧ್ಯಕ್ಷರು ಹೇಳಿದರು.

ಬಜೆಟ್ ಭಾಷಣಗಳು

---

* ವಿದೇಶ ಪ್ರವಾಸ ಮುಗಿಸಿಕೊಂಡು ಭಾರತಕ್ಕೆ ಸರ್ ರಾಧಾಕೃಷ್ಣನವರು ವಾಪಸಾಗುತ್ತಿದ್ದಾರೆ. ತಮ್ಮನ್ನು ಭೇಟಿ ಮಾಡುವಂತೆ ವರ್ಕಿಂಗ್ ಕಮಿಟಿಯಿಂದ ಇವರಿಗೆ ಜರೂರು ಆಹ್ವಾನ ಬಂದಿದೆ.

ಗಾನವಿಶಾರದ ಬಿರುದಾಂಕಿತ ಕೃಷ್ಣಪ್ಪನವರ ಪ್ರಸನ್ನ ಸೀತಾರಾಮ ಮಂದಿರಂ, ಮೈಸೂರು

೨೯—೬—46ನೇ ಶನಿವಾರ ಸಾಯಂಕಾಲ 6 ಘಂಟೆಗೆ

ಆಂಧ್ರದೇಶದ ತ್ಯಾಗರಾಜ್ ಎಂದು ಪ್ರಖ್ಯಾತಿಯಾಗಿರುವ

ಎಂ. ವಿ. ನಾಗರಾಜ್ ಮತ್ತು ಪಾರ್ಟಿಯವರಿಂದ

ಹಿಂದುಸ್ಥಾನಿ, ಕರ್ನಾಟಕ ಸಂಗೀತ ವಿನೋದ ... ಮತ್ತು ... ಸಂಗೀತ ವಿನೋದ ...

* ಹೆಂಗಸರುಗಳಲ್ಲದವರಿಗೆ ಟಿಕೆಟ್ ಮೂಲಕ ಪ್ರವೇಶ

ಗಂಡಸರಿಗೆ 1—0—0

ಹೆಂಗಸರಿಗೆ 0—8—0

ಹುಡುಗರಿಗೆ 0—4—0

ಬಿ. ಶಿವನೀಲಕಂಠರಾವ್,

ಆನರರಿ ಸೆಕ್ರೆಟರಿ

ಮೈಸೂರು ಸ್ಯಾಂಡಲ್ ಉಡ್ ಆಯಿಲ್ ಫ್ಯಾಕ್ಟರಿ ಆಫೀಸಿನಿಂದ
ಹರಾಜು ತಾರೀಖು ೪ನೇ ಜುಲೈ ೧೯೪೬

ಇದರಿಂದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಮೈಸೂರು ತಾಲ್ಲೂಕು ಕಸಬಾ ಹೋಬಳಿ ಕಸಬಾ ಮೈಸೂರು ಗ್ರಾಮಕ್ಕೆ ಸೇರಿದ ಕುಕ್ಕರಹಳ್ಳಿ ಕೆರೆ ಅಂಗಳದ ಪಶ್ಚಿಮ ಭಾಗ ವಿಸ್ತೀರ್ಣವುಳ್ಳ ಪ್ರದೇಶದಲ್ಲಿ ಬೆಳೆಯುತ್ತಿರುವ ಹುಲ್ಲನ್ನು ೧೯೪೬-೪೭ನೆಯ ಸಾಲಿಗೆ ಉಪಯೋಗಿಸಿಕೊಳ್ಳುವ ಹಕ್ಕನ್ನು ೧೯೪೬ನೆಯ ಇಸವಿ ಜುಲೈ ೪ನೆಯ ತಾ|| ಗುರುವಾರ ಬೆಳಗ್ಗೆ ೯ ಘಂಟೆಗೆ ಸ್ಯಾಂಡಲ್ ಉಡ್ ಆಯಿಲ್ ಫ್ಯಾಕ್ಟರಿ ಆಫೀಸಿನವರು ಕೆರೆ ಅಂಗಳದ ಬಳಿ ಹರಾಜು ಮಾಡಿಸುತ್ತಾರೆ. ಇಷ್ಟವುಳ್ಳವರು ಆ ಕಾಲಕ್ಕೆ ಹಾಜರಾಗಿ ಕೂಗಿ ನಿಲ್ಲಿಸಿ ಮೂಲಕ ಪಡೆಯಬಹುದು.

ಹರಾಜು ಕೈಗೊಂಡ ಕಾಲಕ್ಕೆ ಹೆಚ್ಚಿನ ಬಿಡ್ಡುದಾರನು ಬಿಡ್ಡು ಹಣದ ಸ್ವಲ್ಪ ಕಾಲ್ಪನೆಯ ಒಂದು ಭಾಗವನ್ನು ಮತ್ತು ಪೂರಾ ಬಿಡ್ಡು ಹಣದ ಮೇಲೆ ಆಗುವ ಜನರಲ್ ಸೇಲ್ಸ್ ಟ್ಯಾಕ್ಸ್ ಹಣವನ್ನು ಪೂರ್ತಿಯಾಗಿಯೂ ಪಾವತಿ ಮಾಡಬೇಕು. ಮತ್ತು ಬಾಕಿ ಹಣವನ್ನು ಹರಾಜು ತಾರೀಖು ಆದ ೧೫ ದಿವಸಗಳ ಒಳಗಾಗಿ ಜಮಾ ಮಾಡಿಸಬೇಕು.

ಹರಾಜು ಕೈಗೊಂಡ ಕೂಡಲೆ ಠೇವಣಿಯನ್ನು ಹಾಜರ್ಮಾಡಲು ತಪ್ಪಿದರೆ ಆಗಲಿ, ಅಥವಾ ಬಾಕಿ ಹಣವನ್ನು ಹರಾಜು ತಾರೀಖು ಆದ ೧೫ ದಿವಸಗಳ ಒಳಗಾಗಿ ಜಮಾ ಮಾಡಿಸಲು ತಪ್ಪಿದರೆ ಆಗಲಿ, ಮರು ಹರಾಜು ನಡೆಸಿ, ಉಂಟಾಗುವ ನಷ್ಟ ಉಂಟಾದರೆ ಅದನ್ನು ಬಿಡ್ಡುದಾರನಿಂದ ವಸೂಲು ಮಾಡುವ ಜಾತಿ ಹಣವು ಸರ್ಕಾರಕ್ಕೆ ಮುಟ್ಟುಗೋಲಾಗುವುದು. ಬಿಡ್ಡುದಾರನಿಗೆ ಹಕ್ಕು ಇರುವುದಿಲ್ಲ.

ಬಿ. ಎಸ್. ನಿಂಬಲ್ಗಾರ್,

ಜನರಲ್ ಮ್ಯಾನೇಜರ್

* ಸಿಖ್ ಪಾಂಥಿಕ್ ಸಭೆಯವರು ನಿಯೋಗದವರ ಸಲಹೆಯನ್ನು ತಿರಸ್ಕರಿಸುವುದರಿಂದ ಇನ್ನು ಎರಡು ಮೂರು ದಿನಗಳಲ್ಲಿ ಪಂಜಾಬಿನಲ್ಲಿ ತೀವ್ರ ಪ್ರತಿಕ್ರಿಯೆ ನಡೆಯುವುದಾಗಿ ಸರ್ದಾರ್ ಬಲದೇವಸಿಂಗರು ಹೇಳಿದ್ದಾರೆ.

Office of the President
City Municipal Council Mysore
Dated 25th June 1946.

NOTICE

Quotations are called for for stitching and supplying uniforms to the Municipal Employees of the City Municipal Council, Mysore subject to the conditions imposed in the Tender Notification dated 25th June 1946 which can be seen on the Notice Board of the Offices of the Municipal President and Engineer.

The tenders should be presented to the Municipal Engineer on Saturday the 29th June 1946 at 4 P. M. at his Office.

R. Ramachandra Rao
Bhonbore,
President

ಮೈಸೂರು ಸಿಟಿ ರೇಷನಿಂಗ್

No R 761 45-46

೧೯೪೬ನೇ ಜೂನ್ ಮಾಹೆ ೩೦ನೇ ತಾ|| ಭಾನುವಾರ ದಿವಸ ಮೈಸೂರು ಸಿಟಿಯಲ್ಲಿರುವ ಎಲ್ಲಾ ಸರ್ಕಾರಿ ಡಿಪೋ, ಹೋಲ್‌ಸೇಲ್ ಗೋಡೌನ್, ಸರ್ಕಾರದ ಡಿಪೋ ಮತ್ತು ಸಹಕಾರ ಸಂಘಗಳಲ್ಲಿರುವ ದಿನಸಿಗಳ ಎಣಿಕೆ ಮಾಡಬೇಕಾಗಿರುವುದರಿಂದ ಆ ದಿವಸ ಡಿಪೋಗಳು ಮುಚ್ಚಲ್ಪಡುತ್ತವೆ.

(Sd.) ಅಬ್ದುಲ್ ರಜಾಕ್
ರೇಷನಿಂಗ್ ಆಫೀಸರು

೧೯ ೬-೪೬, ಮೈಸೂರು ಸಿಟಿ.

At NEW OPERA TALKIES
From 26-6-46

'COBRA - - WOMAN'

in Technicolor.

Featuring.—
Maria Montez,
Jon Hall,
Mysore Sabu

Daily 3 Shows

Next Change:
...

ಸವರ್ಸ್ ಇಂಡಿಯಾದಲ್ಲಿ ತಯಾರಾದ

'ಕಣ್ಣನ್'

ಸುಗಂಧ ಅಗರ ಬತ್ತಿಗಳು

ಅತ್ತರ್ ಸೀರೆ ಚಿನ್ನಗಳು, ಮತ್ತು ಪೌಡರ್‌ಗಳು

ಸ್ಪೆಷಲ್ ಏಜೆಂಟ್.

... ಸ್ಟೋರ್ಸ್,

... ರಸ್ತೆ, ಮೈಸೂರು.

ಎಂ. ... ಸ್ಟೋರ್,

32, ... ಸ್ಟ್ರೀಟ್,

...

ಫೋನ್ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಶುಕ್ರವಾರ ೨೮—೬—೪೬ [ಸಂಚಿಕೆ ೩೪೪೬

— ಕೊಲ್ಹಾಪುರದಲ್ಲಿ — ಚುನಾಯಿತ ಸಚಿವರು

ಸ್ಮಶಾನದ ಸ್ಥಳ ಪಲ್ಲಟಕ್ಕೆ ವೀರಶೈವರ ವಿರೋಧ

ಮೈಸೂರು ೨೮

ರಾಜಧಾನಿಯ ಚಾಮುಂಡಿ ಬೆಟ್ಟದ ತಪ್ಪಲಿನಲ್ಲಿರುವ ಬ್ರಾಹ್ಮಣರ ಸ್ಮಶಾನವನ್ನು ಬೆಟ್ಟದ ಬುಡಕ್ಕೆ ವರ್ಗಾಯಿಸಬೇಕೆಂದು ನಡೆಯುತ್ತಿರುವ ಪ್ರಯತ್ನದೊಡನೆ ರಾಜಧಾನಿಯ ವೀರಶೈವರು ವಿರೋಧ ಸೂಚಿಸಿ ನೂರಾರು ಜನರ ರುಜುವಿನಿಂದ ಕೂಡಿದ ಮನವಿಯನ್ನು ಪುರ ಸಭಾಧ್ಯಕ್ಷರಿಗೆ ಸಲ್ಲಿಸಿದ್ದಾರೆ. ಕಾಶೀ ಕ್ಷೇತ್ರದಲ್ಲಿ ಪ್ರೌಢ ಶಿಕ್ಷಣ ಪಡೆದು ಬಂದು ನೆಲೆಸಿರುವ ಶ್ರೀ ಗೌರೀ ಶಂಕರ ಸ್ವಾಮಿಗಳ ಪಂಚಗವಿ ಮಠದ ಸಮೀಪಕ್ಕೆ ಸ್ಮಶಾನವನ್ನು ವರ್ಗಾಯಿಸುವುದಾಗಿ ಹೇಳಲಾಗಿದೆ. ಈಗಿರುವ ಸ್ಮಶಾನದಿಂದ ಯಾರಿಗೂ ಯಾವ ವಿಧವಾದ ಅನಾನುಕೂಲವೂ ಇಲ್ಲ. ಹೊಸ ಸ್ಥಳಕ್ಕೆ ವರ್ಗಾಯಿಸಿದಲ್ಲಿ ಸ್ವಾಮಿಗಳು ಮಠದಲ್ಲಿ ವಾಸಿಸುವುದಕ್ಕೂ, ಭಕ್ತಾದಿಗಳು ಹೋಗಿ ಬರುವುದಕ್ಕೂ ಬಹಳ ತೊಂದರೆಯೂ, ಮತ ಧರ್ಮಾಚರಣೆಗೆ ಅಡಚಣೆಯೂ ಆಗುವುದೆಂದು ತಿಳಿಸಿ, ಸ್ಮಶಾನವನ್ನು ಬದಲಾಯಿಸಬೇಕೆಂದು ಸಂಕಲ್ಪಿಸಿರುವುದಾದರೆ ಈಗ ಯೋಚಿಸಿರುವ ಸ್ಥಳವನ್ನು ಬಿಟ್ಟು ಬೇರೆ ಕಡೆಗೆ ವರ್ಗಾಯಿಸಬೇಕೆಂದು ಡಾ|| ಟಿ.ಎಸ್. ಸಿದ್ದಪ್ಪ, ಶ್ರೀಗಳಾದ ಎಸ್. ಶಿವಸ್ವಾಮಿ, ಆರ್.ಸಿ. ಮಲ್ಲಪ್ಪ, ಆರ್. ಮಲ್ಲಿಕಾರ್ಜುನಪ್ಪ, ವೈ. ವಿರೂಪಾಕ್ಷಯ್ಯ ನ ಸ್ವಾಮಿ ಎನ್. ಸಂಗಪ್ಪ ಮುಂತಾದ ಪ್ರಮುಖರು ಮುಂದಿ ವೀರಶೈವರು ತಮ್ಮ ಮನವಿಯಲ್ಲಿ ನಮೂದಿಸಿರುತ್ತಾರೆ.

ಬಹುಮಾನ ವಿನಿಯೋಗ

ಮೈಸೂರು ೨೮

ಹಿಂದೀ ಪ್ರಚಾರ ಸಭೆಯ ಆಶ್ರಯದಲ್ಲಿ ನಡೆಯುತ್ತಿದ್ದ ಬೇಸಿಗೆ ಹಿಂದೀ ತರಗತಿಗಳ ಮುಕ್ತಾಯ ಸಮಾರಂಭವೂ ಮತ್ತು ಬಹುಮಾನ ವಿತರಣೋತ್ಸವವೂ ನೆನ್ನೆ ಸಂಜೆ ಬನುಮಯ್ಯನವರ ಹೈಸ್ಕೂಲಿನಲ್ಲಿ ಶ್ರೀ|| ಹಿರಳ್ಳಿ ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆದವು. ಪ್ರಾರ್ಥನೆಯಾದನಂತರ ಸಂಚಾಲಕರು ವರದಿಯನ್ನು ಒಪ್ಪಿಸಿದರು. ಮಹಾರಾಜಾ ಕಾಲೇಜಿನ ಹಿಂದೀ ಆಚಾರ್ಯರಾದ ಶ್ರೀ|| ನಾ. ನಾಗಪ್ಪನವರು ಅಭಿಭಾಷಣಮಾಡುತ್ತಾ ದೇಶಾಭ್ಯುದಯಕ್ಕೆ ಪ್ರಸ್ತುತ ಸ್ಥಿತಿಯಲ್ಲಿ ಹಿಂದಿ ಪ್ರಚಾರವು ಅಗತ್ಯವೆಂದು ಹೇಳಿದರು.

ಶ್ರೀ ಹಿರಳ್ಳಿ ದಾಸಪ್ಪನವರು ಮಾತನಾಡುತ್ತ ಪ್ರತಿಯೊಂದು ಜನಾಂಗದಲ್ಲಿಯೂ ಒಂದು ಭಾಷೆ ಪ್ರಚಾರದಲ್ಲಿದ್ದು ಆ ಜನಾಂಗದವರಲ್ಲಿ ರಾಷ್ಟ್ರೀಯ ಭಾವನೆಯನ್ನುಂಟು ಮಾಡಿರುವುದು; ಅದರಂತೆಯೇ ಭಾರತದಲ್ಲಿಯೂ ರಾಷ್ಟ್ರಭಾಷೆಯು ಇರತಕ್ಕದ್ದು ಅವಶ್ಯಕ; ದೇಶ ನಾಯಕರ ಅಭಿಪ್ರಾಯದಂತೆ ಹಿಂದಿಯು ಭಾರತ ಸ್ವಾತಂತ್ರ್ಯ ಸಾಧನೆಗೆ ಸಹಾಯಕವಾಗಿ ಭಾರತೀಯರೆಲ್ಲ 'ಒಂದೇ' ಎಂಬ ಭಾವನೆಯನ್ನುಂಟುಮಾಡುವುದು. ಆದ್ದರಿಂದ ಎಲ್ಲರೂ ಹಿಂದಿ ಕಲಿಯುವುದು ಅಗತ್ಯ ಎಂದು ಹೇಳಿದರು.

ಬಾಲಸೇನಾ ಸಮಾಜ ಮತ್ತು ಸಹಪಾಠಿಗಳಿಂದ ನಾಟಕ ಪ್ರದರ್ಶನವೂ ನಡೆಯಿತು.

—

• ಬೆಂಗಳೂರು ಪುರಸಭೆಯ ಉಪಾಧ್ಯಕ್ಷರಾಗಿ ನಿನ್ನೆ ವರ್ಗದ ಶ್ರೀ ಹಯವದನ ... [illegible]

ಖೂನಿ ಮೊಕದ್ದಮೆಯಲ್ಲಿ ಖುಲಾಸೆ

ಮೈಸೂರು ೨೮

ಸರಸ್ವತೀ ಪುರದಲ್ಲಿ ಕಟ್ಟಲಾಗುತ್ತಿರುವ ನವಜ್ಯೋತಿ ಸ್ಟುಡಿಯೋದಿನಲ್ಲಿ ಕೆಲಸ ಮಾಡುತ್ತಿದ್ದ ವೀರಭದ್ರಯ್ಯನನ್ನು ಕನ್ನೇಗೌಡನಕೊಪ್ಪಲು ಅಪ್ಪೂರಯ್ಯನು ೨೮-೧-೪೬ ರಲ್ಲಿ ಹೊಡೆದು ಕೊಲೆಮಾಡಿದನೆಂಬುದಾಗಿ ಮೊದಲನೇ ಮ್ಯಾಜಿಸ್ಟ್ರೇಟರ ಕೋರ್ಟಿನಲ್ಲಿ ಸೆಷನ್ಸಿಗೆ ಗುರಿಯಾಗಿದ್ದ ಮೊಕದ್ದಮೆಯು ವಿಚಾರಣೆಯಾಗಿ ಆಪಾದಿತನು ತಪ್ಪಿತಸ್ಥನಲ್ಲವೆಂದು ಹೇಳಿ ನಿನ್ನೆ ದಿನ ಸೆಷನ್ಸ್ ನ್ಯಾಯಾಧೀಶರು ಆತನನ್ನು ಬಿಡುಗಡೆಮಾಡಿದರು. ಅಡ್ವೋಕೇಟ್ ಶ್ರೀ ಎಸ್. ಗುಂಡೂರಾಯರು ಆಪಾದಿತನ ಪರ ವಕಾಲತ್ತು ನಡೆಸಿದ್ದರು.

ಕಾಂ|| ಅಧ್ಯಕ್ಷತೆಗೆ ಚೆಂಗಲರಾಯರೆಡ್ಡಿಯವರ ಹೆಸರು

ಶ್ರೀ ಕೆ. ಚೆಂಗಲರಾಯರೆಡ್ಡಿಯವರ ಹೆಸರನ್ನು ಮೈಸೂರು ಕಾಂಗ್ರೆಸ್ ಅಧಿವೇಶನದ ಅಧ್ಯಕ್ಷತೆಗೆ ಶ್ರೀಗಳಾದ ಎಸ್. ಚನ್ನಯ್ಯ, ಬಿ. ನಾರಾಯಣಸ್ವಾಮಿ, ಕೆ. ಎಸ್. ಸತ್ಯನಾರಾಯಣರಾವ್, ಟಿ. ವೆಂಕಟರಮಣಯ್ಯ, ಎಂ. ಎಸ್. ನಂಜಪ್ಪ, ಯು. ಎಲ್. ರಾಮಚಂದ್ರರಾವ್, ಬಗರಂ ರಂಗಯ್ಯ ಮುಂತಾದವರು ಸೂಚಿಸಿದ್ದಾರೆ.

—

ಸರ್ಕಾರಕ್ಕೆ ಮೂರನೇ ಸೋಲು

ಸ್ವಂ ಸು] ಬೆಂಗಳೂರು ೨೮

ಮುಜರಾಯಿ ದೇವಸ್ಥಾನಗಳಿಗೆ ಹರಿಜನರು ಪ್ರವೇಶಿಸಲು ಅವಕಾಶ ಕೊಡಬೇಕೆಂಬ ಶಕ್ತಿರಿ ಪ್ರಯೋಗ ನಿರ್ಣಯವನ್ನು ಶ್ರೀ ಎಲ್. ಎಸ್. ವೆಂಕಟಾಚಾರಯರು ನಿನ್ನೆ ನಡೆದ ನ್ಯಾಯ ವಿಧಾಯಕ ಸಭೆಯಲ್ಲಿ ತರಲು ಅದು ಅತ್ಯಂತ ಬಹುಮತದಿಂದ ಅಂಗೀಕಾರವಾಯಿತು. ಇದು ಈ ಸಲದ ಅಧಿವೇಶನದಲ್ಲಿ ಸರ್ಕಾರವು ಪಡೆದ ಮೂರನೇ ಸೋಲು.

ಅಧ್ಯಕ್ಷ ಚುನಾವಣೆ

ಮೈಸೂರು ಕಾಂಗ್ರೆಸ್ ಅಧ್ಯಕ್ಷ ಚುನಾವಣೆಯು ಜುಲೈ ೩ನೇ ತಾ|| ನಡೆಯತಕ್ಕದ್ದೆಂದು ನಿರ್ಧರಿಸಲಾಗಿದೆ. ಅಧ್ಯಕ್ಷಸ್ಥಾನಕ್ಕೆ ಹೆಸರನ್ನು ಜುಲೈ ೧ನೇ ತಾ|| ಸಂಜೆ ೫ ಘಂಟೆ ಒಳಗೆ ಸೂಚಿಸಬೇಕು.

ಬ್ರಾಹ್ಮಣ ನೌಕರರ ನೇಮಕಕ್ಕೆ ಆಕ್ಷೇಪಣೆ

ಶಾಸನಸಭೆಯಲ್ಲಿ ಗುರುನಾರೆಡ್ಡಿಯವರ ಪ್ರಶ್ನೆ

ಸ್ವಂ ಸು ಫೋ.] ಬೆಂಗಳೂರು ೨೮

ಕಂಟ್ರೋಲರ ಕಛೇರಿಯ ಸಿಬ್ಬಂದಿಯಾಯ ಕಾರ್ಯಾಂಗದ ಮುಖ್ಯಾಧಿಕಾರಿ ಸ್ಥಾನಕ್ಕೆ ಕಳೆದ ೧೯ ವರ್ಷದಿಂದ ಬ್ರಾಹ್ಮಣರೊಬ್ಬರನ್ನು ನೇಮಿಸಿರುವ ವಿಚಾರದಲ್ಲಿ ಶ್ರೀ ಗುರುನಾರೆಡ್ಡಿಯವರು ಇದಿನ ಶಾಸನ ಸಭೆಯಲ್ಲಿ ನಿಷ್ಫಲವಾದ ಪ್ರಶ್ನೆಗಳನ್ನು ಕೇಳಿದರು. ಅನುಭವ, ವಿಷಯ ಪರಿಜ್ಞಾನ ಮತ್ತು ದಕ್ಷತೆಗಳೇ ಈ ಕೆಲಸಕ್ಕೆ ಅಗತ್ಯವಾದ ಅರ್ಹತೆಗಳೆಂದು ಹಣಕಾಸಿನ ಕಾರ್ಯದರ್ಶಿಗಳು ಉತ್ತರವಿತ್ತರು. ಅರ್ಹರಾದ ಬ್ರಾಹ್ಮಣೇತರರಿಲ್ಲವೇ? ಬ್ರಾಹ್ಮಣರಿಗೆ ಪ್ರೋತ್ಸಾಹಿಸುವುದಕ್ಕಾಗಿ ಹೀಗೆ ಮಾಡಿದ್ದೀರಾ?— ಎಂದು ಶ್ರೀ ರೆಡ್ಡಿಯವರು ಕೇಳಲು ಆ ತರಹ ಅಪಾದನೆಯು ಅನುಚಿತವಾದುದೆಂದು ಉತ್ತರಕೊಡಲಾಯಿತು. ಈ ಇಲಾಖೆಯ ಕೆಲಸವು ಗೋಪ್ಯವಾದುದರಿಂದ ಹೀಗೆ ಮಾಡಲಾಗಿದೆಯೇ? ಎಂಬ ಪ್ರಶ್ನೆಗೆ ಸ್ವಲ್ಪಮಟ್ಟಿಗೆ ಹೌದು ಎಂದು ಹೇಳಲಾಯಿತು. ಅನುಭವಸ್ಥರಾದ ಬ್ರಾಹ್ಮಣೇತರರನ್ನೇಕೆ ತೆಗೆದುಕೊಳ್ಳಬಾರದೆಂಬ ಪ್ರಶ್ನೆಗೆ ಅನೇಕ ಬಾರಿ ಪ್ರಯತ್ನಿಸಿ ವಿಫಲವಾಯಿತೆಂಬ ಉತ್ತರ ಬಂತು. ಈ ಸ್ಥಾನಕ್ಕೆ ಬ್ರಾಹ್ಮಣರನ್ನೇ ಏಕೆ ಚುನಾಯಿಸಿರುವಿರೆಂದು ಕೇಳಲು ಚುನಾವಣೆಯಲ್ಲಿ, ಸೀನಿಯಾರಿಟಿ ನೋಡಿ ಕೊಡಲಾಗಿದೆ ಎಂದು ತಿಳಿಸಲಾಯಿತು. ಅವರ ಭವವಿಲ್ಲದವರನ್ನು ತೆಗೆದುಕೊಳ್ಳುವುದರಿಂದ ಸರಿಯಾಗಿ ಕೆಲಸ ನಡೆಯುವುದಿಲ್ಲವೆಂದೂ ಹೇಳಲಾಯಿತು.

— —

ಕೊಲ್ಹಾಪುರ ಸಂಸ್ಥಾನದಲ್ಲಿ ಚುನಾಯಿತ ಮಂತ್ರಿಗಳಿಬ್ಬರು

ಕೊಲ್ಹಾಪುರದ ಸಂಸ್ಥಾನದ ನ್ಯಾಯ ವಿಧಾಯಕ ಸಭೆಯಿಂದ ಇಬ್ಬರು ಮಂತ್ರಿಗಳನ್ನು ಚುನಾಯಿಸಿಕೊಳ್ಳಲು ಅಲ್ಲಿನ ರಿಜೆನ್ಸಿ ಕೌನ್ಸಿಲ್ ತೀರ್ಮಾನಿಸಿದೆ. ಅನೇಬ್ಲಿಯಿಂದ ಚುನಾಯಿತರಾಗಿರುವ ... [illegible] ... ನ್ಯಾಯ ವಿಧಾಯಕ ಸಭೆ ... [illegible]

ಪತ್ರಿಕಾ ಟೀಕೆಯಿಂದ ಹಕ್ಕು ಬಾಧ್ಯತೆಗೆ ಲೋಪವಿಲ್ಲ

ಸ್ವಂ.ಸು.ಫೋ.] ಬೆಂಗಳೂರು ೨೮

" ಅರಮನೆ ಮೇಲೆ ಪಾಕೀಸ್ತಾನ ಧ್ವಜವನ್ನು ಏರಿಸುವುದೊಂದೇ ಬಾಕಿ" ಎಂಬ ಶಿರೋನಾಮೆಯಲ್ಲಿ ವಿಶ್ವಕರ್ನಾಟಕ ಪತ್ರಿಕೆಯು ಬರೆದಿದ್ದ ಲೇಖನವು ತಮ್ಮ ಹಕ್ಕಿಗೆ ಲೋಪ ತರುವುದೆಂದು ಶಾಸನ ಸಭಾ ಸದಸ್ಯರಾದ ಮಿ|| ಅಬ್ದುಲ್ ರಹಿಮಾನ್‌ರವರು ಸೂಚನೆ ತಂದಿದ್ದರು. ಪತ್ರಿಕೆಯಲ್ಲಿ ಬಂದಿರುವ ವರದಿಯು ಸರಿಯೆಂದು ಸದರೀ ಸದಸ್ಯರು ಒಪ್ಪಿಕೊಂಡಿದ್ದುದರಿಂದ ಸಂಪಾದಕರ ಟೀಕೆಯು ಹಕ್ಕು ಬಾಧ್ಯತೆಯ ವಿಷಯವಾಗುವುದಿಲ್ಲವೆಂದು ಹೇಳಿ ಅಧ್ಯಕ್ಷರು ಅದನ್ನು ತಳ್ಳಿ ಹಾಕಿದರು.

ನಿಲುವಳಿ ನಿರ್ಣಯವನ್ನು ದಿವಾನರು ತಳ್ಳಿ ಹಾಕಿದರು

ಶ್ರೀ ತಿಮ್ಮಾರೆಡ್ಡಿಯವರ ದಸ್ತಗಿರಿ, ಮೊಕದ್ದಮೆ, ಶಿಕ್ಷೆ ಇವುಗಳಿಗೆ ಸಂಬಂಧಪಟ್ಟ ಸರ್ಕಾರದ ನೀತಿಯನ್ನು ಖಂಡಿಸಲು ಶ್ರೀ ಚೆಂಗಲರಾಯರೆಡ್ಡಿ ಮತ್ತು ಇತರರು ನಿಲುವಳಿ ನಿರ್ಣಯವೊಂದನ್ನು ತರಬಯಸಿದ್ದರು. ಸಭೆಯಲ್ಲಿ ಈ ವಿಷಯವು ಪರಿಶೀಲನೆಗೆ ಬರುವುದಕ್ಕೆ ಮುಂಚೆಯೇ ದಿವಾನರು ಅದರ ಚರ್ಚೆಯು ಸಾರ್ವಜನಿಕ ಹಿತಕ್ಕೆ ಅನುಕೂಲವಾಗಿಲ್ಲವೆಂದು ತಿಳಿಸಿ ಅದನ್ನು ತಳ್ಳಿ ಹಾಕಿದ್ದರು. ದಿವಾನರ ಈ ವರ್ತನೆಯು ನಿರಂಕುಶವಾದುದೆಂದೂ ಅದನ್ನು ಶಾಸನ ಪ್ರತಿಬಂಧಕವಾದುದಾಗಿಯೂ ಸಭೆಯಲ್ಲಿ ಈ ವಿಷಯವನ್ನು ತೀರ್ಮಾನಿಸಬೇಕು ಬೇಡವೇ ಎಂಬ ನಿರ್ಧಾರವು ಆಗುವುದಕ್ಕೆ ಮುಂಚೆ ದಿವಾನರು ತಳ್ಳಿ ಹಾಕುವುದು ಅಕ್ರಮವೆಂದು ಶ್ರೀ ರೆಡ್ಡಿಯವರು ಹೇಳಿದರು. ದಿವಾನರಿಗೆ ಹಾಗೆ ಮಾಡಲು ಕಾನೂನಿನಲ್ಲಿ ಅವಕಾಶ ಕೊಡಲಾಗಿದೆಯೆಂದು ಶ್ರೀ ಪಲ್ಲರೆಡ್ಡಿಯವರು ತಿಳಿಸಿದರು. ಅಧ್ಯಕ್ಷರು ಅದನ್ನೇ ಎತ್ತಿ ಹಿಡಿದು ದಿವಾನರ ತೀರ್ಮಾನದ ಮೇಲೆ ಚರ್ಚೆಗೆ ಅವಕಾಶವಿಲ್ಲವೆಂದು ಹೇಳಿದರು.

ಗೃಹ ಸಮಿತಿ

ಶಾಸನ ಸಭೆಯ ಗೃಹ ಸಮಿತಿಗೆ ಶ್ರೀಗಳಾದ ಟಿ. ಮರಿಯಪ್ಪಗೌಡ, ಚನ್ನಿಗರಾಮಯ್ಯ, ಕೆ. ಲಕ್ಕಪ್ಪ, ಹೆಚ್. ಆರ್. ಗುರುವ ರೆಡ್ಡಿ, ಇವರುಗಳು ಚುನಾಯಿತರಾಗಿದ್ದಾರೆ.

ದ|| ಆಫ್ರಿಕಕ್ಕೆ ಪ್ರತೀಕಾರ

ಭಾರತ ಸರ್ಕಾರದವರು ಮಾಡಿರುವಂತೆಯೇ ದ|| ಆಫ್ರಿಕದ ಪ್ರತೀಕಾರದ ವಿಧಾನ ... [illegible] ... ದ|| ಆಫ್ರಿಕದ ... ಮೇಲೆ ಜಾರಿ ಮಾಡುವಂತೆ ... ಸಭೆಯಲ್ಲಿ ನಿರ್ಣಯ ಮಾಡಲಾಗಿದೆ.

—

ವಿನಿಯೋಗದ ಪ್ರಯಾಣ

ಭಾರತದ ... [illegible] ... ಲಾರೆನ್ಸ್‌ರೂ, ಸರ್ ಕ್ರಿಪ್ಸರೂ, ನಾಳೆ ದೆಹಲಿಯಿಂದ ... [illegible] ... ಕರಾಚಿಗೆ ... [illegible]

ಸಾಧ್ವಿ

ತಾ॥ ೨೮-೬-೪೬ ಶುಕ್ರವಾರ

ಕಾವಲುಗಾರ ಸರ್ಕಾರ

ಹಿಂದೂಸ್ಥಾನದಲ್ಲಿ ಹಳೇ ಸರ್ಕಾರ ಹೋಯಿತು; ರಾಷ್ಟ್ರೀಯ ಸರ್ಕಾರ ಬರಲಿಲ್ಲ. ಈ ಮಧ್ಯೆ 'ಕಾವಲುಗಾರ' ಸರ್ಕಾರವೊಂದು ರಚಿತವಾಗಿದೆ. ಇದಕ್ಕೆ 'ಕೇರ್ ಟೇಕರ್' ಸರ್ಕಾರವೆಂದು ಹೆಸರು ಕೊಡಲಾಗಿದೆ. ಪ್ರಮುಖ ರಾಜಕೀಯ ಸಂಘಗಳಲ್ಲಿ ಯಾವುದೂ ರಾಷ್ಟ್ರೀಯ ಸರ್ಕಾರದ ಬಗ್ಗೆ ಒಪ್ಪಂದವುಂಟಾಗದಿದ್ದುದರಿಂದ ಈ ಏರ್ಪಾಡನ್ನು ಮಾಡುವುದಾಗಿ ನಿಯೋಗದವರು ತಿಳಿಸಿದ್ದಾರೆ. ಇದು ರಾಷ್ಟ್ರೀಯ ಸರ್ಕಾರದ ರಚನೆಯಾಗುವವರೆಗೆ ಮಾತ್ರ ಕೆಲಸ ಮಾಡುವುದು.

ಕೇಂದ್ರದಲ್ಲಿ ಹೊಸ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸಿಯೇ ಹಿಂದಿರುಗುವುದಾಗಿ ನಿಯೋಗದವರು ಮಾಡಿದ್ದ ಸಂಕಲ್ಪವು ಈಗ ಈಡೇರಿರುವುದಿಲ್ಲ. ಆದರೂ ಅವರು ತಮ್ಮ ಪ್ರಯತ್ನವನ್ನು ತ್ಯಜಿಸುವುದಾಗಿ ಹೇಳಿಲ್ಲ. ಮೂರು ತಿಂಗಳ ಕಾಲ ತಾವು ತಮ್ಮ ಕೆಲಸ ಕಾರ್ಯಗಳನ್ನು ಬಿಟ್ಟು ಇಲ್ಲಿ ನಡೆಸಿದ ಪ್ರಯತ್ನಗಳು ಈ ಭಾಗದಲ್ಲಿ ಫಲಕಾರಿಯಾಗಿಲ್ಲದಿರುವುದರಿಂದಲೂ, ಭಾರತದ ನಾಯಕರುಗಳಿಗೂ ಈ ಸಂಧಾನಗಳಿಂದ ವಿಶೇಷ ಪ್ರಯಾಸವುಂಟಾಗಿರುವುದರಿಂದಲೂ ಸಧ್ಯಕ್ಕೆ ಈ ಪ್ರಯತ್ನವನ್ನು ಇಲ್ಲಿಗೆ ನಿಲ್ಲಿಸಿ ಮುಂದೆ ಅದನ್ನು ಪುನ್ಹ ಆರಂಭಿಸುವುದಾಗಿ ತಿಳಿಸಿದ್ದಾರೆ. ಈ ಮಧ್ಯೆ ಸರ್ಕಾರದ ಕೆಲಸಗಳು ನಡೆಯಬೇಕು. ಆದುದರಿಂದ ಈ ಹೊಸ ವ್ಯವಸ್ಥೆಯನ್ನು ಮಾಡಲಾಗುವುದು, ಎಂದು ಅವರು ಹೇಳುವರು.

ನೂತನ ಸರ್ಕಾರದಲ್ಲಿ ಬರೀ ಅಧಿಕಾರಿ ವರ್ಗದವರೇ ಮಂತ್ರಿಗಳಾಗಿರುವರೆಂದು ತಿಳಿಸಲಾಗಿದೆ. ರಾಜಕೀಯ ಸಂಘದವರು ನಿರಾಕರಿಸಿದ ಮೇಲೆ ಅಧಿಕಾರಿಗಳೇ ನಡೆಸಬೇಕಾದುದು ಸಿದ್ಧ. ಆದರೆ ಇದರ ಅವಶ್ಯಕತೆಯಾದರೂ ಏನಿತ್ತೆಂಬುದು ಪ್ರಶ್ನೆ. ಕೆಲವು ದಿನಗಳ ಹಿಂದೆ ಪ್ರಾಂತಗಳಲ್ಲಿ ಕಾಂಗ್ರೆಸ್ ಮಂತ್ರಿಗಳು ರಾಜೀನಾಮೆ ಕೊಟ್ಟಾಗ ಗೌರ್ನರುಗಳೇ ಆಡಳಿತ ನಡೆಸಲಿಲ್ಲವೇ? ಸಲಹೆಗಾರರನ್ನು ನೇಮಿಸಿಕೊಂಡು ಅವರು ಕೆಲಸವನ್ನು ಸಾಗಿಸಲಿಲ್ಲವೇ? ಅದರಂತೆ ಮಾತ್ರವೇ ಮಾಡು[illegible] ದಾರಿಯೇನು? ಹೊಸದು ಬಿಟ್ಟದ್ದೇನು? ಇದುವರೆಗೆ ಇಂಡಿಯಾ ಸರ್ಕಾರದ ಮಂತ್ರಿಗಳಾಗಿದ್ದ [illegible] ಹೇಳಿದ್ದ ಪ್ರಕಾರ ಒದಗಿರುವ ಸರ್ಕಾರವು [illegible] ರಾಷ್ಟ್ರೀಯ [illegible] ಬಗೆದು. ಆದರೆ ಇದು [illegible] ರಾಷ್ಟ್ರೀಯ ಸರ್ಕಾರವಾಗ [illegible]

[illegible]

ನೆಹರೂರವರನ್ನು ಕಾಶ್ಮೀರಕ್ಕೆ ಬಿಡಬೇಡಿ

ಪಂಡಿತ ನೆಹರೂರವರು ಕಾಶ್ಮೀರಕ್ಕೆ ಹೋಗುವುದರಿಂದ ಕೋಮುವಾರು ಗಲಭೆ ಆಗುತ್ತದೆಂದು [illegible] ಸೂಚಿಸಿ ಅವರನ್ನು ಒಳಗೆಬಿಡಬಾರದೆಂದು ಅಲ್ಲಿನ ಮುಸ್ಲಿಂ ಸಮ್ಮೇಳನಾಧ್ಯಕ್ಷರು ವೈಸರಾಯರಿಗೆ ತಂತಿ ಕಳುಹಿಸಿದ್ದಾರೆ.

ಸರ್ದಾರರ ರಾಯಭಾರ

ರಾಜ್ಯಾಂಗ ರಚನಾ ಸಭೆಯಲ್ಲಿ ಸಂಸ್ಥಾನದ ಪ್ರಜಾ ಪ್ರತಿನಿಧಿಗಳ ಸ್ಥಾನಮಾನಗಳ ಬಗ್ಗೆ ಚರ್ಚೆ ನಡೆಸಲು ನರೇಂದ್ರ ಮಂಡಲದ ಅಧ್ಯಕ್ಷರಾದ ಭೂಪಾಲ್ ನವಾಬರು ಸರ್ದಾರ್ ಪಟೇಲರಿಗೆ ಆಹ್ವಾನ ಕಳಿಸಿದ್ದಾರೆ. ಪಟೇಲರು ದೆಹಲಿಯಿಂದ ಅಲ್ಲಿಗೆ ವಿಮಾನದಲ್ಲಿ ತೆರಳಲಿದ್ದಾರೆ.

ವೆ. ಇದಕ್ಕೆ ಈಗಾಗಲೇ ಸಿದ್ಧತೆಗಳಾಗುತ್ತಿವೆ. ಈ ಕೆಲಸವು ಯಶಸ್ವಿಯಾಗಿಯೂ ತೃಪ್ತಿಕರವಾಗಿಯೂ ನಡೆಯಲು ಕೇಂದ್ರದಲ್ಲಿ ಬಲವಾದ ರಾಷ್ಟ್ರೀಯ ಸರ್ಕಾರವು ಇರಬೇಕೆಂದು ಎಲ್ಲರೂ ಒತ್ತಾಯ ಪಡಿಸುತ್ತಿದ್ದಾರೆ. ಆದರೆ ಈಗ ಅದಕ್ಕೆ ವ್ಯವಸ್ಥೆಯು ಆಗಿಲ್ಲ. ಕಾವಲುಗಾರ ಸರ್ಕಾರದಿಂದ ಈ ಕೆಲಸವು ಎಷ್ಟು ತೃಪ್ತಿಗೆ ನಡೆಯುವುದೋ ಗೊತ್ತಿಲ್ಲ. ರಾಜ್ಯಾಂಗ ಸಮಿತಿಯ ಕೆಲಸಗಳು ಕ್ರಮವಾಗಿ ಆರಂಭವಾಗುವುದರೊಳಗಾದರೂ ಬ್ರಿಟಿಷ್ ಸರ್ಕಾರದವರು ರಾಜಕೀಯ ತತ್ವಗಳ ಆಧಾರದ ಮೇಲೆ ಬಲವಾದ ರಾಷ್ಟ್ರೀಯ ಸರ್ಕಾರವನ್ನು ಸ್ಥಾಪಿಸುವುದು ಸೂಕ್ತವಾಗಿದೆ.

ನವಜ್ಯೋತಿ ಸ್ಟುಡಿಯೋಸ್

ರಾಜಧಾನಿಯ ದಿವಾನರ ರಸ್ತೆಯಲ್ಲಿರುವ ಮೇಲ್ಕಂಡ ಸಂಸ್ಥೆಯ ಕಚೇರಿಯನ್ನು ಈ ದಿನದಿಂದ ಸರಸ್ವತಿಪುರದ ಮೈತ್ರಿಯವರ ತೋಟದಲ್ಲಿ ಹೊಸದಾಗಿ ಕಟ್ಟಿರುವ ಸ್ವಂತ ಕಟ್ಟಡಕ್ಕೆ ವರ್ಗಾಯಿಸಲಾಗಿದೆ. ಮಹಾಜನರು ತಮ್ಮ ಪತ್ರವ್ಯವಹಾರಗಳನ್ನು ಹೊಸ ವಿಳಾಸಕ್ಕೊಡನೆ ನಡೆಸಬೇಕೆಂದು ಪ್ರಾರ್ಥನೆ.

ಜಿ. ಆರ್. ರಾಮಯ್ಯ,
ಮ್ಯಾನೇಜಿಂಗ್ ಪಾರ್ಟನರ್.

ಭುಲಾಭಾಯಿ ರಸ್ತೆ

ಬೊಂಬಾಯಿ ನಗರದ ಮಲಬಾರ್ ಹಿಲ್ಸಿನಲ್ಲಿರುವ "ವಾರ್ಡನ್" ರಸ್ತೆಯನ್ನು ಇನ್ನು ಮೇಲೆ "ಭುಲಾಭಾಯಿ ರಸ್ತೆ" ಎಂದು ಕರೆಯಬೇಕೆಂದು ಬೊಂಬಾಯಿ ಪುರಸಭೆ ನಿರ್ಧರಿಸಿದೆ.

ಹೋಬಳಿ ಸಲಹಾ ಸಮಿತಿ.

ಚಾಮರಾಜನಗರ ತಾ॥ ಸಂತೆ ಮರಳ್ಳಿ ಹೋಬಳಿ ಸಲಹಾ ಸಮಿತಿ ಸಭೆಯು [illegible]ಪುರದಲ್ಲಿ ನಂಜನಗೂಡು ಸಬ್ ಡಿವಿಷನ್ ಆಫೀಸರಾದ ಶ್ರೀ ಜಿ ನರಸಿಂಹಯ್ಯನವರ ಅಧ್ಯಕ್ಷತೆಯಲ್ಲಿ ಜರುಗಿತು. ತಾ॥ ಅಮಲ್ದಾರರಾದ ಶ್ರೀ ಬೇಗ್ ಸಾಹೇಬ್ ಮತ್ತು ಇತರ ಅಧಿಕಾರಿಗಳು ಹಾಜರಿದ್ದು ಹೋಬಳಿ ಅಭಿವೃದ್ಧಿಯನ್ನು ನೋಡಿ ತಮ್ಮ ಮೆಚ್ಚುಗೆಯನ್ನು ವ್ಯಕ್ತಪಡಿಸಿದರು.

ಬೆಂಗಳೂರಿನಲ್ಲಿ ವಿದ್ಯುಚ್ಛಕ್ತಿಯ ದೀಪ ಇಲ್ಲದೆ ಇರುವ ಮನೆಗಳಿಗೆ ಕೊಡುತ್ತಿದ್ದ ಸೀಮೆಎಣ್ಣೆ ಪ್ರಮಾಣವನ್ನು ಒಂದೂವರೆ ಸೀಸೆಗೆ ಬದಲು ಎರಡು ಸೀಸೆ, ಎರಡು ಸೀಸೆ ಕೊಡುತ್ತಿದ್ದವರಿಗೆ ಎರಡೂವರೆ ಸೀಸೆಗಳಂತೆಯೂ ಕೊಡಲಾಗುವುದು.

ಪ್ರಸಿದ್ಧ ಪತ್ರಿಕೆ

ಮೈಸೂರು ಶ್ರೀರಾಂಪೇಟೆಯಲ್ಲಿರುವ ಡೋರ್ ನಂ [illegible] ನೇ ಮನೆಯನ್ನು ಗೋವಿಂದಚೆಟ್ಟಿಪ್ಪನವರ ಮಕ್ಕಳು ಜ. ಸುಬ್ಬಾಚೆಟ್ಟಿಪ್ಪನವರು ತಾ॥ [illegible] ನೇ ಮಾರ್ಚಿ ಅಗ್ರಿಮೆಂಟ್ ಮೂಲಕ ನನಗೆ ಕ್ರಯಕ್ಕೆ ಕೊಡಲು ಒಪ್ಪಿ ಮನೆ ನನ್ನ ಸ್ವಾಧೀನದಲ್ಲಿದೆ. ಕೋರ್ಟಿನಲ್ಲಿ ವ್ಯವಹಾರ ನಡೆಯುತ್ತಿದೆ. ಸದರಿ ಸುಬ್ಬಾಚೆಟ್ಟಿಪ್ಪನವರು ಬೇರೆ ಕ್ರಯ ಮಾಡುವುದಾಗಿ ತಿಳಿದಿದೆ. ಆ ರೀತಿ ಕ್ರಯಕ್ಕೆ ಪಡೆಯತಕ್ಕವರು ನನಗಾಗಿರತಕ್ಕ ನಾವಿರಾರು ರೂ. ಗಳ ಲುಕ್ಸಾನು, ಅಡ್ವಾನ್ಸ್ ೫೦೦ ರೂ ಗಳನ್ನು ಸಹ ವಾಪಸು ಮಾಡಲು ಬದ್ಧರಾಗಬೇಕಾಗುತ್ತೆಂಬ ಅಂಶವನ್ನೂ ಹಾಗೆ ಕ್ರಯಕ್ಕೆ ಪಡೆದರೆ ಅದು ಊರ್ಜಿತವಾಗುವುದಿಲ್ಲವೆಂಬ ಅಂಶವನ್ನೂ ಈ ಮೂಲಕ ತಿಳಿಯಪಡಿಸಿದೆ.

ಉಡುಪಿ ಲಕ್ಷ್ಮೀನಾರಾಯಣಾಚಾರ್.

ಪಟೇಲ-ಶ್ಯಾನುಭೋಗರಿಗೆ ತುಟ್ಟಿಭತ್ಯವಿಲ್ಲವೆ?

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

(ಸ್ವಂ.ವ.) ಬೆಂಗಳೂರು [illegible]

ಸಂಸ್ಥಾನದ ದಿವಾನರು ಅನೇಕ ಸ[illegible] ಇಂಗ್ಲೆಂಡಿಗೆ ತೆರಳಿದ್ದಾಗ ಅವರ [illegible] ಖರ್ಚನ್ನೆಲ್ಲಾ ಕೇಂದ್ರ ಸರ್ಕಾರವೇ ವಹಿಸಿಕೊಂಡಿತೆಂದೂ, ದಿವಾನರಿಗೆ ಸಂಬಳ ಮಾತ್ರ ಮೈಸೂರು ಸರ್ಕಾರದಿಂದ ಕೊಡಲಾಯಿತೆಂದೂ, ಶ್ರೀ ಕೆ ಎಂ ಕೃಷ್ಣಪ್ಪಗೌಡರು ಕೇಳಿದ ಪ್ರಶ್ನೆಗೆ ಉತ್ತರ ಕೊಡಲ್ಪಟ್ಟಿತು.

ಶ್ರೀ ಕೆ ವೆಂಕಟರಾಮಪ್ಪನವರು ಮೈಸೂರು ನ್ಯಾಯಾಂಗ ಶಾಖೆಯ ನೌಕರಿ ಗ್ರೇಡುಗಳ ಪುನರ್ವಿಮರ್ಶೆ ವಿಚಾರದಲ್ಲಿ ಕೇಳಿದ ಪ್ರಶ್ನೆಗೆ ನ್ಯಾಯಾಂಗ ಕಾರ್ಯದರ್ಶಿಗಳು ಉತ್ತರವಿತ್ತು, ಈ ಬಗ್ಗೆ ಶ್ರೇಷ್ಠ ನ್ಯಾಯಾಸ್ಥಾನದ ವರದಿ ಬಂದಿದೆಯೆಂದೂ, ಅದು ಸರ್ಕಾರದ ಪರಿಶೀಲನೆಯಲ್ಲಿದೆಯೆಂದೂ ತಿಳಿಸಿದರು.

ಗ್ರಾಮಾಧಿಕಾರಿಗಳು ಸರ್ಕಾರಿ ನೌಕರರು ಪಡೆಯುತ್ತಿರುವಂತೆ ತುಟ್ಟಿಭತ್ಯವನ್ನು ಪಡೆಯುತ್ತಿರುವರೇ? ಎಂದು ಶ್ರೀ ಎಸ್. ಕೃಷ್ಣಸ್ವಾಮಿರಾಯರು ಕೇಳಿದ ಪ್ರಶ್ನೆಗೆ ಶ್ರೀ ಟಿ. ಪುಲ್ಲರೆಡ್ಡಿಯವರು ಉತ್ತರಕೊಟ್ಟು ಇಲ್ಲ, ಎಂದರು.

● ಮೌಲಾನಾ ಆಜಾದ್, ಪಂ॥ ನೆಹರು, ಸ॥ ಪಟೇಲ್, ರಾಜೇಂದ್ರ ಪ್ರಸಾದ್, ಮುಂತಾದ ಕಾಂಗ್ರೆಸ್ ಮಹಾ ನಾಯಕರುಗಳೆಲ್ಲರೂ ರಾಜ್ಯಾಂಗ ರಚನಾ ಸಭೆಯ ಚುನಾವಣೆಗೆ ನಿಲ್ಲಬೇಕೆಂದು ಕಾಂಗ್ರೆಸ್ ನಿರ್ಧರಿಸಿದೆ. ಅಲ್ಲದೆ ಕಾಂಗ್ರೆಸ್ಸಿನವರಲ್ಲದ ಸರ್ ಎನ್ ಗೋಪಾಲಸ್ವಾಮಿ, ಸರ್ ಅಲ್ಲಾಡಿ, ಕೆ. ಎಂ. ಮುನ್ಷಿ, ಪಂ॥ ಕುಂಜ್ರು, ಅಂಬೇಡ್ಕರ್, ಸಪ್ರು ಮತ್ತು ಸರ ರಾಧಾಕೃಷ್ಣನ್ ಮುಂತಾದವರನ್ನು ಆರಿಸಬೇಕೆಂದು ಸೂಚಿಸಿದೆ. ಗಾಂಧೀಜಿಯವರು ನಿಲ್ಲುವುದಿಲ್ಲ.

Office of the President
City Municipal Council Mys[illegible]
Dated 25th June 1946.

NOTICE

Quotations are called for for stitching and supplying uniforms to the Municipal Employees of the City Municipal Council, Mysore, subject to the conditions imposed in the Tender Notification dated 25th June 1946 which can be seen on the Notice Board of the Offices of the Municipal President and Engineer.

The tenders should be presented to the Municipal Engineer on Saturday the 29th June 1946 at 1 P. M. at his Office.

R. Ramachandra Rao Bhombore,
President.

ರಾಜ್ ಕಮಲ್ ಟಾಕೀಸ್,
ಮೈಸೂರು
(ಭವ್ಯ ಕಲಾ ಚಿತ್ರ ಮಂದಿರ)
ಅಮೋಘವಾದ ಎರಡನೇ ವಾರ
೨೬—೬—46 ನೇ ಬುಧವಾರದಿಂದ
ಸ್ವರ್ಣಲತಾ ಅಜೂರಿ } ರತನ್ { ವಾಸ್ತಿ ಕರಣ್ ದಿವಾನ್
ಸಮಾಜದ ಆದರ್ಶ ಚಿತ್ರವೂ, ಕಲ್ಪನಾ ಮನೋಹರವಾಗಿಯೂ, ಲೋಕಾನುಭವ ಜನ್ಯವಾಗಿಯೂ ಇರುವ ಪ್ರಗತಿಶೀಲವಾದ ದಿವ್ಯ ಚಿತ್ರ.
ನೀವೂ, ನಿಮ್ಮ ಬಂಧು ಮಿತ್ರರೂ ನೋಡಿ ಆನಂದಿಸುವ
ರಮಣೀಯವಾದ ಕಲಾ ಚಿತ್ರ
ಸ್ತ್ರೀಯರಿಗೆ ಪ್ರತ್ಯೇಕ ಸ್ಥಳ ಮತ್ತು ಸೌಕರ್ಯವನ್ನು ಕಲ್ಪಿಸಿದೆ
ನೀವು ಇದುವರೆಗೂ ನೋಡದಿದ್ದರೆ ಇಂದೇ ಬಂದು ನೋಡಿ!
ನೋಡಿ ಆನಂದಿಸಿರಿ!!
ಪ್ರತಿ ದಿನ ಮೂರು ಆಟಗಳು

[illegible] ಪ್ರೆಸ್, ಮೈಸೂರು.

Edited, printed and published by A. R. Nagaraian at the Sadhvi Press, D Subbiah Road Mysore.

ಫೋನ್ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಶನಿವಾರ ೨೯—೬—೪೬ [ಸಂಚಿಕೆ ೨೪೬

ನಾಳೆ ಮಧ್ಯರಾತ್ರಿಯಲ್ಲಿ ಅಣು ಬಾಂಬು ಪರೀಕ್ಷೆ

ಸರ್ಕಾರದ ಮೇಲೆ ದಾವ

ಗುತ್ತಿಗೆದಾರರಿಗೆ ಫಸಲು ಬೆಲೆ ಕೊಡುವುದು ಸರಿಯಲ್ಲ

ಸ್ವಂ ಸು.] ಶ್ರೀರಂಗಪಟ್ಟಣ ೨೮

ಸುಗ್ಗಿಯ ಆಜ್ಞೆಯ ೧೫ ನೇ ನಿಯಮವನ್ನು ಅನುಸರಿಸಿ, ಗುತ್ತಿಗೆದಾರರೇ ಆಗಲೀ ಮುತ್ತರೇ ಆಗಲೀ ಜಮೀನುದಾರರ ಪರವಾಗಿ ಸರ್ಕಾರ ಡಿಪೋಗೆ ದಾಖಲುಮಾಡಿದ ಭತ್ತದ ಕಿಮ್ಮತ್ತು, ಜಮೀನುದಾರರಿಗೇ ಸಲ್ಲತಕ್ಕದ್ದಾಗಬೇಕೆಂದು ತಮ್ಮ ಮುಂದಿರುವ ದಾವೆಯೊಂದರಲ್ಲಿ ಶ್ರೀರಂಗಪಟ್ಟಣದ ಮುನ್ಸೀಫರು ವಾದಿಯಾದ ಶ್ರೀ ನಾಯುಡ್ ರಘುನಾಥರಾಯರಿಗೆ ಭತ್ತದ ಕಿಮ್ಮತ್ತು, ೬ ತಿಂಗಳ ಬಡ್ಡಿ ಮತ್ತು ಕೋರ್ಟು ಖರ್ಚನ್ನು ಸರ್ಕಾರದವರು ವಾಪಸಿ ಮಾಡಬೇಕೆಂದು ಆಜ್ಞೆ ಮಾಡಿದರು.

ಶ್ರೀ॥ ನಾಯುಡ್ ಶ್ರೀನಿವಾಸರಾಯರಿಗೆ ಶ್ರೀರಂಗಪಟ್ಟಣದ ಸರಹದ್ದಿನಲ್ಲಿ ಜಮೀನಿದೆ. ಅವರ ಜಮೀನು ಬಾಬ್ತು ಭತ್ತವನ್ನು ಗುತ್ತಿಗೆದಾರರಾದ ನಾರಾಯಣ ಗೌಡರು ಜಮೀನುದಾರರ ಸಲುವಾಗಿ ಸರ್ಕಾರಿ ಡಿಪೋವಿಗೆ ಭತ್ತವನ್ನು ದಾಖಲುಮಾಡಿದರು. ಕೆಲ ಕಾಲಾನಂತರ ಶ್ರೀನಿವಾಸರಾಯರು ರೆವಿನ್ಯೂ ಅಧಿಕಾರಿಗಳನ್ನು ಹಣಕ್ಕಾಗಿ ಕೇಳಿದಾಗ ಹಣವನ್ನು ಗುತ್ತಿಗೆದಾರರ ವಶಕ್ಕೆ ಕೊಡಲಾಗಿದೆ ಎಂದು ಅವರಿಗೆ ತಿಳಿಸಲಾಯಿತು. ಸುಗ್ಗಿಯ ಆಜ್ಞೆಯ ಪ್ರಕಾರ ಸರ್ಕಾರದವರು ತಮಗೆ ಹಣವನ್ನು ದಾಖಲು ಮಾಡದೆ ಗುತ್ತಿಗೆದಾರರಿಗೆ ಕೊಟ್ಟದ್ದು ತಪ್ಪೆಂದು ಅವರು ... ಹಾಗೂ ... ಆದರೂ ತಕ್ಕ ಪರಿಹಾರ ದೊರೆಯಲಿಲ್ಲ. ... ಈ ವಿಚಾರದಲ್ಲಿ ಸರ್ಕಾರಿ ಮುಖ್ಯ ... ಗಳಿಗೂ ಅರ್ಜಿ ಹಾಕಿಕೊಂಡರೂ ... ಉತ್ತರವಿಲ್ಲವಾಗಿ ನಾಯುಡ್ ಶ್ರೀನಿವಾಸರಾಯರ ಮಕ್ಕಳು ಶ್ರೀ॥ ರಘುನಾಥರಾಯರು ಸುಗ್ಗಿ ಆಜ್ಞೆಯ ೧೫ ನೇ ಕಲಂ ಅನುಸರಿಸಿ ಸರ್ಕಾರದ ಮೇಲೆ ಭತ್ತದ ಕಿಮ್ಮತ್ತು ವಸೂಲಿಗಾಗಿ ಡಿಸ್ಟ್ರಿಕ್ಟ್ ಜಡ್ಜರ ಅನುಮತಿ ಪಡೆದು ಆರು ತಿಂಗಳ ಹಿಂದೆ ಮೊಕದ್ದಮೆ ಹೂಡಿದರು. ಸರ್ಕಾರದ ಮೇಲೆ ನಡೆಯುವ ಮೊಕದ್ದಮೆಗೆ ಸಂಬಂಧಪಟ್ಟ ... ಕಡ್ಡಾಯ ... ಈ ಮೊಕದ್ದಮೆಯನ್ನು ಶ್ರೀರಂಗಪಟ್ಟಣದ ಮುನ್ಸೀಫರೇ ಇತ್ಯರ್ಥಮಾಡಲು ವರ್ಗಾಯಿಸಿದ್ದರು. ... ವಿಚಾರಣೆಗೆ ಬಂದಾಗ ಸರ್ಕಾರದ ಪರ ವಕೀಲರು ಡಿಕ್ರಿಗೆ ಒಪ್ಪಿಕೊಂಡರು. ಭತ್ತದ ಕಿಮ್ಮತ್ತು, ಬಡ್ಡಿ ಮತ್ತು ಕೋರ್ಟು ಖರ್ಚು ಇವುಗಳನ್ನು ವಾದಿಯವರಿಗೆ ಸರ್ಕಾರದವರು ಕೊಡಬೇಕೆಂದು ನ್ಯಾಯಾಧೀಶರು ತೀರ್ಮಾನವಿತ್ತರು.

ರಕ್ತದಲ್ಲಿ ಸಿಪ್ಪಿರ ಪ್ರತಿಜ್ಞೆ

ಅಮ್ಮಿನಸರಕ್ಕೆ ಜುಲೈ ೫ ನೇ ತಾ॥ ನಿಯೋಗ ಒಯ್ಯಬೇಕೆಂದು ಎಲ್ಲಾ ಜಿಲ್ಲೆ ಮತ್ತು ಗ್ರಾಮಗಳ ... ಅಧ್ಯಕ್ಷರು ಮತ್ತು ಕಾರ್ಯದರ್ಶಿಗಳಿಗೆ, ... ಸಂಸ್ಥೆ ಅಧ್ಯಕ್ಷರು ಸೂಚನೆ ಇತ್ತಿದ್ದಾರೆ. ಜುಲೈ ೬ ನೇ ತಾ॥ ಬೆಳಗ್ಗೆ ... ಒಂದೆ ಪ್ರತಿಯೊಬ್ಬರೂ ಶ್ರೀ॥ ನಿಯೋಗ ... ಗಳನ್ನು ವಿರೋಧಿಸಲು ಪ್ರಾರಂಭವಾಗುವ ... ತ್ತರವಾಗಿ ... ಪ್ರತಿಜ್ಞೆಗೆ ಸಹಿ ಹಾಕಲಿದ್ದಾರೆ.

ಜಿನ್ನಾರವರ ಸ್ವರ್ಥಾಲಾಪ

ಕೇಂದ್ರ ತಾತ್ಕಾಲಿಕ ಸರ್ಕಾರಕ್ಕೆ ಸೇರಲು ಇಚ್ಛಿಸುವವರನ್ನೇ ಅಂಗೀಕರಿಸಿ ಸರ್ಕಾರವನ್ನು ಸ್ಥಾಪಿಸುವುದಾಗಿ ವೈಸರಾಯರು ಕೊಟ್ಟಿದ್ದ ಭರವಸೆಗೆ ಅನುಸಾರವಾಗಿ ಆ ಸರ್ಕಾರದಲ್ಲಿ ಸೇರುವುದಾಗಿ ಮಿ॥ ಜಿನ್ನಾರವರು ನಿರ್ಧರಿಸಿದ್ದು ಈಗ ನಿರಾಶರಾಗಿ ಕಾಂಗ್ರೆಸ್ಸನ್ನೂ, ವೈಸರಾಯರನ್ನೂ ಕಟುವಾಗಿ ಟೀಕಿಸಿದ್ದಾರೆ. ವೈಸರಾಯರು ವಿಶ್ವಾಸಘಾತ ಕರೆಂದು ಆರೋಪಿಸಿದ್ದಾರೆ. ಕಾಂಗ್ರೆಸ್ಸು ರಾಷ್ಟ್ರೀಯ ಸಂಸ್ಥೆಯೆಂಬುದೂ ಬರಿ ಆಟ; ಅದು ಸವರ್ಣ ಹಿಂದೂಗಳ ಸಂಸ್ಥೆ ಎಂದು ಕಾಂಗ್ರೆಸ್ಸನ್ನು ಮೂದಲಿಸಿ, ತಮಗೆ ಅಧಿಕಾರ ಸಿಗಲಿಲ್ಲವಲ್ಲಾ ಎಂದು ಪರಿತಾಪಪಟ್ಟಿದ್ದಾರೆ.

ಕಾವಲುಗಾರ ಸರ್ಕಾರ ಗುರುವಾರದಿಂದ

ಶ್ರೀ॥ ನಿಯೋಗದವರ ಮತ್ತು ವೈಸರಾಯ ಇತ್ತೀಚಿನ ಘೋಷಣೆಯಂತೆ ಕಾವಲುಗಾರ ಸರ್ಕಾರವನ್ನು ಇದೇ ಗುರುವಾರ ಸ್ಥಾಪಿಸಲಾಗುವುದು. ಬುಧವಾರ ಮಧ್ಯಾಹ್ನದೊಳಗೆ ಈಗಿನ ಮಂತ್ರಿಗಳೆಲ್ಲಾ ರಾಜೀನಾಮೆ ಕೊಡಬೇಕೆಂದು ಸೂಚನೆ ಕೊಡಲಾಗಿದೆ. ಈ ಹೊಸ ಅಧಿಕಾರಿ ಸರ್ಕಾರ ಮುಂದೆ ಸಂಧಾನ ಆರಂಭವಾಗುವವರೆಗ ಅಧಿಕಾರದಲ್ಲಿರುತ್ತದೆಂದು ಹೇಳಲಾಗಿದೆ. ಈ ಕೇರ್‌ಟೇಕರ್ ಸರ್ಕಾರ ಪ್ರಾಂತ್ಯಗಳಲ್ಲಿ ಅಡ್ವೈಸರ್ ಪ್ರಭುತ್ವವಿದ್ದಂತೆ ಇರುವುದು. ಇವರುಗಳ ಹೆಸರು ಇಂದು ಪ್ರಕಟವಾಗಲಿವೆ.

ರಾಜ್ಯಾಂಗ ಸಮಿತಿ ಅಧ್ಯಕ್ಷತೆಗೆ ನೆಹರೂರವರ ಹೆಸರು

ಕಾನ್‌ಸ್ಟಿಟ್ಯೂಯೆಂಟ್ ಅಸೆಂಬ್ಲಿಯ ಅಧ್ಯಕ್ಷತೆಗೆ ಕಾಂಗ್ರೆಸ್ಸಿನ ಪರವಾಗಿ ಪಂ॥ ಜವಹರಲಾಲ ನೆಹರೂರವರನ್ನು ಉಮೇದುವಾರರಾಗಿ ನಿಲ್ಲಿಸುವ ಸಂಭವ ಇದೆಯೆಂದು ತಿಳಿಯಬಂದಿದೆ.

ದ॥ ಆಫ್ರಿಕಾ ಸತ್ಯಾಗ್ರಹ

ಸತ್ಯಾಗ್ರಹ ಚಳುವಳಿ ನಾಯಕರಾದ ಡಾ॥ ಜಿ. ಎಂ. ನಾಯುಕರ್‌ರವರಿಗೆ ೬ ತಿಂಗಳ ಕಠಿಣ ಸಜಾ ವಿಧಿಸಲಾಗಿದೆ. ೨೦ ಮಂದಿ ಸತ್ಯಾಗ್ರಹಿಗಳು ತಲಾ ೩ ತಿಂಗಳ ಸಜಾ ಶಿಕ್ಷೆಗೆ ಗುರಿಯಾಗಿದ್ದಾರೆ. ಇವರೆಗೆ ಮತ್ತೆ ೪೩ ಮಂದಿ ಸತ್ಯಾಗ್ರಹಿಗಳ ದಸ್ತಗಿರಿ ಆಗಿರುವುದಾಗಿ ತಿಳಿದುಬಂದಿದೆ.

ಪಬ್ಲಿಕ್ ಪ್ರಾಸಿಕ್ಯೂಟರುಗಳ ನೇಮಕ

ಸ್ವಂ ಸು. ವರದಿ] ಬೆಂಗಳೂರು ೨೮

೧೯೪೬ ನೇ ಜುಲೈ ೧ ರಿಂದ ೩ ವರ್ಷಗಳ ಈ ಕೆಳಗೆ ಕಂಡಂತೆ ಪಬ್ಲಿಕ್ ಪ್ರಾಸಿಕ್ಯೂಟರುಗಳನ್ನು ನೇಮಿಸಲಾಗಿದೆ. ಶ್ರೀಗಳಾದ ಎಂ. ಮುನಿಸ್ವಾಮಯ್ಯ ಬೆಂಗಳೂರು, ಜಿ. ಮುದ್ದಪ್ಪ ತುಮಕೂರು, ಡಿ. ಓ. ರಾಮಚಂದ್ರರಾವ್ ಕೋಲಾರ, ಹೊಂಬೇಗೌಡ ಮಂಡ್ಯ, ಎಂ. ಎಸ್. ಸಿದ್ದಲಿಂಗಯ್ಯ ಹಾಸನ, ಡಿಸೋಜ ಕಡೂರು, ಬಿ. ಕೆ. ರಾಮಚಂದ್ರಯ್ಯ ಚಿತ್ರದುರ್ಗ ಮತ್ತು ಗುಲಾಂ ಅಬೀದ್ ಶಿವಮೊಗ್ಗ.

ದಿವಾನರ ಬಳಿ ನಾನ್ ಗೆಜೆಟೆಡ್ ಅಧಿಕಾರಿಗಳ ನಿಯೋಗ

ಸಕ್ರೆಟೆರಿಯೇಟಿನ ನಾನ್ ಗೆಜೆಟೆಡ್ ದರ್ಜೆಯ ಅಧಿಕಾರಿಗಳು ನಿನ್ನೆ ದಿನ ದಿವಾನರ ಬಳಿ ನಿಯೋಗ ಹೋಗಿ ತಮ್ಮ ತುಟ್ಟಿ ಭತ್ಯವನ್ನು ಹೆಚ್ಚಿಸಿ ಅದನ್ನು ೧೯೪೪ ರಿಂದಲೂ ಕ್ರಮವಾಗಿ ಜಾರಿಗೆ ಬರುವಂತೆ ಮಾಡಿಸಿ ಕೊಡಬೇಕೆಂದು ಪ್ರಾರ್ಥಿಸಿದರು. ದಿವಾನರು ಪರಿಶೀಲಿಸುವುದಾಗಿ ಭರವಸೆ ಇತ್ತರು.

ಲಂಚದ ನಿರ್ಮೂಲ ಪ್ರಯತ್ನ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ ಸು.] ಬೆಂಗಳೂರು ೨೮

ಲಂಚನಿರೋಧ ಸಮಿತಿಯ ವರದಿ ಯಾವಾಗ ಸರ್ಕಾರಕ್ಕೆ ತಲುಪಿತು? ಸರ್ಕಾರದ ಆಜ್ಞೆ ಅದರ ಮೇಲೆ ಆಗಿದೆಯೇ? ಆಗಿಲ್ಲದಿದ್ದರೆ ಯಾವ ಗತಿಯೊಳಗೆ ಆಗುವುದು ಎಂಬುದಾಗಿ ಕೇಳಿದ ಪ್ರಶ್ನೆಗೆ ೧೯೪೬ ನೇ ಮಾರ್ಚ್ ೪ ನೇ ತೇದಿಯಲ್ಲಿ ಆ ವರದಿ ಸರ್ಕಾರಕ್ಕೆ ತಲುಪಿದೆಯೆಂದೂ, ಸರ್ಕಾರದ ಆಜ್ಞೆ ಅತಿ ಜಾಗ್ರತೆ ಹೊರಬೀಳುವ ಸ್ಪಂದನ, ಆಹಾರದ ಇಲಾಖೆಯಲ್ಲಿ ಲಂಚದ ಹಾವಳಿ ಅಧಿಕವಾಗಿದೆಯೆಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿಲ್ಲವೆಂದೂ ಶಾಸನಸಭೆಯಲ್ಲಿ ಶ್ರೀ ಎಂ. ಶೇಷಾದ್ರಿಯವರು ಉತ್ತರವಿತ್ತರು. ಸರ್ಕಾರಿ ಆಜ್ಞೆ ಹೊರಬೀಳುವ ಮುನ್ನ ಅನುಮಾನ ಬರಬಹುದಾದ ಅಧಿಕಾರಿಗಳ ಆಸ್ತಿಪಾಸ್ತಿಗಳ ವಿಚಾರ ಪರಿಶೀಲನೆಗೆ ತೆಗೆದುಕೊಳ್ಳಲಾಗುವುದೇ ಎಂಬ ಉಪಪ್ರಶ್ನೆಗೆ ಉತ್ತರವಾಗಿ ಅದನ್ನೆಲ್ಲಾ ಹೇಳ... ಸಾಧ್ಯವಿಲ್ಲ ಎಂದು ತಿಳಿಸಲಾಯಿತು. ... ತಪ್ಪಿತಸ್ಥರೆಂಬ ಅಧಿಕಾರಿಗಳ ವಿಚಾರದಲ್ಲಿ ಉಗ್ರಕಾರ್ಯಕ್ರಮ ಕೈಗೊಳ್ಳಬೇಕೆಂದು ಹಲವು ಅಧಿಕಾರಿಗಳು ...

ಅಣುಬಾಂಬು ಪರೀಕ್ಷೆ

ನಾಳೆ ಮಧ್ಯರಾತ್ರಿಯಲ್ಲಿ ಪೆಸಿಫಿಕ್ ಸಾಗರದ ಬಿಕಿನಿ ಎಂಬಲ್ಲಿ ಅಣುಬಾಂಬು ಪ್ರಯೋಗದ ಪರಿಶೀಲನೆ ನಡೆಸಲು ಏರ್ಪಾಡಾಗಿದೆ. ನಾಶ ಮಾಡುವುದಕ್ಕಾಗಿ ಗೊತ್ತಾಗಿರುವ ೭೩ ಹಡಗುಗಳು ಮತ್ತು ನೆವಾಡ ಎಂಬ ಸಮರ ನೌಕೆಯ ಮೇಲೆ ಪ್ರಪಂಚದ ನಾಲ್ಕನೇ ಅಣುಬಾಂಬನ್ನು ಹಾಕಲಾಗುವುದು. ಈ ಪ್ರಯೋಗವನ್ನು ಪರಿಶೀಲಿಸಲು ನಲವತ್ತು ಸಾವಿರ ಜನ ವಿಜ್ಞಾನಿಗಳೂ ಕುಶಲ ಕೆಲಸಗಾರರೂ, ಪ್ರೇಕ್ಷಕರೂ ಅಲ್ಲಿ ಸೇರುವರು. ಈ ಪ್ರಯೋಗದಿಂದ ಫಿಲಿಪೈನ್ ದ್ವೀಪಗಳ ಕಡೆ ಎರಡು ಸಾವಿರ ಮೈಲಿ ದೂರ ಚಂಡಮಾರುತವು ಏಳಬಹುದೆಂದು ಊಹಿಸಲಾಗಿದೆ. ನಾಳೆ ಮಧ್ಯರಾತ್ರಿ ಆದನಂತರ ಬೆಳಗಿನ ಜಾವ ನಾಲ್ಕು ಘಂಟೆಗೆ ಒಂದು ಸೂಪರ್ ಫೋರ್ಟ್ರೆಸ್ ವಿಮಾನದಿಂದ ಈ ಬಾಂಬನ್ನು ಹಾಕಲಾಗುವುದು.

ಕಾಂಗ್ರೆಸ್ ಅಧ್ಯಕ್ಷತೆ

೩೦-೬-೪೬ ನೇ ದಿನ ನಡೆಯಲಿರುವ ಮೈಸೂರು ಕಾಂಗ್ರೆಸ್ ಅಧ್ಯಕ್ಷ ಚುನಾವಣೆಗೆ ಶ್ರೀ ಹೆಚ್. ಸಿ. ದಾಸಪ್ಪನವರ ಹೆಸರನ್ನು ಶ್ರೀಗಳಾದ ಎ. ರಾಮಣ್ಣ, ಎಂ. ಆರ್. ಸಿ. ಬಸಪ್ಪ, ಚೌಡಯ್ಯ, ಗೋಪಾಲಕೃಷ್ಣ ಶೆಟ್ಟಿ, ಕೆ. ವಿ. ವೀರಪ್ಪ, ಪಿ. ವಿ. ನಾರಾಯಣಮೂರ್ತಿ, ಜನಾರ್ಧನ ನಾಯ್ಡು, ಶಿವನಂಜೇಗೌಡ, ವಿ. ಎಸ್. ದಾಸಪ್ಪ ಮತ್ತು ಸೂರ್ಯನಾರಾಯಣರಾವ್ ರವರುಗಳು ಸೂಚಿಸಿದ್ದಾರೆ.

ಹೇಳದೇಗ ಕೇಳಿಕೊಂಡರೇ ಎಂದು ಕೇಳಲಾಗಿ ಪ್ರಶ್ನೆ ಅರ್ಥವೇ ಆಗುವುದಿಲ್ಲವೆಂದು ಸಚಿವರು ತಿಳಿಸಿದರು.

ಶ್ರೇಷ್ಠ ನ್ಯಾಯಸ್ಥಾನದಲ್ಲಿ ೪ ಜಡ್ಜಿಗಳಿಗಿಂತಲೂ ಹೆಚ್ಚಾಗಿರಬೇಕಾದ ಅವಶ್ಯಕತೆ ಇಲ್ಲವೆಂಬ ಬಗ್ಗೆ ಶ್ರೀ ಟಿ. ಮರಿಯಪ್ಪನವರು ತಂದ ಕತ್ತರಿ ಪ್ರಯೋಗವು ೩೫ ೩೦ ಓಟುಗಳಿಂದ ಬಿದ್ದುಹೋಯಿತು.

ಕತ್ತರಿಪ್ರಯೋಗಕ್ಕೆ ದಿವಾನರಿಂದ ತಿರಸ್ಕಾರ

ಶ್ರೇಷ್ಠನ್ಯಾಯಸ್ಥಾನದ ಹಲವು ನ್ಯಾಯಾಧೀಶರು ಸಂಬಳದ ಅಧಿಕರದಲ್ಲಿ ಕೈ ಹಾಕುತ್ತಿದ್ದಾರೆಂಬ ಬಗ್ಗೆ ಶ್ರೀ ಹೆಚ್. ಆರ್. ಗುರುವಾರೆಡ್ಡಿಯವರು ಸೂಚಿಸಿದ್ದ ಕತ್ತರಿಪ್ರಯೋಗವನ್ನು ದಿವಾನರು ತಳ್ಳಿಹಾಕಿದರೆಂದು ಅಧ್ಯಕ್ಷರು ತಿಳಿಸಿದರು.

ಪ್ರಸಿದ್ಧ ಪತ್ರಿಕೆ

ಮೈಸೂರು ಶ್ರೀರಾಂಪೇಟೆಯಲ್ಲಿರುವ ಡೋರ್ ನಂ ... ನೇ ಮನೆಯನ್ನು ಗೋವಿಂದಚೆಟ್ಟಿಪ್ಪನವರ ಮಕ್ಕಳು ... ಸುಬ್ಬಾಚೆಟ್ಟಿಪ್ಪನವರು ... ನೇ ... ಅಗ್ರಿಮೆಂಟ್ ಮೂಲಕ ... ಕ್ರಯಕ್ಕೆ ಕೊಡಲು ಒಪ್ಪಿ ಮನೆ ನನ್ನ ಸ್ವಾಧೀನವಿಲ್ಲದೆ ಕೋರ್ಟಿನಲ್ಲಿ ವ್ಯವಹಾರ ನಡೆಯುತ್ತಿದೆ. ಸದರಿ ಸುಬ್ಬಾಚೆಟ್ಟಿಪ್ಪನವರು ಬೇರೆ ಕ್ರಯ ಮಾಡುವುದಾಗಿ ತಿಳಿದಿದೆ. ಆ ರೀತಿ ಕ್ರಯಕ್ಕೆ ಪಡೆಯತಕ್ಕವರು ... ಗಳನ್ನು ... ನಡೆದುಕೊಳ್ಳಬೇಕಾಗಿ ... ಮಾಡುವ ... ಇಲ್ಲವೆಂಬ ... ತಿಳಿಯಪಡಿಸಿದೆ.

ಉಡುಪಿ ... ಮುನಾಚಾರ್.

ಸಾಧ್ವಿ

ತಾ॥ ೨೯-೬-೪೬ ಶನಿವಾರ

ಚಂಗಲರಾಯ ರೆಡ್ಡಿಯವರು ಕಾಂಗ್ರೆಸ್ ಅಧ್ಯಕ್ಷರಾಗಲಿ!

ಮೈಸೂರು ಕಾಂಗ್ರೆಸ್ಸಿನ ಬರುವ ಅಧಿವೇಶನಕ್ಕೆ ಶ್ರೀ ಕೆ. ಚಂಗಲರಾಯ ರೆಡ್ಡಿಯವರನ್ನು ಅಧ್ಯಕ್ಷರಾಗಿ ಚುನಾಯಿಸುವುದು ಅತ್ಯಂತ ಉಚಿತವಾಗಿದೆ. ಅವರು ಇದುವರೆಗೆ ಅಧ್ಯಕ್ಷರಾಗಿಲ್ಲ. ಬಹಳ ಹಿಂದೆಯೇ ಅವರ ಹೆಸರು ಸೂಚಿಸಲ್ಪಟ್ಟಿದ್ದರೂ ಅವರು ಇತರ ತಮ್ಮ ಸಹೋದ್ಯೋಗಿಗಳಿಗೆ ಅವಕಾಶವನ್ನು ಕಲ್ಪಿಸಿಕೊಟ್ಟಿದ್ದಾರೆ. ಅವರು ಮೈಸೂರು ಕಾಂಗ್ರೆಸ್ಸಿಗೂ, ಸಂಸ್ಥಾನಗಳ ಪ್ರಜೆಗಳಿಗೂ ಸಲ್ಲಿಸಿರುವ ಸೇವೆಗೆ ಪುರಸ್ಕಾರ ನೀಡುವ ಕಾಲ ಈಗ ಒದಗಿದೆ.

ಸಾರ್ವಜನಿಕ ಸೇವೆಯನ್ನು ಮಾಡಿ ಪ್ರಜಾ ವಿಶ್ವಾಸಗಳನ್ನು ಗಳಿಸಿರುವ ಮುಖಂಡರುಗಳಿಗೆ ಮಹಾಜನರು ಸಲ್ಲಿಸುವ ಮೆಚ್ಚುಗೆಯೆಂದರೆ ಕಾಂಗ್ರೆಸ್ ಗದ್ದುಗೆ. ಶ್ರೀ ರೆಡ್ಡಿಯವರು ಕಾಂಗ್ರೆಸ್ಸನ್ನು ಸೇರುವುದಕ್ಕೆ ಮುಂಚೆಯೇ ತಮ್ಮ ಪ್ರತಿಭೆಯನ್ನೂ, ಸಾಮರ್ಥ್ಯವನ್ನೂ ಪ್ರಕಾಶ ಪಡಿಸಿದ್ದರು. ಪ್ರಜಾಪಕ್ಷದಲ್ಲಿದ್ದಾಗಲೂ ಕೋಮುವಾರು ಸಂಕೋಲೆಗಳನ್ನು ತ್ಯಜಿಸಿ ರಾಷ್ಟ್ರೀಯ ಭಾವನೆಗಳನ್ನು ಪ್ರತಿಪಾದಿಸುತ್ತಿದ್ದರು. ಕಾಂಗ್ರೆಸ್ಸಿಗೆ ಸೇರಿದ ಮೇಲಂತೂ ಅನೇಕವಾದ ಕಷ್ಟ ನಷ್ಟಗಳನ್ನೂ, ಕಾರಾಗೃಹವಾಸವನ್ನೂ ಅನುಭವಿಸಿದರು. ಸರ್ ಮಿರ್ಜಾರವರ ಕಾಲದಲ್ಲಿ ಶಾಸನ ಸಭೆಯಲ್ಲಿ ಭಾಷಣ ಮಾಡುತ್ತಾ, ಮೈಸೂರಿನಲ್ಲಿಯೂ ಬಾರ್ದೋಲಿಯ ಕರನಿರಾಕರಣೆಯ ಚಳುವಳಿಯು ಆರಂಭವಾದೀತೆಂದು ಘೋಷಿಸಿದ್ದರು. ಅಂದಿನಿಂದಲೇ ಅವರು ಬಹಳ ಪ್ರಖ್ಯಾತಿಗೆ ಬಂದರು.

ಶ್ರೀ ರೆಡ್ಡಿಯವರು ಮಹಾತ್ಮರ ಆಶ್ರಮದಲ್ಲಿ ಮೈಸೂರಿನ ಪರವಾಗಿ ಅನಧಿಕೃತ ರಾಯಭಾರಿಯಾಗಿದ್ದು ರಚನಾತ್ಮಕ ಕಾರ್ಯದಲ್ಲಿ ಸಂಪೂರ್ಣ ಆಸಕ್ತಿಯನ್ನು ವಹಿಸಿದ್ದರು. ಕಾಂಗ್ರೆಸ್ ಪಕ್ಷದ ನಾಯಕರಾಗಿ ಶ್ರೀ ರೆಡ್ಡಿಯವರು ಪ್ರಜಾ ಪ್ರತಿನಿಧಿ ಸಭೆಯಲ್ಲಿಯೂ ಶಾಸನ ಸಭೆಯಲ್ಲಿಯೂ ಮಾಡಿರುವ ಸೇವೆಯು ಅತ್ಯಂತ ಪ್ರಶಂಸನೀಯವಾಗಿದೆ. ಸರ್ಕಾರದ ಆಡಳಿತ, ಆಯವ್ಯಯ ಮತ್ತು ಇತರ ವ್ಯವಹಾರಗಳ ಮೇಲೆ ಪರಿಣಾಮಕಾರಿಯಾಗುವ ರಚನಾತ್ಮಕ ಟೀಕೆಗಳನ್ನು ಇವರು ಮಾಡುವರು. ಇದನ್ನು ಸರ್ಕಾರದವರೂ ಸಹ ನಿಸ್ಸಂಕೋಚವಾಗಿ ಅಂಗೀಕರಿಸುವರು.

ಈಗ ತಾನೆ ರೆಡ್ಡಿಯವರು ಪಾಶ್ಚಾತ್ಯ ಪ್ರವಾಸವನ್ನು ಮುಗಿಸಿಕೊಂಡು ಬಂದಿರುವರು. ಇವರನ್ನು ಸಂಸ್ಥಾನ ಪ್ರಜಾಪರಿಷತ್ತಿನ ಅಧಿಕೃತ ಪ್ರತಿನಿಧಿಯನ್ನಾಗಿ ಪಂಡಿತ್ ನೆಹರೂರವರು ನೇಮಿಸಿದ್ದರು. ಇಂಗ್ಲೆಂಡ್, ಪಾರ್ಲಿಮೆಂಟ್ ಮುಂತಾದಕಡೆ ಶ್ರೀ ರೆಡ್ಡಿಯವರು ಸಂಸ್ಥಾನಗಳ ಪರವಾಗಿ ಮಾಡಿರುವ ಕಾರ್ಯಭಾಗವು ಬಹಳ ಶ್ಲಾಘ್ಯವಾದುದು. ಇವರಿಂದ ಇವರು ಕೇವಲ ಮೈಸೂರಿನವರು ಮಾತ್ರವೇ ಅಲ್ಲದೆ ಎಲ್ಲ ದೇಶೀಯ ಸಂಸ್ಥಾನಗಳ ಪ್ರಜೆಗಳ ಕೃತಜ್ಞತೆಗೆ ಪಾತ್ರರಾಗಿದ್ದಾರೆ. ಇವರ ಅಂಗೀಕಾರಾರ್ಹರಾಗಿರುವ ಅವರನ್ನೇ ಈ ಸಾರಿ ಕಾಂಗ್ರೆಸ್ ಗದ್ದುಗೆಗೆ ಆರಿಸುವುದು ಉಚಿತವಾಗಿದೆ.

ವಿವಾಹಕ್ಕೆ ಅಡ್ಡಿ

ಪ್ರೆಂಚ್‌ರಾಕ್ಸ್ ೨೮

ಇದೇ ತಾ॥ ಸುಂಕಾತೊಣ್ಣೂರು ಗ್ರಾಮದ ಕಾಳಾಚಾರ್ಯರು ತಮ್ಮ ಅಣ್ಣನ ಮಗಳ ವಿವಾಹವನ್ನು ನೆರವೇರಿಸಲು ಪ್ರಯತ್ನಪಟ್ಟಾಗ ಆ ಊರಿನ ಹಲವು ಮುಖಂಡರು ಅಡ್ಡಿಪಡಿಸಿದರೆಂದೂ, ಅವರು ಲ್ಯಾರ ಮ್ಯಾಜಿಸ್ಟ್ರೇಟರಿಂದ ಲೈಸೆನ್ಸ್ ಪಡೆದು ಪೋಲೀಸ್ ಸಹಾಯದೊಡನೆ ಲಗ್ನ ಸಾಂಗವಾಗಿ ನೆರವೇರಿತೆಂದೂ ಈ ಸಮಯದಲ್ಲಿ ಶ್ರೀ ಕಾಳಾಚಾರ್ಯರು ವಿಶ್ವಕರ್ಮ ವಿದ್ಯಾರ್ಥಿ ನಿಧಿಗೆ ೧೭-೮-೩ ಪೈಗಳನ್ನು ಉದಾರವಾಗಿ ದಾನವಿತ್ತರೆಂದೂ ಸಮಾಜದ ಕಾರ್ಯಕರ್ತರುಗಳು ತಿಳಿಸಿದ್ದಾರೆ.

ವಿಶ್ವಕ್ಕೆಲ್ಲಾ ಅಜ್ಜಿ

ಅಜರ್ ಬೈಜಾನಿನ ಮಾಂಡಿಯಾ ಎಂಬ ಪಟ್ಟ ಪ್ರದೇಶದ ಊರಿನಲ್ಲಿ ಮೇರಂ ಕಟ್ಟಾನಂ ಗುಸೀನೋವಾ ಎಂಬ ೧೩೦ ವರ್ಷ ವಯಸ್ಸಿನ ಮುದುಕಿಯೊಬ್ಬಳಿದ್ದಾಳೆ. ಇವಳ ಗಂಡ ೧೦೫ ನೇ ವಯಸ್ಸಿನಲ್ಲಿ ಗತಿಸಿದನು. ಆಕೆಯ ಮೊಮ್ಮಗನಿಗೆ ೭೭ ವರ್ಷ ವಯಸ್ಸು. ಇವಳ ಜೇಷ್ಟ ಮಗನಿಗೆ ೧೦೭ ವರ್ಷ ವಯಸ್ಸು.

ಕೆಲವು ದಿನಗಳ ಹಿಂದೆಯೇ ಅಧ್ಯಕ್ಷ ಚುನಾವಣೆಯ ಕಾರ್ಯಕ್ರಮವು ಗೊತ್ತಾಗಿ ಉಮೇದುವಾರರುಗಳ ಹೆಸರುಗಳೂ ಬಂದಿದ್ದವು. ಆದರೆ ಒಮ್ಮತದಿಂದ ಒಬ್ಬರನ್ನು ಆರಿಸುವುದಕ್ಕಾಗಿ ಎಲ್ಲರೂ ತಮ್ಮ ಹೆಸರುಗಳನ್ನು ಹಿಂದಕ್ಕೆ ತೆಗೆದುಕೊಂಡರು. ಈಗ ಮತ್ತೆ ವೇಳಾಪಟ್ಟಿ ಸಿದ್ಧವಾಗಿದೆ. ಶ್ರೀ ಚಂಗಲರಾಯ ರೆಡ್ಡಿಯವರು, ವಿದ್ಯೆಯಲ್ಲಿಯೂ, ವಯಸ್ಸಿನಲ್ಲಿಯೂ, ಅನುಭವದಲ್ಲಿಯೂ, ಸೇವೆಯಲ್ಲಿಯೂ ಈ ಸ್ಥಾನಕ್ಕೆ ಸರ್ವವಿಧದಿಂದಲೂ ಅರ್ಹರಾಗಿದ್ದಾರೆ. ಅವರನ್ನೇ ಕಾಂಗ್ರೆಸ್ ಪ್ರತಿನಿಧಿಗಳೆಲ್ಲರೂ ಏಕವಾಕ್ಯದಿಂದ ಚುನಾಯಿಸಲೆಂದು ಹಾರೈಸುತ್ತೇವೆ.

ಡಾ॥ ಖರೆ ರಾಜೀನಾಮೆ

ಕೇಂದ್ರ ಸರ್ಕಾರದ ಕಾಮನ್‌ವೆಲ್ತ್ ಮಂತ್ರಿ ಡಾ॥ ಖರೆ ಕೊಟ್ಟಿರುವ ರಾಜೀನಾಮೆಯನ್ನು ವೈಸರಾಯರು ಅಂಗೀಕರಿಸಿದ್ದಾರೆ. ಇವರನ್ನು ಬುಧವಾರ ಅಧಿಕಾರದಿಂದ ವಿಮುಕ್ತರನ್ನಾಗಿ ಮಾಡಲಾಗುವುದೆಂದು ತಿಳಿಸಲಾಗಿದೆ.

● ಅಮೇರಿಕಾ ಸರ್ಕಾರವು ಚೀಣಕ್ಕೆ ಮಿಲಿಟರಿ ನೆರವನ್ನು ಕೊಡಬಹುದೆಂದು ವಿದೇಶಾಂಗ ವಿದ್ಯಮಾನ ಸಮಿತಿ ನಿರ್ಧರಿಸಿರುವುದರಿಂದ, ಚೀಣಕ್ಕೆ ಆಯುಧ ಸಾಮಗ್ರಿಗಳನ್ನು ಒದಗಿಸಲೂ ಚೀಣೀ ಸೈನಿಕರಿಗೆ ಅಮೇರಿಕ ಸೈನ್ಯದ ಅಧಿಕಾರಿಗಳು ಶಿಕ್ಷಣ ಕೊಡಲೂ ಅವಕಾಶ ಲಭಿಸಿದೆ.

ನೋಟೀಸು

No. H 3 P R 49/45-46

ಮೈಸೂರು ಸಿಟಿ ಮುನಿಸಿಪಲ್ ಸರಹದ್ದಿನೊಳಗೆ ೧೯೪೬-೪೭ ನೇ ಸಾಲಿನಲ್ಲಿ ನಡೆಸುವ ಈ ಮುನಿಸಿಪಾಲಿಟಿಯ ಆರೋಗ್ಯ ಶಾಖೆಯ ಆಡಳಿತಕ್ಕೆ ಒಳಪಟ್ಟ ಎಲ್ಲಾ ವಿಧವಾದ ಕಸಬುಗಳಿಗೆ ಅಗತ್ಯವಾದ ಲೈಸನ್ಸನ್ನು ಸಕಾಲದಲ್ಲಿ ಪಡೆದು ಅನಂತರ ಆಯಾಯ ಕಸಬುಗಳನ್ನು ಜಾರಿಯಲ್ಲಿ ತರತಕ್ಕದ್ದು. ಹಾಗೆ ಲೈಸನ್ಸು ಅಪೇಕ್ಷಿಸುವ ಕಸಬುದಾರರು ತಮ್ಮ ಹೆಸರು, ವಿಳಾಸ, ಕಸುಬಿನ ವಿವರ, ನಡೆಸುವ ಸ್ಥಳ ಮುಂತಾದ ತಪಸೀಲುಗಳೊಡನೆ ಆರೋಗ್ಯ ಶಾಖೆಯ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ನಿಯಾಮಕವಾದ ಫೀಜು ಪಾವತಿಯಿಂದ ಲೈಸನ್ಸು ಪಡೆಯತಕ್ಕದ್ದು. ಹಾಗೆ ಲೈಸನ್ಸು ಪಡೆಯದೆ ಕಸಬುಗಳನ್ನು ನಡೆಸುವವರ ಮೇಲೆ ಕಾನೂನು ಪ್ರಕಾರ ಕ್ರಮ ನಡೆಸಲಾಗುವುದು.

(ಸಹಿ)

ಆರ್. ರಾಮಚಂದ್ರರಾವ್ ಬೊಂಭೊರೆ

ಪ್ರೆಸಿಡೆಂಟ್,

ಸಿಟಿ ಮ್ಯುನಿಸಿಪಾಲಿಟಿ,

ತಾ॥ ೨೫-೬-೧೯೪೬

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದಾ—

ತಾ॥ ೨೭—೬—೪೬

ನೋಟಿಫಿಕೇಷನ್

ನಂಬರು- R4—898-45-46

ಇದರಿಂದ ಮೈಸೂರು ನಗರದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಜುಲೈ ಒಂದನೇ ತಾರೀಖು ಲಾಗಾಯ್ತು ಎಲೆಕ್ಟ್ರಿಕ್ ದೀಪವಿಲ್ಲದಿರುವ ಮನೆಯ ರೇಷನ್ ಕಾರ್ಡು ಹೋಲ್ಡರುಗಳಿಗೆ ಮಾತ್ರ ಸೀಮೆ ಎಣ್ಣೆಯನ್ನು ಈ ಕೆಳಗೆ ಕಂಡ ಪ್ರಮಾಣದಲ್ಲಿ ಕೊಡಲಾಗುವುದು—

1. ಹಾಲಿ 1½ ಸೀಸೆ ಎಣ್ಣೆ ಪಡೆಯುತ್ತಿದ್ದವರಿಗೆ 2 ಸೀಸೆಯನ್ನು ಕೊಡಲಾಗುವುದು.
2. ಹಾಲಿ 2 ಸೀಸೆ ಪಡೆಯುತ್ತಿದ್ದವರಿಗೆ 2½ ಸೀಸೆಯನ್ನು ಕೊಡಲಾಗುವುದು.

ರೇಷನ್ ಕಾರ್ಡು ಹೋಲ್ಡರುಗಳು ತಮ್ಮ ರೇಷನ್ ಕಾರ್ಡುಗಳನ್ನು ಸಮ್ಮಂಧಪಟ್ಟ ಅಸಿಸ್ಟೆಂಟು ರೇಷನಿಂಗ್ ಆಫೀಸಿನಲ್ಲಿ ಹಾಜರ್ಮಾಡಿದರೆ ಮೇಲ್ಕಂಡ ಬದಲಾವಣೆಯನ್ನು ಮಾಡಲಾಗುವುದು.

(ಸಹಿ) ಅಬ್ದುಲ್ ರಜಾಕ್,

27—6—46 ರೇಷನಿಂಗ್ ಆಫೀಸರು, ಮೈಸೂರು ಸಿಟಿ.

UNIVERSITY OF MYSORE

No. Ex 2-Mis 322-45 46.

Office of the University of Mysore; Dated 23rd June 1946.

NOTIFICATION

The last date for receipt of application forms for admission to the University Examinations of September 1946 in respect of B. A., B. Sc., B. A. Honours and B. Sc. Honours Preliminary by the respective Colleges is 4th July 1946. By order, D. S. GORDON, Registrar

ಭಾರತಕ್ಕೆ ಸರ್ ಕ್ರಿಪ್ಸರು ವಾಪಸಾಗುವರೇ?

ಬ್ರಿ॥ ನಿಯೋಗದವರು ಲಂಡನ್ನಿಗೆ ಹಿಂತಿರುಗಿದನಂತರ ಬ್ರಿ॥ ಮಂತ್ರಿ ಮಂಡಲಕ್ಕೆ ಪೂರ್ತಿ ವರದಿ ಒಪ್ಪಿಸುವರೆಂದು ಈಗ ಗಲೇ ಹೇಳಲಾಗಿದೆ. ಮಂತ್ರಿಮಂಡಲದವರೇ ಒಂದು ಹೊಸ ಸಲಹೆಯನ್ನು ಕೊಟ್ಟು ಅದರಂತೆ ತಾತ್ಕಾಲಿಕ ಸರ್ಕಾರ ರಚಿಸಲು ವೈಸರಾಯರು ಸಂಧಾನ ಆರಂಭಿಸುವಂತೆ ಸೂಚಿಸಬಹುದೆಂದೂ, ವೈಸರಾಯರು ಈ ಬಗ್ಗೆ ಕ್ರಿಪ್ಸರು ಪುನಃ ಭಾರತಕ್ಕೆ ಹಿಂದಿರುಗುವರೆಂದೂ ಹೇಳಲಾಗುತ್ತಿದೆ.

[illegible]

ಮೈಸೂರು ಸೀಮೆಯ ಸಿಲ್ಕ್ ಫಿಲೇಚರ್ ಎಕ್ಸ್‌ಪ್ಯಾನ್ಷನ್ ಸ್ಕೀಂ ಸ್ಪೆಷಲ್ ಆಫೀಸಿನಿಂದಾ:—

ಪ್ರಕಟನೆ

ಮೈಸೂರು ಸೀಮೆಯಲ್ಲಿ ರೇಷ್ಮೆ ಗೂಡು ಬೆಳೆಯತಕ್ಕವರಿಗೂ ಮತ್ತು ರೇಷ್ಮೆ ನೂಲು ಬಿಚ್ಚುವವರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

1943 ನೇ ಇಸ್ವಿಯಲ್ಲಿ ಸಾದಿಲ್ವಾರ ರೇಷ್ಮೆಗೂಡು ಮತ್ತು ಕಚ್ಚಾ ರೇಷ್ಮೆ ಹಕೀಕತ್ ಆಜ್ಞೆಗಳ ಪ್ರಕಾರ ಸರ್ಕಾರಿ ರೇಷ್ಮೆ ಗೂಡು ಕೇಂದ್ರಗಳ ಮೂಲಕ ಮಾರಾಟ ಮಾಡಿದ (ಅಂದರೆ 1-10-43 ನೇ ತಾ॥ ನಿಂದ 8 8-45 ನೇ ತಾ॥ ವರೆಗೆ) ರೇಷ್ಮೆ ಗೂಡಿನ ಬಾಬತು ಬರಬೇಕಾದ ಬೋನಸ್ ಅನೇಕ ರೈತರಿಗೆ ಸರಿಯಾದ ದಸ್ತಾವೇಜು ಅಡ್ರಸ್ಸುಗಳು ಇಲ್ಲದೆ ಬಟವಾಡೆಯಾಗದೆ ನಿಂತಿರುತ್ತೆ. ಬದಸ್ತೂರು ರೇಷ್ಮೆ ಫಿಲೇಚರುಗಳಿಗೆ ಕಚ್ಚಾ ರೇಷ್ಮೆ ಸರಬರಾಯಿ ಮಾಡಿದ ಬಾಬ್ತು ಬೋನಸ್ ಚೆಕ್ಕುಗಳು ಸಹಾ ಪಾವತಿಯಾಗದೆ ನಿಂತಿರುತ್ತೆ.

ಆದ ಕಾರಣ ರೇಷ್ಮೆ ಗೂಡು ಬೆಳೆಯತಕ್ಕವರು (Rearers) ಮತ್ತು ರೇಷ್ಮೆ ನೂಲು ಬಿಚ್ಚುವವರು (Reelers) ತಮಗೆ ಬರಬೇಕಾದ ಬೋನಸ್ಸಿನ ಹಣ ಬಾಕಿ ಇದ್ದಲ್ಲಿ ವಿಸಿಸ್ತು ದಾಖಲೆಯೊಂದಿಗೆ ಒಡನೆ ಮುಖತಃ ಅಥವಾ ಅರ್ಜಿ ಮೂಲಕವಾಗ 15-7-46 ನೇ ತಾರೀಖಿನೊಳಗಾಗಿ ಈ ಆಫೀಸಿಗೆ ತಲುಪುವಂತೆ ಕಳುಹಿಸತಕ್ಕದ್ದೆಂದು ಈ ಮೂಲಕ ಕೋರಲಾಗಿದೆ.

(ರುಜು)

ಕೆ. ಷಣ್ಮುಖಂ [illegible]

ಸ್ಪೆಷಲ್ ಆಫೀಸರು.

12-6-46

Edited, printed and published by A. K. Nagarajan at the Sadhvi Press, D. Subbiah Road, Mysore.

ಫೋನ್ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಭಾನುವಾರ ೩೦—೬—೪೬ [ಸಂಚಿಕೆ ೨೪೮

– ದಕ್ಷಿಣ ಆಫ್ರಿಕ ಬಗ್ಗೆ – ಗಾಂಧೀಜಿ ಸತ್ಯಾಗ್ರಹ ?

ಸ್ಮಶಾನವನ್ನು ವರ್ಗಾಯಿಸಲು ಪುರಸಭೆಯ ವಿರೋಧ

ಮೈಸೂರು ೩೦

ರಾಜಧಾನಿಯ ನಗರಾಭಿವೃದ್ಧಿ ಸಮಿತಿಯವರು ಈಗಿರುವ ಸ್ಮಶಾನವನ್ನು ಚಾಮುಂಡಿ ಬೆಟ್ಟದ ತಪ್ಪಲಿಗೆ ವರ್ಗಾಯಿಸಬೇಕೆಂದಿರುವ ಸಲಹೆಗೆ ಪೌರಸಭಾ ಸದಸ್ಯರು ನಿನ್ನೆದಿನ ನಡೆದ ಪೌರಸಭೆಯ ಅಧಿವೇಶನದಲ್ಲಿ ತಮ್ಮ ತೀವ್ರವಾದ ಪ್ರತಿಭಟನೆಯನ್ನು ಸೂಚಿಸಿದರು. ಇದು ಸಾರ್ವಜನಿಕ ಅಭಿಪ್ರಾಯಕ್ಕೆ ವಿರೋಧವಾಗಿದೆಯೆಂದೂ, ಈಗಾಗಲೇ ನೂರಾರು ಜನರಿಂದ ಅರ್ಜಿಗಳು ಬಂದಿವೆಯೆಂದೂ ಈ ಸ್ಮಶಾನವನ್ನು ಬೇರೆಕಡೆಗೆ ವರ್ಗಾಯಿಸಲು ಯಾವ ಕಾರಣವೂ ಇಲ್ಲವೆಂದೂ ಶ್ರೀ ಬಿ. ನಾರಾಯಣಸ್ವಾಮಿಯವರು ಹೇಳಿದರು. ಮಿ॥ ಮಹಮದ್ ಸೇಟರವರೂ ಇದೇ ಅಭಿಪ್ರಾಯವನ್ನು ಪ್ರಸ್ತಾಪಿಸಿ ಇದು ಮತಧರ್ಮಕ್ಕೆ ಸಂಬಂಧಪಟ್ಟವಿಷಯ, ಸ್ಮಶಾನದ ವಿಚಾರ, ಇದರ ಬಗ್ಗೆ ಬಹಳ ಜಾಗರೂಕತೆಯಿಂದ ವರ್ತಿಸಬೇಕು, ಇದನ್ನು ವರ್ಗಾಯಿಸಲು ಯಾವ ಕಾರಣವೂ ಇಲ್ಲ, ಎಂದು ಹೇಳಿದರು. ಉಪಾಧ್ಯಕ್ಷರಾದ ಶ್ರೀ ರಾಮಚಂದ್ರರಾವ್ ಬೊಂಭೋರೆಯವರು ಬೇರೆಕಡೆ ಮಾಡಬೇಕೆಂದಿರುವ ಸ್ಮಶಾನದಿಂದ ಒಳಳ್ಳ ಸ್ಥಳಗಳು ಉಂಟಾಗುವುವೆಂದೂ ಅದನ್ನು ಆಧುನಿಕ ರೀತಿಯಲ್ಲಿ ಅಚ್ಚುಕಟ್ಟಾಗಿ ವಿಸ್ತರಿಸಲಾಗುವುದೆಂದೂ, ಸಾರ್ವಜನಿಕರಿಗೆ ಈ ವಿಷಯದಲ್ಲಿ ಪೌರಸಭೆ ಸದಸ್ಯರು ಸೂಕ್ತವಾದ ತಿಳುವಳಿಕೆಯನ್ನು ಕೊಟ್ಟು ಈ ಪ್ರಯತ್ನದಲ್ಲಿ ಸಹಕರಿಸಬೇಕೆಂದೂ ಹೇಳಿದರು. ಈ ಊರಿನಲ್ಲಿರುವ ಯಾವ ಪ್ರಜೆಯೂ ಈ ಸ್ಮಶಾನವನ್ನು ವರ್ಗಾಯಿಸಬೇಕೆಂದು ಕೋರಿಲ್ಲವೆಂದೂ ಅದಕ್ಕೆ ಪ್ರತಿಯಾಗಿ ಈಗಾಗಲೇ ನೂರಾರು ಜನರು ಪ್ರತಿಭಟಿಸುತ್ತಿರುವರೆಂದೂ, ಅಲ್ಲದೆ ಈಗಿನ ಸ್ಥಳವನ್ನು ಬದಲಾಯಿಸಲು ಯಾವ ಕಾರಣವನ್ನೂ ಕೊಡಲಾಗಿಲ್ಲವೆಂದೂ ಪೌರಸಭೆಗೆ ಸಂಬಂಧಪಟ್ಟ ಈ ವಿಷಯದಲ್ಲಿ ನಗರಾಭಿವೃದ್ಧಿ ಸಮಿತಿಯವರು ಪ್ರವೇಶಿಸಿರುವುದು ಉಚಿತವಲ್ಲವೆಂದೂ ಶ್ರೀ ಅಗರಂ ರಂಗಯ್ಯನವರು ತಿಳಿಸಿದರು. ಈ ಕಾರಣಗಳಿಂದ ನಗರಾಭಿವೃದ್ಧಿ ಸಮಿತಿಯವರೇ ಈ ಸೂಚನೆಯನ್ನು ವಾಪಸ್ ತೆಗೆದುಕೊಳ್ಳಲು ಅವಕಾಶ ಕೊಡುವುದಕ್ಕಾಗಿ ವಿಷಯವನ್ನು ಮುಂದೆ ಹಾಕಲಾಯಿತು.

ಟೆಲಿಫೋನ್ ದರಗಳನ್ನು ಜಾಸ್ತಿಯಾಗಿ ಹೆಚ್ಚಿಸುವುದರಿಂದ ಪುರನಿವಾಸಿಗಳಿಗೆ ಬಹಳ ತೊಂದರೆಯಾಗುವುದೆಂದೂ ಆದುದರಿಂದ ಹಿಂದಿನ ದರಗಳನ್ನು ಇನ್ನು ಮುಂದೆ ಜಾರಿಗೆ ತರಬೇಕೆಂದೂ ಸರ್ಕಾರವನ್ನು ಪ್ರಾರ್ಥಿಸುವ ಟಿಪ್ಪಣಿಯೊಡನೆ ಈ ಸಂಬಂಧವಾಗಿ ಬಂದಿದ್ದ ಸರ್ಕಾರಿ ಪತ್ರವು ವಿಚಾರ್ಯ ಮಾಡಲ್ಪಟ್ಟಿತು.

ಪೌರಸಭೆ ಮತ್ತು ನಗರಾಭಿವೃದ್ಧಿ ಸಮಿತಿಗಳಿಗೆ ಪ್ರತ್ಯೇಕ ಇಂಜನಿಯರುಗಳನ್ನು ನೇಮಕ ಮಾಡುವಾಗ ಆ ಸ್ಥಾನಗಳಿಗೆ ಇಂಜನಿಯರನ್ನು ನೇಮಕ ಮಾಡಬೇಕೆಂಬ ಬಗ್ಗೆ ಹಿಂದೆ ಪೌರಸಭೆಯು ಕೇಳಿದ್ದರೆ ಈ ಸಭೆಯು ಮೆಚ್ಚುತ್ತಿತ್ತು ಎಂಬ ನಿರ್ಣಯವು ಮಂಜೂರಾಯಿತು.

ಸಂಟ್ ಫಿಲೋಮಿನ ಕಾಲೇಜಿಗೆ ೩೦೦ ರೂಗಳ ಸುರ್ಚಿನಲ್ಲಿ ಸ್ನಾನದ ಕೊಠಡಿಗಳನ್ನು ಕಟ್ಟಿಸಲು ಸರ್ಕಾರದಿಂದ ತಯಾರಿಸಿದ್ದ ಅಂದಾಜಿನಲ್ಲಿ ಅರ್ಧಭಾಗವನ್ನು ಪೌರಸಭೆಯೂ ವಹಿಸಬೇಕೆಂದು ಸರ್ಕಾರದವರು ಮಾಡಿದ್ದ ಸೂಚನೆಗೆ ಸಭೆಯು ಒಪ್ಪಲಿಲ್ಲ.

ಪೌರಸಭಾ ಸದಸ್ಯರಾದ ಶ್ರೀ ಜಿ. ಆರ್. ರಂಗಸ್ವಾಮಯ್ಯನವರಿಗೆ ಸೇರಿದ ಒಂದು ಹಸುವನ್ನು ನಂಜರಾಜ ಬಹದ್ದೂರ್ ಛತ್ರದ ಬಳಿ ಇರುವ ದನದ ಕೊಟ್ಟಿಗೆಯಲ್ಲಿ ಬಿಟ್ಟಿದ್ದ ವಿಷಯದಲ್ಲಿ ಶ್ರೀ ಜನಾರ್ದನ ನಾಯ್ಡುರವರು ಹಾಕಿದ್ದ ಪ್ರಶ್ನೆಗಳಿಗೆ ಅಧ್ಯಕ್ಷರು ಉತ್ತರಿಸಿ, ಅದನ್ನು ಅಲ್ಲಿಂದ ದಿವಸ ಬಿಡಲಾಗಿತ್ತೆಂದೂ, ಅದಕ್ಕಾಗಿ ರೂ. ೨ ಗಳನ್ನು ವಸೂಲು ಮಾಡಲಾಗಿದೆಯೆಂದೂ ತಿಳಿಸಿದರು. ಈ ವಿಷಯವಾಗಿ ಸರ್ಕಾರದವರು ಕೇಳಿದ ವರದಿಯನ್ನು ಕಳುಹಿಸಿದುದಾಗಿಯೂ ಅಧ್ಯಕ್ಷರು ತಿಳಿಸಿದರು.

ಪ್ರಚಾರ ಸಮಿತಿ ಮತ್ತು ವಾಣೀವಿಲಾಸ ಸಭೆಯಲ್ಲಿ ನಡೆದ ಮಹಿಳೆಯರ ಸಮಾರಂಭ ಮತ್ತು ಆರೋಗ್ಯ ಪ್ರಚಾರ ಸಂಬಂಧದಲ್ಲಿ ಕೊಡಲಾದ ಬಹುಮಾನ ಮತ್ತಿತರ ವಿಷಯವಾಗಿಯೂ ಶ್ರೀ ನಾಯ್ಡುರವರು ಪ್ರಶ್ನೆಗಳನ್ನು ಹಾಕಿ ಉತ್ತರ ಪಡೆದರು.

೧೯೪೧ ರಿಂದ ೧೯೪೫ ರ ವರೆಗೆ ಪೌರಸಭೆಯ ಉಪಾಧ್ಯಕ್ಷರುಗಳಾಗಿದ್ದವರು ತೆಗೆದುಕೊಂಡ ವಾಹನದ ಬತ್ಯ ಮತ್ತು ವಾಹನಗಳನ್ನು ಇಟ್ಟಿದ್ದುದಕ್ಕೆ ದಾಖಲೆ ಮುಂತಾದ ವಿಷಯವಾಗಿಯೂ ಶ್ರೀ ನಾಯ್ಡುರವರು ಪ್ರಶ್ನೆಗಳನ್ನು ಹಾಕಿದರು. ವಾಹನಗಳನ್ನು ಇಟ್ಟಿರುವ ಬಗ್ಗೆ ದಾಖಲೆಗಳು ಅಗತ್ಯವಿಲ್ಲವೆಂಬುದಾಗಿ ಹಿಂದೆಯೇ ಸರ್ಕಾರದ ಆಜ್ಞೆಯಾಗಿರುವ ಅಂಶವನ್ನು ಅಧ್ಯಕ್ಷರು ತಿಳಿಸಿದರು.

ಶ್ರೀ ಎಂ. ಆರ್. ಸಿ. ಬಸಪ್ಪನವರು ಹಲವು ಪ್ರಶ್ನೆಗಳನ್ನು ಹಾಕಿದ್ದರು. ಅವರ ಅಪ್ಪಣೆಗಳು ಬಂದಾಗ ಅವರು ಸಭೆಯನ್ನು ಬಿಟ್ಟು ಹೊರಗೆ ಹೋಗಿದ್ದರು. ಆದುದರಿಂದ ಅವುಗಳನ್ನು ಕಾನೂನಿನ ಪ್ರಕಾರ ವಾಪಸು ತೆಗೆದುಕೊಳ್ಳಲಾಯಿತೆಂದು ಅಧ್ಯಕ್ಷರು ನಿರ್ಧಾರ ಮಾಡಿದರು.

ಕಾರ್ಯಕ್ರಮದ ಉಳಿದ ಅಂಶಗಳನ್ನು ಜುಲೈ ೪ ನೇ ತಾ॥ ಗೆ ಮುಂದಿಡಲಾಯಿತು. ಮತ್ತು ಅದೇ ದಿನ ಪುರಸಭೆಯ ವಿಶೇಷ ಅಧಿವೇಶನವೊಂದು ನಡೆದು ಸಭೆಯಲ್ಲಿ ವಿವಿಧ ಸ್ಥಾನಗಳಿಗೆ ಕರೆಯಲಾಗುವ ವಿಷಯಗಳ ವಿಚಾರವೂ ಮತ್ತು ಪೌರಸಭೆಯು ಮೋಟಾರ್ ಬಸ್ಸನ್ನು ಕೊಂಡುಕೊಳ್ಳುವ ವಿಚಾರವೂ ಪರ್ಯಾಲೋಚಿಸಲ್ಪಡುವವು.

ದಕ್ಷಿಣ ಆಫ್ರಿಕದ ಬಗ್ಗೆ ಮಹಾತ್ಮರ ಸತ್ಯಾಗ್ರಹವೇ ?

ದ॥ ಆಫ್ರಿಕಾದಲ್ಲಿ ಭಾರತೀಯರು ಆಚರಿಸುತ್ತಿರುವ ಸತ್ಯಾಗ್ರಹದ ವಿಚಾರವಾಗಿ ಮಹಾತ್ಮ ಗಾಂಧೀಜೀಯವರು ಪ್ರಾರ್ಥನಾ ಸಭೆಯಲ್ಲಿ ಮಾತನಾಡುತ್ತಾ ಯುರೋಪ್ಯರ ದೌರ್ಜನ್ಯವನ್ನು ಖಂಡಿಸಿ, ದೇವರು ಇಂಥಹ ಕುಬುದ್ಧಿಯ ಯುರೋಪ್ಯರಿಗೆ ವಿವೇಕ ಕೊಡಲೆಂದು ಸತ್ಯಾಗ್ರಹಿಗಳು ಪ್ರಾರ್ಥಿಸಬೇಕೆಂದರು. ಭಾರತದ ಪ್ರಸಂಚದ ಗೌರವ ರಕ್ಷಣೆ, ಸ್ತ್ರೀಯರುಗಳ ಭಂಡಾರವನ್ನಾಗುತ್ತಿರುವ ದ॥ ಆಫ್ರಿಕದ ಭಾರತೀಯ ಸತ್ಯಾಗ್ರಹಿಗಳಿಗೆ ಸಹಾಯ ಮಾಡುವುದು ಭಾರತದ ಪವಿತ್ರ ಕರ್ತವ್ಯ ಎಂದು ಹೇಳಿ, ಶಾಂತಿಯುತ ಪ್ರಾರ್ಥನೆ ಅಹಿಂಸಾ ರೀತಿಯಲ್ಲಿ ಆ ಬಗ್ಗೆ ಸತ್ಯಾಗ್ರಹ ಕೈಗೊಳ್ಳಬೇಕಾಗಬಹುದೆಂದು ಸೂಕ್ಷ್ಮವಾದ ಸೂಚನೆ ಇತ್ತಿದ್ದಾರೆ.

ಕಾಮಚಲಾಯಿಸುವ ಸರ್ಕಾರದ ಸದಸ್ಯರುಗಳ ಪಟ್ಟಿ

ಕೇಂದ್ರದಲ್ಲಿ ೧೬ ನೇ ಸರ್ವೀಸ್ ಮಾರ್ಚ್‌ಯಲ್ಲಿ ಅಧಿಕಾರಿಗಳ ಆಡಳಿತ ಬುಧವಾರದಿಂದ ಆರಂಭವಾಗಲಿದೆ. ಆಕ್ಟಿಂಗ್ ಟೆಂಪರರಿ ಸರ್ಕಾರದ ಸದಸ್ಯರ ಹೆಸರುಗಳು ಈ ರೀತಿ ಇವೆ. ಸರ್ ಗುರುನಾಥ ಬೇವೂರ್, ಸರ್ ಎರಿಕ್ ಕೋಟ್ಸ್, ಸರ್ ಅಕ್ಬರ್ ಹೈದರಿ, ಸರ್ ರಾಬರ್ಟ್ ಹಚಿನ್ಸ್, ಸರ್ ಆರ್ಚಿಬಾಲ್ಡ್ ರೌಲ್ಯಾಂಡ್ಸ್, ಸರ್ ಜಾನ್ ಥಾರ್ನ್, ಸರ್ ಎ. ಎ. ಆರ್ಥರ್ ವಾಘ್ ಮತ್ತು ಮಿ॥ ಮ॥ ಅರ್ಕಲೆ.

ಬಿತ್ತನೆ ಬೀಜಕ್ಕೆ ತೊಂದರೆ

ಸ್ವಂ ವ.] ಶ್ರೀರಂಗಪಟ್ಟಣ ೨೯

ಈ ಊರಿನ ಸುತ್ತಮುತ್ತಲಿನ ಹಳ್ಳಿ ಗ್ರಾಮಗಳಲ್ಲಿ ಬಿತ್ತನೆಗಾಗಿ ಒಂದು ಕಾಳು ಭತ್ತವನ್ನೂ ಸಹ ಬಿಡಲಿಲ್ಲ. ಈಗ ಬಿತ್ತನೆ ಕಾಲವಾದ್ದರಿಂದ ಬೀಜವಾದ ಭತ್ತವನ್ನು ಕೊಂಡುಕೊಳ್ಳಲು ದವಸ ಸಿಗದು. ಸಂಬಂಧಪಟ್ಟ ಅಧಿಕಾರಿಗಳು ಈ ಕಡೆ ಗಮನ ಕೊಟ್ಟು ರೈತರನ್ನು ಉದ್ಧರಿಸಬೇಕಾಗಿದೆ.

ಧಾನ್ಯದ ಹಂಚಿಕೆ ತೊಂದರೆ

ಗಂಜಾಂ ಡಿಪೋವಿನಲ್ಲಿ ಸರಿಯಾಗಿ ರಕ್ಕೆ ಬಾಗಿ [illegible] ರೇಷನ್ ಕಾರ್ಡುಗಳ [illegible] ಸರಿಯಾಗಿ ನಡೆದು [illegible]

§ [illegible] ಜನರು ಜಿಲ್ಲೆ ವರದಿ ಮಾಡಿದರು.

ಪಟಾಡಿಯಲ್ಲಿ ಗುಂಡಿನೇಟು

ಪಟ್ಟಾಡಿ ಸಂಸ್ಥಾನದಲ್ಲಿ ಸಾರ್ವಜನಿಕ ಧರ್ಮ ಶಾಲೆಯೊಂದನ್ನು ಪೊಲೀಸ್ ಠಾಣೆಯಾಗಿ ಪರಿವರ್ತಿಸಿದ್ದನ್ನು ಪ್ರತಿಭಟಿಸುವ ಸಲುವಾಗಿ ಸತ್ಯಾಗ್ರಹ ಆಚರಿಸುತ್ತಿರುವ ಪ್ರಜಾಮಂಡಲದ ಕೆಲಸಗಾರರ ಮೇಲೆ ಅಲ್ಲಿನ ಪೊಲೀಸರು ಗುಂಡು ಹಾರಿಸಿದರು; ೧೫ ಮಂದಿಗೆ ಗಾಯವಾಗಿದೆಯೆಂದು ವರದಿಯಾಗಿದೆ. ೨ ಲಾರಿ ಜನ ಜೈಲಿಗೆ ಬಂದಿರುವುದಾಗಿ ವಾರ್ತೆ ಬಂದಿದೆ.

ವಿದ್ಯಾರ್ಥಿಗಳ ಮುಷ್ಕರ

ಕರಾಚಿಯ ಕಾಲೇಜುಗಳಲ್ಲಿ ಫೀಸನ್ನು ಹೆಚ್ಚಿಸಿದ್ದರಿಂದ ಕಾರಣದ ಮೇಲೆ ಅಲ್ಲಿನ ೫೦ ಸಹಸ್ರ ವಿದ್ಯಾರ್ಥಿಗಳು ಪ್ರಚಂಡ ಮುಷ್ಕರವನ್ನು ಜರಿಸುತ್ತಿದ್ದಾರೆ. ತಮ್ಮ ಬೇಡಿಕೆ ಈಡೇರದಿದ್ದರೆ ಕಾಲೇಜ್ ಬೋರ್ಡಿನ ಸದಸ್ಯರ ಮನೆಗಳ ಮುಂದೆ ಉಪವಾಸ ಮುಷ್ಕರ ಹೂಡಲು ವಿದ್ಯಾರ್ಥಿಗಳು ನಿರ್ಧರಿಸಿದ್ದಾರೆ.

ಬ್ರಿಟಿಷರಿಗೆ ಜರ್ಮನರ ಶಾಪ

ಹ್ಯಾಂಬರ್ಗ್ ನಗರದಲ್ಲಿ ಬ್ರಿಟಿಷ್ ಅಧಿಕಾರಿಗಳು ಒಂದು ನೌಕಾನೆಲೆಯ ಸಲುವಾಗಿ ಅಲ್ಲಿನ ೩೦ ಸಾವಿರ ಮಂದಿ ಊರು ಬಿಟ್ಟು ಹೋಗಬೇಕೆಂದು ಬ್ರಿಟಿಷ್ ಅಧಿಕಾರಿಗಳು ಹೊರಡಿಸಿರುವ ಆಜ್ಞೆಯನ್ನು ವಿರೋಧಿಸಿ ೩ ಸಾವಿರ ಜರ್ಮನರು ಭಾರಿ ಪ್ರದರ್ಶನ ನಡೆಸಿದರು. ಪ್ರದರ್ಶನಕಾರರು ಜರ್ಮನ್ ರಾಷ್ಟ್ರಗೀತೆಗಳನ್ನು ಹಾಡುತ್ತಾ "ದೇವರೇ ಇಂಗ್ಲೆಂಡನ್ನು ಶಿಕ್ಷಿಸು" "ನಾವು ಭಾರತೀಯರಂತೆ ಸ್ವತಂತ್ರ ಜರ್ಮನರು" ಎಂದೂ "ನಾವು ಈಗ ಬಂಧನ ಶಿಬಿರದಲ್ಲಿಲ್ಲ" ಎಂಬುದಾಗಿಯೂ ಘೋಷಣೆ ಮಾಡುತ್ತಾ ಇದ್ದರು. ಬ್ರಿ॥ ಮಿಲಿಟರಿಯವರು ಹಲವು ಜರ್ಮನರನ್ನು ಬಂಧಿಸಿದ್ದಾರೆ.

೨ ಲಕ್ಷ ರೂ. ಬೆಲೆಯ ಸೀರೆ

ಆಗಾಖಾನರ ವಜ್ರ ತುಲಾಭಾರವು ಆಗಸ್ಟ್ ೧೦ ತಾ॥ ನಡೆಯುವ ಸಮಯದಲ್ಲಿ ಅವರ ಪತ್ನಿಯವರಾದ ಬೇಗಂ ಆಗಾಖಾನರು ಧರಿಸಲು ೨ ಲಕ್ಷದೂ ಬೆಲೆಬಾಳುವ ಭಾರಿ ಸೀರೆಯೊಂದು ಭಾರತದಲ್ಲಿ ತಯಾರಾಗುತ್ತಿದೆ. ಅದರಲ್ಲೂ ವಜ್ರಗಳನ್ನು ಸೇರಿಸಲಾಗುವುದು. ದ॥ ಆಫ್ರಿಕದಲ್ಲಿರುವ ಡಾರ್ ಎಸ್ ಸಲಾಮ್ ಎಂಬ ನಗರದಲ್ಲಿ ವಜ್ರೋತ್ಸವ ಸಮಾರಂಭವು ನಡೆಯುವುದು. ಆಗಾಖಾನರ ಶಿಷ್ಯರಾದ ಇಸ್ಮಾಯಿಲಿಯಾ ಕೋಮಿನವರು ಇದನ್ನು ಏರ್ಪಡಿಸುವರು. ಈ ಸಂದರ್ಭದಲ್ಲಿ ನಡೆಸಲಿರುವ ತುಲಾಭಾರದಿಂದ ಬರುವ ಹಣವನ್ನು ಬ್ರಿಟಿಷ್ ಪೂರ್ವ ಮತ್ತು ದಕ್ಷಿಣ ಆಫ್ರಿಕದ [illegible] ಉಪಯೋಗಿಸಲಾಗುವುದು.

ಅಣುಬಾಂಬಿನ ಹಿಂದಿನ ೧ ಗಂಟೆ ಮುಂದೂಡಲಾಯಿತು

ಬಿಕಿನಿಯಲ್ಲಿ ಹಾಕಬೇಕಾಗಿದ್ದ ಅಣುಬಾಂಬು [illegible] ಕಾಲವನ್ನು ೧ ಗಂಟೆ ಮುಂದೂಡಲಾಗಿದೆ. [illegible] ಹವಾಮಾನದ ಕಾರಣದಿಂದ [illegible] ಮುಂದೂಡಲಾಗಿದೆ.

[illegible]

ಸಾಧ್ವಿ

ತಾ॥ ೩೦-೬-೪೬ ಭಾನುವಾರ

ಪತ್ರಿಕಾ ಟೀಕೆ ಮತ್ತು ಶಾಸನ ಸಭೆಯ ಹಕ್ಕುಬಾಧ್ಯತೆ

ಮೈಸೂರು ಶಾಸನ ಸಭೆಗಳಲ್ಲಿ ಪತ್ರಿಕೆಗಳ ಸಂಬಂಧವಾಗಿ ಆಗಾಗ್ಗೆ ಹಕ್ಕುಬಾಧ್ಯತೆಗಳ ಪ್ರಶ್ನೆಗಳು ಬರುತ್ತಿವೆ. ಪ್ರಜಾಪ್ರತಿನಿಧಿ ಸಭೆಯಲ್ಲಿ ಅನೇಕ ಬಾರಿ ಈ ಪ್ರಶ್ನೆಗಳು ಬಂದಿದ್ದವು. ಈಗ ನಡೆಯುತ್ತಿರುವ ಶಾಸನ ಸಭೆಯಲ್ಲಿಯೂ ಬಂದಿತ್ತು. ಅದರ ಬಗ್ಗೆ ಅಧ್ಯಕ್ಷರಾದ ರಾಜಮಂತ್ರಿ ಪ್ರವೀಣ ಗುಂಡಪ್ಪಗೌಡರು ತೀರ್ಪಿತ್ತು ಅದರಲ್ಲಿ ಯಾವ ಹಕ್ಕಿಗೂ ಲೋಪ ಬಂದಿಲ್ಲವೆಂದು ತಿಳಿಸಿದರು. ಇದು ನಿಜವಾಗಿಯೂ ಅಭಿನಂದನೀಯವಾದ ವಿಷಯ. ಶಾಸನ ಸಭೆಯ ಸದಸ್ಯರ ಹಕ್ಕುಬಾಧ್ಯತೆಯನ್ನು ಪರಿಶೀಲಿಸುವಾಗ ಅಧ್ಯಕ್ಷರು ಪತ್ರಿಕಾ ಕರ್ತರ ಹಕ್ಕು ಬಾಧ್ಯತೆಗೂ ಮನ್ನಣೆ ಇತ್ತಿರುವುದು ಸಂತೋಷದ ಸಂಗತಿ.

ಈ ಪ್ರಸಂಗದ ಹಿನ್ನೆಲೆ ಹೀಗಿದೆ— ಭರತ ಖಂಡದಲ್ಲಿ ಹಿಂದೂಗಳೇ ಒಂದು ರಾಷ್ಟ್ರ, ಮುಸಲ್ಮಾನರೇ ಇನ್ನೊಂದು ರಾಷ್ಟ್ರ ಎಂದು ಹೇಳಿಕೊಂಡು ಮುಸ್ಲಿಂ ಲೀಗಿನವರು ಪಾಕಿಸ್ಥಾನ ಧ್ವಜವನ್ನು ಎತ್ತಿಹಿಡಿಯಲು ಪ್ರಯತ್ನಿಸುತ್ತಿರುವಂತೆ, ಮೈಸೂರಿನಲ್ಲಿಯೂ ಈ ಎರಡು ಜನಾಂಗಗಳೂ ಪ್ರತ್ಯೇಕ ರಾಷ್ಟ್ರಗಳೆಂಬ ಅಭಿಪ್ರಾಯವನ್ನು ಈಸಾರಿ ಮುಸ್ಲಿಂ ಲೀಗಿನ ಸದಸ್ಯರು ಇದೇ ಮೊದಲನೆಯದಾಗಿ ಪ್ರತಿಪಾದಿಸಿದರು. ಇದರಮೇಲೆ 'ವಿಶ್ವ ಕರ್ಣಾಟಕ' ಪತ್ರಿಕೆಯು ಟೀಕಿಸಿ ಅಗ್ರಲೇಖನವನ್ನು ಬರೆಯಿತು. ಮೈಸೂರಿನಲ್ಲಿ ಮುಸಲ್ಮಾನರು ಈಗಾಗಲೇ ತಮ್ಮ ಸಂಖ್ಯೆಗಿಂತ ಮಿತಿ ಮೀರಿದ ಸೌಲಭ್ಯಗಳನ್ನು ಅನುಭವಿಸುತ್ತಿರುವರೆಂದೂ ಇನ್ನು ಅರಮನೆಯ ಮೇಲೆ ಪಾಕೀಸ್ಥಾನದ ಧ್ವಜವನ್ನು ಹಾರಿಸುವುದೊಂದೇ ಬಾಕಿಯೆಂದೂ ಅದು ಬರೆದಿತ್ತು. ಈ ವಿಷಯದಲ್ಲಿ ಶಾಸನ ಸಭೆಯ ಸದಸ್ಯರಾದ ಜ॥ ಅಬ್ದುಲ್ ರಹಮಾನರು ಪ್ರಶ್ನೆ ಎತ್ತಿದರು.

ಸಭೆಯಲ್ಲಿ ನಡೆದ ವಿಷ್ಯವಸ್ತುಗಳಿಗೆ ಸಂಬಂಧಪಟ್ಟ ವರದಿಗಳು ಪತ್ರಿಕೆಯಲ್ಲಿ ಸರಿಯಾಗಿ ಪ್ರಕಟವಾಗಿವೆ ; ಆದರೆ ಟೀಕೆಯು ಮಾತ್ರ ವೈಷಮ್ಯಕ್ಕೆ ಎಡೆ ಕೊಡುತ್ತದೆ ಎಂದು ಜ॥ ರಹಮಾನರೇ ಒಪ್ಪಿಕೊಂಡರು. ವರದಿಗಳ ಸತ್ಯಾಸತ್ಯದ ವಿಚಾರ ಮಾತ್ರ ಸಭೆಯ ಹಕ್ಕು ಬಾಧ್ಯತೆಗೆ ಸಂಬಂಧಿಸಿದುದೆಂದೂ, ಪತ್ರಿಕೆಯ ಸಂಪಾದಕರ ಟೀಕೆಯು ಸಂಬಂಧಪಟ್ಟಿಲ್ಲವೆಂದೂ ಅಧ್ಯಕ್ಷರು ಹೇಳಿ ಪ್ರಶ್ನೆಯನ್ನು ತಳ್ಳಿಹಾಕಿದರು. ಸಂಪಾದಕರುಗಳು ತಮ್ಮ ಅಭಿಪ್ರಾಯವನ್ನು ವ್ಯಕ್ತಪಡಿಸುವ ಸ್ವಾತಂತ್ರ್ಯವನ್ನು ಅಧ್ಯಕ್ಷರು ಎತ್ತಿ ಹಿಡಿದುದಕ್ಕಾಗಿ ಅವರು ಅಭಿನಂದನಾರ್ಹರು.

ಸಭೆಯಲ್ಲಿ ಅನೇಕ ಸದಸ್ಯರಿಗೆ ಸಂಬಂಧಪಟ್ಟಂತೆ ವರದಿಗಳು ಬರುತ್ತವೆ. ಅವುಗಳ ಮೇಲೆ ಟೀಕೆಗಳೂ ಆಗುತ್ತವೆ. ಹಾಗೆ ಬಂದ ಒಂದೊಂದು ಅಂಶದಮೇಲೂ ಸದಸ್ಯರು ಹಕ್ಕುಬಾಧ್ಯತೆಯ ಪ್ರಶ್ನೆಗಳನ್ನು ಎತ್ತುತ್ತ ಹೋದರೆ ಅದಕ್ಕೆ ಕೊನೆಮೊದಲೇ ಇರುವುದಿಲ್ಲ. ತಮ್ಮ ಹಕ್ಕುಬಾಧ್ಯತೆಗೆ ಹೋರಾಡುವವರು ಇತರರ ಹಕ್ಕುಬಾಧ್ಯತೆಯನ್ನೂ ಗಮನಿಸಬೇಕು.

ಪತ್ರಿಕೆಗಳಿಗೆ ಈಗಾಗಲೇ ಇರುವ ಕಾನೂನು ಕಟ್ಟಳೆಗಳ ಜೊತೆಗೆ ಶಾಸನ ಸಭೆಗಳ ಹಕ್ಕುಬಾಧ್ಯತೆಗಳ ನೆಪದಲ್ಲಿಯೂ ಹೊಸದೊಂದು ಧಾಳಿಯು ಆರಂಭವಾದಂತಿದೆ. ಪತ್ರಿಕೆಗಳ ವ್ಯಾಪ್ತಿ ಮತ್ತು ಸಾರ್ವಜನಿಕರಿಗೂ ಪತ್ರಿಕೆಗಳಿಗೂ ಇರಬೇಕಾದ ಸಂಬಂಧದ ಬಗ್ಗೆ ಸರಿಯಾದ ಪರಿಜ್ಞಾನವಿಲ್ಲದಿರುವುದೇ ಇದಕ್ಕೆ ಕಾರಣವೆಂದು ಹೇಳಬಹುದು. ಈ ಹೊಸ ಆಘಾತವನ್ನು ಎದುರಿಸಿ ಸಂಬಂಧಪಟ್ಟವರೆಲ್ಲರಿಗೂ ಸರಿಯಾದ ತಿಳವಳಿಕೆಯನ್ನು ಉಂಟುಮಾಡಿಕೊಡಲು ಎಲ್ಲ ಪತ್ರಿಕೆಗಳೂ ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುವುದು ಲೇಸು.

ಹದಿನೇಳು ಲಕ್ಷ ರೂ. ಒಡವೆ ಅಪಹಾರ

ನೈಜಾಮ್ ಸರ್ಕಾರದ ಲೇಬರ್ ಮಂತ್ರಿಗಳಾದ ನವಾಬ್ ಜಹೀರ್ ಯಾರ್ ಜಂಗ್ ಬಹದ್ದೂರ್‌ರವರ ಮನೆಯಲ್ಲಿ ಮೊನ್ನೆ ದಿನ ಸುಮಾರು ಹದಿನೇಳು ಲಕ್ಷ ರೂ. ಗಳಷ್ಟು ಬೆಲೆ ಬಾಳುವ ಆಭರಣಗಳು ಕಳುವಾಗಿವೆಯೆಂದೂ ಇದರಲ್ಲಿ ಕೆಲವು ಬಹು ಬೆಲೆ ಬಾಳುವ ವಜ್ರಗಳಿದ್ದುವೆಂದೂ ವರದಿಯಾಗಿದೆ. ಸುಮಾರು ೨೦೦ ವರ್ಷಗಳಿಂದ ಅವರ ಮನೆತನಕ್ಕೆ ಸೇರಿದ್ದ ಹಲವು ಆಭರಣಗಳೂ ಸಹ ಹೋಗಿವೆ.

Edited, printed and published by A. R. Nagarajan at the Sadhvi Press Dhanbiah Road, Mysore.

ಉದಾರ ದಾನಗಳು

ಮೈಸೂರು ೨೯

ಧಾನ್ಯವರ್ತಕರ ಸಹಕಾರಿಸಂಘದ ಮ್ಯಾನೇಜರ್ ಶ್ರೀ ಎಲ್. ತಮ್ಮಯ್ಯನವರ ಮಗ ಶ್ರೀ ಎಲ್. ನಾಗರಾಜರವರಿಗೆ ಆರ ಮನೆ ಆಸ್ಪತ್ರೆ ಡಾ॥ ಕೃಷ್ಣಪ್ಪನವರ ತಮ್ಮನ ಮಗಳು ಸೌ॥ ಲಕ್ಷ್ಮೀದೇವಿಯವರನ್ನು ಕೊಟ್ಟು ನಡೆಸಿದ ವಿವಾಹದಲ್ಲಿ ವಧೂವರರಿಂದ ೩೦ ರೂ. ಗಳೂ ನಂಜನಗೂಡು ಶ್ರೀಕಂಠಯ್ಯ ಮತ್ತು ಸೌ॥ ಮಂಗಳಗೌರಮ್ಮನವರ ವಿವಾಹದಲ್ಲಿ ೧೦ ರೂ. ಗಳೂ, ವೆಂಕಟರಮಣಯ್ಯನವರ ಮಗ ತಿಮ್ಮಯ್ಯ ಮತ್ತು ಚನ್ನಪ್ಪನವರ ಮಗಳ ವಿವಾಹದಲ್ಲಿ ೪ ರೂ. ಗಳೂ ಡಿ॥ ಕೆ ಹೆಚ್. ರಾಮಯ್ಯನವರ ಅನಾಥಾಲಯಕ್ಕೆ ದಾನವಾಗಿ ಸಂದಿರುತ್ತವೆಂದು ಶ್ರೀ ಟಿ. ಸಿ. ಗೌಡರು ತಿಳಿಸಿದ್ದಾರೆ.

ಕಳ್ಳತನ

ಸರಸ್ವತೀ ಪುರದಲ್ಲಿರುವ ಲಾಯರ್ ಶ್ರೀ ಅನಂತರಾಮಾ ಶಾಸ್ತ್ರಿಗಳ ಮನೆಗೆ ನಿನ್ನೆ ಸಂಜೆ ೭ ರಿಂದ ೯ ಗಂಟೆಯೊಳಗೆ ಯಾರೋ ಕಳ್ಳರು ನುಗ್ಗಿ ಯಾರೂ ಇಲ್ಲದ ಸಮಯದಲ್ಲಿ ಅಲ್ಲಿದ್ದ ರೇಡಿಯೋ, ಸೀರೆಗಳು, ಪಾತ್ರೆಗಳೇ ಮುಂತಾದ ಸುಮಾರು ೧೫೦೦ ರೂ. ಬಾಳುವ ಪದಾರ್ಥಗಳನ್ನು ಹೊತ್ತುಕೊಂಡು ಹೋಗಿರುವುದಾಗಿ ವರದಿಯಾಗಿದೆ.

ನೋಟೀಸು

No. H 3 P R 49/45-46

ಮೈಸೂರು ಸಿಟಿ ಮುನಿಸಿಪಲ್ ಸರಹದ್ದಿನೊಳಗೆ ೧೯೪೫-೪೭ ನೇ ಸಾಲಿನಲ್ಲಿ ನಡೆಸುವ ಈ ಮುನಿಸಿಪಾಲಿಟಿಯ ಆರೋಗ್ಯ ಶಾಖೆಯ ಅಧಿಕಾರಕ್ಕೆ ಒಳಪಟ್ಟ ಎಲ್ಲಾ ವಿಧವಾದ ಕಸಬುಗಳಿಗೆ ಅಗತ್ಯವಾದ ಲೈಸನ್ಸನ್ನು ಸಕಾಲದಲ್ಲಿ ಪಡೆದು ಅನಂತರ ಆಯಾಯ ಕಸಬುಗಳನ್ನು ಜಾರಿಯಲ್ಲಿ ತರತಕ್ಕದ್ದು. ಹಾಗೆ ಲೈಸನ್ಸು ಅಪೇಕ್ಷಿಸುವ ಕಸಬುದಾರರು ತಮ್ಮ ಹೆಸರು, ವಿಳಾಸ, ಕಸಬಿನ ವಿವರ, ನಡೆಸುವ ಸ್ಥಳ ಮುಂತಾದ ತಪಶೀಲುಗಳೊಡನೆ ಆರೋಗ್ಯ ಶಾಖೆಯ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ವಿಧಾಯಕವಾದ ಫೀಜು ಪಾವತಿಯಿಂದ ಲೈಸನ್ಸು ಪಡೆಯತಕ್ಕದ್ದು. ಹಾಗೆ ಲೈಸನ್ಸು ಪಡೆಯದೆ ಕಸಬುಗಳನ್ನು ನಡೆಸುವವರ ಮೇಲೆ ಕಾನೂನು ಪ್ರಕಾರ ಕ್ರಮ ನಡೆಸಲಾಗುವುದು.

(ಸಹಿ)

ಆರ್. ರಾಮಚಂದ್ರರಾವ್ ಬೊಂಭೂರೆ

ಪ್ರೆಸಿಡೆಂಟ್,

ಸಿಟಿ ಮ್ಯುನಿಸಿಪಾಲಿಟಿ,

ತಾ॥ ೨೫-೬-೧೯೪೬

ಜಿನ್ನಾರವರಿಗೆ ವೈಸರಾಯರ ಉತ್ತರ

ನಾನಾಗಲೀ ನಿಯೋಗದವರಾಗಲಿ ... ಮ್ಮ ವಾಗ್ದಾನದಿಂದ ಹಿಮ್ಮೆಟ್ಟಿಲ್ಲ. ... ಸ್ಟಿಟ್ಯೂಯೆಂಟ್ ಅಸೆಂಬ್ಲಿಯ ಚುನಾವಣೆಗಾಗಿ ಏರ್ಪಾಟುಗಳೆಲ್ಲಾ ಈಗಾಗಲೇ ... ಭವಾಗಿ ಬಿಟ್ಟಿವೆ. ಚುನಾವಣೆಯನ್ನು ಮುಂದೆ ಹಾಕಲು ಸಾಧ್ಯವಿಲ್ಲ. ಎಂಬುದಾಗಿ ಮಿ॥ ಜಿನ್ನಾರವರು ಬರೆದಿದ್ದ ಪತ್ರಕ್ಕೆ ಉತ್ತರವಾಗಿ ವೈಸರಾಯರು ತಿಳಿಸಿದ್ದಾರೆ.

ಹಸಿದ ಮಹಿಳೆಯರ ಉದ್ಗಾರ

ಮೂವತ್ತು ಜನ ಹಸಿವಿನಿಂದ ಬೆಂ... ಬಳಲಿದ ಮಹಿಳೆಯರು ತಮ್ಮ ಮಕ್ಕಳೊ... ದಿಗೆ ಮೊನ್ನೆ ದಿನ ನೋಖಾಲಿ ನಗರದ ... ಗಳಲ್ಲಿ 'ಆಹಾರವನ್ನು ಕೊಡಿ' ಎಂಬ ... ದ್ಗಾರಗಳೊಡನೆ ನಡೆದರು. ಇವರುಗಳು ಆಹಾರ ಕಂಟ್ರೋಲರ್ ಆಫೀಸಿನ ಮುಂ... ಬಂದು ತಮಗೆ ಆಹಾರ ಕೊಡಬೇಕೆಂ... ಒತ್ತಾಯ ಮಾಡಿದರು.

○ ಡಾ॥ ರಾಜೇಂದ್ರ ಪ್ರಸಾದ ಮುಖರ್ಜಿ, ... ಗ್ಲೋ ಇಂಡಿಯನ್ ನಾಯಕರಾದ ... ಫ್ರಾಂಕ್ ಆಂಥೊನಿ ಮತ್ತು ಮಿ॥ ಗಿಬ್... ಇವರುಗಳನ್ನು ರಾಜ್ಯಾಂಗ ರಚನಾ ಸಭೆ... ಸೂಚಿಸಬೇಕೆಂದು ಕಾಂಗ್ರೆಸ್ ತೀರ್ಮಾ... ನಿಸಿದೆ.

The National Institute of Engineering, Mysore

NOTIFICATION

All Candidates who ha[ve] sent in their Appl cations ... far duly filled in and sign[ed] have been allotted sea[ts]. They are therefore request[ed] to be present at 9 A. M. in t[he] Sharada Vilas High Scho[ol] on Monday the 1st July 4[6]. They should bring with the[m] the admission and tuiti[on] Fees and also their mar[ks] card and Transfer Cert[ifi]cates in original, if they ha[ve] not already done so.

The classes will be open[ed] on 1-7-46 as already notifi[ed].

S. Ramaswamy,

Princip[al]

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದಾ—

ತಾ॥ ೨೭—೬—೪೬

ನೋಟಿಫಿಕೇಷನ್

ನಂಬರು- R1—809-45-46

ಇದರಿಂದ ಮೈಸೂರು ನಗರದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:—

ಜುಲೈ ಒಂದನೇ ತಾರೀಖು ಆಗಾಗ ... ಎಲೆಕ್ಟ್ರಿಕ್ ದೀಪವಿಲ್ಲದಿರುವ ಮನೆಯ ರೇಷನ್ ಕಾರ್ಡ್ ಹೋಲ್ಡರುಗಳಿಗೆ ಮಾತ್ರ ಸೀಮೆ ಎಣ್ಣೆಯನ್ನು ಈ ಕೆಳಗೆ ಕಂಡ ಪ್ರಮಾಣದಲ್ಲಿ ಕೊಡಲಾಗುವುದು—

1. ... 1½ ಸೀಸೆ ಎಣ್ಣೆ ... ಮನೆಗೆ ... ಸೀಸೆಯನ್ನು ಕೊಡಲಾಗುವುದು.

2. ... ಮನೆಗೆ ... ಸೀಸೆಯನ್ನು ಕೊಡಲಾಗುವುದು.

ರೇಷನ್ ಕಾರ್ಡ್ ಹೋಲ್ಡರುಗಳು ತಮ್ಮ ರೇಷನ್ ಕಾರ್ಡುಗಳನ್ನು ಸಂಬಂಧಪಟ್ಟ ಅಸಿಸ್ಟೆಂಟು ರೇಷನಿಂಗ್ ಆಫೀಸಿನಲ್ಲಿ ಹಾಜರ್ಪಡಿಸಿದರೆ ... ಒದಗಿಸಿಕೊಡಲಾಗುವುದು.

27—6—46

(ಸಹಿ) ಅಬ್ದುಲ್ ರಜಾಕ್,

ರೇಷನಿಂಗ್ ಆಫೀಸರು, ಮೈಸೂರು ಸಿಟಿ.

ರಾಜ್ ಕಮಲ್ ಟಾಕೀಸ್, ಮೈಸೂರು

(ಭವ್ಯ ಕಲಾ ಚಿತ್ರ ಮಂದಿರ)

ಅಮೋಘವಾದ ಎರಡನೇ ವಾರ

26—6—46 ನೇ ಬುಧವಾರದಿಂದ

ಸ್ವರ್ಣ ಲತಾ ಅಜೂರಿ } ರತನ್ { ವಾಸ್ತಿ ಕರಣ್‌ದಿವಾ...

ನೀವು ಇದುವರೆಗೂ ನೋಡದಿದ್ದರೆ ಇಂದೇ ಬಂದು ನೋಡಿ !

ಪ್ರತಿ ದಿನ ಮೂರು ಆಟಗಳು

ವಿಜಯಾ ಏಜನ್ಸೀಸ್, ಮೈಸೂರು.

ಫೋನ್ ನಂ. 392 WEEKLY EDITION ಬಿಡಿಪ ಪತ್ರಿಕೆ 6 ಕಾಸು

ಸಂಪುಟ ೧೦] ಸೋಮವಾರ ೧—೭—೪೬ [ಸಂಚಿಕೆ ೪೭

ಇಂಡೋನೇಷಿಯದಲ್ಲಿ ಮಂತ್ರಿಗಳ ಅಪಹಾರ

ವಾರ ಭವಿಷ್ಯ

೧-೭-೪೬ ರಿಂದ ೭-೭-೪೬ ರ ವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ—ವ್ಯಾಪಾರಾದಿ ಉದ್ಯೋಗಗಳಲ್ಲಿ ಜೇಬಾರು. ಆರೋಗ್ಯ ಉತ್ತಮ. ಮಾನಸಿಕ ಚಿಂತೆ. ಆದಾಯ ಹೆಚ್ಚುವುದು ಆಲಸ್ಯ ಅಧಿಕವಾಗುವುದು ವಿಚಿತ್ರ ವಾರ್ತೆ ಕೇಳುವಿರಿ.

ವೃಷಭ—ಆರೋಗ್ಯ ಉತ್ತಮವಿಲ್ಲ. ಗೃಹಕೃತ್ಯಕ್ಕಾಗಿ ಖರ್ಚು ಅಧಿಕ. ಕಲಹ. ಮನೆಯವರ ಆರೋಗ್ಯದ ಬಗ್ಗೆ ಚಿಂತೆ. ಕೆಲಸಕಾರ್ಯಗಳಲ್ಲಿ ಜಿಗುಪ್ಸೆ. ನಿರುತ್ಸಾಹ. ಆದಾಯ ವೆಚ್ಚಗಳು ಸಮವಾಗಿದೆ.

ಮಿಥುನ—ಈ ವಾರ ಶುಭದಾಯಕವಾಗಿರುವುದು. ಆರೋಗ್ಯ ಉತ್ತಮ. ಹಿತ ಮಿತ್ರರಿಂದ ಸಹಬಾಸ್ ಗಿರಿ. ಪ್ರವಾಸ ಬೇಡಿ. ಮಿತ್ರರಿಂದ ಸನ್ಮಾನ. ಈ ವಾರದ ಆದಾಯವನ್ನು ಗಂಟು ಮಾಡುವಿರಿ. ಶತ್ರುರ ಭೀತಿಯಿಂದ ಸಂತೃಪ್ತಿ.

ಕಟಕ—ಆರೋಗ್ಯವೇನೋ ಉತ್ತಮ ಆದರೆ ಮಾನಸಿಕ ಸ್ಥಿತಿ ಸರಿ ಇಲ್ಲ. ಲಾಭ ಸಾಧಾರಣ. ವ್ಯಾಪಾರ ವ್ಯವಹಾರಗಳಲ್ಲಿ ಮನಃಬಾಧೆ ಕಡಮೆಯಾಗಲಿದೆ. ಆಪ್ತ ಬಂಧುಗಳ ಅನಾರೋಗ್ಯದಿಂದ ಮನೋವೇದನೆ.

ಸಿಂಹ—ದೇಹಾರೋಗ್ಯವಿಲ್ಲದಿರುವುದರಿಂದ ಕೆಲಸಕಾರ್ಯಗಳಲ್ಲಿ ಮುಗ್ಗರಿಸುವಿರಿ. ಮೇಲಧಿಕಾರಿಗಳ ಅನಾಸಕ್ತಿಗೆ ಅಗ್ರಪಕ್ಷಿ ಪಾತ್ರರಾಗುವಿರಿ. ವ್ಯಾಪಾರದಲ್ಲಿ ಶತ್ರುಗಳ ಕೈವಾಡ ಪ್ರತೀಕಾರಗಳನ್ನೇ ಮಾಡುವರು.

ಕನ್ಯಾ—ಆರೋಗ್ಯ ಉತ್ತಮವಿಲ್ಲ. ಹಿತಶತ್ರುಗಳು ವಿಘ್ನಗಳನ್ನು ತಂದೊಡ್ಡುವರು. ಕೋರ್ಟು ಕಛೇರಿ ತೀರ್ಮಾನಗಳು ಮುಂದುವರಿಯುವುವು. ಪ್ರವಾಸ ಕೈಗೊಳ್ಳಬೇಡಿ. ಖರ್ಚು ಅಧಿಕ. ಸಂತಾಪದ ವಾರ್ತೆ ಕೇಳುವಿರಿ.

ತುಲಾ—ಮನಸ್ಸಿನಲ್ಲೇ ಆನಂದದಾಯಕ ವಿಚಾರಗಳನ್ನು ಯೋಚಿಸುತ್ತಾ ಸಂತೋಷದಿಂದ ಕಾಲ ಕಳೆಯುವಿರಿ. ಆರೋಗ್ಯ ಬಹಳ ಚೆನ್ನಾಗಿದೆ. ಮಿತ್ರರ ಸಹಾಯವಾಗುವುದು. ಕೆಲಸಕಾರ್ಯಗಳಲ್ಲಿ ಯಶಸ್ಸು.

ವೃಶ್ಚಿಕ—ನಿಮ್ಮ ಶರೀರ ಪ್ರಕೃತಿ ಚೆನ್ನಾಗಿರುವುದು. ಲಾಭ ಹೆಚ್ಚುವುದು. ಹೊಸ ಉದ್ಯಮಗಳಲ್ಲಿ ಕೈ ಹಾಕುವಿರಿ. ಸ್ವತಂತ್ರರಾಗಿರುವಿರಿ. ಆಪ್ತೇಷ್ಟರ ಭೇಟಿ. ಪ್ರವಾಸದಲ್ಲಿ ಅನುಕೂಲ. ಶತ್ರುಗಳು ನಾಶವಾಗುವರು.

ಧನುಸ್ಸು—ಮಿತ್ರರ ನೆರವಿನಿಂದ ಕೆಲಸಕಾರ್ಯಗಳು ಅನುಕೂಲವಾಗುವುವು. ಆರೋಗ್ಯ ಉತ್ತಮ. ಮಾನಸಿಕ ಉತ್ಸಾಹ ಉಂಟಾಗುವದು. ವ್ಯವಹಾರಗಳಲ್ಲಿ ಆದಾಯ ಅಧಿಕವಾಗುವುದು. ಪರೋಪಕಾರಕ್ಕಾಗಿ ಧನ ವ್ಯಯ.

ಮಕರ—ದಯವಿಟ್ಟು ಪ್ರವಾಸವನ್ನು ಕೈಗೊಳ್ಳಬೇಡಿ. ಆರೋಗ್ಯ ಉತ್ತಮವಿಲ್ಲ. ವ್ಯಾಪಾರ ವ್ಯವಹಾರಗಳಲ್ಲಿ ಸ್ವಲ್ಪ ನಷ್ಟದಿಂದ ಕೈವಾಡ ಅಧಿಕವಾಗಿ ಆದಾಯ ಕಡಿಮೆಯಾಗುವುದು.

ಕುಂಭ—ಆರೋಗ್ಯ ಮತ್ತು ಮಾನಸಿಕ ಸ್ಥಿತಿಗಳು ಉತ್ತಮವಿಲ್ಲ. ವಿದ್ಯಾರ್ಥಿ ವಿದ್ಯಾಭ್ಯಾಸಕ್ಕೆ ಸ್ವಲ್ಪ ಅಡಚಣೆ ವ್ಯವಹಾರದಲ್ಲಿ ಪಾಲುಗಾರರ ಒಳಸಂಚು, ಕೈ

ಪೌರಸಭಾ ಉಪ ಸಮಿತಿಗಳು

ಮೈಸೂರು ೧

ಮೊನ್ನೆ ನಡೆದ ಪುರ ಸಭಾಧಿವೇಶನದಲ್ಲಿ ಮುಂದಿನ ಆರು ತಿಂಗಳಿಗೆ ಈ ಕೆಳಗೆ ಕಂಡಂತೆ ಉಪ ಸಮಿತಿಗಳಿಗೆ ಸದಸ್ಯರುಗಳನ್ನು ಆರಿಸಲಾಯಿತು:—

ಆಡಳಿತ ಸಮಿತಿ:- ಶ್ರೀ।। ಗಳಾದ ಎ. ಕೃಷ್ಣಮೂರ್ತಿ ರಾವ್, ಬಿ. ನಾರಾಯಣಸ್ವಾಮಿ, ಬಿ. ಎಸ್. ಸತ್ಯನಾರಾಯಣರಾವ್ ಎ. ಎಸ್. ದಾಸಪ್ಪ, ಎಂ. ವಿ. ವೆಂಕಟರಾಮಯ್ಯ, ಟಿ. ಸಿ. ಗೌಡ, ಕೆ. ಸಿದ್ದಯ್ಯ ಮತ್ತು ಟಿ. ವೆಂಕಟರಮಣಯ್ಯ.

ಕಾಮಗಾರಿ ಸಮಿತಿ:- ಶ್ರೀ।। ಗಳಾದ ಪಿ. ಸೀತಾರಾಮಯ್ಯ, ಟಿ. ವೆಂಕಟರಮಣಯ್ಯ, ಚೌಡಯ್ಯ ಮತ್ತು ಜಿ. ಅಹಮದ್ ಖಾನ್.

ಆರೋಗ್ಯ ಸಮಿತಿ:- ಶ್ರೀ।। ಗಳಾದ ಟಿ. ನರಸಿಂಹಯ್ಯಂಗಾರ್, ಬಿ. ನಾರಾಯಣಸ್ವಾಮಿ, ಟಿ. ಮರಿಯಪ್ಪ ಮತ್ತು ಶ್ರೀಮತಿ ಪಟ್ಟಮ್ಮ, ಎಚ್. ದಿವಾನ್ ಅಲಿ.

ಪುರ ಭವನ ಸಮಿತಿ:- ಶ್ರೀ।। ಗಳಾದ ಪಿ. ಸೀತಾರಾಮಯ್ಯ, ಕೆ. ಎಸ್. ಸತ್ಯನಾರಾಯಣ ರಾವ್, ಅಗರಂ ರಂಗಯ್ಯ ಮತ್ತು ಜಿ. ಆರ್. ರಾಮಸ್ವಾಮಯ್ಯ.

ಲೆಕ್ಕ ಪರಿಶೀಲನಾ ಸಮಿತಿ:- ಶ್ರೀ।। ಗಳಾದ ಬಿ. ನಾರಾಯಣಸ್ವಾಮಿ (ಅಧ್ಯಕ್ಷರು), ಟಿ. ವೆಂಕಟರಮಣಯ್ಯ, ಮತ್ತು ಕೆ. ಎಸ್. ಸತ್ಯನಾರಾಯಣರಾವ್

ನ್ಯಾಯ ನಿಬಂಧನಾ ಸಮಿತಿ:- ಶ್ರೀ।। ಗಳಾದ ಪಿ. ಸೀತಾರಾಮಯ್ಯ (ಅಧ್ಯಕ್ಷರು), ಟಿ. ನರಸಿಂಹಯ್ಯಂಗಾರ್ ಮತ್ತು ಟಿ. ಮರಿಯಪ್ಪ

ಹಿಂದೆ ಪುರ ಸಭಾ ಸದಸ್ಯರಾಗಿದ್ದು ಈಗ ನಿವೃತ್ತ ಜಿಲ್ಲಾ ಎಕ್ಸೈಜ್ ಆಫೀಸರ್ ಶ್ರೀ।। ಸಿ. ಎಸ್. ಅನಂತರಾಯರ ಬಗ್ಗೆ ಮೊನ್ನೆ ನಡೆದ ಪುರಸಭೆಯಲ್ಲಿ ಸಂತಾಪ ಸೂಚಕ ನಿರ್ಣಯವನ್ನು ಸದಸ್ಯರೆಲ್ಲರೂ ಎದ್ದು ನಿಂತು ಅಂಗೀಕರಿಸಿದರು. ಶ್ರೀ।। ಪಿ. ಸೀತಾರಾಮಯ್ಯನವರು ನಿರ್ಣಯವನ್ನು ಮಂಡಿಸಿದರು

ಕೆಳಗಿನವರೇ ... ಬೇಕಾದ ... ಖರ್ಚು ಅಧಿಕ

ಮೀನ—ಆರೋಗ್ಯ ಉತ್ತಮ. ಹೊಸ ವ್ಯವಹಾರಗಳಲ್ಲಿ ... ಪ್ರವಾಸ ... ಸಂತಸದ ಸಂಗತಿಗಳಿಗೆ ಆನಂದದಾಯಕ ವಾರ್ತೆ ಬರುವುದು ಪರೋಪಕಾರ ನಡೆಯುವುದು. ಪ್ರಿಯ ಜನರ ಪತ್ರ ಬರುವುದು.

ಕಳ್ಳಸಂತೆಗೆ ಸಾರ್ವಜನಿಕರ ಪ್ರೋತ್ಸಾಹ

ಶಾಸನ ಸಭೆಯಲ್ಲಿ ಮಂತ್ರಿಗಳ ಸೂಚನೆ

ಸ್ವಂ. ವ. ಪ್ರೋ॥] ಬೆಂಗಳೂರು ೧

ಪತಿರೋಟಿಗೋಳಗಾಗಿರುವ ಬಟ್ಟೆ ಮುಂತಾದ ವಸ್ತುಗಳು ಕಳ್ಳದಾರಿಯಲ್ಲಿ ಪೇಟೆಯಲ್ಲಿ ಸಾರ್ವಜನಿಕರಿಗೆ ಮಾರಲಾಗುತ್ತಿದೆ ಎಂಬ ವಿಚಾರ ಸರ್ಕಾರದ ಗಮನಕ್ಕೆ ಬಂದಿದೆಯೇ ಎಂದು ಕಾಂಗ್ರೆಸ್ಸಿನ ಶ್ರೀ ಕರಿಸಾಬ್ ಮಂಜಪ್ಪನವರು ಇಂದಿನ ಶಾಸನ ಸಭೆಯಲ್ಲಿ ಹಾಕಿದ ಪ್ರಶ್ನೆಗೆ, ನ್ಯಾಯಾಂಗ ಸಚಿವರಾದ ಡಾ।। ಬಿ. ಎಸ್. ಎಸ್. ಪಾರ್ಥಸಾರಥಿ ರವರು ಉತ್ತರವಿತ್ತು ಕೆಲವು ಸಂದರ್ಭಗಳಲ್ಲಿ ಆರೀತಿ ಆಗಿದೆಯೆಂದು ಒಪ್ಪಿಕೊಂಡರು. ಸಾರ್ವಜನಿಕರೇ ಇದಕ್ಕೆ ಪ್ರೋತ್ಸಾಹ ಕೊಡುತ್ತಿರುವರೆಂದೂ, ಸರ್ಕಾರದವರು ಆಗಾಗ್ಗೆ ತನಿಖೆ ನಡೆಸುತ್ತಿದ್ದಾರೆಂದೂ, ೧೨ ಸಂದರ್ಭಗಳಲ್ಲಿ ಅನಿರೀಕ್ಷಿತ ಭೇಟಿಗಳನ್ನು ಕೊಟ್ಟು ಮಳಿಗೆಗಳನ್ನು ಜಪ್ತಿಮಾಡಿ ... ಮಾಡಲಾಗಿದೆಯೆಂದೂ ತಿಳಿಸಿದರು

ಪುಲ್ಲಿ ರೆಡ್ಡಿಯವರು ಹಿಂದಿರುಗುವರೇ?

ಸ್ವಂ. ವ. ಪ್ರೋ॥] ಬೆಂಗಳೂರು ೧

ದಿವಾನರು ಮಂತ್ರಿಗಳಾದ ಶ್ರೀ ಪುಲ್ಲಿರೆಡ್ಡಿಯವರು ಆಗಸ್ಟ್ ೧ ನೇ ತಾ।। ನ ವೇಳೆಗೆ ಮದ್ರಾಸ್ ಸರ್ಕಾರದ ಸೇವೆಗೆ ಹಿಂದಿರುಗುವರೆಂದು ಅನಧಿಕೃತವಾಗಿ ತಿಳಿದು ಬಂದಿದೆ.

ಶ್ರೀ।। ಗಳಾದ ಟಿ. ಮರಿಯಪ್ಪನವರೂ, ಎಚ್. ಎಸ್. ರುದ್ರಪ್ಪನವರೂ ಸಾರ್ವಜನಿಕ ಆರೋಗ್ಯ ಯೋಜನೆಗೆ ಚಾಲನೆ ಕೊಟ್ಟರು

ನಿರ್ಮಾಣ ಶಾಖೆಗೆ ಸಂಬಂಧಪಟ್ಟಂತೆ ೧ ಲಕ್ಷ ರೂಪಾಯಿ ಕಾಮಗಾರಿ ... ಸಂಬಂಧವನ್ನು ಶ್ರೀ ಪುಲ್ಲಿರೆಡ್ಡಿಯವರು ಮಾಡಿಸಿದರು. ಸರ್ವೋದಯಗಳ ಅಭಿವೃದ್ಧಿ ಬಗ್ಗೆ ಕೆಲವು ಪ್ರಯೋಗಗಳಿಂದ ಸಾಧ್ಯವಾಗಿ ವಿಪುಲ ಚರ್ಚೆ ... ಪಾಸಾಯಿತು.

ವಿಶ್ವ ವಿದ್ಯಾನಿಲಯದ ಸ್ನಾತಕರಿಗೆ ... ಬಗ್ಗೆ ... ಸಭೆಯಲ್ಲಿ ... ಚರ್ಚೆ ನಡೆಯಿತು. ಶ್ರೀ।। ಗಳಾದ ಮರಿಯಪ್ಪ, ಗರುಡಾಚಾರ್, ... ರವರು ... ಬೆಂಬಲಿಸಿದರು. ... ರವರು ಸರ್ಕಾರದ ನೀತಿಯನ್ನು ಸಮರ್ಥಿಸಿ ...

ಇಂಡೋನೇಷಿಯಾ ಸಚಿವರ ಅಪಹಾರ

ಶಸ್ತ್ರ ಸಜ್ಜಿತರಾದ ಕೆಲವರು ಇಂಡೋನೇಷಿಯದ ಮುಖ್ಯ ಮಂತ್ರಿ ಡಾ।। ಶಹರೀರ್ ಸಾರ್ವಜನಿಕ ವ್ಯವಹಾರಗಳ ಮಂತ್ರಿ ಡಾ।। ಮದರ್ ಮೇರಿಯಾ ಸಂಟೋಸೋ ಮೇ।। ಜ।। ಸೂದಿಬ್ ಜೋ ಮತ್ತು ಇತರರನ್ನು ಅವರುಗಳು ಇಳಿದುಕೊಂಡಿದ್ದ ಸೋಯರ್ ಕಾರ್ಟ ನಗರದ ಹೋಟಲಿಂದ ಕಳೆದ ಗುರುವಾರ ಅಪಹರಿಸಿಕೊಂಡು ಹೋದರೆಂಬ ವಾರ್ತೆಯು ಬಂದಿರುತ್ತದೆ. ಇಂಡೋನೇಷಿಯದ ಅಧ್ಯಕ್ಷರಾದ ಡಾ।। ಸೋಕರ್ನೊ ರವರೇ ಸರ್ವಾಧಿಕಾರವನ್ನು ವಹಿಸಿಕೊಂಡಿದ್ದಾರೆ. ಈಗ ಅಲ್ಲಿ ಮಾರ್ಷಲ್ ಲಾ ಜಾರಿ ಮಾಡಲಾಗಿದೆ.

ಮಹಾತ್ಮರ ರೈಲನ್ನು ಉರುಳಿಸುವ ಪ್ರಯತ್ನ

ದೆಹಲಿಯಿಂದ ಗಾಂಧೀಜಿಯವರು ಪೂನಾ ನಗರಕ್ಕೆ ಸ್ಪೆಷಲ್ ರೈಲಿನಲ್ಲಿ ಬರುತ್ತಿದ್ದಾಗ ಪೂನಾಕ್ಕೆ ೩೦ ಮೈಲಿ ದೂರದಲ್ಲಿರುವ ನೇರಲ್ ಎಂಬಲ್ಲಿ ಯಾರೋ ದುಷ್ಕರ್ಮಿಗಳು ರೈಲು ಕಂಬಿಗಳ ಮೇಲೆ ಭಾರಿ ಬಂಡೆಗಳನ್ನು ಇಟ್ಟಿದ್ದರು. ರೈಲು ವೇಗವಾಗಿ ಬರುತ್ತಿದ್ದುದರಿಂದ ಕೂಡಲೇ ನಿಲ್ಲಿಸಲು ಆಗಲಿಲ್ಲ. ಇಂಜಿನ್ನಿನ ಮುಂಭಾಗವು ಬಂಡೆಗೆ ತಗುಲಿತು. ರೈಲು ಜಾಗ್ರತೆಯಾಗಿ ನಿಧಾನವಾಗಿ ಪ್ರಯಾಣ ಮಾಡುತ್ತಿದ್ದವರಿಗೆ ಸ್ವಲ್ಪ ಜಗ್ಗಿಸಿದಂತಾಯಿತು. ಯಾರಿಗೂ ಅಪಾಯ ಉಂಟಾಗಿಲ್ಲ.

ಅಮೀರ್‌ಜಾನರ ನಿಧನ

ಸ್ವಂ. ವ.] ಗುಂಡ್ಲುಪೇಟೆ ೩೦

ಇಲ್ಲಿನ ಬೀಡಿ ವರ್ತಕರೂ, ನಂಜನಗೂಡು ಸಬ್ ಡಿವಿಜನ್ನಿನಲ್ಲಿ ಹೆಸರಾಂತ ವ್ಯಕ್ತಿಗಳೂ ಆದ ಜ।। ಅಮೀರ್‌ಜಾನರವರು ಈ ದಿನ ಬೆಳಗ್ಗೆ ನಿಧನರಾದರೆಂದು ತಿಳಿಸಲು ವಿಷಾದವಾಗುತ್ತದೆ. ದಿವಂಗತರು ವಿಶ್ವವಿದ್ಯಾನಿಲಯಕ್ಕೆ ಮುಸ್ಲಿಂ ವಿದ್ಯಾಭ್ಯಾಸದ ಪ್ರೋತ್ಸಾಹಕ್ಕಾಗಿ ಇತ್ತೀಚೆಗೆ ೧ ಲಕ್ಷ ರೂ. ಗಳ ದಾನವಿತ್ತಿದ್ದರು. ಮೃತರ ಆತ್ಮಕ್ಕೆ ಪರಮಾತ್ಮನು ಶಾಂತಿಯೀಯಲಿ.

ಮುಷ್ಕರ ನಿಂತಿತು

ಸ್ವಂ. ವ.] ನಂಜನಗೂಡು ಜೂನ್ ೨೮

ಈ ಊರಿನಲ್ಲಿ ಆಹಾರ ಅಭಾವ ಜಾಸ್ತಿಯಾಗಿದೆ. ಪುರಸಭೆ ಕೂಲಿಗಳು ಮುಷ್ಕರ ಹೂಡಿದ್ದರು. ಉಪಾಧ್ಯಕ್ಷ ಶ್ರೀ ಕೆ. ಎಸ್. ಲಕ್ಷ್ಮಣಶೆಟ್ಟರು ಬಹಳ ಶ್ರಮ ವಹಿಸಿ ಅವರಿಗೆ ಭರವಸೆಯಿತ್ತು ಮುಷ್ಕರವನ್ನು ಕೊನೆಗಾಣಿಸಿದರು.

ಮೋಟಾರು ಕೆಲಸಗಾರರ ಸಂಸ್ಥೆ

ನಾಳೆ ಬೆಳಗ್ಗೆ ೧೧ ಘಂಟೆಗೆ ಸಯ್ಯಾಜಿರಾವ್ ರಸ್ತೆಯ ಬಳಿಯ ಕಾಂಗ್ರೆಸ್ ಕಛೇರಿಯಲ್ಲಿ ಮೋಟಾರು ಕೆಲಸಗಾರರ ಸಭೆಯು ಮುನಿಸಿಪಲ್ ವೈಸ್ ಪ್ರೆಸಿಡೆಂಟರೂ ಸಂಘದ ಅಧ್ಯಕ್ಷರೂ ಆದ ಶ್ರೀ।। ಎ. ಕೃಷ್ಣಪ್ಪನವರ ಅಧ್ಯಕ್ಷತೆಯಲ್ಲಿ ನಡೆಯುತ್ತದೆ. ಕೆಲಸಗಾರರೆಲ್ಲರೂ ಬರಬೇಕಾಗಿ ಕೋರಲಾಗಿದೆ.

ಶಾಸನಸಭಿಕರುಗಳು ಇತ್ತರವಿತ್ತು, ವಿಶ್ವವಿದ್ಯಾನಿಲಯಕ್ಕೆ ... ರಿಂದ ... ಮಾಡಲಾಗುತ್ತಿದೆಯೆಂದೂ, ... ಸ್ನಾತಕರಿಗೆ ... ಅಧಿಕಾರಿಗಳನ್ನು ... ಉಪಯೋಗವಿರುವುದು ಅವಶ್ಯ ... ತಿಳಿಸಿದರು. ... ವಿಶ್ವವಿದ್ಯಾನಿಲಯಕ್ಕೆ

ಸಾಧ್ವಿ

ತಾ॥ ೧-೭-೪೬ ಸೋಮವಾರ

ಹೊಸ ಇಂಜನಿಯರಿಂಗ್ ಉದ್ಯಮ

ರಾಜಧಾನಿಯಲ್ಲಿ ಇಂದಿನಿಂದ ಒಂದು ಖಾಸಗಿ ಇಂಜನಿಯರಿಂಗ್ ಶಾಲೆಯು ಆರಂಭವಾಗಿದೆ. ನಮ್ಮ ದೇಶದ ತರುಣರಿಗೆ ಈಗ ಅತ್ಯಗತ್ಯವಾಗಿರುವ ಪಾರಿಭಾಷಿಕ ಶಿಕ್ಷಣವನ್ನು ಕೊಡುವುದೇ ಇದರ ಉದ್ದೇಶ. ಇಂಜನಿಯರಿಂಗ್ ಶಾಖೆಯಲ್ಲಿ ವಿಶೇಷ ಪರಿಶ್ರಮವನ್ನು ಪಡೆದು ಸಂಸ್ಥಾನಕ್ಕೂ ಹೊರಗೂ ಅಪಾರ ಸೇವೆ ಸಲ್ಲಿಸಿರುವ ಮಹನೀಯರುಗಳು ಇದನ್ನು ಕೈಗೊಂಡಿದ್ದಾರೆ. ಖಾಸಗೀ ಪ್ರಮುಖರು ಇಂಜನಿಯರಿಂಗ್ ಶಾಖೆಯ ವಿದ್ಯಾಪ್ರಚಾರಕ್ಕಾಗಿ ನಮ್ಮ ಸಂಸ್ಥಾನದಲ್ಲಿ ಕೈಗೊಂಡಿರುವ ಪ್ರಯತ್ನಗಳಲ್ಲಿ ಇದೇ ಮೊದಲನೆಯದು.

ಈ ಶಾಖೆಯ ಶಿಕ್ಷಣಕ್ಕಾಗಿ ತರುಣರು ದಿನೇ ದಿನೇ ಹೆಚ್ಚು ಹೆಚ್ಚು ಸಂಖ್ಯೆಯಲ್ಲಿ ಮುಂದೆ ಬರುತ್ತಿದ್ದಾರೆ. ಅಲ್ಲದೆ ಯುದ್ಧಾನಂತರದ ಪುನರ್ರಚನೆಗೆ ಸಂಬಂಧಪಟ್ಟಂತೆ ಎಲ್ಲ ಸರ್ಕಾರಗಳೂ ಅನೇಕ ದೊಡ್ಡ ದೊಡ್ಡ ಯೋಜನೆಗಳನ್ನು ಕೈಗೊಂಡಿವೆ. ಅರಿತು, ನುರಿತು, ಸುಶಿಕ್ಷಿತರಾದ ಕುಶಲ ಕೆಲಸಗಾರರು ಇದಕ್ಕಾಗಿ ಬಹಳ ಸಂಖ್ಯೆಯಲ್ಲಿ ಬೇಕಾಗುವರು. ಆದರೆ ಬೆಂಗಳೂರಿನಲ್ಲಿ ಈಗ ಇರುವ ಇಂಜನಿಯರಿಂಗ್ ಶಾಲೆಗಳಲ್ಲಿ ವಿದ್ಯಾರ್ಥಿಗಳಿಗೆ ಸಾಕಾದಷ್ಟು ಸ್ಥಳವು ದೊರೆಯುತ್ತಿಲ್ಲ. ಅಲ್ಲಿ ಇರುವ ಸ್ಥಳಗಳಿಗಿಂತ ಹತ್ತರಷ್ಟು ಸಂಖ್ಯೆಯಲ್ಲಿ ವಿದ್ಯಾರ್ಥಿಗಳು ಮುಂದೆ ಬರುತ್ತಿದ್ದಾರೆ. ಅವರೆಲ್ಲರಿಗೂ ನಮ್ಮ ವಿದ್ಯಾ ಇಲಾಖೆಯವರು ಅವಕಾಶವನ್ನು ಕಲ್ಪಿಸಲು ಅಸಮರ್ಥರಾಗಿರುವುದು ದೊಡ್ಡ ಕಳಂಕವೇ ಸರಿ. ವಿದ್ಯಾರ್ಜನೆಗಾಗಿ ಬರುವ ತರುಣರನ್ನು ಹೀಗೆ ಹಿಂದಕ್ಕೆ ಕಳುಹಿಸುವುದಕ್ಕಿಂತಲೂ ಈಗಿನ ಶಿಕ್ಷಣ ವ್ಯವಸ್ಥೆಯ ಖಂಡನೆಯು ಬೇರೊಂದಿರುವುದಿಲ್ಲ.

ಖಾಸಗಿ ಮಹನೀಯರುಗಳು ಇಂತಹ ಉದ್ಯಮವನ್ನು ಕೈಗೊಳ್ಳಲು ಮುಂದೆ ಬಂದಿರುವುದಕ್ಕಾಗಿ ಅವರು ಸಕಲರ ಅಭಿನಂದನೆಗೂ ಪಾತ್ರರು. ಸರ್ಕಾರದವರು ಮಾಡಬೇಕಾದ ಕರ್ತವ್ಯವನ್ನು ಇವರು ನಿರ್ವಹಿಸಿ ಸರ್ಕಾರದ ಹೊರೆಯನ್ನು ಸ್ವಲ್ಪಮಟ್ಟಿಗಾದರೂ ಇಳಿಸಿರುವುದರಿಂದ ಸರ್ಕಾರದವರು ಈ ಸಂಸ್ಥೆಗೆ ಸಕಲ ವಿಧವಾದ ಸಹಾಯಗಳನ್ನೂ ನೀಡುವುದು ನ್ಯಾಯವಾಗಿದೆ. ಅಲ್ಲದೆ ಶ್ರೀಮಂತರೂ, ಮೇಧಾವಿಗಳೂ ಆದ ನಿವೃತ್ತ ಅಧಿಕಾರಿಗಳನೇಕರು ಸದ್ಯಕ್ಕೆ ಯಾವ ಪ್ರತಿಫಲಾಪೇಕ್ಷೆಯೂ ಇಲ್ಲದೆ ಕೇವಲ ಸ್ವಾರ್ಥತ್ಯಾಗ ಮತ್ತು ದೇಶ ಸೇವೆಯ ದೃಷ್ಟಿಯಿಂದ ಈ ಕಾರ್ಯವನ್ನು ಕೈಗೊಂಡಿದ್ದಾರೆ. ನಮ್ಮ ತರುಣರು ಈಗ ಅಗತ್ಯವಾಗಿರುವ ಪರಿಶ್ರಮವನ್ನು ಪಡೆದು ಸಾರ್ವಜನಿಕರ ಸೇವೆಯನ್ನು ಮಾಡಿ ತಮಗೂ ತಮ್ಮ ಕುಟುಂಬಗಳಿಗೂ ಸಹಾಯವನ್ನು ಪಡೆಯಲೆಂಬುದೇ ಇವರ ಹಾರೈಕೆ. ಇದು ಅತ್ಯಂತ ಪ್ರಶಂಸನೀಯವಾದ ವಿಷಯ.

ಸದ್ಯದಲ್ಲಿ ಇದು ಒಂದು ಸಣ್ಣ ಶಾಲೆಯಾಗಿ ಆರಂಭವಾಗಿದೆ. ಆದರೆ ಇದು ಬೆಳೆಯಲು ಇರುವ ಅವಕಾಶವು ಅಪಾರವಾಗಿದೆ. ಶಾಲೆಯು ಕಾಲೇಜಾಗಿ, ಸಕಲ ಶಾಖೆಗಳನ್ನೂ ಒಳಗೊಂಡು ಸುಶಿಕ್ಷಿತರಾದ ಶಿಲ್ಪಕಲಾಕೋವಿದರನ್ನು ತಯಾರು ಮಾಡುವ ಸಂಭವವಿದೆ. ಇಂತಹ ಒಳ್ಳೆಯ ಪ್ರಯತ್ನಕ್ಕೆ ಸರ್ಕಾರದವರೂ, ಮಹಾಜನರೂ ಎಲ್ಲ ರೀತಿಯಿಂದಲೂ ನೆರವು ನೀಡಿ ಇದು ಯಶಸ್ವಿಯಾಗುವಂತೆ ಮಾಡುವರೆಂದು ನಂಬುತ್ತೇವೆ.

ನೋಟೀಸು

No. H 3 P R 49/45-46

ಮೈಸೂರು ಸಿಟಿ ಮುನಿಸಿಪಲ್ ಸರಹದ್ದಿನೊಳಗೆ ೧೯೪೬-೪೭ ನೇ ಸಾಲಿನಲ್ಲಿ ನಡೆಸುವ ಈ ಮುನಿಸಿಪಾಲಿಟಿಯ ಆರೋಗ್ಯ ಶಾಖೆಯ ಅಧಿಕಾರಕ್ಕೆ ಒಳಪಟ್ಟ ಎಲ್ಲಾ ವಿಧವಾದ ಕಸಬುಗಳಿಗೆ ಅಗತ್ಯವಾದ ಲೈಸನ್ಸನ್ನು ಸಕಾಲದಲ್ಲಿ ಪಡೆದು ಅನಂತರ ಆಯಾಯ ಕಸಬುಗಳನ್ನು ಜಾರಿಯಲ್ಲಿ ತರತಕ್ಕದ್ದು. ಹಾಗೆ ಲೈಸನ್ಸು ಅಪೇಕ್ಷಿಸುವ ಕಸಬುದಾರರು ತಮ್ಮ ಹೆಸರು, ವಿಳಾಸ, ಕಸುಬಿನ ವಿವರ, ನಡೆಸುವ ಸ್ಥಳ ಮುಂತಾದ ತಪಶೀಲುಗಳೊಡನೆ ಆರೋಗ್ಯ ಶಾಖೆಯ ಅಧಿಕಾರಿಗಳಿಗೆ ಅರ್ಜಿ ಸಲ್ಲಿಸಿ ವಿಧಾಯಕವಾದ ಫೀಜು ಪಾವತಿಯಿಂದ ಲೈಸನ್ಸು ಪಡೆಯತಕ್ಕದ್ದು. ಹಾಗೆ ಲೈಸನ್ಸು ಪಡೆಯದೆ ಕಸಬುಗಳನ್ನು ನಡೆಸುವವರ ಮೇಲೆ ಕಾನೂನು ಪ್ರಕಾರ ಕ್ರಮ ನಡೆಸಲಾಗುವುದು.

(ಸಹಿ)

ಆರ್. ರಾಮಚಂದ್ರರಾವ್ ಪೊಂಗೂರೆ

ಪ್ರೆಸಿಡೆಂಟ್,

ಸಿಟಿ ಮ್ಯುನಿಸಿಪಾಲಿಟಿ,

ತಾ॥ ೨೫-೬-೧೯೪೬

Edited, printed and published by A. R. Nagarajan at the Sadhvi Press Dewan Ranga Charlu Road, Mysore.

ಊಟವಿಲ್ಲ

ಸ್ವಂ. ವ.] ಚಾಮರಾಜನಗರ ೨೮

ಹದಿನೈದು ಸಾವಿರ ಜನಸಂಖ್ಯೆ ಇರುವ ಇಲ್ಲಿಗೆ ಒಂದೇ ಊಟದ ಹೋಟೆಲು. ದಿನವೂ ವಿವಿಧವಾದ ಕೆಲಸಕಾರ್ಯಗಳಿಗಾಗಿ ಬಂದು ಹೋಗುವ ಜನ ಹೆಚ್ಚು. ಇವರೆಲ್ಲರೂ ಹೋಟೇಲಿನಲ್ಲಿಯೇ ಊಟ ಮಾಡಬೇಕು. ಆಹಾರ ಧಾನ್ಯದ ಸರಬರಾಜಿಲ್ಲದೆ ಹೋಟೇಲಿನಲ್ಲಿ ಹಂಗಾಮಿಯಾಗಿ ಬರುವ ಗಿರಾಕಿಗಳಿಗೆ ಊಟ ಇಲ್ಲವೆಂದು ಹೇಳುತ್ತಿರುತ್ತಾರೆ. ಇದರಿಂದ ಪರಸ್ಥಳದವರಿಗಾಗುತ್ತಿರುವ ತೊಂದರೆ ಅಗಾಧ.

ಸರಬರಾಜು ಸರಿಯಾಗಿಲ್ಲ

ಡಿಪೋಗಳಿಗೆ ಆಹಾರ ಧಾನ್ಯ ಸರಬರಾಜು ಸರಿಯಾಗಿಲ್ಲ. ತಿಂಗಳು ಮುಗಿಯುತ್ತ ಬಂದರೂ ಅನೇಕರಿಗೆ ಈ ತಿಂಗಳ ರೇಷನ್ ಸಿಕ್ಕಿಲ್ಲವೆಂದೂ ಅಧಿಕಾರಿಗಳು ಇದ್ದಷ್ಟರಲ್ಲಿ, ಕೊಟ್ಟಷ್ಟರಲ್ಲಿ ಮಾಡಿಕೊಳ್ಳಬೇಕೆಂದು ಡಿಪೋಗಳವರಿಗೆ ಹೇಳುತ್ತಿದ್ದಾರೆಂದೂ ತಿಳಿಯಬಂದಿದೆ. ರೇಷನ್ ಜಾರಿ ಮಾಡಿಯೂ ಈ ಅವ್ಯವಸ್ಥೆ ತಪ್ಪಿಲ್ಲ.

ಪುಸ್ತಕಗಳು ದೊರೆಯುತ್ತಿಲ್ಲ

ಶಾಲೆಗಳು ಶುರುವಾಗಿ ತಿಂಗಳಾಗುತ್ತ ಬಂದಿದೆ. ಯಾವ ಸ್ಕೂಲು ಪುಸ್ತಕಗಳೂ ಸರಿಯಾಗಿ ದೊರೆಯುತ್ತಿಲ್ಲ. ಅನೇಕ ವಿದ್ಯಾರ್ಥಿಗಳಿಗೆ ತೊಂದರೆಯಾಗಿದೆ.

LATEST NEWS

ಸ್ವಂ. ವ. ಪ್ರೆಸ್] ಬೆಂಗಳೂರು ೧

ಶ್ರೀ ಎಸ್. ನಾರಾಯಣರಾಯರು ಟೆಕ್ಸ್‌ಟೈಲ್ ಕಮೀಷನರ್, ಶ್ರೀ ಸುಂದರರಾಯರು ಪೊಲೀಸ್ ಐ. ಜಿ. ಯಾಗಿ ಅರ್ಥ ಮಾಡುತ್ತಿದ್ದು ಶ್ರೀ ಕೆ. ಶ್ರೀನಿವಾಸ ಅಯ್ಯಂಗಾರ್ ಆಹಾರ ಸಪ್ಲೈ ಡೈರೆಕ್ಟರ್, ಶ್ರೀ ಎಂ. ಪುಟ್ಟರಂಗಸ್ವಾಮಿ ಅಡೀಷನಲ್ ಆಹಾರ ಡೈರೆಕ್ಟರ್ ಈ ರೀತಿ ಆಜ್ಞೆ ಆಗಿದೆ.

○ ○ ○ ○

ಲಂಡನ್ನಿನಲ್ಲಿ ಮೈಸೂರು ಟ್ರೇಡ್ ಕಮೀಷನರಾಗಿ ಪಾಶ್ಚಿಮಾತ್ಯರನ್ನು ನೇಮಿಸಿರುವುದನ್ನು ಖಂಡಿಸಲು ಶ್ರೀ ಟಿ. ಸಿ. ಯಾಜ್ಞನವರು ತಂದಿದ್ದ ಕತ್ತರಿ ಪ್ರಯೋಗವು ೩೫-೩೩ ಓಟುಗಳಿಂದ ನಿರಾಕರಿಸಲ್ಪಟ್ಟಿತು. ಸಾಮಾನ್ಯವಾಗಿ ಖಾಸಗಿ ಸದಸ್ಯರೆಲ್ಲರೂ ಸಹಕರಿಸಿದರು.

—

○ ಕೃಷ್ಣರಾಜ ಮೊಹಲ್ಲಾ ಪಾಲಬಳ್ಳಿ ಸೀತಾರಾಮರಾವ್ ರೋಡ್ ಪಕ್ಕರಾಯಪ್ಪನವರ ಗರಡಿ ಪಕ್ಕದಲ್ಲಿರುವ ಕೊಲ್ಲಾಪುರದಮ್ಮನವರ ದೇವಸ್ಥಾನದಲ್ಲಿ ಈ ರಾತ್ರಿ ೯-೩೦ಕ್ಕೆ ಶ್ರೀ॥ ಎಚ್. ಎಂ. ಶಿವಲಿಂಗಸ್ವಾಮಿಯವರಿಂದ ಗಿರಿಜಾ ಕಲ್ಯಾಣವೆಂಬ ಕೀರ್ತನೆ ನಡೆಯುತ್ತದೆ

ಮೈಸೂರು ಸಿಟಿ ರೇಷನಿಂಗ್ ಆಫೀಸಿನಿಂದಾ—

ತಾ॥ ೨೬—೬—೪೬

ನೋಟಿಫಿಕೇಷನ್

ನಂಬರು- R4--898-45-46

ಇದರಿಂದ ಮೈಸೂರು ನಗರದ ಸಮಸ್ತ ಜನಗಳಿಗೂ ತಿಳಿಯಪಡಿಸುವುದೇನೆಂದರೆ:-

ಜುಲೈ ಒಂದನೇ ತಾರೀಖು ಆರಭ್ಯ ಎಲೆಕ್ಟ್ರಿಕ್ ದೀಪವಿಲ್ಲದಿರುವ ಮನೆಯ ರೇಷನ್ ಕಾರ್ಡು ಹೋಲ್ಡರುಗಳಿಗೆ ಮಾತ್ರ ಸೀಮೆ ಎಣ್ಣೆಯನ್ನು ಈ ಕೆಳಗೆ ಕಂಡ ಪ್ರಮಾಣದಲ್ಲಿ ಕೊಡಲಾಗುವುದು—

1. ಹಾಲಿ 1½ ಸೀಸೆ ಎಣ್ಣೆ ಪಡೆಯುತ್ತಿದ್ದವರಿಗೆ 2 ಸೀಸೆಯನ್ನು ಕೊಡಲಾಗುವುದು.

2. ಹಾಲಿ 2 ಸೀಸೆ ಪಡೆಯುತ್ತಿದ್ದವರಿಗೆ 2½ ಸೀಸೆಯನ್ನು ಕೊಡಲಾಗುವುದು.

ರೇಷನ್ ಕಾರ್ಡು ಹೋಲ್ಡರುಗಳು ತಮ್ಮ ರೇಷನ್ ಕಾರ್ಡುಗಳನ್ನು ಸಂಬಂಧಪಟ್ಟ ಅಸಿಸ್ಟೆಂಟು ರೇಷನಿಂಗ್ ಆಫೀಸಿನಲ್ಲಿ ಹಾಜರ್ಮಾಡಿದರೆ ಮೇಲ್ಕಂಡ ಬದಲಾವಣೆಯನ್ನು ಮಾಡಲಾಗುವುದು.

(ಸಹಿ) ಅಬ್ದುಲ್ ರಜಾಕ್,

27—6—46 ರೇಷನಿಂಗ್ ಆಫೀಸರು, ಮೈಸೂರು ಸಿಟಿ

UNIVERSITY OF MYSORE

No. Ex. 2-Mis 322-45-46. Office of the University of Mysore; Dated 23rd June 1946

NOTIFICATION

The last date for receipt of application forms for admission to the University Examinations of September 1946 in respect of B. A., B. Sc., B. A. Honours and B. Sc. Honours Preliminary by the respective Colleges is 4th July 1946. By order, D. S. GORDON, Registrar.

Office of the Special Officer,
Silk Filature Expansion Scheme
Bangalore, Dated 26th June 1946

NOTIFICATION

It is hereby notified for the information of the public and all concerned that the offices of the Silk Filature Expansion Scheme, Cocoon & Silk Controller, located in "Jaya Vilas" building, Vanivilas Road, Bangalore are shifted to the up-stairs of the Bangalore City Co-operative Bank Ltd., Hardinge Road, Bangalore City from 1st of July 1946

(Sd) K. Shamshuddin Khan
Special Officer.

ರಾಜ್ ಕಮಲ್ ಟಾಕೀಸ್, ಮೈಸೂರು

(ಭವ್ಯ ಕಲಾ ಚಿತ್ರ ಮಂದಿರ)

ಅಮೋಘವಾದ ಎರಡನೇ ವಾರ

26—6—46 ನೇ ಬುಧವಾರದಿಂದ

ಸ್ವರ್ಣ ಲತಾ ಅಜೂರಿ } ರತನ್ { ವಾಸ್ತಿ ಕರಣ್ ದಿವಾನ್

ನೀವು ಇದುವರೆಗೂ ನೋಡದಿದ್ದರೆ ಇಂದೇ ಬಂದು ನೋಡಿ!

ಪ್ರತಿ ದಿನ ಮೂರು ಆಟಗಳು

ವಿಜಯಾ ಏಜನ್ಸೀಸ್, ಮೈಸೂರು.

ಫೋನ್ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಮಂಗಳವಾರ ೨—೭—೪೭ [ಸಂಚಿಕೆ ೭೪೯

– ಪೆಥಿಕ್ ಲಾರೆನ್ಸರು – ರಾಜಿನಾಮೆ ಕೊಡುವರೆ

ರಕ್ತದ ಕೋಡಿ ಹರಿಸುವುದಾಗಿ ಲೀಗಿನವರ ಬೆದರಿಕೆ

ಮೈಸೂರು... ಶ್ರೀ ಸಿಯೋಗದವರೂ ಕೊಟ್ಟ ಮಾತಿಗೆ ತಪ್ಪಿ ನಡೆದಿದ್ದಾರೆಂದು ವಿ ಜಿನ್ನರವರು ಹೇಳಿರುವುದನ್ನು ಸಮರ್ಥಿಸುತ್ತ, ಲೀಗ್ ಕಾರ್ಯದರ್ಶಿ ಮಿ॥ ಲಿಯಾಕತ್ ಅಲಿಖಾನರು ಈರೀತಿ ಹೇಳಿಕೆ ಹೊರಡಿಸಿದ್ದಾರೆ – " ಗೌರವಯುತವಾದ ಒಪ್ಪಂದ ನಮಗೆ ಬೇಕು. ಯುದ್ಧವಾಗುವುದಾದರೆ ಅದಕ್ಕೂ ಸಿದ್ಧ. ಸಾಧು ಕುರಿಗಳಂತೆ ಮುಸಲ್ಮಾನರು ಕಟುಕರ ಅಂಗಡಿಗೆ ಹೋಗುವುದಿಲ್ಲ. ರಕ್ತದ ಕೋಡಿ ಹರಿಸಿ ಬ್ರಿಟಿಷ್ ಸರ್ಕಾರಕ್ಕೆ ತಿಳುವಳಿಕೆ ಉಂಟುಮಾಡಿಕೊಡಬೇಕಾಗಿ ಬಂದಲ್ಲಿ ಮುಸಲ್ಮಾನರು ಅದಕ್ಕೂ ಸಿದ್ಧರಿದ್ದಾರೆ" ಎಂಬ ಬೆದರಿಕೆ ಹಾಕಿದ್ದಾರೆ.

ತಿರುವಾಂಕೂರಿನಲ್ಲಿ ಪ್ರತಿಬಂಧಕಾಜ್ಞೆಗಳ ರದ್ದು

ತಿರುವಾಂಕೂರು ಸಂಸ್ಥಾನದಲ್ಲಿ ಕಾಂಗ್ರೆಸ್, ಕಮ್ಯೂನಿಸ್ಟ್ ಮತ್ತು ಇತರ ರಾಜಕೀಯ ಸಂಗಡಗಳ ಮೇಲೆ ಹಾಕಲಾಗಿದ್ದ ಪ್ರತಿಬಂಧಕಾಜ್ಞೆಗಳನ್ನೆಲ್ಲಾ ಹಿಂದಕ್ಕೆ ತೆಗೆದುಕೊಂಡಿರುವುದಾಗಿ ಸರ್ಕಾರದ ಪ್ರಕಟಣೆಯಾಗಿದೆ.

ಡಾ॥ ಷೇರಿಯರ್ ಬಿಡುಗಡೆ

ಇಂಡೊನೇಷಿಯಾ ಮುಖ್ಯ ಮಂತ್ರಿ ಡಾ॥ ಷೇರಿಯರ್‌ರವರೂ, ಅರ್ಥಿಕ ಸಚಿವರೂ, ಒಬ್ಬ ಸೇನಾ ನಾಯಕರೂ, ಕಳೆದ ... ಅಪಹರಿಸಲ್ಪಟ್ಟಿದ್ದವರು ಈಗ ... ಬಿಡುಗಡೆ ಆಗಿರುವುದಾಗಿ ಸುದ್ದಿ ಬಂದಿದೆ.

ವಿದ್ಯಾರ್ಥಿ ಕಾಂಗ್ರೆಸ್

ಮೈಸೂರು ವಿದ್ಯಾರ್ಥಿ ಕಾಂಗ್ರೆಸ್ಸಿಗೆ ಸದಸ್ಯರುಗಳನ್ನು ಸೇರಿಸಲು ಆರಂಭವಾಗಿದೆ. ಸದಸ್ಯರಾಗುವ ವಿದ್ಯಾರ್ಥಿಗಳೆಲ್ಲರೂ ... ಜುಲೈ ... ತಾ॥ ಒಳಗಾಗಿ ಸದಸ್ಯರಾಗಬೇಕಾಗಿ ಕೋರಲಾಗಿದೆ. ಸದಸ್ಯತನದ ... ತಿಳಿಸಿ, ಸದಸ್ಯರನ್ನು ಕೂಡಿಸಲಿಚ್ಛಿಸುವ ಸ್ವಯಂ ಸೇವಕರೆಲ್ಲರೂ ಮಿ॥ ಕಾಂ॥ ಕಾರ್ಯಾಲಯದಲ್ಲಿ ಸಂಜೆ ೬ ರಿಂದ ೭ ರವರೆಗೆ ಬಂದು ಸಂಬಂಧಪಟ್ಟ ಪುಸ್ತಕಗಳನ್ನು ಪಡೆಯಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ.

ಉಪಾಧ್ಯಕ್ಷ ಚುನಾವಣೆ

ಸ್ವಂ ಸು] ... ರಾಜನಗರ ...

ಇಲ್ಲಿನ ಪೌರಸಭಾ ಉಪಾಧ್ಯಕ್ಷ ಚುನಾವಣೆ ಕಳೆದ ೨೯ ನೇ ತಾ॥ ನಡೆಯಿತು. ... ಪಿ ... ರವರು ಚುನಾಯಿತರಾದರು.

ಹೈಸ್ಕೂಲು ಜೂನಿಯರ್ ಕಾರ್ಯದರ್ಶಿ ಸ್ಥಾನಕ್ಕೆ ಶ್ರೀ ಎಸ್. ಸುಬ್ಬಯ್ಯನವರು ... ಆಯ್ಕೆಯಾದರು.

... ಮಗ್ಗದವರು ತಯಾರು ಮಾಡಿದ ... ಗಳನ್ನು ಅವರು ... ಕೇಳಿದ ... ಅಂಗಡಿಗಳಿಗೇ ಕೊಡಬೇಕೆಂದು ... ವರ್ತಕರ ಸಂಘದವರೂ ... ಗಳೂ ತೀರ್ಮಾನ ಮಾಡಿದ ... ತಿಳಿದುಬಂದಿದೆ. ... ಮಾಡಿದ ... ವನ್ನು ... ಕ್ಕೆ ತಕ್ಕ ಪ್ರತಿಫಲ ... ದೆ ತಮ್ಮ ... ಗಳಿಗೇ ಹಕ್ಕು ... ದೆಂದೂ ... ಮಾಡಿದ ... ಬೇಕೆಂದೂ ... ಮಗ್ಗದವರು ಕೇಳುತ್ತಿದ್ದಾರೆ.

ಅಹಮದಾಬಾದಿನಲ್ಲಿ ಪೋಲೀಸರಿಂದ ಗೋಲಿಬಾರು

ಅಹಮದಾಬಾದ್ ನಗರದ ಕಲ್ಪುರ ಕ್ಷೇತ್ರದಲ್ಲಿ ರಾತ್ರಿ ಮೆರವಣಿಗೆ ಸಮಯದಲ್ಲಿ ಜನರು ಪೋಲೀಸರ ಮೇಲೆ ಕಲ್ಲೆಸೆದರೆಂಬ ಕಾರಣದಮೇಲೆ ಪೋಲೀಸರು ಗುಂಡು ಹಾರಿಸಿದರೆಂದು ವರದಿಯಾಗಿದೆ. ಸಾವು ನೋವುಗಳ ವಿವರ ತಿಳಿದುಬಂದಿಲ್ಲ.

ಪುರಸಭೆಗೆ ಪ್ರತ್ಯೇಕ ಬಾವುಟ

ಕಲ್ಕತ್ತ ಪುರಸಭೆ ಇನ್ನು ಮುಂದೆ ಯೂನಿಯನ್ ಜಾಕ್ ಬಾವುಟ ಹಾರಿಸುವುದಿಲ್ಲ. ಕಾಂಗ್ರೆಸ್ ಧ್ವಜದ ಮಾದರಿಯ ತನ್ನದೇ ಒಂದು ಬಾವುಟವನ್ನು ಇನ್ನು ಮೇಲೆ ಹಾರಿಸಲಾಗುವುದು. ಅಲ್ಲದೆ ಸಾರ್ವಜನಿಕ ಚಿನ್ನಪತ್ರಗಳನ್ನು ಕೊಡುವುದನ್ನು ... ನಿಲ್ಲಿಸುವುದಾಗಿ ತಿಳಿದುಬಂದಿದೆ.

ದ॥ ಆಫ್ರಿಕದ ಸತ್ಯಾಗ್ರಹ

ಸತ್ಯಾಗ್ರಹವು ... ದಿನದಿನಕ್ಕೆ ಪ್ರಬಲವಾಗುತ್ತಿದೆ. ಮೊನ್ನೆ ದಿನ ... ಮಂದಿಯ ದಸ್ತಗಿರಿಯಾಗಿದೆ. ಈ ವೈಕಿ ದ॥ ಆಫ್ರಿಕದ ಭಾರತೀಯರಲ್ಲಿ ಪ್ರಮುಖರಾದ ಶ್ರೀ ... ಗುಪ್ತಾಂ ಜಿ ... ಇದ್ದಾರೆ.

ಮಕ್ಕಳನ್ನು ಕೊಂದು ಆತ್ಮಹತ್ಯ ಮಾಡಿಕೊಂಡವರು

ಪ್ರಪಂಚದಲ್ಲಿ ತಮ್ಮ ಬಾಳನ್ನು ಸುಖವಾಗಿ ಸಾಗಿಸಲು ಅಸಮರ್ಥರಾಗಿ ಲಾಹೋರಿನ ದಂಪತಿಗಳಿಬ್ಬರು ತಮ್ಮ ಮಕ್ಕಳನ್ನು ವಿಷಹಾಕಿ ಕೊಂದು, ತಾವೂ ವಿಷ ಕುಡಿದು ಪ್ರಾಣಬಿಟ್ಟ ಹೃದಯ ವಿದ್ರಾವಕ ವಾರ್ತೆ ಬಂದಿದೆ. ... ಯುವಕನಾದ ಶ್ರೀ ಮುನಿಲಾಲ್ ಎಂಬಾತ ... ಸ್ಟೇಷನ್ ... ನೌಕರಿ ಹೊಂದಿದ್ದ ... ಅವನಿಗೆ ... ಮಕ್ಕಳಲ್ಲಿ ... ಅವನ ಇಬ್ಬರು ಮಕ್ಕಳು ... ಬೆಳಗಿನ ... ಮಕ್ಕಳು ಮತ್ತು ಆ ದಂಪತಿಗಳು ... ಪ್ರಾಣಬಿಟ್ಟರು. ... ವಿವರವನ್ನು ಶ್ರೀ ಮುನಿಲಾಲ್ ... ಕಾಗದದಲ್ಲಿ ಬರೆದಿಟ್ಟಿದ್ದನೆಂದು ಗೊತ್ತಾಗಿದೆ.

ಮೇಲ್ ಪತ್ರಿಕೆಯಮೇಲೆ ಆಕ್ಷೇಪಣೆ

ಸ್ವಂ ಸು ವರದಿ] ಬೆಂಗಳೂರು ೩

ಕಳೆದ ೨೯ ನೇ ತಾರೀಖಿನ ಮದರಾಸ್ ಮೇಲ್ ಪತ್ರಿಕೆಯಲ್ಲಿ ಮೈಸೂರು ಶಾಸನಸಭೆಯ ವರದಿಯನ್ನು ಪ್ರಕಟಿಸುವಾಗ ಹಾಕಿರುವ ಶಿರೋನಾಮೆಗಳು ತಪ್ಪು ಅಭಿಪ್ರಾಯ ಕೊಡುವಂತಿವೆಯೆಂದು ಈ ಬಗ್ಗೆ ಪತ್ರಿಕಾಕರ್ತರಿಗೆ ಸರಿಯಾದ ತಿಳುವಳಿಕೆ ಕೊಟ್ಟು ಇದನ್ನು ಸರಿಪಡಿಸಬೇಕೆಂದು ಶ್ರೀ ಕೆ ಚಂಗಲ್‌ರಾಯರೆಡ್ಡಿಯವರು ಇಂದಿನ ಶಾಸನಸಭೆಯಲ್ಲಿ ತಿಳಿಸಿದರು. ವರದಿಯು ಸರಿಯಾಗಿದೆಯೆಂದೂ ಶಿರೋನಾಮೆಗೆ ಸುದ್ದಿಗಾರರು ಉತ್ತರವಾದಿಗಳಲ್ಲವೆಂದೂ ರೆವಿನ್ಯೂ ಮಂತ್ರಿಗಳಾದ ಶ್ರೀ ... ರೆಡ್ಡಿಯವರು ತಿಳಿಸಿದರು. ವರದಿಗೂ, ಶಿರೋನಾಮೆಗೂ ಸಮಂಜಸವಿಲ್ಲದಿರುವುದರಿಂದ ಸಂಪಾದಕರಿಗೆ ತಿಳುವಳಿಕೆಕೊಟ್ಟು ಅದನ್ನು ಸರಿಪಡಿಸುವಂತೆ ಹೇಳಲಾಗುವುದೆಂದು ಅಧ್ಯಕ್ಷರು ತಿಳಿಸಿದರು.

ಂ ಂ ಂ ಂ

ವಿಶ್ವವಿದ್ಯಾನಿಲಯದ ಸೆನೆಟ್ ಸಭೆಯಲ್ಲಿ ಖಾಲಿಯಾಗಿದ್ದ ಶ್ರೀ ಕೆ ಚಂಗಲ್‌ರಾಯರೆಡ್ಡಿಯವರ ಸ್ಥಾನದಲ್ಲಿ ಶ್ರೀ ... ಅವರು ... ಆದರು.

ಸಂಧಾನ ವಿಫಲವಾದದ್ದರಿಂದ ಪೆಥಿಕ್‌ಲಾರೆನ್ಸರ ರಾಜಿನಾಮೆ

ಬಾರತಕ್ಕೆ ಬಂದು ... ನಿಯೋಗ ವಿಫಲವಾದದ್ದರಿಂದ ನಿರಾಶರಾಗಿ ಭಾರತದ ಕಾರ್ಯದರ್ಶಿ ಲಾರ್ಡ್ ಪೆಥಿಕ್‌ಲಾರೆನ್ಸರು ತಮ್ಮ ಸ್ಥಾನಕ್ಕೆ ರಾಜೀನಾಮೆ ಸಲ್ಲಿಸಬಹುದೆಂದು ದೆಹಲಿಯಿಂದ ಸುದ್ದಿ ಬಂದಿದೆ. ಲಾರೆನ್ಸರು ದೆಹಲಿ ಬಿಡುವ ಮುನ್ನ ... ಭಾರತೀಯ ... ಈ ಅಭಿಪ್ರಾಯ ವ್ಯಕ್ತಪಡಿಸಿದರೆಂದು ಹೇಳಲಾಗಿದೆ. ಕಾಂಗ್ರೆಸ್ ಮತ್ತು ಲೀಗುಗಳು ... ಸಲಹಾ ಸಭೆಗೆ ಒಪ್ಪಿದ್ದರೂ, ತಮ್ಮ ತಮ್ಮದೇ ಬೇರೆ ಬೇರೆ ಅರ್ಥಗಳನ್ನು ... ತಾತ್ಕಾಲಿಕ ಸರ್ಕಾರ ರಚನೆ ... ಭಾರತದ ... ಅಧಿಕಾರವನ್ನು ಲಂಡನ್ ... ಹೇಳಲಾಗಿದೆ.

ಮೈಸೂರ್ ಸ್ವಾಗತ

... ಗುಂಡ್ಲುಪೇಟೆ ... ಮೈಸೂರ್ ... ಗಿದೆ ... ಗಳು

ಹೆಚ್ಚು ಆಹಾರ ಬೆಳೆಯುವ ಸರ್ಕಾರ

ಶಾಸನ ಸಭೆಯಲ್ಲಿ ಪ್ರಶ್ನೋತ್ತರ

ಸ್ವಂ.ಸು ವರದಿ] ಬೆಂಗಳೂರು

ಹೊಸದಾಗಿ ಮೈಸೂರು ಸರ್ಕಾರದವರು ಏರ್ಪಡಿಸಿರುವ ... ಗಾಗಿ ಬೆಂಗಳೂರಿನಲ್ಲಿ ಶ್ರೀಗಳಾದ ... ಸಿಲ್ವಾ, ಎ. ರಾಮಾನುಜಂ, ... ಚಕ್ರವರ್ತಿ ಮತ್ತು ಮೈಸೂರಿನಲ್ಲಿ ಶ್ರೀ ಎ ಸಿ. ಕುಮಾರ್‌ರವರುಗಳನ್ನು ... ಗಳಾಗಿ ನೇಮಿಸಿರುವ ಬಗ್ಗೆ ಇಂದಿನ ಶಾಸನಸಭೆಯಲ್ಲಿ ... ಶ್ರೀ ಬಿ. ವೀರಬಸಪ್ಪನವರು ... ಸ್ಥಾನಗಳ ಬಗ್ಗೆ ಜಾಹಿರಾತನ್ನು ಪ್ರಕಟಿಸಿದಾಗ ... ಬಂದವೆಂದೂ ವಿಷಯದ ... ದರಿಂದ ... ಜನರನ್ನು ಆರಿಸಲಾಯಿತೆಂದೂ ... ರವರು ಉತ್ತರವಿತ್ತರು.

ಹೆಚ್ಚು ಆಹಾರ ಬೆಳೆಯುವ ಯೋಜನೆಗೆ ಸಂಬಂಧಪಟ್ಟಂತೆ ಶ್ರೀ ... ಗೌಡರು ಕೇಳಿದ ಪ್ರಶ್ನೆಗಳಿಗೆ ಶ್ರೀ ಪಲ್ಲರೆಡ್ಡಿಯವರು ಉತ್ತರವಿತ್ತು ... ಆ ಯೋಜನೆಯನ್ನು ಅಂಗೀಕರಿಸಲಾಯಿತು. ಅದರಂತೆ ... ಎಕರೆ ... ಪ್ರದೇಶವನ್ನು ರೈತರಿಗೆ ... ಕೊಡಲಾಗಿದೆ ಮತ್ತು ಅವರಿಗೆ ... ಸಾಲವಾಗಿ ಹಣವನ್ನು ಕೊಡಲಾಗಿದೆ. ಈ ವೈಕಿ ... ಎಕರೆ ... ವ್ಯವಸಾಯ ನಡೆದಿದೆ. ಆ ಯೋಜನೆಯಂತೆ ಕೊಟ್ಟಿರುವ ಜಮೀನಿನಲ್ಲಿ ... ಅನುಕೂಲ ಮಾಡಲು ... ಪ್ರಯತ್ನಗಳನ್ನೆಲ್ಲಾ ಸರ್ಕಾರವು ಮಾಡುವುದೆಂದು ತಿಳಿಸಿದರು.

ವಾಣಿವಿಲಾಸ ಜಲಾಶಯದಿಂದ ನವೆಂಬರ್ ಮತ್ತು ಡಿಸೆಂಬರ್ ತಿಂಗಳುಗಳಲ್ಲಿ ನೀರು ಬರಲಿರುವುದಾಗಿ ಹೇಳಿ ... ಇಲಾಖೆಯವರು ನೀರು ಸರಬರಾಯಿ ಮಾಡದಿದ್ದ ಬಗ್ಗೆ ಶ್ರೀ ಬಿ ವೀರಬಸಪ್ಪನವರು ಕೇಳಿದ ಪ್ರಶ್ನೆಗೆ ಉತ್ತರವಾಗಿ ... ಆ ರೀತಿ ಹೇಳಿದ್ದರೆಂದೂ ಆದರೆ ನೀರು ಸರಬರಾಜು ಸರಿಯಾಗಿ ಆಗಲಿಲ್ಲವಾಗಿ ಹಾಗೆ ಮಾಡಲಿಲ್ಲವೆಂದೂ ಆ ಪ್ರದೇಶದಲ್ಲಿ ... ಎಕರೆಗಳಲ್ಲಿ ಭತ್ತದ ಫಸಲು ... ಸರ್ಕಾರದ ಗಮನಕ್ಕೆ ಬಂದಿಲ್ಲವೆಂದೂ ತಿಳಿಸಲಾಯಿತು.

ಪಬ್ಲಿಕ್ ... ಸಮಿತಿ ವರದಿಯನ್ನು ಸಭೆ ಮುಂದೆ ಶ್ರೀ ... ವರು ಮಂಡಿಸಿದರು. ಶ್ರೀಗಳಾದ ... ಶ್ರೀನಿವಾಸಯ್ಯಂಗಾರ್, ... ಗೌಡ ಮುಂತಾದವರು ಮಾತನಾಡಿ ವರದಿ ... ಕವಾಗಿಲ್ಲವೆಂದೂ ... ವೆಂದೂ ತಿಳಿಸಿದರು. ಚರ್ಚೆ ನಡೆಯುತ್ತಿದೆ.

ವಿದ್ಯಾರ್ಥಿಕಾರಿಗಳು

ಸ್ವಂ ಸು ವರದಿ] ಬೆಂಗಳೂರು ೩

ಡಾ॥ ಕೆ. ಎಲ್. ... ಯವರು ವಿದ್ಯಾಭ್ಯಾಸದ ... ಡೈರೆಕ್ಟರಾಗಿ ... ಅಸ್ವಸ್ಥ ... ಆಗಿ ... ಶ್ರೀ ... ಒಪ್ಪಿಕೊಂಡರು ... ಹೇಳಲಾಗಿದೆ.

... ಪಾಸ್ಪೋರ್ಟ್ ... ಗಳನ್ನು ... ಬೇಕಾಗಿರುವುದಾಗಿ ಗೊತ್ತಾಗಿದೆ

ಸಾಧ್ವಿ

ತಾ॥ ೨-೭-೪೬ ಮಂಗಳವಾರ

ಮೈಸೂರಿನಲ್ಲಿ ಎರಡು ರಾಷ್ಟ್ರಗಳಿವೆಯೇ ?

ಶಾಸನ ಸಭೆಯಲ್ಲಿ ಮುಸ್ಲಿಂ ಲೀಗಿನವರು ಈಸಾರಿ ಒಂದು ಹೊಸ ಭಾವನೆಯ ಬೀಜವನ್ನು ಬಿತ್ತಿದಂತಿದೆ. ಮೈಸೂರಿನಲ್ಲಿಯೂ ಮುಸಲ್ಮಾನರೇ ಒಂದು ಪ್ರತ್ಯೇಕ ರಾಷ್ಟ್ರವೆಂಬ ಅಭಿಪ್ರಾಯವನ್ನು ಬಹಿರಂಗವಾಗಿ ವ್ಯಕ್ತಪಡಿಸಿದರು. ಇದರಮೇಲೆ ಈಗಾಗಲೇ ಸ್ವಲ್ಪಮಟ್ಟಿಗೆ ಟೀಕೆಗಳು ಹೊರಟಿವೆ. ಆದರೂ ಈ ಅಂಶಕ್ಕೆ ಸಾಕಾದಷ್ಟು ಗಮನವು ಕೊಡಲ್ಪಟ್ಟಿರುವಂತೆ ಕಾಣುವುದಿಲ್ಲ. ವಿಶ್ವಕರ್ನಾಟಕ ಪತ್ರಿಕೆಯಲ್ಲಿ ಈ ಬಗ್ಗೆ ಟೀಕೆಗಳು ಬಂದವು. ಅದಕ್ಕಾಗಿ ಶಾಸನ ಸಭೆಯ ಮುಸ್ಲಿಂ ಸದಸ್ಯರು ಹಕ್ಕುಬಾಧ್ಯತೆಯ ಪ್ರಶ್ನೆಯನ್ನೆತ್ತಿದರು. ಅಧ್ಯಕ್ಷರು ಅದನ್ನು ತಳ್ಳಿಹಾಕಿದರು. ಆದರೆ ವಾದಗ್ರಸ್ತವಾದ ಅಂಶವು ಮಾತ್ರ ಇನ್ನೂ ಇದ್ದೇ ಇದೆ.

ಮೈಸೂರಿನಲ್ಲಿ ಎರಡುರಾಷ್ಟ್ರಗಳಿವೆಯೇ? ಎಂಬುದೇ ಈ ಪ್ರಶ್ನೆ. ಮಿ॥ ಜಿನ್ನಾರವರು ಪಾಕೀಸ್ಥಾನದ ಧ್ವಜವನ್ನು ಎತ್ತಿ ಹಿಡಿದಂದಿನಿಂದಲೂ ಈ ಅಭಿಪ್ರಾಯದ ಅಂಕುರಾರ್ಪಣೆಗೆ ಅವಕಾಶವಾಯಿತು. ಜಾತಿವಾರು ಪ್ರಾಂತ ನಿರ್ಮಾಣದ ಪ್ರಯತ್ನವು ಇಷ್ಟೊಂದು ಪ್ರಮಾದಕರವಾದ ಪ್ರಮಾಣವನ್ನು ತಾಳುವುದೆಂದು ಮೊದಲು ಕಂಡುಬರಲಿಲ್ಲ. ಮುಸ್ಲಿಮರೇ ಪ್ರತ್ಯೇಕ ರಾಷ್ಟ್ರವೆಂದು ಹೇಳುತ್ತಾ ಪಾಕೀಸ್ಥಾನದ ವಾದವನ್ನು ಮಿರಿಸುವ ಅಭಿಪ್ರಾಯಗಳನ್ನು ಮಿ॥ ಜಿನ್ನಾರವರು ಹೊರಗೆಡಹಲು ಆರಂಭಿಸಿದರು. ಮೇಲಾಗಿ ತಾವು ಭಾರತೀಯರೇ ಅಲ್ಲವೆಂದೂ ಸಹ ಹೇಳಿಕೊಳ್ಳುತ್ತಿರುವುದಾಗಿಯೂ ವರದಿಯಾಗಿದೆ. ಈ ವಿಷ ಬೀಜವು ಮಹಾ ಅನರ್ಥಕಾರಿಯಾದ ಪರಿಣಾಮವನ್ನುಂಟುಮಾಡಿ ರಾಷ್ಟ್ರೀಯ ಸಮಸ್ಯೆಗಳ ಪರಿಹಾರಕ್ಕೆ ಎಂತಹ ವಿಘಾತವನ್ನುಂಟು ಮಾಡಿದೆಯೆಂಬುದು ಎಲ್ಲರಿಗೂ ವೇದ್ಯವಾಗಿದೆ.

ಮೈಸೂರಿಗೂ ಇದರ ಗಾಳಿಯು ಈಗ ಬೀಸಿರುವಂತಿದೆ. ಇದನ್ನು ಮೊಳಕೆಯಲ್ಲಿಯೇ ಚಿವುಟಿ ಹಾಕದಿದ್ದರೆ ಈಗಾಗಲೇ ಸಂಭವಿಸಿರುವ ಅನರ್ಥಗಳು ಇನ್ನೂ ಪ್ರಮಾದವಾಗಿ ಬೆಳೆಯಲು ಅವಕಾಶವಾಗಬಹುದು. ಇದಕ್ಕೆ ಸಾರ್ವಜನಿಕರೂ ಮತ್ತು ದೇಶದ ನಾಯಕರುಗಳೂ ಸಕಾಲದಲ್ಲಿ ಗಮನ ಕೊಡುವುದು ಯುಕ್ತವಾಗಿದೆ.

ಪಾಕೀಸ್ಥಾನದ ವ್ಯಾಪನೆಯು ಸಂಸ್ಥಾನಗಳಿಗೆ ಅನ್ವಯಿಸುವುದಿಲ್ಲವೆಂಬ ಅಭಿಪ್ರಾಯವು ಮೊದಲು ಕೊಡಲ್ಪಟ್ಟಿತ್ತು. ಅಖಿಲ ಭಾರತ ಮುಸ್ಲಿಂ ಲೀಗಿನವರು ಸಂಸ್ಥಾನಗಳ ರಾಜಕೀಯದಲ್ಲಿ ಪ್ರವೇಶಿಸಲಾಗದೆಂದೂ ಸಹ ಮೊದಲು ಹೇಳಲಾಗುತ್ತಿತ್ತು. ಸಂಸ್ಥಾನಗಳಲ್ಲಿರುವ ಮುಸ್ಲಿಮರು ಬ್ರಿ॥ ಹಿಂದೂಸ್ಥಾನದ ಮುಸ್ಲಿಮರ ಪಾಕೀಸ್ಥಾನದ ಪ್ರಯತ್ನಕ್ಕೆ ನೆರವನ್ನು ನೀಡುವುದು ಮಾತ್ರ ಅವರ ಉದ್ದೇಶವೆಂದೂ ಹೇಳಲಾಗುತ್ತಿತ್ತು. ಆದರೆ ಕ್ರಮೇಣ ಮುಸ್ಲಿಂಲೀಗಿನ ಪ್ರಾಬಲ್ಯವು ಹೆಚ್ಚಿದಷ್ಟೂ ಅದಕ್ಕೆ ಬ್ರಿ॥ ಸರ್ಕಾರದವರಿಂದ ಇಲ್ಲದ ಸಲ್ಲದ ಸ್ಥಾನಮಾನಗಳು ದೊರೆತನಂತೆ ಅದು ಎಲ್ಲೂ ಪ್ರತ್ಯೇಕ

ಅಣುಬಾಂಬಿನ ಪರೀಕ್ಷೆ

೫೦ ಸಾವಿರ ಅಡಿಎತ್ತರ ಬೆಂಕಿಜ್ವಾಲೆ

ಅಣುಬಾಂಬಿನ ಪರೀಕ್ಷೆಯು ಭಾನುವಾರ ಬೆಳಗಿನ ಜಾವ ೯ ಗಂಟೆಗೆ ಜರುಗಿತು. ಮೊದಲೇ ತಿಳಿಸಿದ್ದಂತೆ ಈ ಪ್ರಯೋಗವು ಪೆಸಿಫಿಕ್ ಸಾಗರದ ಬಿಕಿನಿ ದ್ವೀಪದ ಬಳಿ ಅದಕ್ಕಾಗಿ ಸಿದ್ಧಗೊಳಿಸಿದ್ದ ೭೩ ಹಡಗುಗಳ ಮೇಲೆ ನಡೆಯಿತು. ಸೂಪರ್ ಫೋರ್ಟ್ರೆಸ್ ವಿಮಾನದಿಂದ ಬಾಂಬುಬಿದ್ದ ಎರಡು ನಿಮಿಷಗಳ ನಂತರ ಅದು ಸಿಡಿಯಿತು. ಅಟಂ ಬಾಂಬು ಬಿದ್ದಕೂಡಲೇ ಸೂರ್ಯನಿಗಿಂತ ಎಷ್ಟೋಪಾಲು ಹೆಚ್ಚು ಪ್ರಕಾಶಮಾನವಾದ ಕೆಂಪು ಮತ್ತು ನೀಲಿ ಬಣ್ಣಗಳ ಬೆಳಕು ಉಂಟಾಯಿತು. ಬಾಂಬು ಸಿಡಿದ ಕೂಡಲೇ ಭಾರಿ ಆಸ್ಫೋಟನೆಗಳಾಗಿ ೫೦ ಸಹಸ್ರ ಅಡಿಗಳಷ್ಟು ಎತ್ತರದವರೆಗೂ ಬೆಂಕಿ ಉರಿಗಳು ಎದ್ದವು. ಇದು ಅನೇಕ ಮೈಲು ದೂರಗಳವರೆಗೂ ಕಂಡುಬಂದಿತು. ಸಿಡಿತದಿಂದ ಭಾರಿ ಅಲೆಗಳಾಗಲೀ ಅಥವಾ ಪ್ರಕೃತಿ ಸಂಬಂಧವಾದ ವಿಶೇಷ ಘಟನೆಗಳಾಗಲೀ ಯಾವುವೂ ನಡೆಯಲಿಲ್ಲ. ಯಾರಿಗೂ ಏನೂ ಸಾವುನೋವು ಆಗಿರುವುದಾಗಿ ಇದುವರೆಗೆ ವರದಿಯಾಗಿಲ್ಲ.

ರಾಷ್ಟ್ರಗಳ ವಾದವನ್ನು ಒತ್ತಾಯಪಡಿಸಲು ಆರಂಭಿಸಿತು. ಸಂಸ್ಥಾನಗಳಲ್ಲಿಯೂ ಅದರ ಪ್ರತಿಕ್ರಿಯೆಯು ಈಗ ಆರಂಭವಾದಂತಿದೆ.

ರಾಷ್ಟ್ರವೆಂದರೆ ಏನು? ಎಂಬ ಸರಿಜ್ಞಾನವೇ ಇಲ್ಲದೆ ಇಂತಹ ಪೊಳ್ಳು ಕೂಗುಗಳು ಎದ್ದಿರುವಂತಿದೆ. ಮೈಸೂರು ಸಂಸ್ಥಾನವೇ ಒಂದು ರಾಷ್ಟ್ರವಾಗಿಲ್ಲದಿರುವಾಗ ಅದರಲ್ಲಿ ಮತ್ತೊಂದು ರಾಷ್ಟ್ರಕ್ಕೆ ಅವಕಾಶವೆಲ್ಲಿಯದು? ಪ್ರತ್ಯೇಕವಾದ ಜನಾಂಗ, ನಿರ್ದಿಷ್ಟವಾದಪ್ರದೇಶ ಮತ್ತು ವ್ಯವಸ್ಥಿತವಾದ ಒಂದುಸಾರ್ವಭೌಮ ಸರ್ಕಾರ-ಇವೇ ರಾಷ್ಟ್ರದ ಮುಖ್ಯ ಗುರುತುಗಳೆಂದು ರಾಜನೀತಿ ಶಾಸ್ತ್ರದಲ್ಲಿ ಉಕ್ತವಾಗಿದೆ. ಮೈಸೂರಿನಲ್ಲಿ ಮುಸಲ್ಮಾನರಿಗೆ ಈ ಬಗೆಯ ಪ್ರತ್ಯೇಕ ಅಸ್ತಿತ್ವವು ಯಾವ ವಿಧದಲ್ಲಿಯೂ ಇರುವುದಿಲ್ಲ. ಆದುದರಿಂದ ಅವರು ಇಲ್ಲಿ ಒಂದು ರಾಷ್ಟ್ರವೆಂದು ಹೇಳಿಕೊಳ್ಳಲು ಆಸ್ಪದವಿಲ್ಲ. ಹಿಂದೂಸ್ಥಾನದಲ್ಲಿ ಪಾಕೀಸ್ಥಾನವು ಸ್ಥಾಪಿತವಾದಮೇಲೂ ಅವರು ಒಂದು ಪ್ರತ್ಯೇಕ ರಾಷ್ಟ್ರವೆಂದು ಪರಿಗಣಿಸಲ್ಪಡುವರೋ ಇಲ್ಲವೋ ಸಂದೇಹವಾಗಿರುವಲ್ಲಿ ಮೈಸೂರಿನಲ್ಲಂತೂ ಅವರಿಗೆ ಪ್ರತ್ಯೇಕ ರಾಷ್ಟ್ರೀಯತೆಯು ಇಲ್ಲವೇ ಇಲ್ಲ. ಈ ಅಭಿಪ್ರಾಯವನ್ನು ನಿರ್ಮೂಲಗೊಳಿಸಲು ಅವರುಗಳೂ, ಮತ್ತು ಇತರರೂ ಎಷ್ಟುಬೇಗ ಪ್ರಯತ್ನಿಸಿದರೆ ಅಷ್ಟು ಒಳ್ಳೆಯದು.

ಮೆಡಿಕಲ್ ಪರೀಕ್ಷೆ ಫಲಿತಾಂಶ

ಕ್ಷಯ ರೋಗಕ್ಕೆ ಸಂಬಂಧಪಟ್ಟ ಡಿಪ್ಲೊಮಾ ಪರೀಕ್ಷೆಯಲ್ಲಿ ೨, ೩ ಮತ್ತು ೫ ನೇ ನಂ. ಗಳವರು ಉತ್ತೀರ್ಣರಾಗಿದ್ದಾರೆ ೧೯೪೬ ನೇ ಜೂನ್‌ನಲ್ಲಿ ನಡೆದ "ಪ್ರಿ ಮೆಡಿಕಲ್" ಪರೀಕ್ಷೆ ಫಲಿತಾಂಶ ಸಹ ಪ್ರಕಟವಾಗಿದೆ. ಮೊದಲನೆ ತರಗತಿ ಯಾರೂ ಇಲ್ಲ. ಎರಡನೇ ತರಗತಿ ೧, ೩; ಪಾಸ್-೫, ೬, ೭, ೯, ೧೦, ೧೧, ೧೨, ೧೩, ಮತ್ತು ೧೪, ೮ ನೇ ನಂ ಫಲಿತಾಂಶ ಪ್ರಕಟಿಸಿಲ್ಲ. ಎಂ. ಬಿ. ಬಿ. ಎಸ್ ಮೊದಲನೇ ಪರೀಕ್ಷೆ ಫಲಿತಾಂಶ-ಮೊದಲನೇ ಮತ್ತು ಎರಡನೇ ತರಗತಿಗಳಲ್ಲಿ ಯಾರೂ ತೇರ್ಗಡೆಯಾಗಿಲ್ಲ. ಪಾಸ್-೭, ೮, ೯, ೧೦, ೧೧, ೧೩, ೧೪, ೧೬, ೧೭, ೧೮, ೨೦, ಮತ್ತು ೨೧. ೫ ಮತ್ತು ೧೨ ನೇ ನಂ. ಫಲಿತಾಂಶ ಪ್ರಕಟವಾಗಿಲ್ಲ. ಎರಡನೇ ಪರೀಕ್ಷೆಯಲ್ಲಿ ಮೊದಲನೇ ಭಾಗದಲ್ಲಿ, ೨೨, ೨೩ ಮತ್ತು ೨೪ ಎರಡನೇ ತರಗತಿ ಎರಡನೇ ಭಾಗದಲ್ಲಿ ೨೬ (೨ ನೇ ತರಗತಿ) ೨೭, ೨೮, ೨೯, ೩೧ ಮತ್ತು ೩೨ ಪಾಸ್, ಮೂರನೇ ಭಾಗದಲ್ಲಿ ೩೪, ೩೫, ೩೬, ೩೭, ೩೮, ೩೯, ೪೦, ೪೧, ೪೩, ಪಾಸ್, ಅಖೈರು ಎಂ. ಬಿ. ಬಿ. ಎಸ್. ನಲ್ಲಿ ೪೫. ೪೬, ೪೭, ೪೮, ತೇರ್ಗಡೆಯಾಗಿದ್ದಾರೆ.

ಮೈಸೂರು ಕಾಂಗ್ರೆಸ್ ಅಧ್ಯಕ್ಷತೆ

ಶ್ರೀಮತಿ ಯಶೋಧರಾ ದಾಸಪ್ಪನವರ ಹೆಸರನ್ನು ಮೈ॥ ಕಾಂ॥ ಅಧ್ಯಕ್ಷ ಸ್ಥಾನಕ್ಕೆ ಶ್ರೀಗಳಾದ ಬಸಪ್ಪರು, ಕೆಂಚೇಗೌಡ, ರಾಮಲಿಂಗಪ್ಪ, ಕೃಷ್ಣರಾವ್, ಕಾಳೇಗೌಡ, ತಿಮ್ಮಯ್ಯ, ಶರಗಯ್ಯ, ಸಿದ್ದಯ್ಯ, ಸಿದ್ದೇಗೌಡ, ನಾಗೇಶರಾವ್, ಪುಟ್ಟೇಗೌಡ ಮತ್ತು ನಾಗೇನಹಳ್ಳಿಯ ಬೋರೇಗೌಡ, ಸಿದ್ದೇಗೌಡ, ಪುಟ್ಟಸ್ವಾಮಿಗೌಡ, ಜವರೇಗೌಡ ಇವರುಗಳು ಸೂಚಿಸಿದ್ದಾರೆ.

ಬೇಕಾಗಿದ್ದಾರೆ

S S L C. ಪರೀಕ್ಷೆ ಆಗಿರುವ ಮತ್ತು ಲೆಖ್ಖಗಳಲ್ಲಿ ಅನುಭವವಿರುವವರು ಅಕೌಂಟೆಂಟ್ ಕೆಲಸಕ್ಕೆ ಒಬ್ಬರು ಬೇಕಾಗಿದ್ದಾರೆ ಕೆಲಸಕ್ಕೆ ಸೇರತಕ್ಕವರು ಜಾಮೀನು (ಸೆಕ್ಯೂರಿಟಿ) ಕೊಡಲು ಮತ್ತು ತಿರುಗಾಟ ಕೆಲಸ ಮಾಡಲು ತಯಾರಾಗಿರಬೇಕು. ಉಮೇದುವಾರರು ತಮ್ಮ ಅರ್ಜಿಗಳನ್ನು ಯೋಗ್ಯತಾ ಪತ್ರಗಳೊಡನೆ ೧೦-೭-೪೬ ರ ಒಳಗಾಗಿ ಕಳುಹಿಸಬೇಕು.

(ಸಹಿ) ಪಿ. ಗೋಪಾಲಕೃಷ್ಣಶೆಟ್ಟಿ,
ಗೌ॥ ಕಾರ್ಯದರ್ಶಿ,
ಖದ್ದರ್ ಪರಸ್ಪರ ಸಹಾಯ ಸಂಘ,
೨-೭-೪೬. ಲಿಮಿಟೆಡ್, ಮೈಸೂರು.

"ತಮಾಷ್"

ಶ್ರೀ ಎಂ. ಎಸ್. ಮಾಧವರಾಯರು, ರಾಜಧಾನಿಯಲ್ಲಿ ಹೊರಡಿಸುತ್ತಿರುವ "ತಮಾಷ್" ವಾರ ಪತ್ರಿಕೆಯ ಐದನೇ ವಾರ್ಷಿಕ ವಿಶೇಷಾಂಕವು ನಮ್ಮ ಕೈ ಸೇರಿದೆ. ಇದರಲ್ಲಿ ಚಲನ ಚಿತ್ರಗಳಿಗೆ ಸಂಬಂಧಪಟ್ಟ ಅನೇಕ ಲೇಖನಗಳೂ ಮನೋಹರವಾದ ಕಥೆಗಳೂ, ವಿನೋದಗಳೂ, ಕವಿತೆಗಳೂ, ವರ್ಷ ಭವಿಷ್ಯ ಮುಂತಾದ ಲೇಖನಗಳೂ ಇವೆ. ಚಲನ ಚಿತ್ರ ತಾರೆಯರ ಭಾವಚಿತ್ರಗಳು ಕಂಗೊಳಿಸುತ್ತಿವೆ. ಬೆಲೆ ಹನ್ನೆರಡಾಣೆ ಮಾತ್ರ. ಸಂಪಾದಕರ ಉದ್ಯಮವು ದಿನೇ ದಿನೇ ಪ್ರವರ್ಧಮಾನವಾಗಲೆಂದು ಹಾರೈಸುತ್ತೇವೆ.

ಮೈಸೂರು ಸೀಮೆಯ ಸಿಲ್ಕ್ ಫಿಲೇಚರ್ ಎಕ್ಸ್‌ಪ್ಯಾನ್ಷನ್ ಸ್ಕೀಂ ಸ್ಪೆಷಲ್ ಆಫೀಸಿನಿಂದ:—

ಪ್ರಕಟನೆ

ಮೈಸೂರು ಸೀಮೆಯಲ್ಲಿ ರೇಷ್ಮೆ ಗೂಡು ಬೆಳೆಯುತಕ್ಕವರಿಗೂ ಮತ್ತು ರೇಷ್ಮೆ ನೂಲು ಬಿಚ್ಚುವವರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

1943 ನೇ ಇಸ್ವಿಯಲ್ಲಿ ಸಾದಾಂದ ರೇಷ್ಮೆ ಗೂಡು ಮತ್ತು ಕಚ್ಚಾ ರೇಷ್ಮೆ ಹತೋಟಿ ಆಜ್ಞೆಗಳ ಪ್ರಕಾರ ಸರ್ಕಾರಿ ರೇಷ್ಮೆ ಗೂಡು ಕೇಂದ್ರಗಳ ಮೂಲಕ ಮಾರಾಟ ಮಾಡಿದ (ಅಂದರೆ 1-10-43 ನೇ ತಾ॥ ನಿಂದ 8-8-45 ನೇ ತಾ॥ ವರೆವಿಗೆ) ರೇಷ್ಮೆ ಗೂಡಿನ ಬಾಬತು ಬರಬೇಕಾದ ಬೋನಸ್ಸು ಅನೇಕ ರೈತರಿಗೆ ಸರಿಯಾದ ದಖ್ಲೆ ಮತ್ತು ಅಡ್ರೆಸ್ಸುಗಳು ಇಲ್ಲದ ಸಬೂಬು ಬಟವಾಡೆಯಾಗದೆ ನಿಂತಿರುತ್ತೆ. ಬದಲ್ಲಾಗಿ ಸರ್ಕಾರಿ ರೇಷ್ಮೆ ಡಿಪೋಗಳಿಗೆ ಕಚ್ಚಾ ರೇಷ್ಮೆ ಸರಬರಾಯಿ ಮಾಡಿದ ಬಾಬ್ತು ಬೋನಸ್ ಚೆಕ್ಕುಗಳು ಸಹಾ ಪಾವತಿಯಾಗದೆ ನಿಂತಿರುತ್ತೆ.

ಆದಕಾರಣ ರೇಷ್ಮೆ ಗೂಡು ಬೆಳೆಯುವವರು (Rearers) ಮತ್ತು ರೇಷ್ಮೆ ನೂಲು ಬಿಚ್ಚುವವರು (Reelers) ತಮಗೆ ಬರಬೇಕಾದ ಬೋನಸ್ಸಿನ ಹಣ ಬಾಕಿಯಲ್ಲಿ ವಿವರಗಳೊಂದಿಗೆ ಬರಹ ಮೂಲಕವಾಗಿ 15-7-46 ನೇ ತಾರೀಖಿನ ಒಳಗಾಗಿ ಈ ಆಫೀಸಿಗೆ ತಲುಪುವಂತೆ ತಿಳಿಸತಕ್ಕದ್ದೆಂದು ಈ ಮೂಲಕ ಕೋರಲಾಗಿದೆ.

(ರುಜು)
ಕೆ. ಷಂಷುದ್ದೀನ್ ಖಾನ್
ಸ್ಪೆಷಲ್ ಆಫೀಸರು
19-6-46

ರಾಜ್ ಕಮಲ್ ಟಾಕೀಸ್, ಮೈಸೂರು

(ಭವ್ಯ ಕಲಾ ಪ್ರಾಕ್ಷತ್ರ ಮಂದಿರ)

ಅಮೋಘವಾದ ಮೂರನೇ ವಾರ

3—7—46 ನೇ ಬುಧವಾರದಿಂದ

ಸ್ವರ್ಣ ಲತಾ ಅಜೂರಿ } ರತನ್ { ವಾಸ್ತಿ ಕರನ್‌ದಿವಾನ್

ನೀವು ಇದುವರೆಗೂ ನೋಡದಿದ್ದರೆ ಇಂದೇ ಬಂದು ನೋಡಿ!

ಪ್ರತಿ ದಿನ ಎರಡು ಆಟಗಳು

ವಿಜಯಾ ಪಿಕ್ಚರ್ಸ್, ಮೈಸೂರು.

Edited, printed and published by A. K. Nagarajan at the S... Press, D. Subbiah Road Mysore.

ಜೋ॥ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಬುಧವಾರ ೨—೭—೪೬ [ಸಂಚಿಕೆ ೨೫೦

ಮಿರ್ಜಾರವರ ವಿರುದ್ಧವಾಗಿ ಲೀಗಿನ ಚಳುವಳಿ

ಹೈದರಾಬಾದ್ ಮಂತ್ರಿಮಂಡಲದ ಅಧ್ಯಕ್ಷತೆಗೆ ಸರ್ ಮಿರ್ಜಾರವರನ್ನು ನಿಜಾಮರು ನೇಮಕ ಮಾಡಿಕೊಳ್ಳುವ ವಿಚಾರದಲ್ಲಿ ಮುಸ್ಲಿಂ ಲೀಗಿನವರು ವಿರುದ್ಧ ಚಳುವಳಿ ಆರಂಭಿಸಿದ್ದಾರೆ ಏಕೆಂದರೆ ಸರ್ ಮಿರ್ಜಾರವರು ಅಖಂಡಭಾರತದ ಬಗ್ಗೆ ತಮ್ಮ ಅಭಿಪ್ರಾಯ ಸೂಚಿಸಿರುವುದೇ ಈ ಚಳುವಳಿಗೆ ಕಾರಣ ದೆಹಲಿಯಲ್ಲಿರುವ ಮಿ॥ ಜಿನ್ನಾರವರು ಸಧ್ಯದಲ್ಲೇ ಹೈದರಾಬಾದಿಗೆ ತೆರಳಿ ಮಿರ್ಜಾರವರನ್ನು ಆ ಕೆಲಸಕ್ಕೆ ನೇಮಿಸಿಕೊಳ್ಳದಂತೆ ನಿಜಾಮರನ್ನು ಪ್ರಾರ್ಥಿಸುವರೆಂದು ದೆಹಲಿಯಲ್ಲಿ ಊಹೆ ಎದ್ದಿದೆ ಆದರೆ ಹೈದರಾಬಾದಿನ ನಿಜಾಮರು ಇವಕ್ಕೆಲ್ಲಾ ಖಂಡಿತ ಒಪ್ಪುವುದಿಲ್ಲವೆಂದೂ, ಮಿರ್ಜಾರವರ ನೇಮಕದ ಬಗ್ಗೆ ಯಾವ ಚಳುವಳಿಯೂ ಸಿದ್ಧಿಸನೆಂದೂ ಹೇಳಲಾಗುತ್ತಿದೆ

ಲಾರ್ಡ್ಸ್ ಸಭೆಯಲ್ಲಿ ಬ್ರಿ॥ ಸರ್ಕಾರಕ್ಕೆ ೩ ನೇ ಸೋಲು

ಪ್ರಾಣಿಗಳ ಆಹಾರದ ಸರಬರಾಜಿನಲ್ಲಿ ಮೋಸಮಾಡುವ ನಿರ್ಣಯವನ್ನು ಬ್ರಿಟನ್ನಿನ ಲಾರ್ಡ್ಸ್ ಸಭೆಯಲ್ಲಿ ೫೬-೨೩ ಓಟುಗಳಿಂದ ತಿರಸ್ಕರಿಸಲಾಗಿದೆ ಇದರಿಂದಾಗಿ ಲೇಬರ್ ಸರ್ಕಾರಕ್ಕೆ ೩ ನೇ ಸೋಲು ಉಂಟಾಗಿದೆ. ಶ್ರೀಮಂತರ ಸಭೆಯಲ್ಲಿ ಟೋರಿಗಳು ಅಧಿಕ ಸಂಖ್ಯೆಯಲ್ಲಿದ್ದಾರೆ

ಗಾಂಧಿ ಸೇವಾ ಸಂಘ

ಗಾಂಧಿ ಸೇವಾ ಸಂಘದ ಕಾರ್ಯಕಾರಿ ಸಮಿತಿಯು ೧೬-೬-೪೬ ರಲ್ಲಿ ಸೇರಿ ಈ ಸಾರಿಯೂ ಕೂಡ ಗಾಂಧೀ ಜಯಂತ್ಯುತ್ಸವ ಸಂದರ್ಭದಲ್ಲಿ ೭೮ ದಿನಗಳು "ಸೂತ್ರಯಜ್ಞ" ನಡೆಸಬೇಕೆಂದು ತೀರ್ಮಾನಿಸಿ ಸೂತ್ರಯಜ್ಞ ಸಮಿತಿಯನ್ನು ನಿರ್ಮಿಸಿತು ಅದರ ಸದಸ್ಯರು ಈರೀತಿ ಇದ್ದಾರೆ— ಶ್ರೀಗಳಾದ ಎ ಎನ್. ಸೂರ್ಯನಾರಾಯಣರಾಯರು ಅಧ್ಯಕ್ಷರು, ಎಸ್. ಕೃಷ್ಣರಾವ ಗೋಖಲೆ, ಪಿ ಕಾ ಸುಬ್ಬರಾವ್ ಕಾರ್ಯದರ್ಶಿಗಳು; ಎಸ್. ಎಸ್. ಶಾಸ್ತ್ರಿಗಳು, ಮ ಶ್ರೀ. ಶ್ರೀಕಂಠಶಾಸ್ತ್ರಿಗಳು ಸದಸ್ಯರು. ಸಂಘದ ಸದಸ್ಯರಲ್ಲದೆ ಈ ಸಮಿತಿಗೆ ಸಾರ್ವಜನಿಕರಿಂದ ೪ ಸದಸ್ಯರನ್ನು ಸೇರಿಸಿಕೊಳ್ಳಬೇಕೆಂದು ತೀರ್ಮಾನಿಸಲಾಯಿತು ಅವರ ಹೆಸರುಗಳನ್ನು ಮುಂದೆ ಕೊಡಲಾಗುವುದು.

ಪ್ರಜೆಗಳ ಪ್ರತಿನಿಧಿಗಳನ್ನು ಚುನಾಯಿಸದಿದ್ದರೆ ಅಸಹಕಾರ

ಸ್ವಂ. ಸು.] ಶ್ರೀರಂಗಪಟ್ಟಣ ೧

ಅಖಿಲ ಭಾರತ ರಾಜ್ಯಾಂಗ ನಿರ್ಮಾಣ ಸಮಿತಿಗೆ ಮೈಸೂರು ಸಂಸ್ಥಾನದಿಂದ ಪ್ರಜೆಗಳಿಂದ ಚುನಾಯಿತರಾದ ಸದಸ್ಯರನ್ನಲ್ಲದೆ ಸರ್ಕಾರದವರು ಅಧಿಕಾರಿಗಳನ್ನಾಗಲೀ ನಾಮಕರಣ ಸದಸ್ಯರನ್ನಾಗಲೀ ಕಳುಹಿದರೆ ಅದನ್ನು ಪ್ರತಿಭಟಿಸಲು ಅಸಹಕಾರ ಚಳವಳಿಯನ್ನು ಹೂಡಲು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳುವಂತೆ ಇಲ್ಲಿನ ತಾ॥ ಕಾಂಗ್ರೆಸ್ ಕಮಿಟಿಯು ಮೈಸೂರು ಕಾಂ॥ ವರ್ಕಿಂಗ್ ಕಮಿಟಿಗೆ ಒಂದು ನಿರ್ಣಯದ ಮೂಲಕ ಸೂಚನೆ ಕೊಟ್ಟಿರುತ್ತದೆ

ಶ್ರೀಗಳಾದ ಸಿ. ಬಂಡೀಗೌಡರೇ ಮೊದಲಾದ ಹತ್ತು ಜನರು ಈ ಸಾರಿಯ ಅಧಿವೇಶನಕ್ಕೆ ಶ್ರೀ ಹೆಚ್ ಸಿ. ದಾಸಪ್ಪನವರ ಹೆಸರನ್ನು ಸೂಚಿಸಿರುವರು..

ದ॥ ಆಫ್ರಿಕದಲ್ಲಿ

ಐರೋಪ್ಯರ ದೌರ್ಜನ್ಯಕ್ಕೆ ಮೊದಲನೇ ಬಲಿ

ವ್ಯವಸಾಯಾಧಿಕಾರಿಗಳು

ಸ್ವಂ ಸು.ವರ್ತ.] ಬೆಂಗಳೂರು ೨

ವ್ಯವಸಾಯ ಇಲಾಖೆಯ ಡೈರೆಕ್ಟರಾಗಿರುವ ಶ್ರೀ ಎಂ ಜೆ ನರಸಿಂಹನ್‌ರವರಿಗೆ ನಿವೃತ್ತರಾಗುವ ಮುನ್ನ ರಜಾಕೊಡಲಾಗಿದೆ ಡೆಪ್ಯುಟಿಡೈರೆಕ್ಟರಾದ ಶ್ರೀ ಕೆ ಎಚ್ ಶ್ರೀನಿವಾಸನ್‌ರವರು ಡೈರೆಕ್ಟರಾಗಿ ನೇಮಿಸಲ್ಪಟ್ಟಿರುವರು

೦ ೦ ೦ ೦

ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಅಧ್ಯಕ್ಷರಾದ ಪಂಡಿತ ಹೃದಯನಾಥ ಕುಂಜ್ರುರವರು ನಿನ್ನೆ ಇಲ್ಲಿಗೆ ಭೇಟಿ ಇತ್ತು ದಿವಾನರೊಡನೆ ಮಾತುಕತೆ ನಡೆಸಿದರು ಗೋಖಲೆ ಸಂಸ್ಥೆಯಲ್ಲಿ ಭಾಷಣಮಾಡಿ ಭಾರತ ರಾಜ್ಯಾಂಗ ಸಮಿತಿಗೆ ಚುನಾಯಿತ ಪ್ರತಿನಿಧಿಗಳನ್ನೇ ಕಳುಹಿಸಬೇಕೆಂದು ಹೇಳಿದರು ನಿನ್ನೆರಾತ್ರಿ ಅವರು ಮದರಾಸಿಗೆ ತೆರಳಿದರು.

೦ ೦ ೦ ೦

ಚಿನ್ನದ ಗಣಿಗ ಮಜೂರಿ ಸಮಿತಿಗೆ ಶ್ರೀ ಕೆ ಚೆಂಗಲ್‌ರಾಯ ರೆಡ್ಡಿಯವರು ಸದಸ್ಯರಾಗಿ ಆರಿಸಲ್ಪಟ್ಟಿರುವರು

ಬಿತ್ತನೆ ಕಾಳಿಗೂ ದುರ್ಭಿಕ್ಷವೇ ?

ಸ್ವಂ ಸು] ನಂಜನಗೂಡು ೧

ಈ ಪ್ರಾಂತ್ಯದಲ್ಲಿ ಬಿತ್ತನೆ ಬಹಳ ಮುಖ್ಯವಾಗಿ ಸಿಕ್ಕದೆ ಬೆಳೆಗಾರರು ಗಾಬರಿಪಡುತ್ತಿದ್ದಾರೆ. ವ್ಯವಸಾಯದ ಇಲಾಖಾಧಿಕಾರಿಗಳು ತರಿಸಿ ಕೊಡುತ್ತೇವೆಂದು ಹೇಳುತ್ತಿದ್ದು ಈಗ ಸಿಗುವುದಿಲ್ಲವೆಂದು ತಿಳಿಸುತ್ತಾರಂತೆ ಕಾಲದಲ್ಲಿ ಬೇಕಾದ ಕಾಳು ಒದಗದಿದ್ದಲ್ಲಿ ಸಾವಿರಾರು ಎಕರೆ ಜಮೀನು ಪಾಳುಬೀಳುವುದರಲ್ಲಿ ಸಂದೇಹವಿಲ್ಲ ಅಧಿಕಾರಿಗಳು ಕೂಡಲೇ ಬಿತ್ತನೆ ಕಾಳುಗಳನ್ನು ತರಿಸಿ ಬೆಳೆಗಾರರ ಕಷ್ಟವನ್ನು ಪರಿಹಾರ ಮಾಡಬೇಕೆಂದು ನಿಂಬಲಾಗಿದೆ.

ಸಕ್ಕರೆ ಅಭಾವ

ಇಲ್ಲಿ ಫಲಾಹಾರ ಮಂದಿರಗಳು ಬಹಳ ಕಡಿಮೆ. ಒಂದೆರಡು ಹೋಟೆಲುಗಳಲ್ಲಿ ಮಾತ್ರ ಸಕ್ಕರೆ ಕಾಫಿ ದೊರೆಯುತ್ತೆ ಬಾಕಿ ಹೋಟೆಲುಗಳಲ್ಲಿ ಬೆಲ್ಲದ ಕಾಫಿ. ಇದರ ಗುಟ್ಟೇನೋ ತಿಳಿಯದು. ಸಕ್ಕರೆ ಅಭಾವ ಬಗಾಢವಾಗಿದೆ ———

○ ಪ್ರಕೃತದಲ್ಲಿ ವ್ಯಕ್ತಿಗತ ಸ್ವಾತಂತ್ರ್ಯಕ್ಕೆ ಎದ್ದಿರುವ ದುಸ್ಥಿತಿಯನ್ನು ವಿಮರ್ಶಿಸಲು ... ಯಲ್ಲಿ ನಡೆದ ಸಂಘದ ಅಧಿವೇಶನ ನಡೆದದ್ದನ್ನು ಅಧ್ಯಕ್ಷ ... ಅಧ್ಯಕ್ಷರು ಆಯ್ಕೆ ಆಗಿದ್ದಾರೆ.

ಡಾ॥ ಷರಿಯರವರನ್ನು ಅಪಹರಿಸಿದವರ ದಸ್ತಗಿರಿ

ಇಂಡೋನೇಷಿಯಾದ ಪ್ರಧಾನಿ ಡಾ॥ ಷರಿಯರನ್ನು ಅಪಹರಿಸಿಕೊಂಡು ಹೋಗಿದ್ದ ಇಂಡೋನೇಷಿಯನ್ ರಿಪಬ್ಲಿಕ್ ಸೈನ್ಯದ ಯುವಕನ ದಸ್ತಗಿರಿಯಾಗಿದೆ

ದಕ್ಷಿಣ ಆಫ್ರಿಕಾದಲ್ಲಿ ಐರೋಪ್ಯರ ದೌರ್ಜನ್ಯ

ಭಾರತೀಯನ ಮರಣ

ಭಾರತೀಯರು ದ॥ ಆಫ್ರಿಕದಲ್ಲಿ ಹೂಡುತ್ತಿರುವ ಸತ್ಯಾಗ್ರಹದ ಪ್ರದೇಶಕ್ಕೆ ಸ್ವಲ್ಪ ದೂರದಲ್ಲಿ ಜೂನ್ ೨೧ ನೇ ತಾ॥ ರಾತ್ರಿ ಐರೋಪ್ಯ ಧಾಳಿಕಾರರ ಹಿಂಸೆಕ್ಕೊಳಗಾಗಿ ಒಟ್ಟು ಬಲವಾದ ಗಾಯವನ್ನು ಪಡೆದು ಆಸ್ಪತ್ರೆಗೆ ಸಾಗಿಸಲ್ಪಟ್ಟಿದ್ದ ಶ್ರೀ ಕೃಷ್ಣಸ್ವಾಮಿ ಪಿಳ್ಳೆ ಎಂಬ ಭಾರತೀಯ, ಪೋಲೀಸಿನವನು ಮೊನ್ನೆ ದಿನ ಮರಣ ಹೊಂದಿದನೆಂದು ವರದಿಯಾಗಿದೆ. ಐರೋಪ್ಯರ ದೌರ್ಜನ್ಯಕ್ಕೆ ಬಲಿಯಾದ ಪ್ರಥಮವ್ಯಕ್ತಿ ಇವರ ಎಂದು ತಿಳಿಯಲಾಗಿದೆ. ಯಲ್ಲಿ ಸತ್ಯಾಗ್ರಹ ಸಮಿತಿ ಈ ಸುದ್ದಿಯನ್ನು ಪ್ರಕಟಿಸಿದೆ

ಮೈಸೂರಿಂದ ಮದ್ರಾಸಿಗೆ ವಿದ್ಯುಚ್ಛಕ್ತಿ

ಮದ್ರಾಸ್ ಪ್ರಾಂತ್ಯದ ಸಿಟಿಡ್ ಜಿಲ್ಲೆಗಳಿಗ ಮೈಸೂರಿನ, ಜೋಗ್, ಶಿವನಸಮುದ್ರ ಮುಂತಾದ ಕೇಂದ್ರಗಳಿಂದ ವಿದ್ಯುಚ್ಛಕ್ತಿ ಸರಬರಾಜು ಮಾಡುವ ಬಗ್ಗೆ ಮದರಾಸಿನ ಪ್ರಧಾನಿಗಳಾದ ಶ್ರೀ ಪ್ರಕಾಶಂರವರು ಮೊನ್ನೆ ಮೈಸೂರು ದಿವಾನ್‌ರೊಡನೆ ಚರ್ಚೆ ನಡೆಸಿದರೆಂದೂ, ಈ ಸಂಬಂಧ ಸಹಕರಿಸಲು ಒಪ್ಪಿದ ಪ್ರಶ್ನೆಗೆ ಪ್ರತ್ಯುತ್ತರ ಕೊಡುವುದು ಮಾತ್ರವೆಂದೂ ಗೊತ್ತಾಗಿದೆ ——

ಲಂಚ ನಿರೋಧ ಸಮಿತಿಯ ಶಿಫಾರಸುಗಳು

ಸ್ವಂ.ಸು.ವರ್ತ.] ಬೆಂಗಳೂರು ೧

ಈ ದಿನ ಶಾಸನ ಸಭೆಯಲ್ಲಿ ಲಂಚ ನಿರೋಧ ಸಮಿತಿಯ ಶಿಫಾರಸುಗಳ ಬಗ್ಗೆ ಪ್ರಶ್ನೋತ್ತರಗಳಾದವು. ಸಂಸ್ಥಾನದಲ್ಲಿ ಲಂಚವು ಎಷ್ಟು ಮಟ್ಟಿಗೆ ವ್ಯಾಪಿಸಿದೆ ಎಂಬುದನ್ನು ಗೊತ್ತು ಮಾಡುವ ಕೆಲಸವನ್ನು ... ಮಾಡಿರಲಿಲ್ಲವೆಂದು ಸರ್ಕಾರದವರು ಹೇಳಿದರು ... ಮಾಡುವ ... ಅಧಿಕಾರಿಗಳನ್ನು ... ತೆಗೆದ ಬೋರ್ಡಿನ ವಿಚಾರದಲ್ಲಿ ಅತಿ ... ಮಾಡಿದರೂ ಪ್ರಯೋಜನವಿಲ್ಲವೆಂದು

ನಿಲುವಳಿ ನಿರ್ಣಯಗಳ ವಾಪಸು

ಸ್ವಂ ಸು.ವರ್ತ.] ಬೆಂಗಳೂರು ೩

ದಾವಣಗೆರೆ, ಹರಿಹರ, ಹಿರಿಯೂರು ತಾಲ್ಲೋಕುಗಳಲ್ಲಿ ರೈತರಿಗೆ ಗೊಬ್ಬರವಾಗಿ ಹಿಂಡಿ ದೊರೆಯದಿರುವ ವಿಚಾರದಲ್ಲಿ ಶ್ರೀ ಬಿ ವೀರಬಸಪ್ಪನವರು ಈ ದಿನ ಶಾಸನ ಸಭೆಯಲ್ಲಿ ನಿಲುವಳಿ ನಿರ್ಣಯವನ್ನು ತಂದರು. ಸೂಕ್ತವಾದ ವಿಚಾರವನ್ನು ಮಾಡುವುದಾಗಿ ಸರ್ಕಾರದವರು ಭರವಸೆ ಇತ್ತ ಮೇಲೆ ಅದನ್ನು ವಾಪಸ್ ತೆಗೆದುಕೊಳ್ಳಲಾಯಿತು.

ಶಿವಮೊಗ್ಗೆಯ ಮೆಗ್ಗಾನ್ ಆಸ್ಪತ್ರೆಯನ್ನು ಜನರಲ್ ಆಸ್ಪತ್ರೆಯನ್ನಾಗಿ ಮಾಡದಿರುವ ವಿಷಯದಲ್ಲಿ ಶ್ರೀ ಎಚ್. ಎಸ್ ರುದ್ರಪ್ಪನವರು ಮತ್ತೊಂದು ನಿಲುವಳಿಯನ್ನು ತಂದರು ಸಾಕಾದಷ್ಟು ಜನ ವೈದ್ಯರೂ, ಸಾಮಗ್ರಿಗಳೂ ಇಲ್ಲವೆಂದು ಡಾ॥ ರಾಯರವರು ಹೇಳಿದರು ನಿರ್ಣಯವನ್ನು ಓಟಿಗೆ ಹಾಕಿಸಲಾಗಲಿಲ್ಲ

ಪಠ್ಯ ಪುಸ್ತಕಗಳ ಅಭಾವದ ಬಗ್ಗೆ ಶ್ರೀ ಎಂ ಎ ಗೋಪಾಲಸ್ವಾಮಿ ಅಯ್ಯಂಗಾರ್ ರವರು ಅಲ್ಪಾವಧಿ ಪ್ರಶ್ನೆಯನ್ನು ಹಾಕಿದರು. ಪುಸ್ತಕಗಳನ್ನು ಅಚ್ಚು ಹಾಕಲು ತೊಂದರೆಯಾಗಿದೆಯೆಂದೂ, ಬೇಗ ಮುಂದಿನ ಪುಸ್ತಕಾಲಯಗಳು ಈ ಕೆಲಸವನ್ನು ಕೈಗೆತ್ತಿಕೊಳ್ಳುವುದಿಲ್ಲವೆಂದು ಸರ್ಕಾರದವರು ಹೇಳಿದರು ಪುಸ್ತಕಗಳು ಒಡುವ ಪರಿಣಿ ಉಪಾಧ್ಯಾಯರುಗಳು ಮಾಡುವ ಕೆಲಸವೇನು ಎಂದು ಶ್ರೀ ಎಲ್ ಎಸ್ ವೆಂಕಟಾಚಾರ್ಯರು ಕೇಳಿದರು.

ಪ್ರಜಾ ಪ್ರತಿನಿಧಿ ಸಭೆಯ ಸದಸ್ಯರು ದಿವಾನರ ಮೂಲಕ ಹಿಂದೂಸ್ಥಾನ್ ಸರ್ಕಾರದವರಿಗೆ ಸಲ್ಲಿಸಿದ ಮನವಿಯ ವಿಷಯವೇನಾಯಿತೆಂದು ಶ್ರೀ ಚೆಂಗಲರಾಯ ರೆಡ್ಡಿಯವರು ಮತ್ತೊಂದು ಅಲ್ಪಾವಧಿ ಪ್ರಶ್ನೆಯನ್ನು ಹಾಕಿದರು ಈ ವಿಷಯವು ಈ ಸಭೆಗೆ ಸಂಬಂಧಪಟ್ಟಿಲ್ಲವೆಂದು ಹೇಳಿ ಅಧ್ಯಕ್ಷರು ಅದನ್ನು ತಳ್ಳಿಹಾಕಿದರು.

ಹಣಕಾಸಿನ ಪಟ್ಟಿಯನ್ನು ಸಭೆಯು ಆರಂಭವಾಗುವುದಕ್ಕೆ ಮೊದಲು ನಿಯಮದ ಪ್ರಕಾರ ಒಂದುವಾರ ಮುಂಚೆ ಕಳುಹಿಸಲಿಲ್ಲವಾದುದರಿಂದ ಗ್ರಾಂಟುಗಳನ್ನು ಪರಿಶೀಲಿಸುವ ಅವಕಾಶವಿಲ್ಲವೆಂದು ಆಕ್ಷೇಪಣೆಯನ್ನು ಕಳುಹಿಸುವುದಕ್ಕೂ ಅವಕಾಶವಿಲ್ಲವೆಂದೂ ಹೇಳಿ ಶ್ರೀ ಟಿ ಮಾದೇಗೌಡರ ಕ್ರಿಯಾಲೋಚನೆಯನ್ನು ತಂದರು ಅಧ್ಯಕ್ಷರು ಅದನ್ನು ಅನುಮೋದಿಸಿದರು. ಆದರೆ ಸಭೆಯು ವಿಶೇಷಾಧಿಕಾರದ ಮೂಲಕ ಇದರ ಪರಿಶೀಲನೆಗೆ ಅನುಮತಿ ಕೊಡಲ್ಪಟ್ಟಿತು.

ಶ್ರೀ ಪುಲ್ಲಿ ರೆಡ್ಡಿಯವರು ಹೇಳಿದರು.. ಲಂಚ ರುಜು ಪತ್ರಗಳನ್ನು ಪತ್ರ ಹಚ್ಚಲು ಒಪ್ಪಿ ಅಧಿಕಾರಿಗಳನ್ನು ಹೊಸದಾಗಿ ನೇಮಿಸಬೇಕೆಂದು ಹೇಳಿದಾಗ ನಿವೃತ್ತ ಪೋಲೀಸ್ ಅಧಿಕಾರಿ ಶ್ರೀ ಸಿಂಗಾರ ವೇಲು ಮೊದಲಿಯಾರ್‌ರವರನ್ನು ಈ ಕೆಲಸಕ್ಕೆ ನೇಮಿಸಿ, ಕೊಳ್ಳಬಾರದೇ ಎಂಬ ಪ್ರಶ್ನೆ ಬಂತು. ಇಲ್ಲವೆಂದು ಶ್ರೀ ಪುಲ್ಲಿ ರೆಡ್ಡಿಯವರು ಉತ್ತರವಿತ್ತರು. ನಮ್ಮ ಜನ ಅಧಿಕ ರಿಪೋರ್ಟುಗಳನ್ನು ... ಮಾಡಬೇಕಾಗಿ ... ಕೇಳಿದವರನ್ನು ... ಕೆಲಸದವರಿಗೆ ... ಮಾಡಬೇಕಾಗಿದೆ ... ದಿದೆ.

ಸಾಧ್ವಿ

ಜುಲೈ ೩-೭-೪೬ ಬುಧವಾರ

ಮೈಸೂರಿನ ಪ್ರತಿನಿಧಿಯಾಗಿ ಮೈಸೂರಿನವರಿರಬೇಕು

ನವ ಮೈಸೂರಿನ ಉನ್ನತ ಸ್ಥಾನಗಳಿಗೆ ಹೊರಗಿನಿಂದ ನಿಷ್ಣಾತರಾದ ಜನರನ್ನು ತರುವ ಪದ್ಧತಿ ಈಗಾಗಲೇ ಬಹಳ ಟೀಕೆಗಳು ಬಂದಿವೆ. ಆದರೂ ಈ ಪದ್ಧತಿಯು ಮಾತ್ರ ಇನ್ನೂ ತಪ್ಪಿದಂತೆ ಕಾಣುವುದಿಲ್ಲ. ಮೊನ್ನೆ ಪ್ರಾಂತದಲ್ಲಿ ಕೆಲಸ ಮಾಡಿ ವಿಶ್ರಾಂತಿ ಪಡೆಯುತ್ತಿದ್ದ ಶ್ರೀ ಸಾಠೆ ಯವರನ್ನು 'ಅರಣ್ಯಾಧಿಕಾರಿ'ಯಾಗಿ ನೇಮಿಸಿರುವುದೂ ಮೈಸೂರು ಬ್ಯಾಂಕಿಗೆ ಸಂಬಂಧಿಸಿದ ಮಿ' ಕೃಷ್ಣನ್' ಎಂಬುವರನ್ನು ಕರೆ ದುಕೊಂಡಿರುವುದೂ ಇತ್ತೀಚಿನ ನಿದರ್ಶನಗಳು. ಅನುಭವಸ್ಥರಾದ ಅಧಿಕಾರಿಗಳು ಸಂಸ್ಥಾನದಲ್ಲಿ ಇರಲಿಲ್ಲವೆಂದು ಹೇಳುವುದು ಸರಿಯಲ್ಲ. ಮುಖ್ಯಾಧಿಕಾರಿಗಳ ಸಹೋದ್ಯೋಗಿಗಳಾಗಿ ಕೆಲಸ ಮಾಡುತ್ತಿರುವವರು ಆ ಸ್ಥಾನಕ್ಕೆ ಅರ್ಹರಲ್ಲವೆಂದು ಹೇಳುವುದಾದರೆ ಅರ್ಹತೆಯು ಬರುವುದಾದರೂ ಎಂತು? ಕೆಲಸವನ್ನು ಕೊಟ್ಟು ಜವಾಬ್ದಾರಿಯನ್ನು ವಹಿಸಿದರೆ ತಾನೆ ಅರ್ಹತೆಯು ಬರುವುದು?

ಇದು ಸಂಸ್ಥಾನದೊಳಗಿನ ನೇಮಕಗಳ ವಿಷಯ. ಹಲವು ಅನಿವಾರ್ಯವಾದ ಸಂದರ್ಭಗಳಲ್ಲಿ ಮೈಸೂರಿನವರನ್ನು ಬಿಟ್ಟು ಹೊರಗಿನಿಂದ ಯೋಗ್ಯರಾದವರನ್ನು ಆರಿಸಿ ನೇಮಕ ಮಾಡಿಕೊಳ್ಳಬೇಕಾಗಬಹುದು. ಆದರೆ ಲಂಡನ್ನಿನಲ್ಲಿ ಮೈಸೂರು ವ್ಯಾಪಾರದ ಕಮೀಷನರಾಗಿ ಬಿಳಿಯರೊಬ್ಬರು ಇರಬೇಕಾದ ಅವಶ್ಯಕತೆಯು ಯಾರಿಗೂ ಅರ್ಥವಾಗುವುದಿಲ್ಲ. ಈ ಕೆಲಸಕ್ಕೆ ಮಿ|| ಬ್ರಿಸ್ಟೋ ಎಂಬುವರನ್ನು ನೇಮಿಸಿ ಬಹಳ ದಿನಗಳಾದವು. ಇದಕ್ಕಾಗಿ ಶಾಸನ ಸಭೆಯಲ್ಲಿ ಹಿಂದೆಯೇ ಸದಸ್ಯರು ಪ್ರಶ್ನಿಸಿದ್ದರು. ಆದರೂ ಅವರನ್ನೇ ಆ ಸ್ಥಾನದಲ್ಲಿ ಮುಂದುವರಿಸಲಾಗಿದೆ. ಇದಕ್ಕಾಗಿ ಈ ಬಾರಿ ಸಭೆಯಲ್ಲಿ ಇನ್ನೂ ಹೆಚ್ಚಿನ ಟೀಕೆ ವ್ಯಕ್ತವಾಯಿತು. ...

ನೃತ್ಯ ಭಾರತೀ

ಮದ್ರಾಸಿನಲ್ಲಿ ಕಳೆದ ೭ ವರ್ಷಗಳಿಂದ ನಾಟ್ಯಶಾಸ್ತ್ರ ಶಿಕ್ಷಣ ಕೊಡುತ್ತಿರುವ ನೃತ್ಯ ಭಾರತೀ ಸಂಸ್ಥೆಯು ತನ್ನದೇ ಆದ ಸ್ವಂತ ಕಟ್ಟಡವನ್ನು ಹೊಂದಿ ಕಲಾ ಶಿಕ್ಷಣ ಕ್ರಮವನ್ನು ವಿಸ್ತರಿಸಿ ಅಭಿವೃದ್ಧಿ ಪಡಿಸುವುದಕ್ಕಾಗಿ ಹಲವು ಯೋಜನೆಗಳನ್ನು ಹಾಕಿಕೊಂಡಿದೆ. ನಾಟ್ಯ ಶಾಸ್ತ್ರದ ತವರೂರಾದ ಭಾರತದ ನಿವಾಸಿಗಳು ಈ ಆದರ್ಶ ಕಲೆಯ ಉದ್ಧಾರಕ್ಕಾಗಿ ನೆರವು ನೀಡುವ ಅವಶ್ಯಕತೆಯನ್ನು ವಿವರಿಸಬೇಕಾದದಿಲ್ಲ. ಆದ್ದರಿಂದ ಸರ್ವರೂ ಸಹಾಯ ಮಾಡಬೇಕೆಂದು 'ನೃತ್ಯ ಭಾರತಿಯ' ಆಚಾರ್ಯರಾದ ಶ್ರೀ ಕುಲಕರ್ಣಿ ಶ್ರೀನಿವಾಸರವರು ಪ್ರಾರ್ಥಿಸಿದ್ದಾರೆ.

ಅಂಚೆ ನೌಕರರ ಮುಷ್ಕರ ಕಾನೂನು ಬದ್ಧವಲ್ಲ

ಅಂಚೆ ಇಲಾಖೆಯ ಡೈರೆಕ್ಟರ್ ಜನರಲ್ ಆದ ಶ್ರೀ ಕೃಷ್ಣಪ್ರಸಾದರು ಒಂದು ಹೇಳಿಕೆ ಹೊರಡಿಸಿ ಅಂಚೆ ಮ.ತ. ತಂತಿ ಇಲಾಖೆಯ ಕೆಲಸಗಾರರ ಬೇಡಿಕೆಗಳಲ್ಲಿ ಹಲವನ್ನು ಈಗಾಗಲೇ ಪಂಚಾಯಿತಿಗೆ ಒಪ್ಪಿಸಿರುವುದರಿಂದ ಅವರು ಮುಷ್ಕರ ಹೂಡುವುದಾಗಿ ಕೊಟ್ಟಿರುವ ನೋಟೀಸ್ ಕ್ರಮಬದ್ಧವಾಗಿಲ್ಲವೆಂದು ತಿಳಿಸಿದ್ದಾರೆ.

ಅಹಮದಾಬಾದ್ ಗಲಭೆ ಯಲ್ಲಿ ೩೩ ಮಂದಿ ಮರಣ

ಮೊನ್ನೆ ದಿನ ಅಹಮದಾಬಾದಿನಲ್ಲಿ ರಥಯಾತ್ರೆ ಮೆರವಣಿಗೆಗೆ ಸಂಬಂಧವಾಗಿ ಉಂಟಾದ ಗಲಭೆಯು ಕೋಮುವಾರು ಕಲಹವಾಗಿ ಪರಿಣಮಿಸಿತು. ಗಲಭೆಯನ್ನು ಹತೋಟಿಗೆ ತರಲು ಪೋಲೀಸಿನವರು ಒಟ್ಟು ೯ ಬಾರಿ ಗುಂಡು ಹಾರಿಸಿದರು. ಇದುವರೆಗೆ ೩೩ ಮಂದಿ ಸತ್ತು ೨೫೩ ಮಂದಿಗೆ ಗಾಯವಾಗಿದೆ. ೯೦ ಜನರ ದಸ್ತಗಿರಿ ಆಗಿದೆ. ನಗರದಲ್ಲೆಲ್ಲಾ ಪೋಲೀಸರ ಗಸ್ತು ಬಲವಾಗಿದೆ. ಮಿಲಿಟರಿ ಸಹ ಬಂದಿಳಿದಿದೆ. ಕರ್ಫ್ಯೂ ಆಜ್ಞೆ ಜಾರಿಯಾಗಿದೆ. ಹಿಂಸೆ ಪ್ರಸಂಗಗಳು ನಡೆಯುತ್ತಿವೆ. ಕಾಂಗ್ರೆಸ್ ಮತ್ತು ಲೀಗ್ ನಾಯಕರು ಶಾಂತಿ ಸ್ಥಾಪಿಸಲು ಪ್ರಯತ್ನಿಸುತ್ತಿದ್ದಾರೆ.

... ನ್ ಸಾಹೇಬರಿದ್ದಾರೆ. ಇನ್ನೂ ಇತರರಿದ್ದಾರೆ. ಇವರೆಲ್ಲ ಯಾರಿಗೆ ಈ ಕೆಲಸವನ್ನು ವಹಿಸಿದರೂ ಅವರು ನಿಜವಾದ ದೇಶಾಭಿಮಾನದಿಂದಲೂ, ನಿಷ್ಪಕ್ಷಪಾತದಿಂದಲೂ ಅದನ್ನು ನಿರ್ವಹಿಸುವರು. ಮಿ|| ಬ್ರಿಸ್ಟೋರವರಿಗೆ ಅ ಪದದ ಅಭಿಮಾನವು ಏನೂ ಕಾರಣವಿಲ್ಲ. ಆದ್ದರಿಂದ ಇನ್ನಾದರೂ ಅವರನ್ನು ನಿವೃತ್ತಿ ಮಾಡಿ, ಮೈಸೂರಿನವರೊಬ್ಬರನ್ನು ನೇಮಿಸ ಬೇಕು.

ಪ್ಯಾಲೆಸ್ಟೈನಿನಲ್ಲಿ ದೌರ್ಜನ್ಯ

ಯೆಹೂದಿ ಚಳುವಳಿಗಾರರು ಪ್ಯಾಲೆಸ್ಟೈನಿನಲ್ಲಿ ನಡೆಸುತ್ತಿರುವ ದಾಂಧಲೆಗಳು ಪರಮಾವಧಿಗೆ ಏರುತ್ತಿವೆ. ಇದುವರೆವಿಗೆ ೧೩ ಮಂದಿ ಬ್ರಿ|| ಸಿಪಾಯಿಗಳೂ ೫ ಮಂದಿ ಪೋಲೀಸರೂ ಕೊಲ್ಲಲ್ಪಟ್ಟಿದ್ದಾರೆ. ೬೦ ಲಕ್ಷ ಪೌಂಡು ಬೆಲೆಬಾಳುವ ಆಸ್ತಿಪಾಸ್ತಿಗಳು ನಷ್ಟವಾಗಿವೆಯೆಂದು ಬ್ರಿ|| ಪ್ರಧಾನಿಗಳು ತಿಳಿಸಿ ಈ ದುರ್ವ್ಯವಹಾರವನ್ನು ಕೂಡಲೇ ಮಟ್ಟಹಾಕದಿದ್ದರೆ ಭಾರಿ ಪ್ರಮಾದ ಅನಾಹುತವಾಗುವುದೆಂದು ಹೇಳಿದ್ದಾರೆ.

ಅಣು ಬಾಂಬು ಪರೀಕ್ಷೆಯು ನಿರರ್ಥಕವಾಯಿತೇ?

ಬಿಕಿನಿ ಲಗೂನು ಪ್ರದೇಶದಲ್ಲಿ ನಿಲ್ಲಿಸಿದ್ದ ೭೫ ನೌಕೆಗಳ ಪೈಕಿ ಅಣು ಬಾಂಬಿನ ಹೊಡೆತಕ್ಕೆ ಸಿಕ್ಕಿದ ಕೇವಲ ೫ ನೌಕೆಗಳು ಮಾತ್ರ ಮುಳುಗಿದುವು. ಅಕ್ಕ ವಿಪರೀತ ಜಖಂ ಆಗಿದೆ. ಪೆನ್ಸಿಲ್‌ವೇನಿಯಾ ಎಂಬ ನೌಕೆಯಲ್ಲಿ ಪರೀಕ್ಷಾರ್ಥವಾಗಿ ಕಟ್ಟಿದ್ದ ಆಡುಗಳು ಬದುಕಿ ಹುಲ್ಲು ಮೇಯುತ್ತಿವೆ. ಬಿಕಿನಿದ್ವೀಪ ತೀರದ ತೆಂಗಿನ ಮರಗಳೆಲ್ಲಾ ಸುರಕ್ಷಿತವಾಗಿವೆ. ಊಹಿಸಲ್ಪಟ್ಟಿದ್ದ ಭಾರಿ ನಾಶಗಳೊಂದೂ ಸಂಭವಿಸಲಿಲ್ಲ. ಮೊನ್ನೆಯ ಅಟಂಬಾಂಬಿನ ಪರೀಕ್ಷೆ ನಿರರ್ಥಕವಾಯಿತೆಂದು ಹಲವರ ಅಭಿಪ್ರಾಯ. ಇನ್ನು ಮೂರು ವಾರಗಳಲ್ಲಿ ಇನ್ನೊಂದು ಅಟಂ ಬಾಂಬಿನ ಪರೀಕ್ಷೆ ನೀರಿನಲ್ಲಿ ನಡೆಯುವುದೆಂದು ಅಡ್ಮಿರಲ್ ಬ್ಲಾಂಡಿಯವರು ತಿಳಿಸಿದ್ದಾರೆ.

ಕರಾಚಿ ಬಳಿ ಹೊಸ ದ್ವೀಪ

ಕರಾಚಿಯ ಆಗ್ನೇಯ ಭಾಗಕ್ಕೆ ೧೦೦ ಮೈಲಿ ದೂರದಲ್ಲಿ ಸಮುದ್ರದಲ್ಲಿ ಮುಳುಗಿ ಹೋಗಿದ್ದ ಒಂದು ದ್ವೀಪವನ್ನು ಪತ್ತೆ ಮಾಡಲಾಗಿದೆ. ಈ ದ್ವೀಪದ ವಿಸ್ತೀರ್ಣ ೪ ಚ ಮೈಲಿಗಳೆಂದೂ, ನೀರಿನ ಕೆಳಗಡೆ ೧೨-೧೫ ಅಡಿಯಲ್ಲಿ ಇದು ಇದೆಯೆಂದೂ ಹೇಳಲಾಗಿದೆ.

ಟಿ. ಸಿ. ನಟರಾಜ್

ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಆಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲೀಷ್ ಔಷಧಿಗಳೂ ಸದಾ ಕಾಲದಲ್ಲಿಯೂ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೂ ಚಿಕಿತ್ಸೆಯು ಬಹು ಸುಲಭ ಧಾರಣೆಯಿಂದ ಮಾಡಲ್ಪಡುತ್ತದೆ.

ಮುಂಚೂಣಿಯವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಕಾಗದದ ಅಭಾವ

ಮೈಸೂರು ನಗರದಲ್ಲಿ ಕಾಗದ ಸಿಗದೆ, ಬಹಳ ತೊಂದರೆಯಾಗಿದೆ. ಎಲ್ಲಾ ಸ್ಕೂಲು ಕಾಲೇಜುಗಳೂ ಪುನಃ ಆರಂಭವಾಗಿರುವುದರಿಂದ, ಕಾಗದ ಸಿಕ್ಕದಿರುವುದು ವಿದ್ಯಾರ್ಥಿಗಳಿಗೆ ಬಹಳ ತೊಂದರೆಯಾಗಿದೆ. ಸುತ್ತಮುತ್ತಲಿನ ಊರುಗಳಿಂದ ಬರುವ ವಿದ್ಯಾರ್ಥಿಗಳಿಂದ, ಅಲ್ಲೂ ಕೂಡ ಕಾಗದದ ಅಭಾವವು ತಲೆದೋರಿದಂತೆ ಕಾಣುತ್ತದೆ.

ಕಾಗದದ ಕಾರ್ಖಾನೆಯನ್ನು ಹೊಂದಿರುವ ನಮ್ಮ ದೇಶದಲ್ಲಿ ಕಾಗದದ ಅಭಾವವೆಂದರೆ ಬಹಳ ಶೋಚನೀಯವೇ ಸರಿ. ವಿದ್ಯಾ ಇಲಾಖೆಯವರಾಗಲೀ, ಅಥವಾ ಸರ್ಕಾರದವರಾಗಲೀ ಇದನ್ನು ಗಮನಿಸಿ, ಕಾಗದದ ಅಭಾವವನ್ನು ಹೋಗಲಾಡಿಸಲು ಪ್ರಯತ್ನಪಟ್ಟು ವಿದ್ಯಾರ್ಥಿಗಳಿಗೆ ಸಹಾಯವನ್ನು ಕಲ್ಪಿಸಿಕೊಡುವರೆಂದು ನಂಬಿದ್ದೇನೆ.

ವಿದ್ಯಾರ್ಥಿಗಳ ಹಿತೈಷಿ

At NEW OPERA TALKIES
2nd WEEK
From 3—7—46
'COBRA - - WOMAN'
in Technicolor.
Featuring:—
Maria Montez,
Jon Hall,
Mysore Sabu
Next Change:—
[illegible]
From 6—7-46

ಮದನ ವಿಲಾಸ್

... "ಸಂತಾನ ಸಿಂಧೂರ" ...
(Prepares the Womb Ready for Conception) ...
ಎ. ರಾಮಸ್ವಾಮಿ ಅಯ್ಯರ್
ಪ್ರೊಪ್ರೈಟರ್, "ಸಂತಾನ ಸಿಂಧೂರ" ಆಫೀಸ್, ...

ರಾಜ್ ಕಮಲ್ ಟಾಕೀಸ್, ಮೈಸೂರು

೩—7—46 ನೇ ಬುಧವಾರದಿಂದ
ಅಮೋಘವಾದ ೩ ನೇ ವಾರ
ಸ್ವರ್ಣ ಲತಾ ಅಜುರಿ { ರತ್ನನ್ } ನಾಸ್ತಿ ...
ಮುಂದಿನ ಬದಲಾವಣೆ ...
ಪರ್ಬತ್ ಪೆ ಅಪ್ನಾ ಡೇರ

ಸಾಧ್ವಿ
ರಾಜಕೀಯ ರಾಷ್ಟ್ರೀಯ ದಿನ ಪತ್ರಿಕೆ
ಕೂಡಲೇ ಚಂದಾದಾರರಾಗಿರಿ

Edited, printed and published by ... at the Sadhvi Press, D. Subbiah Road, Mysore.

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಗುರುವಾರ ೪—೭—೪೭ [ಸಂಚಿಕೆ ೨೫೧

ಸಂಡೂರ್ ಸಂಸ್ಥಾನಕ್ಕೆ ಚುನಾಯಿತ ಮಂತ್ರಿ

ಪೌರಸಭಾ ಪಕ್ಷದಮೇಲೆ ದಾವ

ಮೈಸೂರು ೪

ರಾಜಧಾನಿಯ ಪೌರಸಭೆಯು ಕಾಂಗ್ರೆಸ್ ಪಕ್ಷದಿಂದ ತಮ್ಮನ್ನು ವಜಾಮಾಡುವುದು ಅಕ್ರಮವೆಂದು ತೀರ್ಪುಕೊಡುವಂತೆ ಕೋರಿ ಮೈಸೂರು ಪೌರಸಭೆಯ ಸದಸ್ಯರಾದ ಶ್ರೀ ಎಂ. ಆರ್. ಸಿ. ಬಸಪ್ಪನವರು ಕಾಂಗ್ರೆಸ್ ಪಕ್ಷದ ೨೬ ಜನ ಸದಸ್ಯರಮೇಲೆ ಮುನ್ಸೀಫ್ ಕೋರ್ಟಿನಲ್ಲಿ ದಾವ ಹೂಡಿದ್ದಾರೆ. ಇಂಟನೇ ತಾರೀಖು ಸೋಮವಾರ ಇದು ವಿಚಾರಣೆಗೆ ಇದೆ

ವಿಜಯಲಕ್ಷ್ಮಿ ಪಂಡಿತರು ರಾಜ್ಯಾಂಗ ಸಮಿತಿಗೆ

ಶ್ರೀಮತಿ ವಿಜಯಲಕ್ಷ್ಮಿ ಪಂಡಿತರನ್ನೂ ಶ್ರೀಮತಿ ಸುಚೇತ ಕೃಪಲಾನಿಯವರನ್ನೂ ಸಂಯುಕ್ತ ಪರ ರಾಜ್ಯಾಂಗ ರಚನಾ ಸಭೆಗೆ ಚುನಾಯಿಸಬೇಕೆಂದು ಅ॥ ಭಾ॥ ಮಹಿಳಾ ಸಭೆಯವರು ಪ್ರಾರ್ಥಿಸಿದ್ದನ್ನು ಕಾಂಗ್ರೆಸ್ ಕಾರ್ಯಕಾರಿ ಸಮಿತಿ ಅಂಗೀಕರಿಸಿರುವುದಾಗಿ ಗೊತ್ತಾಗಿದೆ. ಸಿಂಧ್ ಪ್ರಾಂತ್ಯದಿಂದ ಶ್ರೀ ಜಯರಾಂದಾಸ್ ದೌಲತ್ ರಾಂರವರನ್ನು ಚುನಾಯಿಸಬೇಕೆಂದು ಶ್ರೀ ಕೃಪಲಾನಿಯವರು ಸೂಚನೆ ಇತ್ತಿದ್ದಾರೆ.

ಗಫಾರ್‌ಖಾನ್-ಅಬ್ದುಲ್ಲಾ ಭೇಟಿ

ಖಾನ್ ಅಬ್ದುಲ್ ಗಫಾರ್‌ಖಾನರು, ಆಸಫ್‌ಅಲಿಯವರ ಕೂಡ ಶ್ರೀನಗರಕ್ಕೆ ಹೋಗಿ ಸೆರೆಮನೆಯಲ್ಲಿದ್ದ ಷ॥ ಷೇಖ್ ಅಬ್ದುಲ್ಲಾರವರನ್ನು ನೆನ್ನೆ ಭೇಟಿಮಾಡಿದ್ದರು

ಅಮೆರಿಕದ ಸೌಹಾರ್ದ

ಪ್ರತಿವರ್ಷವೂ ಸಂಯುಕ್ತಸಂಸ್ಥಾನಕ್ಕೆ ೧೦೦ ಜನ ಭಾರತೀಯರು ಬಂದು ನೆಲೆಸಲು ಮತ್ತು ಅಮೆರಿಕನ್ ನಾಗರಿಕ ಹಕ್ಕು ಹೊಂದಲು ಅವಕಾಶವೀಯುವ ಮಸೂದೆಗೆ ಅಧ್ಯಕ್ಷ ಟ್ರೂಮನ್ನರ ರುಜು ಆಗಿದೆ

ಮೌಂಟ್‌ಬ್ಯಾಟನರ ನೆರವು

ಟೋಕಿಯೋದಲ್ಲಿರುವ ಜ॥ ಮೆಕಾರ್ಥರವರು "ಆಹಾರಕಳಿಸಿ ಅಥವಾ ಸೈನಿಕರನ್ನು ಕಳಿಸಿ, ತಡಮಾಡಿದರೆ ಎರಡನ್ನೂ ಕಳಿಸಬೇಕಾದೀತು" ಎಂದು ಜ॥ ಮಿಸನ್ ಹೋವರರಿಗೆ ಜರೂರು ವಾರ್ತೆ ಕಳಿಸಿದ್ದಾರೆ

ವ್ಯವಸಾಯದ ಮೇಲೆ ಆದಾಯ ತೆರಿಗೆ

ವ್ಯವಸಾಯದಿಂದ ಬರುವ ಆದಾಯದ ಮೇಲೆ ತೆರಿಗೆ ಹಾಕಲು ಮದ್ರಾಸ್ ಸರ್ಕಾರ ಆಲೋಚಿಸುತ್ತಿರುವುದಾಗಿ ಗೊತ್ತಾಗಿದೆ.

ಭಾರತೀಯರ ಅದ್ಭುತ ವಿಜಯ

ಭಾರತೀಯ ಕ್ರಿಕೆಟ್ ಟೀಮಿನವರು ಲಾಂಕಾಷೈರ್ ಟೀಮಿನವರನ್ನು ೮ ವಿಕೆಟ್ಟುಗಳಿಂದ ಸೋಲಿಸಿದರು ಭಾರತೀಯರು ಮೊದಲನೇ ಇನ್ನಿಂಗ್ಸ್ ೧೭೬, ಎರಡನೇ ಇ॥ ಎರಡು ವಿಕೆಟ್ಟಿಗೆ ೩೦೦, ಲಾಂಕಾಷೈರ್ ೧ನೇ ಇನ್ನಿಂಗ್ಸ್ ೧೪೦, ಎರಡನೇ ಇ॥ ೧೬೫.

ಟ್ರೀಸ್ಟೆಮೇಲೆ ಅಂತರ ರಾಷ್ಟ್ರೀಯ ಸಾರ್ವಭೌಮತ್ವ

ಟ್ರೀಸ್ಟೆಯನ್ನು ಅಂತರಾಷ್ಟ್ರೀಯವಾಗಿ ಮಾಡುವ ತತ್ವವನ್ನು ಪ್ಯಾರಿಸ್ಸಿನಲ್ಲಿ ಸೇರಿರುವ ವಿದೇಶಾಂಗ ಸಚಿವರು ಅಂಗೀಕರಿಸಿದ್ದಾರೆ ಆದರೆ ಇಟಲಿ-ಯುಗೋಸ್ಲಾವಿಯ ಗಡಿಯ ಪ್ರಶ್ನೆ ಇನ್ನೂ ಬಗೆಹರಿದಿಲ್ಲ

ಬ್ರಾಹ್ಮಣ ಉಪಾಧ್ಯಾಯರುಗಳ ಸಂಖ್ಯೆ ಎಷ್ಟು?

ಮತ್ತೆ ಗುರುವಾರೆಡ್ಡಿಯವರ ಪ್ರಶ್ನೆಗಳು

ಸ್ವಂ ಸು ಫೋ] ಬೆಂಗಳೂರು ೪

ಬೆಂಗಳೂರಿನಲ್ಲಿರುವ ಔದ್ಯೋಗಿಕ ಶಿಕ್ಷಣ ಶಾಲೆಯ ಉಪಾಧ್ಯಾಯರುಗಳಲ್ಲಿ ಎಷ್ಟು ಮಂದಿ ಬ್ರಾಹ್ಮಣೇತರರಿದ್ದಾರೆ ಎಂಬ ಬಗ್ಗೆ ಶ್ರೀ ಹೆಚ್.ಆರ್ ಗುರುವಾ ರೆಡ್ಡಿಯವರು ಇಂದಿನ ಶಾಸನ ಸಭೆಯಲ್ಲಿ ಪ್ರಶ್ನೆ ಹಾಕಿದರು ಡಾ॥ ರಾಧಾಕೃಷ್ಣರವರು ಉತ್ತರ ವಿತ್ತು ಆ ಶಾಲೆಯಲ್ಲಿ ೧೨ ಮಂದಿ ಶಿಕ್ಷಕರಪೈಕಿ ಒಬ್ಬರೂ, ೧೯ ಸಹ-ಶಿಕ್ಷಕರಪೈಕಿ ೧೩ ಮಂದಿಯೂ ಬ್ರಾಹ್ಮಣೇತರರೆಂದು ತಿಳಿಸಿದರು

ಸ್ಕೌಟ್ ಕಮೀಷನರುಗಳ ವಿಚಾರ

ಶ್ರೀ ಗುರುವಾ ರೆಡ್ಡಿ- ಸಂಸ್ಥಾನದಲ್ಲಿರುವ ಎಲ್ಲ ಜಿಲ್ಲಾ ಸ್ಕೌಟ್ ಕಮೀಷನರುಗಳೆಲ್ಲಾ ಬ್ರಾಹ್ಮಣರಲ್ಲವೇ—

ಡಾ. ರಾಧಾ – ಹೌದು.

ಪ್ರಶ್ನೆ—ಅವರೆಲ್ಲಾ ಜಿಲ್ಲಾಕೇಂದ್ರವಾಸ ಕೈಗೊಳ್ಳಲು ಶಕ್ತರೇ? ಉತ್ತರ—ಶಕ್ತರು

ಪ್ರ—ಈ ಕೆಲಸ ನಿರ್ವಹಿಸಲು ಅರ್ಹರಾದ ಬ್ರಾಹ್ಮಣೇತರರಿಲ್ಲವೇ? ಉ—ಇರಬಹುದು

ಪ್ರ—ಬ್ರಾಹ್ಮಣೇತರರನ್ನು ನೇಮಿಸಿಕೊಳ್ಳಲು ಪ್ರಯತ್ನ ನಡೆಯಿತೇ? ಉ—ನಡೆಯಿತು.

ಪ್ರ—ಎಲ್ಲಾದರೂ ಈಗ ಈ ಕೆಲಸ ಖಾಲಿ ಇದೆಯೇ? ಉ—ಮಂಡ್ಯಜಿಲ್ಲೆಯಲ್ಲಿ ಕಳೆದ ೯ ತಿಂಗಳಿಂದ ಖಾಲಿ ಇದೆ

ಪ್ರ—ಏಕೆ ಖಾಲಿ ಇದೆ? ಉ—ಲಾಯಖ್ಖಾದ ಉಮೇದುವಾರರನ್ನು ಹೊಂದುವ ಸಲುವಾಗಿ

ಪ್ರ—ಇವರುಗಳಿಗೆ ಪಾರಿಭಾಷಿಕ ಸಹಾಯಕರೆಷ್ಟು ಮಂದಿ ಅವರಲ್ಲಿ ಬ್ರಾಹ್ಮಣರೆಷ್ಟು? ಉ-೧೧, ೮ ಪೈಕಿ ಬ್ರಾಹ್ಮಣರು ೯

ಪ್ರ—ಇದಕ್ಕಾಗಿ ಒಟ್ಟು ಖರ್ಚು ಎಷ್ಟು, ಆ ಪೈಕಿ ಬ್ರಾಹ್ಮಣೇತರರಿಗಾಗಿಯೇ ಎಷ್ಟು? ಉ—ಒಟ್ಟು ಖರ್ಚು ೮೩೪೦ ರೂ. ಬ್ರಾಹ್ಮಣೇತರರಿಗೆ ೧೫.೦ ರೂ

ಪ್ರ—ಸರ್ಕಾರದಿಂದಲೂ ಸ್ಥಳೀಯ ಸಂಸ್ಥೆಗಳಿಂದಲೂ ಬರುತ್ತಿರುವ ಗ್ರಾಂಟುಗಳೆಷ್ಟು? ಉ—ಕಾಲಿಯಾನ ಸರ್ಕಾರದಿಂದ ೪೯೬೦ ರೂ. ಸ್ಥಳೀಯಸಂಸ್ಥೆಗಳಿಂದ ೩೮೩೫ ರೂ.

ಪ್ರ—ಬ್ರಾಹ್ಮಣರಿಗಾಗಿಯೇ ಇಷ್ಟು ಹಣವನ್ನು ಖರ್ಚುಮಾಡುತ್ತಿರುವುದು ಸರಿಯೇ?

ಅಧ್ಯಕ್ಷರು—ಈ ಪ್ರಶ್ನೆಯನ್ನು ತಳ್ಳಿಹಾಕಿದ್ದೇನೆ.

ಮೈಸೂರು, ಬೆಂಗಳೂರು ಮತ್ತು ಕೆ. ಜಿ. ಎಫ್ ಗಳಲ್ಲಿರುವ ಹಂದಿ ಮೈಸೂರಿನವರಿಗೂ, ಒಳಗ್ರಾಮದ ಮೈಸೂರಿನವರಲ್ಲದವರಿಗೂ, ಹಣ ಸಾಲ ಕೊಡಲು ಲೈಸನ್ಸ್ ಕೊಡಲಾಗಿದೆಯೆಂದೂ, ಹೊರಗಿನ ಲೈಸನ್ಸುದಾರರು ಶೇಕಡ ೬೦ ರಿಂದ ೧೫೦ ರವರೆಗೆ ಬಡ್ಡಿ ತೆಗೆದುಕೊಳ್ಳುವ ವಿಚಾರ ಸರ್ಕಾರಕ್ಕಿಲ್ಲವೆಂದೂ, ಶ್ರೀಮತಿ ಕಮಲಾಬಾಯಿಯವರ ಪ್ರಶ್ನೆಗೆ ದಿ॥ ಸರೀಫರವರು ಉತ್ತರ ಹೇಳಿದರು.

ಆಹಾರದ ಸರಬರಾಜಿನ ಬಗ್ಗೆ ಶ್ರೀ ಕೆ. ಆರ್ ಶ್ರೀನಿವಾಸನ್‌ರವರು ಪ್ರಶ್ನೆಗಳನ್ನು ಹಾಕಿ ಉತ್ತರ ಪಡೆದರು. ಶ್ರೀ ಚೆಂಗಲರಾಯ ರೆಡ್ಡಿಯವರು ಹಳ್ಳಿಗಳಲ್ಲಿ ಹಲವರಿಗೆ ರೇಷನ್ ಚೀಟಿಗಳನ್ನು ಇತ್ತಿದ್ದರೂ, ಅವರಿಗೆ ಸರಿಯಾಗಿ ಧಾನ್ಯ ಕೊಡುತ್ತಿಲ್ಲವೆನ್ನುವುದು ತಮ್ಮ ಗಮನಕ್ಕೆ ಬಂದಿದೆಯೇ ಎಂದು ಕೇಳಿದಾಗ ಶ್ರೀ ಸುಂದರರಾಯರು ಉತ್ತರವಿತ್ತು ಧಾನ್ಯದ ಸರಬರಾಜು ಕಡಮೆಯಿಂದ ಹಾಗಾಗಿರಬಹುದು ಎಂದರು.

ಆಕಾಶವಾಣಿ ವ್ಯವಸ್ಥೆ ಬಗ್ಗೆ ಶ್ರೀ ಎ. ಆರ್ ಲಕ್ಷ್ಮಣನವರು ಅನೇಕ ಪ್ರಶ್ನೆಗಳನ್ನು ಕೇಳಿದರು. ದಿ॥ ಮಹಮದ್ ಇಸ್ಮಾಯಿಲ್‌ರವರು ಉತ್ತರವೀಯುತ್ತಾ ಭಾಷಣಗಳಿಗಾಗಿ ಮಾಸಿಯಾನ ೧೦೦೦ ರೂ. ಖರ್ಚು ಮಾಡುತ್ತಿರುವುದಾಗಿಯೂ, ಪ್ರತಿ ಭಾಷಣಕಾರರಿಗೂ ೧೦ ರೂ ಗಳ ಗೌರವ ಸಂಭಾವನೆ ಕೊಡಲಾಗುವುದೆಂದೂ, ಈ ಕಾರ್ಯಕ್ರಮಗಳಿಗಾಗಿಯೇ ಪ್ರತ್ಯೇಕ ಡೈರೆಕ್ಟರ್ ಇಲ್ಲವೆಂದೂ ತಿಳಿಸಿದರು. ಹಾಲಿ ಇರುವ ಡೈರೆಕ್ಟರೇ ಮೈಸೂರು ಪುರಸಭಾಧ್ಯಕ್ಷರಾಗಿರುವುದರಿಂದ ಹೆಚ್ಚು ಗಮನ ಆಕಾಶವಾಣಿ ಕಡೆ ಕೊಡಲು ಸಾಧ್ಯವಾಗುತ್ತಿಲ್ಲವೇ, ಶ್ರೀ ಬಿ ಮುನಿಯಪ್ಪನವರು ಹಾಕಿದ ಪ್ರಶ್ನೆಗೆ ಈ ಕಾರಣಗಳನ್ನೆಲ್ಲಾ ಗಮನದಲ್ಲಿಟ್ಟುಕೊಂಡೇ ಬೇರೆ ವ್ಯವಸ್ಥೆ ಮಾಡಬೇಕೆಂದಿರುತ್ತೇವೆ ಎಂದು ಸಚಿವರು ಉತ್ತರವಿತ್ತರು.

ನಿಲುವಳಿ ಸೂಚನೆ

ಬೆಂಗಳೂರಿನ "ಮೆಟ್ರೋ ಪ್ಯಾಲಿಯಂ ಆಯಿಲ್ ತಯಾರಿಕಾ" ಕಂಪನಿಯವರು ಲಾಕ್ ಔಟ್ ಮಾಡಿರುವುದರಿಂದ ಕೆಲಸಗಾರರಿಗೆ ಉಂಟಾಗಿರುವ ತೊಂದರೆಯನ್ನು ಪರಿಶೀಲಿಸಲು ಶ್ರೀ ಕೆ.ಸಿ ರೆಡ್ಡಿಯವರು ಸೂಚಿಸಿದ್ದ ನಿಲುವಳಿ ಸೂಚನೆಯನ್ನು ನಾಳೆ ತೆಗೆದುಕೊಳ್ಳುವುದಾಗಿ ಅಧ್ಯಕ್ಷರು ತಿಳಿಸಿದರು.

ಸಂಡೂರು ಸಂಸ್ಥಾನದಲ್ಲಿ ಚುನಾಯಿತ ಮಂತ್ರಿ

ಸಂಡೂರು ಸಂಸ್ಥಾನದ ಮಹಾರಾಜರು ಸಿಂಹಾಸನಾರೋಹಣ ಮಾಡಿದ ೧೯ ನೇ ವಾರ್ಷಿಕೋತ್ಸವದ ಸಂದರ್ಭದಲ್ಲಿ ತಮ್ಮ ಮಂತ್ರಿಮಂಡಲಕ್ಕೆ ಒಬ್ಬ ಜನಪ್ರಿಯ ಸಚಿವರನ್ನು ಶಾಸನ ಸಭೆಯು ಚುನಾಯಿಸಬಹುದೆಂದು ಆಜ್ಞೆ ಇತ್ತಿದ್ದಾರೆ ಅದರಂತೆ ಶಾಸನಸಭೆ ಒಂದನೆ ತಾ॥ ಸೇರಿ ಶ್ರೀ ಎಸ್ ಬಿ ಪರಾಫ್‌ರವರನ್ನು ಮಂತ್ರಿಗಳಾಗಿ ಚುನಾಯಿಸಿರುತ್ತದೆ

ಪ್ರಜಾ ಪ್ರತಿನಿಧಿ ಸಭೆಗೆ ಯಾಸಗೀ ಅಧ್ಯಕ್ಷರೇ?

ಮೈಸೂರು ಪ್ರಜಾ ಪ್ರತಿನಿಧಿ ಸಭೆಯ ಖಾಸಗೀ ಅಧ್ಯಕ್ಷರನ್ನು ಹೊಂದುವ ಹಕ್ಕನ್ನು ಶ್ರೀಮನ್ಮಹಾರಾಜರು ದಯಪಾಲಿಸಲು ನಿರ್ಧರಿಸಿದ್ದಾರಾಗಿ ಮದ್ರಾಸಿನ ಪತ್ರಿಕೆಯೊಂದು ವರದಿಮಾಡಿದೆ ಆದರೆ ಆ ಅಧ್ಯಕ್ಷರು ಚುನಾಯಿಸಲ್ಪಡುವರೋ ಅಥವಾ ನಾಮಕರಣ ಮಾಡಲ್ಪಡುವರೋ ಎಂಬ ವಿಷಯ ಹೊರಬಿದ್ದಿಲ್ಲವೆಂದೂ ವರದಿಯಾಗಿದೆ.

ಪ್ರೈಮರಿ ಉಪಾಧ್ಯಾಯರ ಮುಷ್ಕರದ ಸೂಚನೆ

ಸ್ವಂ ಸು.] ಬೆಂಗಳೂರು ೩.

ಬೆಂಗಳೂರು ಸಿಟಿ ರೇಂಜ್ ಪ್ರೈಮರಿ ಉಪಾಧ್ಯಾಯರುಗಳು ತಮಗೆ ಕನಿಷ್ಟಪಕ್ಷ ೩೦ ರೂ ಸಂಬಳ, ೧೫ ರೂ ತುಟ್ಟಿಭತ್ಯ ಸಿಕ್ಕದಿದ್ದರೆ ಇದೇ ೩೧ ನೇ ತಾ॥ ನಿಂದ ಮುಷ್ಕರ ಆರಂಭಿಸುವುದಾಗಿ ಉಪಾಧ್ಯಾಯ ಸಂಘದವರು ಪ್ರಕಟಿಸಿದ್ದಾರೆ

ಅಂತ್ಯ ಹೋರಾಟಕ್ಕಾಗಿ ಯುವಕರ ಸೂಚನೆ

ಬ್ರಿ॥ ನಿಯೋಗ ಮಂಡಳಿದ ಸಲಹೆಯನ್ನು ಪೂರ್ಣವಾಗಿ ನಿರಾಕರಿಸಿ ಭಾರತದಲ್ಲಿ ಬ್ರಿ॥ ಆಡಳಿತವನ್ನು ಕೊನೆಗಾಣಿಸಬೇಕೆಂಬ ನಿರ್ಣಯವನ್ನು ಅ॥ ಭಾ॥ ಯುವಕ ಸಂಘದ ಅಧ್ಯಕ್ಷರು ಬೊಂಬಾಯಿನ ಎ. ಐ. ಸಿ. ಸಿ. ಸಭೆಗೆ ಕಳಿಸಿದ್ದಾರೆ

ನಿರ್ಣಯಗಳು

ಹರಿಜನರ ಉದ್ಧಾರಕ್ಕಾಗಿ ೧೦ ಲಕ್ಷರೂಗಳನ್ನು ನಿಗದಿಮಾಡಬೇಕೆಂಬ ನಿರ್ಣಯವು ಶಿಕ್ಷಣ ಸಭೆಯಲ್ಲಿ ಅಂಗೀಕಾರವಾಯಿತು

"ಹೇಬಿಯಸ್ ಕಾರ್ಪಸ್"

ಪ್ರಿಟಿಷ್ ಪ್ರಾಂತ್ಯಗಳಲ್ಲಿರುವಂತೆ ಹೇಬಿಯಸ್ ಕಾರ್ಪಸ್ ಕಾನೂನನ್ನು ಮೈಸೂರಿನಲ್ಲಿಯೂ ಜಾರಿಗೆ ತಂದು ಅಧಿಕಾರವನ್ನು ಹೈಕೋರ್ಟಿಗೆ ಕೊಡಬೇಕೆಂಬ ನಿರ್ಣಯ ಸಭೆಯಲ್ಲಿ ಚರ್ಚೆಯಾಗುತ್ತಿದೆ. ಶ್ರೀ ಎಂ ಎ ಗೋಪಾಲಸ್ವಾಮಿ ಅಯ್ಯಂಗಾರ್ಯರು ಮಾತನಾಡಿ ಯುದ್ಧದ ಸಲುವಾಗಿ ಅಧಿಕಾರಿ ವರ್ಗಕ್ಕೆ ಅನೇಕ ವಿಶೇಷ ಅಧಿಕಾರಗಳು ಕೊಡಲ್ಪಟ್ಟಿರುವುದರಿಂದ ಅವುಗಳು ಸರಿಯಾಗಿ ಬಳಕೆಯಾಗುವ ಬಗ್ಗೆ ಸಾರ್ವಜನಿಕರಿಗೆ ರಕ್ಷಣೆ ಅವಶ್ಯವೆಂದೂ ತಿಳಿಸಿದರು. ಶ್ರೀ ಬಿ ಮುನಿಯಪ್ಪನವರೂ ನಿರ್ಣಯ ಪರವಾಗಿ ಮಾತನಾಡಿದರು. ಶ್ರೀ ಸಿ. ಸುಬ್ರಹ್ಮಣ್ಯ ರವರು ನಿರ್ಣಯಕ್ಕೆ ತಮ್ಮ ಪೂರ್ಣ ಬೆಂಬಲವಿದೆಯೆಂದೂ ಹೇಳಿ, ಈಗ ಹೈಕೋರ್ಟಿಗೆ ಅಪೀಲು ಮಾಡಿಕೊಳ್ಳುವ ಅವಕಾಶವಿದೆಯೆಂದರು ನಿರ್ಣಯ ಚರ್ಚೆಯಾಗುತ್ತಿದೆ.

ಸಾಧ್ವಿ

ತಾ॥ ೪-೭-೪೬, ಗುರುವಾರ

ಬಿಳಿಯರ ವರ್ಣಯುದ್ಧ

ದಕ್ಷಿಣ ಆಫ್ರಿಕದ ಬಿಳಿಯರು ಒಂದು ದೊಡ್ಡ ವರ್ಣ ಸಂಗ್ರಾಮವನ್ನೇ ಹೂಡಿರುವಂತಿದೆ. ಬಣ್ಣದ ಜನರ ಮೇಲೆ ಅವರು ನಡೆಸುವ ಧಾಳಿಗೆ ಮೇರೆ ಮಿತಿಗಳೇ ಇಲ್ಲದಿರುವಂತಿದೆ. ಕಾನೂನು ಕಟ್ಟಳೆಗಳೆಲ್ಲವೂ ಮೂಲೆಯಾ ಪಾಲಾಗಿವೆ. ಆ ದೇಶವು ಪುಂಡು ಪೋಕರಿಗಳ ತವರೂರಾಗಿದೆ. ಆವರುಗಳು ಭಾರತೀಯರ ಮೇಲೂ ಇತರ ಏಷ್ಯಾಖಂಡದ ಜನರ ಮೇಲೂ ನಡೆಸುವ ದುಂಡಾವರ್ತಿಯನ್ನು ಕೇಳುವವರೇ ಇಲ್ಲದಂತಾಗಿದೆ. ಅಲ್ಲಿನ ಸರ್ಕಾರವೂ ಸಹ ಈ ದುಷ್ಕೃತ್ಯಗಳನ್ನು ನೋಡಿಕೊಂಡು ಕಣ್ಣು ಮುಚ್ಚಿ ಕುಳಿತಿರುವಂತಿದೆ.

ಪೋಲೀಸ್ ಕಾನ್‌ಸ್ಟೇಬಲ್ ಕೃಷ್ಣಸ್ವಾಮಿ ಪಿಳ್ಳೆಯ ಮೇಲೆ ದ॥ ಆಫ್ರಿಕದ ಬಿಳಿಯರು ನಡೆಸಿದ ದೌರ್ಜನ್ಯದಿಂದ ಆತನು ತನ್ನ ಪ್ರಾಣವನ್ನೇ ಕಳೆದುಕೊಳ್ಳಬೇಕಾಯಿತು. ಅಲ್ಲಿನ ಬಿಳಿಯ ಜನರ ವರ್ಣದ್ವೇಷದ ಪರಮಾವಧಿಯನ್ನು ಇದು ಸೂಚಿಸುತ್ತದೆ. ಹೀಗೆ ಇನ್ನೂ ನೂರಾರು ಜನರು ಅವರ ಅಟ್ಟಹಾಸಗಳಿಗೆ ಬಲಿಯಾಗಿ ಚಿತ್ರವಿಚಿತ್ರವಾದ ಹಿಂಸೆಗಳಿಗೆ ಗುರಿಯಾಗುತ್ತಿದ್ದಾರೆ. ಬೀದಿಯಲ್ಲಿ ಹೋಗುತ್ತಿರುವ ಯಾವ ವರ್ಣೀಯನಾದರೂ ಸಿಕ್ಕಿದ ಭಾರತೀಯರನ್ನು ಹಿಡಿದು ಹೊಡೆದು ಹಿಂಸಿಸಬಹುದೆಂಬ ದುರಹಂಕಾರವು ಅವರಿಗೆ ಉಂಟಾಗಿದೆ. ಭಾರತೀಯರು ಕಾನೂನು ಬಾಹಿರರಂತೆ ಪರಿಗಣಿಸಲ್ಪಡುತ್ತಿದ್ದಾರೆ. ಇಷ್ಟೆಲ್ಲಾ ನಡೆಯುತ್ತಿದ್ದರೂ ಅಲ್ಲಿನ ಸರ್ಕಾರದವರೂ ಜನರ ನಾಯಕರಾದ ಜನರಲ್ ಸ್ಮಟ್ಸ್‌ರವರೂ ಒಂದು ಕಿರು ಬೆರಳನ್ನು ಎತ್ತದಿರುವುದು ಆಶ್ಚರ್ಯಕರವಾಗಿದೆ.

ಬಣ್ಣದ ಜನರನ್ನು ಸೊಳ್ಳೆಯಂತೆ ಭಾವಿಸಿ ಅವರನ್ನು ಆ ದೇಶದ ಊರು ಕೇರಿಗಳಿಂದ ಹೊರಗೆ ಅಟ್ಟುವ ಶಾಸನವು ಜಾರಿಗೆ ಬಂದಂದಿನಿಂದ ಅದಕ್ಕೆ ವಿರೋಧವಾದ ಪ್ರತಿಭಟನೆಯು ಆಗುತ್ತಿದೆ. ಸಾವಿರಾರು ಮಂದಿಯಲ್ಲಿ ಭಾರತೀಯರು ನೂರೊಂದು ಸತ್ಯಾಗ್ರಹವನ್ನು ಮಾಡುತ್ತಿದ್ದಾರೆ. ಅವರುಗಳಿಗೆ ದಸ್ತಗಿರಿ, ಜುಲ್ಮಾನೆ, ಸಜಾ ಶಿಕ್ಷೆಗಳು ವಿಧಿಸಲ್ಪಡುತ್ತಿವೆ. ಇವು ಸಾಲದೆ ಅಧಿಕ ಇವರ ಪರಿಣಾಮವಾಗಿ ಮದಾಂಧರಾದ ಬಿಳಿಯರು ಭಾರತೀಯರ ಮೇಲೆ ಸಿಕ್ಕಿದಂತೆ ಚಿತ್ರವಿಚಿತ್ರ ಹಿಂಸೆಗಳನ್ನು ಪ್ರಯೋಗಿಸುತ್ತಿದ್ದಾರೆ. ಇದೊಂದು ವರ್ಣ ಯುದ್ಧವಾಗಿಯೇ ಪರಿಣಮಿಸಿದೆ.

ದ॥ ಆಫ್ರಿಕಾ ಸರ್ಕಾರದ ವರ್ತನೆಯನ್ನು ಅಲ್ಲಿನ ಭಾರತೀಯರು ಮಾತ್ರವೇ ಅಲ್ಲದೆ ಭರತಖಂಡದಲ್ಲಿ ಮಹಾತ್ಮ ಗಾಂಧಿಯವರೂ ಇತರ ನಾಯಕರೂ ಮತ್ತು ಸರ್ಕಾರದವರೂ ಸಹ ಪ್ರತಿಭಟಿಸಿದ್ದಾರೆ. ಈ ವಿಷಯದಲ್ಲಿ ಮಿತ್ರರಾಷ್ಟ್ರ ಸಂಘಕ್ಕೆ ದೂರನ್ನು ಸಹ ಕೊಡಲಾಗಿದೆ. ಆದರೆ ಈ ಮಧ್ಯೆ ನಡೆಯುತ್ತಿರುವ ಘೋರ ಕೃತ್ಯಗಳು ಅಸಹನೀಯವಾಗಿವೆ. ಇದೇ ಬಿಳಿಯ ಜನಾಂಗದವರ ಮೇಲೆ ಬಣ್ಣದ ಜನರು ಕಾರ್ಯತಃವಾದ ಪ್ರತಿಭಟನೆಯನ್ನು ತೋರುವ ಸ್ಥಿತಿಯು ಒದಗಿದೆ. ಇದನ್ನು ದ. ಆ. ಬಿಳಿಯರು ಬೇಗ ಅರಿತು ಹೋಗಿ ಸಾಧ್ಯವಾದಷ್ಟು ಸರಿಪಡಿಸಬೇಕಾಗಿದೆಯೆಂದು

ತೂಲಪಳ್ಳಿ ಪಾಳ್ಯದಲ್ಲಿ ಆಹಾರಾಭಾವ

ಜನರು ಬಾಳೆದಿಂಡು, ಸೀಬೆ ಗೆಡ್ಡೆ ತಿನ್ನುತ್ತಿದ್ದಾರೆ

ಸ್ವಂ ವ.] ಮಹಾಯಸಂದ್ರ ೩೯

'ಲೈಫ್' ಎಂಬ ಅಮೇರಿಕನ್ ಪತ್ರಿಕೆಯ ಸುದ್ದಿಗಾರರಾದ ಮಿಸೆಸ್ ಬಾರ್ಕ್ ವೈಟರವರೂ, ಬೊಂಬಾಯಿನ 'ಟೈಮ್ಸ್ ನ್ಯೂಸ್' ಪತ್ರಿಕೆಯ ಸುದ್ದಿಗಾರರೂ, ಶ್ರೀ ಎಂ. ಎಸ್ ರಾಮರಾವ್ ಮತ್ತು ಶ್ರೀ ಎಸ್. ವಿ. ಶಂಕರ್‌ರವರೂ ಕಳೆದ ೨೭ ನೇ ತಾ॥ ಈ ಪ್ರದೇಶಗಳಿಗೆ ಭೇಟಿ ಇತ್ತರು. ಇವರುಗಳು ಇಲ್ಲಿನ ಕಾಂಗ್ರೆಸ್ ಕೆಲಸಗಾರರಾದ ಶ್ರೀ ಎಂ. ಎಸ್. ಶ್ರೀನಿವಾಸಯ್ಯನವರ ಸಂಗಡ ಬೊಮ್ಮೇನಹಳ್ಳಿ, ರಾಮನಹಳ್ಳಿ, ತೂಲಪಳ್ಳಿ ಪಾಳ್ಯ ಮುಂತಾದ ಪ್ರದೇಶಕ್ಕೆ ಭೇಟಿ ಇತ್ತು ಅಲ್ಲಿ ಜನರು ಪಡುತ್ತಿರುವ ಕಷ್ಟಗಳನ್ನು ಕಣ್ಣಾರ ಕಂಡರು. ಹಲವು ಮನೆಗಳನ್ನು ಪ್ರವೇಶಿಸಿ ಅವರಲ್ಲಿರುವ ಆಹಾರ ಪದಾರ್ಥಗಳನ್ನು ಪರಿಶೀಲಿಸಿದರು. ಉಪಯುಕ್ತವಾದ ಹಲವು ಛಾಯಾಚಿತ್ರಗಳನ್ನು ತೆಗೆದುಕೊಂಡರು. ತೂಲಪಳ್ಳಿ ಪಾಳ್ಯದ ದೃಶ್ಯ ಅವರನ್ನು ಚಕಿತರನ್ನಾಗಿ ಮಾಡಿತು. ಮುನಿಯಪ್ಪ, ದಾಸಪ್ಪ, ಲಕ್ಷ್ಮಣ್ಣ, ಮೂಡ್ಲಗಿರಯ್ಯ, ಚಂದ್ರಗಿರಿ ಮುಂತಾದವರುಗಳು ಮನೆ ಮಂದಿ ಬಾಳೆದಿಂಡು, ಪಾಲೆಸೊಪ್ಪು, ಸೀಬೆಗೆಡ್ಡೆ ಇವುಗಳನ್ನು ತಿನ್ನುತ್ತಾ ಕುಳಿತಿದ್ದುದನ್ನು ಅವರುಗಳು ಫೋಟೋ ತೆಗೆದುಕೊಂಡರು. ಆಗಂತುಕರೆಲ್ಲಾ ರಾತ್ರಿ ತುಮಕೂರಿಗೆ ತೆರಳಿದರು.

ಗಾಂಧಿ ಸೇನಾ ಸಂಘ

ಮೈಸೂರು ೪

ಗಾಂಧಿ ಜಯಂತಿ ಸಂದರ್ಭದಲ್ಲಿ ಏರ್ಪಡಿಸಿರುವ ಸೂತ್ರಯಜ್ಞದಲ್ಲಿ ಸ್ವತಂತ್ರವಾಗಿ ನೂಲುವವರು ತಮ್ಮ ಹೆಸರುಗಳನ್ನು ಈ ಕೆಳಗೆ ಕಂಡ ಕಡೆಗಳಲ್ಲಿ ಕೊಡಬೇಕೆಂದು ಕಾರ್ಯದರ್ಶಿಗಳು ಪ್ರಾರ್ಥಿಸುತ್ತಾರೆ.

ಸಂಘದ ಕಛೇರಿ, "ಪೌರವಾಣಿ ಕಾರ್ಯಾಲಯ" ೧೬೦೪, ಲಕ್ಷ್ಮೀಪುರಂ. ೨. ದೇಶೀಯ ವಿದ್ಯಾಶಾಲಾ, ಕೃಷ್ಣಮೂರ್ತಿಪುರ. ೩. ಅಭಯ ಆಯುರ್ವೇದಿಕ್ ರಿಸರ್ಚರ್ಸ್, ಚಾಮರಾಜಪುರಂ ೪. ವಿದ್ಯಾರ್ಥಿ ಪರಸ್ಪರ ಸಹಾಯಸಂಘ, ಕ್ಯಾನ್ಸ್ ಡೌನ್ ಬಿಲ್ಡಿಂಗ್ಸ್. ೫. 'ಕಲಾಭವನಂ' ಚಾಮುಂಡಿಪುರಂ. ೬. "ಯುನೈಟೆಡ್ ಆಟೋಮೊಬೈಲ್ಸ್" ಸಯ್ಯಾಜಿರಾವ್ ರೋಡ್. ೭. ಮಹಿಳಾಸದನ, ದೇವರಾಜ ಮೊಹಲ್ಲಾ. ೮. ವನಿತಾಸದನ, ಜಯನಗರ ೯. ತಿಲಕ್‌ಸಂಘ, ಒಂಟಿಕೊಪ್ಪಲು. ಸೂತ್ರಯಜ್ಞದ ವಿವರ ಮುಂದೆ ಕೊಡಲಾಗುವುದು.

ಮಹಾತ್ಮರೂ ಸಹ ಹೇಳಿದ್ದಾರೆ. ಬ್ರಿಟಿಷ್ ಸಾಮ್ರಾಜ್ಯಕ್ಕೆ ಸೇರಿದ ಒಂದು ದೇಶದಲ್ಲಿ ಅದೇ ಸಾಮ್ರಾಜ್ಯದ ಮತ್ತೊಂದು ಕಡೆಯ ಜನರಿಗೆ ಆಗುತ್ತಿರುವ ಈ ಅಪಚಾರವು ಆ ಸಾಮ್ರಾಜ್ಯದ ಟೊಳ್ಳುತನವನ್ನು ವ್ಯಕ್ತಪಡಿಸುತ್ತದೆ. ಬ್ರಿಟಿಷ್ ಸರ್ಕಾರದವರೂ ಮತ್ತು ಜನಾಂಗ ಸಮಿತಿಯವರೂ ಕೂಡಲೇ ಈ ಅನ್ಯಾಯದ ಶಾಸನವನ್ನು ರದ್ದುಮಾಡಿಸಿ ಈ ದುರಂತ ಪ್ರಕರಣವನ್ನು ಕೊನೆಗಾಣಿಸುವುದು ಯುಕ್ತವಾಗಿದೆ

ಗೂಳಿಯೊಡನೆ ಹೋರಾಡುವ ಹೆಂಗಸು

ಸ್ಪೇನ್ ದೇಶವು ಗೂಳಿ ಕಾಳಗಕ್ಕೆ ಪ್ರಸಿದ್ಧವಾದುದಷ್ಟೆ. ಈಚೆಗೆ ಈ ಆಟದ ಮಹತ್ವ ಕಡಿಮೆಯಾಗಿ ಹೋಗಿದೆ. ಆದರೆ ಗೂಳಿ ಕಾಳಗದಲ್ಲಿ ಪ್ರಸಿದ್ಧಳಾಗಿರುವ ಒಬ್ಬ ಹೆಂಗಸಿನಿಂದ ಈ ಕ್ರೀಡಾಕಲೆಗೆ ವಿನೋದ ಸಿಕ್ಕುತ್ತಿದೆ. ಈಕೆ ಪೆರುದೇಶದ ಹೆಂಗಸು. ಕುದುರೆಯ ಮೇಲೆ ಕುಳಿತುಕೊಂಡು ಗೂಳಿಯೊಡನೆ ಕಾಳಗ ನಡೆಸುತ್ತಾಳೆ. ಅದಕ್ಕಾಗಿ ಅವಳಿಗೆ ೪,೦೦,೦೦೦ ರೂಪಾಯಿ ಪ್ರತಿಫಲ ದೊರೆಯುತ್ತದೆ. ನೆಲದಮೇಲೆ ನಿಂತು ಗೂಳಿಯೊಡನೆ ಹೋರಾಡಬೇಕೆಂದು ಈಕೆಯ ಅಪೇಕ್ಷೆ. ಆದರೆ ಸ್ಪೇನಿನಲ್ಲಿ ಇಂಥದಕ್ಕೆ ಕಾನೂನಿನ ಅವಕಾಶವಿಲ್ಲ.

ಬಿಸಿಲಿನ ತಾಪದಿಂದ ಒಂದೇ ದಿನ ೨೫ ಮರಣ

ಲಾಹೋರಿನಲ್ಲಿ ಬಿಸಿಲಿನ ತಾಪ ಅಧಿಕವಾಗಿದೆ. ಕಳೆದ ವಾರ ಒಂದೇ ದಿನದಲ್ಲಿ ೨೫ ಮಂದಿ ಸತ್ತರೆಂದು ವರದಿ ಮಾಡಿದ್ದಿದೆ. ಆದರೆ ಈಚೆಗೆ ಉತ್ತರದಿಂದ ತಣ್ಣನೆಯ ಗಾಳಿ ಬೀಸುತ್ತಿರುವುದರಿಂದ ಜನರ ಗಾಬರಿ ಸ್ವಲ್ಪ ಶಮನಗೊಂಡಿದೆ.

ಇಂಗ್ಲೀಷು ದ್ವಿತೀಯ ಭಾಷೆಯಾಯಿತು

ಮದ್ರಾಸ್ ಪ್ರಾಂತ್ಯದಲ್ಲಿ ಇದುವರೆವಿಗೆ ಪ್ರಥಮ ಭಾಷೆಯಾಗಿ ಇದ್ದ ಇಂಗ್ಲೀಷನ್ನು ಇನ್ನು ಮುಂದೆ ದ್ವಿತೀಯ ಭಾಷೆಯನ್ನಾಗಿ ಪರಿಗಣಿಸಬೇಕೆಂದು ಕಾಂಗ್ರೆಸ್ ಸರ್ಕಾರದ ಆಜ್ಞೆ ಹೊರಬಿದ್ದಿದೆ. ಪ್ರಾಂತೀಯ ಭಾಷೆಗಳೇ ಇತರ ಪ್ರಥಮ ಭಾಷೆಯಾಗುವಂತೆ ಆಜ್ಞೆಯಲ್ಲಿ ತಿಳಿಸಲಾಗಿದೆ.

ರಣಜಿತ್

5-7-46 ರಿಂದ

ಬಹು-ಬೇಟೆಯ

ಪಾತ್ರ:—

* ನಿರ್ಮಲ, * ಮಂಜುಳ

* ಕರನ್ ದಿವಾನ್, * ಯಾಕೂಬ್

ಪ್ರತಿದಿನ ೩ ಆಟಗಳು

At NEW OPERA TALKIES

2nd WEEK

From 3—7—46

'COBRA - - WOMAN'

in Technicolor.

ಮುಂದಿನ ಬದಲಾವಣೆ

ಲವಂಗಿ

(ತಮಿಳು)

ಪಾತ್ರ:—

* ವೈ. ವಿ. ರಾವ್, * ಕುಮಾರಿ ರುಕ್ಮಿಣಿ ಮುಂತಾದವರು

Edited, printed and published by ... at the Sadhvi Press ... D Subiah Road, Mysore.

ಗೋಧಿ ಹಿಟ್ಟಿನ ಬೆಲೆ ಇಳಿಯಿತು

ಗೋಧಿ ಉಪಯೋಗವನ್ನು ಹೆಚ್ಚಿಸುವ ಸಲುವಾಗಿ ಗೋಧಿಹಿಟ್ಟಿನ ಬೆಲೆಯನ್ನು ಮಣ ಒಂದಕ್ಕೆ ೧೧ ರೂ ಗಳಿಂದ ರೂ. ೧೦ಕ್ಕೆ ಇಳಿಸಿರುವುದಾಗಿ ಮದ್ರಾಸ್ ಸರ್ಕಾರ ಪ್ರಕಟಿಸಿದೆ.

ಸರವಾಕ ದ್ವೀಪ ಬ್ರಿಟನ್ನಿಗೆ ಸೇರಿತು

ಬೋರ್ನಿಯೋವಿಗೆ ವಾಯುವ್ಯ ದಿಕ್ಕಿನಲ್ಲಿರುವ ಸರವಾಕ ದ್ವೀಪವು ಇನ್ನು ಮುಂದೆ ಬ್ರಿಟಿಷ್ ಕಾಲೊನಿಯಾಗಿರುವುದೆಂದು ಪ್ರಕಟಿಸಲಾಗಿದೆ. ಇದುವರೆವಿಗೆ ಇದು ಒಬ್ಬ ಆಂಗ್ಲ ರಾಜರ ಅಧೀನದಲ್ಲಿದ್ದಿತು. ಇದರ ವಿಸ್ತೀರ್ಣ ೫೦ ಸಹಸ್ರ ಚದುರ ಮೈಲಿಗಳು.

ಸರ್ ಮೊದಲಿಯಾರರಿಗೆ ಹೊಸ ಹುದ್ದೆ

ಸಂಯುಕ್ತ ರಾಷ್ಟ್ರ ಸಂಸ್ಥೆಯಲ್ಲಿ ಸರ್ ಎ. ರಾಮಸ್ವಾಮಿ ಮೊದಲಿಯಾರರಿಗೆ ಒಂದು ಭಾರಿ ಹುದ್ದೆ ಸಿಗುವ ಸಂಭವವಿದೆಯೆಂದು ಹೇಳಲಾಗಿದೆ.

ಬೊಂಬಾಯಿ ಗವರ್ನರ್‌ಗಿರಿಗೆ ಅಕ್ಬರ್ ಹೈದರಿಯವರು

ಬೊಂಬಾಯಿ ಗವರ್ನರಾದ ಸರ್ ಜಾನ್ ಕೋಲ್‌ವಿಲ್ಲಿಯವರು ಸದ್ಯದಲ್ಲೇ ರಜ ತೆಗೆಯಲಿದ್ದಾರೆಂದೂ, ಹಾಗೇನಾದರೂ ಆದರೆ ಅವರ ಸ್ಥಾನಕ್ಕೆ ಸರ್ ಅಕ್ಬರ್ ಹೈದರಿಯವರು ನೇಮಕವಾಗಬಹುದೆಂದೂ ದೆಹಲಿಯಲ್ಲಿ ಕೇಳಲಾಗುತ್ತಿದೆ.

ಕಾಶ್ಮೀರ ಮಹಾರಾಜರಿಂದ ಆಜಾದರಿಗೆ ಪತ್ರ

ಮೌ॥ ಆಜಾದರವರು ಕಾಶ್ಮೀರಕ್ಕೆ ತೆರಳಕೂಡದೆಂದು ವಿಧಿಸಿದ್ದ ಪ್ರತಿಬಂಧಕಾಜ್ಞೆ, ಶೇಕ್ ಅಬ್ದುಲ್ಲಾರವರ ಬಂಧನ ಮತ್ತು ಶ್ರೀ ನೆಹರು ಬಂಧನ ವಿದ್ಯಮಾನಗಳ ಬಗ್ಗೆ ವಿವರವಾಗಿ ಕಾಂಗ್ರೆಸ್ ಅಧ್ಯಕ್ಷ ಆಜಾದರು ಕಾಶ್ಮೀರದ ಅರಸರಿಗೆ ಬರೆದಿದ್ದ ಪತ್ರಕ್ಕೆ ಅವರು ಧೀರ್ಘವಾದ ವಿವರಣೆಯನ್ನು ಒಳಗೊಂಡ ಉತ್ತರವನ್ನು ಕಳಿಸಿರುವರೆಂದು ಗೊತ್ತಾಗಿದೆ.

ಗೌರಿಶಂಕರ್

ಸರ್ವ ಶ್ರೇಷ್ಠವಾದ ಈ ಶಿಖರವು ಹಿಮಾಲಯದಲ್ಲಿದೆ ಎಂಬ ಅಂಶ ತಮಗೆ ಗೊತ್ತಿರಬಹುದು. ಆದರೆ, ಬಹಿಷ್ಕೆ ಸಂತಾನ ಹುಟ್ಟಿಸೋಣಿನ ದೆಸೆಯಿಂದ ಮಕ್ಕಳಿಲ್ಲದೇ ಇರತಕ್ಕವರಿಗೆ ಸರ್ವ ಶ್ರೇಷ್ಠವಾದ ಸಾಧನವೆಂದು ಎಂಥಿತ್ತೀಳು ವರ್ಗಗಳಿಂದ ಖ್ಯಾತಿಕವಾದ "ಸಂತಾನ ಸಿಂಧೂರ" ಎಂಬ ಅದ್ಭುತ ಭಸ್ಮವು ಹಿಮಾಲಯದಿಂದ ಮೈಸೂರಿಗೆ ಯಾವಾಗ ಬಂತು, ಹೇಗೆ ಬಂತು, ಇಲ್ಲಿಂದ ಹೊರಟು ಯಾವ್ಯಾವ ಮನೆಗಳಲ್ಲಿ, ಯಾಕ್ಯಾವ ಊರುಗಳಲ್ಲಿ ಜೀವರಲ್ಲಿ ಬುಟ್ಟಿದೆ, ಎಂಥೆಂಥಾ ದಾತ್ಯ್ರದ ಪ್ರಶಂಸೆ ಪಡೆದಿದೆ, ಇತ್ಯಾದಿ ವಿಷಯಗಳು ಗೊತ್ತಿರಲಾರದು. ಗೊತ್ತಾಗಬೇಕಾದರೆ ಪತ್ತೆದಾರಿ ಪುಟಗಳ ಕ್ಯಾಟಲಾಗ್ ಬಿ ಉಚಿತವಾಗಿ ಬರೆದರೆ ಬಟ್ಟೆ ರವಾನೆ

ಎ. ರಾಮಸ್ವಾಮಿ ಅಯ್ಯಂಗಾರ್

ಪ್ರೊಪ್ರೈಟರ್, "ಸಂತಾನ ಸಿಂಧೂರ" ಆಫೀಸ್, ಅಂಚೆ, ಯುಳಂದೂರು.

ಫೋನ್ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ ೩ ಕಾಸು

ಸಂಪುಟ ೪] ಶುಕ್ರವಾರ ೫—೭—೪೬ [ಸಂಚಿಕೆ ೫೫

ಅಮೆರಿಕದ ಮೇಲೆ — ರಷ್ಯದ ಆಪಾದನೆ

ಉಪಾಧ್ಯಾಯರುಗಳ ಸಂಬಳ ಹೆಚ್ಚಿಸಬೇಕು

ಸ್ವಂ. ಸು.] ಬೆಂಗಳೂರು ೪

ಮಾಧ್ಯಮಿಕ ಶಾಲಾ ಉಪಾಧ್ಯಾಯರುಗಳ ಕನಿಷ್ಠ ಸಂಬಳವನ್ನು ಏರಿಸಿ ಗಳಿಗೆ ಹೆಚ್ಚಿಸಬೇಕೆಂಬ ನಿರ್ಣಯವು ಇಂದು ಶಾಸನ ಸಭೆಯಲ್ಲಿ ಅಂಗೀಕಾರವಾಯಿತು.

ಹೈಕೋರ್ಟುಗಳಿಗೆ ಹೇಬಿಯಸ್ ಕಾರ್ಪಸ್ ಅಧಿಕಾರ ಕೊಡಬೇಕೆಂದು ಶ್ರೀ ಕೆ. ಚೆಂಗಲರಾಯರೆಡ್ಡಿಯವರ ನಿರ್ಣಯವು ಯಾವ ವಿರೋಧವೂ ಇಲ್ಲದೆ ಅಂಗೀಕಾರವಾಯಿತು. ಸರ್ಕಾರಿ ಸದಸ್ಯರು ತಟಸ್ಥರಾಗಿದ್ದರು. ನಿರ್ಣಯದ ಬಗ್ಗೆ ತಮಗೆ ಸಹಾನುಭೂತಿ ಇದೆಯೆಂದೂ, ಸರ್ಕಾರದವರು ಇದನ್ನು ಸಹಾನುಭೂತಿಯಿಂದ ಪುನರ್ವಿಮರ್ಶಿಸುವರೆಂದು ಶ್ರೀ ಪುಲ್ಲರೆಡ್ಡಿಯವರು ಭರವಸೆ ಇತ್ತರು.

ದಕ್ಷತಾ ತನಿಖೆ ಡೈರೆಕ್ಟರ್

ಆರ್ಥಿಕಾಭಿವೃದ್ಧಿಯ ಕಮೀಷನರಾದ ಶ್ರೀ ಜೆ. ಅಪ್ಪಾಜಿಗೌಡರನ್ನು ಎಫಿಷಿಯೆನ್ಸಿ ಆಡಿಟ್ ಡೈರೆಕ್ಟರಾಗಿಯೂ, ಆರ್ಥಿಕ ಸಲಹಾ ಮಂಡಳಿಯ ಸಹಕಾರ್ಯದರ್ಶಿಗಳಾದ ಶ್ರೀ ಎಂ. ಮಾಧವರಾಯರನ್ನು ಆರ್ಥಿಕಾಭಿವೃದ್ಧಿಯ ಕಮೀಷನರನ್ನಾಗಿಯೂ ನೇಮಿಸಲಾಗಿದೆ.

ಪ್ರೊಫೆಸರುಗಳ ವರ್ಗ

ಬೆಂಗಳೂರು ಇಂಟರ್ ಮೀಡಿಯೆಟ್ ಕಾಲೇಜ್ ಪ್ರಿನ್ಸಿಪಾಲರಾದ ಶ್ರೀ ಎಲ್. ನಾರಾಯಣರನ್ನು ಸೆಂಟ್ರಲ್ ಕಾಲೇಜಿನ ಜಿಯಾಲಜಿ ಪ್ರೊಫೆಸರಾಗಿಯೂ, ಡಾ|| ಸಿ. ಮಾತ್ಸುರನವರನ್ನು ಇಂಟರ್ ಮೀಡಿಯೆಟ್ ಕಾಲೇಜಿನ ಪ್ರಿನ್ಸಿಪಾಲರನ್ನಾಗಿಯೂ ನೇಮಿಸಲಾಗಿದೆ.

—

ಸಚಿವರ ಪ್ರವಾಸ

ವ್ಯವಸಾಯ ಸಚಿವರಾದ ಶ್ರೀ ಎಂ. ಸಾಹುಕಾರ್ ಚನ್ನಯ್ಯನವರು ಮೈಸೂರು ಜಿಲ್ಲೆಯಲ್ಲಿ ನಾಳೆಯಿಂದ ೯ ನೇ ತಾ|| ವರೆಗೆ ಪ್ರವಾಸ ಮಾಡುವರು.

ಕಾವಲುಗಾರ ಸರ್ಕಾರ ಅಧಿಕಾರಕ್ಕೆ ಬಂದು

ಮೈಸೂರಿನ ಹಳೆ ಮಂತ್ರಿಮಂಡಲದ ಸದಸ್ಯರೆಲ್ಲಾ ಮೊನ್ನೆ ದಿನ ತಮ್ಮ ರಾಜೀನಾಮೆಗಳನ್ನು ಸಲ್ಲಿಸಿದರು. ಕೇರ್‌ಟೇಕರ್ ಸರ್ಕಾರಕ್ಕೆ ಸೂಚಿತವಾಗಿರುವ ಸದಸ್ಯರುಗಳು ನಿನ್ನೆ ದಿನ ಬೆಳಗ್ಗೆ ಪ್ರಮಾಣ ವಚನ ಸ್ವೀಕರಿಸಿ ಅಧಿಕಾರ ವಹಿಸಿಕೊಂಡರು. ನಿನ್ನೆ ಸಂಜೆ ಹೊಸ ಮಂತ್ರಿಮಂಡಲದ ಸಭೆ ಜರುಗಿತು — —

ಹಿಂದೀ ತರಗತಿ ಆರಂಭ

ರಾಜಧಾನಿಯ ಚಿಕ್ಕಪೇಟೆ ಆರ್ಯವೈಶ್ಯ ವಿದ್ಯಾರ್ಥಿನಿಲಯದಲ್ಲಿ ಹಿಂದೀ ತರಗತಿ ಯೊಂದರ ಆರಂಭೋತ್ಸವವು ನಿನ್ನೆ ಸಂಜೆ ಶ್ರೀ ಪಾರ್ಥನಾರಾಯಣ ಪಂಡಿತರಿಂದ ನೆರವೇರಿಸಲ್ಪಟ್ಟಿತು. ಹಿಂದೀ ಕಲಿಯಲು ಇಚ್ಛಿಸುವವರು ಈ ತರಗತಿಗಳಿಗೆ ಸೇರ ಬಹುದಾಗಿದೆ. ಇವರ ಕಾಲ ಸಂಜೆ ೭ ರಿಂದ ೮ ರ ವರೆಗೆ.

ಮುಮ್ಮಡಿ ಕೃಷ್ಣರಾಜ ಒಡೆಯರ ಜಯಂತಿ ಉತ್ಸವ

ಶ್ರೀ ಮುಮ್ಮಡಿ ಕೃಷ್ಣರಾಜೇಂದ್ರ ಒಡೆಯರ ಜಯಂತಿ ಉತ್ಸವವು ಇದೇ ೧೬ ನೇ ಮಂಗಳವಾರ ಸಂಜೆ ೬ ಘಂಟೆಗೆ ರಾಮಮೋಹನ ಸ್ಮಾರಕ ಭವನದಲ್ಲಿ ರೆವಿನ್ಯೂ ಮಂತ್ರಿಗಳಾದ ಶ್ರೀ ಹೆಚ್. ಕೃಷ್ಣರೆಡ್ಡಿಯವರ ಅಧ್ಯಕ್ಷತೆಯಲ್ಲಿ ಜರುಗುವುದು.

ಕಾಂಗ್ರೆಸ್ ಪಕ್ಷದವರಿಗೆ ಪ್ರತ್ಯೇಕಸ್ಥಾನಗಳು

ಪುರಸಭಾ ವಿಶೇಷ ಅಧಿವೇಶನ

ಮೈಸೂರು ೫

ರಾಜಧಾನಿಯ ಪುರಸಭೆಯ ವಿಶೇಷ ಅಧಿವೇಶನವು ನಿನ್ನೆ ಮಧ್ಯಾಹ್ನ ೪ ಘಂಟೆಗೆ ಶ್ರೀ ರಾಮಚಂದ್ರರಾವ್ ದೂಂಥೋರೆಯವರ ಅಧ್ಯಕ್ಷತೆಯಲ್ಲಿ ಜರುಗಿತು.

ಕಾಂಗ್ರೆಸ್ ಪಕ್ಷದ ನಾಯಕರಾದ ಶ್ರೀ ಬಿ. ನಾರಾಯಣಸ್ವಾಮಿಯವರು ತಮ್ಮ ಪಕ್ಷದ ೨೩ ಮಂದಿಗೆ ಸಭೆಯಲ್ಲಿ ಪ್ರತ್ಯೇಕ ಸ್ಥಾನವನ್ನು ಒದಗಿಸಿಕೊಡಬೇಕೆಂದು ಅಧ್ಯಕ್ಷರನ್ನು ಪ್ರಾರ್ಥಿಸಿ ಬರೆದಿದ್ದ ಪತ್ರದ ಬಗ್ಗೆ ಚರ್ಚೆ ನಡೆಯಿತು. ಶ್ರೀ ಜನಾರ್ದನಸ್ವಾಮಿಯವರು ಹಿಂದೆ ಪ್ರಿಯಾರಿಟಿ ಪತ್ರದ ಮುನಿಸಿಪಲ್ ಆಕ್ಟಿನಲ್ಲಿ ನಮೂದಿಸಲ್ಪಟ್ಟಿಲ್ಲವೆಂದೂ, ಅಲ್ಲದೆ ಪಕ್ಷದ ಸದಸ್ಯರ ಮೇಲೆ ನ್ಯಾಯಾಸ್ಥಾನದಲ್ಲಿ ಮೊಕದ್ದಮೆಯೊಂದು ಇದೆ. ಇದರಿಂದ ಇದು 'ಸಬ್‌ಜ್ಯುಡೀಸ್' ಆಗುವುದೆಂದೂ, ಸೂಚಿಸಿದರು.

ಅಧ್ಯಕ್ಷರು, ಪ್ರಿಯಾಲೋಚನವನ್ನು ತಳ್ಳಿಹಾಕುತ್ತಾ ಇದು ಪುರಸಭಾ ಆಡಳಿತಕ್ಕೆ ಸಂಬಂಧಪಟ್ಟದ್ದೆಂದೂ, ನ್ಯಾಯಾಸ್ಥಾನದಲ್ಲಿ ಮೊಕದ್ದಮೆ ಇರುವ ವಿಚಾರ ನಮಗೆ ಪ್ರಸ್ತುತವಿಲ್ಲವೆಂದೂ, ಹೇಳಿದರು. ಶ್ರೀಗಳು ಕಾಜಿ ಅಹಮದ್ ಖಾನ್, ಕೆ. ಸಿದ್ದಯ್ಯ, ಇವರುಗಳು ಮಾತನಾಡಿದ ನಂತರ ಶ್ರೀ ನಾರಾಯಣಸ್ವಾಮಿಯವರು ಈ ಬಗ್ಗೆ ನಿರ್ಣಯವನ್ನು ಮಂಡಿಸಿದರು. ಶ್ರೀ ಅಗರಂ ರಂಗಯ್ಯನವರು ಸಮರ್ಥಿಸಿದರು. ಸರ್ ಮಹಮದ್ ನೇಟೂರರವರು, ನಿರ್ಣಯವನ್ನು ವಿರೋಧಿಸುತ್ತಾ; "ಸದಸ್ಯರು ತಮಗೆ ಬೇಕಾದ ಭಾಗದಲ್ಲಿ ಕೂಡಬಹುದು. ಒಂದು ಪಕ್ಷ ನೀವು ನಿರ್ಣಯ ಅಂಗೀಕರಿಸಿ ಸ್ಥಳ ಗೊತ್ತು ಮಾಡಿದರೂ, ನಾನು ಇದೇ ಭಾಗದಲ್ಲಿ ಕುಳಿತುಕೊಳ್ಳುತ್ತೇನೆ. ಯಾರು ಏನು ಮಾಡುತ್ತಾರೋ ನೋಡೋಣ" ಎಂದು ತಿಳಿಸಿದರು. ಶ್ರೀಗಳಾದ, ನಾರಾಯಣಸ್ವಾಮಿ, ಶ್ರೀ ಅಗರಂ ರಂಗಯ್ಯನವರು, ಪಾಟೀಲ್, ಸೀತಾರಾಮಯ್ಯನವರೂ ನಂತರ ಮಾತನಾಡಿ. ಸರ್ ನೇಟೂರು ಅಧ್ಯಕ್ಷರಿಗೆ ಪಾಯಿಂಟ್ ಆಫ್ ಆರ್ಡರ್ ಎತ್ತಿ "ಈಗ ನಾವು ನಿರ್ಣಯ ಮಾಡಿ, ಆರ್ಡರ್ ಮಾಡಿ ಅವರನ್ನು ಸ್ಥಳ ಗೊತ್ತು ಮಾಡಿದ ಮೇಲೆ ಪಾರ್ಟಿ ಬದಲಾಯಿಸಿದರೆ ಅವರನ್ನು ಎಬ್ಬಿಸುವ ಅಧಿಕಾರ ನಿಮಗಿದೆಯೇ?" ಎಂದು ಕೇಳಿದರು. ಅಧ್ಯಕ್ಷರು ಸಭೆಯಲ್ಲಿ ಇಂತಹ ಪ್ರಶ್ನೆ ಕೇಳುವ ಅಧಿಕಾರ ಇಲ್ಲವೆಂದು ನಿಯಮಗಳಲ್ಲಿ ಅಧಿಕಾರ ಇಲ್ಲ ಎಂದು ತೀರ್ಮಾನಿಸಿ ಇದೆ

ಈಸೂರು ಬಂದಿಗಳ ಬಿಡುಗಡೆಯೇ?

ಶಾಸನ ಸಭೆಯಲ್ಲಿ ಸರ್ಕಾರದ ಭರವಸೆ

ಸ್ವಂ. ಸು. ಫೋ.] ಬೆಂಗಳೂರು ೫

ಶ್ರವಣಬೆಳಗೊಳ ಮತ್ತು ಈಸೂರು ಬಂದಿಗಳನ್ನು ಬಿಡುಗಡೆ ಮಾಡಬೇಕೆಂಬ ನಿರ್ಣಯವು ನಿನ್ನೆ ಶಾಸನ ಸಭೆಯಲ್ಲಿ ಚರ್ಚೆಯಾಯಿತು. ಏಕಾಕೀಕವಾಗಿ ಎಲ್ಲ ಸದಸ್ಯರೂ ನಿರ್ಣಯದ ಪರವಾಗಿ ಮಾತನಾಡಿದರು. ನ್ಯಾಯಾಂಗ ಸಚಿವರು ಚರ್ಚೆಗೆ ಉತ್ತರ ಕೊಡುತ್ತಾ, ಸರ್ಕಾರಕ್ಕೆ ನೀವು ಶಿಫಾರಸು ಮಾಡಬೇಕೆಂಬ ಫಲ ಇಲ್ಲ. ಮಂತ್ರಿಮಂಡಲವು ಈ ವಿಚಾರ ಕೂಡಲೇ ಪರಿಶೀಲಿಸಿ ಎಷ್ಟು ಬೇಗ ಸಾಧ್ಯವೋ ಅಷ್ಟು ಬೇಗ ಬಿಡುಗಡೆ ಮಾಡುವ ಪ್ರಯತ್ನ ಮಾಡುವ ಭರವಸೆ ಕೊಡುತ್ತೇನೆ ಎಂದು ಈ ನಿರ್ಣಯವನ್ನು ಒತ್ತಾಯಪಡಿಸಬೇಡಿ ಎಂದರು. ಈ ಭರವಸೆಯ ಮೇಲೆ ನಿರ್ಣಯವು ಹಿಂದಕ್ಕೆ ತೆಗೆದುಕೊಳ್ಳಲ್ಪಟ್ಟಿತು.

ಅಣುಬಾಂಬು ಪರೀಕ್ಷೆಯ ಬಗ್ಗೆ ರಷ್ಯದ ಟೀಕೆ

ಅಣುಬಾಂಬನ್ನು ಇನ್ನು ಮುಂದೆ ಉಪಯೋಗಿಸದಂತೆ ಕಾರ್ಯಕ್ರಮವನ್ನು ವಿಶ್ವಾದ್ಯಂತವಾಗಿ ಅಮೆರಿಕವು ಹೇಳುತ್ತಿರುವುದು ಬರೀ ಬೂಟಾಟಿಕೆಯೆಂದು ರಷ್ಯದ ಅಧಿಕಾರಿ ಪತ್ರಿಕೆಗಳು ಅಮೆರಿಕದ ಮೇಲೆ ಆಪಾದನೆ ಮಾಡಿವೆ. ಅಣು ಶಕ್ತಿಯ ಪ್ರಯೋಗವನ್ನು ನಿಷೇಧಿಸುವ ಉದ್ದೇಶವು ಅಮೆರಿಕಕ್ಕೆ ನಿಜವಾಗಿಯೂ ಇದ್ದಿದ್ದರೆ ಬಿಕಿನಿ ದ್ವೀಪದ ಅಣು ಬಾಂಬು ಪ್ರಯೋಗವನ್ನು ಮಾಡಬೇಕಾದ ಅವಶ್ಯಕತೆ ಏನಿತ್ತೆಂದು ಸದರಿ ಪತ್ರಿಕೆಗಳು ಕೇಳುತ್ತಿವೆ. ಅಣು ಬಾಂಬನ್ನು ಹೇಗೆ ಉಪಯೋಗಿಸಬೇಕೆಂಬುದನ್ನು ಇನ್ನು ಹೆಚ್ಚಾಗಿ ಪರಿಷ್ಕರಿಸುವ ಪ್ರಯತ್ನವೇ ಈ ಪ್ರಸಂಗದಲ್ಲಿ ಕಾಣುತ್ತಿದೆಯೆಂದೂ ನೂತನ ಅಸ್ತ್ರಗಳ ಕುರಿತು ಅಮೆರಿಕದ ವಿಷಯದಲ್ಲಿ ಸಂಶಯವು ನ್ಯಾಯವಾಗಿದೆಯೆಂದು ಹೇಳಿವೆ

—

ಎಂದು ತಿಳಿಸಿದರು. ಕೊನೆಯಲ್ಲಿ ನಿರ್ಣಯವನ್ನು ಓಟಿಗೆ ಹಾಕಲಾಗಿ ಪರವಾಗಿ ೧೫ ವಿರುದ್ಧವಾಗಿ ವಿರೋಧವಾಗಿ ೪ ಮತಗಳು ಬಂದು ಅದು ಅಂಗೀಕೃತವಾಯಿತು.

ಕೊನೆ ಆರು ವಿಭಾಗಗಳನ್ನು ಓದಿ ನೋಡಿದ ಮೇಲೆ ಬಂದಿ, ಸಭೆಯಲ್ಲಿ ಬಂದ ಕಾರ್ಪೊರೇಷನ ಪ್ರಕಾರ ಪೂರ್ವ ಭಾವಿ ತೀರ್ಮಾನಕ್ಕೆ ಬಂದಿದ್ದರಿಂದ ಮುಂದಿನ ಸಭೆಯಲ್ಲಿ ಇದನ್ನು ತೆಗೆದುಕೊಳ್ಳಬಹುದೆಂದು ತೀರ್ಮಾನವಾಯಿತು.

ಲಂಚ ನಿರೋಧಾಧಿಕಾರಿಗಳ ನೇಮಕ

ಶಾಸನ ಸಭೆಯಲ್ಲಿ ಪ್ರಶ್ನೆ

ಸ್ವಂ. ಸು. ಫೋ.] ಬೆಂಗಳೂರು ೫

ಬೆಂಗಳೂರು ಮೆಟ್ರೋ ಪಾಲಿಟನ್ ಬಿಲ್ ಗಿರಣಿಯು ವ್ಯವಸ್ಥಾಪಕರು "ಲಾಕ್ ಔಟ್" ಮಾಡಿರುವ ಅಂಶವು ಮೈಸೂರು ಸರ್ಕಾರದ ಆಡಳಿತಕ್ಕೆ ಸಂಬಂಧಪಟ್ಟಿದ್ದಲ್ಲವೆಂದು ಹೇಳಿ ಶ್ರೀ ಚೆಂಗಲರಾಯರೆಡ್ಡಿಯವರು ತಂದಿದ್ದ ನಿಲುವಳಿ ನಿರ್ಣಯವನ್ನು ಇಂದಿನ ಶಾಸನ ಸಭೆಯ ಅಧ್ಯಕ್ಷರು ತಳ್ಳಿಹಾಕಿದರು. ಬಿನ್ನಿ ಗಿರಣಿಯ ಮುಷ್ಕರದ ವಿಷಯವನ್ನು ಈ ಸಭೆಯಲ್ಲಿ ನಿಲುವಳಿ ಸೂಚನೆಯ ಮೂಲಕ ಚರ್ಚಿಸಲಾಗಿತ್ತೆಂದು ಶ್ರೀ ರೆಡ್ಡಿಯವರು ತಿಳಿಸಿದಾಗ ಅದರಲ್ಲಿ ಸರ್ಕಾರದವರ ಸಂಬಂಧವಿದೆಯೆಂದು ಶ್ರೀ ಪುಲ್ಲರೆಡ್ಡಿಯವರು ಹೇಳಿದರು.

ಅಮೆರಿಕದ ಆಹಾರ ನಿಯೋಗದವರ ಪ್ರವಾಸದ ವಿಷಯವಾಗಿ ಶ್ರೀ ಕಡಿದಾಳ್ ಮಂಜಪ್ಪನವರು ಅಲ್ಪಾವಧಿ ಪ್ರಶ್ನೆಯನ್ನು ಕೇಳಿದರು. ವಿವರಗಳು ಗೊತ್ತಿಲ್ಲವೆಂದು ಸರ್ಕಾರದವರು ಉತ್ತರವಿತ್ತರು. ಚಿತ್ರದುರ್ಗ, ತುಮಕೂರು ಮತ್ತು ಕೋಲಾರದ ಅಭಾವ ಪ್ರದೇಶಗಳಲ್ಲಿ ಕ್ರಮವಾಗಿ ೪೩೦೦, ೧೧೦೦ ಮತ್ತು ೧೬೦೦ ರೂಪಾಯಿ ಖರ್ಚಿನ ಕೆಲಸಗಳನ್ನು ಇರಿಸಿ, ೧೫೦೦, ೩೫ ಪಬ್ಲಿಕ್ ವರ್ಕ್ಸ್ ಕೆಲಸಗಳನ್ನು ಒಟ್ಟು ಸುಮಾರು ೪೮ ಲಕ್ಷ ರೂಪಾಯಿನ ಅಂದಾಜಿನಲ್ಲಿ ಕೈಗೊಳ್ಳಲಾಗಿದೆಯೆಂದು ಶ್ರೀ ಎಂ. ಎ. ಗೋಪಾಲಸ್ವಾಮಿ ಅಯ್ಯಂಗಾರ್ಯರಿಗೆ ಉತ್ತರವಾಗಿ ಶ್ರೀ ಪುಲ್ಲರೆಡ್ಡಿಯವರು ತಿಳಿಸಿದರು. ಇದರಲ್ಲಿ ಒಟ್ಟು ಸುಮಾರು ೫೦ ಸಾವಿರ ಜನರು ಕೆಲಸ ಮಾಡುತ್ತಿರುವರೆಂದೂ, ಇದರಲ್ಲಿ ಗಂಡಸರಿಗೆ ಎಂಟಾಣೆ, ಹೆಂಗಸರಿಗೆ ಆರಾಣೆ ಕೂಲಿಯನ್ನು ಕೊಡಲಾಗುತ್ತಿದೆಯೆಂದೂ ತಿಳಿಸಲಾಯಿತು. ಹೆಂಗಸರಿಗೆ ಏತಕ್ಕಾಗಿ ಕಡಿಮೆ ಕೊಡಲಾಗುತ್ತಿದೆ? ಅವರಿಗೆ ಹೊಟ್ಟೆ ಕಡಿಮೆಯಾಗಿದೆಯೇ? ಎಂದು ಶ್ರೀಮತಿ ಎಂ. ಆರ್. ಲಕ್ಷ್ಮಮ್ಮನವರು ಕೇಳಲು, ಹೆಂಗಸರಿಗೆ ಪಟ್ಟಣ ಧಾರಣಾ ಶಕ್ತಿ ಇರುವುದೇನೋ ಕಡಿಮೆ ಆಹಾರವನ್ನು ತೆಗೆದುಕೊಂಡರೂ ಅವರು ಹೆಚ್ಚು ಕೆಲಸ ಮಾಡಲು ಸಮರ್ಥರೆಂದು ಶ್ರೀ ಜೆ. ಬಿ. ಮಲ್ಲಾರಾಧ್ಯರು ಅಭಿಪ್ರಾಯವನ್ನು ಸೂಚಿಸಿದರು.

ಲಂಚ ನಿರೋಧ ಕೆಲಸಕ್ಕಾಗಿ ಶ್ರೀ ಅಪ್ಪಾಜಿಗೌಡರನ್ನು ನೇಮಿಸಿರುವ ವಿಚಾರದಲ್ಲಿ ಬಹಳ ಪ್ರಶ್ನೋತ್ತರಗಳಾದುವು. ದಕ್ಷತಾ ತನಿಖೆ ಅಧಿಕಾರಿಗಳೆಂದು ಅವರನ್ನು ಕರೆಯುವ ಬದಲು ಲಂಚ ನಿರೋಧದ ಅಧಿಕಾರಿಗಳೆಂದು ಕರೆದಿದ್ದರೆ ಜನರಲ್ಲಿ ಹೆಚ್ಚು ಭರವಸೆಯೂ, ಸಮಾಧಾನವೂ ಉಂಟಾಗುತ್ತಿತ್ತೆಂದು ಅನೇಕ ಸದಸ್ಯರು ಸೂಚಿಸಿದರು. ಲಂಚ ನಿರೋಧವೇ ಈ ನೇಮಕದ ಉದ್ದೇಶವೆಂದೂ ದಕ್ಷತೆಯ ತನಿಖೆಯಿಂದ ಲಂಚ ರುಷುವತ್ತುಗಳನ್ನು ನಿವಾರಿಸಲು ಸಾಧ್ಯವಾಗುವುದೆಂದು ಶ್ರೀ ಪುಲ್ಲರೆಡ್ಡಿಯವರು ಹೇಳಿದರು. ಈ ಅಧಿಕಾರಿಗಳು ದಿವಾನರಿಗೆ ಉತ್ತರವಾದಿಗಳೋ ಅಥವಾ ಮಂತ್ರಿಗಳಿಗೋ? ಎಂಬ ಪ್ರಶ್ನೆಗೆ ಅವರು ಮಂತ್ರಿಗಳಿಗೆ ಎಂದು ಉತ್ತರಿಸಲು ಎಷ್ಟರ ಮಟ್ಟಿಗೆ ತಿಳಿಸಲಾಯಿತು. ಲಂಚ ನಿರೋಧದ ಅಧಿಕಾರಿಗಳು ಇವರೇ [illegible] ಪ್ರಶ್ನೆಗೆ ಶ್ರೀ [illegible] ಬೆಂಗಳೂರಿನ [illegible] ಉತ್ತರ ನೀಡಿದರು.

ಸಾಧ್ವಿ

ತಾ॥ ೫ ೭-೪೬ ಶುಕ್ರವಾರ

ಪ್ರಜಾ ಪ್ರತಿನಿಧಿ ಸಭೆಗೆ ಖಾಸಗಿ ಅಧ್ಯಕ್ಷರು

ನಮ್ಮ ಶ್ರೀಮನ್ಮಹಾರಾಜರವರು ಪ್ರಜಾ ಪ್ರತಿನಿಧಿ ಸಭೆಗೆ ಖಾಸಗೀ ಅಧ್ಯಕ್ಷರನ್ನು ಹೊಂದುವ ಅವಕಾಶವನ್ನು ಕಲ್ಪಿಸಲಿರುವರೆಂದು ವರದಿಯಾಗಿದೆ. ಇದು ನಿಜವಾದರೆ ಸಂತೋಷದ ಸಂಗತಿಯೇ ಸರಿ. ಸಂಸ್ಥಾನದ ಶಾಸನ ಸಭೆಗಳ ಸುಧಾರಣೆಗಳಲ್ಲಿ ಆಗಬೇಕಾದ ಏರ್ಪಾಡುಗಳಲ್ಲಿ ಇದು ಮೊಟ್ಟ ಮೊದಲನೆಯದು.

ಕಳೆದ ಪ್ರಜಾ ಪ್ರತಿನಿಧಿ ಸಭೆಯ ಅಧಿವೇಶನದಲ್ಲಿ ಸದಸ್ಯರುಗಳು ಜಂಟಿಯಾಗಿಯೂ ಪ್ರತ್ಯೇಕ ಗುಂಪುಗಳಾಗಿಯೂ ಮನವಿಗಳನ್ನು ಪ್ರಭುಗಳಿಗೆ ಒಪ್ಪಿಸುವುದಕ್ಕಾಗಿ ದಿವಾನರಿಗೆ ಕೊಟ್ಟಿರುವರು. ಈಗಿನ ಕಾಲಕ್ಕೆ ಅನುಗುಣವಾಗಿ ನಮ್ಮ ದೇಶದಲ್ಲಿ ಜವಾಬ್ದಾರಿ ಸರ್ಕಾರವನ್ನು ಸ್ಥಾಪಿಸಬೇಕೆಂದು ಆ ದರಖಾಸ್ತಿನಲ್ಲಿ ಬೇಡಿಕೊಂಡಿರುವರು ಮತ್ತು ಪ್ರಜಾ ಪ್ರತಿನಿಧಿ ಸಭೆಗೆ ಚುನಾಯಿತ ಅಧ್ಯಕ್ಷರನ್ನು ದಯಪಾಲಿಸಬೇಕೆಂದೂ ಸಹ ಪ್ರಾರ್ಥಿಸಿರುವರು. ಈ ವಿಷಯದಲ್ಲಿ ಸಭೆಯವರೆಲ್ಲರೂ ಏಕ ವಾಕ್ಯದಿಂದ ಕೋರಿಯಿಟ್ಟಿರುವರು. ಇದರ ಬಗ್ಗೆ ಯಾರಲ್ಲಿಯೂ ಭಿನ್ನಾಭಿಪ್ರಾಯವಿರುವುದಿಲ್ಲ.

ಈ ಸಭೆಯ ಅಧ್ಯಕ್ಷತೆಯನ್ನು ಚುನಾಯಿತರಾದ ಒಬ್ಬ ಮಹನೀಯರು ವಹಿಸಬೇಕಾದ ಕಾಲವು ಬಂದಿದೆ. ಇದಕ್ಕಾಗಿ ಬಹಳ ದಿನಗಳಿಂದಲೂ ಒತ್ತಾಯದ ಬೇಡಿಕೆಗಳು ಬರುತ್ತಿವೆ. ಈಗ ಪ್ರಭುಗಳು ಇವನ್ನು ಕರುಣಿಸುವಂತೆ ಮನಸ್ಸು ಮಾಡುವುದು ಅತ್ಯಂತ ಸಮಯೋಚಿತವಾಗಿಯೇ ಇದೆ. ಬೇಗನೆ ಈ ಒಳ್ಳೆ ಆಜ್ಞೆ ಹೊರಟು ನವರಾತ್ರಿಯ ಅಧಿವೇಶನದಲ್ಲಿ ಸಭೆಯಿಂದ ಚುನಾಯಿತರಾದ ಮಹನೀಯರು ಅಧ್ಯಕ್ಷಸ್ಥಾನವನ್ನು ಅಲಂಕರಿಸಲೆಂದು ಹಾರೈಸುತ್ತೇವೆ.

ಚುನಾಯಿತರಾದ ಅಧ್ಯಕ್ಷರಿರುವರೋ, ನಾಮಕರಣ ಹೊಂದಿದವರು ಇರುವರೋ ಎಂಬ ಸಂಶಯವನ್ನು ... ಸುದ್ದಿಯು ಎತ್ತಿರುತ್ತದೆ. ಈ ಸಂಶಯಕ್ಕೆ ಆಸ್ಪದವಿಲ್ಲದಿರಲೆಂದೇ ಸರಕಾರ ಹಾರೈಕೆ. ಶಾಸನ ಸಭೆಗಳನ್ನು ಹೊಸದಾಗಿ ರಚಿಸಿದಾಗ ಮೊದಲನೇ ಸಾರಿಗೆ ಅಧ್ಯಕ್ಷರನ್ನು ಸರ್ಕಾರದವರೇ ನಾಮಕರಣ ಮಾಡಿದರು. ಈಗ ಚುನಾವಣೆ ನಡೆಯಲು ಆರಂಭವಾಗಿದೆ. ಪ್ರಜಾ ಪ್ರತಿನಿಧಿ ಸಭೆಯು ಹೊಸ ಶಾಸನದ ಪ್ರಕಾರ ಸ್ವತಂತ್ರವಾಗಿ ಈಗ ಗಳೇ ಎರಡು ವರ್ಷಗಳಾಗಿವೆ. ಆದುದರಿಂದ ಈ ಸಭೆಯು ... ಸಭೆಗಿಂತ ಹಿಂದೆ ಬೀಳುವುದು ಉಚಿತವಲ್ಲ. ಅಧ್ಯಕ್ಷತೆಗೆ ಸರ್ಕಾರದವರು ನಾಮಕರಣ ಮಾಡುವ ಬದಲು ಸಭೆಯವರೇ ಚುನಾವಣೆ ಮಾಡಿಕೊಳ್ಳಲು ಅವಕಾಶಕೊಡುವುದು ...

ಈಗಿನ ಕೆಲವು ... ಅಧಿವೇಶನದ ... ಚುನಾಯಿತ ಅಧ್ಯಕ್ಷರ ... [illegible]

ಭಾರತೀಯ ವಿದ್ಯಾರ್ಥಿಗಳಿಗೆ ಪ್ರಾಧಿಮಾ ಪ್ರಶಸ್ತಿ

ಕೇಂಬ್ರಿಡ್ಜಿನ ಕಿಂಗ್ಸ್ ಕಾಲೇಜಿನಲ್ಲಿ ವ್ಯಾಸಂಗ ಮಾಡುತ್ತಿರುವ ಭಾರತೀಯ ವಿದ್ಯಾರ್ಥಿಯಾದ ಶ್ರೀ ಎಂ ಜಿ ಪಟೇಲರಿಗೆ ಅರ್ಥ ಶಾಸ್ತ್ರದ ಸಂಶೋಧನೆ ಮತ್ತು ಅಧ್ಯಯನಕ್ಕಾಗಿ ವೆರ್ನಾನ್ ವಿದ್ಯಾರ್ಥಿ ವೇತನವಾಗಿ ೧೧೦೦ ಪೌಂಡುಗಳನ್ನು ಕೊಡಲಾಗಿದೆ. ಈ ವರ್ಷ ಇದೇ ರೀತಿ ವಿಶೇಷ ಸ್ಥಾನಗಳಿಗೆ ಪ್ರಶಸ್ತಿ ಪಡೆದಿರುವವರಲ್ಲಿ ಶ್ರೀ ಸುವ್ರತರಾಯ್ ಚೌಧುರಿ ಮತ್ತು ಶ್ರೀ ಕೆ. ಸಭಾಪತಿ, ಎಂಬ ಇಬ್ಬರು ಭಾರತೀಯರಿದ್ದಾರೆ. ಇವರಿಗೆ ಲಂಡನ್ ಮರ್ಚೆಂಟ್ ಸಂಸ್ಥೆ ಸತ್ಕಾರ ಕೊಟಿದ್ದಿತು.

ಮದುವೆ ಮನೆಗೆ ನುಗ್ಗಿ ಸಂಗೀತಗಾರನ ಕೊಲೆ

ಮಾಂಟ್ಗೋಮರಿಯಲ್ಲೂ ಕೋಮುವಾರು ಗಲಭೆ ಆರಂಭವಾಗಿದೆ. ಸಿನಿಮಾದಲ್ಲಿ ಚಾಗಕ್ಕೋಸ್ಕರ ಉಂಟಾದ ಜಗಳ ಭಾರಿ ಸ್ವರೂಪ ಹೊಂದಿ ಕೋಮುವಾರು ಕದನಕ್ಕೆ ಪರಿವರ್ತನೆಯಾಗಿದೆ. ಜಮೀನ್ದಾರರೊಬ್ಬರ ಮನೆಯಲ್ಲಿ ವೈಭವದಿಂದ ಮದುವೆ ನಡೆಯುತ್ತಿದ್ದಾಗ ಅಲ್ಲಿಗೆ ಪುಂಡರು ನುಗ್ಗಿ ಸಂಗೀತಗಾರನನ್ನು ಕೊಲೆ ಮಾಡಿದ್ದಾರೆ. ನಗರದಲ್ಲಿ ನಿಧಾನವಾಗಿ ಶಾಂತಿ ನೆಲೆಸುತ್ತಿದೆ.

... ಯಲ್ಲಿ ಅನುಸರಿಸಬೇಕಾದ ಮಾರ್ಗಗಳು, ಮೇಲಾಗಿ ಸದಸ್ಯರ ಜವಾಬ್ದಾರಿಗಳನ್ನು ಅವರ ಅಭಿಪ್ರಾಯಕ್ಕೆ ಅನುಗುಣವಾಗಿ ಸಂರಕ್ಷಿಸಬೇಕಾದ ಅಗತ್ಯ-ಇವೇ ಮುಂತಾದ ದೃಷ್ಟಿಗಳಿಂದ ಸಭೆಗೆ ಖಾಸಗೀ ಅಧ್ಯಕ್ಷರೇ ಇರುವುದು ಉಚಿತವೂ ಉತ್ತಮವೆಂದು ಅನುಭವದಿಂದ ವೇದ್ಯವಾಗಿದೆ. ಮತ್ತು ಇದರಿಂದ ದಿವಾನರಿಗೂ ವಿರಾಮ ದೊರೆತು ಅವರು ವರ್ಷಕ್ಕೆ ಸುಮಾರು ಒಂದು ತಿಂಗಳಕಾಲ ಸಭಾ ಕಾರ್ಯದಲ್ಲಿ ನಿರತರಾಗುವ ಬದಲು ಬೇರೆ ಕೆಲಸಗಳನ್ನು ಗಮನಿಸಲೂ ಅವಕಾಶ ಸಿಗುವುದು.

ಸಂಸ್ಥಾನಗಳೆಲ್ಲವೂ ಈಗ ದಿನ ದಿನವೂ ಮುಂದೆ ಇಡುತ್ತಿವೆ. ಕೆಲವು ಜವಾಬ್ದಾರಿ ಸರ್ಕಾರಗಳನ್ನೇ ಘೋಷಿಸಿವೆ. ಇನ್ನೂ ಕೆಲವು ಘೋಷಿಸುವುದರಲ್ಲಿವೆ. ಕೆಲವು ಚುನಾಯಿತ ಮಂತ್ರಿ ಮಂಡಲಗಳನ್ನು ರಚಿಸುತ್ತಿವೆ. ಮೈಸೂರಿನಲ್ಲಿ ಈ ಬಗ್ಗೆ ಯಾವ ಸುಳ್ಳಿವೂ ಇನ್ನೂ ಕಾಣಬರುತ್ತಿಲ್ಲ. ಇದು ವಿಷಾದನೀಯ ಸಂಗತಿ. ಅಷ್ಟು ಹೋಗಲಿ, ಈ ಮಟ್ಟಿಗೆ ಅತ್ಯಂತ ಸಾಮಾನ್ಯ ಸುಧಾರಣೆಯಾದ ಚುನಾಯಿತ ಅಧ್ಯಕ್ಷತೆ ಯೋಜನೆ ಮುಂದಿನ ಪ್ರಜಾಪ್ರಭುತ್ವ ಸರ್ಕಾರಕ್ಕೆ ಹಾದಿ ಯಾಗಲೆಂದು ಹಾರೈಸೋಣ.

ಅಧಿಕಾರಿಗಳ ತಿಕ್ಕಾಟ

ಸ್ವಂ.ವ.] ನಂಜನಗೂಡು ೩.

ಈ ಬೆಳಿಗ್ಗೆ ಮುನಿಸಿಪಲ್ ಡಿಪೋವಿನಲ್ಲಿ ಅಕ್ಕಿ ಸರಬರಾಜಿನ ವಿಷಯವಾಗಿ ಅಧಿಕಾರಿ ವರ್ಗದವರಲ್ಲಿ ಜಗಳ ಹತ್ತಿತು. ಈ ಗಲಾಟೆ ನಿಲ್ಲುವವರೆಗೂ ಅಕ್ಕಿಗಾಗಿ ಬಂದಿದ್ದ ಬಡ ಜನರು ಬಹಳ ಹೊತ್ತು ಕಾದಿರಬೇಕಾಯಿತು.

ದಿನ ೧ ಕ್ಕೆ ತಲಾ ೧ ಕ್ಕೆ ಮೂರು ಚಟಾಕು ಅಕ್ಕಿ ಕೊಡಲು ಏರ್ಪಾಡಾಗಿರುತ್ತೆ. ಬೇರೆ ಯಾವ ದಿನಸಿಯೂ ಸಿಗುತ್ತಿಲ್ಲ-ದೊಡ್ಡ ಅಧಿಕಾರ ವರ್ಗಕ್ಕೆ ಒಂದು ತಿಂಗಳ ಅಕ್ಕಿ ಪೂರ್ತಿ ಕೊಡಬೇಕೆಂತಲೂ, ಸಣ್ಣ ನೌಕರರಿಗೂ, ಮತ್ತೆ ಕೆಲವರಿಗೂ ೧ ವಾರದ ಚಕ್ಕವನ್ನು ಮಾತ್ರ ಕೊಡುವಂತೆ ಹುಕ್ಕುಂ ಆಗಿದೆಯೆಂದು ತಿಳಿದುಬಂದಿದೆ.

ಈ ತಿಂಗಳು ಹೊಸ ಕೋಟಾ ಇನ್ನೂ ಕೊಟ್ಟಿಲ್ಲವಾದ್ದರಿಂದ ಸೀಮೆಎಣ್ಣೆ ಸಿಕ್ಕದೆ ಜನರು ಕತ್ತಲೆ ಮನೆಯಲ್ಲಿರಬೇಕಾಗಿದೆ.

ಸ್ಕೂಲ್ ಪುಸ್ತಕಗಳು ಅಭಾವವಾಗಿ ವಿದ್ಯಾರ್ಥಿಗಳಿಗೆ ತುಂಬಾ ತೊಂದರೆಯಾಗಿರುತ್ತೆ. ಲೈಸೆನ್ಸ್ ಇಲ್ಲದ ಅಂಗಡಿಗಳಲ್ಲಿ ಅಧಿಕ ಬೆಲೆಯಲ್ಲಿ ಕಳ್ಳ ಮಾರಾಟವಾಗುತ್ತಿದೆಯೆಂದು ತಿಳಿದು ಬರುತ್ತೆ.

ಹಿಂದೀ ಪರೀಕ್ಷೆಗಳು

೧೯೪೬ ನೇ ಆಗಸ್ಟ್ ತಿಂಗಳಲ್ಲಿ ನಡೆಯಲಿರುವ ಹಿಂದೀ ಪರೀಕ್ಷೆಗಳಿಗೆ ಅರ್ಜಿ ಪತ್ರಗಳನ್ನು ತಾ॥ ೮-೭-೪೬ ರ ಒಳಗಾಗಿ ಕಳುಹಿಸಬೇಕು. ಪರೀಕ್ಷೆಗೆ ಕುಳಿತುಕೊಳ್ಳುವವರು ತಮ್ಮ ಅರ್ಜಿ ಪತ್ರಗಳನ್ನು ಫೀಜು ಸಹಿತ ೮ ನೇ ತಾ॥ ಸೋಮವಾರ ಸಂಜೆ ೬ ಘಂಟೆಯೊಳಗೆ ಚಾಮರಾಜ ರೋಡಿನಲ್ಲಿರುವ ಹಿಂದೀ ಪ್ರಚಾರ ಸಭಾ ಕಾರ್ಯಾಲಯಕ್ಕೆ ಕಳುಹಿಸಬೇಕಾಗಿದೆ.

ಫಿಲಿಫೈನ್ಸ್ ಸ್ವತಂತ್ರವಾಯಿತು

ಈಗ್ಗೆ ೧೧೦ ವರ್ಷಗಳ ಹಿಂದೆಯೇ ಗೊತ್ತಾಗಿದ್ದಂತೆ ಇಂದಿನಿಂದ ಫಿಲಿಫೈನ್ ದ್ವೀಪಗಳು ಸ್ವತಂತ್ರ ರಿಪಬ್ಲಿಕ್ ಆದುವು.

ಡಿಪೋ ತೊಂದರೆ

ಸ್ವಂ.ವ.] ಶ್ರೀರಂಗಪಟ್ಟಣ ೩.

ಈ ಊರಿನ ಡಿಪೋವಿನಲ್ಲಿ ಗಂಡಸರೂ, ಹೆಂಗಸರೂ ಒಟ್ಟಿಗೆ, ಒಂದೇ ಸ್ಥಳದಲ್ಲಿ ರೇಷನ್ ತೆಗೆದುಕೊಳ್ಳಬೇಕಾಗಿರುವುದರಿಂದ, ಮಹಿಳೆಯರಿಗೆ ತುಂಬಾ ತೊಂದರೆಯಾಗಿದೆ. ಪ್ರತ್ಯೇಕವಾಗಿ ಡಿಪೋಗಳ ವ್ಯವಸ್ಥೆ ಆಗಬೇಕಾಗಿದೆ.

ಇಲ್ಲಿಯ ಶ್ರೀನಿವಾಸ ರೀಡಿಂಗ್ ರೂಮಿಗೆ ಇನ್ನು ಮೇಲೆ ಎರಡು ದಿನ ಪತ್ರಿಕೆಗಳನ್ನು ತರಿಸಲು ಏರ್ಪಾಡು ನಡೆದಿದೆ.

ಅಣುಬಾಂಬಿನ ಪ್ರಯೋಗವು ಮುಂದಿನ ಯುದ್ಧದ ಸೂಚನೆ

ಅಣುಬಾಂಬಿನ ಪ್ರಯೋಗದ ಪರೀಕ್ಷೆ ಕುರಿತು ಪಂ॥ ಜವಹರಲಾಲ್ ನೆಹರೂರವರು ತಮ್ಮ ಅಭಿಪ್ರಾಯ ತಿಳಿಸುತ್ತಾ ಇದೆಲ್ಲಾ ಅಮೆರಿಕದ ಶಕ್ತಿ ಪ್ರದರ್ಶನವೆಂದೂ, ಶಾಂತಿಗೆ ಅಸ್ತಿಭಾರ ಹಾಕುವುದಕ್ಕಾಗಲೀ, ಅಥವಾ ಜನರ ಮನಸ್ಸಿನಿಂದ ಭಯ, ಸಂಶಯಗಳನ್ನು ನೀಗಿಸುವುದಕ್ಕಾಗಲೀ, ಇದು ಮಾರ್ಗವಲ್ಲವೆಂದೂ ಅವರು ತಿಳಿಸಿದ್ದಾರೆ. ಸಂಗ್ರಾಮದ ಕರಾಳರೂಪದ ನೆರಳಿನಂತಿದೆ ಈ ಬಾಂಬಿನ ಪ್ರಯೋಗ ಎಂದು ಅವರು ಟೀಕಿಸಿದ್ದಾರೆ.

ಆತ್ಮಾರ್ಪಣೆಯಿಂದಲಾದರೂ ಕೋಮುವಾರು ವ್ಯಾಜ್ಯನಿಲ್ಲಿಸಿ

ಅಹಮದಾಬಾದಿನ ಕೋಮುವಾರು ಗಲಭೆಯಿಂದ ತಮಗೆ ತುಂಬಾ ಸಂಕಟವಾಗಿದೆಯೆಂದು ಹೇಳಿ ಗಾಂಧಿಜಿ ಬೊಂಬಾಯಿನ ಗೃಹ ಮಂತ್ರಿಗಳಾದ ಶ್ರೀ ಮುರಾರ್ಜಿ ದೇಸಾಯಿಯವರಿಗೆ ಈ ರೀತಿ ತಿಳಿಸಿದ್ದಾರೆ: ಪೋಲೀಸ್ ಮತ್ತು ಮಿಲಿಟರಿ ರಕ್ಷಣೆ ಪಡೆಯದೆ, ದೇವರ ರಕ್ಷಣೆ ಪಡೆದು ಆ ಕೋಮುವಾರು ಜ್ವಾಲೆಯೊಳಕ್ಕೆ ನುಗ್ಗಿ ಅದನ್ನು ಅಡಗಿಸಲಿ. ಹಿಂದೆ ಗಣೇಶ ಶಂಕರ ವಿದ್ಯಾರ್ಥಿ ಆಹುತಿಯಾದಂತೆ ಪ್ರಾಣವನ್ನಾದರೂ ಕೊಟ್ಟು ಬಿಡಿ. ಒಂದು ಕಡೆಯವರಾದರೂ ಪ್ರತಿ ಹಿಂಸೆ ಮಾಡದೆ ನಿಲ್ಲಿಸಿದಲ್ಲಿ ಗಲಭೆ ನಿಲ್ಲುವುದು. ಕೆಲವು ಜನರು ನ್ಯಾಯ ಮಾರ್ಗದಲ್ಲಿ ಸತ್ತರೂ ಚಿಂತೆಯಿಲ್ಲ, ಸಾಯಿಸದೇ ತಾವೇ ಸಾಯುವ ಮಾರ್ಗವನ್ನವರು ಅನುಸರಿಸಿದಲ್ಲಿ ಭಾರತವು ಕರ್ಮ ಭೂಮಿಯೆಂಬ ತನ್ನ ಪುರಾತನ ಖ್ಯಾತಿಯನ್ನು ಉಳಿಸಿಕೊಳ್ಳುವುದು. ತನ್ಮೂಲಕ ಭಾರತವು ಭೂ ಸ್ವರ್ಗವಾಗಿ ಪರಿಣಮಿಸುವುದು.

ರಾಜ್ ಕಮಲ್ ಟಾಕೀಸ್, ಮೈಸೂರು

೩—7—46 ನೇ ಬುಧವಾರದಿಂದ

ಅಮೋಘವಾದ ೩ ನೇ ವಾರ

ಸ್ವರ್ಣ ಲತಾ ಅಜೂರಿ } ರತನ್ { ಮಾಸ್ಟ್ರಿ ಕರಣ್ ದಿವಾನ್

ಮುಂದಿನ ಬದಲಾವಣೆ ರಾಜಕಮಲ್‌ರವರ ಸಬ್ ಕಾ ... ದೇವ

... ಪ್ರೆಸ್, ಮೈಸೂರು

ರಣಜಿತ್

5-7-46 ರಿಂದ

ಬಹು-ಬೇಟಿಯ

ಪಾತ್ರ:—

* ನಿರ್ಮಲಾ, * ಮಂಜುಳ

* ಕರಣ್ ದಿವಾನ್, * ಯಾಕೂಬ್

ಪ್ರತಿದಿನ ೩ ಆಟಗಳು

At NEW OPERA TALKIES
2nd WEEK
From 3—7—46

'COBRA - - WOMAN'
in Technicolor.

ಮುಂದಿನ ಬದಲಾವಣೆ

೬-೭-೪೬ ರಿಂದ

ಲವಂಗಿ

(ತಮಿಳು)

ಪಾತ್ರ:—

* ವೈ. ವಿ. ರಾವ್, * ಕುಮಾರಿ ರುಕ್ಮಿಣಿ ಮುಂತಾದವರು.

Edited, printed and published by A. R. Nagaraiah at the Sadhvi ... D Subbiah Road, Mysore.

ಫೋನ್ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು



ಸಂಪುಟ ೪] ಶನಿವಾರ ೭--೭--೪೬ [ಸಂಚಿಕೆ ೨೫೪

ಬೊಂಬಾಯಿಯಲ್ಲಿ ಎ. ಐ. ಸಿ. ಸಿ. ಸಭೆ

ಕರಾಚಿಯಲ್ಲಿ ಮುಷ್ಕರ

ಕರಾಚಿ ಬಂದರಿನ ಸುಮಾರು ಸಾವಿರ ಮಂದಿ ಕೆಲಸಗಾರರು ಮುಷ್ಕರ ಹೂಡಿರುವುದರಿಂದ ವಿದೇಶಗಳಿಗೆ ಹೋಗತಕ್ಕ ಹಡಗುಗಳು ಬಂದರಿನಲ್ಲೇ ನಿಂತುಹೋಗಿವೆ.

ಬಟ್ಟೆ ಬೆಲೆ ಹೆಚ್ಚುವುದು

ಆಗಸ್ಟ್ ೧ ರಿಂದ ಹತ್ತಿಬಟ್ಟೆ ಮತ್ತು ನೂಲಿನ ಕನಿಷ್ಠ ಬೆಲೆಯು ೬ ಕಾಸಿನಷ್ಟು ಹೆಚ್ಚುವುದೆಂದು ಟೆಕ್ಸ್‌ಟೈಲ್ ಕಂಟ್ರೋಲರ್ ಅಧಿಕಾರಿಗಳು ತಿಳಿಸಿದ್ದಾರೆ. ಇದು ಕೆಲಸದ ಅವಧಿಯ ೯ ಗಂಟೆಯಿಂದ ೮ ಗಂಟೆಗೆ ಇಳಿಸುವುದರಿಂದ ಆಗುವ ಹೆಚ್ಚಿನ ಖರ್ಚಿಗಾಗಿ ಈ ಬೆಲೆಯೇರಿಕೆಯಾಗಿದೆ.

ಅಹಮದಾಬಾದ್ ಪರಿಸ್ಥಿತಿ

ಶಾಂತಿ ಸಮಿತಿಯ ಪ್ರಯತ್ನದ ಫಲವಾಗಿ ಅಹಮದಾಬಾದಿನಲ್ಲಿ ಪರಿಸ್ಥಿತಿ ಉತ್ತಮವಾಗುತ್ತಿದೆ. ಅಲ್ಲಲ್ಲೇ ಇಂತಹ ಪ್ರಸಂಗಗಳು ನಡೆಯುತ್ತಿವೆ. ೧ ನೇ ತಾರೀಖಿನಿಂದ ಇದುವರೆಗೆ ೩೯ ಸಾವುಗಳಾಗಿವೆ. ೨೬೭ ಮಂದಿಗೆ ಗಾಯಗಳಾಗಿವೆ. ೮೦೦ ಮಂದಿ ಬಂಧಿತರಾಗಿದ್ದಾರೆ.

ಹಿಟ್ಲರನು ಸತ್ತಿದ್ದಾನೆ

ನ್ಯೂರೆಂಬರ್ಗ್ ನ್ಯಾಯಸ್ಥಾನದಲ್ಲಿ ಸಾಕ್ಷಿ ಹೇಳುತ್ತಾ ಹಿಟ್ಲರನ ಪ್ರೈವೇಟ್ ಸೆಕ್ರೆಟರಿ ಕೆಂಪ್ಕಾ ಎಂಬಾತನು ೧೯೪೫ ನೇ ಏಪ್ರಿಲ್ ೩೦ ನೇ ತಾ॥ ಮಧ್ಯಾಹ್ನ ಜರ್ಮನ್ ಶಾಸನಸಭಾ ಭವನದಲ್ಲಿ ಹಿಟ್ಲರ್ ಸತ್ತಿದ್ದ. ಅವನ ಪತ್ನಿ ಇವಾಬ್ರೌನ್ ಳ ಶವವನ್ನು ನಾನೇ ಸಾಗಿಸಿದ್ದು. ಹಿಟ್ಲರ್ ಹೆಣ್ಣು ಬೋರ್ಮನ್ ಸೆಲ್ ಹೊಡೆತಕ್ಕೆ ಸಿಕ್ಕಿದ್ದನ್ನೂ ಕಣ್ಣಾರ ನೋಡಿದೆ" ಎಂದು ನಡುಗುತ್ತಾ ಗದ್ಗದ ಸ್ವರದಿಂದ ಹೇಳಿದನು.

ಈಜಿಪ್ಟ್ ಶೋಷಣೆ ಶಾಸನ ಕೊಡಲ್ಪಟ್ಟಿತು

ಈಜಿಪ್ಟಿನ ೫೦೦ ವರ್ಷದ ಪುರಾತನ ಮೂರ್ತಿಯನ್ನು ಈಜಿಪ್ಟ್ ಸ್ವಾಧೀನಕ್ಕೆ ಒಪ್ಪಿಸಿ ಬ್ರಿಟಿಷ್ ಮ್ಯೂಸಿಯಂ ಅಧಿಕಾರಿಗಳು ಸ್ವೀಕರಿಸಿದ್ದು ಕಳೆದ ೬೦ ವರ್ಷಗಳಿಂದ ಬ್ರಿಟನಿನ ವಶದಲ್ಲಿತ್ತು.

ಹಗಲಿನಲ್ಲೇ ದರೋಡೆ

ಪೂನಾ ನಗರದ ಇಂಪೀರಿಯಲ್ ಬ್ಯಾಂಕಿಗೆ ಜಮಾ ಮಾಡಲು ಹಣ ಒಯ್ಯುತ್ತಿದ್ದ ಜವಾನನು ೧೧ ಸಾವಿರ ಗಳನ್ನು ಕಂಡಿದ್ದಾನ, ಹಣ ಕೊಡುವ ಡಲ್ಲಿ ಸಿಂತಿದ್ದಾನೆಂದು ಅದನ್ನು ಕಸಿದೊಯ್ದರೆಂದು ವರದಿಯಾಗಿದೆ.

ಹಾರ್ಕನೆಸ್ಸರಿನವರ ವಿಜಯ

ಪಿಕೆರಿಂಗ್ ರವರನ್ನು ಸೋಲಿಸಿ ಹಾರ್ಕನೆಸ್ಸ್ ರವರು ಕ್ರಿಕೆಟ್ ಪಂದ್ಯದಲ್ಲಿ ಜಯ ಗಳಿಸಿದರು.

ನೆನ್ನೆ ದಿನ ನಡೆದ ಹಿಂದೂಸ್ಥಾನದ ಕ್ರಿಕೆಟ್ ತಂಡಕ್ಕೂ ಹೊರಟ ಆಟದಲ್ಲಿ ಹಿಂದೂಸ್ಥಾನದ ಆಟಗಾರರು ಬೊಂಬಾಯಿ ನಗರದ ತಂಡವನ್ನು ಸೋಲಿಸಿದರು.

ಮೊದಲನೆ ಆಟದಲ್ಲಿ ಶ್ರೀ ಮರ್ಚೆಂಟ್ ರವರು ಉತ್ತಮ ಆಟವಾಡಿದರು. ಕೂಟದಲ್ಲಿ ವಿಜಯ ಮರ್ಚೆಂಟ್ ರವರು ಭಾಗವಹಿಸಿದ್ದರು.

ಟಿ. ಮರಿಯಪ್ಪನವರ ಸೈಟಿನ ವಿಚಾರ

ಶಾಸನ ಸಭೆಯಲ್ಲಿ ಪ್ರಶ್ನೆ

ಸ್ವಂ ವರದಿಗಾರರಿಂದ] ಬೆಂಗಳೂರು ೬

ಮೈಸೂರು ಶಾಸನಸಭಾಸದಸ್ಯರಾದ ಶ್ರೀ ಟಿ. ಮರಿಯಪ್ಪನವರು ಹೊಸ ಟೋಬೂ ಬಜಾರಿನಲ್ಲಿ ಟ್ರಸ್ಟ್‌ಬೋರ್ಡಿನಿಂದ ಕೊಂಡುಕೊಂಡಿರುವ ಸೈಟಿನ ವಿಷಯವಾಗಿ ಈ ದಿನ ಶಾಸನ ಸಭೆಯಲ್ಲಿ ಶ್ರೀ ಎಂ. ಸಿ. ಲಿಂಗೇಗೌಡರು ಪ್ರಶ್ನೆಗಳನ್ನು ಹಾಕಿದರು. ವಿದ್ಯಾಮಂತ್ರಿಗಳಾದ ಡಾ॥ ರಾಮರಾವ್‌ರವರು ಉತ್ತರವಿತ್ತರು. ಒಂದನೇ ನಂಬರು ಸೈಟನ್ನು ಚ॥ ಗಜಕ್ಕೆ ೧-೮-೦ ರೂ. ಸಂತೆಯೂ ಅವರ ಹಿಂಭಾಗದ ಸೈಟನ್ನು ೦-೪-೦ ಆಣೆ ಯಂತೆಯೂ ಕೊಡಲಾಯಿತು, ಇದನ್ನು ಬೆಂಗಳೂರ್ ಟ್ರಸ್ಟ್ ನಗರಾಭಿವೃದ್ಧಿ ಸಮಿತಿಯ ಸಭೆಯಲ್ಲಿ ಶ್ರೀ ಮರಿಯಪ್ಪನವರು ಹಾಜರಿದ್ದರು; ಶ್ರೀ ಎಸ್. ರಂಗರಾಜು ಚೆನ್ನಯ್ಯನವರೂ ಸಹ ಇದೇ ಜಮೀನಿಗೆ ಅರ್ಜಿ ಹಾಕಿದ್ದರು; ಈ ಜಮೀನನ್ನು ಶ್ರೀ ಮರಿಯಪ್ಪನವರು ಸಿನಿಮಾ ಕಟ್ಟಡಕ್ಕಾಗಿ ಒಟ್ಟು ನಾಮಕರಣಕ್ಕೆ ೩೦,೦೦೦ ರೂಪಾಯಿಗೆ ಮಾರಲು ಪ್ರಯತ್ನಿಸುತ್ತಿರುವರೆಂಬ ಅಂಶ ಸರ್ಕಾರದ ಗಮನಕ್ಕೆ ಬಂದಿಲ್ಲ ಎಂಬುದಾಗಿ ಮಂತ್ರಿಗಳು ತಿಳಿಸಿದರು. ಇದರ ಮೇಲೆ ಅನೇಕ ಉಪಪ್ರಶ್ನೆಗಳನ್ನು ಕೇಳಲಾಯಿತು.

ಟ್ರಸ್ಟ್‌ಬೋರ್ಡಿನಲ್ಲಿ ಶ್ರೀ ಮರಿಯಪ್ಪನವರು ಸದಸ್ಯರಾಗಿರುವುದರ ದಾಕ್ಷಿಣ್ಯದಿಂದ ಈ ಜಮೀನನ್ನು ಅವರಿಗೆ ಕಡಿಮೆ ಬೆಲೆಗೆ ಕೊಡಲಾಯಿತೆಂಬುದು ನಿಜವೇ? ಎಂಬ ಪ್ರಶ್ನೆಗೆ ಇದು ನಿರಾಧಾರವಾದ ಆಪಾದನೆ ಎಂದು ಉತ್ತರವಿತ್ತರು. ಸದರಿ ಜಮೀನನ್ನು ಹರಾಜು ಹಾಕದೆ ಕೊಡಲು ಕಾರಣವೇನು ಎಂಬ ಪ್ರಶ್ನೆಗೆ ಹರಾಜು ಹಾಕಿದರೆ ಈಗಿನ ಬೆಲೆಗೆ ಹೆಚ್ಚಿನದ್ದು ದೊರೆಯುತ್ತಿರಲಿಲ್ಲವೇ? ಎಂದು ಕೇಳಲು ಅದು ಸರ್ಕಾರಕ್ಕೆ ಸಂಬಂಧಪಟ್ಟ ವಿಷಯವಲ್ಲ ಹೇಗೂ ತಿಳಿಸಲಾಯಿತು. ಇವುಗಳನ್ನು ವಿಲೇವಾರಿ ಮಾಡಲು ಯಾವ ರೀತಿಯನ್ನು ಅನುಸರಿಸಲಾಗುವುದೆಂದು ಕೇಳಲು ಸದ್ಯಕ್ಕೆ ಅದರ ಬಗ್ಗೆ ಗೊತ್ತಿಲ್ಲವೆಂದೂ ಮತ್ತು ಈ ವಿಷಯದಲ್ಲಿ ಸರ್ಕಾರದವರು ಪ್ರವೇಶಿಸುವುದಿಲ್ಲವೆಂದೂ ತಿಳಿಸಲಾಯಿತು.

ಖಾಸಗೀ ಕಾಲೇಜುಗಳಿಗೆ ಸಹಾಯ

ಖಾಸಗೀ ಕಾಲೇಜುಗಳ ಬಗ್ಗೆ ಶ್ರೀ ಎಸ್. ಸ್ವಾಮಿರಾಯರು ಕೇಳಿದ ಪ್ರಶ್ನೆಗೆ ಡಾ॥ ರಾಮರಾವ್ ರವರು ಉತ್ತರವಿತ್ತರು. ಬೆಂಗಳೂರಿನಲ್ಲಿ ಒಬ್ಬನ್ನು ನ್ಯಾಷನಲ್ ಹೈಸ್ಕೂಲ್, ವಿಜಯಾ, ಮೈಸೂರಿನಲ್ಲಿ ಶಾರದಾವಿಲಾಸ್ ಇಂಟರ್‌ಮೀಡಿಯೆಟ್ ಕಾಲೇಜುಗಳು ಸ್ಥಾಪಿತವಾಗಿವೆಯೆಂದೂ ಮೈಸೂರಿನಲ್ಲಿ ಸೇಂಟ್ ಫಿಲೋಮಿನಾ ಕಾಲೇಜೂ ಬೆಂಗಳೂರಿನಲ್ಲಿ ಎಸ್. ಎಲ್. ಎನ್. ಕಾಲೇಜೂ ಸ್ಥಾಪಿತವಾಗಲಿವೆ ಎಂದೂ ವಿದ್ಯಾ ಮಂತ್ರಿಗಳು ತಿಳಿಸಿದರು. ಖಾಸಗೀ ಕಾಲೇಜುಗಳಿಗೆ ಸಹಾಯ ಧನವನ್ನು ಕೊಡುವ ಅಂಶವು ಸರ್ಕಾರದವರ ಪರಿಶೀಲನೆಯಲ್ಲಿದೆಯೆಂದೂ ಮೈಸೂರಿನ ಸೇಂಟ್ ಫಿಲೋಮಿನಾ ಕಾಲೇಜಿಗೆ ಸಹಾಯಧನವನ್ನು ಈಗಾಗಲೇ ಕೊಡಲಾಗಿದೆಯೆಂದೂ ತಿಳಿಸಲಾಯಿತು ಇದರ ಮೇಲೂ ಹೇರಳವಾಗಿ ಪ್ರಶ್ನೋತ್ತರಗಳಾದುವು.

ಸೇಂಟ್ ಫಿಲೋಮಿನ ಕಾಲೇಜಿಗಿಂತಲೂ ಬಹಳ ಮುಂಚೆಯೇ ಇತರ ನಾಲ್ಕು ಕಾಲೇಜುಗಳು ಸ್ಥಾಪಿತವಾಗಿದ್ದರೂ, ಅವುಗಳಿಗೆ ಇದುವರೆಗೆ ಗ್ರಾಂಟನ್ನು ಕೊಡದೆ ಸದರಿ ಕಾಲೇಜಿಗೆ ಮಾತ್ರ ಕೊಡಲು ಕಾರಣವೇನೆಂದು ಶ್ರೀ ಚೆಂಗಲರಾಯರೆಡ್ಡಿ ಯವರು ಕೇಳಿದರು. ಮೊದಲು ಸೇಂಟ್ ಫಿಲೋಮಿನ ಕಾಲೇಜಿನವರು ಗ್ರಾಂಟಿಗಾಗಿ ಕೇಳಿಕೊಂಡರೆಂದೂ, ಅಲ್ಲದೆ ಇತರ ಕಾಲೇಜುಗಳವರು ಕೇಳುವದರಿಂದ ಈ ಬಗ್ಗೆ ನಿಯಮಗಳನ್ನು ಮಾಡಿ ಅವರ ಅರ್ಜಿಗಳನ್ನೂ ಪರಿಶೀಲಿಸಲಾಗುವುದೆಂದೂ ತಿಳಿಸಲಾಯಿತು. ಈ ನಾಲ್ಕು ಕಾಲೇಜುಗಳಿಗೆ ಹಿಂದಿನಿಂದಲೂ ಗ್ರಾಂಟುಗಳನ್ನು ನೀಡಿಕೊಡಲಾಗುವುದೇ ಎಂದು ಕೇಳಿದಾಗ ಅದನ್ನು ವಿಚಾರಮಾಡಲಾಗುವುದೆಂದು ತಿಳಿಸಲಾಯಿತು.

ಮೈಸೂರು ಶಾರದಾವಿಲಾಸ ಹೈಸ್ಕೂಲಿಗೆ ಅತ್ಯಂತ ಸಮೀಪದಲ್ಲಿ ಒಂದು ಸಿನಿಮಾ ಮಂದಿರವನ್ನು ಕಟ್ಟಲು ಅನುಮತಿ ಕೊಟ್ಟಿರುವ ಅಂಶವು ಸರ್ಕಾರದ ಗಮನಕ್ಕೆ ಬಂದಿದೆ ಎಂದೂ ಆದರೆ ಅಲ್ಲಿ ವಿದ್ಯಾರ್ಥಿಗಳಿರುವ ವಸತಿ ಬಟಿನ ಮೈದಾನದ ಪ್ರದೇಶಕ್ಕೆ ಈ ಕಟ್ಟಡದಿಂದ ಯಾವ ಅಡಚಣೆಯೂ ಉಂಟಾಗುವುದಿಲ್ಲವೆಂದೂ ವಿದ್ಯಾ ಮಂತ್ರಿಗಳಾದ ಡಾ॥ ರಾಮರಾವ್‌ರವರು ಶ್ರೀ ಮ. ಕಿ. ಎಂ. ಆರ್. ಲಕ್ಷ್ಮಮ್ಮನವರ ಪ್ರಶ್ನೆಗಳಿಗೆ ಉತ್ತರವಾಗಿ ತಿಳಿಸಿದರು ಇದರ ಮೇಲೆಯೂ ಹಲವು ವಿಶೇಷವಾಗಿ ಪ್ರಶ್ನೆಗಳು ಬಂದುವು.

ಸಿನೆಮಾಗಳ ಪ್ರದರ್ಶನಗಳು ನಡೆಯುವಾಗ ಶಾಲೆಯ ವಿದ್ಯಾರ್ಥಿಗಳಿಗೆ ತೊಂದರೆ ಯಾಗುವುದಿಲ್ಲವೇ ಎಂದು ಕೇಳಿದಾಗ ಈ ಪ್ರದರ್ಶನಗಳು ರಾತ್ರಿವೇಳೆಯಲ್ಲಿ ಮಾತ್ರ ನಡೆಯುವುದರಿಂದ ಯಾವ ತೊಂದರೆಯೂ ಆಗುವುದಿಲ್ಲವೆಂದು ಶ್ರೀ ಟಿ ಬಿ ಮಲ್ಲಾ

ಅಖಿಲ ಭಾರತ ಕಾಂಗ್ರೆಸ್ ಸಭೆ

ಇಂದಿನಿಂದ ಬೊಂಬಾಯಿ ಜಹಾಂಗೀರ್ ಭವನದಲ್ಲಿ ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಸಭೆ ಆರಂಭವಾಗುವುದು. ಪಂ ಜವಹರಲಾಲ ನೆಹರುರವರು ಕಳೆದ ಆರು ವರ್ಷಗಳಿಂದ ಕಾಂಗ್ರೆಸ್ ಅಧ್ಯಕ್ಷರಾಗಿದ್ದ ಮೌಲಾನ ಆಜಾದರಿಂದ ಅಧಿಕಾರ ವಹಿಸಿ ಕೊಳ್ಳುವರೆಂದು ಗೊತ್ತಾಗಿದೆ. ಬ್ರಿಟಿಷ್ ಮಂತ್ರಿಮಂಡಲದವರ ರಾಜ್ಯಾಂಗ ರಚನಾ ಸಭೆಯ ಸಲಹೆಯನ್ನು ಅಂಗೀಕರಿಸಿ ತಾತ್ಕಾಲಿಕ ಸರ್ಕಾರದ ಸಲಹೆಯನ್ನು ತಿರಸ್ಕರಿಸಿರುವ ಕಾಂಗ್ರೆಸ್ ವರ್ಕಿಂಗ್ ಕಮಿಟಿ ನಿರ್ಣಯವು ಇಂದಿನ ಸಭೆಯಲ್ಲಿ ಚರ್ಚೆಗೆ ಬರಲಿದೆ. ಸಮಾಜವಾದಿಗಳೂ ಫಾರ್ವರ್ಡ್ ಬ್ಲಾಕಿನವರೂ ಇದನ್ನು ವಿರೋಧಿಸಲು ತೀರ್ಮಾನಿಸಿದ್ದಾರೆ.

ಕಮಲಾದೇವಿಯವರ ಮೇಲೆ ಇದ್ದ ಗಡೀಪಾರಾಜ್ಞೆ ರದ್ದು

ಪ್ರಸಿದ್ಧ ಕಾಂಗ್ರೆಸ್ ಮುಖಂಡರಾದ ಶ್ರೀಮತಿ ಕಮಲಾದೇವಿ ಚಟ್ಟೋಪಾಧ್ಯಾಯರ ಮೇಲಿನ ಗಡೀಪಾರಾಜ್ಞೆಯನ್ನು ಸರ್ಕಾರದವರು ರದ್ದುಗೊಳಿಸಿರುವರೆಂದು ಇಂದು ಶ್ರೀ ಓ. ಪುಲ್ಲಾರೆಡ್ಡಿಯವರು ನ್ಯಾಯ ವಿಧಾಯಕ ಸಭೆಯಲ್ಲಿ ಪ್ರತಿಬಂಧಕಾಜ್ಞೆಗಳನ್ನು ರದ್ದುಗೊಳಿಸಬೇಕೆಂದು ಶ್ರೀ ಎಸ್. ಸಿ. ನಾಗಪ್ಪಶೆಟ್ಟಿಯವರ ನಿರ್ಣಯಕ್ಕೆ ಉತ್ತರಕೊಡುವಾಗ ತಿಳಿಸಿದರು

ರಾಯರು ತಿಳಿಸಿದರು. ಹಾಗೆ ಸದ್ಯದಲ್ಲಿ ಯೇ ಮೈಸೂರಿಗೆ ಬಂದಾಗ ಎಲ್ಲಾ ವಿಷಯಗಳನ್ನೂ ಪರಿಶೀಲಿಸಿ ಸೂಕ್ತವಾದ ಏರ್ಪಾಡು ಮಾಡುವುದಾಗಿ ಡಾ॥ ರಾವ್ ರವರು ತಿಳಿಸಿದರು

ಮಹಾರಾಣಿ ಇಂಟರ್ ಮೀಡಿಯೆಟ್ ಕಾಲೇಜನ್ನು ಬಹಳ ದೂರದ ಪ್ರದೇಶಕ್ಕೆ ವರ್ಗಾಯಿಸಿರುವುದರಿಂದ ಉಂಟಾಗಿರುವ ತೊಂದರೆ ವಿಷಯವಾಗಿ ಶ್ರೀಮತಿ ಎಂ ಆರ್. ಲಕ್ಷ್ಮಮ್ಮನವರು ಅನೇಕ ಪ್ರಶ್ನೆ ಹಾಕಿದ್ದರ, ಮೈಸೂರಿಗೆ ತಾವು ಹೋದಾಗ ವಿಚಾರಿಸಿ ಕ್ರಮ ಕೈಗೊಳ್ಳುವುದಾಗಿ ವಿದ್ಯಾ ಮಂತ್ರಿಗಳು ಹೇಳಿದರು.

ಸಾಧ್ವಿ

ಮೈಸೂರು ೬-೭-೪೬ ಶನಿವಾರ

ಉದಾರ ನೀತಿಗೆ ಸೀಳಿಕೆಯಾಗಲಿ

ಇನ್ನು ದಿನಗಳ ವೇಳೆಯಲ್ಲಿಯೂ ನಮ್ಮ ಸರ್ಕಾರದವರು ಪ್ರತಿಬಂಧಕಾಜ್ಞೆಗಳನ್ನು ರದ್ದು ಮಾಡುವ ಪರವಶತೆಯನ್ನು ತೋರ್ಪಡಿಸುವುದಕ್ಕಾಗಿ ನಾವು ಸಂತೋಷಿಸುತ್ತೇವೆ. ಬರೀ ಘೋಷಣೆಯೇ ಸಾಲದು, ಅವುಗಳನ್ನು ಕೂಡಲೇ ಕಾರ್ಯರೂಪಕ್ಕೆ ತರುವುದೂ ಅಗತ್ಯವಾಗಿದೆ. ಪ್ರತಿಬಂಧಕಗಳು ಒಂದಲ್ಲ, ಒಂದು ದಿನ ತೊಲಗಲೇಬೇಕೆಂಬ ನಂಬಿಕೆಯು ಎಲ್ಲರಿಗೂ ಇದ್ದೇ ಇದೆ. ಆದರೆ ವಿಶೇಷ ಕಾಲಾವಧಿಯವಾಗಿ, ಅವುಗಳ ಬಲೆಯು ಸಂಪೂರ್ಣವಾಗಿ ಉಪಯೋಗಿಸುವ ಮೊದಲೇ ಈ ಔದಾರ್ಯವನ್ನು ತೋರಿಸುವುದು ಉಚಿತವಾಗಿದೆ.

ಕಳೆದ ಎರಡು ವರ್ಷಗಳ ಹಿಂದೆ ಶ್ರೀಮತಿ ಕಮಲಾ ದೇವಿ ಚಟ್ಟೋಪಾಧ್ಯಾಯರವರ ಮೇಲೆ ವಿಧಿಸಿದ್ದ ನಿರ್ಬಂಧದ ಆಜ್ಞೆಯನ್ನು ನಮ್ಮ ಸರ್ಕಾರದವರು ಈಗ ರದ್ದು ಮಾಡಿರುವುದಾಗಿ ಕೇಳುತ್ತೇವೆ. ಇಂತಹ ಪ್ರತಿಬಂಧಗಳು ಅತ್ಯಂತ ಅನುಚಿತವಾದುವೆಂಬುದನ್ನು ಬೇರೆ ಹೇಳಬೇಕಾಗಿಲ್ಲ. ಇವನ್ನು ರದ್ದು ಮಾಡಬೇಕೆಂದು ಅನೇಕಾವರ್ತಿ ಕೇಳಲಾಗಿತ್ತು. ಆದರೆ ಇದುವರೆಗೆ ಸರ್ಕಾರದವರು ಅದಕ್ಕೆ ಕಿವಿಗೊಡಲಿಲ್ಲ. ಈ ಹಿಂದೆಯೇ ಇದನ್ನು ತೆಗೆದುಹಾಕಿದ್ದರೆ ಅದಕ್ಕೆ ಎಷ್ಟೋ ಬೆಲೆ ಇರುತ್ತಿತ್ತು. ಈಗಲಾದರೂ ತೆಗೆದು ಹಾಕಿರುವುದು ಸಮಾಧಾನದ ವಿಷಯ.

ಸರ್ಕಾರದವರ ಈ ಸರ್ಕಾರನೆಯು ಎಲ್ಲಾ ಪ್ರತಿಬಂಧಕಗಳ ನಿವಾರಣೆಗೂ ಹೇತುವಾಗಲೆಂದು ನಾವು ಬಯಸುತ್ತೇವೆ. ಬೆಂಗಳೂರು ಕಾರ್ಮಿಕರ ನಾಯಕರಾದ ಶ್ರೀ ಎಂ. ಎ. ಪರಶುರಾಮರವರ ವಿಷಯವು ಎಲ್ಲರಿಗೂ ಅತ್ಯಂತ ಕಳವಳಕಾರಕವಾದುದು. ಅವರ ಮೇಲೆ ಸರ್ಕಾರದವರು ಗಡೀಪಾರು ಆಜ್ಞೆಯನ್ನು ಹಾಕಿ ಅನೇಕ ವರ್ಷಗಳಾದುವು. ಈ ಸಂಬಂಧದಲ್ಲಿ ಅವರು ಅನಿರೀಕ್ಷಿತವಾದ ಕಷ್ಟಕ್ಕೆ ಗುರಿಯಾಗಿದ್ದಾರೆ. ಅವರನ್ನು ಸಂಸ್ಥಾನದಿಂದ ಹೊರಕ್ಕೆ ಕಳುಹಿಸಿದ ದಿನದಿಂದ ಬೆಂಗಳೂರಿನಲ್ಲಿಯೇ ಇದ್ದ ಅವರ ಕುಟುಂಬಕ್ಕೆ [illegible] ಪರಿಸ್ಥಿತಿಗಳು, ... [illegible] ಶ್ರೀ ಪರಶುರಾಮರವರು ... [illegible] ಅವರನ್ನು ... [illegible] ನೋಡಲೂ ಅವರನ್ನು ... [illegible] ... ಆಸ್ಪತ್ರೆಗೆ ದಾಖಲಾಗಿರುವರು. ... [illegible]

[illegible]

ರೊಟ್ಟಿ ಅಭಾವ

ಸ್ವಂ ಸು] — ಕೃಷ್ಣರಾಜನಗರ ೩

ಈ ಊರಿನಲ್ಲಿ ಬ್ರೆಡ್ ಸಿಗುತ್ತಿಲ್ಲವೆಂದು ಗಲಾಟೆಯಾಗುತ್ತಿರುವ ದೂರನ್ನು ಅಸಾಧ್ಯವಾಗಿದೆ.

ಇಲ್ಲಿಯ ಡಿ ಸ್ಟೋರಿನಲ್ಲಿ ಸೂರಿನ ಒಂದು ಭಾಗ ಅಕ್ಕಿಯನ್ನೂ ಎರಡು ಭಾಗ ಗೋಧಿಯನ್ನೂ ರೇಷನ್ ಕೊಡುತ್ತಿದ್ದಾರೆ. ಅಕ್ಕಿಗಾಗಿ ಜನರು ಪಡುತ್ತಿರುವ ಕಷ್ಟ ಬಹಳವಾಗಿದೆ. ಸಕ್ಕರೆಯನ್ನು ಭಾಗಶಃವಾಗಿ ಮಾತ್ರ ಕೊಡುವ ವ್ಯವಸ್ಥೆ ನಡೆದಿದೆ. ಇದರಿಂದ ಸಾರ್ವಜನಿಕರಿಗೆ ತೊಂದರೆಯಾಗಿದೆ.

ಇಲ್ಲಿ ಹೊಸದಾಗಿ ಆರಂಭವಾಗಿರುವ ಶ್ರೀ ಕರ್ನಾಟಕ ನಾಟಕ ಸಭೆಯವರ ಪ್ರಥಮ ಪ್ರದರ್ಶನವಾದ 'ವಿಶ್ವಾಮಿತ್ರ' ಎಂಬ ನಾಟಕದ ೧೦ ಘೋಷ್ಣ ವ ಮೈಸೂರು ಜಿಲ್ಲಾಧಿಕಾರಿಗಳಿಂದ ಕಳೆದ ೨೭ ನೇ ತಾ|| ನೆರವೇರಿತು.

ವಿಶ್ವಶಾಂತಿ ಸಮ್ಮೇಳನ ಜುಲೈ ೨೯ ರಲ್ಲಿ

ಇಟಲಿಯು ಕೊಡಬೇಕಾದ ಯುದ್ಧ ಪರಿಹಾರದ ಬಗ್ಗೆ ಚತುರ್ಶಕ್ತಿಗಳ ವಿದೇಶಾಂಗ ಸಚಿವರ ಸಮ್ಮೇಳನದಲ್ಲಿ ಒಪ್ಪಂದವಾಯಿತು. ಇದರಿಂದ ಎಲ್ಲ ವಾದಾಂಶಗಳೂ ಬಗೆಹರಿದುವು. ಆದ್ದರಿಂದ ಜುಲೈ ೨೯ ನೇ ತಾ|| ಪ್ರಪಂಚದ ೨೧ ರಾಷ್ಟ್ರಗಳ ಮಹಾ ಶಾಂತಿ ಸಮ್ಮೇಳನ ನಡೆಸಬೇಕೆಂದು ನಿರ್ಧಾರವಾಗಿದೆ.

ಮುಂಬಯಿ ಪ್ರದೇಶಗಳಿಗೆ ಬರಕೂಡದೆಂಬ ಆಜ್ಞೆಯೂ ಹಲವರ ಮೇಲೆ ಇದೆ. ಬೆಂಗಳೂರು ನಗರದಲ್ಲಿ ಸಾ. ಜನಿಕ ಸಭೆ ಮತ್ತು ಮೆರವಣಿಗೆಗಳಿಗೆ ನಾಲ್ಕು ವರ್ಷದ ಹಿಂದೆ ಹಾಕಿದ ನಿರ್ಬಂಧವು ಇನ್ನೂ ಜಾರಿಯಲ್ಲಿದೆ. ಇವುಗಳೆಲ್ಲವೂ ಇನ್ನು ಮೇಲೆ ಕೇವಲ ಅಪ್ರಸ್ತುತವಾದ ಆಜ್ಞೆಗಳು. ಇವೆಲ್ಲವನ್ನೂ ಸರ್ಕಾರದವರು ಕೂಡಲೇ ತೆಗೆದು ಹಾಕಬೇಕು.

ನೆರೆಯ ಪ್ರಾಂತಗಳಲ್ಲಿ ಇಂತಹ ಆಜ್ಞೆಗಳೆಲ್ಲವೂ ಸಹಜವಾಗಿ ಹೋಗಿವೆ. ಕಾಂಗ್ರೆಸ್ ಪ್ರಾಂತಗಳಲ್ಲಿ ಮಾತ್ರವೇ ಅಲ್ಲದೆ ಇತರ ಕಡೆಗಳಲ್ಲಿಯೂ ತೊಲಗಿವೆ. ರಾಜಕೀಯ ಖೈದಿಗಳೆಲ್ಲರನ್ನೂ ಬಿಡುಗಡೆ ಮಾಡಲಾಗುತ್ತಿದೆ. ಹಾಗಿರುವಾಗ ಮೈಸೂರಿನಲ್ಲಿ ಮಾತ್ರ ಏಕೆ ವ್ಯತ್ಯಾಸವಾಗಬೇಕು? ಶಾಸನ ಸಭೆಯಲ್ಲಿ ಮಂತ್ರಿಗಳು ಸೂಚಿಸಿದ ಉದಾರ ನೀತಿಯು ಮೇಲ್ಕಂಡ ವಿಷಯಗಳಿಗೂ ಕೂಡಲೇ ಅನ್ವಯಿಸಲ್ಪಟ್ಟು ಜನತೆಯ ಮನಸ್ಸಿನಲ್ಲಿರುವ ಸಕಲ ಸಂಶಯಗಳೂ ಬೇಗನೆ ಪರಿಹಾರವಾಗಲೆಂದು ನಾವು ಆಶಿಸುತ್ತೇವೆ

ರಾಜಧಾನಿಗೆ ಶ್ರೀ ಜಿನರಾಜ ದಾಸರ ಆಗಮನ

ಮೈಸೂರು ೬

ಥಿಯಾಸಫಿಕಲ್ ಸೊಸೈಟಿ ಎಂಬ ವಿಶ್ವ ಸಂಸ್ಥೆಯ ಸರ್ವಾಧ್ಯಕ್ಷರಾದ ಶ್ರೀ ಜಿನರಾಜ ದಾಸರವರು ಇದೇ ತಿಂಗಳು ೯ ನೇ ತಾ|| ದಿನ ಬೆಂಗಳೂರಿನಿಂದ ಮೈಸೂರಿಗೆ ಬರುವರು. ಆ ದಿನ ಬೆಳಗ್ಗೆ ೬ ಘಂಟೆಗೆ ರೈಲ್ವೆಸ್ಟೇಷನ್‌ನಲ್ಲಿ ಅವರಿಗೆ ಸ್ವಾಗತವನ್ನು ಈಯಲು ಈ ಊರಿನ ಥಿಯಾಸಫಿಕಲ್ ಸೊಸೈಟಿ ಮೆಂಬರುಗಳು ಏರ್ಪಾಡು ಮಾಡಿರುತ್ತಾರೆ.

ಶ್ರೀ|| ಜಿನರಾಜ ದಾಸರವರು ಮಹಾ ವ್ಯಕ್ತಿಗಳೆನ್ನುವುದರಲ್ಲಿ ಸಂದೇಹವಿಲ್ಲ. ಅವರು ಈಗ ೭೦ ವರ್ಷ ವಯಸ್ಸಿನವರಾಗಿದ್ದಾಗ್ಯೂ ಪ್ರಪಂಚದ ದೇಶಗಳೆಲ್ಲೆಲ್ಲಾ ಅನೇಕಾವರ್ತಿ ಪ್ರವಾಸಮಾಡಿ ಥಿಯಾಸಫಿಯ ಸಂದೇಶವನ್ನು ಹಂಚುತ್ತಿದ್ದಾರೆ. ವಿಶೇಷವಾಗಿ ಹತ್ತು ವರ್ಷಗಳಿಂದೀಚೆಗೆ ದ. ಅಮೆರಿಕಾ ದೇಶಗಳಲ್ಲಿ ಸುತ್ತಿ ಅಲ್ಲೆಲ್ಲಾ ಥಿಯಾಸಫಿ ಸದಾ ಅಮೋಘವಾದ ಕೆಲಸವನ್ನು ಮಾಡಿರುತ್ತಾರೆ. ಈ ವರ್ಷ ಆ ವಿಶ್ವ ಸಂಸ್ಥೆಗೆ ಅಧ್ಯಕ್ಷರಾಗಿ ಚುನಾಯಿತರಾಗಿದ್ದಾರೆ. ಇವರು ಅನೇಕ ಪುಸ್ತಕಗಳನ್ನು ಬರೆದಿರುತ್ತಾರೆ. ಆಧುನಿಕ ವಿಜ್ಞಾನ ಶಾಸ್ತ್ರಜ್ಞರ ರೀತಿಯಲ್ಲಿ ಎಲ್ಲರಿಗೂ ಒಪ್ಪುವಹಾಗೆ ಗ್ರಂಥಗಳನ್ನು ರಚಿಸಿರುತ್ತಾರೆ. ಇಂತಹ ಮಹನೀಯರು ಅನಿರೀಕ್ಷಿತವಾಗಿ ನಮ್ಮಲ್ಲಿಗೆ ಬರುವ ಸನ್ನಿವೇಶವನ್ನು ಉಪಯೋಗಿಸಿಕೊಳ್ಳುವುದಕ್ಕೋಸ್ಕರ ಇಲ್ಲಿನವರು ಎರಡು ಉಪನ್ಯಾಸಗಳನ್ನು ಏರ್ಪಡಿಸಿರುತ್ತಾರೆ. ಇದೇ ೯ ನೇ ತಾ|| ದರ್ಬಾರ್ ಪ್ರಾಂಚ ಬನುಮಯ್ಯನವರ ಹೈಸ್ಕೂಲಿನಲ್ಲಿ ಸಾಯಂಕಾಲ ೬|| ಘಂಟೆಗೂ, ೧೦ ನೇ ತಾ|| ದಿನ ಮಹಾರಾಜಾ ಕಾಲೇಜಿನಲ್ಲಿ ೬|| ಘಂಟೆಗೂ ನಡೆಯಲಿವೆ.

ಒಪೇರಾ ಟಾಕೀಸ್

ಮೈಸೂರು

6—7—46 ರಿಂದ

ಲವಂಗಿ

(ತಮಿಳು)

ಪಾತ್ರ:—

* ವೈ. ವಿ. ರಾವ್, * ಕುಮಾರಿ ರುಕ್ಮಿಣಿ * ಜಯಮ್ಮ, * ಸಾರಂಗ ಪಾಣಿ

ಮುಂತಾದವರು

ಪ್ರತಿದಿನ ೩ ಆಟಗಳು

Edited, printed and published by A. ... [illegible] of the Sadhvi Press D... [illegible] Road, Mysore

ಕೃಷ್ಣರಾಜೇಂದ್ರ ಗಿರಣಿಯ ಮುಷ್ಕರ

ಮೈಸೂ

ಕೃಷ್ಣರಾಜೇಂದ್ರ ಗಿರಣಿಯಲ್ಲಿ ... ಗಳಿಂದ ಮುಷ್ಕರ ನಡೆಯುತ್ತಿರುವುದು ತಿಳಿದು ಬಂದಿದೆ. ಕಾರಣಗಳು ತಿಳಿದುಬಂದಿಲ್ಲ. ಅಧಿಕಾರಿ ವರ್ಗದವರು ... ನಾಗಿದ್ದಾರೆ.

ಹರಿಕಥೆ

ರಾಜಧಾನಿಯ ಹೊಸ ಸಂತೇಪೇಟೆಯಲ್ಲಿರುವ ಶ್ರೀ ಡಿ. ಪುಟ್ಟಯ್ಯನವರ ... ಯಲ್ಲಿ ನಾಳೆ ಸಂಜೆ ೫ ಘಂಟೆಗೆ ಗ... ಶ್ರೀ ರಾಮಕೃಷ್ಣ ಶಾಸ್ತ್ರಿಗಳಿಂದ "ಸತ್ಯ ಭಾಮೆ" ಎಂಬ ಹರಿಕಥೆ ನಡೆಯು... ಸರ್ವರಿಗೂ ಆಹ್ವಾನವುಂಟು.

* ಕೆ. ಗುರುದತ್‌ರವರು ಬೆಂಗಳೂರು ನಗರಾಭಿವೃದ್ಧಿ ಸಮಿತಿ ಅಧ್ಯಕ್ಷರಾಗಿ, ಶ್ರೀ ಕೆ. ಸುಬ್ಬರಾಯರು ಪರಮಾನೆಂಟ್ ಕಮೀಷನರಾಗಿಯೂ ನೇಮಕ ಮಾಡುವರೆಂದು ತಿಳಿದುಬಂದಿದೆ

ಲಾರಿಯ ಅಪಘಾತ

ಸ್ವಂ ಸು.] ಶ್ರೀರಂಗಪಟ್ಟಣ

ನಿನ್ನೆ ಮಧ್ಯಾಹ್ನ ಒಂದೂವರೆ ಗಂಟೆಯಲ್ಲಿ ಬೆಂಗಳೂರಿನಿಂದ ಮೈಸೂರಿಗೆ ಹೋಗುತ್ತಿದ್ದ ಕಲ್ಲಿದ್ದಲು ತುಂಬಿದ ಲಾರಿಯು ಇಲ್ಲಿಯ ಮಿ ಟ ರ ನ ರಿ ಆಸ್ಪತ್ರೆ ಮುಂಭಾಗದ ಸೇತುವೆಯ ಹತ್ತಿರ ಬಿದ್ದು ಪುಡಿ ಪುಡಿಯಾಯಿತು. ಲಾರಿಯಲ್ಲಿ ... ಜನರಿದ್ದರು. ಈ ಲಾರಿಯ ಸಾಹುಕಾರರಾದ ಶ್ರೀ ಸಿ. ನಂಜುಂಡಯ್ಯನವರೇ ಡ್ರೈವ್ ಮಾಡುತ್ತಿದ್ದರು. ಅವರ ಬಲಗೈ ತುಂಬಾ ಜಖಂ ಆಗಿದೆ. ... ಎಂಬಾತನು ಮೂಟೆಗಳ ಮೇಲೆ ಕುಳಿತಿದ್ದನು. ಅವನ ಹೊಟ್ಟೆಗೆ ಪೆಟ್ಟು ಬಿದ್ದಿದೆ. ರಂಗಸ್ವಾಮಿ ಎಂಬಾತನು ಮೆಲ್ಲನೆ ಸೇತುವೆ ಮೇಲೆ ಹಾರಿ ಹತ್ತಿದನು. ಆ ತೊಡೆ ಮತ್ತು ಮುಖಕ್ಕೆ ತುಂಬಾ ... ಆಗಿದೆ. ಡ್ರೈವರ್ ವೀರಭದ್ರಪ್ಪ ಮತ್ತು ಅಪ್ಪಣ್ಣ ಎಂಬುವರಿಗೆ ಅಷ್ಟು ಪೆಟ್ಟಾಗಿಲ್ಲ. ಎಲ್ಲರನ್ನೂ ಮೈಸೂರು ಶ್ರೀ ಕೃಷ್ಣರಾಜೇಂದ್ರ ಆಸ್ಪತ್ರೆಗೆ ದಾಖಲುಮಾಡಿ ಚಿಕಿತ್ಸೆ ಮಾಡಲಾಗುತ್ತಿದೆ.

ಬಾಪೂಜಿ

ಶ್ರೀ ನಾಟಿಗ ಕೃಷ್ಣಮೂರ್ತಿಯವರ "ಬಾಪೂಜಿ" ಎಂಬ ಕೃತಿಯ ಮೊದಲನೆಯ ಮುದ್ರಣದ ಪ್ರತಿಯನ್ನು ... ದಿಂದ ಸ್ವೀಕರಿಸಿದ್ದೇವೆ.

ಪ್ರಸಿದ್ಧ ಪತ್ರಿಕೆ

ತಮ್ಮ ಜೂನ್ ೨೮-೨೯ ನೇ ಸಾರ್ವಜನಿಕ ... ಸಂಚಿಕೆಯಲ್ಲಿ ಶಿವರಾಮಪೇಟೆ ೧೬೩ ನೆ ನಂಬರಿನ ಮನೆ ವಿಚಾರವಾಗಿ ಉಪಾಧ್ಯಾಯ ಲಕ್ಷ್ಮೀನರಸಿಂಹಾಚಾರ್ಯರು ಪ್ರಕಟಿಸಿರುವ ವರದಿಯನ್ನು ಮರೆ ಮಾಚುತ್ತಾರೆ. ... ಬರೆದುಕೊಟ್ಟಿರುವ ಕರಾರಿನಂತೆ ... ಒಳಗೆ ಖಾಲಿ ಮಾಡಿ ಕೊಡುವುದಾಗಿ ... ಹೋದ್ದರಿಂದ ಅವರನ್ನು ... ದಾರಗಳು, ಮನೆ ಖಾಲಿಗೆ ... ಮಾಡಿಕೊಂಡಿರುತ್ತಾರೆ. ... ದಲ್ಲಿ ಮುಂದಲ ಕ್ರಮ ... ಮಸ್ಟೀನವರು ... ಬಾ ದ..

ಪ. ಸುಬ್ಬಾಶೆಟ್ಟಿ

ರಾಜ್ ಕಮಲ್ ಟಾಕೀಸ್, ಮೈಸೂರು

3—7—46 ನೇ ಬುಧವಾರದಿಂದ

ಜನೋತ್ಸಾಹದ ೩ ನೇ ವಾರ

ಸ್ವರ್ಣಲತಾ ಅಜೂರಿ { ರತ್ನನ್ } ಮಾಸ್ಟ್ರ ಕರ್ನಾ ದಿವಾಕರ್

ಪ. ಇಂದ ಪಂಚಾವಳಿ ... ರವರ

... ದೇವ

ಫೋನ್ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ ೭ ಕಾಸು

ಸಂಪುಟ ೪] ಭಾನುವಾರ ೭—೭—೪೬ [ಸಂಚಿಕೆ ೨೩೪

ಕಾಂ॥ ಅಧ್ಯಕ್ಷತೆಯನ್ನು ನೆಹರೂ ವಹಿಸಿದರು

ಇಂಡೋನೇಷಿಯಾದಲ್ಲಿ ಸರ್ವಾಧಿಕಾರ ?

ಇಂಡೋನೇಷಿಯಾದ ಪ್ರಧಾನ ಡಾ॥ ಶೇರಿಯರರ ಅಪಹರಣ ನಡೆದಂದಿನಿಂದ ಅಧ್ಯಕ್ಷ ಡಾ॥ ಸೋಕಾರ್ನೋರವರು ಸರ್ವಾಧಿಕಾರವನ್ನು ವಹಿಸಿದ್ದಾರೆ. ಇಂಡೋನೇಷಿಯ ರಿಪಬ್ಲಿಕ್ ಸೈನ್ಯದ ಕೆಲವು ಅಧಿಕಾರಿಗಳನ್ನೂ ರಾಜಕೀಯ ಮುಖಂಡರುಗಳನ್ನೂ ದಸ್ತಗಿರಿಮಾಡಲಾಗಿದೆ. ಡಾ॥ ಶೇರಿಯರ್‌ರವರ ಸರ್ಕಾರವನ್ನು ಬದಲು ಇಸಿ, ಡಾ॥ ಸೋಕಾರ್ನೋರವರನ್ನು ಪದಚ್ಯುತರನ್ನಾಗಿ ಮಾಡಿ ಸೋವಿಯಟ್ ಶಿಕ್ಷಣ ಪಡೆದ ಹಲವು ಕಮ್ಯೂನಿಸ್ಟ್ ನಾಯಕರನ್ನು ಅಧಿಕಾರಕ್ಕೆ ತರಲು ಇತ್ತೀಚಿನ ಪಿತೂರಿಗಳೆಲ್ಲಾ ನಡೆಯಿತೆಂದು ಗೊತ್ತಾಗಿದೆ.

ದ॥ ಆಫ್ರಿಕಾ ಸತ್ಯಾಗ್ರಹ

ದಕ್ಷಿಣ ಆಫ್ರಿಕದಲ್ಲಿ ಭಾರತೀಯರು ಆರಂಭಿಸುತ್ತಿರುವ ಸತ್ಯಾಗ್ರಹ ಮುಂದುವರಿಯುತ್ತಿದೆ. ಹಲವು ಮಹಿಳೆಯರೂ ಸೇರಿ ೩೦ ಮಂದಿ ಸತ್ಯಾಗ್ರಹಿಗಳಿಗೆ ನೊನ್ನೆ ವಿವಿಧ ಅವಧಿಗಳ ಕಠಿಣಶಿಕ್ಷೆ ವಿಧಿಸಲಾಯಿತು. ಪ್ರಸಂಗ ಸಂಸ್ಥೆಯಲ್ಲಿ ದಕ್ಷಿಣ ಆಫ್ರಿಕಾ ಭಾರತೀಯರ ಪ್ರಶ್ನೆ ತರಬೇಕೆಂದು, ಭಾರತವನ್ನೂ, ಬ್ರಿಟನ್ನನ್ನೂ, ಅಮೆರಿಕವನ್ನೂ, ರಷ್ಯಾವನ್ನೂ ಚೀಣಾವನ್ನೂ ದ॥ ಆಫ್ರಿಕಾ ಭಾರತೀಯ ಕಾಂಗ್ರೆಸ್ಸು ಪ್ರಾರ್ಥಿಸಿದೆ.

ಶ್ರೀ ಜಿನರಾಜದಾಸರು

ಮುಸಾಫಿಕಲ್ ಸೊಸೈಟಿ ಅಧ್ಯಕ್ಷರು

ಕಾಂಗ್ರೆಸ್ಸಿಗೆ ಸಿಖ್ಖರ ಬೆಂಬಲ

ಬೊಂಬಾಯಿಯಲ್ಲಿ ನಿನ್ನೆ ನಡೆದ ಕಾಂ॥ ವರ್ಕಿಂಗ್ ಕಮಿಟಿ ಸಭೆಯಲ್ಲಿ ಸಿಖ್ ಪಂಥದ ನಾಯಕರಾದ ಕಾ॥ ಗಿಲ್‌ರವರು ಬರಿದ್ದು ಸಿಖ್ಖರು ಕಾಂಗ್ರೆಸ್ಸಿಗೆ ಪೂರ್ಣ ಬೆಂಬಲ ನೀಡುವರೆಂದೂ, ಕಾಂಗ್ರೆಸ್ ತೀರ್ಮಾನವನ್ನು ಅನುಸರಿಸುವರೆಂದೂ ಹೇಳಿ ಸಾಬಿನಲ್ಲಿ ಕ್ರಮಬದ್ಧ ಕೋಮುವಾದ ಸಿಖ್ ಪಂಗಡಕ್ಕೆ ಸರಿಯಾದ ಸ್ಥಾನವನ್ನು ಕಾಂಗ್ರೆಸ್ ಕೊಡಬೇಕೆಂದೂ ಅವರು ಕಾಂಗ್ರೆಸ್ ನಾಯಕರನ್ನು ಪ್ರಾರ್ಥಿಸಿದ್ದಾರೆ.

ಐರೋಪ್ಯರ ತಾಟಸ್ಥ್ಯ

ಬಂಗಾಳಾ ಮತ್ತು ಅಸ್ಸಾಂ ಶಾಸನ ಸಭೆಗಳ ಐರೋಪ್ಯ ಸದಸ್ಯರು ರಾಜ್ಯಾಂಗ ರಚನಾ ಸಭೆಗೆ ತಾವು ಅಭ್ಯರ್ಥಿಗಳನ್ನು ನಿಲ್ಲಿಸುವುದಿಲ್ಲವೆಂದೂ, ಓಟನ್ನು ಚಲಾಯಿಸುವುದಿಲ್ಲವೆಂದೂ ಹೇಳಿದ್ದಾರೆ.

ಸಿಲ್ವರ್ ಜುಬಿಲಿ ಸ್ಪೆಷಲ್ ಹಾಲ್ ನ ಸ್ಥಾಪನೆ ಜುಲೈ ೨೧ರಂದು.

ಅಖಿಲ ಭಾರತ ಕಾಂಗ್ರೆಸ್ ಸಮಿತಿ ಸಭೆ

ಬೊಂಬಾಯಿ, ನಗರದಲ್ಲಿ ನಿನ್ನೆ ಮಧ್ಯಾಹ್ನ ಅಖಿಲ ಭಾರತ ಕಾಂಗ್ರೆಸ್ ಸಮಿತಿಯು ಸಮಾವೇಶಗೊಂಡಿತು. ಅಧ್ಯಕ್ಷ ಆಜಾದರು ಕಳೆದ ಎ ವ ಸ ಸ ಸಭೆಯಿಂದೀಚಿನ ವಿದ್ಯಮಾನಗಳನ್ನು ವಿಮರ್ಶಿಸಿ ಭಾಷಣಮಾಡಿ ತಮ್ಮ ಅಧಿಕಾರವನ್ನು ಪಂ॥ ಜವಹರಲಾಲರಿಗೆ ವಹಿಸಿಕೊಟ್ಟರು. ನೆಹರುರವರ ಅಧ್ಯಕ್ಷತೆಯಲ್ಲಿ ಸಭೆ ಮುಂದುವರಿಯಿತು. ಹೊಸ ವರ್ಕಿಂಗ್ ಕಮಿಟಿ ಸದಸ್ಯರ ಹೆಸರು ಈ ಸಂಜೆಯೊಳಗಾಗಿ ಹೊರಬೀಳುವುವೆಂದು ಹೇಳಲಾಗಿದೆ. ಇವರಲ್ಲಿ ಪಂಜಾಬಿಗೂ ಒಂದು ಸ್ಥಾನ ಕೊಡಲ್ಪಡುವುದೆ ದು ಊಹಿಸಲಾಗಿದೆ. ಬ್ರಿ॥ ನಿಯೋಗದವರ ಸಲಹೆ ಬಗ್ಗೆ ವರ್ಕಿಂಗ್ ಕಮಿಟಿ ನಿರ್ಣಯ ಒಂದೇ ಒಂದು ಸಾಲಿನದ್ದು ಮಾತ್ರವಾಗುವುದೆಂದು ಬಲ್ಲಾಗಿದೆ. ತಿದ್ದುಪಡಿಗಳ ಪ್ರಸ್ತಾಪವನ್ನು ತಡೆಗಟ್ಟಲು, ಮೂಲ ನಿರ್ಣಯದ ಅಂಗೀಕಾರವು ಮ ಒಂದಿನ ಸಂಧಾನಕ್ಕೆ ಸಹಕಾರಿಯಾಗಬೇಕೆಂಬ ದೂರದೃಷ್ಟಿಯಿಂದಲೇ ಈ ಕ್ರಮ ನಿರ್ಣಯ ತಲ್ಲುವುದೆಂದು ಹೇಳಲಾಗಿದೆ.

ರಾಮಘರ್ ಕಾಂಗ್ರೆಸ್ ಅಧಿವೇಶನದಲ್ಲಿ ನಾನು ಈ ಗದ್ದುಗೆಗೆ ಬಂದಾಗ ನಾವು ದೇಶದ ಸ್ವತಂತ್ರಕ್ಕಾಗಿ ಹೋರಾಡುತ್ತಿದ್ದೆವು, ಆದರೆ ಇಂದು ನಾವು ಸ್ವಾತಂತ್ರ್ಯದ ಹೊಸಲಿನ ಬಳಿ ಇದ್ದೇವೆ ಎಂದು ತಿಳಿಸಲು ನನಗೆ ಪರಮಾನಂದವಾಗುವುದು.-ಎಂದು ಹೇಳಿ ಮೌ॥ ಆಜಾದರು, ಅಧ್ಯಕ್ಷ ಸ್ಥಾನವನ್ನು ಪಂ॥ ನೆಹರೂರವರು ವಹಿಸಿಕೊಳ್ಳುವಂತೆ ಪ್ರಾರ್ಥಿಸಿದರು.

ಕಳೆದ ಆರು ವರ್ಷಗಳಿಂದ ಆಜಾದರು ವಹಿಸಿದ್ದ ಗುರುತರ ಜವಾಬ್ದಾರಿ ಸ್ಥಾನವನ್ನು ವಹಿಸುವುದು ಕಷ್ಟಸಾಧ್ಯವಾದ ಕಾರ್ಯ. ಅವರೂ ರಾಷ್ಟ್ರಪ್ರೇಮ ಮತ್ತು ಧೀರರನೆದಿಂದ ನಡೆಸ ವುದು ದಾಗ ಅವಶ್ಯಕವಾಗಿರುವುದರಿಂದ ಈ ಜವಾಬ್ದಾರಿ ವಹಿಸಲು ನಾನು ನಿರ್ಧರಿಸಿದ್ದೇನೆ-ಎಂದು ಹೇಳಿ ಪಂ॥ ಜವಹರರು ಅಧ್ಯಕ್ಷ ಸ್ಥಾನವನ್ನು ಅಲಂಕರಿಸಿದರು.

ಮಹಾತ್ಮ ಗಾಂಧಿಯವರು ಓಂಮಂಗಳ ಸಭಾ ಭವನಕ್ಕೆ ಬಂದಾಗ ಸದಸ್ಯರೆದ್ದು ನಿಂತು ಅವರನ್ನು ಸ್ವಾಗತಿಸಿದರು.

* ಜುಲೈ ೨೫ ರಲ್ಲಿ ಎರಡನೇ ಅಣು ಬಾಂಬ್ ಪರೀಕ್ಷಾ ಪ್ರಯೋಗವು ನೀರಿನೊಳಗೆ ನಡೆಯುವುದು.

ಅಣು ಬಾಂಬಿನ ಪ್ರಯೋಗ

ಬಿಕನಿ ದ್ವೀಪದಲ್ಲಿ ಅಣುಬಾಂಬನ್ನು ಪ್ರಯೋಗಿಸಿದ ಕಡೆ ೩೬೦೦ ಪ್ರಾಣಿಗಳಿದ್ದುವು. ಈ ಪೈಕಿ ಕೇವಲ ೩೦ ಪ್ರಾಣಿಗಳು ಮಾತ್ರ ಸತ್ತಿವೆ. ಕೆಲವಕ್ಕೆ ಮಾತ್ರ ಗಾಯಗಳುಂಟಾಗಿದೆಯೆಂದೂ, ಅವು ಸಾಯಬಹುದೆಂದು ನಿರೀಕ್ಷಿಸಲಾಗಿದೆ. ೩೬೦೦ ಪ್ರಾಣಿಗಳ ಪೈಕಿ ಒಂದೂ ಬದುಕುವುದಿಲ್ಲವೆಂದು ಊಹಿಸಿದ್ದ ಗಾಳಿಗೋಪುರವಾದಂತಾಯಿತು.

ಶಾಲೆಗಳ ಪಠ್ಯಪುಸ್ತಕಗಳ ಸಾರ್ವಜನಿಕ ವ್ಯವಸ್ಥೆ

ಕಡಮೆ ಸರಬರಾಜಿನಲ್ಲಿರುವ ಪಠ್ಯಪುಸ್ತಕಗಳನ್ನು ಜಿಲ್ಲಾ ವಿದ್ಯಾಧಿಕಾರಿಗಳು ತಮ್ಮ ಕಛೇರಿಗಳಲ್ಲಿ ಒಬ್ಬ ಸಿಬ್ಬಂದಿಯವರಿಂದ ಮಾರಿಸಲು ಏರ್ಪಾಡು ಮಾಡಬೇಕೆಂದು ಸೂಚಿಸುವ ಸಲಹೆಯನ್ನು ಸರ್ಕಾರವು ಒಪ್ಪಿದ್ದಾರೆ. ತಾಲ್ಲೂಕು ಕೇಂದ್ರಗಳಲ್ಲಿರುವ ಅಸಿಸ್ಟೆಂಟ್ ಇನ್ಸ್‌ಪೆಕ್ಟರುಗಳೂ ಪುಸ್ತಕಗಳನ್ನು ಮಾರಲು ಅವಕಾಶವನ್ನು ಕೊಡಲಾಗಿದೆ.

ಅಹಮದಾಬಾದಿನಲ್ಲಿ ಮತ್ತೆ ಜ್ವಾಲಾಮುಖಿ

ಶಾಂತ ವಾತಾವರಣಕ್ಕೆ ತಿರುಗಿದ್ದ ಅಹಮದಾಬಾದ್ ನಗರವು ಇದ್ದಕ್ಕಿದ್ದಂತೆಯೇ ಮೊನ್ನೆ ಬೆಳಗಿನಿಂದ ಭೀಕರ ರೂಪ ತಾಳಿದ. ಮೊನ್ನೆ ಒಂದೇ ದಿನದಲ್ಲಿ ಮತ್ತೆ ೭ ಜನರು ಸತ್ತಿದ್ದಾರೆ. ಸತ್ತ ಕಡೆ ಇರುತ್ತಿಗಳಿಗೆ ೩೦ ಪ್ರದೇಶಗಳಲ್ಲಿ ಪುಂಡರು ಧಾಳಿ ನಡೆಸಿದ್ದಾರೆ. ಮೊನ್ನೆ ರಾತ್ರಿ ಮಿಲಿಟರಿಯವರು ಹಲವು ಕ್ಷೇತ್ರಗಳಲ್ಲಿ ಗುಂಡು ಹಾರಿಸಿದ್ದಾರೆ. ಕರ್ಫ್ಯೂ ಆಜ್ಞೆಯನ್ನು ಜಾರಿಗಿಸಿದ್ದೇ ಈ ಜ್ವಾಲಾಮುಖಿ ನಿಧಾನ ಅವಶ್ಯಕವಾಯಿತೆಂದು ತಿಳಿಯ ಬಂದಿದೆ. ಈಗ ನಗರದಲ್ಲಿ ಕರ್ಫ್ಯೂ ಮತ್ತೆ ಜಾರಿಗೆ ಬಂದು, ಮಿಲಿಟರಿ ಪಹರೆ ಬಲವಾಗಿ ಬೇರೂರಿದೆ.

ಅಂಚೆ ನಿರ್ಮೂಲ

ಮದ್ರಾಸ್ ಸರ್ಕಾರವು ಅಂಚೆ ಮತ್ತು ವಸ್ತು ಮತ್ತು ಕಾಲಸಂಚಿ ತಡೆಗಟ್ಟಲು ಸಲುವಾಗಿ ಭಾರತ ಸರ್ಕಾರವು ವಿಧಿಸುವ ರೀತಿಯಲ್ಲಿ ಒಂದು ಹೊಸ ನಿಬಂಧನೆಯನ್ನು ಮಾಡಿದೆ.

* ಶಾಂತಿ ಸಮ್ಮೇಳನಕ್ಕೆ ೨೧ ರಾಷ್ಟ್ರಗಳಿಗೆ ಆಹ್ವಾನ, * ಸ್ಪೇನಿಗೆ ಧಾನ್ಯ ರಫ್ತು ಮಾಡಲು ಮನವಿ ಮಾಡಿದ ವಿಷಯ ಬಿಕ್ಕಟ್ಟು ಉಂಟಾಗಿದೆ.

ಬೋಸರ ಬೆಳ್ಳಿ ರಾಖಿ

ಮಲಯದಲ್ಲಿ ಆಜಾದ್ ಹಿಂದ್ ದಳದ ಸ್ಥಾಪನೆ ಆದಾಗ ಶ್ರೀ ಸುಭಾಷ ಚಂದ್ರ ಬೋಸರಿಗೆ ಇತ್ತಿದ್ದ ಬೆಳ್ಳಿ ತಟಕವೊಂದನ್ನು ಅವರು ಹರಾಜು ಹಾಕಿದಾಗ ಅಲ್ಲಿನ ಭಾರತೀಯನೊಬ್ಬನು ಅದನ್ನು ೧ ಲಕ್ಷ ರೂಗಳಿಗೆ ಕೊಂಡುಕೊಂಡಿದ್ದನು. ಅದನ್ನು ಈಚೆಗೆ ಪಂ॥ ಜವಹರಲಾಲರು ಮಲಯಕ್ಕೆ ತೆರಳಿದ್ದಾಗ ಅವರಿಗೆ ಅರ್ಪಿಸಿದ್ದನು. ಅದು ಈಗ ನೆಹರೂರವರ ಬಳಿ ಇದೆ.

ಅಲೆಗ್ಸಾಂಡ್ರಿಯಾದಲ್ಲಿ ಗ್ರಾಂಡ್ ಮುಫ್ತಿ

ಜರುಸಲೇಮಿನ ಗ್ರಾಂಡ್ ಮುಫ್ತಿಯವರಾದ ಮಿ॥ ಹಾಜ್ ಅಮೀನ್ ಉಲ್‌ಹುಸೇನರು ಅಲೆಗ್ಸಾಂಡ್ರಿಯಾದ ಬಳಿಯಿರುವ ಮಲಕಾ ಎಂಬ ಹಳ್ಳಿಗೆ ಮೊನ್ನೆ ಬಂದರೆಂದು ವರದಿಯಾಗಿದೆ.

ಕಾಂಗ್ರೆಸ್ ನಿಧಿ ವಾಪಸ್ಸು

೧೯೪೨ ರಲ್ಲಿ ಮುಂಬೈ ಸರ್ಕಾರವು ಕಾಂಗ್ರೆಸ್ಸಿಗೆ ಸೇರಿದ ೭೩,೦೦೦ ರೂ ನಿಧಿಯನ್ನು ವಶಪಡಿಸಿಕೊಂಡಿತ್ತು. ಈಗ ಆ ನಿಧಿಯನ್ನು ವಾಪಸ್ ಕೊಡಲು ನಿರ್ಧರಿಸಿದೆ.

ವಿದೇಶೀ ಗಂಡಂದಿರಿಗೆ ಇಂಗ್ಲೆಂಡಿಗೆ ಬರಲು ಅವಕಾಶ

ಯುದ್ಧ ಕಾಲದಲ್ಲಿ ಅನೇಕ ವಿದೇಶೀಯರು ಬ್ರಿ॥ ಯುವತಿಯರನ್ನು ಮದುವೆ ಮಾಡಿಕೊಂಡಿದ್ದರು. ಆದರೆ ಈಗಿರುವ ಕಾನೂನಿನಂತೆ ಅವರು ಬ್ರಿಟನ್ನಿಗೆ ವಾಪಸು ಬರಲು ಅವಕಾಶವಿಲ್ಲ. ಆದ್ದರಿಂದ ಈ ಕಾನೂನನ್ನು ಸಡಲಿಸಿ ಅವರೆಲ್ಲಾ ತಮ್ಮ ಹೆಂಡಂದಿರನ್ನು ಕೂಡಲು ಬ್ರಿಟನಿಗೆ ಬರಲು ಅವಕಾಶಕೊಡುವ ಹೊಸ ಕಾನೂನನ್ನು ಜಾರಿಗೆ ತರಲಾಗುವುದು.

ಫ್ಯಾಸಿಸ್ಟ್ ನಿಧಿಯಲ್ಲಿ ಬ್ರಿ॥ ಚಕ್ರವರ್ತಿಗಳ ಸಂಬಂಧವಿದೆಯೇ?

ಸುಪ್ರಸಿದ್ಧ ಗ್ರಂಥಕರ್ತರಾದ ಹೆಚ್. ಜಿ ವೆಲ್ಸ್‌ರವರು ಫ್ರೀಥಿಂಕರ್ಸ್ ಲೀಡರ್ ಪತ್ರಿಕೆಗೆ ಲೇಖನವನ್ನು ಬರೆದು ಬ್ರಿಟಿಷ್ ಫ್ಯಾಸಿಸ್ಟ್ ನಾಯಕರಾದ ಸರ್ ಆಸ್ವಾಲ್ಡ್ ಮಾಸ್ಲಿಯವರಿಗೆ ಮುಸ್ಸೊಲಿನಿಯು ಸರ್ಕಾರದವರು ಯುದ್ಧಕ್ಕೆ ಮುಂಚೆ ನಾಲ್ಕು ಲಕ್ಷ ಪೌಂಡ್ ನಾಣ್ಯಗಳನ್ನು ಕೊಟ್ಟ ವ್ಯವಹಾರದಲ್ಲಿ ಬ್ರಿಟಿಷ್ ಸಾರ್ವಭೌಮರ ಸಂಬಂಧವಿದೆಯೇ? ಎಂದು ಬಹಿರಂಗವಾಗಿ ಕೇಳಿರುವರು.

ಮುಸಲೋನಿ ಹೆಂಡತಿ ಬಿಡುಗಡೆ

ಇಟೆಲಿಯಲ್ಲಿ ಅನೇಕ ಯುದ್ಧ ಕೈದಿಗಳನ್ನು ಬಿಡುಗಡೆ ಮಾಡಲಾಗಿದೆ. ಈ ಪೈಕಿ ಮುಸೋಲಿನಿ ಹೆಂಡತಿ ಮತ್ತು ಆ ಮಕ್ಕಳೂ ಬಿಡುಗಡೆ ಹೊಂದಿದ್ದಾರೆ. ಮುಸಲೋನಿ ಮಗಳೂ, ಕೌಂಟ್ ಸಿಯಾನೋ ಹೆಂಡತಿಯೂ ಆದ ಎಡ್ಡ ಸಿಯಾನೋಳನ್ನೂ ಸಹ ಬಿಡುಗಡೆ ಮಾಡಲಾಗಿದೆ.

ವ್ಯವಸಾಯದ ಭೂಮಿಗಳ ಸಂರಕ್ಷಣೆ

ಮೆಟ್ಟಪಾಳ್ಯ ಬೆಳೆಯುವ ಯೋಜನೆಗೆ ಅನುಸಾರವಾಗಿ ಸರ್ಕಾರದವರು ವ್ಯವಸಾಯದ ಭೂಮಿಗಳನ್ನು ಕಾರ್ಖಾನೆ ಸೈತರಿಗೆ ಸಾಲ ಕೊಡುವವರಿಗಾಗಿ ಹಿಂದೆ ಮಂಜೂರ್ ಮಾಡಿದ್ದ ಎಕರೆ ಲಕ್ಷ ಸಾವಿರ ಗಳನ್ನು ಈ ಲೆಕ್ಕದ ಈಗ ವಾಪಸಿಯುತ್ತಾರೆ. ಈ ರೀತಿಯ ಭೂಮಿಗಳ ರಕ್ಷಣೆಯ ಕಾರ್ಯಗಳನ್ನು ಸಂರಕ್ಷಣೆ ಮಾಡಲು ತೀರ್ಮಾನಿಸಿದೆ.

ಸಾಧ್ವಿ

ತಾ|| ೭-೭-೪೬ ಭಾನುವಾರ

ನೆಹರೂರವರ ನಾಯಕತ್ವ

ಪಂಡಿತ ಜವಾಹರಲಾಲ ನೆಹರೂರವರು ನಿನ್ನೆ ದಿನ ರಾಷ್ಟ್ರಪತಿಯ ಪಟ್ಟವನ್ನು ವಹಿಸಿಕೊಂಡರು. ಕಾಂಗ್ರೆಸ್ ಮಹಾ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಇವರು ಚುನಾಯಿತರಾಗಿರುವುದು ಇದು ಮೂರನೇ ಬಾರಿ. ರಾಷ್ಟ್ರವು ಈ ರೀತಿ ತನ್ನ ಅಖಂಡ ವಿಶ್ವಾಸವನ್ನು ಪರಿಪೂರ್ಣವಾಗಿ ಪ್ರದರ್ಶಿಸಿರುವುದು ಇವರ ವಿಷಯದಲ್ಲಿಯೇ. ರಾಜಕುಮಾರನಂತೆ ಬೆಳೆದು, ಹಂಸ ತೂಲಿಕಾ ತಲ್ಪದ ಸುಖ ಭೋಗಿಸಿ, ಐಶ್ವರ್ಯಗಳಿಂದ ಮೆರೆಯುತ್ತಿದ್ದರೂ, ದೇಶದ ಗೌರವದ ರಕ್ಷಣೆಗಾಗಿ ಸರ್ವಸ್ವವನ್ನೂ ತೃಣೀಕರಿಸಿ ವೀರ ಯೋಧನಂತೆ ಕಾದಾಡುತ್ತಿರುವ ಹೆಗ್ಗಳಿಕೆಯು ನೆಹರೂರವರಿಗೆ ಸಂಪೂರ್ಣವಾಗಿ ಸಲ್ಲುವುದು. ಇಂತಹ ನಾಯಕರು ಪ್ರಪಂಚದ ಸಕಲ ರಾಷ್ಟ್ರಗಳಿಗೂ ಭೂಷಣಪ್ರಾಯರು. ಇವರ ನೇತೃತ್ವದಲ್ಲಿ ಸ್ವಾತಂತ್ರ್ಯ ಸಾಧನೆಗಾಗಿ ಹೋರಾಡುತ್ತಿರುವ ಭಾರತೀಯರು ಧನ್ಯರು.

ಮಹಾತ್ಮ ಗಾಂಧಿಯವರು ದೇಶದ ಸಂಸ್ಕೃತಿ, ಸರಳ ಜೀವನ, ಆಧ್ಯಾತ್ಮ ಸಾಧನೆಯ ಮೂರ್ತಿ ಸ್ವರೂಪದಂತಿರುವರು. ನೆಹರೂರವರು ಉದಾತ್ತ ಧ್ಯೇಯ ಸಾಧನೆಯನ್ನು ಕಾರ್ಯರೂಪದಲ್ಲಿ ಆಚರಣೆಗೆ ತರುವ ವೀರ ಕರ್ಮಯೋಗಿಗಳು. ಇದರಿಂದಲೇ ನೆಹರೂರವರನ್ನು ಮಹಾತ್ಮರು ತಮ್ಮ ರಾಜಕೀಯ ಉತ್ತರಾಧಿಕಾರಿಗಳೆಂದು ಬಹಳ ಹಿಂದೆಯೇ ಸಾರಿದ್ದಾರೆ. ಗಾಂಧೀಜಿಯವರ ತಪೋನುಷ್ಠಾನದ ಭಾವನಾ ತರಂಗಗಳನ್ನು ನೆಹರೂರವರು ಜನ ಜೀವನದಲ್ಲಿ ಜಾರಿಗೆ ತರುವ ವೀರ ಸೇನಾನಿಯಾಗಿರುವರು. ಶ್ರೀಕೃಷ್ಣನು ತನ್ನ ದಿವ್ಯ ಬೋಧನಾಮೃತದಿಂದ ಶಿಷ್ಯನಾದ ಅರ್ಜುನನನ್ನು ಪ್ರಚೋದನಗೊಳಿಸಿ ಕಾರ್ಯರಂಗಕ್ಕೆ ಹಚ್ಚಿದಂತೆ ಮಹಾತ್ಮರು ತಮ್ಮ ಅಮೋಘವಾದ ಪ್ರೇರಣೆಯಿಂದ ನೆಹರೂರವರ ಸ್ಫೂರ್ತಿಯನ್ನು ಉದ್ದೀಪನಗೊಳಿಸುತ್ತಿರುವರು. ಒಂದೊಂದು ಸಮಯದಲ್ಲಿ ಒಬ್ಬರು ಮತ್ತೊಬ್ಬರನ್ನು ಮೀರಿಸುವುದೂ ಉಂಟು.

ಇಂತಹ ಅಸಾಮಾನ್ಯ ನಾಯಕ ಮಣಿ ಜವಹರಲಾಲರು ನಿನ್ನೆ ದಿನ ರಾಷ್ಟ್ರದ ಸ್ವಾತಂತ್ರ್ಯ ಸಾಧನೆಯ ಸೂತ್ರಗಳನ್ನು ತಮ್ಮ ಕೈಗೆ ತೆಗೆದುಕೊಂಡರು. ಮೌಲಾನಾ ಆಜಾದರು ಈ ಸ್ಥಾನವನ್ನು ಅಲಂಕರಿಸಿ ದೇಶಕ್ಕೆ ಸಲ್ಲಿಸಿರುವ ಸೇವೆಯು ಸುವರ್ಣಾಕ್ಷರಗಳಲ್ಲಿ ಬರೆಯಲು ಅರ್ಹವಾಗಿದೆ. ಕಾಂಗ್ರೆಸ್ಸು ಹಿಂದೂ ಸಂಸ್ಥೆಯೆಂದೂ ಆದರಿಂದ ತಮಗೆ ಸೌಖ್ಯವಿಲ್ಲವೆಂದೂ ತಮಗೆ ಪ್ರತ್ಯೇಕ ರಾಜ್ಯವು ಬೇಕೆಂದೂ ಸಾರುತ್ತಿರುವ ಮುಸ್ಲಿಂ ಲೀಗಿನವರ ... ಲಾಗೆ ... ಅಧಿಕಾರವಾಣಿಯಿಂದ ಪ್ರತ್ಯುತ್ತರವನ್ನು ಕೊಟ್ಟಿರುವರು ... [illegible]

ಮುಟ್ಟಿಸಿರುವರು. ಇವರ ಸೇವೆಗಾಗಿ ದೇಶವು ಅವರಿಗೆ ಅತ್ಯಂತ ಋಣಿಯಾಗಿದೆ.

ಸ್ವಾತಂತ್ರ್ಯ ಸಂಗ್ರಾಮವು ಕಡೆಯ ಮೆಟ್ಟಿಲನ್ನು ಮುಟ್ಟಿದೆ. ಲಾಹೋರಿನಲ್ಲಿ ನೆಹರೂರವರು ಪೂರ್ಣ ಸ್ವಾತಂತ್ರ್ಯ ಧ್ವಜವನ್ನು ಹಾರಿಸಿದರು. ಇಂದು ಪೂರ್ಣ ಸ್ವರಾಜ್ಯ ಸಾಧನವನ್ನು ಪಡೆಯುವ ಕಾಲವು ಸನ್ನಿಹಿತವಾಗಿದೆ. ನೆಹರೂರವರು ಬ್ರಿಟಿಷ್ ಭಾರತಕ್ಕೆ ಮಾತ್ರವೇ ಅಲ್ಲದೆ ಸಂಸ್ಥಾನ ಪ್ರಜೆಗಳಿಗೂ ಇಂದು ಏಕೈಕ ನಾಯಕರಾಗಿದ್ದಾರೆ. ಯಾವ ಎಲ್ಲೆ ಕಟ್ಟುಗಳ ಭೇದ ಭಾವವೂ ಇಲ್ಲದೆ ಸಮಗ್ರ ಹಿಂದೂಸ್ಥಾನವೆಲ್ಲವೂ ತಮ್ಮ ಮನೆಯೆಂದು ಸಾರಿದ್ದಾರೆ. ಅಖಂಡ ಭಾರತದ ದಾಸ್ಯ ವಿಮೋಚನೆಯೇ ಇವರ ಇಂದಿನ ಪವಿತ್ರ ಸಂಕಲ್ಪವಾಗಿದೆ. ಲಾಹೋರಿನಲ್ಲಿ ನೆಹರೂರವರು ಮಾಡಿದ ಘೋಷಣೆಯನ್ನು ಇಂದು ನೆಹರೂರವರೇ ಸಾಧನೆಮಾಡಿ ಸ್ವತಂತ್ರ ಭಾರತದ ರಾಷ್ಟ್ರಪತಿಯು ಜನಾಭಿಷಿಕ್ತ ಜನಾಧಿಪತಿಯಾಗಿ ಮೆರೆಯುವ ಕಾಲ ಬಂದಿದೆ. ಈ ಕಾರ್ಯದಲ್ಲಿ ಜಗದೀಶ್ವರನು ನೆಹರೂರವರಿಗೆ ನೆರವಾಗಲಿ !

ಕಾಶ್ಮೀರದ ಕ್ರಾಂತಿ

ಶ್ರೀ ಕೊಳಕುಂದ ಶಿವರಾಯರು ಕನ್ನಡ ನಾಡಿಗೆ ಚಿರ ಪರಿಚಿತರು. ಪ್ರಸ್ತುತ ಸನ್ನಿವೇಶದಲ್ಲಿ ಭಾರತದಾದ್ಯಂತ ಆಂದೋಳನದ ವಾತಾವರಣವನ್ನು ಹುಟ್ಟಿಸಿ ಜನಸ್ತೋಮವೆಲ್ಲಾ ಕಾಶ್ಮೀರದ ಕಡೆ ನೋಡುವ ಸ್ಥಿತಿ ಎದ್ದಿದ್ದಾಗ ಅಲ್ಲಿಯ ರಾಷ್ಟ್ರೀಯ ಕ್ರಾಂತಿಯ ಸ್ವರೂಪವನ್ನು ಕನ್ನಡಿಗರ ಮುಂದೆ ಚಿತ್ರಿಸಿ ವಾಸ್ತವ ವಿಷಯದ ಅರಿವು ಪಡೆಯಲು ಶ್ರೀ ಶಿವರಾಯರು ಈ ಪುಟ್ಟ ಪುಸ್ತಕವನ್ನು ಪ್ರಕಟಿಸಿದ್ದಾರೆ. ಪ್ರಕಾಶಕರು:-ಜನತಾ ಸಾಹಿತ್ಯ-ಹುಬ್ಬಳ್ಳಿ, ಬೆಲೆ ಎರಡಾಣೆ.

ಗವರ್ನರೇ ರಥ ಎಳೆದರು

ಪೂರಿಯ ಜಗನ್ನಾಥ ರಥೋತ್ಸವದಲ್ಲಿ ಮೊಟ್ಟಮೊದಲನೆಯ ಸಾರಿ ಅಲ್ಲಿನ ಗವರ್ನರ್ ಶ್ರೀ ತ್ರಿವೇದಿಯವರು ಖಾಸಾ ಸಹ ರಥವನ್ನು ಎಳೆದರು.

ಫಾರ್ವರ್ಡ್ ಬ್ಲಾಕಿನ ವಿರೋಧ

ಬ್ರಿ|| ನಿಯೋಗದ ಸಲಹೆಗಳ ಬಗ್ಗೆ ಕಾಂಗ್ರೆಸ್ ಕಾರ್ಯಕಾರೀ ಸಮಿತಿ ಮಾಡಿರುವ ನಿರ್ಣಯವನ್ನು ಅಖಿಲ ಭಾರತ ಕಾಂಗ್ರೆಸ್ ಸಮಿತಿಯಲ್ಲಿ ಫಾರ್ವರ್ಡ್ ಬ್ಲಾಕಿನವರು ವಿರೋಧಿಸಬೇಕೆಂದು ಅಧ್ಯಕ್ಷ ಸರ್ದಾರ್ ಶಾರ್ದೂಲ ಸಿಂಗರು ತಿಳಿಸಿದ್ದಾರೆ.

* ಭಾರತಸರ್ಕಾರದ ಆಹಾರ ಸಚಿವರಾಗಿದ್ದ ಸರ್ ಶ್ರೀ ವಾತ್ಸವರವರು ಗ್ವಾಲಿಯರ್ ಸಂಸ್ಥಾನದ ಆಡಳಿತ ಮಂತ್ರಿಗಳಾಗುವರೆಂದು ಗೊತ್ತಾಗಿದೆ

ಅಣುಬಾಂಬು ಪ್ರಯೋಗ

ಅಣುಬಾಂಬು ಬಿಕಿನಿ ದ್ವೀಪದಲ್ಲಿ ಗೊತ್ತಾಗಿದ್ದ ವೇಳೆಗಿಂತ ೩ ಸೆಕೆಂಡ್ ಮುಂಚಿತವಾಗಿ ಗುರಿಗೆ ೧|| ಮೈಲಿ ದೂರದಲ್ಲೇ ಸಿಡಿದುದರಿಂದ ಊಹಿಸಿದ್ದಷ್ಟು ಪ್ರತಿಕ್ರಿಯೆ ಆಗಲಿಲ್ಲವೆಂದು ವರದಿಯಾಗಿದೆ. ಪರೀಕ್ಷಾರ್ಥವಾಗಿ ಹಡಗಿನಲ್ಲಿಟ್ಟಿದ್ದ ಟಗರುಗಳೆಲ್ಲಾ ಜೀವಂತವಾಗಿರುವುದಾಗಿ ತಿಳಿದು ಬಂದಿದೆ.

ಹೈದರಾಬಾದಿನಲ್ಲಿದ್ದ ನಿಷೇಧ ಆಜ್ಞೆ ರದ್ದಾಯಿತು

ಹೈದರಾಬಾದ್ ಸಂಸ್ಥಾನದ ಕಾಂಗ್ರೆಸ್ ಸಂಸ್ಥೆಯ ಮೇಲೆ ೧೯೩೮ನೇ ಸೆಪ್ಟೆಂಬರಿನಲ್ಲಿ ನಿಜಾಂ ಸರ್ಕಾರವು ಹಾಕಿದ್ದ ಪ್ರತಿಬಂಧಕಾಜ್ಞೆಯನ್ನೀಗ ಆ ಸರ್ಕಾರವು ರದ್ದುಗೊಳಿಸಿದೆ

ಕಾಶ್ಮೀರದ ಬಗ್ಗೆ ನೆಹರು

ಕಾಶ್ಮೀರದಲ್ಲಿ ನಡೆದ ಸಂಗತಿ ನನಗೆ ದುಃಖ ಉಂಟು ಮಾಡಿಲ್ಲ. ಇದರಿಂದ ಇಡೀ ದೇಶದ ಕಣ್ಣು ತೆರೆದಂತಾಯಿತು. ನಮ್ಮ ರಾಜಮಹಾರಾಜರುಗಳ ನಿರಂಕುಶಾಧಿಕಾರ, ಹುಚ್ಚಾಟ, ಮತ್ತು ದೌರ್ಜನ್ಯ ಹೇಗಿದೆಯೆಂದು ತೋರಿಸಿಕೊಟ್ಟಂತಾಯಿತು. ಈ ಅನಾಗರಿಕ ನೀತಿ ಕೊನೆಗಾಣಬೇಕು ಇದಕ್ಕೆಲ್ಲಾ ಪರಿಹಾರ, ಪ್ರಜೆಗಳ ಕೈಗೆ ಅಧಿಕಾರವೇ; ದೇಶದ ಪ್ರಗತಿಗಾಮಿಗಳೊಡನೆ ಅವರು ಒಂದಲ್ಲ ಒಂದು ದಿನ ಒಪ್ಪಂದಕ್ಕೆ ಬರಲೇ ಬೇಕು ಎಂದು ನೆಹರುರವರು ಬೊಂಬಾಯಿಗೆ ತೆರಳುತ್ತಾ ರೂಪ್ಸಿ ರೈಲ್ವೆ ನಿಲ್ದಾಣದಲ್ಲಿ ನೆರೆದಿದ್ದ ಜನರನ್ನುದ್ದೇಶಿಸಿ ಹೇಳಿದರು. ಬೊಂಬಾಯಿಯ ಕೆಲಸಕಾರ್ಯಗಳು ಮುಗಿದನಂತರ ಕಾಶ್ಮೀರಕ್ಕೆ ಹೋಗುವ ಯೋಜನೆ ಇದೆಯೆಂದೂ ಅವರು ತಿಳಿಸಿದರು.

ದೊಡ್ಡ ಯುಂಡಿ ಭೋಗಪ್ಪ ಮ್ಯುನಿಸಿಪಲ್ ಹೈಸ್ಕೂಲ್ ಸೆಕ್ರೆಟರಿಯವರ ಅಪ್ಪಣೆಯಿಂದ

ಗುಂಡಪ್ಪಶೆಟ್ಟಿ,
ತಾ|| ೩-೭-೪೬.

ಪ್ರಕಟನೆ

ಮೇಲ್ಕಂಡ ಹೈಸ್ಕೂಲಿನ ಪ್ರಥಮ ತರಗತಿಯನ್ನು ಕೂಡಲೇ ಪ್ರಾರಂಭಿಸಲಾಗುತ್ತೆ. ಮೇಲ್ಕಂಡ ತರಗತಿಗೆ ಸೇರಲು ಇಷ್ಟವುಳ್ಳ ವಿದ್ಯಾರ್ಥಿಗಳು ೧೨-೭-೪೬ ರ ಒಳಗಾಗಿ ಸೆಕ್ರೆಟರಿಯವರಿಗೆ ಅರ್ಜಿಗಳನ್ನು ಹಾಕಿಕೊಳ್ಳಬೇಕು.

ಸೆಕ್ರೆಟರಿ

Edited, printed and published by A. K. Nagarajan at the Sadhvi Press D. Subbiah Road, Mysore.

ದ|| ಆಫ್ರಿಕಾ ಐರೋಪ್ಯರ ಬಗ್ಗೆ ಗಾಂಧೀಜಿ ಖಂಡನೆ

ದಕ್ಷಿಣ ಆಫ್ರಿಕಾದಲ್ಲಿ ಭಾರತೀಯರ ಮೇಲೆ ಐರೋಪ್ಯರು ನಡೆಸುತ್ತಿರುವ ದ[ೌ]ರ್ಜನ್ಯವನ್ನು ಖಂಡಿಸಿ ಮಹಾತ್ಮರು ನಿನ್ನೆ ದಿನ ಪ್ರಾರ್ಥನಾ ಸಭೆಯಲ್ಲಿ ಮಾತ[ನಾ]ಡಿದರು. ಭಾರತೀಯರು ತಮ್ಮ ಗೌರ[ವ]ಕ್ಕಾಗಿ ಹೋರಾಡುತ್ತಿದ್ದಾರೆ; ದ|| ಆಫ್ರಿ[ಕಾ]ವನ್ನು ಆಳುವುದಕ್ಕಲ್ಲ; ಅದು ಅಲ್ಲಿ ದುಡಿಯು[ವ]ವರದು; ದ|| ಆಫ್ರಿಕದಲ್ಲಿ ಶತ್ರುಗಳ ... ಲ್ಲ ಸತ್ಯವೂ ನಾನು ಅಳುವುದಿಲ್ಲ; ... ಸಾಯುವ ಮೂಲಕ ಅವರು ಭಾರತೀಯ[ರಿ]ಗೇ ಅಲ್ಲದೆ ನೀಗ್ರೋಗಳಿಗೂ ದಾರಿ ... ರುವರು, ಭಾರತಕ್ಕೂ ಗೌರವ ತರುವ[ರು] ಎಂದು ಗಾಂಧಿಜಿ ತಿಳಿಸಿದ್ದಾರೆ

WANTED

Applications are invit[ed] for the post of the Manag[er] for the Office of the Myso[re] Vysya Patrika, Mysor[e]. The minimum qualificati[on] for the candidates is S. S. L. C. Those possessing kno[w]ledge in maintaining A[c]counts, Type-writing and Shorthand will be preferre[d]. Salary according to quali[fi]cation and experience. A[p]plications stating minimum salary expected, qualifi[ca]tion, experience, etc., w[ith] testimonials, should re[ach] the undersigned on or [be]fore the 12th July 1946.

P. Gopalakrishna Sett[y] B. A., B...
Editor,
Sayajirao Road,
Mysore C[ity]

Dalvoy's High School Mysore

Morning classes for fa[iled] S. S. L. C. students wil[l be] opened with effect f[rom] 9-7-1946. Admissions [will] be received by the u[nder]signed

B. V. Nanjund[...]
Head M[aster]

ರಾಜ್ ಕಮಲ್ ಟಾಕೀಸ್, ಮೈಸೂರು

೩—7—46 ನೇ ಬುಧವಾರದಿಂದ

ಅಮೋಘವಾದ ೩ ನೇ ವಾರ

ಸ್ವರ್ಣ ಲತಾ, ಅಮೂರಿ { ರತನ್ } ವಾಸ್ತಿ, ಕರಣ್ ದಿವಾನ್

ಮುಂದಿನ ಬದಲಾವಣೆ ರಾಜಕಮಲ್ ರವರ

ಸಬ್‌ಕಾ ಪೆ ಅಪ್ನ ದೇಶ

ಆಪೇರಾ ಟಾಕೀ[ಸ್]

6—7—46 ರಿಂದ

ಲವಂ[ಗಿ]

(ತಮಿಳು)

ಪಾತ್ರ:— ಶ್ರೀ. ವಿ. ಬಾ... ಕುಮಾರಿ ... ಜಯಮ್ಮ, ... ಸಾರಂಗಪಾ[ಣಿ] ... ಮುಂತಾದವರು ... ದಿನಕ್ಕೆ ೩ ಆಟಗಳು

ರೆಜಿ ನಂ. 392 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೦] ಸೋಮವಾರ ೮—೭—೪೬ [ಸಂಚಿಕೆ ೪೬

- ಹೈದರಾಬಾದಿಗೆ - ಖಾಸಗೀ ಮಂತ್ರಿಗಳು

ವಾರ ಭವಿಷ್ಯ

೮-೭-೪೬ ರಿಂದ ೧೪-೭-೪೬ ರ ವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ—ನಿಮ್ಮ ಆರೋಗ್ಯ ಮಾತ್ರ ಚೆನ್ನಾಗಿರುವುದು. ಹಣಕಾಸಿನ ತಾಪತ್ರಯ ವ್ಯಾಪಾರ ಉದ್ಯೋಗಗಳಲ್ಲಿ ಆತಂಕ. ಪ್ರವಾಸ ನಿಲ್ಲಿಸಿ ಶ್ರದ್ಧೆಯಿಂದ ಕಾರ್ಯೋನ್ಮುಖರಾಗಿ.

ವೃಷಭ—ಮನಸ್ಸು ಚಿಂತೆಗೊಳಗಾಗುವುದು. ಪತ್ನೀ ಆರೋಗ್ಯದ ಕಡೆ ಗಮನ ಕೊಡಿ. ಪ್ರವಾಸ ಬೇಡಿ. ವ್ಯವಹಾರಗಳಲ್ಲಿ ಹಲವು ಅಡಚಣೆಗಳು. ಅಕ್ಕರೆ ನಿಧನ ವಾರ್ತೆ ಬರಲಿದೆ. ಅದೃಷ್ಟ ಪರೀಕ್ಷೆಗೆ ಕೈ ಹಾಕಬೇಡಿ

ಮಿಥುನ—ಈ ವಾರ ನಿಮಗೆ ಶುಭದಾಯಕವಾಗಿರುವುದು. ಪರಿಸ್ಥಿತಿ ಸುಧಾರಿಸುವುದು. ಆರೋಗ್ಯ ಆರ್ಥಿಕ ಸ್ಥಿತಿಗಳು ಚೆನ್ನಾಗಿರುವುವು. ಶತ್ರುಗಳು ತಣ್ಣಗಾಗುವರು. ಪ್ರವಾಸದಲ್ಲಿ ಯಶಸ್ಸು.

ಕಟಕ—ಆರೋಗ್ಯ ಉತ್ತಮವಿಲ್ಲ. ಆರ್ಥಿಕ ಮುಗ್ಗಟ್ಟು ಉಂಟಾಗುವುದು. ಮೇಲಧಿಕಾರಿಗಳಿಂದ ವೃಥಾ ತಿರಸ್ಕಾರದ ಮಾತುಗಳನ್ನು ಕೇಳುವಿರಿ. ಪ್ರವಾಸ ನಿಲ್ಲಿಸಿಬಿಡಿ. ಸಾಲದ ತಗಾದೆ, ಕಿರುಕುಳ.

ಸಿಂಹ—ಜವಾಬ್ದಾರಿ ಕೆಲಸಗಳು ಗಂಟು ಬೀಳುವುವು. ನಿಮ್ಮ ಮತ್ತು ಮನೆಯವರ ಆರೋಗ್ಯ ಈ ವಾರ ಚೆನ್ನಾಗಿರುವುದಿಲ್ಲ. ದೂರ ಪ್ರದೇಶಗಳಲ್ಲಿರುವ ಬಂಧುಬಳಗದ ಬಗ್ಗೆ ಚಿಂತೆ. ಪರೀಕ್ಷೆಗೆ ಜಯ ಆಗಲಿದೆ ಎಚ್ಚರಿಕೆ.

ಕನ್ಯಾ—ಆರ್ಥಿಕ ಸ್ಥಿತಿ ಉತ್ತಮವಾಗಿರುವುದು. ಆದರೆ ಆರೋಗ್ಯ ಚೆನ್ನಾಗಿಲ್ಲ. ವ್ಯಾಪಾರ ವ್ಯವಹಾರಗಳಲ್ಲಿ ಸಹೋದ್ಯೋಗಿಗಳೊಂದಿಗೆ ಮನಸ್ತಾಪ. ಪ್ರವಾಸಕ್ಕೆ ವಿಘ್ನ. ಮಿತ್ರರ ಭೇಟಿ.

ತುಲಾ—ಈ ವಾರ ನಿಮಗೆ ಸರ್ವ ಮಂಗಳ ಪ್ರಾಪ್ತಿಯಾಗುವುದು. ಆರ್ಥಿಕ ಸ್ಥಿತಿ ಉತ್ತಮ. ಆರೋಗ್ಯ ಚೆನ್ನಾಗಿರುವುದು. ಪ್ರವಾಸದಲ್ಲಿ ಯಶಸ್ಸು. ಸಜ್ಜನರ ಸಹವಾಸ. ಮಹತ್ವದ ಕರಾರಿನಿಂದ ಲಾಭ ಪ್ರಾಪ್ತಿ.

ವೃಶ್ಚಿಕ—ವಿದ್ಯಾಭ್ಯಾಸಕ್ಕೆ ನೆರವು ಸಿಕ್ಕಿ ಮುಂದಕ್ಕೆ ಬರುವಿರಿ. ಆರೋಗ್ಯ, ಆರ್ಥಿಕ ಸ್ಥಿತಿಗಳು ಉತ್ತಮ. ವ್ಯಾಪಾರ ವ್ಯವಹಾರಗಳಲ್ಲಿ ಲಾಭ. ಪ್ರವಾಸದಲ್ಲಿ ಮಹತ್ಕಾರ್ಯ ಸಾಧನೆ. ಅತಿಥಿಗಳ ಆಗಮನ.

ಧನುಸ್ಸು—ನಿಮ್ಮನ್ನು ಆಶ್ರಯಿಸಿ ಬಂದವರ ಸತ್ಕಾರಕ್ಕಾಗಿ ದುಬಾರಿ ಖರ್ಚು. ಆರೋಗ್ಯ ಉತ್ತಮ. ವ್ಯಾಪಾರದಲ್ಲಿ ಲಾಭ. ಪ್ರವಾಸದಲ್ಲಿ ಕಾರ್ಯ ಸಾಧನೆ. ನೌಕರಿಯಲ್ಲಿ ಮೇಲಧಿಕಾರಿಗಳಿಂದ ಒಳ್ಳೆ ಹೆಸರು ಗಳಿಸುವಿರಿ

ಮಕರ—ಕಳೇ ವಿಚಾರಗಳಿಗಾಗಿ ಚಿಂತಿಸಬೇಕು ಫಲವಿಲ್ಲ. ಕೆಲಸಕಾರ್ಯಗಳಲ್ಲಿ ಸುಸ್ತು. ಧನ ಹಾನಿ. ಮೇಲಧಿಕಾರಿಗಳ ಅಪಚಾರದ ಮಾತುಗಳು. ಮಿತ್ರರ ಸಹಾಯದಿಂದ ಸಂಕಟ ನಿವಾರಣೆಯಾಗಲಿ.

ಕುಂಭ—ಆದಾಯಕ್ಕಿಂತಲೂ ಖರ್ಚೇ ಹೆಚ್ಚಾಗುವುದು. ಆರೋಗ್ಯ ಸರಿಯಾಗಿಲ್ಲ. ಅಕಸ್ಮಾತ್ ಘಟನೆಗಳು ಜರುಗುವುವು. ... ತೈರ್ಯಗೊಳ್ಳಬೇಕು ... ಹೆಚ್ಚುವುದು.

ಆಹಾರ ನಿಯೋಗದವರ ಆಗಮನ

ಸ್ವಂ. ವ. ವರದಿ] ಬೆಂಗಳೂರು ೮

ಇದಿನ ಬೆಳಗ್ಗೆ ಅಮೆರಿಕದ ಆಹಾರ ನಿಯೋಗದವರು ಎರಡು ಗುಂಪುಗಳಾಗಿ ರೈಲಿನಲ್ಲಿಯೂ, ವಿಮಾನದಲ್ಲಿಯೂ ಬೆಂಗಳೂರಿಗೆ ಬಂದಿಳಿದರು. ಆಹಾರದ ಅಧಿಕಾರಿಗಳೂ ಮತ್ತು ಆಹಾರ ಮಂತ್ರಿಗಳೊಡನೆ ಕೋಲಾರ, ಚಿಕ್ಕಬಳ್ಳಾಪುರ, ದೊಡ್ಡಬಳ್ಳಾಪುರ ಮುಂತಾದ ಪ್ರದೇಶಗಳಿಗೆ ಭೇಟಿ ಇತ್ತರು. ೧೪ ಜನರು ನಿಯೋಗದಲ್ಲಿರುವರು. ಅವರ ಪೈಕಿ ಇಬ್ಬರು ಮಹಿಳೆಯರೂ ಇದ್ದಾರೆ. ಕುಮಾರಾ ಪಾರ್ಕಿನಲ್ಲಿ ಸರ್ಕಾರದ ಅತಿಥಿಗಳಾಗಿ ಬಿಡಾರ ಮಾಡಿದ್ದಾರೆ. ದಕ್ಷಿಣ ಭಾರತದ ಆಹಾರ ಕಮೀಷನರಾದ ಶ್ರೀ ಕರುಣಾಕರ ಮೆನನ್‌ರವರೂ ಸಹ ಅವರೊಡನೆ ಬಂದಿದ್ದಾರೆ. ನಾಳೆದಿನ ಸ್ಥಳೀಯ ಅಧಿಕಾರಿಗಳೊಡನೆ ಅವರು ಒಂದು ಸಮ್ಮೇಳನವನ್ನು ನಡೆಸಿ ಅನಂತರ ಬೊಂಬಾಯಿಗೆ ತೆರಳುವರು.

ಅಭಾವ ಪ್ರದೇಶಗಳಿಗೆ ವೈದ್ಯ ಪರಿಹಾರ

ಕ್ಷಾಮ ಪೀಡಿತ ಪ್ರದೇಶಗಳಲ್ಲಿ ವೈದ್ಯಕ ಪರಿಹಾರವನ್ನು ನೀಡಲು ಸರ್ಕಾರದವರು ೫ ಲಕ್ಷ ರೂಪಾಯಿನ ಒಂದು ಯೋಜನೆಯನ್ನು ಮಂಜೂರು ಮಾಡಿದ್ದಾರೆ. ಸುಮಾರು ೨೦ ಕೇಂದ್ರಗಳಲ್ಲಿ ಜನರಿಗೆ ಸಹಾಯವನ್ನು ನೀಡಲಾಗುವುದು. ಇದಲ್ಲದೆ ೧೦ ಲಕ್ಷ ವೈಟಮಿನ್ (ಪುಷ್ಟೀಕರಣ) ಗುಳಿಗೆಗಳನ್ನು ಸಹ ಹಂಚಲಾಗುವುದು.

○ ಶ್ರೀ ಕೆ. ಆರ್. ಮಹದೇವೇಗೌಡರು ವರ್ಧಂತಿ ಕಾಲದಲ್ಲಿ ಭಾರತೀಯ ಅತಿಥಿಗಳನ್ನು ನೋಡಿಕೊಳ್ಳಲು ವಿಶೇಷ ಅಧಿಕಾರಿಗಳಾಗಿ ನೇಮಕವಾಗಿದ್ದಾರೆ

ಸಿಸಿಲಿ ಸೆರೆಮನೆಯಲ್ಲಿ ದಂಗೆ

ಇತ್ತೀಚಿಗೆ ಇಟಲಿ ದಯಾಭಿಕ್ಷೆಯಲ್ಲಿ ತಮ್ಮ ಹೆಸರನ್ನು ಸೇರಿಸಲಿಲ್ಲವೆಂದು ಆಕ್ರೋಶಭರಿತರಾಗಿ ಸಿಸಲಿಯ ಸೆರೆಮನೆಯ ಬಂದಿಗಳು ಕಾವಲುಗಾರರನ್ನು ಸೆಲ್ಲುಗಳಲ್ಲಿ ಕೂಡಿಹಾಕಿ ಭಾರಿ ದಂಗೆ ಎದ್ದರೆಂದೂ, ವಿಶೇಷ ಪೊಲೀಸರು ಗುಂಡು ಹಾರಿಸಿ ದಂಗೆ ಅಡಗಿಸಿದರೆಂದೂ ವರದಿಯಾಗಿದೆ. ಗುಂಡಿನೇಟಿನಿಂದ ಒಬ್ಬನು ಸತ್ತನು. ಹತ್ತಾರು ಮಂದಿಗೆ ಗಾಯಗಳಾಗಿವೆ

ಮೀನ—ಉಲ್ಲಾಸ ವಾತಾವರಣದಲ್ಲಿ ಮೆರೆಯುತ್ತೀರಿ. ದೇಹದ ಸ್ಥಿತಿ ಇದು ... ಆರೋಗ್ಯ ಚೆನ್ನಾಗಿರುವುದು ... ಎಲ್ಲರಿಂದಲೂ ಸನ್ಮಾನ. ಹಿಡಿದ ಕೆಲಸ ಕಾರ್ಯಗಳಲ್ಲಿ ಜಯ ... ಸ ... ತ್ತಾಗುವುದು

ಅಂಚೆ ನಿರ್ಬಂಧಗಳು

ಮೈಸೂರು ೮

ಅಖಿಲ ಭಾರತ ಅಂಚೆ ನೌಕರರು ಈ ತಿಂಗಳು ೧೧ ನೇ ತಾರೀಕಿನಿಂದ ಮುಷ್ಕರ ಹೂಡುವ ಸಂಭವವಿರುವುದರಿಂದ ಅದಕ್ಕೆ ಪೂರ್ವಭಾವಿಯಾಗಿ ಅಧಿಕಾರಿಗಳು ಹಲವು ಎಚ್ಚರಿಕೆ ಕ್ರಮಗಳನ್ನು ತೆಗೆದುಕೊಳ್ಳುತ್ತಿರುವರು. ಇಂದಿನಿಂದ ಟಪಾಲು ಆಫೀಸುಗಳಲ್ಲಿ ಮನಿಯಾರ್ಡರು, ವಿ. ಪಿ. ಮತ್ತು ರಿಜಿಸ್ಟರು ಭಾಗಗಳನ್ನು ತೆಗೆದುಕೊಳ್ಳುವುದಿಲ್ಲವೆಂದು ಪ್ರಕಟಿಸಲಾಗಿದೆ. ಕಾಗದ ಪತ್ರಗಳ ಬಟವಾಡೆ ಮತ್ತು ಸ್ಟ್ಯಾಂಪು ಕಾರ್ಡುಗಳ ಮಾರಾಟಕ್ಕೆ ಮಾತ್ರ ಏರ್ಪಾಡಾಗಿದೆ.

ಮುಷ್ಕರದ ಮುಕ್ತಾಯ

ಶ್ರೀ ಕೃಷ್ಣರಾಜೇಂದ್ರ ಗಿರಣಿ ಕೆಲಸಗಾರರ ಮುಷ್ಕರವು ನೆನ್ನೆ ಮುಕ್ತಾಯವಾಗಿ ಕೆಲಸಗಾರರು ಪದ್ಧತಿ ಪ್ರಕಾರ ತಮ್ಮ ತಮ್ಮ ಕೆಲಸದಲ್ಲಿ ತೊಡಗಿರುವರೆಂದು ತಿಳಿದು ಬಂದಿದೆ. ಒಬ್ಬ ಕೆಲಸಗಾರನನ್ನು ಮತ್ತೊಬ್ಬ ನೌಕರನು ಹೊಡೆದುದೇ ಮುಷ್ಕರಕ್ಕೆ ಕಾರಣವೆಂದು ತಿಳಿದುಬಂದಿದೆ. ಕೆಲಸಗಾರರ ಸಂಘದವರು ಈ ವಿಷಯವಾಗಿ ಅಧಿಕಾರಿಗಳೊಡನೆ ವ್ಯವಹಾರ ನಡೆಸಿ ಸೂಕ್ತ ಕಾರ್ಯಕ್ರಮ ಕೈಗೊಳ್ಳುವುದಾಗಿ ಭರವಸೆ ಇತ್ತ ಮೇಲೆ ಮುಷ್ಕರವು ಮುಕ್ತಾಯವಾಯಿತು.

ಕಾಂಗ್ರೆಸ್ ಪಕ್ಷದ ಮೇಲೆ ದಾವಾ

ಶ್ರೀ ಎಂ. ಆರ್. ಸಿ. ಬಸಪ್ಪನವರು ಮೈಸೂರು ಪ್ರಜಾಸಭಾ ಕಾಂಗ್ರೆಸ್ ಪಕ್ಷದವರ ಮೇಲೆ ಹೂಡಿರುವ ದಾವಾ ಮೊಕದ್ದಮೆಯ ಈ ದಿನ ವಿಚಾರಣೆಗೆ ಇತ್ತು. ಇನ್ನೂ ಹಲವು ಪ್ರತಿವಾದಿಗಳಿಗೆ ಸಮನ್ಸ್ ಜಾರಿಯಾಗಿಲ್ಲದಿರುವುದರಿಂದ ಮೊಕದ್ದಮೆಯನ್ನು ಈ ತಿಂಗಳು ೧೩ಕ್ಕೆ ಮುಂದರಿಸಲಾಯಿತು. ವಾದಿಗಳ ಕಡೆ ಶ್ರೀ ಎ. ವೆಂಕಟೇಶಯ್ಯ ಮತ್ತು ಇತರರೂ, ಪ್ರತಿವಾದಿಗಳ ಕಡೆ ವಕೀಲ ಸಂಘದ ಅಧ್ಯಕ್ಷರಾದ ಶ್ರೀ ಎಂ. ಲಕ್ಷ್ಮೀನಾರಾಯಣರಾಯರೇ ಮುಂತಾದವರೂ ವಕಾಲತ್ತು ವಹಿಸಿರುವರು

ಎ. ಐ. ಸಿ. ಸಿ. ಅಂಗೀಕಾರ

ಬ್ರಿ|| ನಿಯೋಗದವರು ಸಲಹಿದ್ದ ಹಂಗಾಮಿ ಸರ್ಕಾರದ ಸಲಹೆಯನ್ನು ತಿರಸ್ಕರಿಸಿಯೂ, ದೀರ್ಘ್ಯಾವಧಿ ರಚನಾ ಸಲಹೆಯನ್ನು ಅಂಗೀಕರಿಸಿಯೂ ವರ್ಕಿಂಗ್ ಕಮಿಟಿ ಮಾಡಿದ್ದ ತೀರ್ಮಾನವನ್ನು ... ಗಳ ನೆನ್ನೆ ದಿನ ಬೊಂಬಾಯಿಯಲ್ಲಿ ಸೇರಿದ್ದ ಅಖಿಲ ಭಾರತ ಕಾಂಗ್ರೆಸ್ ಸಮಿತಿ ಅಂಗೀಕರಿಸಿತು.

ಹೈದರಾಬಾದಿಗೆ ಖಾಸಗೀ ಮಂತ್ರಿಗಳು

ಬರುವ ಅಕ್ಟೋಬರ್ ತಿಂಗಳಲ್ಲಿ ಹೊಸ ಶಾಸನ ಸಭೆಯನ್ನು ರಚಿಸುವುದಾಗಿ ಹೈದರಾಬಾದ್ ಸರ್ಕಾರದವರು ನಿರ್ಧರಿಸಿದ್ದಾರೆ. ಆ ಸಭೆಯಿಂದ ಇಬ್ಬರು ಸದಸ್ಯರನ್ನು ಮಂತ್ರಿಗಳಾಗಿ ತೆಗೆದುಕೊಳ್ಳಲಾಗುವುದು. ಬಹಿರಂಗ ಸಭೆಗಳ ಮೇಲಿರುವ ಅಡ್ಡಿಗಳನ್ನೆಲ್ಲಾ ತೆಗೆದು ಚುನಾವಣೆಗಳು ನಿರಾತಂಕವಾಗಿ ನಡೆಸುವಂತೆ ಅಲ್ಲಿನ ಸರ್ಕಾರದವರು ಭರವಸೆ ಇತ್ತಿದ್ದಾರೆ

ಸಂಸ್ಥಾನದ ರೈಲ್ವೆ ಕೆಲಸಗಾರರ ಸಂಘ

ಮೈಸೂರು ೮

ನೆನ್ನೆ ಸಂಜೆ ರೈಲ್ವೆ ಸ್ಟೇಷನ್ ಬಳಿ ರೈಲ್ವೆ ಕ್ಲಬ್ ಮೈದಾನದಲ್ಲಿ ಶ್ರೀ ಹೆಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ರೈಲ್ವೆ ಕೆಲಸಗಾರರ ಸಭೆ ನಡೆದು ಮೈಸೂರು ರೈಲ್ವೆಯ ಕೆಲಸಗಾರರು ... ಸಂಸ್ಥಾನದ ರೈಲ್ವೆ ನೌಕರರೂ, ಕೆಲಸಗಾರರೂ ಸೇರಿ ಒಂದು ಸಂಘವನ್ನು ಸ್ಥಾಪಿಸಬೇಕೆಂದು ತೀರ್ಮಾನಿಸಲಾಯಿತು. ಶ್ರೀ ರಜಾಬ್ ಅಲಿಯವರು ಅಧ್ಯಕ್ಷರಾಗಿಯೂ, ಶ್ರೀ ನರಸಪ್ಪನವರು ಕಾರ್ಯದರ್ಶಿಯಾಗಿಯೂ ಇರುವ ಒಂದು ಉಪಸಮಿತಿಯನ್ನು ರಚಿಸಲಾಯಿತು

ಹಳೇ ವಿದ್ಯಾರ್ಥಿಗಳ ಸಂಘ

ದಳವಾಯ್ ಸ್ಕೂಲು ಹಳೇ ವಿದ್ಯಾರ್ಥಿಗಳ ಸಂಘದ ಸಾಮಾನ್ಯ ಸಭೆಯು ನೆನ್ನೆ ಸಂಜೆ ನಿವೃತ್ತ ಅಸಿಸ್ಟೆಂಟ್ ಶ್ರೀ ಎಂ. ಎಸ್. ಶಿವಣ್ಣನವರ ಅಧ್ಯಕ್ಷತೆಯಲ್ಲಿ ನಡೆಯಿತು. ವಾರ್ಷಿಕ ವರದಿಯನ್ನು ಓದಿ ಒಪ್ಪಲಾಯಿತು. ಮುಂದಿನ ವರ್ಷಕ್ಕೆ ಶ್ರೀ ಶಿವಣ್ಣನವರು ಅಧ್ಯಕ್ಷರಾಗಿಯೂ, ಶ್ರೀಯುತರಾದ ಟಿ. ಅಪ್ಪಾಚಾರ್ ಮತ್ತು ಕೆ. ರಾಮಕೃಷ್ಣ ಶಾಸ್ತ್ರಿಗಳು ಕಾರ್ಯದರ್ಶಿಗಳಾಗಿಯೂ ಶ್ರೀ ವಿ. ನಂಜುಂಡಯ್ಯನವರು ಕೋಶಾಧ್ಯಕ್ಷರಾಗಿಯೂ, ಶ್ರೀ ಬಿ. ರಾಮಕೃಷ್ಣಶಾಸ್ತ್ರಿಯವರು ಆಡಿಟರ್ ಆಗಿಯೂ ಚುನಾಯಿತರಾದರು.

ಜಿನರಾಜದಾಸರ ಭಾಷಣ

ಥಿಯಸಾಫಿಕಲ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಸಿ. ಜಿನರಾಜದಾಸರವರು ನಾಳೆ ಸಾಯಂಕಾಲ ೬-೩೦ಕ್ಕೆ ಧರ್ಮಪ್ರಕಾಶ ಬನುಮಯ್ಯನವರ ಹೈಸ್ಕೂಲು ಹಾಲಿನಲ್ಲಿ ಭಗವದ್ಗೀತೆ, ಕೊರಾನ್ ಮತ್ತು ಬೈಬಲ್ ಎಂಬ ವಿಷಯವಾಗಿಯೂ ನಾಳಿದ್ದು ಬುಧವಾರ ಸಾಯಂಕಾಲ ಆರು ಗಂಟೆಗೆ ವಿಶ್ವವಿದ್ಯಾನಿಲಯದ ಆವರಣದಲ್ಲಿ ಪ್ಲೇಟೋವಿನ ತತ್ವಶಾಸ್ತ್ರ ಎಂಬ ವಿಚಾರವಾಗಿಯೂ ಉಪನ್ಯಾಸ ಮಾಡುವರು. ಸರ್ವರಿಗೂ ಸ್ವಾಗತವಿದೆ

ಅಬ್ದುಲ್ - ಕಾಟ್ಜು ಭೇಟಿ

ಕಾಶ್ಮೀರ ಸಂಸ್ಥಾನದ ಪ್ರಧಾನಿಗಳಾದ ಶ್ರೀ ರಾಮಚಂದ್ರ ಕಾಕ್‌ರವರು ನೆನ್ನೆ ... ಕಾಂಗ್ರೆಸ್ ಅಧ್ಯಕ್ಷರವರನ್ನು ಕಂಡು ಕಾಶ್ಮೀರದ ಪರಿಸ್ಥಿತಿಯನ್ನು ವಿವರಿಸಿದರೆಂದೂ, ... ಅವರ ... ನ್ನು ... ಹಲೇ ... ಸಂಪೂರ್ಣ ... ರಿಗೆ ... ಅವಕಾಶ ... ಗಿದೆ ... ಸರ್ಕಾರದ ... ಕಾಶ್ಮೀರಕ್ಕೆ ಹೋಗಿ ... ದ್ದಾರೆ.

ಸಾಧ್ವಿ

ತಾ॥ ೮-೭-೪೬ ಸೋಮವಾರ

ಶಾಸನ ಸಭೆಯ ಕಾರ್ಯ ಕಲಾಪಗಳು

ಮೈಸೂರು ನ್ಯಾಯವಿಧಾಯಕ ಸಭೆಯ ಕಾರ್ಯಕಲಾಪಗಳು ನೆನ್ನೆ ದಿನ ಮುಕ್ತಾಯಗೊಂಡವು. ಅನೇಕ ಪ್ರಶ್ನೆಗಳೂ, ನಿರ್ಣಯಗಳೂ, ಸೂಚನೆಗಳೂ ಚರ್ಚಿಸಲ್ಪಟ್ಟವು. ಸರ್ಕಾರದ ಆಯವ್ಯಯ ಸ್ಥಿತಿಯನ್ನು ಸದಸ್ಯರು ಕಟುವಾಗಿ ಟೀಕಿಸಿದರು. ಚರ್ಚೆಗಳು ತಕ್ಕಮಟ್ಟಿಗೆ ದೃಷ್ಟಿಯಿಂದ ಬಹಳ ಉನ್ನತ ಮಟ್ಟದಲ್ಲಿ ಜರುಗಿದುವು. ಯಾವ ವಿಧವಾದ ಕೋಪೋದ್ರೇಕಗಳಿಗಾಗಲೀ ಘರ್ಷಣೆಗಳಿಗಾಗಲೀ ಅವಕಾಶವಿರಲಿಲ್ಲ.

ಸರ್ಕಾರದವರೂ ಸಹ ತಮ್ಮ ನೀತಿಯನ್ನು ಸಾಧ್ಯವಾದ ಮಟ್ಟಿಗೆ ಸಮರ್ಥನೆ ಮಾಡಿಕೊಂಡರು. ಆದರೂ ಇಂದಿನ ಆಡಳಿತ ಪದ್ಧತಿ, ಕಂದಾಯದ ನೀತಿ, ಆಹಾರದ ಪಡಿತರಾಜನೆ ವ್ಯವಸ್ಥೆ ಮತ್ತು ಇತರ ಜನಾನುಕೂಲದ ವಿಷಯಗಳ ಮೇಲೆ ಸದಸ್ಯರು ಸರ್ಕಾರದವರನ್ನು ತೀವ್ರವಾಗಿ ಖಂಡಿಸಿದರು. ಇದು ಮಂತ್ರಿಮಂಡಲದವರ ಮೇಲೆ ಒಳ್ಳೆಯ ಪರಿಣಾಮವನ್ನೇ ಉಂಟುಮಾಡಿರಬೇಕು. ಇಂದಿನ ವಿಷಮ ಪರಿಸ್ಥಿತಿಯಲ್ಲಿ ತಮ್ಮ [illegible] ವಿಶೇಷವಾಗಿ ಸಚಿವರುಗಳು [illegible] ಇದ್ದರು.

ಪ್ರಜಾಪ್ರತಿನಿಧಿ ಆಡಳಿತ ವ್ಯವಸ್ಥೆಯ ಮೇಲೆ ಟೀಕೆ ಮಾಡಿ ಸಮ್ಮತಿಯನ್ನೂ, ಅದನ್ನು ನಿರ್ವಹಿಸಲು ಸೂಚಿಸುವುದು ಶಾಸನ ಸಭೆಗಳ ಒಂದು ಪ್ರಾಮುಖ್ಯ ಕರ್ತವ್ಯ. ಇದು ಈ ಸಾರಿ ಎಂದಿಗಿಂತಲೂ ವಿಶೇಷವಾಗಿ ನಡೆಯಿತೆಂದು ಹೇಳಬಹುದು. ಚುನಾಯಿತ ಸದಸ್ಯರುಗಳು ಮಾತ್ರವೇ ಅಲ್ಲದೆ ನಾಮಕರಣವಾದವರೂ ಸಹ ಇದರಲ್ಲಿ ಭಾಗಿಗಳಾಗಿದ್ದರು. ಈಗಿನ ಆಡಳಿತ ಕ್ರಮವು ಕೂಡಲೇ ಸಂಪೂರ್ಣವಾಗಿ ಬದಲಾವಣೆ ಹೊಂದಬೇಕೆಂಬ ಅಭಿಪ್ರಾಯವನ್ನು ಎಲ್ಲರೂ ಸೂಚಿಸಿದರು.

ಕತ್ತರಿ ಪ್ರಯೋಗಗಳು ಈ ಸಾರಿ ವಿಶೇಷ ಸಂಖ್ಯೆಯಲ್ಲಿ ಮಂಡಿಸಲಾದುವು. ಶಾಸನ ನಿರೋಧ, ಹರಿಜನರ ದೇವಾಲಯ ಪ್ರವೇಶ, ಲಿಪಿನ್ಯಾ ಆಡಳಿತ, ಅರಣ್ಯ ಇಲಾಖೆಯ ವ್ಯವಸ್ಥೆ, ಕೂಲಿಗಾರರನ್ನು ನೇಮಿಸುವುದು- ಇವೇ ಮುಂತಾದ ವಿಚಾರಗಳಲ್ಲಿ ಸಭೆಯು ಅಸಮಾಧಾನವನ್ನು ಸೂಚಿಸಲು ಬಂದಿದ್ದ ಕತ್ತರಿ ಪ್ರಯೋಗಗಳು ಮಂಜೂರಾದುವು. ಇವು ಶಾಸನ ಸಭೆಗೆ ಸರ್ಕಾರದಲ್ಲಿರುವ ಅವಿಶ್ವಾಸವನ್ನು ಪ್ರದರ್ಶಿಸುತ್ತವೆ. ಪ್ರಜಾಪ್ರಭುತ್ವ ರಾಷ್ಟ್ರಗಳಲ್ಲಿ ಕತ್ತರಿ ಪ್ರಯೋಗಗಳು ಮಂಜೂರಾದರೆ ಆಗ [illegible] ರಾಜೀನಾಮೆ ಕೊಡಬೇಕಾಗುತ್ತದೆ. [illegible] ನಮ್ಮಲ್ಲಿ ಅಧಿಕಾರ [illegible] ಇಲ್ಲ. [illegible]

[illegible]

ರ್ಣಯಗಳನ್ನು ಕಾರ್ಯರೂಪಕ್ಕೆ ತರುವುದಾದರೂ ಅವರ ಮುಂದಿನ ಕರ್ತವ್ಯವಾಗಿದೆ.

ಸಂಸ್ಥಾನದ ಭೂ ಕಂದಾಯದ ನೀತಿಯನ್ನು ವಿಮರ್ಶೆ ಮಾಡಲು ಒಂದು ಸಮಿತಿಯನ್ನು ರಚಿಸುವುದಾಗಿ ಸರ್ಕಾರದವರು ಸಭೆಯಲ್ಲಿ ತಿಳಿಸಿರುವರು. ಬಹಳ ವರ್ಷಗಳಿಂದಲೂ ಉಭಯ ಸಭೆಗಳ ಸದಸ್ಯರೂ ಇದನ್ನಾಗಿ ಒತ್ತಾಯಪಡಿಸುತ್ತಿರುವರು. ನೆರೆಯ ಪ್ರಾಂತಗಳಲ್ಲಿ ಭೂ ಕಂದಾಯದ ವಿಚಾರವಾಗಿ ಕ್ರಾಂತಿಕಾರಕವಾದ ಸುಧಾರಣೆಗಳಾಗುತ್ತಿವೆ. ತಿರುವಾಂಕೂರಿನಲ್ಲಿ ಭೂ ಕಂದಾಯವನ್ನೇ ವಜಾ ಮಾಡುವ ಯೋಜನೆ ಇದೆ. ನಮ್ಮಲ್ಲಿ ಈ ವಿಚಾರವಾಗಿ ಇನ್ನು ತಾತ್ಸಾರದಿಂದಿರುವುದು ಯುಕ್ತವಲ್ಲ. ಹೊಗೆ ಮತ್ತು ದಂಡಿನ ವಿಚಾರವಾಗಿ ಸರ್ಕಾರದವರು ಕೊಟ್ಟಿರುವ ಸಮಾಧಾನವು ತೃಪ್ತಿಕರವಾಗಿಲ್ಲ.

ಲಂಚ ರುಸುವತ್ತುಗಳ ವಿಷಯವು ಪೇಚಾಗಿ ಚರ್ಚಿಸಲ್ಪಟ್ಟಿತು. ಅಧಿಕಾರಿ ವರ್ಗದವರು ಒಬ್ಬರಿಂದ ಮಾಡುತ್ತಿರುವ ಸುಲಿಗೆಯ ಪ್ರಸಂಗಗಳನ್ನು ಬಯಲಿಗೆ ಎಳೆಯಲಾಯಿತು. ಈ ಅನೀತಿಯನ್ನು ತಡೆಗಟ್ಟಲು ಸರ್ಕಾರದವರು ಈಗ ಒಬ್ಬ ಉನ್ನತಾಧಿಕಾರಿಯನ್ನು ನೇಮಿಸಿದ್ದಾರೆ. ಇವರು ಧೈರ್ಯದಿಂದಲೂ, ನಿರ್ದಾಕ್ಷಿಣ್ಯವಾಗಿಯೂ ತಮ್ಮ ಕೆಲಸವನ್ನು ನಿರ್ವಹಿಸಲು ಅವರಿಗೆ ಸಕಲ ಸೌಲಭ್ಯಗಳನ್ನೂ ಒದಗಿಸಿಕೊಡುವುದು ಅಗತ್ಯವಾಗಿದೆ. ಈ ಸಂದರ್ಭದಲ್ಲಿ ಸರ್ಕಾರದ ಪರವಾಗಿ ಉತ್ತರ ಕೊಡುತ್ತಾ, ಕಾಳಸಂತೆಗೆ ಸಾರ್ವಜನಿಕರೇ ಮುಖ್ಯ ಕಾರಣರೆಂದು ಹೇಳಿದ ಅಂಶವು ಬಹಳ ಅನುಚಿತವಾದುದು. ಒಬ್ಬೊಬ್ಬ ಅಧಿಕಾರಿಯು ಮಾಡುತ್ತಿರುವ ಅನೀತಿ ಕಾರ್ಯಕ್ಕೆ ಸಾರ್ವಜನಿಕರ ಮೇಲೆ ಅಪವಾದನೆಯನ್ನು ಹೊರಿಸುವುದು ಸರ್ವಥಾ ಯುಕ್ತವಲ್ಲ. ಬಡ ಪ್ರಜೆಗಳು ಬೆಳೆಯುವ ಧಾನ್ಯದಿಂದ ಅವರ ಭಾಗದಷ್ಟನ್ನು ಮಾತ್ರ ಬಿಟ್ಟು, ಉಳಿದುದನ್ನು ಕಡ್ಡಾಯವಾಗಿ ತೆಗೆದುಕೊಂಡಿರುವುದಲ್ಲದೆ ಬೆಳೆಯದೆ ಇರುವವರಿಗೆ ಉದರ ಪೋಷಣೆಗೆ ಬೇಕಾಗುವಷ್ಟು ರೇಷನ್ ವಸ್ತುಗಳು ದೊರೆಯದಿರಬಹುದಾದ ಸಂದರ್ಭಗಳಲ್ಲಿ ಅವರು ಪ್ರಾಣ ಧಾರಣೆಗಾಗಿ ಸ್ವಲ್ಪ ಹೆಚ್ಚು ಹಣವನ್ನಾದರೂ ಕೊಟ್ಟು ಆಹಾರ ವಸ್ತುಗಳನ್ನು ಕೊಂಡುಕೊಳ್ಳುವ ಪ್ರಸಂಗ ಒದಗಿದರೆ, ಅದನ್ನೇ ಪ್ರಮಾಣವಾಗಿ ಇಟ್ಟುಕೊಂಡು ಸಾರ್ವಜನಿಕರನ್ನೆಲ್ಲಾ ದೂಷಿಸುವುದು ಸರಿಯಲ್ಲ.

ಸಂಸ್ಥಾನದ ವ್ಯವಹಾರಗಳಿಗಾಗಿ ಹೊರಗಿನವರನ್ನು ನೇಮಿಸುವ ವಿಚಾರದಲ್ಲಿ ಸಭೆಯವರೆಲ್ಲರೂ ಅಸಮಾಧಾನವನ್ನು ಸೂಚಿಸಿದರು. ಈ ಪದ್ಧತಿಯು ಎಷ್ಟು ಬೇಗ ತಪ್ಪಿದರೆ ಅಷ್ಟು ಒಳ್ಳೆಯದು.

ಜವಾಬ್ದಾರಿ ಸರ್ಕಾರದ ವಿಷಯವಾಗಿ ಕೆಲವು ಮಂತ್ರಿಗಳು ಹೊಸದಾಗಿ [illegible] ಕಾಲದಲ್ಲಿ ಸೂಕ್ತವಾದ ಏರ್ಪಾಡುಗಳು ಆಗುವುವೆಂದು ಹೇಳಿದ ಮಾತುಗಳು [illegible] ಆಗಾಗ ಪ್ರಕಟವಾದುದೇ ಇದೆ. [illegible] ಕ್ಕೆ ಹೆಚ್ಚಿನ ಸಂಸ್ಥಾನಗಳಲ್ಲಿಯೂ, ಬ್ರಿಟಿಷ್ ಇಂಡಿಯಾದಲ್ಲಿಯೂ ಪ್ರಜಾ ವರ್ಗದವರಿಗೆ ಅಧಿಕಾರವು ದೊರೆಯುತ್ತಿದೆ. [illegible] ಸಂಸ್ಥಾನದ [illegible]

[illegible]

ವಿವಾಹ ಮಹೋತ್ಸವಗಳು

ಭದ್ರಾವತಿಯಲ್ಲಿರುವ ಶ್ರೀ ಕೂಡ್ಲಿ ಅನಂತ ಶಾಸ್ತ್ರಿಗಳವರು ತಮ್ಮ ಕುಮಾರಿ ಸೌ॥ ಮೀನಾಕ್ಷಮ್ಮನವರನ್ನು ಬೆಂಗಳೂರು ಗುಂಡೂರಾಯರ ಮಗ ಲೇಟ್ ನೀಲಂ ಶ್ರೀಕಂಠೇಶ್ವರಯ್ಯರ ಪುತ್ರ ಚಿ॥ ಶಂಕರನಾರಾಯಣ ಅಯ್ಯರ್‌ರಿಗೆ ಕೊಟ್ಟು ವಿವಾಹವನ್ನು ಭದ್ರಾವತಿಯಲ್ಲಿ ಇದೇ ೧೭ನೇ ತಾ॥ ನೆರವೇರಿಸುವರು.

ಕಿತ್ತೂರು ಶೀನಪ್ಪನವರ ಭಾವ ಶ್ರೀ ಕಿತ್ತೂರು ಅನಂತರಂಗಯ್ಯನವರು ತಮ್ಮ ಮಗ ಚಿ॥ ರಂಗನಾಥನಿಗೆ ಚಾಮುಂಡಿ ಬೆಟ್ಟದ ಶ್ರೀ ವೆಂಕಟಸುಬ್ಬಾಭಟ್ಟರ ಮಗ ಚಿ॥ ವೆಂಕಟರಾಮಯ್ಯನವರ ಪುತ್ರಿ ಸೌ॥ ಕಮಲಮ್ಮನವರನ್ನು ಕೊಟ್ಟು ವಿವಾಹವು ಇಂದು ರಾಜಧಾನಿಯಲ್ಲಿ ಜರುಗಿತು.

ವೈಸರಾಯರನ್ನು ನಿವೃತ್ತಿ ಮಾಡಬೇಕು

ಲಾರ್ಡ್ ವೇವಲ್ಲರು ವೈಸ್‌ರಾಯ್ ಗಿರಿಯನ್ನು ನಿರ್ವಹಿಸಲು ಸಮರ್ಥರಾಗಿಲ್ಲ; ಆದುದರಿಂದ ಅವರನ್ನು ಅವರ ಕೆಲಸದಿಂದ ನಿವೃತ್ತಿ ಮಾಡಬೇಕು. ಅಥವಾ ರಾಜಕೀಯದಲ್ಲಿ ನವೀನ ಚರಿತ್ರೆಯನ್ನು ರಚಿಸಿರುವ ಬೇರೊಬ್ಬ ವ್ಯಕ್ತಿಯ ಸಹಾಯವನ್ನಾದರೂ ಅವರಿಗೆ ಕೊಡಬೇಕು-ಎಂಬುದಾಗಿ ಲಂಡನ್ "ನ್ಯೂಸ್ ಕ್ರಾನಿಕಲ್" ಪತ್ರಿಕೆಯ ವಿದೇಶಾಂಗ ಸಂಪಾದಕರಾದ ಮಿ॥ ವಾರ್ನನ್ ಬಾರ್ಟ್ಲೆಟ್‌ರವರು ನವದೆಹಲಿಯಿಂದ ತಮ್ಮ ಪತ್ರಿಕೆಗೆ ವರದಿ ಮಾಡಿದ್ದಾರೆ. ಕೇವಲ ಮಿಲಿಟರಿ ಪರಿಶ್ರಮವುಳ್ಳ ಲಾರ್ಡ್ ವೇವಲ್ಲರಿಗೆ ಸೂಕ್ಷ್ಮವಾದ ರಾಜಕೀಯ ಸಂಧಾನದ ಜವಾಬ್ದಾರಿಯನ್ನು ವಹಿಸಿ ಅವರು ಮಧ್ಯಂತರ ಸರ್ಕಾರದ ರಚನೆಯ ಸಂಬಂಧದಲ್ಲಿ ಅಸಮಂಜಸವಾದ ಭರವಸೆಗಳನ್ನು ಕೊಡಲು ಅವಕಾಶವಿತ್ತುದು ನಿಯೋಗದವರ ಅಪರಾಧವೆಂದೂ ಸಹ ಅವರು ಹೇಳಿರುವರು.

ಸರ್ ಮಿರ್ಜಾರವರಿಗೆ ಜಿನ್ನಾರವರ ವಿರೋಧ

ಸರ್ ಮಿರ್ಜಾರವರು ಮುಸ್ಲಿಂ ಲೀಗಿನ ವಿರೋಧಿ; ಕಾಂಗ್ರೆಸ್ ಮತ್ತು ಹಿಂದೂಗಳ ಕಡೆ ಪಕ್ಷಪಾತಿಗಳು- ಎಂದು ಹೇಳಿ ಹೈದರಾಬಾದ್ ಪ್ರಧಾನಿ ಪಟ್ಟಕ್ಕೆ ಅವರು ಬಾರದಂತೆ ಸಕಲ ಪ್ರಯತ್ನಗಳನ್ನು ಮಾಡಲು ಮಿ॥ ಜಿನ್ನಾರವರು ಹೈದರಾಬಾದಿಗೆ ತೆರಳಿದ್ದಾರೆ. ಆದರೆ ಇಂಡಿಯಾ ಸರ್ಕಾರದ ರಾಜಕೀಯ ಶಾಖೆಯವರು ಸರ್ ಮಿರ್ಜಾರವರಿಗೆ ಬೆಂಬಲರಾಗಿದ್ದಾರೆ. ನಿಜಾಮರು ಇನ್ನೂ ತಮ್ಮ ಮನಸ್ಸನ್ನು ಬದಲಾಯಿಸಿರುವುದಿಲ್ಲ.

Edited, printed and published by A. N. Nagaraja[illegible] at the Sadhvi Press D[illegible] Mysore

ಕಳ್ಳಸಂತೆ ಪತ್ತೆ

ಸ್ವಂ ವ] ಚಾಮರಾಜನಗರ

ಕಳೆದ ೭-೮ ದಿನಗಳ ಹಿಂದೆ [illegible] ವಾಡಿ ಗ್ರಾಮದಲ್ಲಿ ವಾಸವಾಗಿರುವ [illegible] ಪುಟ್ಟಶೆಟ್ಟಿ ಎಂಬಾತನು ರೂಪಾಯಿಕ್ಕೆ ಎರಡು ಸೇರಿನಂತೆ ರಾಗಿಯನ್ನು ಬಡಾವಣೆ ಜನರಿಗೆ ಮಾರುತ್ತಿದ್ದುದನ್ನು ಲ್ಲೂಕು ಅಮಲ್ದಾರರು ಕಾಗಲವಾಡಿಗೆ ಬರುತ್ತಿದ್ದಾಗ, ಪತ್ತೆಮಾಡಿ, ಚಂದಕ ಗ್ರಾಮಕ್ಕೆ ಬಂದು ಪುಟ್ಟಶೆಟ್ಟಿ ಮನೆ ಜಪ್ತಿ ಮಾಡಿ ೫ ಪಲ್ಲ ೧೫ ಸೇರು [illegible] ಯನ್ನು ವಶಪಡಿಸಿಕೊಂಡು ಮುಂದಿನ ಕ್ರಮ ನಡೆಸುತ್ತಿದ್ದಾರೆ.

ಸಂಗೀತ

೩-೭-೪೬ ನೇ ಬುಧವಾರ [illegible] ವರ್ತಕರಾದ ಶ್ರೀ ಅನಂತರಾಜಯ್ಯ [illegible] ಮನೆಯಲ್ಲಿ ಶ್ರೀ ಎಸ್. ಮರಿಯಪ್ಪ [illegible] ಶಿಷ್ಯರಾದ ಶ್ರೀಮತಿ ಆರ್. ಜಲಜಾ [illegible] ನವರಿಂದ ಸಂಗೀತ ಕಛೇರಿ ನಡೆಯಿತು.

ತಿರುವಾಂಕೂರಿನಲ್ಲಿ ಮೋಟಾರ್ ಟೈರು ಕಾರ್ಖಾನೆ

ಅಮೆರಿಕಾ ಸಂಯುಕ್ತ ಸಂಸ್ಥಾನದ [illegible] ಡಲ್ ಟೈರ್ ಮತ್ತು ರಬ್ಬರ್ ಕಂಪೆನಿ [illegible] ರು ಮೋಟಾರ್ ಟೈರು ಕಾರ್ಖಾನೆಯನ್ನು ತಿರುವಾಂಕೂರಿನಲ್ಲಿ ಸ್ಥಾಪಿಸ[illegible] ರೆಂದೂ, ಅಲ್ಲಿನ ಸರ್ಕಾರ ಇದಕ್ಕೆ [illegible] ಬೆಂಬಲವೀಯುವುದೆಂದೂ ಗೊತ್ತಾ[illegible]

ಒಪೇರಾ ಟಾಕೀಸ್

6—7—46ರಿಂದ

ಲವಂ[illegible]

(ತಮಿಳು)

ಪಾತ್ರ:—

*ವ್ಯೆ. ವಿ. ರಾವ್, *ಕುಮಾರಿ [illegible] *ಜಯಮ್ಮ, *ಸಾರಂಗಪಾ[illegible] ಮುಂತಾದವರು

ಪ್ರತಿದಿನ 3 ಆಟಗಳು

ದೊಡ್ಡ ಹುಂಡಿ ಭೋಗಪ್ಪ [illegible] ಸಿಪಲ್ ಹೈಸ್ಕೂಲ್ ಸೆಕ್ರೆಟರಿ [illegible] ಆಫೀಸಿನಿಂದ

ಗುಂಡ[illegible]

ತಾ॥ [illegible]

ಪ್ರಕಟಣೆ

ಮೇಲ್ಕಂಡ ಹೈಸ್ಕೂಲಿನ ಪ್ರ[illegible] ಗತಿಯನ್ನು ಕೂಡಲೇ ಪ್ರಾರಂಭಿ[illegible] ವೇಳ್ಕಂಡ ತರಗತಿಗೆ ಸೇರಲು [illegible] ವಿದ್ಯಾರ್ಥಿಗಳು ೧೫-೭-೪೬ ರ [illegible] ಸೆಕ್ರೆಟರಿಯವರಿಗೆ ಅರ್ಜಿಗಳನ್ನು ಕೊಳ್ಳಬೇಕು.

ರಾಜ್ ಕಮಲ್ ಟಾಕೀಸ್, ಮೈಸೂರು

8—7—46 ನೇ ಬುಧವಾರದಿಂದ

ಯಶೋಭರಿತವಾದ 2 ನೇ ವಾರ

ಸ್ಟೀಲ್ ಲತಾ ಅಜೂರಿ { ರತ್ನನ್ } ನಾಸ್ತಿ ಕರನ್

[illegible] ಬದಲಾವಣೆ [illegible]

ಸಭಾ [illegible] ನೋಡಿ

ಸಾಧ್ವಿ ಪ್ರೆಸ್ಸಿನಲ್ಲಿ, ಮೈಸೂರು.

ಫೋನ್ ನಂ. 392 || ವಂದೇ ಮಾತರಂ || ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಮಂಗಳವಾರ ೯—೭—೪೬ [ಸಂಚಿಕೆ ೨೫೫

ನಾಳೆ ಮಧ್ಯರಾತ್ರಿಯಿಂದ ಅಂಚೆ ನೌಕರರ ಮುಷ್ಕರ

ಸನ್ಯಾಸಿಗಳಿಗೂ ದ|| ಆಫ್ರಿಕದ ಬಿಳಿಯರಿಗೂ ಪ್ರವೇಶವಿಲ್ಲ

ದ|| ಆಫ್ರಿಕದ ವರ್ಣ ವಿಭೇದ ಶಾಸನ ವನ್ನು ಪ್ರತಿಭಟಿಸುವುದಕ್ಕಾಗಿ ಕಂಪಾಲಿಯ ಹೋಟೆಲುಗಳಲ್ಲಿ "ಸನ್ಯಾಸಿಗಳಿಗೂ, ದ|| ಆಫ್ರಿಕದ ಬಿಳಿಯರಿಗೂ ಪ್ರವೇಶವಿಲ್ಲ" ಎಂಬುದಾಗಿ ಬರೆದಿರುವ ಹಲಗೆಗಳನ್ನು ಪ್ರಾಮುಖ್ಯವಾಗಿ ಪ್ರದರ್ಶಿಸಲಾಗುತ್ತಿದೆ. ಕ್ಲಿನ ವಿಮಾನ ನಿಲ್ದಾಣ, ಮೃಗಾಲಯ ಮತ್ತು ಇತರ ಸಾರ್ವಜನಿಕ ಸ್ಥಳಗಳಲ್ಲಿ ಕಾಚೆ ನೌಕರಿಯವರು ದೊಡ್ಡ ದೊಡ್ಡ ಪೋಸ್ಟರುಗಳನ್ನಿಟ್ಟು ಅದರಲ್ಲಿ "ದ|| ಆಫ್ರಿಕದ ಬಿಳಿಯರಿಗೆ ಕಂಪಾಲಿಯಲ್ಲಿ ಸ್ವಾಗತ ವಿಲ್ಲ" ಎಂಬುದಾಗಿ ಬರೆಸಿಡಲು ನಿರ್ಧರಿಸಿ ದರು.

೧೭ ಕೋಟಿ ರೂಗಳ ವಿದ್ಯುಚ್ಛಕ್ತಿ ಯೋಜನೆ

ಸತದ್ರು ನದಿಯಿಂದ ಭಾರಿ ಕಾಲುವೆ ಯೊಂದನ್ನು ತೆಗೆದು ಪ್ರಪಂಚದಲ್ಲೆಲ್ಲಾ ಅತ್ಯಂತ ಎತ್ತರವೆಂದು ಹೇಳಲಾಗುವ ಅಣೆ ಕಟ್ಟು ಸಿದ್ಧವಾಗುತ್ತಿರುವ ಭಕ್ರಾ ಎಂಬಲ್ಲಿ ೧೭ ಕೋಟಿ ರೂಪಾಯಿ ವೆಚ್ಚದಿಂದ ೬೯ ಸಾವಿರ ಕಿಲೋ ವಾಟಿನ ವಿದ್ಯುಚ್ಛಕ್ತಿಯ ನ್ನು ಇನ್ನು ೮೦ ವರ್ಷಗಳೊಳಗೆ ತಯಾರಿ ಸುವ ಯೋಜನೆಯನ್ನು ಕೈಗೊಳ್ಳಲು ಪಂಜಾಬ್ ಸರ್ಕಾರದವರು ನಿರ್ಧರಿಸಿ ದ್ದಾರೆ.

ಚೀಣಾದಲ್ಲಿ ಯುದ್ಧ ಕಾಲು !

ಚೀಣಾ ದೇಶಕ್ಕೆಲ್ಲಾ ಅನ್ಯಾಯವಾಗು ವಂತೆ ಕಾಲವನ್ನು ಗೊತ್ತುಮಾಡದೆ ಯಾವ ಗುರಿಯೂ ಸರಿಹತ್ತು ಇಲ್ಲದ ಯುದ್ಧ ಕಾಲು ದಾರಿಗಳಿವೆ-ಎಂದು ಚೀಣಾದ ಕಮ್ಯೂನಿಸ್ಟ್ ಪಕ್ಷ ಪ್ರಕಟಿಸಿದೆ. ಚೀಣಾದ ಒಳಕಡೆಗೆ ಅಮೆರಿಕ ಸೈನ್ಯ ಸಜ್ಜಿತ ಪಡೆಗಳ ಕೈ ನಡೆಸಿರುವುದನ್ನು ನಿಲ್ಲಿಸಿ ಕೂಡಲೇ ಆ ಪಡೆಗಳನ್ನು ವಾಪಸು ಕರೆಸಿಕೊಳ್ಳಬೇಕೆಂ ದು ಒತ್ತಾಯಪಡಿಸಿದೆ.

ಸರ್ಕಾರಿ ಕಛೇರಿಗಳಲ್ಲಿ ಸಾರ್ವಜನಿಕರಿಗೆ ಅನುಕೂಲ

ತಾಲ್ಲೂಕು ಮತ್ತು ಜಿಲ್ಲಾ ಸರ್ಕಾರಿ ಕ ಚೇರಿಗಳಿಗೆ ಹೋಗುವ ಹಳ್ಳಿಯವರಿಗೆ ಮತ್ತು ಪ್ರೇಕ್ಷಕರಿಗೆ ಬೊಂಬಾಯಿ ಕಾಂಗ್ರೆಸ್ ಸರ್ಕಾರ ಅನೇಕ ಸೌಲಭ್ಯಗಳನ್ನು ಕ ಲ್ಪಿಸಿರುವುದು. ಕಛೇರಿಗಳಿಗೆ ಬರುವವ ರಿಗೆ ಬಹಾನಿ ಅನಲ್‌ಕಾಲ್ ಕ್ರಾನು ಬೇ ಡದ ಎಲ್ಲಾ ಸಮಾಚಾರಗಳನ್ನೂ ಒದಗಿಸ ಲು ಏರ್ಪಾಟಾಗಿದೆ. ಅವರುಗಳಿಗಾಗಿ ಪ್ರತ್ಯೇಕ ಕೊಠಡಿಯೂ, ಅದರಲ್ಲಿ ಕುರ್ಚಿ, ಬೆಂಚು, ಮೇಜ ಮುಂತಾದ ಪಲಕರಣೆಗ ಳು, ಕುಡಿಯುವ ನೀರೂ ದೊರೆಯುವಂ ತ ವ್ಯವಸ್ಥೆ ಮಾಡಲಾಗಿದೆ. ಒಬ್ಬ ಜವಾ ನ ಇದಕ್ಕಾಗಿಯೇ ಇಡಲ್ಪಟ್ಟಿದ್ದು, ಯಾ ಅಧಿಕಾರಿಗಳನ್ನು ನೋಡಬೇಕೋ ಅವ ರಬಳಿಗೆ ಪ್ರೇಕ್ಷಕರನ್ನು ಕರೆದೊಯ್ಯುವ ನು. ಇದೇ ತರಹ ವ್ಯವಸ್ಥೆಯನ್ನು ಕೆಲ ವುಗಳ ಮತ್ತು ಪ್ರಾಂತ್ಯ ಕಛೇರಿಗಳಲ್ಲೂ ಸಧ್ಯದಲ್ಲೇ ಮಾಡುವುದಾಗಿ ವರದಿ ಯಾಗಿದೆ.

ಸಂಗೀತ

ಮೈಸೂರು ಜಯಲಕ್ಷ್ಮೀ ನಾಚಾ ಬೀದಿಯ ಶ್ರೀ ಮೊಸ್ತಾಂನು ದೇವಸ್ಥಾನದ ಮೆ ೧೦-೭-೪೬ ನೇ ಬುಧವಾರ ಪ್ರ ಸಾದದ ಪ್ರಯುಕ್ತ, ಸಾಯಂಕಾಲ ೭ ಗೆ ಸಂ|| ವಿ|| ರಾಮುಮೂರ್ತಿರವರ ಸಂ ಗೀತ ನಡೆಸಲ್ಪಡುತ್ತದೆ.

ಆಹಾರ ನಿಯೋಗದವರ ಕಾರ್ಯಕ್ರಮ

ಸಂಸ್ಥಾನದ ರೇಷನ್ ಪದ್ಧತಿ ಬಗ್ಗೆ ಅವರ ಮೆಚ್ಚಿಗೆ

ಸ್ವಂ. ವ. ಫೋನ್] ಬೆಂಗಳೂರು ೮

ಅಮೆರಿಕದ ಆಹಾರ ನಿಯೋಗದ ನಾ ಯಕರಾದ ಡಾ|| ಹಂಟ್ಸ್‌ರವರು ಇಂದು ಬೆಳಗ್ಗೆ ಕುಮಾರಾ ಪಾರ್ಕಿನಲ್ಲಿ ಪತ್ರಿಕಾ ಗೋಷ್ಠಿಯೊಂದನ್ನು ಕರೆದಿದ್ದರು. ಅದರಲ್ಲಿ ಅವರು ದಕ್ಷಿಣ ಭಾರತದ ಮತ್ತು ಮೈಸೂ ರಿನ ತಮ್ಮ ಪ್ರವಾಸದ ಉದ್ದೇಶವನ್ನು ವಿ ವರಿಸಿದರು. ತಾವು ದಿಲ್ಲಿಯೂ, ಸಂಯು ಕ್ತ ಪ್ರಾಂತ್ಯಗಳೇ ಮುಂತಾದ ದೇಶಗಳಲ್ಲಿ ಪ್ರವಾಸ ಮಾಡಿ ಅಲ್ಲಿನ ರೇಷನ್ ವ್ಯವಸ್ಥೆ ಯನ್ನು ಚೆನ್ನಾಗಿ ಪರೀಕ್ಷಿಸಿರುವುದಾಗಿ ಯೂ, ದಕ್ಷಿಣ ಭಾರತ ಮತ್ತು ಮೈಸೂರು ಸಂಸ್ಥಾನದಲ್ಲಿ ರೇಷನ್ ಪದ್ಧತಿಯು ಬಹಳ ಚೆನ್ನಾಗಿರುವುದೆಂದೂ, ಅವನ್ನು ಜನಾಭ್ಯಾ ದಿಯಿಂದಲೂ, ದಕ್ಷತೆಯಿಂದಲೂ ನಿರ್ವಹಿ ಸುತ್ತಿರುವುದಾಗಿ ತಾವು ಅಭಿಪ್ರಾಯ ಪಡು ವುದಾಗಿಯೂ ಅವರು ತಿಳಿಸಿದರು. ಭಾರತ ಕ್ಕೆ ಆಹಾರ ಕಳಿಸಿದರೆ ಅದು ಕಳ್ಳಸಂತೆಯಲ್ಲಿ ಮಾರಾಟವಾಗುವುದು ಅಥವಾ ವ್ಯಥಾ ನ ಷ್ಟವಾಗುವುದೆಂದು ಕೆಲವರು ಅಮೇರಿಕದವರಿಗೆ ಹೇಳಿದ್ದು, ಕಳೆದ ಸಲ ಮಿ|| ಹೂವರ್‌ರವರು ಬಂದಿದ್ದಾಗ ಭಾರತದ ಪರಿಸ್ಥಿತಿಯನ್ನು ಚೆನ್ನಾಗಿ ಅರಿಯಲು ಅವ ರಿಗೆ ಕಾಲಾವಕಾಶವಿರಲಿಲ್ಲವೆಂದು ತಿಳಿಸಿ ತಾವು ಅಮೇರಿಕಕ್ಕೆ ವಾಪಸು ತೆರಳಿದ ಮೇಲೆ ಭಾರತಕ್ಕೆ ಆಹಾರ ಕಳಿಸುವ ಬಗ್ಗೆ ಪ್ರಚಾರ ನಡೆಸುವುದಾಗಿ ಭರವಸೆ ಇತ್ತರು. ಪತ್ರಿಕೋದ್ಯೋಗಿಗಳು ಕೇಳಿದ ಹಲವು ಪ್ರಶ್ನೆಗಳಿಗೆ ಜವಾಬಿತ್ತರು.

ಈ ನಿಯೋಗದವರು ನಿನ್ನೆ ದಿವಾನರು ಮತ್ತು ನ್ಯಾಯಾಂಗ ಸಚಿವರ ಸಂಗಡ ಕೋಲಾರ, ಶ್ರೀನಿವಾಸಪುರ, ಚಿಕ್ಕಬಳ್ಳಾಪುರ, ದೇವನಹಳ್ಳಿ, ಚಿಕ್ಕಬಳ್ಳಾಪುರ ಮುಂತಾದ ಪ್ರದೇಶಗಳಿಗೆ ಭೇಟಿಯಿತ್ತು ಸಂಜೆ ಆರೂವರೆ ಗಂಟೆಗೆ ಬೆಂಗಳೂರಿಗೆ ವಾಪಸು ಬಂದರು. ಶ್ರೀನಿವಾಸಪುರದ ಉಚಿತ ಭೋಜನಾಲ ಯದಲ್ಲಿ ೭೦ ವರ್ಷದ ಊಟ ಮಾಡ ಕ್ಕಿದ್ದು ದನ್ನು ಪರೀಕ್ಷಿಸಿ ತಮ್ಮ ಮೆಚ್ಚಿಗೆ ವ್ಯಕ್ತ ಪಡಿಸಿದರು.

ನಿಯೋಗದವರು ಇಂದು ಸ್ವಲ್ಪ ಬೊಂಬಾಯಿಗೆ ವಿಮಾನದಲ್ಲಿ ತೆರಳಿದರು. ದೆಹಲಿಯಲ್ಲಿ ಅವರು ೨ ದಿನಗಳು ತಂಗಿದ್ದು, ಜುಲೈ ೧೧ ರ ವೇಳೆಗೆ ನ್ಯೂಯಾರ್ಕ್ ನಗರ ತಲುಪಲಿದ್ದಾರೆ.

ಪ್ರೌಢ ವಿದ್ಯಾಶಾಲೆ

ಸ್ವಂ. ವ.] ಶ್ರೀರಂಗಪಟ್ಟಣ ೭

ಬೆಂಗಳೂರಿನಲ್ಲಿ ವಿದ್ಯಾಸಚಿವರನ್ನೂ ಮತ್ತು ಸೆಕ್ರೆಟರಿಯವರನ್ನೂ ಈ ತಿಂಗಳು ೪ ಮತ್ತು ೫ ನೇ ತಾರೀಖಿನಲ್ಲಿ ಶ್ರೀರಂಗ ಪಟ್ಟಣದ ಶ್ರೀ ಎಂ. ಸುಬ್ಬಯ್ಯನವರೂ ಎಸ್. ವಿ. ಚಂದ್ರಶೇಖರಯ್ಯನವರೂ ಭೇಟಿಮಾ ಡಿ ಈ ಊರಿನಲ್ಲಿ ಪ್ರೌಢವಿದ್ಯಾಶಾಲೆಯ ನ್ನು ಸ್ಥಾಪಿಸುವ ವಿಚಾರವಾಗಿ ಮಾತನಾಡಿ ದರು. ಈ ಸಂದರ್ಭದಲ್ಲಿ ಶ್ರೀಮಾನ್ ಟಿ. ಸುಬ್ಬಯ್ಯನವರು ತುಂಬಾ ಮುತುವರ್ಜಿ ವಹಿಸಿ ಕೂಡಲೆ ಮಂಜೂರು ಮಾಡಿಸಲು ಶಾಲಾಧಿಪರನ್ನು ಒತ್ತಾಯಮಾಡಿರು ತ್ತಾರೆ. ವಿದ್ಯಾಭ್ಯಾಸದ ಇಲಾಖೆಯವರು ಕೂಡಲೆ ಮಂಜೂರು ಮಾಡುವುದಾಗಿ ಭರವಸೆ ಕೊಟ್ಟಿರುತ್ತಾರೆ.

ರೇಷನ್ ತೊಂದರೆ

೧ ನೇ ತಾರೀಖಿನಲ್ಲಿ ಜನಗಳಿಗೆ ರೇ ಷನ್ ಸರಿಯಾಗಿ ಕೊಡುತ್ತಿಲ್ಲ. ಒಬ್ಬೊಬ್ಬ ರಿಗೆ ಒಂದೊಂದು ರೀತಿ ಕೊಡುತ್ತಿದ್ದಾರೆ. ಹೀಗೆ ಮಾಡುತ್ತಿರುವುದರಿಂದ ಜನಗಳು ಹೊಟ್ಟೆಗಿಲ್ಲದೆ ತುಂಬಾ ತೊಂದರೆ ಪಡುತ್ತಿ ದ್ದಾರೆ. ರೇಷನ್ ಕಾರ್ಡಿನಲ್ಲಿ ಬರೆದಿರುವಷ್ಟನ್ನು ಸಹ ಕೊಡುತ್ತಿಲ್ಲ. ಇತ್ತ ಮೇಲಿನ ಅಧಿಕಾ ರಿಗಳು ತ ಎಚ್ಚರಿ ಗಮನ ಕೊಡಬೇಕು.

ಸಿಲೋನ್ ಭಾರತೀಯರಿಗೆ ಕಾಂಗ್ರೆಸ್ ಬೆಂಬಲ

ಕಾಂಗ್ರೆಸ್ ವರ್ಕಿಂಗ್ ಕಮಿಟಿಯು ಸಿಲೋನಿನಲ್ಲಿರುವ ಭಾರತೀಯ ಕೆಲಸಗಾರ ಪರಿಸ್ಥಿತಿಯನ್ನು ಗಮನಿಸಿ ಅವರಿಗೆ ಬೆಂಬಲ ಕೊಡುವ ನಿರ್ಣಯವನ್ನು ಅಂಗೀಕರಿಸಿತು ಅವರ ಕಷ್ಟ ನಷ್ಟಗಳನ್ನು ಪರಿಹರಿಸಲು ತಕ್ಕ ವ್ಯವಸ್ಥೆ ಮಾಡುವುದಕ್ಕಾಗಿ ಪಂಡಿತಜೀ ರು, ರಾಜಾಜಿ ಆಸ್ಪ ನಾಯಕರು ಮತ್ತು ರಾಮಚಂದ್ರ ಇವರುಗಳನ್ನೊಳಗೊಂಡ ಸಮಿತಿಯನ್ನು ರಚಿಸಿದೆ.

ಕಾಂಗ್ರೆಸ್ ವೇದಿಕೆಗೆ ಕ್ಯಾಸಂಬಳ್ಳಿಯ ವರ ಹೆಸರು

ಗುಂಡ್ಲುಪೇಟೆಯ ಶ್ರೀ ಕೆ ಗ ಕಾ ದ ಬಿ. ದೊಡ್ಡಪ್ಪ, ಹೆಚ್. ಎಸ್. ರಾಮಣ್ಣ, ವೈ ಜಿ. ಕೆಂಚಾಚಾರ್, ಬಿ ಚಿ ದಾಸಯ್ಯ ಜಿ ಎಂ ಶಾಸ್ತ್ರಿ, ಜಿ. ವಿ ಕೃಷ್ಣಶೆಟ್ಟಿ ಜಿ ಎಲ್. ಅನಂತರಾಮಯ್ಯ, ಜಿ ವಿ ಶಿವ ರಾಮಯ್ಯ, ಎಸ್.ಎಂ. ಪೇಟೆ ಕಪ್ಪಪ್ಪ ವರ್ ... ಕೆ ಸಿದ್ಧರಾಮಯ್ಯ ಇವರುಗಳು ಮೈಸೂರು ಕಾಂಗ್ರೆಸ್ ಅಧ್ಯಕ್ಷ ಸ್ಥಾನಕ್ಕೆ ಶ್ರೀ ಕ್ಯಾಸಂಬಳ್ಳಿ ಚೆಂಗಲರಾಯ ರೆಡ್ಡಿಯ ವರನ್ನು ಸೂಚಿಸಿದ್ದಾರೆ.

ವರ್ಧಂತಿ ಮೆರವಣಿಗೆ ಇಲ್ಲ

ಆಹಾರಾಭಾವದ ಕಾರಣ

ಮೈಸೂರು ೮

ಆಹಾರಾಭಾವದ ಪ್ರಯುಕ್ತ ಈ ತಿಂಗ ಳು ೨೦ ನೇ ತಾ|| ಶನಿವಾರ ಶ್ರೀಮನ್ಮ ಹಾರಾಜರವರ ವರ್ಧಂತಿ ಮಹೋತ್ಸವದ ಸಂಬಂಧವಾಗಿ ನಡೆಯುತ್ತಿದ್ದ ಮೆರವಣಿಗೆ ಯು ಜರುಗುವುದಿಲ್ಲವೆಂದು ತಿಳಿದು ಬಂದಿದೆ

ಅಂಚೆ ನೌಕರರ ಮುಷ್ಕರ

ಮುಂಚೆಯೇ ತೀರ್ಮಾನಿಸಿದ್ದಂತೆ ಜು ಲೈ ೧೧ ನೇ ತಾ|| ರಾತ್ರಿ ೧೨ ಘಂಟೆಯಿಂ ದ ಅಂಚೆ-ನೌಕರರ ಮುಷ್ಕರವು ಆರಂಭ ವಾಗುವುದಾಗಿ ಅದಕ್ಕಾಗಿ ನೇಮಿಸಲಾಗಿದ್ದ 'ಕೌನ್ಸಿಲ್ ಆಫ್ ಆಕ್ಷನ್' ಸಮಿತಿ ಪ್ರಕ ಟಣೆ ಹೊರಡಿಸಿದೆ. ಈ ಮುಷ್ಕರದಲ್ಲಿ ಭಾಗ ವಹಿಸುವುದಿಲ್ಲವೆಂದು ಹಲವು ಚಿಕ್ಕ ಪುಟ್ಟ ಸಂಘಗಳು ನಿರ್ಧರಿಸಿವೆ. ಆದರೆ ಅಖಿಲ ಭಾರತವ್ಯಾಪ್ತಿಯ ಮುಷ್ಕರವು ಪೂ ರ್ಣಪ್ರಮಾಣದಲ್ಲಿ ನಡೆಯಬಹುದೆಂದು ಊ ಹಿಸಲಾಗಿದೆ. ಇದಕ್ಕಾಗಿಯೇ ಈಗ, ಮು ನ್ನೆಚ್ಚರಿಕೆ, ಸಿ. ಪಿ. ಬಜ್ಜರ್‌ನ್ಲ್ ಕಾಗದಗ ಳನ್ನು ತೆಗೆದುಕೊಳ್ಳುತ್ತಿಲ್ಲ.

ಭಾರತ ರಿಪಬ್ಲಿಕ್ ಆಗಬೇಕು

ರಾಷ್ಟ್ರಪತಿಗಳ ಉಪಸಂಹಾರ ಭಾಷಣ

ಅಖಿಲ ಭಾರತ ಕಾಂಗ್ರೆಸ್ ಸಮಿತಿಯ ಬೊಂಬಾಯಿ ಅಧಿವೇಶನದಲ್ಲಿ ಉಪಸಂಹಾ ರ ಭಾಷಣ ಮಾಡುತ್ತಾ, ಪಂ|| ಜವಹರ ಲಾಲ್ ನೆಹರೂರವರು, ಭಾರತವು ಸ್ವತಂತ್ರ ವಾಗಬೇಕೆಂದು ತೀರ್ಮಾನಿಸಿದೆ-ಎಂದು ಹೇಳಿದರು. ಸ್ವಾತಂತ್ರ್ಯಕ್ಕೆ ಒಪ್ಪೊಪ್ಪುವ ಒಂದೊಂದು ಅರ್ಥ ಕಲ್ಪಿಸಿದ್ದಾರೆ; ಆದರೆ ಭಾರತ ಯಾವ ಅಧೀನದಲ್ಲೂ ಇರಕೂಡದು ಬ್ರಿಟಿಷರ ಸಂಪರ್ಕವನ್ನೆಲ್ಲಾ ಪೂರ್ಣವಾಗಿ ತೊರೆಯಬೇಕು; ಅಂತಹ ರಿಪಬ್ಲಿಕ್ ಸ್ಥಾಪನೆಯೇ ನಮ್ಮ ಇಂದಿನ ಗುರಿ-ಎಂದು ಘೋಷಿಸಿದರು. ಭಾಷಣವನ್ನು ಮುಂದು ವರಿಸಿ, ರಾಜ್ಯಾಂಗ ರಚನಾ ಸಭೆಗೆ ಕಾಂಗ್ರೆ ಸ್ಸು ಪ್ರವೇಶಿಸಬೇಕೆಂಬ ಸಿದ್ಧಾಂತವನ್ನು ವಿವರಿಸಿ, ಅಲ್ಲಿನ ಪರಿಸ್ಥಿತಿ ಸರಿಹೋಗದಿ ದ್ದರೆ ಅದನ್ನು ನಮಗೆ ಬೇಕಾದಂತೆ ಪರಿ ವರ್ತಿಸಿಕೊಳ್ಳುವ ಹಕ್ಕು ನಮಗೆ ಇದ್ದೇ ಇದೆಯೆಂದು ಹೇಳಿದರು. ರಾಜ್ಯಾಂಗ ರಚನಾ ಸಭೆಯನ್ನು ತಿರಸ್ಕರಿಸಬೇಕೆಂಬ ವಾದವನ್ನು ನೆಹರೂರವರು ವಿರೋಧಿಸಿದರು "ಇನ್ನೆ ೧೫೦ ವರ್ಷಗಳ ಹಿಂದೆ ಫ್ರಾನ್ಸಿನ ರಾಜರು ಇದೇ ತರಹ ಒಂದು ರಾಜ್ಯಾಂಗ ರಚನಾ ಸಭೆ (ಸ್ಟೇಟ್ಸ್ ಜನರಲ್) ಕರೆಸಿ ದ್ದರೆಂದೂ ಆ ರಾಜರು ಕೆಲವೇ ದಿನಗಳಲ್ಲಿ ಅದೇ ಸಭೆಯಿಂದ ಕಷ್ಟಕ್ಕೆ ಸಿಕ್ಕಿ ಬಿದ್ದು, ಕೆಲವು ವರ್ಷಗಳಲ್ಲೇ ಅವರ ತಲೆ ಬುರುಡೆ ಹೋಯಿತು" ಎಂದೂ ಹೇಳಿದರು. ನಾವು ಯಾವ ಶಕ್ತಿಯನ್ನು ಹಾಳುಮಾಡದೆ ರಾಜ್ಯಾಂಗ ಸಭೆ ಯನ್ನು ನಮಗೆ ಬೇಕಾದಂತೆ ಉಪಯೋಗಿ ಸಿಕೊಳ್ಳಲು ಪ್ರಯುಕ್ತ ಸಮಯೋಚಿತ ಎಂದರು.

ದೇಶೀಯ ಸಂಸ್ಥಾನಗಳ ವಿಚಾರ ಪ್ರಸ್ತಾಪಿಸುತ್ತಾ, ಅವುಗಳ ನಿರ್ಣಯವನ್ನು ಒಪ್ಪಬೇಕಾದ ಕಾಲ ಬಂದಿದೆಯೆಂದು ಹೇಳಿದರು.

ಸಾಧ್ವಿ

ಓದಿ

ರಾಜಕೀಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

ಸಾಧ್ವಿ

ತಾ॥ ೯-೭-೪೬ ಮಂಗಳವಾರ

ಹೈದರಾಬಾದಿನ ಮುನ್ನಡೆ

ಶಾಸನ ಸಭೆಗೆ ಹೊಸ ಚುನಾವಣೆಗಳನ್ನು ನಡೆಸಿ ಅದರಿಂದ ಇಬ್ಬರು ಖಾಸಗಿ ಮಂತ್ರಿಗಳನ್ನು ನೇಮಿಸುವುದಾಗಿ ಹೈದರಾಬಾದಿನ ಪ್ರಧಾನಿಗಳಾದ ಛತ್ತಾರಿ ನವಾಬರು ಪ್ರಕಟಿಸಿದ್ದಾರೆ. ರಾಜಕೀಯ ಸುಧಾರಣೆಗಳಲ್ಲಿ ಬಹಳ ಹಿಂದೆ ಬಿದ್ದಿರುವ ಹೈದರಾಬಾದು ಸಂಸ್ಥಾನವೂ ಎಚ್ಚೆತ್ತಿರುವಂತಿದೆ. ಇನ್ನು ಮೂರು ತಿಂಗಳೊಳಗೆ ಅಲ್ಲಿ ಹೊಸ ಚುನಾವಣೆಗಳು ನಡೆಯುವುವು. ಯಾವ ಅಡ್ಡಿ ಆತಂಕಗಳೂ ಇಲ್ಲದೆ ಧಾರಾಳವಾಗಿ ಈ ಚುನಾವಣೆಗಳು ನಡೆಯಲು ಅವಕಾಶ ಕಲ್ಪಿಸುವುದಾಗಿಯೂ ಹೇಳಲಾಗಿದೆ. ಇದಕ್ಕೆ ಪೂರ್ವಭಾವಿಯಾಗಿ ಹಲವು ಏರ್ಪಾಡುಗಳನ್ನು ಅಲ್ಲಿನ ಸರ್ಕಾರದವರು ಮಾಡಿದ್ದಾರೆ.

ಹೈದರಾಬಾದು ಕಾಂಗ್ರೆಸ್ಸಿನ ಮೇಲೆ ಐದಾರು ವರ್ಷಗಳ ಹಿಂದೆ ಹಾಕಿದ್ದ ನಿಷೇಧಾಜ್ಞೆಯನ್ನು ಈಗತಾನೆ ರದ್ದು ಮಾಡಿದ್ದಾರೆ. ಎಲ್ಲರಿಗಿಂತಲೂ ಮುಂಚೆ ಬಂದ ಈ ಪ್ರತಿಬಂಧಕವನ್ನು ಎಲ್ಲರಿಗಿಂತಲೂ ಕಡೆಯಲ್ಲಿ ಹೈದರಾಬಾದಿನವರು ತೆಗೆದಿದ್ದಾರೆ. ಇದಕ್ಕಾಗಿ ಅವರು ವಿಶೇಷ ಅಭಿನಂದನೆಗೆ ಪಾತ್ರರಲ್ಲ. ಚುನಾವಣೆಗಳು ಧಾರಾಳವಾಗಿ ನಡೆಯಲು ಸಭೆಗಳ ಮೇಲೆ ಇದ್ದ ಅಡ್ಡಿಯನ್ನು ಸಡಲಿಸಿರುವುದಾಗಿ ಹೇಳಲಾಗಿದೆ. ಆದರೆ ಇದರಲ್ಲಿಯೂ ಸಂಕುಚಿತ ಮನೋಭಾವವೇ ಕಂಡು ಬರುತ್ತದೆ. ಸಭೆ, ಮೆರವಣಿಗೆಗಳಿಗೆ ಸಾರ್ವತ್ರಿಕವಾದ ಅಡಚಣೆಯು ಇನ್ನೂ ಇದ್ದೇ ಇದೆ. ಚುನಾವಣಾ ಸಭೆಗಳಿಗೆ ಮಾತ್ರ ಈಗ ವಿನಾಯಿತಿ ಕೊಡಲಾಗಿದೆ. ಎಂದ ಮೇಲೆ ನಾಗರಿಕ ಹಕ್ಕುಗಳಿಗೆ ಈಗಲೂ ಅಲ್ಲಿ ಎಷ್ಟು ಧಕ್ಕೆ ಇರುವುದೆಂಬುದು ವೇದ್ಯವಾಗುತ್ತದೆ.

ಈಗ ಜಾರಿಗೆ ಬರಲಿರುವ ಸುಧಾರಣೆಯಿಂದಲೂ ಹೈದರಾಬಾದು ಇನ್ನೂ ಎಷ್ಟು ಹಿಂದೆ ಬಿದ್ದಿದೆ ಎಂಬುದು ವ್ಯಕ್ತವಾಗಿರುತ್ತದೆ. ಅನೇಕ ಸಂಸ್ಥಾನಗಳು ಪೂರ್ಣ ಜವಾಬ್ದಾರಿ ಸರ್ಕಾರವನ್ನೇ ಘೋಷಿಸಿವೆ. ಕೆಲವು ಕಡೆ ಚುನಾಯಿತ ಮಂತ್ರಿಗಳು ಆಡಳಿತ ನಡೆಸುತ್ತಿದ್ದಾರೆ. ತಿರುವಾಂಕೂರಿನಲ್ಲಿ ಅಮೇರಿಕದ ಮಾದರಿಯ ರಾಜ್ಯಾಂಗವು ಜಾರಿಗೆ ಬರಲಿದೆ. ಕಾಶ್ಮೀರದಲ್ಲಿ ಶಾಸನ ಸಭೆಗಳಿಂದ ಚುನಾಯಿತರಾದವರ ಪಟ್ಟಿಯಿಂದ ಮಂತ್ರಿಗಳನ್ನು ಆರಿಸಿಕೊಳ್ಳಲಾಗುತ್ತದೆ. ಹೀಗಿರುವಲ್ಲಿ ಹೈದರಾಬಾದು ಇವೆಲ್ಲಕ್ಕಿಂತಲೂ ಬೇರೆಯಾದ ಮಾರ್ಗವನ್ನು ಹಿಡಿಯಲಿದೆ. ಚುನಾಯಿತ ಮಂತ್ರಿಗಳಿಗೆ ಅಲ್ಲಿ ಇನ್ನೂ ಏರ್ಪಾಡಾಗಿರುವುದಿಲ್ಲ. ಶಾಸನ ಸಭೆಯ ಸದಸ್ಯರ ಪೈಕಿ ರಾಜರಿಗೆ ಅಥವ ಅವರ ಸರ್ಕಾರದವರಿಗೆ ತೋಚಿದವರನ್ನು ತೆಗೆದುಕೊಳ್ಳಲಾಗುವುದು. ಇದು ಜವಾಬ್ದಾರಿ ಸರ್ಕಾರವೂ ಅಲ್ಲ, ಜನಾನುರಾಗಿ ಸರ್ಕಾರವೂ ಅಲ್ಲ. ನಿರಂಕುಶಾಧಿಕಾರದ ಸುಧಾರಿತ ಸ್ವರೂಪ ಮಾತ್ರ.

ಈಗ ಹೈದರಾಬಾದು ಇರುವ ನಿರಂಕುಶ ಸ್ಥಿತಿಗಿಂತಲೂ ಒಂದು ಮೆಟ್ಟಿಲು ಮಾತ್ರ ಮುಂದುವರಿದಂತಿದೆ. ನಮ್ಮ ಮೈಸೂರಿನಲ್ಲಿಯೂ ಈಗ ಇದೇ ಮಾದರಿಯ ರಾಜ್ಯಾಂಗವು ಜಾರಿಯಲ್ಲಿದೆ. ಇದುವರೆಗೆ ಮೈಸೂರು ಹೊಂದಿದ್ದ ಸ್ಥಾನವನ್ನು ಹೈದರಾಬಾದು ಇನ್ನು ಮುಂದೆ ಹೊಂದುವುದು. ಇದರಿಂದ ಅಲ್ಲಿನ ಪ್ರಜೆಗಳಿಗೆ ಯಾವ ಸಮಾಧಾನವೂ ಉಂಟಾಗಲಾರದು. ಸರ್ ಮಿರ್ಜಾರವರು ಮೈಸೂರಿನಲ್ಲಿ ಜಾರಿಗೆ ತಂದ ಮಾದರಿಯ ರಾಜ್ಯಾಂಗವನ್ನು ಅವರು ಹೈದರಾಬಾದಿಗೆ ಹೋದಮೇಲೆ ಅಲ್ಲಿ ಜಾರಿಗೆ ತರಬೇಕಾಗುವುದು. ಈಗಿನ ಪ್ರಧಾನಿಗಳೇ ಅದನ್ನು ಅವರಿಗಾಗಿ ಸಿದ್ಧಗೊಳಿಸಿರುವರು. ಸರ್ ಮಿರ್ಜಾರವರು ಅಲ್ಲಿನ ಪ್ರಜಾ ಪ್ರಮುಖರನ್ನು ಅಂತರಂಗಕ್ಕೆ ತೆಗೆದುಕೊಂಡು ಈಗಿನ ಕಾಲಕ್ಕೆ ತಕ್ಕಂತೆ ಪ್ರಜಾ ಪುರಸ್ಕಾರವನ್ನು ಪಡೆದ ರಾಜ್ಯಾಂಗವನ್ನು ಬೇಗನೆ ಜಾರಿಗೆ ತಂದು ಅಲ್ಲಿ ತಮ್ಮ ಪ್ರಧಾನಿ ಪದವಿಯನ್ನು ಸಾರ್ಥಕ ಪಡಿಸಿಕೊಳ್ಳಲೆಂದು ನಾವು ಹಾರೈಸುತ್ತೇವೆ.

ಟ್ರೂಮನರಿಗೆ ಅರಬ್ಬರ ಮನವಿ

ಯೆಹೂದ್ಯರಿಗೆ ನೀವು ಕೊಡಬೇಕೆಂಬ ಆಕಾಂಕ್ಷೆ ನಿಮಗಿದ್ದಲ್ಲಿ ಅಮೇರಿಕಕ್ಕೆ ಅವರು ವಲಸೆ ಬಂದು ನೆಲೆಸಲು ಅವಕಾಶ ಕೊಡಿ; ಅದು ಬಿಟ್ಟು ಅರಬ್ ರಾಷ್ಟ್ರವಾದ ಪ್ಯಾಲಸ್ಟೈನಿಗೆ ಅವರನ್ನು ಬಲವಂತದಿಂದ ತಂದು ತುರುಕುವ ನೀತಿಗೆ ನೀವು ಬೆಂಬಲ ಕೊಡಲೇ ಕೂಡದು.—ಎಂದು ಅರಬ್ ಲೀಗಿನವರು ಟ್ರೂಮನ್ನರನ್ನು ಪ್ರಾರ್ಥಿಸಿದ್ದಾರೆ.

Edited, printed and published by A. R. Nagarajan at the Sadhvi Press D Subbiah Road, Mysore.

ರಾಜ್ಯಾಂಗ ರಚನಾ ಸಭೆಗೆ ಬೆಲೂಚಿಸ್ಥಾನದ ಪ್ರತಿನಿಧಿ

ಬೆಲೂಚಿಸ್ಥಾನದ 'ಗಾಂಧಿ' ಎಂದು ಪ್ರಸಿದ್ಧಿಗೊಂಡಿರುವ ಖಾನ್ ಸಮದ್ ಖಾನರನ್ನು ಅಂಜುಮಾನ್-ಇ-ವತನ್ ಸಂಸ್ಥೆಯು ರಾಜ್ಯಾಂಗ ರಚನಾ ಸಭೆಗೆ ಉಮೇದುವಾರರನ್ನಾಗಿ ನಿಲ್ಲಿಸಿದೆ.

ಬ್ರಿಟನ್ನಿನಲ್ಲಿ ಚುನಾವಣೆ

ಬ್ರಿಟನ್ನಿನಲ್ಲಿ ಮುಂದಿನ ಚುನಾವಣೆ ೧೯೫೦ ನೇ ಮೇ ೧ ನೇ ತಾ॥ ನಡೆಯುವುದಾಗಿ ನಿರ್ಧಾರವಾಗಿರುವುದಾಗಿ ರಾಷ್ಟ್ರೀಯ ವಿಮಾನ ಶಾಖೆಯ ಸಚಿವರು ತಿಳಿಸಿದ್ದಾರೆ.

ದೊಡ್ಡ ಹುಂಡಿ ಭೋಗಪ್ಪ ಮುನಿಸಿಪಲ್ ಹೈಸ್ಕೂಲ್ ಸೆಕ್ರೆಟರಿಯವರ ಆಫೀಸಿನಿಂದ

ಗುಂಡ್ಲುಪೇಟೆ,
ತಾ॥ ೬-೭-೪೬.

ಪ್ರಕಟನೆ

ಮೇಲ್ಕಂಡ ಹೈಸ್ಕೂಲಿನ ಪ್ರಥಮ ತರಗತಿಯನ್ನು ಕೂಡಲೇ ಪ್ರಾರಂಭಿಸಲಾಗುತ್ತೆ. ಮೇಲ್ಕಂಡ ತರಗತಿಗೆ ಸೇರಲು ಇಷ್ಟಪಟ್ಟ ವಿದ್ಯಾರ್ಥಿಗಳು ೧೫-೭-೪೬ ರ ಒಳಗಾಗಿ ಸೆಕ್ರೆಟರಿಯವರಿಗೆ ಅರ್ಜಿಗಳನ್ನು ಹಾಕಿಕೊಳ್ಳಬೇಕು.

ಸೆಕ್ರೆಟರಿ.

ದ॥ ಆಫ್ರಿಕಕ್ಕೆ ಚೀಣದ ಪ್ರತಿಭಟನೆ

ಏಷ್ಯಾಖಂಡದ ಜನರ ವಿರುದ್ಧವಾಗಿ ಆಫ್ರಿಕಾ ಸರ್ಕಾರದವರು ಜಾರಿಗೆ ತಂದಿ[ರುವ] ಕಾನೂನನ್ನು ಪ್ರತಿಭಟಿಸಲು ಚೀಣಾ ಸ[ರ್ಕಾ]ರದವರು ತಮ್ಮ ರಾಯಭಾರಿಯ ಮೂಲ[ಕ] ಸೂಕ್ತವಾದ ಕಾರ್ಯಕ್ರಮವನ್ನು ಕೈಗೊ[ಳ್ಳ]ಲು ನಿರ್ಧರಿಸಿರುತ್ತಾರೆ.

ಗೌರಿಶಂಕರ್

ಸರ್ವ ಶ್ರೇಷ್ಠವಾದ ಈ ಶಿಖರವು ಹಿ[ಮಾ]ಲಯದಲ್ಲಿದೆ ಎಂಬ ಅಂಶ ತಮಗೆ ಗೊ[ತ್ತಿರ]ಬಹುದು. ಆದರೆ, ಬಹಿಸ್ಟ ಸಂಬಂ[ಧ] ಹೊಟ್ಟೆನೋವಿನ ದೆಸೆಯಿಂದ ಮಕ್ಕ[ಳಿಲ್ಲ]ದೇ ಇರತಕ್ಕವರಿಗೆ ಸರ್ವ ಶ್ರೇಷ್ಠವಾದ [ಔ]ಷಧವೆಂದು ಎಂಭತ್ತೇಳು ವರ್ಷಗಳಿಂದ [ಪ್ರ]ಖ್ಯಾತವಾದ "ಸಂತಾನ ಸಿಂಧೂರ" ಎಂಬ ಅದ್ಭುತ ಭಸ್ಮವು ಹಿಮಾಲಯದ... ಮೈಸೂರಿಗೆ ಯಾವಾಗ ಬಂತು, ಹೇಗೆ [ಬಂ]ತು, ಇಲ್ಲಿಂದ ಹೊರಟು ಯಾವ್ಯಾವ [ದೇಶ]ಗಳಲ್ಲಿ, ಯಾವ್ಯಾವ ಊರುಗಳಲ್ಲಿ ಜಾರಕ್ಕೆ ಬಂದಿದೆ, ಎಂಥೆಂಥಾ ಡಾಕ್ಟ[ರರ]ಳ ಪ್ರಸಂಸೆ ಪಡೆದಿದೆ, ಇತ್ಯಾದಿ ವಿಷ[ಯಗ]ಳು ಗೊತ್ತಿರಲಾರದು. ಗೊತ್ತಾಗಬೇ[ಕಾದ]ರೆ ಹನ್ನೆರಡು ಪುಟಗಳ ಕ್ಯಾಟ್ಲಾಗ್[ಗೆ] ಡಿ೦ ಬರೆದರೆ ಬಿಟ್ಟಿ ರವಾನೆ

ಎ. ರಾಮಸ್ವಾಮಿ ಅಯ್ಯಂ[ಗಾರ್]

ಪ್ರೊಪ್ರೈಟರ್, "ಸಂತಾನ ಸಿಂಧೂ[ರ]" ಆಫೀಸ್, ಅಂಬಳೆ, ಯಳಂದೂರು

ರಾಜ್ ಕಮಲ್ ಟಾಕೀಸ್, ಮೈಸೂರು

1946 ನೇ ಜೂನ್ 10 ನೇ ಬುಧವಾರದಿಂದ ಪ್ರಾರಂಭ

ರಾಜ್ ಕಮಲ್ ರವರ

- ಪರ್ಭಾತ್ ಪೆ ಅಪ್‌ನ ಡೇರ -

ಮುಖ್ಯ ಭೂಮಿಕೆಯಲ್ಲಿ: ವನಮಾಲ, ಉಲ್ಹಾಸ್

ದಿಗ್ದರ್ಶಕರು: ಶ್ರೀ॥ ಶಾಂತಾರಾಮ್

ಅಮರ ಪ್ರೇಮವನ್ನು ಮನರಂಜನೀಯವಾಗಿ ನಿರೂಪಿಸುವ

ಪ್ರಣಯ ಗೀತೆ

ಪ್ರಥಮ ವಾರದಲ್ಲಿ ಬುಧವಾರ ಮಾತ್ರ ನಾಲ್ಕು ಪ್ರದರ್ಶನಗಳು

ಒಂದನೇ ಆಟ ಮಧ್ಯಾಹ್ನ 3-30 ಕ್ಕೆ — ಎರಡನೇ ಆಟ ಸಂಜೆ 6-30 ಕ್ಕೆ

ಮೂರನೇ ಆಟ ರಾತ್ರಿ 9-15 ಕ್ಕೆ - ನಾಲ್ಕನೇ ಆಟ ರಾತ್ರಿ 12-30

The Mysore Silk Filatures Ltd., T. Narasipur.

NOTICE

Notice is hereby given that the Eighth Ordi[nary] General Meeting of the Share-holders of the Mysore [Silk] Filatures Ltd., will be held at Mysore, in the premis[es of] the Company in Manantody Road, on Sunday the [...] August 1946 at 3 p.m. to transact the following busines[s]

1. To receive and adopt the Directors' Report Audited Balance Sheet and Profit and Loss Ac[count] for the year ended 31st December 1945.
2. To declare a Dividend.
3. To elect Directors in place of the foll[owing] Directors, who retire, and being eligible, themselves for re-election :—

   Messrs:—1. M. S. Basavanna Devaru.
   2. R. Vyas Rao
4. To appoint an auditor or auditors for the cu[rrent] year and fix their remuneration.
5. To sanction a grant of Rs. 5000/- to The M[ysore] Silk Association for its Building Fund.

By Order of the Board
For The Mysore Silk Filature[s Ltd.]

T. Narasipur, 6-7-46.

G. Krishna Swam[y]
Managing A[gent]

N. B:— The Share Transfer Books of the Com[pany] will be closed from 21-7-1946 to 4-8-1946 (both days i[nclu]sive) The Dividend warrants will be posted on or [about] 1-9-1946 to the Share-holders whose names are regis[tered] in the Register of Members as on 20-7-1946 S[hare-]holders are requested to notify immediately any chan[ge of] address to enable Dividend warrants being posted [to] correct address

ಫೋನ್ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಬುಧವಾರ ೧೦—೭—೪೬ [ಸಂಚಿಕೆ ೨೫೬

ಬಿಕನೀರ್ ರಾಜರು ಮತ್ತು ಗಾಂಧೀಜಿ ಭೇಟಿ

“ದೇವರು ಒಬ್ಬನೇ; ಅವನನ್ನು ಸೇರುವ ಮಾರ್ಗಗಳು ಹಲವು

ಮೈಸೂರು ೧೦

ಥಿಯಸಾಫಿಕಲ್ ಸೊಸೈಟಿಯ ಅಧ್ಯಕ್ಷರಾದ ಶ್ರೀ ಜಿನರಾಜದಾಸರವರು ನಿನ್ನೆ ಒನುಮಯ್ಯನವರ ಹೈಸ್ಕೂಲಿನಲ್ಲಿ ಭಗವದ್ಗೀತೆ, ಕೊರಾನ್ ಮತ್ತು ಬೈಬಲ್ಲುಗಳ ವಿಷಯವಾಗಿ ಅವಲೋಕನವಾದ ಭಾಷಣವನ್ನು ಮಾಡಿದರು. ಹಿಂದೂಧರ್ಮ, ಇಸ್ಲಾಂ ಮತ್ತು ಕ್ರೈಸ್ತಮತ ಇವು ಮೂರೂ ಈಶ್ವರನು ಒಬ್ಬನೇ ಎಂದು ಸಾರುತ್ತಿವೆ. ಅವರ ಆಚಾರವ್ಯವಹಾರಗಳ ವಿಷಯದಲ್ಲಿ ಮಾತ್ರ ಭಿನ್ನಮಾರ್ಗಗಳಿರುತ್ತವೆ. ಈ ಭಿನ್ನತೆಗಳಿಂದ ಬಾಧಕವಿಲ್ಲ ಒಬ್ಬರ ಧರ್ಮವನ್ನು ಮತ್ತೊಬ್ಬರು ಸಂಪೂರ್ಣವಾಗಿ ಅರಿಯದೆ ಪರಕೀಯರಂತೆ ಇರುವುದೇ ಇಂದಿನ ಕಲಹಗಳಿಗೆ ಮುಖ್ಯ ಕಾರಣ ಆದುದರಿಂದ ಪ್ರಪಂಚದ ಧರ್ಮಗಳ ಸಮಾನ ತತ್ವಗಳನ್ನು ಸಕಲರೂ ಅರಿಯುವಂತೆ ಮಾಡಿದರೆ ಶಾಂತಿ ಸೌಹಾರ್ದಗಳು ದೃಢಮೂಲವಾಗುವುವು—ಎಂದು ಅವರು ತಮ್ಮ ಭಾಷಣದಲ್ಲಿ ತಿಳಿಸಿದರು

ಬೆನಿಫಿಟ್ ನಾಟಕ

ಮೈಸೂರಿನ “ಮಾಧವಕಲಾ ಮಂಡಲಿ” ಯವರು ತಾ|| ೧೪-೭-೪೬ ನೇ ಭಾನುವಾರ ಸಂಜೆ ೭ ಗಂಟೆಗೆ “ಪ್ರೇಮಲೀಲಾ” ಎಂಬ ನಾಟಕವನ್ನು ಗಾಂಧಿಸೇವಾ-ಸಂಘದ ಆಶ್ರಮದಲ್ಲಿ ನಡೆಯಲಿರುವ ಮಹಾತ್ಮಾಗಾಂಧಿಯವರ ೭೮ ನೇ ಜಯಂತ್ಯುತ್ಸವದ ಸೂತ್ರಯಜ್ಞದ ಸಹಾಯಾರ್ಥವಾಗಿ ಅಭಿನಯಿಸುವರು. ಮಹಾಜನರೆಲ್ಲರೂ ಪ್ರೋತ್ಸಾಹಿಸಬೇಕಾಗಿ ಗಾಂಧಿಸೇವಾಸಂಘದ ಕಾರ್ಯಕರ್ತರುಗಳು ಪ್ರಾರ್ಥಿಸುತ್ತಾರೆ.

ಪ್ರದೋಷ ಸಂಗೀತ

ಗಾನವಿಶಾರದ ಬಿಡಾರಂ ಕೃಷ್ಣಪ್ಪನವರು ಪ್ರಸನ್ನ ಸೀತಾರಾಮ ಮಂದಿರದಲ್ಲಿ ಪ್ರದೋಷ ಪ್ರಯುಕ್ತ ನಾಳೆ ಸಂಜೆ ೭ ಘಂಟೆಗೆ ಸಾರಿ ಸರ್ವಮಂಗಳಮ್ಮನವರ ಹಾಡುಗಾರಿಕೆಯು ಜರುಗುವುದು. ಸರ್ವರಿಗೂ ಸ್ವಾಗತವುಂಟು

ಮೈಸೂರು ಅಭಿವೃದ್ಧಿ ಯೋಜನೆಗಳು

ಆರ್ಥಿಕ ಅಭಿವೃದ್ಧಿ ಮತ್ತು ಯೋಜನೆ ಕಮೀಷನರಾದ ಶ್ರೀ ಜೆ ಜಿಪ್ಪಾಜಿಯವರು ಪ್ರಕಟಿಸಿರುವ ಮೈಸೂರು ಅಭಿವೃದ್ಧಿ ಯೋಜನೆಗಳ ೩೦ ವಿಭಾಗಗಳನ್ನೊಳಗೊಂಡ ... ಪ್ರತಿಗಳನ್ನು ಮೈಸೂರು ಸರ್ಕಾರದ ಪ್ರಕಟಣಾಧಿಕಾರಿಗಳು ಕಳುಹಿಸಿಕೊಟ್ಟಿರುವುದನ್ನು ಆದರದಿಂದ ಸ್ವೀಕರಿಸಿದ್ದೇವೆ.

... ಹೋರಿನಲ್ಲಿ ಬಿಸಲಿನ ತಾಪ

ಬಿಸಲಿನ ತಾಪ ಮತ್ತೆ ಅಧಿಕವಾಗಿ ... ಲೈನ್ ರೈಲ್ವೆ ನಿಲ್ದಾಣದಲ್ಲಿ ೩ ಮಂದಿ ನಿನ್ನೆ ದಿನ ಸತ್ತರೆಂದು ವರದಿಯಾಗಿದೆ ... ಜನಗಳನ್ನು ಎಳೆಯುತ್ತಿದ್ದ ೧೫ ಕುದುರೆಗಳು ಹಾಗೆಯೇ ಪ್ರಾಣಬಿಟ್ಟಿವೆ

ದೆಹಲಿಯಲ್ಲಿ ಮುಷ್ಕರ

... ಸಹಸ್ರ ಮಂದಿ ಕೆಲಸಗಾರರು ... ಕೂಲಿ ಮತ್ತು ಭತ್ಯವನ್ನು ಹೆಚ್ಚಿಸಿ ... ನವರಿಗೆ ಕೆಲಸಕ್ಕೆ ... ದೆಹಲಿಯ ... ಯಿಂದ ಹೊರ ... ದು ಮುಷ್ಕರ ಹೂಡಿದ್ದಾರೆ

ಲಂಡನ್ನಿನಲ್ಲಿ ಕಾಂಗ್ರೆಸ್ ಭವನದ ನಿರ್ಮಾಣ

ಒಂದು ಲಕ್ಷ ರೂ. ಬೆಲೆಬಾಳುವ ಕಾಂಗ್ರೆಸ್ ಭವನವೊಂದನ್ನು ಲಂಡನ್ನಿನಲ್ಲಿ ನಿರ್ಮಾಣಮಾಡುವ ಯೋಜನೆ ಇದೆಯೆಂದೂ, ಅದು ಕಾರ್ಯರೂಪವಾದರೆ ಅದಕ್ಕೆ ದಿವಂಗತ ಅಧ್ಯಕ್ಷ ವಿಠಲಬಾಯ್ ಪಟೇಲರ ಹೆಸರಿಡಲಾಗುವುದೆಂದೂ, ಶ್ರೀ ಪಿ ಬಿ ಸೀಲರು, ಆ ಬಗ್ಗೆ ನಿಧಿ ಶೇಖರಣೆ ಮಾಡುತ್ತಾ ತಿಳಿಸಿದ್ದಾರೆ

ಸಿಂಧ್ ಲೀಗ್ ಮಂತ್ರಿ ಮಂಡಲ ಅಲ್ಲಾಡುತ್ತಿದೆ

ಸಿಂಧ್‌ನಲ್ಲಿರುವ ಲೀಗ್ ಮಂತ್ರಿಮಂಡಲ ಮತ್ತೆ ಬಿಕ್ಕಟ್ಟಿಗೆ ಸಿಕ್ಕಿಬಿದ್ದಿದೆ. ಶಾಸನ ಸಭೆಯ ಲೀಗ್ ಪಕ್ಷದ ಇಬ್ಬರು ಸದಸ್ಯರು ರಾಜೀನಾಮೆ ಇತ್ತು ವಿರೋಧ ಪಕ್ಷಕ್ಕೆ ಸೇರಿದ್ದಾರೆ ಈಗ ಮಂತ್ರಿಮಂಡಲದ ಪರ ೨೯ ಮಂದಿಯೂ ವಿರೋಧ ಪಕ್ಷದ ಕಡೆಗೆ ೩೦ ಮಂದಿಯೂ ಇದ್ದಾರೆ. ಲೀಗ್ ಮಂತ್ರಿಮಂಡಲವು ಅತ್ಯಂತ ಹಾಸ್ಯಕರವಾಗಿದೆಯೆಂದೂ, ಲಂಚ ಮುಸುವತ್ತು, ಅದಕ್ಷತೆಗೆ ಕಾರಣವಾಗಿದೆಯೆಂದೂ, ಲೀಗ್ ಪಕ್ಷಕ್ಕೆ ರಾಜೀನಾಮೆ ಇತ್ತಿರುವ ಮಿ|| ಲಗಾರಿಯವರು ಹೇಳಿದ್ದಾರೆ ಲೀಗ್ ಮಂತ್ರಿಮಂಡಲ ಕೂಡಲೇ ರಾಜೀನಾಮೆ ಕೊಡಬೇಕೆಂದು ಆಜ್ಞೆ ಮಾಡಬೇಕು; ತಪ್ಪಿದಲ್ಲಿ ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸಿ ಚರ್ಚಿಸಲು ಅವಕಾಶ ಕೊಡಬೇಕೆಂದು ವಿರೋಧ ಪಕ್ಷದ ನಾಯಕರಾದ ಮಿ|| ಸೈಯದ್‌ರವರು ಸಿಂಧ್ ಗವರ್ನರನ್ನು ಪ್ರಾರ್ಥಿಸಿದ್ದಾರೆ

ನಂಜನಗೂಡಿನಲ್ಲಿ ಕಾಟಾ ಕುಸ್ತಿ

ಈ ವಾರದ ತಾ|| 14 ನೇ ಭಾನುವಾರ ಸಂಜೆ 6 ಘಂಟೆಗೆ ದೇವರ ... ಕಟ್ಟೆಯವರ ಒಕ್ಕಲಿಗೇರಿ ಗರಡಿ ಮನೆಯಲ್ಲಿ ವ್ಯಾಯಾಮ ಶಾಲಾ ಉಸ್ತಾದ್ ನೀಲಕಂಠರಾಯರ ಶಿಷ್ಯರಾದ ಪೈ|| ರಾಚಯ್ಯನಿಗೂ, ಕುರುಬಗೇರಿ ಗರಡಿ ಉಸ್ತಾದ್ ಸ್ವಾಮಿ ನಾಯ್ಕರ ಶಾಗಿರ್ದ ಪೈ|| ಸಿದ್ದಯ್ಯ ಖರಾಬ್ ಪ್ರೋತ್ಸಾಹದಿಂದ ... ಕುಸ್ತಿ ನಡೆಯುತ್ತದೆ

ಕಂಟ್ರಾಕ್ಟರ್ ಎಸ್ ಮಲ್ಲಪ್ಪ

ಟ್ರೈನರ್ ಡಿ.ಓ

ವೆಂಕಟಪ್ಪ ಉರುಫ್ ಗುಂಡಪ್ಪರವರು

ಸೂಚನೆ

“ಶ್ರವಣ ಏಕಾದಶೀ” ಕಾರಣ ಪ್ರಯುಕ್ತ ನಾಳೆ ದಿನ ಸಾಧ್ವೀ ಪತ್ರಿಕೆಗೆ ರಜಾ ಕೊಡಲಾಗಿದೆ.

ವ್ಯವಸ್ಥಾಪಕ.

ಗಾಂಧೀಜಿಯವರೊಡನೆ ಬಿಕನೀರ್ ರಾಜರ ಭೇಟಿ

ಬಿಕನೀರ್ ಸಂಸ್ಥಾನದ ಮಹಾರಾಜರು ನಿನ್ನೆ ದಿನ ಮುಂಬಯಿಯಲ್ಲಿ ಗಾಂಧೀಜಿಯವರನ್ನು ಭೇಟಿಮಾಡಿ ತಮ್ಮ ಸಂಸ್ಥಾನದಲ್ಲಿ ಶೀಘ್ರದಲ್ಲಿಯೇ ಕೊಡುವ ಸುಧಾರಣೆಗಳ ಬಗ್ಗೆ ಮಾತುಕತೆ ನಡೆಸಿದರೆಂದು ವರದಿಯಾಗಿದೆ

ಅಂಚೆ ಮುಷ್ಕರ ನಡೆಸಲು ತೀರ್ಮಾನ

ಸ್ವಂ.ವ.] ಬೆಂಗಳೂರು ೯

ಮೈಸೂರು ಸಂಸ್ಥಾನದ ಅಂಚೆಯವರ ಮತ್ತು ಕೆಳ ದರ್ಜೆ ನೌಕರರ ಸಂಘದ ವಿಶೇಷ ಸಭೆ ಆರ್ಯ ವಿದ್ಯಾಶಾಲಾ ಕಟ್ಟಡದಲ್ಲಿ ನಿನ್ನೆ ಸಂಜೆ ಶ್ರೀ ರಾಜಶೇಖರಯ್ಯ ಶ್ರೀ ಚಾಮುಂಡಿ ಸುಬ್ಬರಾಮ ಶೆಟ್ಟರ ಅಧ್ಯಕ್ಷತೆಯಲ್ಲಿ ಜರುಗಿ ಜುಲೈ ೧೦ ನೇ ತಾ|| ಮಧ್ಯರಾತ್ರಿಯಿಂದ ಮುಷ್ಕರವನ್ನು ನಡೆಸಬೇಕೆಂದು ತೀರ್ಮಾನ ಮಾಡಿತು. ಒಂದು ಕೇಂದ್ರ ಮುಷ್ಕರ ಸಮಿತಿ ರಚಿಸಿ ಅದಕ್ಕೆ ಶ್ರೀ ಕೆ ರಾಮಸ್ವಾಮಯ್ಯಂಗಾರ್ರನ್ನು ಅಧ್ಯಕ್ಷರನ್ನಾಗಿಯೂ, ಶ್ರೀ ಎಸ್ ವಿ. ಕುಮಾರಸ್ವಾಮಿಯವರನ್ನು ಕಾರ್ಯದರ್ಶಿಗಳನ್ನಾಗಿಯೂ ನೇಮಿಸಿತು

ಪುರಸಭಾ ಬಜೆಟ್ ಅಧಿವೇಶನ

ಬೆಂಗಳೂರು ಪುರಸಭೆಯ ೪೬-೪೭ ನೇ ಸಾಲಿನ ಬಜೆಟ್ ಅಧಿವೇಶನವು ನಿನ್ನೆ ಸಂಜೆ ಜರುಗಿತು ಸಭೆಯ ಒಟ್ಟು ಆದಾಯ ... ರೂಗಳು ಒಟ್ಟು ಖರ್ಚು ... ರೂಗಳು ... ರೂಗಳು ಉಳಿತಾಯ ಬರುವ ಅಂದಾಜು ಮಾಡಲಾಗಿದೆ ನಿನ್ನೆ ಸಭೆ ಪ್ರಾರಂಭವಾದ ಕೂಡಲೇ ನಡೆದ ... ವಿಸರ್ಜನೆಯಾಗಿದ್ದಿತು

ಸಿಲೋನಿನಲ್ಲಿ ಭಾರತೀಯರ ಮುಷ್ಕರ ನಿಲ್ಲುವುದು

ಸಿಲೋನಿನಲ್ಲಿ ಟೀ ತೋಟಗಳಲ್ಲಿ ... ನಡೆಸುತ್ತಿರುವ ಭಾರತೀಯ ... ಮುಷ್ಕರವನ್ನು ... ಅಖಿಲ ಭಾರತ ಕಾಂಗ್ರೆಸ್ ಸಮಿತಿ ... ಇದರ ... ಗಿ ... ವಾಗಿ ...

ಆಹಾರ ಕಾರ್ಯ ಹೋಗುವುದೇ

ಅಂಚೆ ನೌಕರರು ನಾಳೆಯಿಂದ ಮುಷ್ಕರ ಹೂಡುವುದಾಗಿ ನೋಟೀಸ್ ಇತ್ತಿರುವ ಬಗ್ಗೆ ಸಲ್ಲಿಸಿರುವ ಬೇಡಿಕೆಗಳನ್ನು ಪೂರೈಸಬೇಕಾದರೆ ಹತ್ತೊಂಬತ್ತು ಕೋಟಿ ರೂಗಳು ಬೇಕಾಗುವುವೆಂದು ಅಧಿಕಾರಿಗಳು ಅಂದಾಜು ಮಾಡಿದ್ದಾರೆ ಈಗಾಗಲೇ ಭತ್ಯ ನಷ್ಟಕ್ಕಾಗಿ ಕೆಲಸಗಾರರಿಗೆ ೫ ಕೋಟಿ ರೂಗಳನ್ನು ಕೊಡಲಾಗಿದೆ ಇದಲ್ಲದೆ ೧೦ ೭೪ ಕೋಟಿ ರೂಗಳು ಬೇಕಾಗುವುದು ಇದನ್ನು ಸಂಪಾದಿಸಬೇಕಾದರೆ ಅಂಚೆ ಮತ್ತು ತಂತೀ ದರಗಳನ್ನು ಹೆಚ್ಚಿಸಬೇಕಾಗುವುದೆಂದೂ ಹೇಳಲಾಗಿದೆ ಆಹಾರ ಕಾರ್ಯವನ್ನು ವಜಾ ಮಾಡಿ ಕಾರ್ಡಿನ ಬೆಲೆಯನ್ನು ೩ ಕಾಸಿಗೆ ಹೆಚ್ಚಿಸಬೇಕಾಗುವುದೆಂದೂ ಇದರಿಂದ ೩ ೫ ಕೋಟಿ ರೂಗಳು ಬರುವವೆಂದೂ ಅಧಿಕಾರಿಗಳು ಅಂದಾಜು ಹಾಕಿರುವುದಾಗಿ ಗೊತ್ತಾಗಿದೆ

ಪ್ಯಾಲಸ್ಟೈನಿಗೆ ಹೊಸ ಸ್ಥಾನ

ಸಂಯುಕ್ತ ರಾಷ್ಟ್ರಗಳ ಒಪ್ಪಂದದ ಆಧಾರದ ಮೇಲೆ ಪ್ಯಾಲಸ್ಟೈನಿಗೆ ಹೊಸ ಸ್ಥಾನವನ್ನು ಒದಗಿಸಿ ಕೊಡಲು ಕೂಡಲೇ ಸಂಧಾನಗಳನ್ನು ಆರಂಭಿಸಬೇಕೆಂದು ಅರಬ್ ರಾಷ್ಟ್ರಗಳು ಒಂದು ಮನವಿಯನ್ನು ಬ್ರಿಟನ್ನಿಗೆ ಸಲ್ಲಿಸಿವೆ.

● ಸಂಯುಕ್ತ ಸಂಸ್ಥಾನದಲ್ಲಿ ಜಮೀನುದಾರಿ ಪದ್ಧತಿಯನ್ನು ವಜಾ ಮಾಡಿ ಅದಕ್ಕೆ ಪ್ರತಿಯಾಗಿ ಕಂದಾಯ ವಸೂಲಿ ಪದ್ಧತಿಯನ್ನು ಗೊತ್ತುಮಾಡಲು ಸಮಿತಿಯೊಂದನ್ನು ಅಲ್ಲಿನ ಸರ್ಕಾರದವರು ರಚಿಸಲಿದ್ದಾರೆ

ಮದ್ರಾಸಿನಲ್ಲಿ ಅಂಚೆ ಮುಷ್ಕರವಿಲ್ಲ

ನಾಳೆಯಿಂದ ಅಂಚೆ ನೌಕರರ ಮುಷ್ಕರ ನಡೆಯಬೇಕಾಗಿದ್ದುದನ್ನು ವಜಾ ಮಾಡಿ ಮುಷ್ಕರದ ನೋಟೀಸನ್ನು ಮದ್ರಾಸ್ ಪ್ರಾಂತ್ಯದ ಕೆಲಸಗಾರರ ಸಂಘದ ಅಧ್ಯಕ್ಷರು ವಾಪಸ್ ತೆಗೆದುಕೊಂಡಿದ್ದಾರೆಂದು ಗೊತ್ತಾಗಿದೆ. ಆದ್ದರಿಂದ ಮದ್ರಾಸ್ ಪ್ರಾಂತ್ಯದಲ್ಲಿ ಮುಷ್ಕರ ನಡೆಯುವುದಿಲ್ಲ ಮುಷ್ಕರ ನಡೆಯಬಹುದೆಂಬ ಊಹೆಯಿಂದ ಅಧಿಕಾರಿಗಳು ಹಲವು ಮುನ್ನೆಚ್ಚರಿಕೆ ಕ್ರಮಗಳನ್ನು ಕೈಗೊಂಡಿದ್ದರು. ಅವರಂತೆ ನಾಳೆಯಿಂದ ಅಂಚೆಗಳು ಮನೆ ಬಾಗಿಲಿಗೆ ಬರುತ್ತಿರಲಿಲ್ಲ. ಪೋಸ್ಟ್ ಆಫೀಸುಗಳಲ್ಲೇ ಕೊಡಲು ಏರ್ಪಾಡಾಗಿದ್ದಿತು

ಶಾಂತಿ ಸಮ್ಮೇಳನದ ಬಗ್ಗೆ ಒಪ್ಪಂದ

ವಿಶ್ವ ಶಾಂತಿ ಸಮ್ಮೇಳನಕ್ಕಾಗಿ ೨೧ ರಾಷ್ಟ್ರಗಳಿಗೆ ಆಹ್ವಾನವನ್ನು ಪ್ಯಾರಿಸ್ ನಗರದ ... ದಲ್ಲಿ ಕಳುಹಿಸಬೇಕೆಂದು ಚತುರ್ರಾಷ್ಟ್ರಗಳು ಒಪ್ಪಂದಕ್ಕೆ ಬಂದಿವೆ. ... ಶಾಂತಿ ಸಮ್ಮೇಳನದ ... ಪತ್ರಿಕೆ ... ನಿರ್ಧಾರಕ್ಕೆ ಬಂದದ್ದರಿಂದ ಬಿಕ್ಕಟ್ಟು ಪರಿಹಾರವಾಯಿತು.

ಅಧಿಕಾರಿಗಳ ಭೇಟಿ

ಸ್ವಂ ವ.] ... ೭

...

ಸಾಧ್ವಿ

ಜುಲೈ ೧೦-೭-೪೬ ಬುಧವಾರ

ಕಾಂಗ್ರೆಸ್ಸಿನ ಸೂತ್ರಧಾರಿಗಳು

ಪಂಡಿತ ಜವಹರಲಾಲ ನೆಹರೂರವರು ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿಯ ತಮ್ಮ ಸಹೋದ್ಯೋಗಿಗಳನ್ನು ಚುನಾಯಿಸಿ ಹೊರಡಿಸಿರುವ ಪಟ್ಟಿಯನ್ನು ಬೇರೆ ಕೊಟ್ಟಿರುತ್ತೇವೆ. ಅದರಲ್ಲಿ ಹಲವರು ಹೊಸಬರಿದ್ದಾರೆ. ಹಳಬರು ಹಳಬರೂ ಇದ್ದಾರೆ. ಅವರೆ ಎಲ್ಲರೂ ದೇಶಸೇವಾ ವಿಷಯದಲ್ಲಿ ಸಕಲ ತ್ಯಾಗಗಳನ್ನೂ ಮಾಡಿ ಮಹಾಜನರ ಮನ್ನಣೆಗೆ ಪಾತ್ರರಾದವರೇ ಆದವರಲ್ಲಿ ಸಂದೇಹವಿಲ್ಲ.

ಕಳೆದ ಆರು ವರ್ಷಗಳಿಂದ ಹಿಂದಿನ ಕಾರ್ಯಕಾರಿ ಸಮಿತಿಯವರು ದೇಶದ ನಾಯಕತ್ವವನ್ನು ವಹಿಸಿ ಸಲ್ಲಿಸಿರುವ ಸೇವೆಯು ಅಮೂಲ್ಯವಾದದು. ಅದಕ್ಕಾಗಿ ಅವರು ಸಕಲರ ಕೃತಜ್ಞತೆಗೂ ಪಾತ್ರರು. ಅವರ ಮೇಧಾಶಕ್ತಿ, ದೂರದರ್ಶಿತ್ವ ಮತ್ತು ರಾಜನೀತಿ ನೈಪುಣ್ಯದಿಂದ ದೇಶವು ಇಂದಿನ ಸ್ಥಿತಿಗೆ ಬಂದಿರುತ್ತದೆ. ಪ್ರಪಂಚದ ಅತ್ಯಂತ ಹಿರಿಯದ ಸಾಮ್ರಾಜ್ಯಶಕ್ತಿ ಬ್ರಿಟನ್ ತಾನೇ, "ಸ್ವಾತಂತ್ರ್ಯವನ್ನು ಕೊಡಿ; ಇಲ್ಲವೇ ಬಿಟ್ಟು ಹೊರಡಿ" ಎಂದು ಹೇಳಿ ಬಿಟ್ಟವರ ಪ್ರಭಾವಕ್ಕೆ ಸಿಲ್ಲಿ ಒಡೆದು ಪರಿಣಾಮವಾಗಿ ಇಂದು ಬ್ರಿಟಿಷ್ ಸಾಮ್ರಾಜ್ಯವು ಭಾರತದೊಡನೆ ಒಪ್ಪಂದಕ್ಕೆ ಬರಲು ಸಿದ್ಧವಾಗಿರುತ್ತದೆ.

ಸ್ವಾತಂತ್ರ್ಯ ಚಳವಳಿಯಲ್ಲಿ ಅನೇಕ ಮಹಾ ಯೋಧರಿದ್ದರೆ. ಶಾಂತಿಯಿಂದಲೂ, ಸೌಹಾರ್ದದಿಂದಲೂ, ರಾಜಕೀಯ ಆಡಳಿತವನ್ನು ಸಾಧಿಸಬೇಕೆಂಬುದು ಒಂದಕಡೆ ಕ್ರಾಂತಿಯಿಂದಲೂ, ಬಲಾತ್ಕಾರದಿಂದಲೂ ವಿದೇಶ ಪ್ರಭುತ್ವವನ್ನು ಕಿತ್ತೊಗೆದು ಸಾಧಿಸಬೇಕೆಂಬುದು ಇನ್ನೊಂದು ವಾದವಾಗಿ, ಈಗಿನ ಸನ್ನಿವೇಶಕ್ಕೆ ಪ್ರಸ್ತುತವಾಗಿ ಬೇಕಾದ ಸ್ವರೂಪವನ್ನು ಸ್ಥಾಪಿಸಿ ಆಡಳಿತವನ್ನು ನಡೆಸಬೇಕೆಂದು [illegible] ಕಳೆದ ಎರಡು ವರ್ಷಗಳಲ್ಲಿ ಇವೆಲ್ಲ [illegible] ಅಖಿಲ ಭಾರತ ಕಾಂಗ್ರೆಸ್ [illegible] ಹೊಸ ಹುರುಪು [illegible] "ಇನ್ನು ಮುಂದೆ ನಿಮ್ಮ ಕೈಯಲ್ಲಿ [illegible]"

[illegible]

ಅಖಿಲ ಭಾರತ ಕಾಂಗ್ರೆಸ್ ಕಾರ್ಯಕಾರಿ ಸಮಿತಿ

ಶ್ರೀ ಜವಹರಲಾಲ ಮೌಲಾನಾ ಅಜಾದ್, ಬಾಬು ರಾಜೇಂದ್ರ ಪ್ರಸಾದ್, ಖಾನ್ ಅಬ್ದುಲ್ ಗಫಾರ್ ಖಾನ್, ಪಂಡಿತ್ ಪಂತ್, ಸಿ. ರಾಜಗೋಪಾಲಾಚಾರಿ, ರಫಿ ಅಹಮದ್ ಕಿದ್ವಾಯಿ, ಆಚಾರ್ಯ ಕೃಪಲಾನಿ, ಸರ್ದಾರ್ ಪಟೇಲ್, ಶರತ್ ಚಂದ್ರಬೋಸ್, ಶಂಕರರಾವ್ ದೇವ್, ಸರ್ದಾರ್ ಪ್ರತಾಪ್ ಸಿಂಗ್, ಪಿ. ಸೀತಾರಾಮಯ್ಯ, ಡಾ॥ ಪಿ. ಸಿ. ಘೋಷ್ ಮತ್ತು ಶ್ರೀಮತಿ ಕಮಲಾದೇವಿ-ಇವರುಗಳನ್ನು ಅಖಿಲ ಭಾರತ ಕಾಂಗ್ರೆಸ್ ವರ್ಕಿಂಗ್ ಕಮಿಟಿಗೆ ಸದಸ್ಯರುಗಳನ್ನಾಗಿ ಪಂ॥ ಜವಹರಲಾಲರು ನೇಮಿಸಿಕೊಂಡಿದ್ದಾರೆ. ಡಾ॥ ಕೇಸ್ಕರ್ ರವರು, ಪಿ. ಸೀತಾರಾಮಯ್ಯ ಜನರಲ್ ಸೆಕ್ರೆಟರಿಗಳು.

ಐರೋಪ್ಯರ ಸಹಾನುಭೂತಿ

ದ॥ ಆಫ್ರಿಕಾದ ಹಲವು ಐರೋಪ್ಯರು ಅಲ್ಲಿರುವ ಮಾನವ ಹಕ್ಕುಬಾಧ್ಯತೆಗಳ ಸಂಘದವರು ಅಲ್ಲಿನ ಭಾರತೀಯರ ಕಡೆ ಸಾರ ನಡೆಸಿದ್ದಾರೆ. ಸತ್ಯಾಗ್ರಹಿಗಳ ವಿಚಾರದಲ್ಲಿ ಜರುಗಿದ ಹಲವು ಘಟನೆಗಳು ನ್ಯಾಯಾಂಗ ಇಲಾಖೆಗೆ ನಿಜ ಬಳಕೆಯಾಗಿಲ್ಲವೆಂದೂ, ಸರ್ಕಾರದ ಬಗ್ಗೆ ತಮಗೆ ನಡೆದುದೇನೆಂದೂ ಒತ್ತಾಯ ಪಡಿಸಿದ್ದಾರೆ. ಒಂದು ಕಣ್ಣಿಗೆ ಬೆಣ್ಣೆ ಮತ್ತೊಂದು ಕಣ್ಣಿಗೆ ಸುಣ್ಣ ಹಚ್ಚುವ ಕಾನೂನನ್ನು ಜಾರಿಗೆ ತಂದಿರುವುದರಿಂದ ಈ ಅಶಾಂತಿ ಹರಡಿದೆ; ಇದನ್ನು ಮುಂದುವರಿಸಿದರೆ ಅದರ ಪರಿಣಾಮ ಕಠಿಣವಾಗಿ [illegible] ಈ ಪತ್ರಕ್ಕೆ ಸಹಿ ಹಾಕಿದ ಐರೋಪ್ಯರು ತಿಳಿಸಿದ್ದಾರೆ.

ಮುಸಲ್ಮಾನರನ್ನೂ, ಹಿಂದೂಗಳನ್ನೂ [illegible] ಕಾಂಗ್ರೆಸ್ಸಿನಲ್ಲಿ ಇಂದು ಪ್ರತಿನಿಧಿಸುತ್ತಿರುವ ಸಕಲ ಭಾವನಾತರಂಗಗಳಿಗೂ ಇವರಿಂದ ಸಂಪೂರ್ಣ ನ್ಯಾಯ ದೊರೆಯಬೇಕಾಗಿದೆ. ಈ ಮಹನೀಯರುಗಳು ಬರುವ ದಿನಗಳಲ್ಲಿ ದೇಶದ ನಾಯಕತ್ವವನ್ನು ಯುಕ್ತರೀತಿಯಾಗಿ ನಿರ್ವಹಿಸಿ ದೇಶ ಮತ್ತು ಜನರ ಪ್ರಾಂತಗಳ [illegible] ಕೆತ್ತಬೇಕೆಂದು ಹಾರೈಸೋಣ.

ಬಂಗಾಳದಲ್ಲಿ ಕ್ಷಾಮ!

ಬಂಗಾಳದಲ್ಲಿ ಈಗಾಗಲೇ ಕ್ಷಾಮವು ಆರಂಭವಾಗಿದೆಯೆಂದೂ, ಬಂಗಾಳದ ಕೆಲವೆಡೆ ಒಂದು ಮಣ ಅಕ್ಕಿಗೆ ೩೦ ರಿಂದ ೫೫ ರೂ. ಗಳ ವರೆಗೆ ಬೆಲೆ ಏರಿದೆಯೆಂದೂ ಕಾಂಗ್ರೆಸ್ ವರ್ಕಿಂಗ್ ಸದಸ್ಯರಾದ ಡಾ॥ ಪಿ. ಸಿ. ಘೋಷ್‌ರವರು ನಾಗಪುರದಲ್ಲಿ ತಿಳಿಸಿದರು.

ಗೃಹಕೃತ್ಯದ ನೋಟೀಸು

ತಮ್ಮ ೨೮-೬-೪೬ ನೇ ಸಂಚಿಕೆಯ ಸಾಧ್ವಿ ಪತ್ರಿಕೆಯಲ್ಲಿ ಬೆಂಗಳೂರು ಸಿಟಿ ಚಾಮರಾಜಪೇಟೆ ೩ ನೇ ರೋಡು ೯೪ ನೇ ನಂಬರು ಮನೆಯಲ್ಲಿರುವ ಕಿಟ್ಟಮ್ಮ ಉರುಫ್ ಸಣ್ಣಮ್ಮ ಎಂಬುವಳು ಒಂದು ಗೃಹಕೃತ್ಯದ ನೋಟೀಸನ್ನು ಪ್ರಚುರ ಪಡಿಸಿರುತ್ತಾಳೆ. ಈ ನೋಟೀಸಿನಲ್ಲಿ ಕಂಡ ಅಂಶಗಳೆಲ್ಲಾ ಸುಳ್ಳು ಸುಳ್ಳು. ತಾನು ಹುಳುಕನಮುಂಡಿ ಗ್ರಾಮದ ನಕ್ಕೆ ಲಿಂಗೇಗೌಡನ ಹೆಣ್ಣು ಮಗಳಾಗಿರುತ್ತಾಳೆಂದೂ, ಇವಳ ತಂದೆಯು ಪಿಟೀಲು ಗ್ರಾಮದ ೧ ಎಕರೆ ೧೯ ಗುಂಟೆ ವಿಸ್ತೀರ್ಣವನ್ನು ಸರ್ವೆ ೧೧೪ ನೇ ನಂಬರು ಜಮೀನನ್ನು ತನಗೆ ಅರಿಶಿನ ಕುಂಕುಮಕ್ಕಾಗಿ ದಾನವಾಗಿ ಕೊಟ್ಟಿರುತ್ತಾನೆಂತಲೂ, ಅದನ್ನು ನಾನು ಮತ್ತು ನನ್ನ ತಂದೆಯು ಅನುಭೋಗಿಸುತ್ತಾ ವ್ಯವಸಾಯ ಮಾಡಿಕೊಂಡು ಅದರಿಂದ ಫಸಲು ಕೊಟ್ಟುಕೊಂಡು ಬರುತ್ತಾ ಇದ್ದೇನೆಂದು ಪತ್ರಿಕೆ ಸುಳ್ಳು ಸಂಗತಿಗಳನ್ನು ಪ್ರಚುರ ಮಾಡಿರುತ್ತಾಳೆ. ಈ ಜಮೀನಿಗೂ ಅವಳಿಗೂ ಯಾವ ಸಂಬಂಧವೂ ಇರುವುದಿಲ್ಲ. ಈ ಜಮೀನು ನನ್ನ ಹಕ್ಕು ಬಾಧ್ಯತೆಗೆ ಸೇರಿದ್ದು ನನ್ನ ಸ್ವಾಧೀನಾನುಭವದಲ್ಲಿರುತ್ತದೆಂದೂ ಇದಕ್ಕೆ ನಾನು ವಿನಹ ಮತ್ತಾರೂ ಮಾಲೀಕರಲ್ಲವೆಂದೂ ಈ ಮೂಲಕ ಸಕಲ ಸ್ತ್ರೀ ಜನರಿಗೂ ತಿಳಿಯಪಡಿಸುತ್ತೇನೆ.

ಟಿ ನರಸೀಪುರದ ತಾಲ್ಲೂಕು ಸತ್ತಮಾಸ್ತಿ ಹೋಬಳಿ ರಾಮ್ಪ್ಲೆ ಹುಳುಕನಮುಂಡಿಯಲ್ಲಿರುವ ಗುರುಬಸವೇಗೌಡನ ಲಿಂಗೇಗೌಡನ ಮಗ

ಚಿಕ್ಕಮಾದೇಗೌಡನ ರುಜು

Edited, printed and published by A. P. Narasaiah at the Sadhvi Press, D. Subbiah Road, Mysore.

ಸೂತ್ರಯಜ್ಞ

ಗಾಂಧಿ ಸೇವಾಸಂಘದ ಆಶ್ರಯದಲ್ಲಿ ನಡೆಯಲಿರುವ ಸೂತ್ರಯಜ್ಞವು ಜುಲೈ ೧೭ ರಿಂದ ಅಕ್ಟೋಬರ್ ೨ ರ ವರೆಗೆ ಒಟ್ಟು ೭೮ ದಿನಗಳು [ಗಾಂಧೀಜಿಗೆ ೭೭ ವರ್ಷ ತುಂಬುವುದರಿಂದ] ನಡೆಯುತ್ತವೆ. ಸೂತ್ರಯಜ್ಞದ ಪ್ರತಿಯೊಬ್ಬರೂ ದಿನವೂ ೧೨೦೮ ಸುತ್ತು ದಾರ ತೆಗೆಯಬೇಕಾಗುತ್ತದೆ. ಕಳೆದ ವರ್ಷ ಭಾಗವಹಿಸಿದವರು ಇತ್ತ ಸಂದೇಶದಂತೆ [illegible] ಸಾರಿ ಅದನ್ನು ಮುಟ್ಟಿಗೆ ತಮ್ಮ ಹೆಸರನ್ನು ನೋಂದಾಯಿಸಿ ಶಾಸನ ಮಾಡಿಕೊಳ್ಳಬೇಕೆಂದು ಕೋರಲಾಗಿದೆ. ಅದಕ್ಕೆ ಬೇಕಾಗುವ ಸಾಮಗ್ರಿಗಳನ್ನು ಸಂಘದಿಂದ ಒದಗಿಸಲಾಗುತ್ತದೆ. ಸಂಘದಿಂದ ಹತ್ತಿಯನ್ನು ಉಚಿತವಾಗಿ ಹಂಚಲಾಗುವುದು. ದೇಶಪ್ರೇಮಿಗಳೆಲ್ಲರೂ ಈ ಒಳ್ಳೆಯ ಕೆಲಸದಲ್ಲಿ ಭಾಗವಹಿಸಬೇಕಾಗಿ ಕಾರ್ಯದರ್ಶಿಗಳು ಪ್ರಾರ್ಥಿಸಿದ್ದಾರೆ.

ಮೈಸೂರು ರೇಷ್ಮೆಯ ಸಿಲ್ಕ್ ಫಿಲೇಚರ್ ಎಕ್ಸ್‌ಪ್ಯಾನ್ಷನ್ ಸ್ಕೀಂ ಸ್ಪೆಷಲ್ ಆಫೀಸರಿಂದ:—

ಪ್ರಕಟಣೆ

ಮೈಸೂರು ಸೀಮೆಯಲ್ಲಿ ರೇಷ್ಮೆ ಗೂಡು ಬೆಳೆಯತಕ್ಕವರಿಗೂ ಮತ್ತು ರೇಷ್ಮೆ ನೂಲು ಬಿಚ್ಚುವವರಿಗೂ ಈ ಮೂಲಕ ತಿಳಿಯಪಡಿಸುವುದೇನೆಂದರೆ:—

1946 ನೇ ಇಸ್ವಿಯಲ್ಲಿ ಸಾರ್ವಜನಿಕರಿಗೆ ಮೈಸೂರು ಸಂಸ್ಥಾನ ಕಚ್ಚಾ ರೇಷ್ಮೆ ಹತೋಟಿ ಆಜ್ಞೆಗಳ ಪ್ರಕಾರ ಸರ್ಕಾರಿ ರೇಷ್ಮೆ ಗೂಡು ಕೇಂದ್ರಗಳ ಮೂಲಕ ಮಾರಾಟ ಮಾಡಿದ (ಅಂದರೆ 1-10-44 ನೇ ತಾ॥ ನಿಂದ 8-8-45 ನೇ ತಾ॥ ವರೆಗೆ) ರೇಷ್ಮೆ ಗೂಡಿನ ಬಾಬತು ಬರಬೇಕಾದ ಬೋನಸ್ಸು ಅನೇಕ ರೈತರಿಗೆ ಸರಿಯಾದ ವಿಳಾಸ ಅಥವಾ ಆಧಾರಗಳು ಇಲ್ಲದ ಸಬೂಬು ಬಾಕಿಯಾಗಿ ನಿಂತಿರುತ್ತೆ. ಬದಲ್ಲಾಗಿ ಕ್ಯಾಂಪ್ ರೇಷ್ಮೆ ಡಿಪೋಗಳಿಗೆ ಕಚ್ಚಾ ರೇಷ್ಮೆ ಸರಬರಾಯಿ ಮಾಡಿದ ಬಾಬ್ತು ಬೋನಸ್ ಚೆಕ್ಕುಗಳು ಪಡೆಯದೆ ಬಾಕಿಯಾಗಿ ನಿಂತಿರುತ್ತೆ.

ಆದ ಕಾರಣ ರೇಷ್ಮೆ ಗೂಡು ಬೆಳೆಯತಕ್ಕವರು (Rearers) ಮತ್ತು ರೇಷ್ಮೆ ನೂಲು ಬಿಚ್ಚುವವರು (Reelers) ತಮಗೆ ಬರಬೇಕಾದ ಬೋನಸ್ಸಿನ ಹಣ ಬಾಬ್ತಿನಲ್ಲಿ ವಿವರವುಳ್ಳ ಅರ್ಜಿಯೊಂದಿಗೆ ಬರುವ ಆಗಸ್ಟು 15-7-46 ನೇ ತಾರೀಖಿನೊಳಗಾಗಿ ಈ ಆಫೀಸಿಗೆ ಕಳುಹಿಸಬೇಕೆಂದು ಈ ಮೂಲಕ ಕೋರಲಾಗಿದೆ.

(ರುಜು)

ಕೆ. ಷಣ್ಮುಖೀಶ್ವರ

ಸ್ಪೆಷಲ್ ಆಫೀಸರು

12-6-46

[illegible]

ರಾಜಾ ಕಮಲ್ ಟಾಕೀಸ್, ಮೈಸೂರು

1946 ನೇ ಜುಲೈ 10 ನೇ ಬುಧವಾರದಿಂದ ಪ್ರಾರಂಭ

ರಾಜ್ ಕಮಲ್ ರವರ

- ಪಟಿಂಗ್ ಶೆ ಪಿ ಜಾಪಾನ ಡೇರ -

ಮು. ಪ್ರ. ರಂಗನಾಯಕಿ ... ನಿರ್ದೇಶಕರು:

ಸಿತಾರಾ, ಉಲ್ಹಾಸ್ ... ಶ್ರೀ॥ ಶಾಂತಾರಾಮ್

[illegible]

[illegible]

ಮೊದಲನೇ ಆಟ ಸಂಜೆ 6-30 ಕ್ಕೆ

ಎರಡನೇ ಆಟ ರಾತ್ರಿ 10-30

[illegible]

ಫೋನ್ ನಂ. ೩೯೩ ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೪] ಶುಕ್ರವಾರ ೧೨—೭—೪೬ [ಸಂಚಿಕೆ ೨೫೭

ಬೊಂಬಾಯಿನ ಅಂಚೆ ಕೆಲಸಕ್ಕೆ ಮದ್ರಾಸಿನವರು

ರಾಜಕೀಯ ವಿಚಾರಗಳ ಸಮಿತಿ ರದ್ದು

ಸ್ವಂ ಸು] ಬೆಂಗಳೂರು ೧೧

೧೯೩೮ರಲ್ಲಿ ರಚಿತವಾಗಿದ್ದ ರಾಜಕೀಯ ವಿಚಾರಗಳ ಸಮಿತಿಯು ಈಚೆಗೆ ಬಹಳ ದಿನಗಳಿಂದ ಸೇರದೇ ಇದ್ದ ಪ್ರಯುಕ್ತ ಈಗ ರದ್ದು ಮಾಡಿರುವುದಾಗಿ ಸರ್ಕಾರದ ಆಜ್ಞೆಯಾಗಿದೆ.

ವರ್ಧಂತಿ ಅತಿಥಿ

ದಿ॥ ಭಾರತ ದೇಶೀಯ ಸಂಸ್ಥಾನಗಳ ಸೈನ್ಯಗಳ ಮುಖ್ಯಾಧಿಕಾರಿಗಳಾದ ಮೇಜರ್ ಜನರಲ್ ಲಾರೆನ್ಸ್‌ರವರನ್ನು ವರ್ಧಂತಿ ಉತ್ಸವದ ಅತಿಥಿಗಳನ್ನಾಗಿ ಆಹ್ವಾನಿಸಲಾಗಿದೆ.

ಜಾನುವಾರುಗಳಿಗೆ ಪರಿಹಾರ ಕೇಂದ್ರ

ಬಡರೈತರು ಸಾಕಲಾರದೆ ಕೈಬಿಟ್ಟ ಜಾನುವಾರುಗಳನ್ನು ಸಾಕಲು ಪರಿಹಾರ ಕೇಂದ್ರಗಳನ್ನು ಸ್ಥಾಪಿಸಲು ಸರ್ಕಾರದವರು ಯೋಚಿಸಿದ್ದಾರೆ.

ವಿದ್ಯಾರ್ಥಿನಿಲಯ

ಸ್ವಂ ಸು] ನಂಜನಗೂಡು ೧೧

ಶ್ರೀ ವಿಶ್ವಕರ್ಮ ವೈದಿಕ ಮಹಾಜನರ ಸಭೆ ಶ್ರೀ ಕೆ. ಪಿ. ಶಿವನ್ನಾಚಾರ್ಯರ ಅಧ್ಯಕ್ಷತೆಯಲ್ಲಿ ಜರುಗಿ ಈ ಊರಿನಲ್ಲಿ ವಿಶ್ವಕರ್ಮ ವಿದ್ಯಾರ್ಥಿನಿಲಯವನ್ನು ಸ್ಥಾಪಿಸಬೇಕೆಂದು ತೀರ್ಮಾನವಾಯಿತು. ಚಾಮರಾಜನಗರದ ಶ್ರೀ ಕೆ. ಬಸವಣ್ಣಾಚಾರ್ಯರು ನಿಲಯಕ್ಕೆ ಭವನವನ್ನು ಕಟ್ಟಿಸಿಕೊಡುವುದಾಗಿ ಒಪ್ಪಿದ್ದಾರೆ. ಶ್ರೀಗಳಾದ ನಲ್ಲಿತಾಳಪುರದ ಪುಟ್ಟಸ್ವಾಮಾಚಾರ್ಯರೂ, ಮರಿಯಂಗಡಿ ಸೆಟ್ಟಿ ಎಂ. ವೀರಭದ್ರಾಚಾರರೂ, ಎಸ್. ಆರ್. ಸಂಜೀವಾಚಾರರೂ ತಲಾ ಒಂದು ಎಕರೆ ಗದ್ದೆಯನ್ನು ಕೊಡುವುದಾಗಿಯೂ; ಕಂಬಾರಕೊಪ್ಪಲಿನ ಸುಬ್ಬಣ್ಣಾಚಾರ್ ಮತ್ತು ಚುಂಚನಹಳ್ಳಿ ಶ್ರೀ ಚಿಕ್ಕನಂಜಪ್ಪಾಚಾರ್ಯರು ತಲಾ ಎಕರೆ ಗದ್ದೆಗಳನ್ನು ಸಹಾ ಕೊಡುವುದಾಗಿಯೂ, ವಾಗ್ದಾನಮಾಡಿದ್ದಾರೆ.

ಶ್ರೀ ಎಸ್. ಎಂ. ಮೂರ್ತಿಯವರು ಆಗಸ್ಟ್ ೧ನೇ ತಾ॥ನಿಂದ ಶ್ರೀ ಪರ್ವತ ಯಾತ್ರೆಯ ಹರಿಕಥೆಯನ್ನು ಪೂರ್ಣಯ್ಯನವರ ಛತ್ರದಲ್ಲಿ ನಡೆಸುತ್ತಿದ್ದಾರೆ.

ಗೋಹತ್ಯೆ

ಸ್ವಂ ಸು.] ಬೆಳ್ಳೂರು ೧೦

ಈ ಊರಿನಲ್ಲಿ ಒಂದು ವಾರಕ್ಕೆ ೫-೬ಕ್ಕೆ ಕಡಿಮೆ ಇಲ್ಲದಂತೆ ಬಹಿರಂಗವಾಗಿ ಗೋಹತ್ಯೆ ನಡೆಯುತ್ತಿದೆ. ಅಧಿಕಾರಿಗಳು ಕೂಡಲೇ ಈ ಕಡೆ ಗಮನಕೊಟ್ಟು ಈ ಕೃತ್ಯ ತಪ್ಪಿಸಬೇಕಾಗಿದೆ.

ಇನ್ನು ೧೦ ವರ್ಷದೊಳಗೇ ಇನ್ನೊಂದು ಯುದ್ಧ

ಅಣುಬಾಂಬಿನ ಭೀತಿಯಿಂದ ವಿಶ್ವದ ಸಂರಕ್ಷಣೆ ಯಾಗಿ ಅಹಿಂಸೆ ಜಾರಿಗೆ ತರಬೇಕಾಗಬಹುದೆಂದು ಲಂಡನ್ನಿನ "...... ಟೈಂಸ್" ಪತ್ರಿಕೆಯು ಭಾರತದ ನಾಯಕರು ಗಾಂಧೀಜಿಗೆ ತಿಳಿಸಿದಾಗ ಅಮೆರಿಕದ ಅಧಿಕಾರಿಗಳು ಆ ಬಾಂಬಿಗಿಂತ ವಿನಾಶಕಾರಿಯಾದ ಇನ್ನೊಂದು ಅಸ್ತ್ರ ಕಂಡುಹಿಡಿದು, ಹೆಚ್ಚು ಅನಾಹುತ ಮಾಡುವರು; ಈಗಿನ ಪ್ರಪಂಚದ ಪರಿಸ್ಥಿತಿ ಬೇರೇ ಕಂಡುಬರುತ್ತಿಲ್ಲ. ಇನ್ನು ೧೦ ವರ್ಷದೊಳಗಾಗಿಯೇ ಮತ್ತೊಂದು ಯುದ್ಧ ಪ್ರಾರಂಭವಾಗಬಹುದು" ಎಂದು ...... ಅಭಿಪ್ರಾಯಪಟ್ಟಿರೆಂದು ಆ ...... ವರದಿ ಮಾಡಿದ್ದಾರೆ.

ಭಾರತ ವಾಚನ

ಮೈಸೂರು ೧೨

ನಾಳೆ ರಾತ್ರಿ ೯ ಘಂಟೆಗೆ ಡಿ. ಸುಬ್ಬಯ್ಯ ರಸ್ತೆಯಲ್ಲಿರುವ "ಸಾಧ್ವಿ" ಕಛೇರಿ ಮಹಡಿ ಮೇಲೆ ಹುಣ್ಣಿಮೆ ಪ್ರಯುಕ್ತ ಶ್ರೀ ಕೃಷ್ಣಗಿರಿ ಕೃಷ್ಣರಾಯರು ಮತ್ತು ಶ್ರೀ ವಿ. ಶಿ. ಚಂದ್ರಾರವರಿಂದ ಭಾರತವಾಚನ ನಡೆಯುವುದು. ಸರ್ವರಿಗೂ ಸ್ವಾಗತವುಂಟು.

ವಿವಾಹ ಮಹೋತ್ಸವ

ರಾಜಧಾನಿಯ ವಕೀಲರಾದ ಶ್ರೀ ಸೋಸಲೆ ಶ್ರೀ ರಂಗಾಚಾರ್ಯರು ತಮ್ಮ ಮಗಳು ಸೌ॥ ಲೀಲಾವತಿಯನ್ನು ಸಂಸ್ಕೃತ ಪಾಠಶಾಲಾ ಆಗಮಶಾಸ್ತ್ರ ಪಂಡಿತರಾದ ವಿ॥ ಶ್ರೀ ಚಕ್ರವರ್ತಿ ತಿರುಮಲಾಚಾರ್ಯರ ಕುಮಾರ ಚಿ॥ ಲಕ್ಷ್ಮೀನರಸಿಂಹ ಚಕ್ರವರ್ತಿಗೆ ಕೊಟ್ಟು ವಿವಾಹವನ್ನು ಬಹು ವೈಭವದಿಂದ ನೆರವೇರಿಸಿದರು.

ಅಂಚೆ ನೌಕರರಿಗೆ ಸಹಾನುಭೂತಿ

ನೆನ್ನೆ ಮಧ್ಯಾಹ್ನ ಕಾಲೇಜ್ ಅವರಣದ ಬಳಿ ವಿದ್ಯಾರ್ಥಿ ಸಂಘ ನಾತ್ರಯದಲ್ಲಿ ಅಂಚೆ ನೌಕರರ ಬೇಡಿಕೆಗಳಿಗೆ ಬೆಂಬಲ ನೀಡುವ ಸಲುವಾಗಿ ವಿದ್ಯಾರ್ಥಿಗಳು ಸಭೆ ಸೇರಿ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು.

ಕಾಂ॥ ಡೆಲಿಗೇಟುಗಳ ಸಭೆ

ನಾಳೆಯ ದಿನ ಸಂಜೆ ೬-೩೦ ಘಂಟೆಗೆ ದೇವರಾಜ ಮೊಹಲ್ಲಾದಿಂದ ಚುನಾಯಿತರಾದ ಕಾಂಗ್ರೆಸ್ ಪ್ರತಿನಿಧಿಗಳ ಸಭೆಯು ಸಯ್ಯಾಜಿರಾವ್ ರಸ್ತೆಯಲ್ಲಿರುವ ಕಾಂಗ್ರೆಸ್ ಕಛೇರಿಯಲ್ಲಿ ನಡೆಯುವುದೆಂದು ಸಂಚಾಲಕರಾದ ಶ್ರೀ ಚೌಡಯ್ಯನವರು ಮತ್ತು ಎ. ರಾಮಣ್ಣನವರು ತಿಳಿಸುತ್ತಾರೆ.

ಕಾಶ್ಮೀರಕ್ಕೆ ನೆಹರೂ

ಷೇಕ್ ಅಬ್ದುಲ್ಲಾರವರ ವಿಚಾರಣೆ ಇದೇ ೨೨ ನೇ ತಾ॥ ನಡೆಯುವುದರಿಂದ ಆ ವೇಳೆಗೆ ತಾವು ಕಾಶ್ಮೀರಕ್ಕೆ ತೆರಳಲು ಆಲೋಚಿಸಿರುವುದಾಗಿ ಪಂ॥ ನೆಹರೂರವರು ತಿಳಿಸಿದ್ದಾರೆ.

ಸಿಖ್ಖರ ನೂತನ ನಿರ್ಧಾರ

ಪಾಂಥಿಕ್ ಸಿಖ್ಖರು ರಾಜ್ಯಾಂಗ ರಚನಾ ಸಭೆಗೆ ಬಹಿಷ್ಕಾರ ಹಾಕಬೇಕೆಂದ ತೀರ್ಮಾನವನ್ನು ಪಂ॥ ನೆಹರೂರವರ ಸೂಚನೆಯಂತೆ ಬದಲಾಯಿಸಿ, ಸದರಿ ಸಭೆಗೆ ಚುನಾಯಿತರಾದವರನ್ನು ಕಳುಹಿಸಲು ಪಾಂಥಿಕ್ ಸಭೆಯವರು ನಿರ್ಧರಿಸಿದ್ದಾರೆ.

ಅಂಚೆ ನೌಕರರ ಮುಷ್ಕರ

ನೆನ್ನೆಯಿಂದ ಬೊಂಬಾಯಿ, ಕಲ್ಕತ್ತ, ದೆಹಲಿ ಮತ್ತು ಇತರ ಹಲವು ಸ್ಥಳಗಳಲ್ಲಿ ಅಂಚೆ ನೌಕರರ ಮುಷ್ಕರ ಆರಂಭವಾಗಿ ನಡೆಯುತ್ತಿದೆ. ಮದ್ರಾಸ್ ಪ್ರಾಂತ್ಯ ಕೆಲಸಗಾರರ ಸಂಘದವರು ಮುಷ್ಕರ ಹೂಡಕೂಡದೆಂದೂ ನಿರ್ಧರಿಸಿದ್ದಾಗ್ಯೂ ಮಧುರಾ, ಕಲ್ಲಿಕೋಟೆ ಮತ್ತು ತಲಚೇರಿಗಳಲ್ಲಿ ಮುಷ್ಕರ ನಡೆಯುತ್ತಿದೆ. ದೆಹಲಿಯಲ್ಲಿ ಸ್ಕೌಟ್ ದಳದವರು ಅಂಚೆಗಳನ್ನು ಮನೆ ಮನೆಗೂ ತಲುಪಿಸುತ್ತಿದ್ದಾರೆ. ಈ ಶಾಖೆ ಡೈರೆಕ್ಟರ್ ಜನರಲ್ ಶ್ರೀ ಪ್ರಸಾದ್ ಇಬ್ಬರು ಮಕ್ಕಳೂ ಸ್ವಯಂ ಸೇವಕರ ಕೆಲಸ ನೋಡುತ್ತಿರುವರೆಂದು ಗೊತ್ತಾಗಿದೆ. ಬೊಂಬಾಯಿಯಲ್ಲಿ ಒಬ್ಬ ಅಂಚೆ ನೌಕರನೂ ಕೆಲಸಕ್ಕೆ ಬಂದಿಲ್ಲ. ಬೊಂಬಾಯಿ ಪ್ರಾಂತ್ಯದಲ್ಲೆಲ್ಲಾ ಮುಷ್ಕರ ಯಶಸ್ವಿಯಾಗಿ ಜರುಗುತ್ತಿರುವುದಾಗಿ ಸುದ್ದಿ ಬಂದಿದೆ. ಅಹಮದಾಬಾದ್, ಸೂರತ್ ಪಾಟ್ನಾ ನಗರಗಳಲ್ಲೂ ಮುಷ್ಕರ ಆರಂಭವಾಗಿದೆ.

ಈಜಿಪ್ಟಿನಲ್ಲಿ ದಸ್ತಗಿರಿಗಳು

ಬ್ರಿಟಿಷರು ಈಜಿಪ್ಟನ್ನು ಗೆದ್ದ ೬೪ನೇ ವಾರ್ಷಿಕೋತ್ಸವದ ವಿರೋಧವಾಗಿ ನೆನ್ನೆ ಶೋಕ ದಿನಾಚರಣೆಯನ್ನು ಹರತಾಳ ಪಡೆದು ಆಚರಿಸಬೇಕೆಂದು ಈಜಿಪ್ಟಿನ ಕೋಟ್ಲೆ ಮತ್ತು ವಾಫ್ಡಿಸ್ಟ್ ಪಕ್ಷದವರು ಘೋಷಿಸಿದ್ದರಿಂದ, ಆ ಪಕ್ಷಗಳ ಸುಮಾರು ಸಾವಿರ ಮಂದಿಯನ್ನು ದಸ್ತಗಿರಿಮಾಡಿ ಜೈಲಿನಲ್ಲಿಡಲಾಗಿದೆ. ಸಾರ್ವತ್ರಿಕ ಮುಷ್ಕರವು ಕಾನೂನು ಬಾಹಿರವೆಂದು ಸರ್ಕಾರದ ಪ್ರಕಟಣೆ ಹೊರಟಿದೆ.

ಹೈಸ್ಕೂಲಿಗಾಗಿ ಸಭೆ

ಯಳಂದೂರು ೧೨

ಯಳಂದೂರಿನಲ್ಲಿ ಹೈಸ್ಕೂಲ್ ಸ್ಥಾಪಿಸುವ ಬಗ್ಗೆ ೨೧-೭-೪೬ ನೇ ಭಾನುವಾರ ಮೂರು ಘಂಟೆಗೆ ಜಹಗೀರ್‌ದಾರರ ಮಿಡಲ್ ಸ್ಕೂಲಿನಲ್ಲಿ ಬಹಿರಂಗ ಸಭೆಯನ್ನು ಏರ್ಪಡಿಸಲಾಗಿದೆಯೆಂದೂ ಈ ಸಭೆಗೆ ಸದರೀ ತಾಲ್ಲೂಕಿನ ಮಹನೀಯರುಗಳು ಮತ್ತು ಅಭಿಮಾನಿಗಳು ದಯಮಾಡಿಸಬೇಕೆಂದೂ ಸಂಚಾಲಕರಾದ ಶ್ರೀ ಎಂ. ಎಸ್. ಬಸವಣ್ಣದೇವರವರು ಪ್ರಾರ್ಥಿಸುತ್ತಾರೆ.

ಗ್ರಾಮಫೋನ್ ಸಾಮಾನುಗಳು, ಪಿಕಪ್ ನೀಡಲ್ಸ್, ಪೇಪರ್ ಕ್ಲಿಪ್ಸ್, ಪೇಪರ್ ಪಿನ್ಸ್, ನಮ್ಮಲ್ಲಿ ಸಿಗುತ್ತೆ.

ಶ್ರೀ ರಾಜಲಕ್ಷ್ಮೀ ...... &

ಟ್ರೇಡಿಂಗ್ ಏಜೆನ್ಸಿ ...... ಮಾರ್ಕೆಟ್,

ಶ್ರೀರಾಂಪೇಟೆ, ಮೈಸೂರು.

ರಾಜ್ಯಾಂಗ ರಚನಾ ಸಭೆಗೆ ಚುನಾವಣೆ

ಸಿಂಧ್ ಪ್ರಾಂತ್ಯದಿಂದ ರಾಜ್ಯಾಂಗ ರಚನಾ ಸಭೆಗೆ ಚುನಾವಣೆ ನಡೆದು ಸಾಮಾನ್ಯ ಕ್ಷೇತ್ರದಿಂದ ಕಾಂಗ್ರೆಸ್ ಉಮೇದುವಾರರಾದ ಶ್ರೀ ದೌಲತ್‌ರಾಂರವರು ಪ್ರತಿಸ್ಪರ್ಧಿಗಳಿಲ್ಲದೇ ಚುನಾಯಿತರಾಗಿದ್ದಾರೆ. ೩ ಮುಸ್ಲಿಂ ಸ್ಥಾನಗಳ ಫಲಿತಾಂಶ ಇನ್ನೂ ಹೊರಬಿದ್ದಿಲ್ಲ.

ಡರ್ಬಾನಿನಲ್ಲಿ ಭಾರತೀಯರ ಸತ್ಯಾಗ್ರಹ

ಟ್ರಾನ್ಸ್‌ವಾಲಿನಿಂದ ೨೫ ಭಾರತೀಯ ಸತ್ಯಾಗ್ರಹಿಗಳು ಡರ್ಬಾನಿಗೆ ಬಂದಿದ್ದಾರೆ. ಈ ಗುಂಪಿನ ನಾಯಕರು ...... ಗಳಾದ ಡಾ॥ ಫಲೋಚಿ, ... ಮಹಿಳೆಯರಿದ್ದಾರೆ.

ಪಂಚಾಯಿತಿಗೆ ಒಪ್ಪಿಸಿ

ಅಂಚೆ ನೌಕರರ ಬೇಡಿಕೆಗಳನ್ನು ಕೂಡಲೆ, ಪಂಚಾಯಿತಿಗೆ ಒಪ್ಪಿಸಬೇಕೆಂದು ಕಾಂಗ್ರೆಸ್ ಅಧ್ಯಕ್ಷರಾದ ಪಂ॥ ನೆಹರೂರವರು ಹೇಳಿಕೆ ಇತ್ತಿದ್ದಾರೆ.

ಶಾಂತಿ ಸಮ್ಮೇಳನ

ಪ್ಯಾರಿಸ್ ಶಾಂತಿ ಸಮ್ಮೇಳನದ ಆಹ್ವಾನ ಪತ್ರಿಕೆಗೆ ಪೈನಾ ಪ್ರತಿನಿಧಿ ...... ಹಾಕಲು ಮಿತ್ರ ರಾಷ್ಟ್ರಗಳು ಒಪ್ಪಿವೆ.

ತಿರುವಾಂಕೂರಿನಲ್ಲಿ ಭೂ ಕಂದಾಯದ ಸುಧಾರಣೆ

ತಿರುವಾಂಕೂರು ಸಂಸ್ಥಾನದಲ್ಲಿ ಭೂಕಂದಾಯವನ್ನು ವಸೂಲು ಮಾಡುವ ಸುಧಾರಣೆಗಳು ಈ ನವೆಂಬರಿನಿಂದ ಜಾರಿಗೆ ಬರುವುವು. ಇದರಂತೆ ನಿರ್ವಸನವನ್ನು ...... ಪಡೆಯುತ್ತ ಎಕರೆಗೆ ೧೪ ಆಣೆಯಂತೆ ಕಡಿಮೆ ದರ್ಜೆಯ ಭೂಮಿ ತೆರಿಗೆಯನ್ನು ಸಂಸ್ಥಾನದ ಜಮೀನುಗಳ ಮೇಲೆಲ್ಲಾ ವಿಧಿಸಲಾಗುವುದು. ಮರಗಳ ಮೇಲೆ ತೆರಿಗೆ ಇರುವುದಿಲ್ಲ. ಜಮೀನಿನ ಉತ್ಪತ್ತಿಯ ಮೇಲೆ ವರಮಾನ ತೆರಿಗೆಯನ್ನು ಹಾಕಲಾಗುವುದು. ಈ ಪದ್ಧತಿಯಿಂದ ಮುಜರಾಯಿ ಸಂಸ್ಥೆಗಳಿಗೆ ಉಂಟಾಗಬಹುದಾದ ನಷ್ಟವನ್ನು ಭರ್ತಿ ಮಾಡಿಕೊಡುವುದಕ್ಕಾಗಿ ಸರ್ಕಾರದವರು ವರ್ಷಕ್ಕೆ ೨೦ ಲಕ್ಷ ರೂಗಳನ್ನು ಒದಗಿಸಲಿರುವರು.

ಬೊಂಬಾಯಿಗೆ ಮದ್ರಾಸಿನ ಅಂಚೆ ಕೆಲಸಗಾರರು

ಬೊಂಬಾಯಿನ ಪೋಸ್ಟ್ ಮಾಸ್ಟರ್ ಜನರಲ್‌ರವರು ಪತ್ರಿಕೆಗಳಿಗೆ ಹೇಳಿಕೆ ಇತ್ತು "ಕೆಲಸಗಾರರ ಅಭಾವವೇನೂ ಇಲ್ಲದೆ ಬೇರೆ ಕೆಲಸಗಾರರು ಸಿಗುತ್ತಾರೆ. ಅವರೆ ಅವರು ಮುಷ್ಕರಗಾರರಿಗೆ ವಿರುದ್ಧವಾಗಿ ಕೆಲಸಮಾಡಲು ಆತಿಸುತ್ತಿಲ್ಲ. ಇವರೆಲ್ಲಾ ಸರ್ಕಾರಕ್ಕೆ ಸಹಾನುಭೂತಿ ತೋರಿಸುತ್ತಿದ್ದಾರೆ. ಆದ್ದರಿಂದ ಮದ್ರಾಸಿನಿಂದ ಕೆಲಸಗಾರರನ್ನು ಕರೆಸಲಾಗುವುದು. ಮತ್ತು ಕೊಲ್ಲಾಪುರದಲ್ಲಿರುವ ಪೋಲೆಂಡಿನ ನಿರಾಶ್ರಿತರ ಸಹಾಯವನ್ನು ಪಡೆಯಲಾಗುವುದು" ಎಂದು ತಿಳಿಸಿದ್ದಾರೆ.

ಈಸೂರು ಮಹಿಳಾ

ವೈದಿಗಳಿಗೆ ಪರೋಲ್?

ಈಸೂರು ಪ್ರಕರಣದಲ್ಲಿ ...... ರನ್ನು ...... ಶ್ರೀಮತಿ ....

ಸಾಧ್ವಿ

ತಾ॥ ೧೨-೭-೪೬ ಶುಕ್ರವಾರ

ಅಂಚೆ ಮುಷ್ಕರ

ನಿನ್ನೆಯಿಂದ ಹಿಂದೂಸ್ತಾನದಲ್ಲಿ ಅಂಚೆ ನೌಕರರ ಮುಷ್ಕರವು ಆರಂಭವಾಗಿದೆ. ಬೊಂಬಾಯಿಯಲ್ಲಿ ಮುಷ್ಕರವು ಬಹಳ ಬಿರುಸಾಗಿದೆ. ದೆಹಲಿಯಲ್ಲಿಯೂ ಜೋರಾಗಿದೆ. ಉತ್ತರದೇಶದ ಅನೇಕ ಪ್ರಾಂತಗಳಲ್ಲಿ ಇದು ದೊಡ್ಡ ಪ್ರಮಾಣದಲ್ಲಿಯೇ ಜರುಗುತ್ತಿದೆ. ದಿನೇ ದಿನೇ ಇದು ಬೆಳೆಯುತ್ತಿರುವಂತೆಯೇ ಕಾಣುತ್ತಿದೆ. ದಕ್ಷಿಣದೇಶದಲ್ಲಿ ಮಾತ್ರ ಇದು ಸಾರ್ವತ್ರಿಕವಾಗಿರುವುದಿಲ್ಲ. ಮದರಾಸ್ ಪ್ರಾಂತದಲ್ಲಿ ಮುಷ್ಕರದ ಸೂಚನೆಯನ್ನು ಹಿಂದಕ್ಕೆ ತೆಗೆದುಕೊಳ್ಳಲಾಗಿದೆ ಆದರೂ ಮದರಾಸ್ ಪ್ರಾಂತಕ್ಕೆ ಸೇರಿರುವ ಬೆಂಗಳೂರು ನಗರದಲ್ಲಿ ಮುಷ್ಕರವು ಬಿರುಸಾಗಿ ಜರುಗುತ್ತಿದೆ ಶಿವಮೊಗ್ಗದಲ್ಲಿಯೂ ನಡೆಯುತ್ತಿರುವುದಾಗಿ ವರ್ತಮಾನ ಬಂದಿದೆ

ಮೈಸೂರು ನಗರದಲ್ಲಿ ಮುಷ್ಕರವು ನಡೆಯುತ್ತಿಲ್ಲ. ಇಲ್ಲಿನ ಸಂಘವು ಮದರಾಸಿನ ಸಂಘಕ್ಕೆ ಸೇರಿರುತ್ತದೆ. ಬೆಂಗಳೂರು ದಂಡಿನಲ್ಲಿಯೂ ಇಲ್ಲವೆಂದು ಹೇಳಲಾಗಿದೆ ಬೆಂಗಳೂರು ನಗರದ ಸಂಘದವರು ಅಖಿಲಭಾರತ ಸಂಘಕ್ಕೆ ಸೇರಿರುವುದರಿಂದ ಅವರು ಇಡೀ ಹಿಂದೂಸ್ತಾನದ ಮಾರ್ಗವನ್ನೇ ಅನುಸರಿಸಿ ಮುಷ್ಕರವನ್ನು ಆಚರಿಸುತ್ತಿದ್ದಾರೆ ಅವರೆಲ್ಲರೂ ಸಭೆಸೇರಿ ತೀರ್ಮಾನಕ್ಕೆ ಬಂದು ಶಾಂತಿಯಿಂದ ಬೆಂಗಳೂರಿನಲ್ಲಿ ಮೆರವಣಿಗೆಯನ್ನೂ, ಪ್ರದರ್ಶನವನ್ನೂ ಮಾಡಿದರು. ಬೆಂಗಳೂರು ನಗರದಲ್ಲಿ ಅಂಚೆ ಇಲಾಖೆಯ ಕೆಲಸ ಕಾರ್ಯಗಳು ತಟಸ್ಥವಾಗಿವೆ. ಕಾಗದ ಪತ್ರಗಳನ್ನು ಮಹಾಜನರು ಟಪಾಲಾಫೀಸಿನಲ್ಲಿಯೇ ತೆಗೆದುಕೊಳ್ಳಬೇಕಾಗಿದೆ. ಟಪಾಲಾಫೀಸಿನ ಬಳಿ ಜನಸಂದಣಿಯು ವಿಶೇಷವಾಗಿದೆ. ಜನಸಂದಣಿ ಇರುವುದರಿಂದ ಪೋಲೀಸರ ಬಂದೋಬಸ್ತು ಬೇಕಾಗಿದೆ. ಇನ್ನು ಮುಂದೆ ಕಾಗದ ಪತ್ರಗಳನ್ನು ಬೇರೆ ಬೇರೆ ಮೊಹಲ್ಲಾಗಳಲ್ಲಿ ಇಟ್ಟು ಅವುಗಳಿಗೆ ಸಂಬಂಧಪಟ್ಟವರು ಅಲ್ಲಿಗೆ ಬಂದು ಅವುಗಳನ್ನು ತೆಗೆದುಕೊಳ್ಳುವಂತೆ ಏರ್ಪಾಡು ಆಗುವುದು.

ಬೆಂಗಳೂರು ನಗರದಲ್ಲಿಯೇ ಹೀಗಾದ ಮೇಲೆ ಬೊಂಬಾಯಿ ಮುಂತಾದ ದೊಡ್ಡ ದೊಡ್ಡ ನಗರಗಳ ವಿಷಯವನ್ನು ಹೇಳಬೇಕಾಗಿಯೇ ಇಲ್ಲ. ಬೊಂಬಾಯಿಯಲ್ಲಿ ಮುಷ್ಕರವು ಸಂಪೂರ್ಣವಾಗಿ ಆಗಿದೆಯೆಂದೂ ಬೀದಿಯಲ್ಲಿರುವ ಪೆಟ್ಟಿಗೆಗಳಿಂದ ಕಾಗದಗಳನ್ನೂ ಸಹ ತೆಗೆಯಲು ಆಗುತ್ತಿಲ್ಲವೆಂದೂ ವರದಿಯಾಗಿದೆ ಸ್ಕೌಟುಗಳ ಸಹಾಯದಿಂದ ಸಾಧ್ಯವಾದಷ್ಟು ಮಟ್ಟಿಗೆ ಕಾಗದ ಪತ್ರಗಳನ್ನು ಬಟವಾಡೆ ಮಾಡಿಸುವ ಏರ್ಪಾಡಾಗುತ್ತಿದೆ ಒಟ್ಟಿನಲ್ಲಿ ಈ ಮುಷ್ಕರದಿಂದ ಮಹಾಜನರಿಗೆ ಅತ್ಯಂತ ಅನಾನುಕೂಲವಾಗಿರುವುದರಲ್ಲಿ ಸಂದೇಹವಿಲ್ಲ

ಅಂಚೆ ನೌಕರರ ದೃಷ್ಟಿಯಿಂದ ನೋಡಿದರೆ ಅವರ ಬೇಡಿಕೆಗಳು ಅತ್ಯಂತ ಸಾಧುವೂ ಸಹಜವೂ ಆಗಿವೆ. ಅವುಗಳನ್ನು ಹಿಂದೆಯೇ ಅಧಿಕಾರಿಗಳು ಅಂಗೀಕರಿಸಿದ್ದಾರೆ ಆದರೆ ಹಲವು ಬೇಡಿಕೆಗಳ ಬಗ್ಗೆ ಇನ್ನೂ ಭಿನ್ನಾಭಿಪ್ರಾಯವು ಇದ್ದುದರಿಂದಲೇ ಈ ಮುಷ್ಕರವು ಪ್ರಾರಂಭವಾಗಿದೆ. ಬಡ ನೌಕರರ ಬಗ್ಗೆ ಮಹಾಜನರು ಸಂಪೂರ್ಣ ಸಹಾನುಭೂತಿಯುಳ್ಳವರಾಗಿದ್ದಾರೆ. ಅವರ ಕೋರಿಕೆಗಳು ಈಡೇರಲು ಸ್ವಲ್ಪಮಟ್ಟಿನ ಅನಾನುಕೂಲವು ಉಂಟಾದರೆ ಅದನ್ನು ಸಹಿಸಲೂ ಸಿದ್ಧರಿದ್ದಾರೆ ಆದರೆ ಈ ಮುಷ್ಕರವು ಶಾಂತಿಯಿಂದಲೂ, ಯಶಸ್ವಿಯಾಗಿಯೂ ಕೊನೆಗಾಣಬೇಕೆಂಬುದು ಎಲ್ಲರ ಹಾರೈಕೆ.

ರೈಲ್ವೆ ಮುಷ್ಕರದಲ್ಲಿ ಆಸೇತು ಹಿಮಾಲಯದವರೆಗೆ ಕೆಲಸಗಾರರಲ್ಲಿ ಸಂಪೂರ್ಣವಾದ ವ್ಯವಸ್ಥೆಯೂ, ಏಕಮತ್ಯವೂ, ಸಂಘಟನೆಯೂ ಕಂಡುಬರುತ್ತಿದ್ದವು. ಆದುದರಿಂದಲೇ ಅವರ ಪ್ರಯತ್ನವು ಜಯಪ್ರದವಾಯಿತು ಆದರೆ ಅಂಚೆಯವರ ಮುಷ್ಕರದಲ್ಲಿ ಭಿನ್ನಾಭಿಪ್ರಾಯವೂ, ಅವ್ಯವಸ್ಥೆಯೂ ಸ್ವಲ್ಪಮಟ್ಟಿಗೆ ಕಾಣಬರುತ್ತಿವೆ. ಒಂದು ಪ್ರಾಂತದವರು ಮುಷ್ಕರವು ಬೇಕೆಂದರೆ ಮತ್ತೊಂದು ಕಡೆಯವರು ಬೇಡವೆನ್ನುತ್ತಿದ್ದಾರೆ ಒಂದು ಊರಿನವರು ಬೇಕೆಂದರೆ ಇನ್ನೊಂದು ಊರಿನವರು ಬೇಡವೆನ್ನುತ್ತಿದ್ದಾರೆ ಸಂಘಗಳೂ ಸಹ ಅಖಿಲ ಭಾರತ ಕೇಂದ್ರ ಸಂಸ್ಥೆಯೊಂದರ ನಾಯಕತ್ವಕ್ಕೆ ಒಳಪಟ್ಟಿಲ್ಲ. ಆದುದರಿಂದ ಅನಾಯಕತ್ವ ಮತ್ತು ಅವ್ಯವಸ್ಥೆಗೆ ಅವಕಾಶವಿರುತ್ತದೆ. ಇದರಿಂದ ಚಳವಳಿಗೆ ಬಲವು ಕಡಿಮೆಯಾಗಿ ಈ ಪ್ರಯತ್ನವು ವಿಫಲವಾಗುವ ಸಂಭವವೂ ಉಂಟು ಆದರೆ ಕೆಲಸಗಾರರ ಬೇಡಿಕೆಗಳ ವಿಷಯದಲ್ಲಿ ಸಕಲರಿಗೂ ಸಹಾನುಭೂತಿ ಇರುವುದರಿಂದ ಈ ಮುಷ್ಕರವು ವಿಫಲವಾಗಲು ಯಾರೂ ಅವಕಾಶ ಕೊಡಲಾಗದು. ದೇಶದ ನಾಯಕರೆಲ್ಲರೂ ಇದಕ್ಕೆ ಪೂರ್ಣಗಮನ ಕೊಟ್ಟು ರೈಲ್ವೆ ಮುಷ್ಕರದಂತೆಯೇ ಅಂಚೆಯವರ ಮುಷ್ಕರವೂ ತೃಪ್ತಿಕರವಾಗಿ ಬಗೆಹರಿಯಲು ಪ್ರಯತ್ನ ಪಡುವುದು ಅತ್ಯಂತ ಆಗತ್ಯವಾಗಿದೆ.

Edited, printed and published by A. R. Nagarajan at the Sadhvi Press D Subbiah Road Mysore.

ಅಜೆಂಡಾ ನೋಟೀಸಿನ ಮೇಲೆ ಟಿಪ್ಪಣಿಗಳನ್ನು ಬರೆಯಬಾರದು

ಪೌರಸಭೆಯಲ್ಲಿ ನಿರ್ಣಯ

ಮೈಸೂರು ೧೨

ಕಾರ್ಯಕ್ರಮದಲ್ಲಿ ಕಳೆದುಳಿದ ಅಂಶಗಳನ್ನು ವಿಮರ್ಶೆ ಮಾಡುವ ಸಲುವಾಗಿ ಮುಂದುವರಿಸಲ್ಪಟ್ಟಿದ್ದ ಪುರಸಭೆಯ ಅಧಿವೇಶನವು ನೆನ್ನೆ ಸಂಜೆ ಶ್ರೀ ರಾಮಚಂದ್ರರಾವ್ ಬೊಂಬೋರೆಯವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರತಿ ಮೊಹಲ್ಲಾಗಳಲ್ಲೂ ಪ್ಲೇಗು ಜಾಡ್ಯವು ತಲೆದೋರದಂತೆ ಸೈನೋಗ್ಯಾಸ್ ಮಾಡುವ ಕಾರ್ಯಕ್ರಮವನ್ನು ಚುರುಕಾಗಿ ನಡೆಸಬೇಕೆಂದು ತೀರ್ಮಾನವಾಯಿತು.

ನಗರದಲ್ಲಿ ಸೌದೆ ಅಭಾವವು ಉಚ್ಚಸ್ಥಿತಿಗೆ ಹೆಚ್ಚಿರುವ ಕಾರಣದಿಂದ ಅದನ್ನು ನಿವಾರಿಸಲು ತಕ್ಕ ಕಾರ್ಯಕ್ರಮ ಕೈಗೊಳ್ಳಬೇಕೆಂದು ಸದಸ್ಯರು ಸೂಚಿಸಿದಾಗ ಅದಕ್ಕಾಗಿ ರಚಿತವಾಗಿರುವ ಉಪಸಮಿತಿಯವರು ಈ ಅಂಶವನ್ನು ಕೂಲಂಕಷವಾಗಿ ವಿಮರ್ಶೆಮಾಡಿ ಸೂಕ್ತ ಕಾರ್ಯಕ್ರಮ ಕೈಗೊಂಡಿದ್ದಾರೆಂದು ಅಧ್ಯಕ್ಷರು ತಿಳಿಸಿದರು

ಜಲಪುರಿಯ ಶಾಲಾ ಕಟ್ಟಡ ಒಂದನ್ನು ಮಿಷನರಿಗಳಿಗೆ ಸ್ಕೂಲ್ ನಡೆಸುವುದಕ್ಕಾಗಿ ಬಾಡಿಗೆ ಇಲ್ಲದೆ ಉಪಯೋಗಿಸಲು ಅವಕಾಶ ಕೊಡಬಹುದೆಂಬ ಸೂಚನೆಯಲ್ಲಿ ಹಾಗೆ ಮಿಷನರಿಗಳಿಗೆ ಕೊಟ್ಟ ಪಕ್ಷದಲ್ಲಿ ಕಾಲಕ್ರಮೇಣ ಕಟ್ಟಡವು ಪುರಸಭೆಯ ಕೈಬಿಡುವ ಸಂಭವ ಬರಬಹುದಾದ ಕಾರಣ ಸಾಲಿಯಾನಾ ಒಂದು ರೂ. ಬಾಡಿಗೆ ವಿಧಿಸಿ ಅದನ್ನು ಅವರಿಗೆ ವಹಿಸಿಕೊಡಬಹುದೆಂದು ಇತ್ಯರ್ಥವಾಯಿತು

ವಾಣೀವಿಲಾಸ ಮೊಹಲ್ಲಾದಲ್ಲಿರುವವರ ಸೌಕರ್ಯಕ್ಕಾಗಿ ರೇಡಿಯೋ ಮತ್ತು ಮೈಕ್ರೋಫೋನ್ ಇಡಿಸಲು ೧೮೦ ರೂ ಗ[ಳ] ಅಂದಾಜು ಮಂಜೂರಾತಿ ಪಡೆಯಿತು

ಯಾದವಗಿರಿ ಬಡಾವಣೆಯಲ್ಲಿ ನೀ[ರಿನ] ಸೌಕರ್ಯವನ್ನು ಕಲ್ಪಿಸಲು ಬಂದಿ[ದ್ದ] ೩೨೫೦ ರೂ. ಅಂದಾಜು ಅಂಗೀಕೃತ[ವಾ]ಯಿತು. ನಗರದ ಇತರ ಭಾಗಗಳಲ್ಲಿ [ನೀ]ರು ಸರಬರಾಜನ್ನು ಉತ್ತಮ ಸ್ಥಿತಿಗೆ [ತರ]ಲು ೭೧೧೧ ರೂ. ಗಳನ್ನು ಮಂಜೂರು ಮಾ[ಡ]ಲಾಯಿತು ಮರಾಮತ್ತು ಸಮಿತಿಯವ[ರು] ಶಿಫಾರಸು ಮಾಡಿದ್ದ ೨೫೪೦೦ [ರೂ.] ಅಂದಾಜುಗಳೂ ಕಾರ್ಯನಿರ್ವಾಹಕ ಸ[ಮಿತಿ]ಯವರು ಕಳುಹಿಸಿದ್ದ ೨೩೦೦ ರೂ. [ಅಂ]ದಾಜುಗಳೂ ಸಹ ಸಭೆಯವರಿಂದ ಅಂ[ಗೀ]ಕೃತವಾದವು

ಸೌದೆ ಉಪಸಮಿತಿಯೊಂದರ ಅಜೆಂ[ಡಾ] ನೋಟೀಸಿನಲ್ಲಿ ಸದಸ್ಯರೊಬ್ಬರಾದ ಎಂ. ಆರ್. ಸಿ. ಬಸಪ್ಪನವರು ಟೀಕೆ [ಟಿಪ್ಪ]ಣಿಗಳನ್ನು ಬರೆದಿರುವುದು ಸಾಧುವ[ಲ್ಲ]ವೂ, ಅದನ್ನು ಹಿಂದಕ್ಕೆ ತೆಗೆದುಕೊಳ್ಳ[ಬೇಕೆಂ]ತೆ ಅವರನ್ನು ಕೇಳಬೇಕು, ಇಲ್ಲದೆ ... ದಲ್ಲಿ ಅವುಗಳನ್ನು ಶಿಸಾಯಿಂದ ತೊ[ಡೆದು]ಹಾಕಬೇಕು, ಎಂಬ ಶ್ರೀ ಟಿ. ನರ[ಸಿಂಹ]ಯ್ಯಂಗಾರ್ಯರ ನಿರ್ಣಯವನ್ನು ... ರು ಚರ್ಚಿಸಿದರು. ಸೌದೆ ಉಪಸ[ಮಿತಿ]ಯು ಕಾನೂನು ಬದ್ಧವಾಗಿ ರಚಿತ[ವಾದ] ಸಮಿತಿಯಲ್ಲವೆಂದೂ, ಸದಸ್ಯರಲ್ಲಿ ಕೆಲ[ವರು] ತಿಳಿಸಿರುವ ನಿಯಮಗಳು ಇದಕ್ಕೆ ಅ[ನ್ವಯಿ]ಸುವುದಿಲ್ಲವೆಂದೂ ಅಧ್ಯಕ್ಷರು ಅಭಿಪ್ರಾ[ಯ]ಪಟ್ಟರು ಆದರೆ ಸದಸ್ಯರು ಅ[ಜೆಂಡಾ] ನೋಟೀಸಿನ ಮೇಲೆ ಈ ರೀತಿ ಟಿಪ್ಪ[ಣಿಗಳ]ನ್ನು ಬರೆಯುವುದು ಸರಿಯಲ್ಲವೆಂ[ದೂ ಅವ]ರು ತಿಳಿಸಿದರು. ಪೌರಸಭೆಯು ಕಾ[ರ್ಯ]ಗಳನ್ನು ನಿರ್ವಹಿಸಲು ಅಗ[ತ್ಯವಾದ] ಉಪಸಮಿತಿಗಳ ನೇಮಕಯಾಗಲೀ ... ವ್ಯಕ್ತಿಗಳಿಗೆ ಅಧಿಕಾರವನ್ನು ... ಯಾಗಲೀ ಸದರಿ ಕೆಲಸಗಳನ್ನು ನಿ[ರ್ವಹಿ]ಸಲು ಕಾನೂನಿನಲ್ಲಿ ಅವಕಾಶವಿರು[ವು]ದೂ ಅದರಂತೆ ರಚಿತವಾಗಿರುವ ಅ[ನೇಕ] ಸಮಿತಿಗಳಂತೆ ಸೌದೆ ಸರಬ[ರಾಜು] ಉಪಸಮಿತಿಯೂ ಒಂದೆಂದೂ ಸ... ತಿಳಿಸಿದರು. ಅನಂತರ ನಿರ್ಣಯ[ವು ಸ]ರ್ವಾನುಮತದಿಂದ ಅಂಗೀಕರಿಸಲ್ಪ[ಟ್ಟಿತು]

ಸರ್ಕಾರ ಭವನದ ಹಿಂಭಾಗದ ಖಾಲಿ ನಿವೇಶನವನ್ನು ಖಾಸಗಿಯ[ವರಿಗೆ] ಕೊಡದೆ ಸಾರ್ವಜನಿಕರ ಉಪಯೋ[ಗಕ್ಕೆ] ಮೀಸಲಾಗಿಡುವ ಬಗ್ಗೆ ಅದನ್ನು ... ಯ ಸ್ವಾಧೀನಕ್ಕೆ ಅಧ್ಯಕ್ಷರು ತೆಗೆದು[ಕೊಳ್ಳ]ಬೇಕೆಂದು ಸರ್ವಾನುಮತದಿಂದ ... ನ ಮಾಡಲಾಯಿತು.

ನಂಜನಗೂಡಿನಲ್ಲಿ ಜಾಹಿರಾ ಕುಸ್ತಿ

ಈ ಮಾಹೆ ತಾ॥ 14 ನೇ ಭಾನುವಾರ ಸಂಜೆ 5 ಘಂಟೆಗೆ ದಳವಾಯರ ಕಟ್ಟೆಯಲ್ಲಿ ಒಕ್ಕಲಿಗರ ಗರಡಿ ಮಾರುತಿ ವ್ಯಾಯಾಮ ಶಾಲಾ ಉಸ್ತಾದ್ ನೀಲಕಂಠಾಚಾರ್ಯರ ಶಾಗಿರ್ದ್ ಪೈ॥ ರಾಚಯ್ಯನಿಗೂ, ಕುರುಬಗೇರಿ ಗರಡಿ ಉಸ್ತಾದ್ ಸೈಯದ್ ಸಾಹೇಬರ ಶಾಗಿರ್ದ್ ಪೈ॥ ಸಿದ್ದಯ್ಯ ಉರುಫ್ ಪೋಕೀಗೂ ಜಿದ್ದಾಜಿದ್ದಿನಿಂದ ಕುಸ್ತಿ ನಡೆಯುತ್ತದೆ

ಲೈಸೆನ್ಸ್‌ದಾರ್

ಕಂಟ್ರಾಕ್ಟರ್ — ಎಸ್. ಮಲ್ಲಪ್ಪ.

ಅಪೇರಾ ಟಾಕೀಸ್

13—7—46ರಿಂದ

ಎರಡನೇ ವಾರ

ಲವಂಗಿ

(ತಮಿಳು)

ಪಾತ್ರ:

* ವೈ. ವಿ. ರಾವ್, * ಕುಮಾರಿ ರುಕ್ಮಿಣಿ
* ಜಯಮ್ಮ, * ಸಾರಂಗಪಾಣಿ

ಮುಂತಾದವರ

ರಾಜ್ ಕಮಲ್ ಟಾಕೀಸ್, ಮೈಸೂರು

1946 ನೇ ಜುಲೈ 10 ನೇ ಬುಧವಾರದಿಂದ ಪ್ರಾರಂಭ

ರಾಜ್ ಕಮಲ್ ರವರ

- ಪರ್ ಭಾತ್ ಪೆ ಅಪ್ನಾ ಡೇರ -

ಮುಖ್ಯ ಭೂಮಿಕೆಯಲ್ಲಿ: ವನಮಾಲ, ಉಲ್ಲಾಸ್

ನಿರ್ದೇಶಕರು: ಶ್ರೀ॥ ಶಾಂತಾರಾಮ್

ಅಮರ ಪ್ರೇಮವನ್ನು ಮನ ರಂಜನೀಯವಾಗಿ ನಿರೂಪಿಸುವ

ಪ್ರಣಯ ಗೀತೆ

ಒಂದನೇ ಆಟ ಮಧ್ಯಾಹ್ನ 3-30 ಕ್ಕೆ — ಎರಡನೇ ಆಟ ಸಂಜೆ 6-30 ಕ್ಕೆ

ಮೂರನೇ ಆಟ ರಾತ್ರಿ 9-45 ಕ್ಕೆ

ರಣಜಿತ್

12—7—46 ರಿಂ[ದ]

ಇಂಡಿಯಾ-

[ಮೇ]ಲ್

(ಹೊಸ ಪ್ರಿಂಟ್)

—ಪಾತ್ರಗಳು:—

* ಪೃಥ್ವಿರಾಜ್, * ರೊ...
* ಈಶ್ವರಲಾಲ್, * ...

ಪ್ರತಿದಿನ ೩ ಆಟಗಳು

ಫೋನ್ ನಂ. 302 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಶನಿವಾರ ೧೩—೭—೪೬ [ಸಂಚಿಕೆ ೩೫೮

ಮದರಾಸಿನಲ್ಲಿಯೂ ಅಂಚೆ ಮುಷ್ಕರವೇ ?

ಜಿಲ್ಲೆಯ ಆಹಾರ ಪರಿಸ್ಥಿತಿ

ಮೈಸೂರು ೧೨

ಮೈಸೂರು ಜಿಲ್ಲೆಯ ಆಹಾರ ಸ್ಥಿತಿಯನ್ನು ಈ ದಿನ ಜಿಲ್ಲಾಧಿಕಾರಿಗಳು ಪತ್ರಿಕಾ ಸಮ್ಮೇಳನವನ್ನು ಕೂಡಿಸಿ ವಿವರಿಸಿದರು. ನಂಜನಗೂಡು ತಾಲ್ಲೋಕಿನಲ್ಲಿ ಆಹಾರ ಅಭಾವ ಇದೆಯೆಂದೂ ಇದರ ಪರಿಣಾಮವಾಗಿ ಒಬ್ಬನು ಮೃತನಾದನೆಂದೂ ಬಂದ ವಿಚಾರದಲ್ಲಿ ಜಿಲ್ಲಾಧಿಕಾರಿಗಳು ಮೃತನಾದವನು ೭೨ ವರ್ಷದ ವೃದ್ಧನೆಂದೂ, ಅನೇಕ ದಿನಗಳಿಂದ ರೋಗಗ್ರಸ್ತನಾಗಿ ನರಳುತ್ತಿದ್ದನೆಂದೂ ಅವನ ಸಾವಿಗೆ ಅನ್ನದ ಅಭಾವವು ಕಾರಣವಲ್ಲವೆಂದೂ ತಿಳಿಸಿದರು. ತಾವು ಖುದ್ದು ನಂಜನಗೂಡು ಮತ್ತು ಇತರ ಸ್ಥಳಗಳಿಗೆ ಹೋಗಿ ಸ್ಥಿತಿಯನ್ನು ಪರಿಶೀಲಿಸಿದೆನೆಂದೂ ತಿಳಿಸಿದರು. ಖಾಸಗೀ ಜನರು ನಡೆಸುತ್ತಿದ್ದ ಡಿಪೋಗಳನ್ನು ವಜಾಮಾಡಿ, ಸರ್ಕಾರಿ ಡಿಪೋಗಳನ್ನು ತೆಗೆದು ಪ್ರಜೆಗಳಿಗೆ ಅನುಕೂಲ ಕಲ್ಪಿಸಲಾಗಿದೆ. ಈ ರೀತಿ ೧೯ ಡಿಪೋಗಳ ಪೈಕಿ ನಂಜನಗೂಡಿನಲ್ಲಿ ಆರು ಡಿಪೋಗಳನ್ನು ತೆರೆಯಲಾಗಿದೆ. ನಂಜನಗೂಡು ತಾಲ್ಲೋಕಿನಲ್ಲಿ ಆಹಾರಾಭಾವ ಏನೇನೂ ಇಲ್ಲವೆಂದು ತಿಳಿಸಿದರು. ೮-೭-೪೬ರಲ್ಲಿ ಕಂಡುಬಂದ ಅಂಶಗಳು ಈ ರೀತಿ ಇವೆ: ... ಭತ್ತ ... ಪಲ್ಲ ಕೊಡಗಿನ ... ; ಅಕ್ಕಿ ... ಬೇಳೆಗಳು, ಸುಚ್ಚಕ್ಕಿ ... ; ರಾಗಿ ... ಪಲ್ಲ, ಜೋಳ ..., ಗೋಧಿ ... ಗೋಧಿ ... ; ಮೈದಾ ... ; ಸೋಜಿ ... ಈ ಜಿಲ್ಲೆಗೆ ಸಧ್ಯಕ್ಕೆ ಬೇಕಾಗುವಷ್ಟು ಆಹಾರವು ಇದೆಯೆಂದೂ ಅಭಾವದ ಸಂಭವವು ಇರುವುದಿಲ್ಲವೆಂದೂ ತಿಳಿಸಿದರು. ಬಿತ್ತನೆಗಾಗಿ ಬೇಕಾಗುವ ಧಾನ್ಯಗಳನ್ನೂ ಸಹ ಡಿಪೋಗಳಲ್ಲಿ ಇಡಲಾಗಿದೆ ಎಂದು ಹೇಳಿದರು.

ಸಕ್ಕರೆ ಸರಬರಾಜನ್ನು ಹೋಟೆಲುಗಳಿಗೆ ಪೂರ್ಣವಾಗಿ ನಿರ್ಬಂಧಿಸುವುದರಿಂದ ಜನಸಂದಣಿಯು ತಪ್ಪುವುದೆಂದು ತಿಳಿಸಿದರು ... ರಲ್ಲಿ ... ಸರಬರಾಜನ್ನು ಉತ್ತಮಪಡಿಸಲು ಕಾರ್ಯಕ್ರಮವನ್ನು ಕೈಗೊಳ್ಳುವುದಾಗಿ ಹೇಳಿದರು.

ಬಿಡಾರಂ ಕೃಷ್ಣಪ್ಪನವರ ಸ್ಮಾರಕ ದಿನಾಚರಣೆ

ಗಾನವಿಹಾರದ ಬಿಡಾರಂ ಕೃಷ್ಣಪ್ಪನವರ ಸಸ್ನ ಸೀತಾರಾಮ ಮಂದಿರದಲ್ಲಿ ನಾಳೆ ಸಂಜೆ ೬ ಘಂಟೆಗೆ ಮಂದಿರದ ಸ್ಥಾಪಕರಾದ ಬಿಡಾರಂ ಕೃಷ್ಣಪ್ಪನವರ ಸ್ಮಾರಕವನ್ನು ಆಚರಿಸಲಾಗುವುದು. ಶಿಷ್ಯಂದಿರಿಂದಲೂ ಮತ್ತು ಇತರ ಅಭಿಮಾನಿಗಳಿಂದ ಸಂಗೀತವು ನಡೆಯುವುದು. ಸರ್ವರಿಗೂ ಆಹ್ವಾನವುಂಟು.

ಹರಿಕಥೆ

... ಸಂತೇಪೇಟೆಯಲ್ಲಿ ಇರುವ ಶ್ರೀ ... ಪ್ಪನವರ ಮನೆಯಲ್ಲಿ ನಾಳೆ ... ಗಂಟೆಗೆ ಶ್ರೀ ಲಕ್ಷ್ಮೀ... ಸೋದರ ... 'ಇಂದ್ರಕೀಲ' ಎಂಬ ಹರಿಕಥೆಯು ನಡೆಯುತ್ತದೆ. ಸರ್ವರಿಗೂ ಆಹ್ವಾನವುಂಟು.

ಉಪನ್ಯಾಸ

ವಸಾಹತು ಇಟ್ಟಿಗೆ ಗೂಡು ಯುವ ಸಂಘದಾಶ್ರಯದಲ್ಲಿ ಈ ದಿನ ರಾತ್ರಿ ೮ ಗಂಟೆಗೆ ಶ್ರೀ ವೇದಾಂತಂ ಸುಬ್ರಹ್ಮಣ್ಯಂರವರ 'ದಂಪತಿಗಳ ಜೀವನ ... ಸನಾತನ ಧರ್ಮದೀಪಿಕೆ' ಎಂಬ ವಿಷಯವಾಗಿ ಉಪನ್ಯಾಸವು ಜರುಗುವುದು. ಎಲ್ಲರಿಗೂ ಆಹ್ವಾನವುಂಟು.

ವರ್ಧಂತಿ ದರ್ಬಾರು

ಮೈಸೂರು ೧೨

ಶ್ರೀಮನ್ಮಹಾರಾಜರವರ ವರ್ಧಂತಿ ಸಂಬಂಧವಾಗಿ ಈ ತಿಂಗಳು ೨೦ನೇ ತಾ॥ ಶನಿವಾರ ಬೆಳಗ್ಗೆ ೧೦-೪೫ ಘಂಟೆಗೆ ಅರಮನೆ ಪಟ್ಟೆಯಲ್ಲಿಯೂ, ೨೧ನೇ ತಾ॥ ಭಾನುವಾರ ಮತ್ತು ೨೨ನೇ ತಾ॥ ಸೋಮವಾರ ಸಂಜೆ ೭ ಘಂಟೆಗೆ ಅರಮನೆ ಕಲ್ಯಾಣಮಂಟಪದಲ್ಲಿಯೂ ದರ್ಬಾರು ನಡೆಯುವುದು.

ವಿದ್ಯಾರ್ಥಿಗಳಿಗೆ ಸಹಾಯ

ಮೈಸೂರು ಪೌರ ಸಭೆಯವರು ಎರಡು ವರ್ಷಗಳಿಂದ ಶಾಲಾ ಕಾಲೇಜುಗಳಲ್ಲಿ ಓದುವ ವಿದ್ಯಾರ್ಥಿಗಳ ಸಹಾಯಕ್ಕಾಗಿ ಒಂದು ನಿಧಿಯನ್ನು ಏರ್ಪಡಿಸಿ ನೂರಾರು ವಿದ್ಯಾರ್ಥಿಗಳಿಗೆ ಊಟ ಒದಗಿಸಿದ್ದರು. ಇದಕ್ಕಾಗಿ ನೆರವು ನೀಡಿದ ಮಹನೀಯರೆಲ್ಲರೂ ಅಭಿನಂದನಾರ್ಹರು. ಈ ವರ್ಷವೂ ಅದೇ ರೀತಿ ಸಹಾಯ ಮಾಡಬೇಕೆಂಬ ಆಸೆಯು ಸಮಿತಿಯವರಿಗೆ ಇದ್ದರೂ ಸಾಕಾದಷ್ಟು ಹಣವಿಲ್ಲದಿರುವುದರಿಂದ ಕೇವಲ ೫೦ ಮಂದಿಗೆ ಮಾತ್ರ ಸೌಕರ್ಯ ಏರ್ಪಡಿಸಲು ಸಾಧ್ಯವೆಂದು ಸಮಿತಿಯು ನಿರ್ಧರಿಸಿದೆ. ಆದರೆ ನಮಗೆ ಬಂದ ಅರ್ಜಿಗಳು ಬಹಳವಾಗಿರುವುದರಿಂದ ಹಣ ಒದಗಿದರೆ ಇನ್ನೂ ಹೆಚ್ಚು ವಿದ್ಯಾರ್ಥಿಗಳ ವಿದ್ಯಾಭ್ಯಾಸಕ್ಕೆ ಸಹಾಯ ಮಾಡಬಹುದಾಗಿದೆ. ಆದ್ದರಿಂದ ಮಹಾಜನರು ಉದಾರವಾಗಿ ಸಹಾಯ ಮಾಡಬೇಕೆಂದು ಈ ಮೂಲಕ ಪ್ರಾರ್ಥಿಸುತ್ತೇನೆ.

ಚೌಡಯ್ಯ,
ಪೌರ ಸಭಾ ಸದಸ್ಯ.

ಆಯುರ್ವೇದ ಮತ್ತು ಯುನಾನಿ ಪರೀಕ್ಷೆ ಫಲಿತಾಂಶ

೧೯೪೬ನೇ ಜುಲೈನಲ್ಲಿ ನಡೆದ ಫೈನಲ್ ಪರೀಕ್ಷೆಯ ಆಯುರ್ವೇದ ಭಾಗದಲ್ಲಿ (ಎಲ್ ಎ ಎಂ ಎಸ್) ಮೊದಲನೇ ವರ್ಷ ೧, ಎರಡನೇ ವರ್ಷ ೨, ನಾಲ್ಕನೇ ವರ್ಷ ೩ ಯುನಾನಿ ಭಾಗದಲ್ಲಿ (ಎಲ್. ಯು. ಎಂ. ಎಸ್) ಮೊದಲನೇ ವರ್ಷದಲ್ಲಿ ೪ ನೇ ನಂ. ನವರು ತೇರ್ಗಡೆಯಾಗಿದ್ದಾರೆ.

° ° ° °

ವಾಣೀವಿಲಾಸ ಮೊಹಲ್ಲಾದ ಶ್ರೀ ರಾಮಕೃಷ್ಣಾಶ್ರಮದಲ್ಲಿ ನಾಳೆ ಸಾಯಂಕಾಲ ೬ ಘಂಟೆಗೆ ಭಗವದ್ಗೀತೆಯ ಮೇಲೆ ಶ್ರೀ ಸೋಮನಾಥಾನಂದರವರು ಪ್ರವಚನ ಮಾಡುವರು.

ಅಂಚೆ ನೌಕರರಿಗೆ ಎಚ್ಚರಿಕೆ

ಮಿಲಿಟರಿಯವರ ಸಹಾಯಕ್ಕಾಗಿ ಪ್ರಾರ್ಥನೆ

ಬೊಂಬಾಯಿ ಮತ್ತು ದೆಹಲಿ ನಗರಗಳಲ್ಲಿ ಅಂಚೆ ನೌಕರರು ಸಂಪೂರ್ಣವಾಗಿ ಮುಷ್ಕರ ಹೂಡಿದ್ದಾರೆ. ಭಾರತದಾದ್ಯಂತ ೭೦ ಸಾವಿರ ಕೆಲಸಗಾರರು ಚಳುವಳಿಯಲ್ಲಿ ಸೇರಿದ್ದಾರೆ. ಇನ್ನು ೭೨ ಗಂಟೆಗಳೊಳಗಾಗಿ ಕೆಲಸಗಾರರು ಮುಷ್ಕರ ನಿಲ್ಲಿಸಿ ಕೆಲಸಕ್ಕೆ ಹಾಜರಾಗದಿದ್ದರೆ ಅವರ ಸ್ಥಾನಗಳಿಗೆ ಬೇರೆಯವರನ್ನು ನೇಮಿಸಿಕೊಳ್ಳಲಾಗುವುದೆಂದು ಬೊಂಬಾಯಿನ ಪೋಸ್ಟ್‌ಮಾಸ್ಟರ್ ಜನರಲ್‌ರವರು ಕೆಲಸಗಾರರಿಗೆ ಎಚ್ಚರಿಕೆ ಕೊಟ್ಟಿದ್ದಾರೆ. ಅಂಚೆ ಹಂಚಿಕೆಯನ್ನು ವ್ಯವಸ್ಥೆ ಮಾಡಲು ಮಿಲಿಟರಿ ಸಹಾಯ ಪಡೆಯಲಾಗುವುದೆಂದು ಹೇಳಲಾಗಿದೆ. ಪೂನಾ ನಗರದ ತಂತಿ ಮತ್ತು ಟೆಲಿಫೋನ್ ಕೆಲಸಗಾರರೂ ಮುಷ್ಕರವನ್ನು ಆರಂಭಿಸಿದ್ದಾರೆ. ಮಿಲಿಟರಿಯವರ ಮೂಲಕ ರೈಲ್ವೆ ನಿಲ್ದಾಣದಿಂದ ಪೋಸ್ಟಾಫೀಸುಗಳಿಗೆ ಅಂಚೆ ಚೀಲಗಳನ್ನು ತರಿಸಿ ಅಲ್ಲಿಂದ ಹಂಚಿಕೆ ಕೇಂದ್ರಗಳಿಗೆ ಅದನ್ನು ತಲುಪಿಸಲು ಏರ್ಪಾಟು ಮಾಡಲಾಗುತ್ತಿದೆ. ಕಲ್ಕತ್ತ ನಗರದಲ್ಲಿ ಕೆಲವರು ಮಾತ್ರ ಮುಷ್ಕರ ಹೂಡಿದ್ದಾರೆ. ಪಾಟ್ನಾ, ಲಕ್ನೋ, ನಾಗಪುರ, ಜೈಪುರ, ಗೋರಖ್‌ಪುರ ಮುಂತಾದೆಡೆ ಮುಷ್ಕರ ಸಾಮಾನ್ಯವಾಗಿ ಸಾಗುತ್ತಿದೆ. ಬೊಂಬಾಯಿ ನಗರದಲ್ಲಿ ಮುಷ್ಕರಗಾರರು ಅಂಚೆ ಕಛೇರಿಗಳ ಬಳಿ 'ಪಿಕೆಟಿಂಗ್' ನಡೆಸುತ್ತಿದ್ದಾರೆ. ಮದ್ರಾಸ್ ಪ್ರಾಂತ್ಯದ ಅಂಚೆ ಕೆಲಸಗಾರರ ಸಂಘವು ಕೊಟ್ಟಿದ್ದ ಮುಷ್ಕರದ ನೋಟೀಸನ್ನು ವಾಪಸು ತೆಗೆದುಕೊಂಡಾಗ ತಮ್ಮನ್ನು ಕೇಳಲಿಲ್ಲವೆಂದು ಸದರಿ ಸಂಘದ ಉಪಶಾಖೆಗಳು ತಮ್ಮ ತೀವ್ರ ಆಕ್ಷೇಪಣೆ ಸೂಚಿಸಿದ್ದಾರೆ. ಮದ್ರಾಸ್ ಶಾಖೆಯವರೂ ಮುಷ್ಕರ ಆರಂಭಿಸುವ ಸೂಚನೆಗಳು ಕಂಡುಬರುತ್ತವೆ.

ದಕ್ಷಿಣ ಆಫ್ರಿಕಾದಲ್ಲಿ ದ್ವಿತೀಯ ರಂಗ

ಡರ್ಬಾನ್ ನಗರದ ಎರಡು ಕಡೆಗಳಲ್ಲಿ ಭಾರತೀಯರು ಸತ್ಯಾಗ್ರಹವನ್ನು ನಿನ್ನೆ ರಾತ್ರಿ ಆರಂಭಿಸಿದ್ದಾರೆ. ಇದು ದ. ಆಫ್ರಿಕಾ ಸತ್ಯಾಗ್ರಹದ ದ್ವಿತೀಯ ರಂಗವೆಂದು ಹೇಳಲಾಗಿದೆ. ಒಂದೊಂದು ಸ್ಥಳಕ್ಕೆ ೧೦ ಸತ್ಯಾಗ್ರಹಿಗಳು ಭಾಗವಹಿಸಿದ್ದಾರೆ. ನೆನ್ನೆ ರಾತ್ರಿ ೮ ಸತ್ಯಾಗ್ರಹಿಗಳ ದಸ್ತಗಿರಿ ಆಯಿತು.

ಸೀಕಡ ೫೦ ರಷ್ಟು ಹೆಚ್ಚು ತುಟ್ಟಿ ಭತ್ಯ

ಸ್ವಂ. ಸು. ಫೋನ್] ಬೆಂಗಳೂರು ೧೨

ಮೈಸೂರು ಸರ್ಕಾರದ ನಾನ್ ಗೆಜೆಟೆಡ್ ಅಧಿಕಾರಿಗಳಿಗೆ ಸೀಕಡ ೫೦ ರಷ್ಟು ತುಟ್ಟಿ ಭತ್ಯವನ್ನು ಹೆಚ್ಚಿಸಲಾಗಿದೆ. ಮೈಸೂರು ರೈಲ್ವೆ ನೌಕರರಿಗೂ ಇದು ಅನ್ವಯವಾಗುವುದು. ಅಲ್ಲದೆ ರೈಲ್ವೆ ನೌಕರರಿಗೆ ಒಂದು ತಿಂಗಳ ಸಂಬಳವನ್ನೂ ಯುದ್ಧದ ಬೋನಸ್ಸಾಗಿ ಕೊಡಲಾಗುವುದು. ಇದರಿಂದ ಸರ್ಕಾರಕ್ಕೆ ವರ್ಷಕ್ಕೆ ೪೦ ಲಕ್ಷ ರೂಗಳ ಹೆಚ್ಚಿಗೆ ಖರ್ಚು ಆಗಲಿದೆ.

ಮುಷ್ಕರಕ್ಕೆ ಮಹಾತ್ಮರ ಆಶೀರ್ವಾದ

ನೀವು ನಿಮ್ಮ ಮುಷ್ಕರವನ್ನು ಶಾಂತರೀತಿಯಿಂದ ನಡೆಸಿದರೆ ನಿಮಗೆ ಖಂಡಿತವಾಗಿಯೂ ಜಯ ದೊರಕುವುದು ಎಂದು ಮಹಾತ್ಮ ಗಾಂಧಿಯವರು ೧೦ನೇ ತಾ॥ ತಮ್ಮ ಟಪಾಲನ್ನು ಕೊಡಲು ಬಂದ ಅಂಚೆ ನೌಕರನನ್ನು ಕುರಿತು ಹೇಳಿದರು. ಈ ಸಂದೇಶವನ್ನು ಆತನು ತನ್ನ ಸಂಘಕ್ಕೆ ತಲುಪಿಸಿದ್ದಾನೆ.

ಸಿಂಗಪುರದಲ್ಲೂ ಮುಷ್ಕರ

ಸಿಂಗಪುರದಲ್ಲಿ ಅಂಚೆ ಮತ್ತು ತಂತಿ ಇಲಾಖೆಯ ನೂರಾರು ಕೆಲಸಗಾರರು ತಮ್ಮ ಭತ್ಯವನ್ನು ಹೆಚ್ಚಿಸುವ ಬಗ್ಗೆ ಪ್ರತಿಭಟಿಸಲು ಮುಷ್ಕರ ಹೂಡಿದ್ದಾರೆ. ಮಿಲಿಟರಿಯವರು ಅಂಚೆ ಹಂಚಿಕೆ ವ್ಯವಸ್ಥೆಯನ್ನು ವಹಿಸಿಕೊಂಡಿದ್ದಾರೆ.

ನ್ಯಾಯಾಸ್ಥಾನದಲ್ಲೇ ಕಲೆಕ್ಟರರ ಮರಣ

ನೀಲಗಿರಿಯ ಕಲೆಕ್ಟರಾದ ಮಿ॥ ಕ್ರೇನ್‌ರವರು ನ್ಯಾಯಾಸ್ಥಾನದಲ್ಲಿ ಮೊಕದ್ದಮೆಯೊಂದನ್ನು ವಿಚಾರಣೆ ನಡೆಸುತ್ತಿದ್ದಾಗ ಇದ್ದಕ್ಕಿದ್ದಂತೆಯೇ ಹೃದಯ ಸ್ತಂಭನದಿಂದ ತಮ್ಮ ಆಸನದಲ್ಲೇ ನಿನ್ನೆ ದಿನ ಮರಣ ಹೊಂದಿದರೆಂದು ತಿಳಿದುಬಂದಿದೆ.

ಕಾಶ್ಮೀರ ರಾಜರ ವಿಶೇಷ ದರ್ಬಾರು

ಕಾಶ್ಮೀರದ ಪ್ರತಿಯೊಂದು ಭಾಗದಿಂದ ಲೂ ನೂರಾರು ಮಂದಿ ಸಾವಿರ ಪ್ರತಿನಿಧಿಗಳನ್ನು ಆಹ್ವಾನಿಸಿ ಆವರ ಸಮ್ಮುಖದಲ್ಲಿ ನಡೆಯುವ ದರ್ಬಾರಿನಲ್ಲಿ ಆಲ್ಲಿನ ಮಹಾರಾಜರು ಸರ್ಕಾರದ ನೀತಿಯನ್ನು ವಿವರಿಸುವ ಪ್ರಮುಖ ಘೋಷಣೆ ಮಾಡಲಿದ್ದಾರೆ.

ಉಪಾಧ್ಯಾಯರ ಮುಷ್ಕರ

ತಮ್ಮ ಸಂಬಳ ಮತ್ತು ತುಟ್ಟಿ ಭತ್ಯವನ್ನು ಹೆಚ್ಚು ಮಾಡಬೇಕೆಂದು ಸಂಯುಕ್ತ ಪ್ರಾಂತ್ಯದ ಉಪಾಧ್ಯಾಯರ ಸಂಘದವರು ಆಲ್ಲಿನ ವಿದ್ಯಾ ಮಂತ್ರಿಗಳನ್ನು ಪ್ರಾರ್ಥಿಸಿದ್ದರು. ಅವರ ಉತ್ತರ ಸಮರ್ಪಕವಾಗಿರಲಿಲ್ಲವೆಂದು ಆ ಪ್ರಾಂತ್ಯದ ದೇಶಭಾಷಾ ಶಾಲೆಗಳ ೪೦ ಸಾವಿರ ಉಪಾಧ್ಯಾಯರುಗಳು ಜುಲೈ ೧೫ರಿಂದ ಮುಷ್ಕರ ಹೂಡಲು ನಿರ್ಧರಿಸಿದ್ದಾರೆ.

ಹರಿಜನ, ಕಪಿ, ಆನೆ ಮುಂತಾದ ಪ್ರಾಣಿಗಳನ್ನು ಬೀದಿಗಳಲ್ಲಿ ಆಟ ಆಡಿಸುವುದನ್ನು ನಿಷೇಧಿಸಬೇಕು ... ನ್ನು ಸರ್ಕಾರವು ಹೊರಡಿಸಬೇಕೆಂದು, ಸಭ್ಯತೆ ಮರ್ಯಾದೆಯಿಂದ ... ಎಸೆದು ... ಮೈಸೂರಿನ ... ಇದ ನಡೆಯಬೇಕೆಂದು ... ...

ಸಾಧ್ವಿ

ತಾ|| ೧೩-೭-೪೬ ಶನಿವಾರ

ತಿರುವಾಂಕೂರಿನಲ್ಲಿ ಭೂಕಂದಾಯದ ಸುಧಾರಣೆ

ಭೂಕಂದಾಯವನ್ನು ರದ್ದು ಮಾಡುವುದಾಗಿ ತಿರುವಾಂಕೂರಿನ ದಿವಾನರಾದ ಸರ್ ಸಿ. ಪಿ. ರಾಮಸ್ವಾಮಯ್ಯರ್‌ರವರು ಹಿಂದೆ ತಿಳಿಸಿದ್ದರಷ್ಟೆ. ಈಗ ಆ ಬಗ್ಗೆ ಕಾರ್ಯಕ್ರಮವನ್ನು ಕೈಗೊಂಡಿದ್ದಾರೆ. ಇದರ ಸಂಬಂಧವಾಗಿ ಅಲ್ಲಿನ ಸರ್ಕಾರದವರು ಒಂದು ಪ್ರಕಟಣೆಯನ್ನು ಹೊರಡಿಸಿದ್ದಾರೆ. ಎಲ್ಲಾ ಜಮೀನುಗಳಿಗೂ ಎಕರೆ ಒಂದಕ್ಕೆ ೧೪ ಆಣೆ ಪ್ರಮಾಣದ ಕಂದಾಯವನ್ನು ವಿಧಿಸಿದ್ದಾರೆ. ಇದು ಕೇವಲ ನಮೂನೆಯ ಕಂದಾಯವೆಂದು ಹೇಳಲಾಗಿದೆ. ಜಮೀನುಗಳ ಸರ್ವೆ ನಂಬರು, ಅಳತೆ ಇವೇ ಮುಂತಾದ ವಿವರಗಳನ್ನು ಇಡುವುದಕ್ಕಾಗಿ ಮಾತ್ರ ಇದನ್ನು ವಸೂಲು ಮಾಡಲಾಗುವುದೆಂದು ಹೇಳಲಾಗಿದೆ.

ಭೂಕಂದಾಯವನ್ನು ಸಂಪೂರ್ಣವಾಗಿ ವಜಾ ಮಾಡಿರುವುದಿಲ್ಲವಾದರೂ ಎಕರೆ ಒಂದಕ್ಕೆ ಹದಿನಾಲ್ಕು ಆಣೆಯಂತೆ ತೆಗೆದುಕೊಳ್ಳುವುದನ್ನು ಯಾರೂ ದೊಡ್ಡ ಹೊರೆಯೆಂದು ಭಾವಿಸುವುದಿಲ್ಲ. ಈ ಸಂಬಂಧವಾದ ದಾಖಲೆಗಳನ್ನು ಇಡುವುದಕ್ಕೂ ಮತ್ತು ಸರ್ಕಾರದವರಿಗೆ ಭೂಮಿಯ ಮೇಲೆ ಇರುವ ಹಕ್ಕೋಟೆಯನ್ನು ಸ್ಥಿರಪಡಿಸಿಕೊಳ್ಳುವುದಕ್ಕಾಗಿಯೂ ಇದನ್ನು ಹಾಕಿರುವಂತಿದೆ. ಆದ ದರಿಂದ ಅಲ್ಲಿನ ರೈತರಿಗೆ ಇದು ದೊಡ್ಡ ಉಪಕಾರವಾಗಿದೆ. ಮುಖ್ಯವಾಗಿ ಭೂಕಂದಾಯವನ್ನು ಶಾಶ್ವತ ವಜಾ ಮಾಡುವ ತತ್ವಕ್ಕೆ ಜಾಗ ಬಂದಿದೆಯೆಂದು ಧಾರಾಳವಾಗಿ ಹೇಳಬಹುದು.

ತಿರುವಾಂಕೂರು ರೈತರಿಗೆ ಈಗ ಕೊಟ್ಟಿರುವ ಸಹಾಯವು ಇಡೀ ಹಿಂದೂಸ್ಥಾನಕ್ಕೆ ಆದರ್ಶ ಪ್ರಾಯವಾಗಿದೆ. ಆ ಸಂಸ್ಥಾನವು ಇದುವರೆಗೆ ಅನೇಕ ಸಾಮಾಜಿಕ ಮತ್ತು ಧಾರ್ಮಿಕ ವಿಷಯಗಳಲ್ಲಿ ಬಹಳ ಪ್ರಗತಿಗಾಮಿಯಾದ ಸುಧಾರಣೆಗಳನ್ನು ಜಾರಿಗೆ ತಂದಿದೆ. ಇದರಿಂದ ಇಡೀ ಹಿಂದೂಸ್ಥಾನದ ಪ್ರಶಂಸೆಗೆ ಪಾತ್ರವಾಗಿದೆ. ಈಗ ಭೂಕಂದಾಯದ ಸುಧಾರಣೆಯನ್ನು ಮಾಡಿ ಇನ್ನೂ ಹೆಚ್ಚಿನ ಗೌರವವನ್ನು ಗಳಿಸುತ್ತದೆ. ಇದಕ್ಕಾಗಿ ನಾವು ಆ ಸಂಸ್ಥಾನದ ಪ್ರಜೆಗಳನ್ನೂ ಅಲ್ಲಿನ ಅರಸರನ್ನೂ ಅಭಿನಂದಿಸುತ್ತೇವೆ. ಇದರ ಸಂಪೂರ್ಣ ಗೌರವ ಅಲ್ಲಿನ ದಿವಾನರಾದ ಸಚಿವೋತ್ತಮ ಸರ್ ಸಿ. ಪಿ. ರಾಮಸ್ವಾಮಯ್ಯರ್‌ರವರಿಗೆ ಸಲ್ಲುವುದು. ಅವರ ಸ್ವತಂತ್ರ ಮನೋಭಾವ, ದೂರದರ್ಶಿತ್ವ ಮತ್ತು ದಿಟ್ಟತನಗಳು ಬಹಳ ಪ್ರಶಂಸನೀಯವಾದುವು. ತಿರುವಾಂಕೂರಿನಲ್ಲಿ ಅಮೆರಿಕದ ಮಾದರಿಯ ರಾಜ್ಯಾಂಗವನ್ನು ಜಾರಿಗೆ ತರುವುದಾಗಿಯೂ ಅವರು ಹೇಳಿದ್ದಾರೆ. ಇದರಲ್ಲಿಯೂ ಅವರು ಹೊಸ ಮಾದರಿಯನ್ನು ಹಾಕುವರೆಂಬುದರಲ್ಲಿ ಸಂದೇಹವಿಲ್ಲ. ಅಲ್ಲಿ ಕೂಡಲೇ ಪೂರ್ಣ ಜವಾಬ್ದಾರಿ ಸರ್ಕಾರವು ಸ್ಥಾಪಿತವಾಗದಿರಬಹುದು. ಆದರೂ ಪ್ರಗತಿಪರವಾದ ಸುಧಾರಣೆಗಳು ಜಾರಿಗೆ ಬರುವುದರಲ್ಲಿ ಅಭ್ಯಂತರವಿಲ್ಲ.

ವ್ಯವಸಾಯದ ವರಮಾನ ತೆರಿಗೆಯನ್ನೂ ತಿರುವಾಂಕೂರು ಸರ್ಕಾರದವರು ಜಾರಿಗೆ ತಂದಿದ್ದಾರೆ. ಇದರ ಪ್ರಮಾಣವು ಬ್ರಿಟಿಷ್ ಇಂಡಿಯಾದ ದರಕ್ಕಿಂತ ಕಡಿಮೆಯಾಗಿರುವುದೆಂದು ಹೇಳಲಾಗಿದೆ. ಭೂಕಂದಾಯದ ಉತ್ಪತ್ತಿಯು ಕಡಿಮೆ ಬೀಳುವುದರಿಂದ ಅದನ್ನು ಭರ್ತಿಮಾಡಿ ಮುಜರಾಯಿ ಮುಂತಾದ ಸಂಸ್ಥೆಗಳ ಕೆಲಸ ಕಾರ್ಯಗಳು ಯಥಾವಿಧಿಯಾಗಿ ನಡೆಯಲು ಅಲ್ಲಿನ ಸರ್ಕಾರದವರು ಇಪ್ಪತ್ತೈದು ಲಕ್ಷ ರೂಪಾಯಿಗಳನ್ನು ಮಂಜೂರು ಮಾಡಿರುತ್ತಾರೆ.

ಭೂಕಂದಾಯವನ್ನು ಪುನರ್ವಿಮರ್ಶಿಸಲು ಹಿಂದೂಸ್ಥಾನದಲ್ಲೆಲ್ಲಾ ಚಳುವಳಿ ನಡೆಯುತ್ತಿದೆ. ನಮ್ಮ ಮೈಸೂರಿನಲ್ಲೂ ಪ್ರಜಾಪ್ರತಿನಿಧಿಗಳು ಬಹಳ ದಿವಸಗಳಿಂದ ಒತ್ತಾಯಪಡಿಸುತ್ತಿದ್ದಾರೆ. ಈ ವಿಷಯವನ್ನು ಪರಿಶೀಲಿಸಿ ವರದಿ ಮಾಡಲು ಈಗ ತಾನೆ ನಮ್ಮ ಸರ್ಕಾರದವರು ಸಮಿತಿಯೊಂದನ್ನು ನೇಮಿಸಿದ್ದಾರೆ. ತಿರುವಾಂಕೂರಿನ ಅನುಭವವನ್ನು ಮೈಸೂರಿನವರು ಸಂಪೂರ್ಣವಾಗಿ ಉಪಯೋಗಿಸಿಕೊಂಡು ಪ್ರಜೆಗಳಿಗೆ ಅದರಷ್ಟೇ ಪ್ರಯೋಜನವನ್ನು ಉಂಟುಮಾಡಿಕೊಡಲೆಂದು ನಾವು ಹಾರೈಸುತ್ತೇವೆ.

ಯೆಹೂದಿಗಳ ಮೇಲೆ ಬ್ರಿಟಿಷರ ಕ್ರಮ

ಯೆಹೂದಿ ನಗರದ ಮೇಲೆ ಇತ್ತೀಚೆಗೆ ಬ್ರಿಟಿಷ್ ಮಿಲಿಟರಿ ಅಧಿಕಾರಿಗಳು ಧಾಳಿಯಾಗಿ ವಸ್ತಿಗೆ ಹೊಕ್ಕು ಮನೆ ಮಠಗಳನ್ನು ಶೋಧಿಸಲಿದ್ದಾರೆ. ಅದ್ದರಿಂದ ಯೆಹೂದಿಗಳು ಮುಷ್ಕರಗಿದ್ದು ಬಂಧಿಸಲ್ಪಡಲೂ, ಬಂಧನ ಶಿಬಿರಗಳಿಗೆ ಒಯ್ಯಲ್ಪಡಲೂ ನಿರಾಕರಿಸಿ ಸತ್ಯಾಗ್ರಹ ಮಾಡಬೇಕೆಂದು ಪ್ಯಾಲೆಸ್ಟೈನಿನ ಯೆಹೂದಿ ರೇಡಿಯೋ ತಿಳಿಸಿದೆ.

ಉದಾರ ಸಹಾಯ

ಶ್ರೀ ಶಂಕರ ಜಯಂತೀ ಮಹೋತ್ಸವ ಸಭೆಯ ಮೂಲಧನಕ್ಕಾಗಿ ಸಾಹುಕಾರ್ ದಕ್ಷಿಣ ಮಹಾವಿದ್ವಾನ್ ಕೆ. ಗೋಪಾಲಕೃಷ್ಣ ಶಾಸ್ತ್ರಿಗಳು ತಾವು ಹಿಂದೆ ಕೊಟ್ಟಿದ್ದ ೧೦೦ ರೂ.ಗಳ ಜೊತೆಗೆ ೧೫೦ ರೂ ಗಳನ್ನೂ, ಶ್ರೀ|| ಭಾಗವತ ಸುಬ್ಬರಾಯರು ೫೦ ರೂ ಗಳನ್ನೂ, ನಾಗಪ್ಪರ ರೈಲ್ವೆ ಆಡಿಟರ್ ಶ್ರೀ|| ಕೆ. ಶ್ರೀಕಂಠಯ್ಯನವರು ೧೦ ರೂ ಗಳನ್ನೂ ಉದಾರವಾಗಿ ಸಹಾಯ ಮಾಡಿರುತ್ತಾರೆ. ಸಿಲ್ಕ್ ಫಿಲೇಚರ್ಸ್ ಮ್ಯಾನೇಜಿಂಗ್ ಏಜಂಟರು ಶ್ರೀ|| ಜಿ. ಕೃಷ್ಣಸ್ವಾಮಿಯವರು ಸಭೆಯ ಪರವಾಗಿ ನಡೆಯುವ ವಿದ್ಯಾರಣ್ಯ ಸ್ಮಾರಕೋತ್ಸವಕ್ಕಾಗಿ ವರ್ಷಂಪ್ರತಿ ೨೫ ರೂ. ಗಳನ್ನು ಸಹಾಯ ಮಾಡುವುದಾಗಿ ವಾಗ್ದಾನ ಮಾಡಿರುತ್ತಾರೆ.

ಶ್ರೀ ಶಂಕರ ಜಯಂತೀ ಮಹೋತ್ಸವ ಸಭೆಯ ಆಶ್ರಯದಲ್ಲಿ ಈ ತಿಂಗಳು ೧೫ನೇ ತಾರೀಖು ಸಂಜೆ ೬ ಘಂಟೆಗೆ ಸಂಸ್ಕೃತ ಪಾಠಶಾಲೆಯಲ್ಲಿ ಆಸ್ಥಾನ ಮಹಾ ವಿದ್ವಾನ್ ಪಾಟೀಲ ಚಂದ್ರಶೇಖರ ಭಟ್ಟರು "ತತ್ವಜ್ಞಾನಿಯ ಪ್ರಸ್ಥಾನತ್ರಯ ಪ್ರಚಾರ" ಎಂಬ ವಿಷಯವನ್ನು ಕುರಿತು ಉಪನ್ಯಾಸ ಮಾಡುತ್ತಾರೆ.

ಲೀಗ್ ವಿಜಯ

ಸಿಂಧ್ ಶಾಸನ ಸಭೆಯಿಂದ ರಾಜ್ಯಾಂಗ ರಚನಾ ಸಭೆಗೆ ಮುಸ್ಲಿಂ ಲೀಗಿನ ಸದಸ್ಯರಾದ ಗಜದಾರ್, ಖುಹ್ರೋ, ಅಬ್ದುಲ್ ಸತ್ತಾರ್ ರವರುಗಳು ಚುನಾಯಿತರಾಗಿದ್ದಾರೆ.

○ ಬಟೇವಿಯಾ ತೀರದಲ್ಲಿ ೧ ಲಕ್ಷ ಪೌಂಡು ಬೆಲೆ ಬಾಳುವ ಚಿನ್ನದ ಘಟ್ಟಿ, ವಜ್ರ ಮತ್ತು ನೋಟುಗಳು ಸಿಕ್ಕಿವೆ. ಇದು ಜಪಾನೀಯರ ಆಕ್ರಮಣ ಕಾಲದಲ್ಲಿ ಹೂತಿಟ್ಟಿದ್ದ ನಿಧಿಯೆಂದು ಹೇಳಲಾಗಿದೆ

ಸಂಜಸಗೂಡಿನಲ್ಲಿ ಕಾಟಾ ಕುಸ್ತಿ

ಈ ಮಾಹೆ ತಾ|| 14 ನೇ ಭಾನುವಾರ ಸಂಜೆ ೬ ಘಂಟೆಗೆ ದಳವಾಯಿರ ಕಟ್ಟೆಯಲ್ಲಿ ಒಕ್ಕಲಿಗೇರಿ ಗರಡಿ ಮಾರುತಿ ವ್ಯಾಯಾಮ ಶಾಲಾ ಉಸ್ತಾದ್ ನೀಲಕಂಠರಾಯರ ಶಾಗಿರ್ದು ಪೈ|| ರಾಚಯ್ಯನಿಗೂ, ಕುರುಬಗೇರಿ ಗರಡಿ ಉಸ್ತಾದ್ ಸೈಯದ್ ಸಾಹೇಬರ ಶಾಗಿರ್ದು ಪೈ|| ಸಿದ್ದಯ್ಯ ಉರುಫ್ ಪ್ರೋಕೇಗೂ ಜೋಡಿ ಜವ್ವಿನಿಂದ ಕುಸ್ತಿ ನಡೆಯುತ್ತದೆ

ಕಂಟ್ರಾಕ್ಟರ್— ಎಸ್. ಮಲ್ಲಪ್ಪ

ಲೈಸನ್ಸ್‌ದಾರ್

ವೆಂಕಟಪ್ಪ ಉರುಫ್ ಗುಂಡಪ್ಪಶೆಟ್ಟಿ

ಗ್ರಾಮಾಭಿವೃದ್ಧಿಯ ವಿಶೇಷ ಅಧಿಕಾರಿಗಳ ನೇಮಕ

ಸ್ವಂ ವ] ಬೆಂಗಳೂರು ೧

ಬೆಂಗಳೂರು ಸಿಟಿ ಮ್ಯಾಜಿಸ್ಟ್ರೇಟರ ಸೀನಿಯರ್ ಅಸಿಸ್ಟೆಂಟ್ ಕಮೀಷನರ್ ಶ್ರೀ ಬಿ. ಕೆಂಪಣ್ಣನವರನ್ನು ಗ್ರಾಮಾಭಿವೃದ್ಧಿಯ ವಿಶೇಷ ಅಧಿಕಾರಿಗಳನ್ನಾಗಿ ನೇಮಕಮಾಡುವ ಸಂಭವವಿದೆಯೆಂದು ಹೇಳಲಾಗಿದೆ

† ೧೯೪೬ ನೇ ಮೈಸೂರು ವರಮಾನ ತೆರಿಗೆ ತಿದ್ದುಪಡಿ ಶಾಸನಕ್ಕೆ ಶ್ರೀಮನ್ಮಹಾರಾಜರವರ ಅಂಗೀಕಾರ ದೊರೆತು ಅದು ತಿಂಗಳ ಮೊದಲನೇ ತಾ|| ನಿಂದ ಜಾರಿಗೆ ಬಂದಿದೆ

ಸಂಸ್ಥಾನದ 'ಜೀವವಿಮೆ ಕಂಪೆನಿ'ಯೆಂಬುದನ್ನು "ಸಂಸ್ಥಾನದ ಸರ್ಕಾರಿ ಜೀವವಿಮೆ ಇಲಾಖೆ" ಎಂಬ ಹೆಸರಿಗೆ ಬದಲಾಯಿಸಿದೆ.

† ಅಂಚೆ ಕೆಲಸಗಾರರ ಮುಷ್ಕರ ಸಾಗುತ್ತಿದೆ. ಈ ದಿನವೂ ಅವರು ಮೆರವಣಿಗೆ ನಡೆಸಿದರು

† ಸಂಸ್ಥಾನದ ಹಿಂದೂ ಮಹಾಸಭೆಯ ವರ್ಕಿಂಗ್ ಕಮಿಟಿಯು ಇದೇ ೨೦ನೇ ತಾ|| ಬೆಂಗಳೂರಿನಲ್ಲಿ ಸೇರುವುದು

ಚಕ್ರವರ್ತಿ ಕುಮಾರಿಗೆ ಪ್ರಶಸ್ತಿ

ಬ್ರಿಟಿಷ್ ಸಾರ್ವಭೌಮರ ಜ್ಯೇಷ್ಠ ರಾಜಕುಮಾರಿ ಎಲಿಜಬೆತ್‌ರವರಿಗೆ "ಬ್ಯಾಚೆಲರ್ ಆಫ್ ಮ್ಯೂಸಿಕ್" ಎಂಬ ಸಂಗೀತ ಪ್ರಶಸ್ತಿಯು ದೊರೆತಿದೆ. ಮೊನ್ನೆ ನಡೆದ ಲಂಡನ್ ವಿಶ್ವವಿದ್ಯಾಲಯದ ಘಟಿಕೋತ್ಸವದಲ್ಲಿ ಅವರು ಈ ಪ್ರಶಸ್ತಿಯನ್ನು ಸ್ವೀಕರಿಸಿದರು.

ಅಮೆರಿಕಾದಲ್ಲಿ ತುಂಬು ಬೆಳೆ

ಅಮೆರಿಕದಲ್ಲಿ ಈ ವರ್ಷ ಬೆಳೆ ಸಮೃದ್ಧಿಯಾಗಿ ಆಗಿದೆ. ಇತಿಹಾಸದಲ್ಲೇ ಇಷ್ಟು ಹೆಚ್ಚು ಬೆಳೆ ಬೆಳೆದಿರುವುದು ಇದೇ ಮೊದಲೆಂದು ಹೇಳಲಾಗಿದೆ. ಸುಮಾರು ಕೋಟಿ ಬುಸೆಲ್‌ಗಳಷ್ಟು ಗೋಧಿ ರಫ್ತಾಗುವ ನಿರೀಕ್ಷಣೆ ಇದೆ.

ಪಾರ್ಲಿಮೆಂಟಿನಲ್ಲಿ ಭಾರತ ಪ್ರಶ್ನೆ

ಮುಂದಿನ ಗುರುವಾರ ಬ್ರಿಟಿಷ್ ಪಾರ್ಲಿಮೆಂಟಿನಲ್ಲಿ ಭಾರತದ ಪ್ರಶ್ನೆ ಕುರಿತು ಚರ್ಚೆ ನಡೆಯುವುದೆಂದು ಅಧಿಕಾರಯುತವಾದ ಪ್ರಕಟಣೆ ಹೊರಟಿದೆ.

● ಪ್ಯಾಲೆಸ್ಟೈನಿನ ನಿಜಸ್ಥಿತಿಯನ್ನು ತಿಳಿಯುವುದಕ್ಕಾಗಿ ಬ್ರಿ|| ಪಾರ್ಲಿಮೆಂಟಿನ ಸದಸ್ಯರುಗಳು ನಿಯೋಗ ಹೋಗಲು ಅನುಮತಿ ಕೇಳಿದ್ದನ್ನು ಕಾಲೋನಿ ಕಾರ್ಯದರ್ಶಿ ಮಿ|| ಹಿಲ್‌ಸನ್ ನಿರಾಕರಿಸಿದರು

ರಣಜಿತ್

12—7—46 ರಿಂದ

ಇಂಡಿಯಾ-ಟು-ಡೇ

(ಹಿಂದುಸ್ತಾನಿ)

* ... ... * ... * ...

ಪ್ರತಿದಿನ ೩ ಆಟಗಳು

ರಾಜ್ ಕಮಲ್ ಟಾಕೀಸ್, ಮೈಸೂರು

1946 ನೇ ಜುಲೈ 10 ನೇ ಬುಧವಾರದಿಂದ ಪ್ರಾರಂಭ

ರಾಜ್ ಕಮಲ್ ರವರ

- ಪರ್ಬತ್ ಪೆ ಅಪ್ನಾ ಡೇರಾ -

ಮುಖ್ಯ ಭೂಮಿಕೆಯಲ್ಲಿ: ವನಮಾಲ, ಉಲ್ಹಾಸ್ — ದಿಗ್ದರ್ಶಕರು: ಶ್ರೀ|| ಶಾಂತಾರಾಮ್

ಅಮರ ಪ್ರೇಮವನ್ನು ಮನರಂಜನೀಯವಾಗಿ ನಿರೂಪಿಸುವ

ಪ್ರಣಯ ಗೀತೆ

ಒಂದನೇ ಆಟ ಮಧ್ಯಾಹ್ನ ೨ ಕ್ಕೆ — ಎರಡನೇ ಆಟ ಸಂಜೆ 6-30 ಕ್ಕೆ

ಮೂರನೇ ಆಟ ರಾತ್ರಿ 9-45 ಕ್ಕೆ

ಆಪೇರಾ ಟಾಕೀಸ್

13—7—46 ರಿಂದ

ಎರಡನೇ ವಾರ

ಅವಂ

(ತಮಿಳು)

ಪಾತ್ರ:—

* ವೈ. ವಿ. ರಾವ್, * ಕುಮಾರಿ ರು[...]

* ಜಯಮ್ಮ, * ಸಾರಂಗಪಾ[...]

ಮುಂತಾದವರು

Edited, printed and published by A. N. Nagesharao at the Sadhvi Press, D. Subbiah Road, Mysore.

ಫೋನ್ ನಂ 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಭಾನುವಾರ ೧೪—೭—೪೭ [ಸಂಚಿಕೆ ೨೫೯

ಮುಷ್ಕರ ನಿಲ್ಲಿಸಲು ಅಧಿಕಾರಿಗಳ ಸಂಧಾನ

ಭಾರತೀಯರ ವಿಜಯ

ಪರ್ತ್ನಿನ ಮೇಲೆ ಆಡಿದ ಕ್ರಿಕೆಟ್ ಪಂದ್ಯದಲ್ಲಿ ಭಾರತೀಯರು ೧೧೮ ರನ್ನುಗಳಿಂದ ಜಯಗಳಿಸಿದರು. ಗೊತ್ತಾದ ಕಾಲ ಮುಗಿದನಂತರ 'ಎಕ್ಸ್‌ಟ್ರಾ' ಕಾಲ ಕೊಟ್ಟಿದ್ದರಿಂದ ೩೫ ನಿಮಿಷಗಳಲ್ಲಿ ದರ್ಬೆಯವರ ವಿಕೆಟ್ಟುಗಳನ್ನು ಕೆಡವಿ, ಆಟ ಮುಗಿಯುವುದಕ್ಕೆ ಇನ್ನೊಂದು ನಿಮಿಷವಿದ್ದಾಗ್ಗೆ ಅಮರನಾಥರು ಪೋಪರನ್ನು ಔಟುಮಾಡಿ ಭಾರತದ ವಿಜಯಕ್ಕೆ ಕಾರಣರಾದರು.

...ನೆ ರಾತ್ರಿಯಿಂದ ಮದ್ರಾಸ್ ಅಂಚೆನೌಕರರ ಮುಷ್ಕರ

ಮದ್ರಾಸ್ ಪ್ರಾಂತ್ಯದ ಅಂಚೆ ಕೆಲಸಗಾರರ ಸಭೆಯೊಂದು ಮೊನ್ನೆ ಸೇರಿ ಜುಲೈ ೧೩ ನೇ ತಾ॥ ನಡುರಾತ್ರಿಯಿಂದ ಮುಷ್ಕರ ಆರಂಭಿಸಬೇಕೆಂದು ನಿರ್ಧಾರ ಮಾಡಿದ್ದಾರೆ. ಈ ತೀರ್ಮಾನವನ್ನು ಪ್ರಾಂತ್ಯದ ಎಲ್ಲಾ ಶಾಖೆಗಳೂ ಜಾರಿಗೆ ತರಬೇಕೆಂದು ಪ್ರಾರ್ಥಿಸಲಾಗಿದೆ.

ಪೂರಿ ಬೆಲೆ ಇಳಿಯಿತು

ನೆಲ್ಲೂರಿನಲ್ಲಿ ಆಹಾರ ಸಮಿತಿಯವರು ... ಸೇರಿ ಗೋಧಿಯಿಂದ ಮಾಡುವ ಪೂರಿಯನ್ನು ಹೋಟೆಲುಗಳಲ್ಲಿ ಈಗಿರುವುದರ ಅರ್ಧದಷ್ಟು ಕಡಿಮೆ ಬೆಲೆಗೆ ಇಳಿಸಬೇಕೆಂದು ತೀರ್ಮಾನಿಸಿದ್ದಾರೆ. ಈಗ ೨ ಪೂರಿಗೆ ಆಣೆ ಬೆಲೆ ಇದೆ, ಊಟ ಒಂದಕ್ಕೆ ೮..., ಸಿಹಿತಿಂಡಿ, ೨ ಆಣೆ, ವಡೆ ಒಂದಕ್ಕೆ ... ಕಾಸು, ಮೈಸೂರು ಬೋಂಡ ೬ ಕಾಸು... ಹೀಗೆ ಬೆಲೆ ನಿಗದಿ ಮಾಡಿದ್ದಾರೆ.

ಸಿಂಧ್ ಲೀಗ್ ವಿರುದ್ಧ ...ಸೈಕರಾಯರಿಗೆ ಅಪಮಾನ

ಸಿಂಧ್ ಮುಸ್ಲಿಂಲೀಗ್ ಮಂತ್ರಿಮಂಡಲದ ... ಸಭೆಯು ಬಹುಮಂದಿ ಸದಸ್ಯರ ... ಕಳೆದುಕೊಂಡಿದೆ. ಅದನ್ನು ಉಳು... ಅವಕಾಶ ಕೊಡಿ ಎಂದು ವಿರೋಧ ... ೫ ಜನ ಮಂದಿ ಸದಸ್ಯರು ನೈಕರಾಯರು ..., ಭಾರತ ಕಾರ್ಯದರ್ಶಿಗಳಿಗೂ ಅರ್ಜಿ ... ಮಾಡಿಕೊಂಡಿದ್ದಾರೆ.

ಇಂಜನಿಯರಿಂಗ್ ಕಾಲೇಜಿನಲ್ಲಿ ಸೀಟುಗಳ ಬಡಾವಣೆ

ಬೆಂಗಳೂರು ಇಂಜನಿಯರಿಂಗ್ ಕಾಲೇಜಿನಲ್ಲಿದ್ದ ೩೨೦ ಸೀಟುಗಳನ್ನು ೨೫೦ ಕ್ಕೆ ಇಳಿಸಲು ಇಲಾಖೆಯವರು ನಿರ್ಧರಿಸಿರುವುದು ಗೊತ್ತಾಗಿದೆ. ವಿದ್ಯಾ ಮಂತ್ರಿಗಳೂ, ...ಪತಿಗಳೂ, ವಿದ್ಯಾ ಶಾಖೆಯ ಕಾರ್ಯದರ್ಶಿಗಳೂ ಕಾಲೇಜಿಗೆ ಭೇಟಿ ಇತ್ತು ಸೀಟುಗಳ ಬಡಾವಣೆಯನ್ನು ಪರಿಶೀಲಿಸಿ ಈ ತೀರ್ಮಾನಕ್ಕೆ ಬಂದಿರುವುದಾಗಿ ಗೊತ್ತಾಗಿದೆ.

ಟ್ರಾಲಿ ಅಪಘಾತ

ಕಾರ ವಿದ್ಯುಚ್ಛಕ್ತಿ ಕೇಂದ್ರದಲ್ಲಿ ಮೊನ್ನೆ ಪರ್ವತದ ಆಧಾರದ ಮೇಲೆ ಹೋಗುತ್ತಿದ್ದ ಟ್ರಾಲಿಯು ಹಗ್ಗ ಕಿತ್ತು ಹೋದ ... ಹೊಗಡಿಕೊಂಡಿತು. ಇದರಿಂದ ... ಪತ್ತು ೧೦ ಮಂದಿಗೆ ಗಾಯಗಳಾದುವು.

ತೀರ್ಪು ಅಣುಬಾಂಬು ಪ್ರಯೋಗ

ಜೈಲೈ ೨೫ ನೇ ತಾ॥ ಬೆಳಗ್ಗೆ ೯-೩೦ಕ್ಕೆ ಸರಿಯಾಗಿ ಪೀಠಿನೊಳಗೆ ಮನ... ಸಾಗರದಲ್ಲಿ ಅಣು ಬಾಂಬಿನ ಪ್ರಯೋಗ ನಡೆಸಲ್ಪಡುವುದು.

ಅದ್ಭುತ ವೇಗದ ವಿಮಾನ

ಗಂಟೆಗೆ ೬೨೫ ಮೈಲಿ ವೇಗವಾಗಿಯೂ, ೩೫೦ ಸಾವಿರ ಅಡಿ ಎತ್ತರದಲ್ಲಿಯೂ ಹಾರುವ ವಿಮಾನಗಳು ನಿರ್ಮಿತವಾಗಿವೆ.

ಹೂವಿನ ಅಡ್ಡಪಲ್ಲಕ್ಕಿ ಉತ್ಸವ

ಮೈಸೂರು ಸಿಟಿ ದೇವರಾಜ ಮೊಹಲ್ಲಾ ಬಿಡಾರಂ ಕೃಷ್ಣಪ್ಪನವರ ಬೀದಿಯಲ್ಲಿರುವ ಜತೂ, ಜನಗಳ ರಾಮಮಂದಿರದ ಸಮಿತಿಯವರಿಂದ ಸಂಭ್ರಮ ಸಂಚೆ ಶ್ರೀ ಚಾಮುಂಡೇಶ್ವರೀ ಅಮ್ಮನವರ ಅಡ್ಡ ಪಲ್ಲಕ್ಕಿ ಉತ್ಸವವು ೫ರವ ನೆ ಕಳೆದ ... ಮುಂಭಾಗದಿಂದ ಹೊರಟು ಸಂತೇಪೇಟೆ, ಬಿಡಾರಂ ಕೃಷ್ಣಪ್ಪನವರ ಬೀದಿ, ನಾರಾಯಣಶಾಸ್ತ್ರಿ ರೋಡು ಮತ್ತು ಶಿವರಾಂಪೇಟೆ ಮಾರ್ಗವಾಗಿ ರಾಮ ಮಂದಿರವನ್ನು ತಲುಪುವುದು.

ಫಾರ್ವರ್ಡ್ ಬ್ಲಾಕ್ ಮೇಲಿನ ಬಹಿಷ್ಕಾರ ಹೋಯಿತು

ಅಖಿಲ ಭಾರತ ಫಾರ್ವರ್ಡ್ ಬ್ಲಾಕಿನ ಮೇಲೆ ಹಾಕಿದ್ದ ಪ್ರತಿಬಂಧಕಾಜ್ಞೆಯನ್ನು ಸಂಯುಕ್ತ ಪ್ರಾಂತ್ಯ ಸರ್ಕಾರವು ತೆಗೆದು ಹಾಕಿದೆ.

ಅಂಬೇಡ್ಕರ್ ಗಾಂಧೀಜಿ ಭೇಟಿ

೧೫ ದಿನಗಳ ವಿಶ್ರಾಂತಿಗಾಗಿ ಪಂಚಗನಿಗೆ ಮೊನ್ನೆ ದಿನ ಪ್ರಯಾಣಬೆಳೆಸಿದ ಗಾಂಧೀಜಿಯವರು ಅಲ್ಲಿಂದ ವಾಪಸು ಬಂದಮೇಲೆ ಬೊಂಬಾಯಿಯಲ್ಲಿ ಡಾ॥ ಅಂಬೇಡ್ಕರರಿಗೆ ಭೇಟಿಕೊಡಲು ಸಮ್ಮತಿಸಿದ್ದಾರೆ.

ಮಳೆಯಿಂದ ಮಹಾ ನಾಶ

ಚಿತ್ತಗಾಂಗಿನಲ್ಲಿ ವಿಪರೀತ ಮಳೆ ಆಗಿ ಸುಮಾರು ೫೦ ಸಹಸ್ರ ಸಂಸಾರಗಳು ನಿರಾಶ್ರಿತರಾಗಿದ್ದಾರೆ. ಬ್ರಹ್ಮಪುತ್ರನದಿಯಲ್ಲಿ ಪ್ರವಾಹ ಉಕ್ಕುತ್ತಿದೆ. ಆಸ್ತಿ ಪಾಸ್ತಿಗಳ ನಷ್ಟ ಅಪಾರವಾಗಿ ಆಗಿದೆ.

ರಾಜ್ಯಾಂಗ ರಚನಾ ಸಭೆಗೆ ಮದ್ರಾಸ್ ಪ್ರತಿನಿಧಿಗಳು

ಮದ್ರಾಸ್ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಸದಸ್ಯರು ನಿನ್ನೆ ಶ್ರೀ ಟಿ. ಪ್ರಕಾಶಂರವರ ಅಧ್ಯಕ್ಷತೆಯಲ್ಲಿ ಸಭೆ ಸೇರಿ ತಮ್ಮ ಪ್ರಾಂತ್ಯದಿಂದ ೪೯ ಸಾರ್ವತ್ರಿಕ ಸ್ಥಾನಗಳಿಗೆ ಪ್ರತಿನಿಧಿಗಳನ್ನು ಆರಿಸುವ ಬಗ್ಗೆ ಅಭ್ಯರ್ಥಿಗಳನ್ನು ತೀರ್ಮಾನಿಸಿದರು. ಕಾಂಗ್ರೆಸ್ ಕಮ್ಯೂನಿಷ್ಟರು ... ಗಳನ್ನು ... ಮುಂದಿಯ ... ಪ್ರಧಾನ ಶ್ರೀ ಪ್ರಕಾಶಂ... ಸಭೆಯಲ್ಲಿ ... ೨೨ ಸೀಟುಗಳಿಗೆ ... ಆಯಿತು.

ಅಂಚೆ ಮುಷ್ಕರ ನಿಲ್ಲಿಸಲು ಅಧಿಕಾರಿಗಳ ಸಂಧಾನ

ಬೊಂಬಾಯಿಯಲ್ಲಿ ಪರಿಸ್ಥಿತಿ ತೀರಾ ಹದಗೆಟ್ಟಿದೆ. ತಂತಿ ಇಲಾಖೆಯ ನೌಕರರು ಮುಷ್ಕರಹೂಡಿದ್ದಾರೆ. ಮಿಲಿಟರಿಯವರ ಸಹಾಯ ನೀಡಿದರೂ ಪರಿಸ್ಥಿತಿ ಸುಧಾರಿಸಿಲ್ಲ. ಬೊಂಬಾಯಿನ ಪೋಸ್ಟ್ ಮಾಸ್ಟರ್ ಜನರಲ್‌ರವರು ಮುಷ್ಕರವನ್ನು ಕೊನೆಗಾಣಿಸುವ ಬಗ್ಗೆ ಸಂಧಾನಕ್ಕೆ ಆರಂಭಿಸುವ ಸಲುವಾಗಿ ಬೊಂಬಾಯಿ ಪ್ರತಿನಿಧಿಗಳಾದ ಶ್ರೀ ಮೇರ್ ಮತ್ತು ಅಂಚೆ ಕೆಲಸಗಾರರ ಪ್ರಧಾನ ಕಾರ್ಯದರ್ಶಿ ಶ್ರೀ ದಾಲ್ವಿಯವರನ್ನು ಭೇಟಿಮಾಡುವ ಸಲುವಾಗಿ ಪೂನಕ್ಕೆ ತೆರಳಲಿದ್ದಾರೆಂದು ವರದಿಯಾಗಿದೆ.

ಅಂಚೆ ನೌಕರರ ಬೇಡಿಕೆ ಸಾಧುವಾದದ್ದು :-ನೆಹರು

ಪಂ॥ ಜವಹರಲಾಲನೆಹರೂರವರು ಜಬ್ಬಲ್ಪುರದಿಂದ ಅಲಹಾಬಾದಿಗೆ ಪ್ರಯಾಣ ಮಾಡುತ್ತಿದ್ದಾಗ ಮಧ್ಯ ಮಾರ್ಗದಲ್ಲಿ ಅಂಚೆ ನೌಕರರು ರಾಷ್ಟ್ರಪತಿಗಳಿಗೆ ಗೌರವ ಸಮರ್ಪಿಸಿದಾಗ, "ನಿಮ್ಮ ಬೇಡಿಕೆಗಳು ಸಾಧುವಾದದ್ದು; ಸಾರ್ವಜನಿಕರ ಬೆಂಬಲ ನಿಮಗಿದೆ" ಎಂದು ನೆಹರೂರವರು ಅವರಿಗೆ ತಿಳಿಸಿದರು. ಅಂಚೆ ಅಧಿಕಾರಿಗಳ ರೀತಿ ಸರಿಯಿಲ್ಲವೆಂದು ರಾಷ್ಟ್ರಪತಿಗಳು ಹಿಂದೆ ಒಂದು ವರ್ಷದ ಹಿಂದೆ ಶ್ರೀ ಕೃಷ್ಣಪ್ರಸಾದರು ಅಂಚೆ ನೌಕರರ ಸಂಬಳದ ಬಗ್ಗೆ ಒಪ್ಪಿಸಿದ ವರದಿಯನ್ನು ಬಹಿರಂಗಪಡಿಸದಿರುವುದೇ ಇದಕ್ಕೆ ಸಾಕ್ಷಿಯಾಗಿದೆಯೆಂದರು. ಈ ಮುಷ್ಕರಕ್ಕೆ ಸರ್ಕಾರದವರೇ ಹೊಣೆಗಾರರೆಂದೂ, ಅವರು ಹೇಳಿದರು.

ನೆಹರೂರವರು ಸಿಲೋನಿಗೆ

ಪಂ॥ ಜವಹರಲಾಲ ನೆಹರೂರವರು ಸಿಲೋನಿನ ಭಾರತ ಕಾಂಗ್ರೆಸ್ ಅಧ್ಯಕ್ಷರಿಗೆ ತಂತಿ ಕಳಿಸಿ ತಾವು ಪಕ್ಷದಲ್ಲೇ ಅಲ್ಲಿಗೆ ಬರುವುದಾಗಿಯೂ, ಈ ಮಧ್ಯೆ ಕಸಿವೆ ನಡೆಸಿ ತಮಗೆ ವರದಿ ಒಪ್ಪಿಸಲು ಶ್ರೀ ರಾಮಚಂದ್ರ ಮತ್ತು ಶ್ರೀ ಆಯ್ಯಂಗಾರ್‌ರವರನ್ನು ಕಳುಹಿಸುವುದಾಗಿಯೂ ಪತ್ರ ತಿಳಿಸಿದ್ದಾರೆ.

ಕಾಂಗ್ರೆಸ್ ಅಧಿವೇಶನ

ಅಖಿಲ ಭಾರತ ಕಾಂಗ್ರೆಸ್ಸಿನ ... ಮುಂದಿನ ... ನಡೆಸಲು ... ಮತ್ತು ... ಗಾಂಧೀಜಿ ... ತಿಳಿಸಿದ್ದಾರೆ.

ಕಾಳಸಂತೆ ವ್ಯಾಪಾರಗಾರರಿಗೆ ಮರಣ ದಂಡನೆ

ಫ್ರಾನ್ಸಿನ ಆಹಾರ ಮಂತ್ರಿಗಳು ಕಾಳಸಂತೆ ವ್ಯಾಪಾರಗಾರರಿಗೆ ಮರಣದಂಡನೆ ವಿಧಿಸುವುದಾಗಿ ಘೋಷಿಸಿದ್ದಾರೆ. ಮಂತ್ರಿಗಳೂ ತಮ್ಮ ಈ ನಿರ್ಧಾರಕ್ಕೆ ಮಧ್ಯಮ ವರ್ಗದ ಮತ್ತು ಬಡಜನರ ಪೂರ್ಣ ಬೆಂಬಲವಿದೆಯೆಂದು ತಿಳಿಸಿ ಈ ಆಜ್ಞೆ ಹೊರಡಿಸಿದ್ದಾರೆ.

ಹೊಲಿಯುವ ದಾರಕ್ಕೆ ನಿರ್ಬಂಧ

ಕೇಂದ್ರ ಸರ್ಕಾರವು ೧೯೪೫ರಲ್ಲಿ ಹತ್ತಿ ಮತ್ತು ಅದರಿಂದ ತಯಾರಾಗುವ ಬಟ್ಟೆಗಳ ಕಾನೂನಿಗೆ ಒಂದು ತಿದ್ದುಪಡಿ ತಂದು, ಇನ್ನು ಮುಂದೆ ಹೊಲಿಯುವುದಕ್ಕೆ ದಾರವನ್ನು ತಯಾರು ಮಾಡುವವರು, ಟೆಕ್ಸ್‌ಟೈಲ್ ಅಧಿಕಾರಿಗಳಿಂದ ಅಪ್ಪಣೆಪಡೆದ ಅವರು ಹೇಳಿದ ರೀತಿಯಲ್ಲಿ ಮೇಲ್ಬಂದ ದಾರವನ್ನು ತಯಾರಿಸಬೇಕೆಂದು ಆಜ್ಞೆ ಮಾಡಲಾಗಿದೆ.

ಸರ್ಕಾರದ ಅಧೀನದಲ್ಲಿ ರಸ್ತೆಗಳು

ಬಿಹಾರ್ ಸರ್ಕಾರವು ಪ್ರಾಂತದಲ್ಲಿನ ರಸ್ತೆಗಳೆಲ್ಲವನ್ನೂ ನೇರವಾಗಿ ತನ್ನ ಅಧೀನಕ್ಕೆ ಪಡೆದುಕೊಂಡು ಸಂಚಾರ ಸೌಕರ್ಯವನ್ನು ಉತ್ತಮ ಪಡಿಸುವ ಮತ್ತು ಸರ್ಕಾರವೇ ಕೆಲವು ವಾಹನಗಳನ್ನು ನಡೆಸುವ ಯೋಜನೆಯನ್ನೂ ಸಹ ಸಿದ್ಧಗೊಳಿಸಿದೆಯೆಂದು ವರದಿಯಾಗಿದೆ.

ಆಗಸ್ಟ್ ೨೦ಕ್ಕೆ ರಾಜ್ಯಾಂಗ ಸಭೆ

ಭಾರತ ರಾಜ್ಯಾಂಗ ರಚನಾ ಸಭೆಯು ಆಗಸ್ಟ್ ೨೦ ರ ವೇಳೆಗೆ ಮತ್ತೊಮ್ಮೆ ಸಮಾವೇಶಗೊಳ್ಳುವುದೆಂದು ಅಧಿಕಾರಯುತವಾಗಿ ಹೇಳಲಾಗಿದೆ. ಈ ಸಭೆ ಸೇರುವ ವರೆಗೆ ತಾತ್ಕಾಲಿಕ ಸರ್ಕಾರದ ರಚನೆಯ ಬಗ್ಗೆಯೂ ಪ್ರಯತ್ನ ನಡೆಯುವುದಿಲ್ಲವೆಂದು ಊಹಿಸಲಾಗಿದೆ. ರಾಜ್ಯಾಂಗ ಸಭೆಗೆ ಚುನಾವಣೆಗಳು ಪ್ರಾಂತ್ಯಗಳಲ್ಲಿ ಜುಲೈ ೨೩ಕ್ಕೆ ಮುಕ್ತಾಯಗೊಳ್ಳುವುವು.

ಅಂಚೆ ನೌಕರರ ದಸ್ತಗಿರಿ

ಅಲಹಾಬಾದಿನಿಂದ ಬೊಂಬಾಯಿಗೆ ಹೊರಟಿದ್ದ ಮೇಲ್ ಟ್ರೈನಿಗೆ ಅಡ್ಡಲಾಗಿ ಮಲಗಿ ರೈಲು ಹೊರಡಲು ಅಡ್ಡಿ ಪಡಿಸಿದರೆಂಬ ಕಾರಣದ ಮೇಲೆ ಅಲಹಾಬಾದಿನ ಹದಿನೇಳು ಮಂದಿ ಅಂಚೆ ನೌಕರರ ದಸ್ತಗಿರಿಯಾಗಿದೆ.

ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯ

ಇದೇ ೨೦ ನೇ ತಾ॥ ರವಿವಾರದಿಂದ ಭಾರತಕ್ಕೂ ಇಂಗ್ಲೆಂಡಿಗೂ ಎರಡನೇ ಕ್ರಿಕೆಟ್ ಟೆಸ್ಟ್ ಪಂದ್ಯವು ಆರಂಭವಾಗುವುದು. ಇಂಗ್ಲೆಂಡಿನ ಕಡೆ ಈ ಬಾರಿ ಪ್ರಮುಖ ಆಟಗಾರರು ಆರಿಸಲ್ಪಟ್ಟಿದ್ದಾರೆ. ಪಂದ್ಯವು ಮ್ಯಾಂಚೆಸ್ಟರಿನಲ್ಲಿ ನಡೆಯುವುದು. ಇಂಗ್ಲೆಂಡಿನ ಕಡೆ ಹ್ಯಾಮಂಡ್ (ನಾಯಕರು) ಗಿಬ್, ಫೋರ್ಸ್, ... ಹಾರ್ಡ್‌ಸ್ಟಾಫ್, ... ಕ್ರಿಸ್ಟ್, ... ಇವರೆಲ್ಲರೂ ಆಡುತ್ತಾರೆ.

○ ... [illegible]

ಸಾಧ್ವಿ

ತಾ|| ೧೪-೭-೪೬ ಭಾನುವಾರ

ಸೌದೆ ಅಭಾವ

ನಿನ್ನೆಯದಿನ ಪ್ರಾತಃಕಾಲ ಬೆಳ್ಳಿಗ್ಗೆ ೧೧ ಗಂಟೆಗೆ ನಗರದ ಪತ್ರಿಕೋದ್ಯೋಗಿಗಳನ್ನು ನಮ್ಮ ಭವನಕ್ಕೆ ಬರಮಾಡಿಕೊಂಡು ಮೈಸೂರು ಜಿಲ್ಲೆಯ ಆಹಾರ ಪರಿಸ್ಥಿತಿಯ ವಿವರಗಳನ್ನು ಹೇಳಿದಾಗ, ಅಂಚೆ ಲಾರಿಗಳಿಂದ ಪ್ರಸ್ತಾಪ ಮಾಡಿದರು. ಅದೇ ಸಂದರ್ಭದಲ್ಲಿ ನಗರದಲ್ಲಿ ಉಂಟಾಗಿರುವ ಸೌದೆ ಅಭಾವದ ವಿಷಯವೂ ಪರಿಶೀಲನೆಗೆ ಬಂತು. ಈ ನಗರದಲ್ಲಿ ಗಾ ಹಾ ಕಾಣದಿಲ್ಲವೆಂತೆ ಎಲ್ಲರಿಗೂ ದೊರೆಯುತ್ತಿದ್ದ ನರದಲ್ಲಿ ಸೌದೆ ಸಿಗಲಂಬ ಘನ ಉಷ್ಣೋಗ್ರದಿಂದ ಪೌರಸಭೆಯು ಆಹಾರ ಪಾಟಿ ನನ್ನು ಮುನಿಸಿಪಾಲಿಟಿಗೆ ಸೇರಿದ ಹಲವು ಲಾರಿಗಳನ್ನು ಅದರ ಕಾಲಿ ಒಗ್ಗೆ ಬೇಕಾಗಿರುವ ನಾದ ಅವಶ್ಯಕ ಭಾಗಗಳನ್ನೂ ಇಲ್ಲದ ಕಂಟ್ರೋಲು ದರದಲ್ಲಿ ಪೆಟ್ರೋಲ್ ಅನ್ನು ಕೊಳ್ಳುವ ಸೌಕರ್ಯಗಳನ್ನೂ ಕಂಟ್ರಾಕ್ಟರುಗಳಿಗೆ ಒದಗಿಸಿಕೊಟ್ಟಿರುತ್ತದೆ. ಹೀಗಿದ್ದಾಗ್ಯೂ ಸೇಲ್ ಪ್ರೈಸ್ ಡಿಪೋಗಳ ಪಕ್ಕ ಟಂಗುತನಗಳಲ್ಲಿ ಸೌದೆಯೇ ಇರುವುದಿಲ್ಲ. ಎಲ್ಲೆಲ್ಲೂ ... ಹೀಗಾಗಿ ಖಾಸಗಿ ಡಿಪೋಗಳವರು ಮತ್ತೆ ವರದು ವ ... ಒಂದೊಂದು ಕ್ವಿಲು ಒಂದೂವರೆ ರೂಪಾಯಿಯಂತೆ ಮಾರುತ್ತಿದ್ದಾರೆ. ಹಲವರು ನವಗೆ ದೊರೆಯುವ ಪೆಟ್ರೋಲ್ ರಿಯಾಯಿತಿಯನ್ನು ಬೇರೆ ಬೆಲೆಗಳಿಗೆ ವಿಕ್ರಯ ಗಿಸಿಕೊಂಡು ಪಕ್ಕದಿಂದ ಬರುವ ಸೌದೆ ಗಾಡಿಗಳನ್ನು ಕೊಂಡು ಬೇರೆ ಕಡೆ ವ್ಯಾಪಾರ ಮಾಡುತ್ತಿರುವುದರಿಂದ ಸಾರ್ವಜನಿಕರಿಗೆ ಸಿಗಬೇಕಾದ ಸೌದೆ ... ಪ್ರವಿದಕ್ಕೆ ... ಹೇಳಿದರು ... ಸೌದೆಯೂ ಕೂಡ ... ಭವನಗಳಿಗೂ ಹಚ್ಚುವ ಬೆಲೆಗೆ ಮಾರಲ್ಪಡುತ್ತಿರುವುದರಿಂದ ಸೌದೆಗೆ ಅಭಾವವು ಹೆಚ್ಚಿ ನಗರವಾಸಿಗಳಿಗ ತೊಂದರೆಗಳು ಕಾರಣವಾಯಿತೆಂದೂ ಬಲವರು ತಿಳಿಸಿದರು.

ಲಾರಿಗಳು ಸ್ವಾಧೀನ ... ಯಲ್ಲೇ ಧರ್ಮವಾಗಿ ಬಂದರು. ಬೇಗನೆ ಬೇಳೆಗೇ ಅದು ... ಡಿಪೋಗಳಿಂದಲ್ಲೂ ಇರಲಿ ಮಾಯವಾಗಿ ಬಿಡುವುದು ಒಂದು ಚೋದ್ಯವಾಗಿದೆ. ... ಪೌರ ಸಭಾಧಿಕಾರಿಗಳಲ್ಲಿ ... ಪ್ರಸ್ತುತ ... ಎಲ್ಲಾ ... ಸೌದೆ ... ಆದರೆ ... ನ್ಯಾಯವಾದ ವ್ಯಾಪಾರ ನಡೆಯುತ್ತಿದೆ

ಗಾವ ... ನೀಡಲ್ಪ ... ಶ್ರೀ ... ಸ್ಕೊಲಿಂಗ್ ... ಪ್ರೆಸ್, ...

ಲಾರಿಗಳಿಗೆ ಕೊಡುತ್ತಿರುವ ಪೆಟ್ರೋಲ್ ಅವುಗಳು ಪ್ರತಿದಿನವೂ ತರುತ್ತಿರುವ ಸೌದೆ ಪ್ರಮಾಣ ಇವುಗಳ ವಿವರಗಳನ್ನು ಪೌರ ಸಭಾಧ್ಯಕ್ಷರವರು ಒದಗಿಸಿದರು. ಅವುಗಳ ಪ್ರಕಾರ ಈ ಊರಿನ ನಿವಾಸಿಗಳಿಗೆ ಸೌದೆ ಅಭಾವವು ಸ್ಪಷ್ಟವಾಗಲು ಕಾರಣವೇ ಇಲ್ಲವೆಂದು ಅಧ್ಯಕ್ಷರು ಹೇಳಿದರು. ಆದರೆ ಸೌದೆಯನ್ನು ತರುವ ಲಾರಿಗಳು ಡಿಪೋಗಳಿಗೆ ಬರದೆ ಹೋಟೆಲುಗಳಿಗೆ ನೇರವಾಗಿ ಸರಬರಾಜು ಮಾಡುತ್ತಿರುವುದೇ ಅಭಾವಕ್ಕೆ ಕಾರಣವೆಂದು ಸದಸ್ಯರು ತಿಳಿಸಿದರು. ಇಂದಿಗೂ ಈ ಸಮಸ್ಯೆಯು ಪರಿಹಾರವಾಗಿಲ್ಲ. ಪೌರ ಸಭೆಯವರು ಕಂಟ್ರಾಕ್ಟರುಗಳಿಗೆ ಒದಗಿಸಿರುವ ಸೌಲಭ್ಯಗಳು ಸಾರ್ಥಕವಾಗುತ್ತಿಲ್ಲ.

ಇದಕ್ಕೆ ಇರುವ ಪರಿಹಾರ ಮಾರ್ಗವು ಒಂದೇ. ಬೆಂಗಳೂರಿನಲ್ಲಿರುವಂತೆ ಇಲ್ಲಿಯೂ ಸೌದೆ ಮಾರಾಟದ ಕಂಟ್ರೋಲನ್ನು ಸರ್ಕಾರದವರು ತಮ್ಮ ಆಡಳಿತಕ್ಕೆ ತೆಗೆದು ಕೊಳ್ಳಬೇಕು. ಎಲ್ಲಾ ಡಿಪೋಗಳನ್ನೂ ಸರ್ಕಾರದವರು ವ್ಯವಸ್ಥೆ ನಡೆಸುವ ... ದರದಲ್ಲಿಯೇ ಮಾರಾಟ ಮಾಡಬೇಕು. ಈ ನಿಯಮವನ್ನು ಕಟ್ಟುನಿಟ್ಟಾಗಿ ಪಾಲಿಸುವಂತೆ ಡಿಪೋಗಳವರನ್ನು ಒತ್ತಾಯಪಡಿಸಬೇಕು. ನಗರಕ್ಕೆ ಬರುವ ಸೌದೆಯನ್ನೆಲ್ಲಾ ಸರ್ಕಾರವೇ ವಶಪಡಿಸಿಕೊಂಡು ನಿರ್ದಿಷ್ಟವಾದ ದರದಲ್ಲಿ ಎಲ್ಲಾ ಡಿಪೋಗಳಿಗೂ ಸರಬರಾಜು ಮಾಡತಕ್ಕ ಏರ್ಪಾಟನ್ನೂ ಸರ್ಕಾರವೇ ವಹಿಸಿಕೊಳ್ಳಬೇಕು. ಹೀಗಾದಲ್ಲಿ ಮಾತ್ರ ಈಗಿರುವ ಸೌದೆ ಅಭಾವ ... ದೂರವಾಗ ... ಈ ಎಲ್ಲಾ ... ಸರ್ಕಾರದವರು ... ಕ್ರಮಗಳನ್ನು ಕೈಗೊಂಡು ಅನ್ನಾಹಾರಕ್ಕೆ ... ಭಾಜನರಾಗಲೆಂದು ಹಾರೈಸುತ್ತೇವೆ.

ಆಜಾದ್-ಗಫಾರ್‌ಖಾನರ ಅಭಿಪ್ರಾಯ

ಗಡಿನಾಡಿನ ಶಾಸನ ಸಭೆಯಿಂದ ಭಾರತ ರಾಜ್ಯಾಂಗ ರಚನಾ ಸಭೆಗೆ ಮೌ|| ಅಬ್ದುಲ್ ಕಲಾಂ ಆಜಾದರೂ, ಖಾನ್ ಅಬ್ದುಲ್ ಗಫಾರ್‌ಖಾನರೂ, ಲೀಗಿನ ಸರ್ದಾರ್ ಒಬ್ ... ರವರೂ ... ಆರಿಸಲ್ಪಟ್ಟಿದ್ದಾರೆ.

ಭಾರತದಲ್ಲೆಲ್ಲಾ ಮೈಸೂರಿನಲ್ಲೇ ಅಧಿಕ ಆಹಾರಾಭಾವ

"ಭಾರತದಲ್ಲೆಲ್ಲಾ ಮೈಸೂರು ಸಂಸ್ಥಾನದಲ್ಲಿ ಆಹಾರದ ಅಭಾವ ಅಧಿಕವಾಗಿದೆ. ಭಾರತ ಸರ್ಕಾರದವರು ಕೂಡಲೇ ಅಲ್ಲಿಗೆ ಉದಾರ ನೀತಿಯಿಂದ ಆದಷ್ಟು ಹೆಚ್ಚಿಗೆ ಧಾನ್ಯಗಳನ್ನು ಸರಬರಾಜು ಮಾಡಬೇಕಾಗಿದೆ"-ಎಂದು ಸರ್ವೆಂಟ್ಸ್ ಆಫ್ ಇಂಡಿಯಾ ಸೊಸೈಟಿ ಅಧ್ಯಕ್ಷರಾದ ಪಂ|| ಹೃದಯನಾಥ ಕುಂಜ್ರುರವರು ತಿಳಿಸಿದ್ದಾರೆ.

ಇಟಲಿಯಲ್ಲಿ ಹೊಸ ಸರ್ಕಾರ

ಸಿನೋರ್ ಡಿಗಸ್ಪೆರಿಯವರ ಮುಖ್ಯಮಂತ್ರಿತ್ವದಲ್ಲಿ ಇಟಲಿಯಲ್ಲಿ ಹೊಸ ಮಂತ್ರಿಮಂಡಲ ರಚನೆಯಾಗಿದೆ. ಇದರಲ್ಲಿ ಕ್ರಿಶ್ಚಿಯನ್ ಡೆಮೊಕ್ರಾಟಿಕ್ ಪಕ್ಷಕ್ಕೆ ೮ ಸ್ಥಾನಗಳೂ, ಸೋಷಿಯಲಿಸ್ಟರಿಗೂ, ಕಮ್ಯುನಿಸ್ಟರಿಗೂ ತಲಾ ೪ ಸ್ಥಾನಗಳೂ, ಉಳಿದ ನಾಲ್ಕು ಸ್ಥಾನಗಳು ರಿಪಬ್ಲಿಕನ್ನರಿಗೂ, ಸ್ವತಂತ್ರರಿಗೂ ಕೊಡಲ್ಪಟ್ಟಿವೆ

ಮುಂದಿನ ಹೋರಾಟಕ್ಕೆ ಸಿದ್ಧತೆ

ಭಾರತ ರಾಜ್ಯಾಂಗ ರಚನಾ ಸಭೆಯ ವಿಚಾರದಲ್ಲಿ ತನಗೆ ನಂಬಿಕೆ ಇಲ್ಲವೆಂದೂ, ಆದ್ದರಿಂದ ಮುಂದಿನ ಹೋರಾಟಕ್ಕೆ ಈಗಿನಿಂದಲೇ ಸಿದ್ಧತೆಗಳನ್ನು ಮಾಡಿಕೊಳ್ಳಬೇಕೆಂದೂ ಶ್ರೀ ಜೈಪ್ರಕಾಶ ನಾರಾಯಣ್‌ರವರು ಸೂಚನೆ ಇತ್ತಿದ್ದಾರೆ.

ಗಾರಿಶಂಕರ್

ಸರ್ವ ಶ್ರೇಷ್ಠವಾದ ಈ ಶಿಖರವು ಹಿಮಾಲಯದಲ್ಲಿದೆ ಎಂಬ ... ನಮಗೆ ಗೊತ್ತಿರಬಹುದು. ಆದರೆ ... ಸಂಬಂಧದ ... ದೇಹ ಇರತಕ್ಕವರಿಗೆ ಸರ್ವ ಶ್ರೇಷ್ಠವಾದ ಔಷಧಿಯೆಂದು ಎಂ ... ವರ್ಷಗಳಿಂದ ಪ್ರಖ್ಯಾತವಾದ "ಸಂತಾನ ಸಿಂಧೂರ" ಎಂಬ ಔಷಧಿಯ ... ಪ್ರಯೋಗದಿಂದ ... ಸ್ತ್ರೀಯರಿಗೆ ... ಇಲ್ಲಿನ ... ಯಾವತ್ತೂ ... ಊರುಗಳಲ್ಲಿ ಪ್ರ ... ಸಂತೋಷ ... ಪ್ರಶಂಸೆ ನಡೆದಿದೆ, ಇತ್ಯಾದಿ ವಿಷಯಗಳು ಗೊತ್ತಿರಬಾರದು ಗೊತ್ತಾಗಬೇಕಾದರೆ ಹನ್ನೆರಡು ಪುಟಗಳ ಕ್ಯಾಟಲಾಗ್ ನೋಡಿರಿ. ಬರೆದರೆ ಬಿಟ್ಟಿ ರವಾನೆ

ಎ. ರಾಮಸ್ವಾಮಿ ಅಯ್ಯರ್,

ಪ್ರೊಪ್ರೈಟರ್, "ಸಂತಾನ ಸಿಂಧೂರ" ಆಫೀಸ್, ಅಂಚೆ, ಯಳಂದೂರು.

ಅಂಚೆ ಮುಷ್ಕರ ಪ್ರಬಲವಾಗುತ್ತಿದೆ

ಮುಷ್ಕರ ಮುರಿಯಲು ಸರ್ಕಾರದ ಪ್ರಯತ್ನ

ಅಂಚೆ ನೌಕರರ ಮುಷ್ಕರ ಪ್ರಬಲವಾಗುತ್ತಿದೆ. ಮುಷ್ಕರದವರ ... ಬೇರೆಯವರನ್ನು ನೇಮಿಸಿಕೊಳ್ಳಲು ... ಪಟ್ಟ ಪ್ರಯತ್ನಗಳು ... ಗತ್ತಿವೆ. ... ನಾನಾ ಕಡೆಗಳಿಂದ ... ಭಾಗಗಳು ... ವಾಗಿರುವುವಾಗಿ ಗೊತ್ತಾಗಿದೆ. ಮುಷ್ಕರ ಹಿಡಿದಿರುವವರ ... ಗಳನ್ನು ದಿನಕ್ಕೆ ... ವುದಾಗಿ ಪ್ರಕಟವಾಗಿತ್ತು. ... ನಕ್ಕೆ ಯಾರೂ ಬರುತ್ತಿಲ್ಲವೆಂದು ... ಗೆ ತಿಳಿಸಿದ್ದಾರೆ. ಆದ್ದರಿಂದ ... ಟಿಯವರ ... ಚನೆ ನಡೆದಿದೆ. ... ತಂಚಿಕೆಗಾಗಿ ... ಪಯೋನೀರ್ ಸೈನಿಕರು ... ಹಾಬಾದ್, ... ರದಲ್ಲಿ ... ಮುಷ್ಕರವಾಗುತ್ತಿ ... ನು ... ದರೆ ... ನೆಂದು ... ಸವ ... ನಿರ್ಧರಿಸಿದ್ದಾರೆಂದು ಶ್ರೀ ... ಸ್ಪೋಟಿಸಿದ್ದಾರೆ. ಇವರು ನಿನ್ನೆ ಗಾಂಧಿಯವರನ್ನು ಭೇಟಿಮಾಡಿ ... ಯನ್ನು ವಿವರಿಸಿದ್ದಾರೆ.

... ಮುಂದುವರಿಯುತ್ತಿದೆ ... ಮುಷ್ಕರ ... ಕಾರರು ... ಬಂದಿರುವುದರಿಂದ ಮೈಸೂರು ... ಮುಷ್ಕರ ನಡೆಯುವ ಸೂಚನೆಗಳು ಬರುತ್ತಿವೆ. ಭಾರತಾದ್ಯಂತ ... ನಡೆಯುತ್ತಿರುವ ... ವನ್ನು ಮುಂದಿರಿಸಿ ಸರ್ಕಾರದ ... ಲಕ್ಷ ರೂಗಳನ್ನು ಹೆಚ್ಚು ಮಾಡಲು ... ವರದಿಯಾಗಿದ ... ರಲ್ಲಿ ಒಟ್ಟು ... ಹೆಚ್ಚು ... ತ್ತಿದೆ

ರಾಜಾ ಕಮಲ್ ಟಾಕೀಸ್, ಮೈಸೂರು

1946 ನೇ ಜುಲೈ 10 ನೇ ಬುಧವಾರದಿಂದ ಪ್ರಾರಂಭ

ರಾಜ್ ಕಮಲ್ ರವರ

- ಪಟಿ ತ್ ಪೆ ಅಫ್‌ಸಾನ ಡೇರ -

ಮುಖ್ಯ ಭೂಮಿಕೆಯಲ್ಲಿ: ವನಮಾಲಾ, ಉಲ್ಲಾಸ್ ... ದಿಗ್ದರ್ಶನ: ಶ್ರೀ|| ಶಾಂತಾರಾಮ್

... ಪ್ರತಿ ... ಮನರಂಜನೆಗಾಗಿ ... ಮಾಡುವ ...

... ಮಧ್ಯಾಹ್ನ ... ಗಂಟೆಗೆ ...

ನಾಳೆಯಿಂದ ಚಾಮುಂಡೇಶ್ವರಿ ಟಾಕೀಸಿನಲ್ಲಿ ಪ್ರತಿದಿನ ೩ ಆಟಗಳು

ಯಾಕೂಬ್ ನ...

ಯಾತ್ರಿ (YATEE...

(ಹಿಂದಿ)

(ಪ್ರತಿಯೊಬ್ಬ ದೇಶಪ್ರೇ... ನೋಡಬೇಕಾದ ಚಿತ್ರ...

A Sri ... Film ... Mysore.

Edited, printed and ... by ... Iyengar at the S... D... Road, Mysore

ಫೋನ್ ನಂ. 393 WEEKLY EDITION ಇಂದಿನ ಪತ್ರಿಕೆ 6 ಕಾಸು

ಸಂಪುಟ ೧೦] ಸೋಮವಾರ ೧೫—೭—೪೬ [ಸಂಚಿಕೆ ೪೪

ರಾಜಧಾನಿಯಲ್ಲಿ ನಾಳೆಯಿಂದ ಅಂಚೆ ಮುಷ್ಕರ

ರಾಜಧಾನಿಯಲ್ಲೂ ಅಂಚೆ ನೌಕರರ ಮುಷ್ಕರ

ವಿಶೇಷ ಸಭೆಯಲ್ಲಿ ನಿರ್ಣಯ

ಮೈಸೂರು ೧೩

ನಿನ್ನೆ ಸಂಜೆ ಮೈಸೂರು ಪೋಸ್ಟ್ ಮತ್ತು ಕೆಳ ದರ್ಜೆಯ ನೌಕರರ ಸಂಘದ ವಿಶೇಷ ಸಭೆಯು ಕಾಂಗ್ರೆಸ್ ಕಛೇರಿಯಲ್ಲಿ ಶ್ರೀ ಎಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ನಡೆಯಿತು. ಅಧ್ಯಕ್ಷರು ಸಭೆಯ ಉದ್ದೇಶವನ್ನು ತಿಳಿಸಿದರು. ಈ ದಿವಸ ರಾತ್ರಿ ೭ ಘಂಟೆಯಿಂದ ಮುಷ್ಕರ ನಡೆಸಬೇಕೆಂಬ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು. ಇದಕ್ಕಾಗಿ ಮುಷ್ಕರ ಸಮಿತಿಯೊಂದು ರಚಿಸಲ್ಪಟ್ಟು ಶ್ರೀ ವೆಂಕಟಾಚಲಂರವರು ಅದರ ಸಂಚಾಲಕರಾಗಿ ಆರಿಸಲ್ಪಟ್ಟಿದ್ದಾರೆ. ಇದಲ್ಲದೆ ಶ್ರೀ ಹೆಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ ಏಳು ಜನ ಸದಸ್ಯರನ್ನೊಳಗೊಂಡ ಒಂದು ಚಂದಾ ಸಮಿತಿಯನ್ನೂ ಸಹ ರಚಿಸಲಾಯಿತು.

ಈ ಮುಷ್ಕರದ ಬಗ್ಗೆ ಟಪಾಲು ಅಧಿಕಾರಿಗಳಿಗೆ ೨೪ ಘಂಟೆ ಪೂರ್ವಭಾವಿಯಾಗಿ ನೋಟೀಸನ್ನು ಕೊಡಲಾಯಿತು.

ಸ್ಥಳೀಯ ಪೋಸ್ಟಲ್ ಸೂಪರಿಂಟೆಂಡೆಂಟ್ ಅಂಚೆ ಕಾಗದ ಪತ್ರಗಳ ಹಂಚಿಕೆಬಗ್ಗೆ ನಗರದಲ್ಲಿ ೩೬ ಕೇಂದ್ರಗಳನ್ನು ವ್ಯವಸ್ಥೆ ಮಾಡಲಿರುವರೆಂದು ಗೊತ್ತಾಗಿದೆ. ನಗರದ ಮುಖಂಡರ ಮತ್ತು ಸ್ಕೌಟುಗಳ ಸಹಕಾರವನ್ನು ಅವರು ಕೋರಿದ್ದಾರೆ.

ದೇವರಾಜಮೊಹಲ್ಲಾ ಕಾಂಗ್ರೆಸ್ ಸಮಿತಿ

ದೇವರಾಜಮೊಹಲ್ಲಾ ಕಾಂಗ್ರೆಸ್ ಪ್ರತಿನಿಧಿಗಳ ಸಭೆಯು ನಿನ್ನೆ ಸಾಯಂಕಾಲ ೬ ಗಂಟೆಗೆ ಕಾಂಗ್ರೆಸ್ ಕಛೇರಿಯಲ್ಲಿ ಸೇರಿ ಸಾಲಿಗೆ ಶ್ರೀ ಹೆಚ್. ಸಿ. ದಾಸಪ್ಪನವರನ್ನು ಅಧ್ಯಕ್ಷರನ್ನಾಗಿಯೂ ಶ್ರೀ ಚೌಡಯ್ಯನವರನ್ನು ಉಪಾಧ್ಯಕ್ಷರು ಮತ್ತು ಖಜಾಂಚಿಯಾಗಿಯೂ, ಶ್ರೀ ಎ. ರಾಮಣ್ಣನವರನ್ನು ಕಾರ್ಯದರ್ಶಿಯನ್ನಾಗಿಯೂ ಆರಿಸಲಾಯಿತು.

ನಂತರ ದೇವರಾಜಮೊಹಲ್ಲಾ ಕಾಂಗ್ರೆಸ್ ಕಛೇರಿಯನ್ನು ವಿಜಯಾ ಬಿಲ್ಡಿಂಗ್ಸ್ ಆವರಣದಲ್ಲಿ ತೆರೆಯುವುದೆಂದೂ, ಪಡಿತರ ಅಂಗಡಿಗಳಲ್ಲಿ ರೇಷನ್ ಡಿಪೋಗಳಲ್ಲಿ ಧಾನ್ಯ ಹಂಚಿಕೆಯು ಸರಿಯಾಗಿ ನಡೆಯುವುದು ಎಂಬುದನ್ನು ಪರಿಶೀಲಿಸಲು ಸದಸ್ಯರು ಆಗಾಗ್ಗೆ ಭೇಟಿ ಕೊಡಬೇಕೆಂದೂ ಈಗ ನಡೆಯುತ್ತಿರುವ ಮೋಸಗಾರಿಕೆಯನ್ನು ತಪ್ಪಿಸಿ ಏಳ ಸದಸ್ಯರ ಅವರಿಗೆಯನ್ನು ಏರ್ಪಡಿಸಬೇಕೆಂಬ ನಿರ್ಣಯವು ಸರ್ವಾನುಮತದಿಂದ ಅಂಗೀಕೃತವಾಯಿತು.

ಸಿಂಧ್ ಶಾಸನ ಸಭೆ ಮುಂದುವರಿಯಿತು

ರಾಜ್ಯಾಂಗ ರಚನಾ ಸಭೆಗೆ ೩ ಪ್ರತಿನಿಧಿಗಳು ಚುನಾಯಿಸಿದನಂತರ ಸಿಂಧ್ ಶಾಸನಸಭೆಯನ್ನು ಮುಂದಕ್ಕೆ ಹಾಕಲಾಗಿದೆ ಎಂದು ಗವರ್ನರು ತಿಳಿಸಿದ್ದಾರೆ. ಇದರಿಂದ ವಿರೋಧಪಕ್ಷದವರು ಮಂತ್ರಿಮಂಡಲದ ಮೇಲೆ ಅವಿಶ್ವಾಸ ಸೂಚಿಸಲು ಅವಕಾಶವಿಲ್ಲ. ತಮ್ಮ ಮಂತ್ರಿಮಂಡಲವನ್ನು ಉರುಳಿಸುವುದಕ್ಕಾಗಿ ಸಾರ್ವತ್ರಿಕ ಚುನಾವಣೆ ಬೇಕೆಂದು ಶಾಸನಸಭೆ ಒತ್ತಾಯಪಡಿಸುತ್ತಿರುವ ಅಲ್ಲಿನ ಪ್ರಧಾನಿಗಳು ತಿಳಿಸಿದ್ದಾರೆ.

ಪುದುಕೋಟೆಯಲ್ಲಿ ಸುಧಾರಣೆ ?

ತಮ್ಮ ಸಂಸ್ಥಾನದಲ್ಲಿ ಜವಾಬ್ದಾರಿ ಸರಕಾರವನ್ನು ಸ್ಥಾಪಿಸಬೇಕೆಂದು ಪುದುಕೋಟೆ ಮಹಾಜನ ಸಭೆಯವರು ಮಾಡಿದ ನಿರ್ಣಯಕ್ಕೆ ಉತ್ತರವೀಯುತ್ತಾ "ಭಾರತ ದಾದ್ಯಂತವೂ ಆಗುತ್ತಿರುವ ರಾಜಕೀಯ ಬದಲಾವಣೆಗಳನ್ನು ಗಮನದಲ್ಲಿಟ್ಟುಕೊಂಡು, ತಮ್ಮ ಸಂಸ್ಥಾನದಲ್ಲಿ ಅಗತ್ಯವಾದ ಸುಧಾರಣೆಗಳನ್ನು ಬೇಗನೆ ತರಲಾಗುವುದು" ಎಂದು ಅಲ್ಲಿನ ಮಹಾರಾಜರವರು ತಿಳಿಸಿದ್ದಾರೆ.

ವಿವಾಹ ಮಹೋತ್ಸವಗಳು

ಕೃಷ್ಣರಾಜಸಾಗರದ ಸೈಟ್ ಕೀಪರ್, ಶ್ರೀ ಹೆಚ್. ಕೃಷ್ಣರಾಯರು ತಮ್ಮ ಕುಮಾರಿ ಚಿ॥ ಹೆಚ್. ವಾಸುದೇವರಾವ್ ರಿಗೆ ಮೈಸೂರು ಮಹಾರಾಜಾ ಸಂಸ್ಕೃತ ಕಾಲೇಜಿನ ಪ್ರಿನ್ಸಿಪಾಲರಾಗಿದ್ದ ದಿ॥ ಎಸ್. ಬಿ. ಕೃಷ್ಣಮೂರ್ತಿಗಳ ಪುತ್ರಿ ಸೌ॥ ಜಯಂತಿ ಬಾಯಿಯವರನ್ನು ತಂದುಕೊಂಡು ಈದಿನ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು.

ದಿ॥ ಅಮಲ್ದಾರ್ ಟಿ. ನಾರಣಯ್ಯನವರ ಮಗ ಚಿ॥ ಸುಬ್ಬರಾಮಯ್ಯನವರು ತಮ್ಮ ಕುಮಾರಿ ಸೌ॥ ಶಾಂತಾ ಎಂಬ ಕನ್ಯೆಯನ್ನು ನ್ಯಾಯ ಧುರೀಣರಾಗಿದ್ದ ಶ್ರೀ ಟಿ. ಎಸ್. ಬಾಲಸುಬ್ರಹ್ಮಣ್ಯ ಅಯ್ಯರ್ ರವರ ಕುಮಾರ, ಚಿ॥ ಬಿ. ಎಸ್. ಸುಬ್ರಹ್ಮಣ್ಯ ಎಂಬ ವರನಿಗೆ ಕೊಟ್ಟು ಈದಿನ ರಾಜಧಾನಿಯಲ್ಲಿ ವಿವಾಹವನ್ನು ನೆರವೇರಿಸಿದರು.

ಆದಿಕರ್ನಾಟಕರಿಗೆ ರೋಮ್ಯಾ ಪಾತ್ರೆ ಕಿರುಕುಳವೇ ?

ಚಾಮರಾಜನಗರದ ಶಾಸಕ ಶ್ರೀ ಸಂಜೀವ ಕಳ್ಳಿಗಾ ಮುದಲ್ಲಿ ಆದಿಕರ್ನಾಟಕರಿಗೆ ಮನೆಕಟ್ಟಿಕೊಳ್ಳಲು ನಿವೇಶನಗಳನ್ನು ಕೊಡಲಾಗಿದೆ. ರೋಮ್ಯಾ ಕ್ಯಾಥಲಿಕ್ ಪಾದ್ರಿಗಳೊಬ್ಬರು ಆ ನಗರದ ಅಮಲ್ದಾರರಿಂದ ಹಕ್ಕುಪತ್ರಗಳನ್ನು ಪಡೆದು, ಆ ಸ್ಥಳಕ್ಕೆ ಪೋಲೀಸನ್ನು ಕರೆತಂದು ಹರಿಜನರಿಗೆ ಕಿರುಕುಳ ಕೊಡುತ್ತಿದ್ದಾರೆ. ಆ ನಿವೇಶನಗಳನ್ನು ತಮ್ಮ ಮಠಕ್ಕೆ ಸಂಪಾದಿಸಲು ಹರಿಜನರಿಗೆ ತೊಂದರೆ ಕೊಡುವ ಪ್ರಯತ್ನ ನಡೆಯುತ್ತಿದೆ. ಇದು ನ್ಯಾಯವೇ? ಹರಿಜನರಿಗೆ ರಕ್ಷಣೆ ದಿಕ್ಕಿಲ್ಲವೇ?

ಟಿ. ಎಸ್. ಸುಬ್ಬಣ್ಣ.

ಮದ್ರಾಸಿನಲ್ಲೂ ಅಂಚೆ ನೌಕರರ ಮುಷ್ಕರ

ಮೊನ್ನೆ ರಾತ್ರಿ ೨ ಗಂಟೆಯಿಂದ ಮದ್ರಾಸಿನಲ್ಲಿ ಅಂಚೆ ನೌಕರರು ಮುಷ್ಕರ ಆರಂಭಿಸಿದರು. ಅಂಚೆ ಕಛೇರಿಗಳ ಬಳಿಯಲ್ಲಾ ಪಿಕೆಟಿಂಗ್ ಮಾಡಲಾಗಿದೆ. ಅಂಚೆ ಶಾಖೆಯ ೬೦೦ ಮಂದಿಯೂ, ತಂತಿ ಶಾಖೆಯ ೧೫೦ ಮಂದಿಯೂ ಈ ಮುಷ್ಕರದಲ್ಲಿ ಭಾಗಿಗಳಾಗಿದ್ದಾರೆ. ಅಂಚೆ ನೌಕರರ ಸಂಘದ ಅಧ್ಯಕ್ಷರಾದ ಶ್ರೀ ವೆಂಕಟೇಶಯ್ಯಂಗಾರ್ ರವರು ಮುಷ್ಕರವನ್ನು ವಿರೋಧಿಸಿದ್ದರಿಂದ ಕೆಲಸಗಾರರು ಆಕ್ಷೇಪಿಸಿದರಾಗಿ, ಅವರ ಮೇಲೆ ಬಿದ್ದರೆಂದು ಒಂದು ವರದಿ ತಿಳಿಸುತ್ತದೆ.

ಇತರ ಕಡೆಗಳಲ್ಲೂ ಮುಷ್ಕರವು ಶಾಂತರೀತಿಯಿಂದ ಸಾಗುತ್ತಿರುವುದಾಗಿ ಗೊತ್ತಾಗಿದೆ. ಅಲಹಾಬಾದಿನಲ್ಲಿ ಪಿಕೆಟಿಂಗ್ ನಡೆಸುತ್ತಿದ್ದ ೨೧ ಮಂದಿ ಅಂಚೆ ನೌಕರರ ದಸ್ತಗಿರಿಯಾಗಿರುವುದಾಗಿ ಗೊತ್ತಾಗಿದೆ.

ರಾಜ್ಯಾಂಗ ಸಭೆಗೆ ಆಜಾದ್ ಅಧ್ಯಕ್ಷರೇ ?

ಭಾರತ ರಾಜ್ಯಾಂಗ ರಚನಾ ಸಭೆಯ ಅಧ್ಯಕ್ಷ ಸ್ಥಾನಕ್ಕೆ ಮೌಲಾನಾ ಆಜಾದ್ ರವರನ್ನು ಕಾಂಗ್ರೆಸ್ ಪರವಾಗಿ ನಿಲ್ಲಿಸುವರೆಂದು ಗೊತ್ತಾಗಿದೆ.

ಭೇಟಿ ನಿರಾಕರಣೆ

ಸಿಂಧ್ ಶಾಸನ ಸಭೆಯ ವಿರೋಧ ಪಕ್ಷದ ನಾಯಕರಾದ ಜಿ॥ ಸೈಯದ್ ರವರಿಗೆ ಅಲ್ಲಿನ ಗವರ್ನರು ಭೇಟಿ ಕೊಡಲು ನಿರಾಕರಿಸಿದ್ದಾರೆ.

ಅಂಚೆ ಮುಷ್ಕರದ ಸಂಧಾನ ಮುಂದುವರಿಯುತ್ತಿದೆ

ಅಂಚೆ ಮುಷ್ಕರವನ್ನು ನಿಲ್ಲಿಸುವ ಬಗ್ಗೆ ಪೂರ್ವಭಾವಿಯಾಗಿ ಸಂಧಾನವು ಹಿಂದುಸ್ತಾನದ ಪ್ರಧಾನಿ ಶ್ರೀ ಬಿ. ಜಿ. ಖೇರ್, ಶ್ರೀ ಮಂಗಳದಾಸ್ ಪಕ್ವಾಸ ಮತ್ತು ಅಂಚೆ ನೌಕರರ ಸಂಘದ ಕಾರ್ಯದರ್ಶಿ ಮಿ॥ ದಾಲ್ವಿಯವರ ಸಮ್ಮುಖದಲ್ಲಿ ಬೊಂಬಾಯಿನ ಪೋಸ್ಟ್ ಮಾಸ್ಟರ್ ಜನರಲ್ ರವರು ಮಾತುಕಥೆಗಳನ್ನು ನಡೆಸಿದರು. ಆದರೆ ಇನ್ನೂ ಯಾವ ನಿರ್ಧಾರಕ್ಕೂ ಬಂದಿಲ್ಲವೆಂದು ವರದಿಯಾಗಿದೆ.

೯ ಕೋಟಿ ರೂ ಗಳಲ್ಲಿ ಲಕ್ಕವಳ್ಳಿ ಜಲಾಶಯ

ಭದ್ರಾ ನದಿಗೆ ಲಕ್ಕವಳ್ಳಿ ಬಳಿ ಒಂದು ಭಾರಿ ಜಲಾಶಯವನ್ನು ೯ ಕೋಟಿ ರೂ ಗಳಲ್ಲಿ ನಿರ್ಮಿಸಲು ಮೈಸೂರು ಸರ್ಕಾರದವರು ನಿರ್ಧರಿಸಿದ್ದಾರೆ. ಇದು ಸಂಸ್ಥಾನದಲ್ಲೆಲ್ಲಾ ಬಹಳ ದೊಡ್ಡದಾಗುವುದು. ಇದರ ಆಸರೆಯಿಂದ ೧,೮೦,೦೦೦ ಎಕರೆ ಪ್ರದೇಶದಲ್ಲಿ ಸಾಗುವಳಿ ನಡೆಯಲಿದೆ.

ಶ್ರೀ ಸೌಂದರ್ಯ ಸಾಲಿಗ್ರಾಮ ಶ್ರೀಕಂಠಶಾಸ್ತ್ರಿಗಳು ರಚಿಸಿರುವ "ಶ್ರೀ ವಾಮನಾವತಾರ" ಎಂಬ ಕನ್ನಡ ಪದ್ಯ ಕಾವ್ಯವನ್ನು ಮದ್ರಾಸ್ ವಿಶ್ವವಿದ್ಯಾಲಯದವರು ಬಿ. ಎ. ಪರೀಕ್ಷೆಗೆ ಪಠ್ಯ ಪುಸ್ತಕವನ್ನಾಗಿ ಗೊತ್ತು ಮಾಡಿದ್ದಾರೆ.

ಬೆಲೂಚಿಸ್ಥಾನದಿಂದ ಲೀಗ್ ಉಮೇದುವಾರಿಕೆ ಇಲ್ಲ

ರಾಜ್ಯಾಂಗ ರಚನಾ ಸಭೆಗೆ ಬೆಲೂಚಿಸ್ಥಾನದಿಂದ ಇರುವ ಒಂದು ಸ್ಥಾನಕ್ಕೆ ಮುಸ್ಲಿಂ ಲೀಗು ತನ್ನ ಉಮೇದುವಾರರನ್ನು ನಿಲ್ಲಿಸುವುದಿಲ್ಲವೆಂದು ಲೀಗ್ ಕಾರ್ಯದರ್ಶಿ ಪ್ರಕಟಿಸಿದ್ದಾರೆ.

ಸಿಡಿಲಿನಿಂದ ೭ ಮರಣ

ಸಿಂಧ್ ಪ್ರಾಂತ್ಯದ ಲಾರ್ಕನ ಎಂಬಲ್ಲಿ ಸಿಡಿಲಿನಿಂದ ೭ ಜನರು ಸತ್ತರೆಂದು ವರದಿಯಾಗಿದೆ. ಶೈಲಿನಲ್ಲೇ ಒಬ್ಬನೂ, ದನ ಕಾಯುತ್ತಿದ್ದಾಗ ಹುಡುಗನೊಬ್ಬನೂ ಸಿಡಿಯು ಹೊಡೆತಕ್ಕೆ ಸಿಕ್ಕಿ ಸತ್ತರೆಂದು ಹೇಳಲಾಗಿದೆ.

ಸೂಚನೆ

ದಕ್ಷಿಣಾಯನ ಪುಣ್ಯಕಾಲದ ಪ್ರಯುಕ್ತ ನಾಳೆ "ಶಾಂತಿ" ಪತ್ರಿಕೆ ಪ್ರಕಟವಾಗುವುದಿಲ್ಲ.

ವ್ಯವಸ್ಥಾಪಕ—

ರಾಮಸ್ವಾಮಿ ಮೊದಲಿಯಾರರು ಮೈಸೂರಿನ ದಿವಾನರಾಗುವರೇ ?

ಸತ್ಯವಲ್ಲೇ ಅಧಿಕಾರಿ ಪ್ರಕಟನೆ

ಸರ್ ಎ. ರಾಮಸ್ವಾಮಿ ಮೊದಲಿಯಾರ್ ರವರು ಮೈಸೂರಿನ ದಿವಾನರಾಗುವರೆಂಬ ಕಳೆದ ಮೂರು ತಿಂಗಳಿಂದ ಹಬ್ಬಿದ ವದಂತಿಯು ಸಾರ್ವಜನಿಕರ ಗಮನವನ್ನು ಸೆಳೆದಿದೆ. ಈ ಬಗ್ಗೆ ಅಧಿಕಾರಯುತ ಮಾಡಿ ಪ್ರಕಟಿಸಿದೆ. ಶ್ರೀನಗರ ಸರ್ಕಾರದವರಿಂದ ವರ್ಧಿಸಿ ಹ ಸವ ಮಮಲೆಯಾಗಲೀ ಅಥವಾ ಆ ... ಗಳಾಗಲೀ ಬಂದ ಆಕೃತಿಯನ್ನು ಹೇಳಿದರೆ ಮದ್ರಾಸಿನ ಪತ್ರಿಕೆಯೊಂದು ವರದಿ ಮಾಡಿದೆ.

ಸರ್ ಮೊದಲಿಯಾರರು ಆಗಸ್ಟ್ ತಿಂಗಳ ಮಧ್ಯ ತಾರೀಕು ಭಾರತ ಪಡೆಯುವರೆಂದೂ ಒಪ್ಪಿರುವ ವದಂತಿ ಹರಡಿದೆ.

ಸರ್ ಮೊದಲಿಯಾರರು ಜುಲೈವರೆಗೂ ಒಳ್ಳೆ ೩,೦೦೦ ಎಕರೆ ಪ್ರದೇಶವನ್ನು ೧॥ ಲಕ್ಷ ರೂ. ಗಳಿಗೆ ಕೊಂಡುಕೊಂಡರೆಂದು ವರದಿಯಾಗಿದ್ದರೂ, ಸರಿಯಾದುದೆಂದೂ ... ದಲ್ಲಿ ಆವರೆ ... ಎಕರೆ ಪ್ರದೇಶವನ್ನು ಮಾತ್ರ ಹತಿ ಸಾವಿರ ರೂ ಗಳಿಗೆ ಕೊಂಡು ಕೊಂಡಿದ್ದಾರೆ ಎಂದು ತಿಳಿಸಿದೆ ... .

ಸಾಧ್ವಿ

ತಾ|| ೧೫-೭-೪೬ ಸೋಮವಾರ

ಹತ್ತು ವರ್ಷದಲ್ಲಿ ಇನ್ನೊಂದು ಯುದ್ಧ!

ಪ್ರಪಂಚದಲ್ಲಿ ಇಂದು ನಡೆಯುತ್ತಿರುವ ವರ್ಣ ವೈಷಮ್ಯ, ಅಧಿಕಾರ, ಲಾಲಸೆ ಮತ್ತು ಆಕ್ರಮಣ ನೀತಿಗಳನ್ನು ನೋಡಿ ಮಹಾತ್ಮ ಗಾಂಧಿಯವರು ಇನ್ನು ಹತ್ತು ವರ್ಷದ ಒಳಗಾಗಿ ಪ್ರಪಂಚದಲ್ಲಿ ಇನ್ನೊಂದು ಮಹಾ ಯುದ್ಧವು ಪ್ರಾಪ್ತವಾಗಬಹುದೆಂದು ಶಂಕೆ ಪಟ್ಟಿದ್ದಾರೆ. ಇಂದಿನ ಪರಿಸ್ಥಿತಿಯಲ್ಲಿ ಬೆಳಕೇ ಕಾಣದು ಬರುತ್ತಿಲ್ಲವೆಂದು ತಿಳಿಸಿದ್ದಾರೆ. [illegible] ಆಟಂ ಬಾಂಬಿಗಿಂತಲೂ ಆನರ್ಥಕಾರಿಯಾದ ಅಸ್ತ್ರವನ್ನು [illegible] ಹಿಡಿಯುವುದೆಂದು [illegible] ದ್ವಾರ [illegible] ಹಬ್ಬಿಸ [illegible] ಉತ್ಪತ್ತಿ ಮಾಡುವುದೆಂದೂ, ಬಾಂಬಿನಿಂದ ಇನ್ನು ಬಲವಾದ ಬಾಂಬು ಹುಟ್ಟುವುದೆಂದೂ ತಿಳಿಸಿರುತ್ತಾರೆ.

ಬಿಕನಿ ದ್ವೀಪದಲ್ಲಿ ನಂತರ ಅಟಂ ಬಾಂಬಿನ ಪ್ರಯೋಗವು ನಡೆದಾಗಲೂ ಇದೇ ಅಭಿಪ್ರಾಯವನ್ನೇ ಅನೇಕರು ಸೂಚಿಸಿದರು. ಅಟಂ ಶಕ್ತಿಯ ಉಪಯೋಗವನ್ನು ಪತ್ತೆ ಹಚ್ಚಿದ ಬಳಿಕ ಅದರ ಪ್ರಯೋಗದ ಪ್ರದರ್ಶನದಿಂದ ಪ್ರಪಂಚಕ್ಕೆ ತಮ್ಮ ಅಗಾಧವಾದ ವಿನಾಶ ಶಕ್ತಿಯನ್ನು ಪ್ರದರ್ಶಿಸುವುದೇ ಅಮೇರಿಕದ ಉದ್ದೇಶವಾಗಿತ್ತೆಂದು, ಕೆಲವು ಪತ್ರಿಕೆಗಳು [illegible] ಹೇಳಿದರು. ಅನೇಕ ವಿಜ್ಞಾನಿಗಳೂ ಸಹ ಇದೇ ಅಭಿಪ್ರಾಯವನ್ನೇ ವ್ಯಕ್ತಗೊಳಿಸಿರುತ್ತಾರೆ.

ಅಟಂ ಬಾಂಬಿನ ಪರೀಕ್ಷೆಯ [illegible] ಪ್ರಕೃತಿಯೊಂದು ರಾಷ್ಟ್ರವು ಒಂದರೊಡನೊಂದು [illegible] ನಡೆಸುತ್ತಿರುವಂತಿದೆ. ಇದನ್ನು [illegible] ಸ್ಥೆಯ ಪತ್ರಿಕೆ [illegible] ಬಗ್ಗೆ ಇನ್ನು ಒಮ್ಮತಾಭಿಪ್ರಾಯವು ಬರದಿರುವುದಿಲ್ಲ. ಪ್ರತಿಯೊಂದು ರಾಷ್ಟ್ರವೂ ಈ ವಿಷಯದಲ್ಲಿ ಸಂಶಯಗ್ರಸ್ತವಾಗಿಯೇ ಇರುತ್ತವೆ. ಆದುದರಿಂದ ಎಲ್ಲ ದೇಶಗಳಿಗೂ ಅಟಂ ಬಾಂಬಿನ ಭೀತಿಯು ಇದ್ದೇ ಇರುತ್ತದೆ. ಇದನ್ನು ತಯಾರಿಸುವ ವಿಧಾನವು [illegible] ಈಗ ಅಂತರಂಗವಾಗಿಲ್ಲ. ಎಲ್ಲರೂ ಅದರ ಗುಟ್ಟನ್ನು ತಿಳಿದಿರುವರು. ಆದುದರಿಂದ ಅಟಂ ಶಕ್ತಿಯೇ ಮುಂದೆ ಘೋರ ಯುದ್ಧಕ್ಕೆ [illegible] ಕಾರಣವಾಗಬಹುದು.

ಅಟಂ ಶಕ್ತಿಗಿಂತಲೂ ಘೋರವಾದ ಮತ್ತೊಂದು ಶಕ್ತಿ [illegible] ವರ್ಣ ವಿಭೇಧದ [illegible] ದಕ್ಷಿಣ ಆಫ್ರಿಕದಲ್ಲಿ ಇದು [illegible] ಕರಿಯ ಜನರಿಗೂ ಬಿಳಿಯರಿಗೂ [illegible] ನಡೆಯುತ್ತಿವೆ. [illegible] ಯುದ್ಧವು [illegible] ಸ್ವಾತಂತ್ರ್ಯ [illegible] ಆನ್ಯಾಯವನ್ನು [illegible]

ವಾರ ಭವಿಷ್ಯ

೧೫-೭-೪೬ ರಿಂದ ೨೧-೭-೪೬ ರ ವರೆಗೆ

(ಶ್ರೀ ನಿತ್ಯಾನಂದ ಸ್ವಾಮಿಗಳಿಂದ)

ಮೇಷ—ನಿಮ್ಮ ಆಸೆಗಳೆಲ್ಲಾ ವಿಫಲವಾಗುವ ಸನ್ನಿವೇಶ ಒದಗಿದೆ. ಮಾನಸಿಕ ಕಳವಳ ಉಂಟಾಗುವುದು. ನಿಮ್ಮ ಆರೋಗ್ಯ ಸರಿ ಇರುವುದಿಲ್ಲ. ಪ್ರವಾಸದಲ್ಲಿ ತೊಂದರೆಯಾಗಲಿದೆ.

ವೃಷಭ—ಗೃಹಕೃತ್ಯದ ಸಿರುಕುಳದಿಂದ ನಿಮ್ಮ ಚಿಂತೆ ಅಧಿಕಗೊಳ್ಳುವುದು. ಆರೋಗ್ಯಕ್ಕಾಗಿ ಧನ ವ್ಯಯ. ನೌಕರಿ ವ್ಯವಹಾರಗಳಲ್ಲಿ ಶ್ರಮ ಅಧಿಕ. ಮಹಸ್ಸು ಪತ್ರಾಗದು.

ಮಿಥುನ—ನಿಮ್ಮ ಹಿತಮಿತ್ರರ ಸಹಾಯದಿಂದ ಕೆಲಸಕಾರ್ಯಗಳೆಲ್ಲಾ ಜಯ. ಆರೋಗ್ಯ ಚೆನ್ನಾಗಿರುವುದು. ಪ್ರವಾಸದಲ್ಲಿ ಲಾಭ. ಬಂಧುಬಳಗದವರಿಗಾಗಿ ಖರ್ಚು.

ಕಟಕ—ಮಿತ್ರರ ಕೂಡ ಕಾಲಹರಣ ಮಾಡಿ ಸಿಟ್ಟಿಗೆಟ್ಟು ನರಳುವಿರಿ. ನೌಕರಿ, ವ್ಯವಹಾರಗಳಲ್ಲಿ ಅನಾವಶ್ಯಕವಾದ ಕಿರುಕುಳ. ಆದಾಯಕ್ಕಿಂತಲೂ ವೆಚ್ಚ ಅಧಿಕವಾಗುವುದು.

ಸಿಂಹ—ಆರೋಗ್ಯ ಚೆನ್ನಾಗಿರುವುದಿಲ್ಲ. ಹಳೇ ವಿಚಾರಗಳ ಚಿಂತೆಯಲ್ಲಿ ತೊಡಗು[illegible]

ತ್ತಿನಿಂದ ಕೂಡಿದ ಬಿಳಿಯರಿಗೂ, ಹಿಂಸಾ ಪ್ರತಿಭಾರಿಗಳಿಂದ ಒಡ್ಡಿದ ಜನರಿಗೂ ಆದೊಂದು ದೇವಾಸುರ ಸಂಗ್ರಾಮವಾಗಿ ಪರಿಣಮಿಸಬಹುದು. ಪಂಡಿತ ನೆಹರೂರವರು ಈ ಬಗ್ಗೆ ಈಗಾಗಲೇ ಮುನ್ನೆಚ್ಚರಿಕೆಯನ್ನು ಕೊಟ್ಟಿದ್ದಾರೆ.

ಪಾಶ್ಚಿಮಾತ್ಯ ರಾಷ್ಟ್ರಗಳಲ್ಲಿ ಇನ್ನೂ ಉಳಿದಿರುವ ಸುಸಂಸ್ಕೃತರಾದ ಧುರೀಣರು ತಮ್ಮ ಸೋದರರ ಮೇಲೆ ಇನ್ನುದರೂ ಪ್ರಭಾವವನ್ನು ಬೀರಿ ಮತ್ತೊಂದು ಘೋರ ವಿಪ್ಲವವು ವಿಶ್ವವನ್ನು ಹಿಡಿಸದಂತೆ ತಡೆಗಟ್ಟುವುದು ಅವರ ಆದ್ಯ ಕರ್ತವ್ಯವಾಗಿದೆ.

ವರು. ಆರ್ಥಿಕ ಸ್ಥಿತಿ ಸುಧಾರಿಸುವುದಿಲ್ಲ. ಸ್ಥಳಮಾಡಬೇಕಾದ ಪ್ರಸಂಗ ಒದಗಬಹುದು. ಶತ್ರುಗಳು ಕಿರುಕುಳ ಕೊಡುವರು.

ಕನ್ಯಾ—ಆರೋಗ್ಯ ನೆಟ್ಟಗಿರುವುದಿಲ್ಲ. ವ್ಯಾಪಾರ, ವ್ಯವಹಾರಗಳಲ್ಲಿ ಉದ್ದೇಶಿಸಿದ್ದಂತೆ ಲಾಭ ಬಾರದು. ಪರಿಸ್ಥಿತಿ ಚಿಂತಾಜನಕವಾಗುವ ಸಂಭವವಿದೆ. ಕೆಟ್ಟ ಸುದ್ದಿ ಕೇಳುವಿರಿ.

ತುಲಾ—ಹಿಂದಿನ ವೈರಿ [illegible] ಅದರೆ, ನಿಮ್ಮ ಅದೃಷ್ಟದಿಂದ (ನಿಮ್ಮ ಸತ್ಕೃತಿಯಿಂದ) ಕೀರ್ತಿಗಳಿಸುವಿರಿ. ವ್ಯಾಪಾರ, ಉದ್ಯೋಗಗಳಲ್ಲಿ ಯಶ. ಪ್ರವಾಸದಲ್ಲಿ ಜಯ. ಮಿತ್ರರಿಗಾಗಿ ಖರ್ಚು.

ವೃಶ್ಚಿಕ—ಆರೋಗ್ಯ ಚೆನ್ನಾಗಿರುವುದು. ವ್ಯಾಪಾರ, ವ್ಯವಹಾರಗಳಲ್ಲಿ ಧನಲಾಭ. ಸಂಸಾರದ ಸ್ಥಿತಿಗತಿಗಳು ಸುಧಾರಿತವಾಗಿ ಹರ್ಷ ಉಂಟಾಗುವುದು.

ಧನುಸ್ಸು—ಪ್ರವಾಸದಲ್ಲಿ ಅನಿರೀಕ್ಷಿತ ಲಾಭ. ಕೆಲಸಕಾರ್ಯಗಳಲ್ಲಿ ಎಲ್ಲರಿಗಿಂತಲೂ ಸನ್ಮಾನ. ವ್ಯವಹಾರಗಳಲ್ಲಿ [illegible] ಆರೋಗ್ಯ ಚೆನ್ನಾಗಿರುವುದು. ಶುಭವಾರ್ತೆ ಬರಲಿದೆ.

ಮಕರ—ನಿಮ್ಮ ಮನಸ್ಸಿನಲ್ಲಿರುವ ವಿಚಾರವನ್ನೆಲ್ಲಾ ಅನಾವಶ್ಯಕವಾಗಿ ಬಹಿರಂಗಪಡಿಸಬೇಡಿ. ಆರೋಗ್ಯ ಉತ್ತಮವಿಲ್ಲ. ಮನೆಯಲ್ಲಿ ವೃಥಾ ಕಲಹ. ಖರ್ಚು ಅಧಿಕ.

ಕುಂಭ—ನಿಮ್ಮ ಶತ್ರುಗಳ ಕೈವಾಡ ಈ ವಾರ ಅಧಿಕವಾಗುವುದು. ಆರೋಗ್ಯ ಸಾಧಾರಣ. ಅಧಿಕ ವೆಚ್ಚ. ವ್ಯಾಪಾರದಲ್ಲಿ ನಷ್ಟ. ಪ್ರವಾಸದಲ್ಲಿ ತೊಂದರೆ. ಮನೆಯಲ್ಲಿ ಕಲಹ.

ಮೀನ—ಆರೋಗ್ಯ, ಆರ್ಥಿಕ ಸ್ಥಿತಿಗಳು ಉತ್ತಮ. ಕೆಲಸ ಕಾರ್ಯಗಳಲ್ಲಿ ಯಶಸ್ಸು. ಪ್ರವಾಸದಲ್ಲಿ ಲಾಭ. ಆಪ್ತಮಿತ್ರರ ಭೇಟಿ. ಪ್ರಸನ್ನವಾದ ವಾರ್ತೆಯುಳ್ಳ ಪತ್ರ ಬರಲಿದೆ.

Edited, printed and published by A. R. Nagarajan at the Sadhvi Press D Subbiah Road Mysore

ಪ್ರೌಢ ಶಾಲಾ ಆರಂಭೋತ್ಸವ

ಸ್ವಂತ ವರದಿ] ಗುಂಡ್ಲುಪೇಟೆ

ಇಲ್ಲಿನ ದೊಡ್ಡ ಹುಂಡಿ ಭೋಗಪ್ಪ ಮುನಿಸಿಪಲ್ ಹೈಸ್ಕೂಲ್ ಪ್ರಾರಂಭೋತ್ಸವವು ದಾನಿಗಳ ಸಮಕ್ಷಮದಲ್ಲಿ ನಿನ್ನೆ ತಾ|| ಅಮಲ್ದಾರರಾದ ಶ್ರೀ|| ಟಿ. ಎಚ್. ಅಮೀರ್ ರವರಿಂದ ಅತ್ಯಂತ ವಿಜೃಂಭಣೆಯಿಂದ ಜರುಗಿತು. ತಾಲ್ಲೂಕಿನ ಪ್ರಮುಖ ಮಹನೀಯರು ಈ ಸಮಾರಂಭಕ್ಕೆ ದಯಮಾಡಿಸಿದ್ದರು.

"ಮದುವೆಯಾದ ೩ ದಿನಕ್ಕೆ ಆತ್ಮಹತ್ಯೆ"

ತನಗೆ ಹೈಸ್ಕೂಲ್ ಪರೀಕ್ಷೆಯಲ್ಲಿ ತೇರ್ಗಡೆಯಾಗಲಿಲ್ಲವೆಂದೂ ಇದು ತನ್ನ ದುರಾದೃಷ್ಟವೆಂದೂ ಹೇಳಿ, ತನ್ನ ಮದುವೆಯಾದ ಮೂರನೇ ದಿನದ ಮಧ್ಯ ರಾತ್ರಿಯಲ್ಲಿ ಸಂಯುಕ್ತ ಪ್ರಾಂತ್ಯದ [illegible] ಎಂಬ ವಿದ್ಯಾರ್ಥಿಯು ವಿಷ ತೆಗೆದುಕೊಂಡು ಆತ್ಮಹತ್ಯ ಮಾಡಿಕೊಂಡನೆಂದು ವರದಿಯಾಗಿದೆ.

ಅನರ್ಘ್ಯ ಪ್ರಾರಂಭ — ತಾ|| 15—7—46 ರಿಂದ

ಶ್ರೀ ಚಾಮುಂಡೇಶ್ವರಿಯಲ್ಲಿ

ಸೆಂಟ್ರಲ್ ಸ್ಟುಡಿಯೋಸ್ ರವರ ಹಿಂದೀ ಚಿತ್ರ

★ ಯತೀಂ (YATEEM) ★

ಪ್ರಧಾನ ಭೂಮಿಕೆ: ಯಾಕೂಬ್, ಚಂದ್ರಪ್ರಭಾ ಮತ್ತು ನೋವಿರ್

ಪ್ರತಿದಿನ ೩ ಆಟಗಳು

A Sri Shanti Film Release, Mysore.

ರಾಜ್ ಕಮಲ್ ಟಾಕೀಸ್, ಮೈಸೂರು

1946 ನೇ ಜುಲೈ 10 ನೇ ಬುಧವಾರದಿಂದ ಪ್ರಾರಂಭ

ರಾಜ್ ಕಮಲ್ ರವರ

- ಪಟಿಯಾತ್ ಪೆ ಅಸ್ಪಾಸ ಡೇರ -

ಮುಖ್ಯ ಭೂಮಿಕೆಯಲ್ಲಿ: ವನಮಾಲ, ಉಲ್ಹಾಸ್

ನಿರ್ದೇಶಕರು: ಶ್ರೀ|| ಶಾಂತಾರಾಮ್

[illegible] ಪ್ರೇಮವನ್ನು ಮನ ರಂಜನೀಯವಾಗಿ ನಿರೂಪಿಸುವ ಪ್ರಣಯ ಗೀತೆ

ಒಂದನೇ ಆಟ ಮಧ್ಯಾಹ್ನ 3-30 ಕ್ಕೆ — ಎರಡನೇ ಆಟ ಸಂಜೆ 6-30 ಕ್ಕೆ

ಮೂರನೇ ಆಟ ರಾತ್ರಿ 9-15 ಕ್ಕೆ

—. ವಿಜಯಾ ಪಬ್ಲಿಸಿಟಿ .—

ಸಾಧ್ವಿ — ರಾಜಧಾನಿಯ ರಾಷ್ಟ್ರೀಯ ದಿನ ಪತ್ರಿಕೆ

ಕೂಡಲೇ ಚಂದಾದಾರರಾಗಿರಿ

(ತಿಂಗಳಿಗೆ ಚಂದಾ ಎಂಟಾಣೆ ಮಾತ್ರ)

ಜಾಹಿರಾತಿನ ದರಗಳಿಗೆ ವಿಚಾರಿಸಿರಿ

ಟಿ. ಸಿ. ನಟರಾಜ್, ಔಷಧಾಲಯ

ನೇತ್ರ ಪರೀಕ್ಷೆಯು ಉಚಿತವಾಗಿ ಮಾಡಲ್ಪಡುತ್ತದೆ.

ಅಗತ್ಯವಾಗಿ ಬೇಕಾದ ಎಲ್ಲಾ ಇಂಗ್ಲಿಷ್ ಔಷಧಿಗಳೂ ಸದಾ ಕಾಲದಲ್ಲಿ ದೊರೆಯುವುದಲ್ಲದೆ ಸಮಸ್ತವ್ಯಾಧಿಗಳಿಗೆ ಚಿಕಿತ್ಸೆಯು ಬಹು ಸುಲಭ ಛಾರ್ಜಿನಲ್ಲಿ ಮಾಡಲ್ಪಡುತ್ತದೆ.

ರಘುಂಡೂರವರ ಆಯುರ್ವೇದೀಯ ಔಷಧಗಳೆಲ್ಲವೂ ದೊರೆಯುತ್ತವೆ.

ಕ್ಯಾಟಲಾಗ್ ನಿಗಾಗಿ ಬರೆಯಿರಿ

"ಕೊನೆಯಲ್ಲಿ ಒಂದು ಸೂಚನೆ [illegible] ಚಿಕಿತ್ಸೆ ಸಂಬಂಧದ ಹೊಟ್ಟೆನೋವಿನ ಯಿಂದ ಮುಕ್ತರಾಗದೇ [illegible] "ಸಂತಾನ ಸಿಂಧೂರ", ಶೈಂತಲೂ [illegible] ವಾದ ಔಷಧವು ಪ್ರಪಂಚದಲ್ಲಿ ಎಲ್ಲಿ[illegible] ವೆಂದು ಹೊಗಳಿಕೊಳ್ಳಲು ನಮಗೆ ಇ[illegible] ಲ್ಲವಿದ್ದಾಗ್ಯೂ, ಕಳೆದ ೮೭ ವರ್ಷಗ[illegible] ಳಿಂದ ನಮ್ಮ ಮನೆತನದಲ್ಲಿ ಚಾಲ್ತಿಯ[illegible] ಪಕ್ವ ಈ ಚಿಕಿತ್ಸಾಕ್ರಮದ ಫಲಾ[illegible] ಇದ್ದಲ್ಲಿ ಹೆಸರಾಂತ ಇಂಗ್ಲೀಷ್, ಯು[illegible] ಕರ್ನಾಟಕ ಚಿಕಿತ್ಸೆಯಿಂದಲೂ [illegible] ಫಲವಾಗಲಿಕ್ಕಿಲ್ಲ ಎಂಬ ಅಂಶವನ್ನು [illegible] ತ್ತ ಅನುಭವಪೂರ್ವಕವಾಗಿಯೂ [illegible] ಸರ್ಥೀಕರಣವಾಗಿಯೂ ಹೇಳುತ್ತೇವೆ."

ಇನ್ನು ವಿವರಗಳು ಇದೆ [illegible] ಬಿಟ್ಟು ರವಾನೆ.

ಎ. ರಾಮಸ್ವಾಮಿ ಅಯ್ಯರ್ [illegible] ಪ್ರೊಪ್ರೈಟರ್, "ಸಂತಾನ ಸಿಂಧೂರ" ಆಫೀಸ್, ಬಂಬಳ್, ಮೈಸೂರು

ಸೋ॥ ನಂ. 392 ॥ ವಂದೇ ಮಾತರಂ ॥ ಇಂದಿನ ಪತ್ರಿಕೆ ೨ ಕಾಸು

ಸಂಪುಟ ೪] ಬುಧವಾರ ೧೭—೭—೪೭ [ಸಂಚಿಕೆ ೨೬೦

ಪಾಶ್ಚಾತ್ಯ ರಾಷ್ಟ್ರಗಳಿಗೂ ರಷ್ಯಕ್ಕೂ ವೈಮನಸ್ಯ

ಕೃಷ್ಣರಾಜ ಮೊಹಲ್ಲಾ ಪರಿಶೀಲನೆ

ಮೈಸೂರು ಸಿಟಿ ಮುನಿಸಿಪಲ್ ಕಾಂಗ್ರೆಸ್ ಪಕ್ಷದ ಕಾರ್ಯದರ್ಶಿ

ಶ್ರೀಗಳಾದ ಶ್ರೀ ಟಿ. ವೆಂಕಟರಮಣಯ್ಯನವರು ಈ ರೀತಿ ಬರೆಯುತ್ತಾರೆ:—

ತಾ॥ ೧೪-೭-೪೭ ನೇ ಭಾನುವಾರ ಬೆಳಗ್ಗೆ ಕೃಷ್ಣರಾಜಮೊಹಲ್ಲಾ ನಾಲಾಬೀದಿ, ಛತ್ರಬಸಪ್ಪಾಜಿ ಲಾಯ ಚಿಕ್ಕ ರಾಮದೇವರ ಬೀದಿ, ಅದಂಬಾ ಮಸೀದಿ ಮತ್ತು ಸುತ್ತಮುತ್ತಲು ಪ್ರದೇಶಗಳನ್ನು ಕಾಂಗ್ರೆಸ್ಸು ಪಕ್ಷದ ಸದಸ್ಯರುಗಳು ಹೆಲ್ತ್ ಆಫೀಸರು ಮತ್ತು ಇಂಜಿನಿಯರ್ ಇಲಾಖಾ ನೌಕರರೊಡನೆ ಪರಿಶೀಲನೆಯನ್ನು ಮಾಡಿದರು. ಈ ಭಾಗಗಳಲ್ಲಿ ರಸ್ತೆ, ಒಳಚರಂಡಿ, ಮೋರಿ ಚರಂಡಿಗಳು ಸಂಪೂರ್ಣ ಅವ್ಯವಸ್ಥೆಯಲ್ಲಿದೆ. ನಾಲಾ ಬೀದಿಯ ಸುತ್ತಮುತ್ತಲೂ ನೀರಿನ ಅಭಾವವೂ ವಿಪರೀತ ಕಂಡು ಬಂದಿತು. ಅಲ್ಲಿನ ನಿವಾಸಿಗಳ ಕುಂದು ಕೊರತೆಗಳನ್ನು ವಿಚಾರಿಸಿ ಅವರುಗಳಿಗಿರತಕ್ಕ ಅನುಕೂಲತೆಗಳನ್ನು ಕಲ್ಪಿಸಲು ಪೌರಸಭಾಧ್ಯಕ್ಷರಾಗಲಿ, ಟ್ರಸ್ಟು ಬೋರ್ಡ್ ಇಂಜನಿಯರಾಗಲಿ ಯಾರೂ, ಪೌರಸಭಾ ಸದಸ್ಯರುಗಳು ಅನೇಕ ಸಾರಿ ಒತ್ತಾಯಪಡಿಸಿದಾಗ್ಯೂ, ಗಮನ ಕೊಟ್ಟಂತೆ ಕಾಣುವುದಿಲ್ಲ. ಅದರಲ್ಲೂ ಅದಂಬಾ ಮಸೀದಿ ಸುತ್ತಮುತ್ತಲು ಪ್ರದೇಶಗಳ ಅಭಿವೃದ್ಧಿ ಯೋಜನೆಯನ್ನು ಪೂರ್ತಿಯಾಗಿ ಕೈಗೊಳ್ಳದೆಯೂ ಕಟ್ಟಲು ಅನುಕೂಲವಿರುವವರಿಗೆ ಸಂಯಾದ ಸ್ಥಳ ಮಾಡಿಕೊಡದೆಯೂ, ಕಟ್ಟಲು ಲೈಸನ್ಸು ಕೊಡದೆಯೂ ಅಲ್ಲಲ್ಲಿ ಅಸ್ತವ್ಯಸ್ತ ಮನೆಗಳನ್ನು ಮಾತ್ರ ಅಕ್ವೈರು ಮಾಡಿಕೊಂಡು ಮಿಕ್ಕ ಶಿಥಿಲವಾದ ವಾಸಕ್ಕೆ ಅನನುಕೂಲವಾದ ಮನೆಗಳನ್ನು ಹಾಗೆಯೇ ಬಿಟ್ಟಿರುವುದು ಶೋಚನೀಯವಾಗಿದೆ. ಸದರಿ ಅಭಿವೃದ್ಧಿ ಯೋಜನೆಯು ೧೯೦೬ರಲ್ಲಿ ಪ್ರಾರಂಭವಾಗಿ ೪೦ ವರುಷಗಳು ಆದಾಗ್ಯೂ ಇನ್ನೂ ಪೂರೈಸದೆ ಇರುವುದನ್ನು ನೋಡಿದರೆ ಅಲ್ಲಿ ನಿವಾಸಿಗಳ ದೌರ್ಭಾಗ್ಯವೋ ಅಥವಾ ಅಧಿಕಾರಿಗಳ ಉದಾಸೀನತೆಯ ಪ್ರಭಾವವೂ ಹೇಳಲಾಶ್ಚರ್ಯವಾಗಿದೆ. ಇದರಿಂದ ಅಲ್ಲಿ ನಿವಾಸಿಗಳ ಆರೋಗ್ಯ ಭಾಗ್ಯಕ್ಕೆ ಧಕ್ಕೆ ತಗಲಿರುವುದರಲ್ಲಿ ಯಾವ ಸಂದೇಹವೂ ಇಲ್ಲ. ಪಕ್ಷದ ಸದಸ್ಯರುಗಳು ಮೇಲ್ಕಂಡ ಪ್ರದೇಶದಲ್ಲಿ ಸಂಚರಿಸಿದಾಗ ಅಲ್ಲಿನ ನಿವಾಸಿಗಳು ವಿಪರೀತವಾಗಿ ದೂರು ಹೇಳಿಕೊಂಡರು. ಈ ವಿಚಾರದಲ್ಲಿ ತಕ್ಷಣ ಕಾರ್ಯಕ್ರಮವನ್ನು ಅಧಿಕಾರಿಗಳು ಕೈಗೊಳ್ಳುವಂತೆ ಮಾಡುವುದಾಗಿ ಹೇಳಲಾಯ್ತು. ಇದಲ್ಲದೆ ಪೌರಸಭಾಧ್ಯಕ್ಷರೂ ಮತ್ತು ಸಂಬಂಧಪಟ್ಟ ಅಧಿಕಾರಿಗಳು ಕೂಡಲೆ ಎಚ್ಚೆತ್ತುಕೊಂಡು ಸೂಕ್ತ ಕಾರ್ಯಕ್ರಮಗಳನ್ನು ಕೈಗೊಳ್ಳುತ್ತಾರೆಂದು ನಂಬಲಾಗಿದೆ.

ಸೂತ್ರಯಜ್ಞ

ಗಾಂಧಿ ಸೇವಾ ಸಂಘದ ಆಶ್ರಯದಲ್ಲಿ ಸೂತ್ರಯಜ್ಞವು ಈ ದಿನ ಸಾಯಂಕಾಲ ೬ ಘಂಟೆಯಿಂದ ಪ್ರಾರ್ಥನೆಯೊಡನೆ ಆರಂಭವಾಗುವುದು. ದಿನವೂ ೧ ಗಂಟೆ ನೂಲು ನೂಲನ್ನು ೯ ದಿನಗಳು ಪೆನ್ಸಲಿಗೆ ...ವುದು.

ವಿದ್ಯಾರ್ಥಿನಿಲಯದ ಆರಂಭೋತ್ಸವ

ಮೈಸೂರು ನೂತನ ಲಕ್ಷ್ಮೀಪುರಂನಲ್ಲಿ ಮಾ... ಶ್ರೀ ಲಿಂಗಯ್ಯನವರ ಪಂಚಮರ ವಿದ್ಯಾರ್ಥಿನಿಲಯದ ಆರಂಭೋತ್ಸವವನ್ನು ಇ... ನೇ ಗುರುವಾರ ಸಂಜೆ ೬ ಘಂಟೆಗೆ ಶ್ರೀ ... ಅವರ ಅಧ್ಯಕ್ಷತೆಯಲ್ಲಿ ... ನವರು ನೆರವೇರಿಸುವರು.

ಧ್ವಜವನ್ನು ಇಳಿಸಲಾಯಿತು

ಮೈಸೂರು ೧೭

ರಾಜಧಾನಿಯ ಕಾಂಗ್ರೆಸ್ ಕಛೇರಿಯ ಮೇಲೆ ಹಾಕಿದ್ದ ರಾಷ್ಟ್ರಧ್ವಜವು ಹರಿದು ಚಿಂದಿಯಾಗಿರುವುದರಿಂದ ಅದನ್ನು ೨೪ ಘಂಟೆಯೊಳಗೆ ತೆಗೆದು ಬೇರೆ ಬಾವುಟವನ್ನು ಹಾಕದಿದ್ದರೆ ಉಪವಾಸವನ್ನು ಆರಂಭಿಸುವುದಾಗಿ ಶ್ರೀ ಎ. ಎನ್. ರ್ಯೋನಾರಾಯಣರಾಯರು ಸೂಚನೆ ಕೊಟ್ಟಿದ್ದ ಪ್ರಕಾರ ಈ ದಿನ ಮಧ್ಯಾಹ್ನ ಹನ್ನೆರಡು ಗಂಟೆಗೆ ಸರಿಯಾಗಿ ಕಾಂಗ್ರೆಸ್ ಕಛೇರಿಯ ಮುಂದೆ ಉಪವಾಸ ಸತ್ಯಾಗ್ರಹವನ್ನು ಆರಂಭಿಸಿದರು. "ಧ್ವಜಕ್ಕಾಗಿ ಸತ್ಯಾಗ್ರಹ" ಎಂಬುದಾಗಿ ಬರೆದ ಒಂದು ಬೋರ್ಡನ್ನು ಪ್ರೈಸಿಕಲ್ಲಿಗೆ ನೇತು ಹಾಕಿ ನಂದಿಗೆ ... ಲಾಗಿತ್ತು. ರಾಯರು ಉಪವಾಸ ಕುಳಿತುಕೊಂಡಿದ್ದರು. ಅಷ್ಟು ಹೊತ್ತಿಗೆ ಶ್ರೀ ಎ. ಶಿವಣ್ಣನವರು ಒಂದು ಹೊಸ ಧ್ವಜವನ್ನು ತಂದು ಕಾಂಗ್ರೆಸ್ ಭವನದ ಮೇಲೆ ಏರಿಸಿದರು. ಇದರಿಂದ ರಾಯರು ಎರಡು ಘಂಟೆ ಹೊತ್ತಿಗೆ ರಾಯರು ಉಪವಾಸ ಸತ್ಯಾಗ್ರಹವನ್ನು ಮುಕ್ತಾಯ ಮಾಡಿ ಹೊಸ ಧ್ವಜವನ್ನು ಹಾಕಿದ್ದಕ್ಕಾಗಿ ತಮ್ಮ ಕೃತಜ್ಞತೆಯನ್ನು ಸೂಚಿಸಿದರು. ಸ್ವಲ್ಪ ಕಾಲದವರೆಗೆ ಈ ಪ್ರಕರಣವು ಮುಕ್ತಾಯವಾಯಿತು. ಈ ಬಗ್ಗೆ ಶ್ರೀ ಎ. ಶಿವಣ್ಣನವರು ಒಂದು ಹೇಳಿಕೆಯನ್ನು ಕೊಟ್ಟಿ... ಅನುಭವಿಗಳೂ, ಹಿರಿಯರೂ ಆದ ಶ್ರೀ ಸೂರ್ಯನಾರಾಯಣರಾಯರು ಬಾವುಟಕ್ಕಾಗಿ ಕಟ್ಟಡದ ಮೇಲೆ ಹಾರಾಡುವ ಧ್ವಜವನ್ನು ಕಾಂಗ್ರೆಸ್ಸಿನ ಸ್ವಂತ ಭವನದ ಮೇಲೆ ಏರಿಸಲು ತಮ್ಮ ಶಕ್ತಿಯನ್ನು ಉಪಯೋಗಿಸಬೇಕೆಂದು ಪ್ರಾರ್ಥಿಸಿದ್ದಾರೆ.

ಕಾಂಗ್ರೆಸ್ ಅಧ್ಯಕ್ಷತೆ

ಸ್ವಂ. ವು. ಪ್ರೋ॥] ಬೆಂಗಳೂರು ೧೭

ಮೈಸೂರು ಕಾಂಗ್ರೆಸ್ ಅಧ್ಯಕ್ಷತೆಗೆ ಉಳಿದ ಅಭ್ಯರ್ಥಿಗಳು ಶ್ರೀಗಳಾದ ಕೆ. ಚೆಂಗಲರಾಯರೆಡ್ಡಿ, ಹಿಂಡಳ್ಳಿ ಹಾಲಪ್ಪ, ಎಚ್. ಸಿ. ತಿಮ್ಮಾರೆಡ್ಡಿ, ಟಿ. ಸಿದ್ಧಲಿಂಗಯ್ಯ, ಕೆ. ಪಿ. ವೀರಪ್ಪ ಮತ್ತು ಶ್ರೀ ಮ. ತಿ. ಯಶೋಧರ ದ ಸಪ್ಪ ಇವರುಗಳ ಹೆಸರುಗಳು ಸೂಚಿತವಾಗಿವೆ. ಉಮೇದುವಾರಿಕೆಯನ್ನು ವಾಪಸು ತೆಗೆದುಕೊಳ್ಳಲು ಈ ದಿನ ಸಂಜೆ ೬ ಘಂಟೆವರೆಗೆ ಅವಕಾಶವಿದೆ.

(...) ಈ ದಿನ ಮಧ್ಯಾಹ್ನ ದಿವಾನರು ... ಘಂಟೆಗೆ ಹೇಳಿದರು. ... ವರೆಗೆ ಇದ್ದವರು ... ಬೆಳಗ್ಗೆ ದಿವಾನರ ಬಂಗಲೆಯಲ್ಲಿ ... ನ ... ಪ್ರಮುಖರ ಸಭೆ ನಡೆಯಿತು.

ಅಂಚೆ ನೌಕರರ ಮುಷ್ಕರ

ರಾಜಧಾನಿಯ ಅಂಚೆ ನೌಕರರು ಮೊನ್ನೆ ನಡುರಾತ್ರಿಯಿಂದ ಕೆಲಸಕ್ಕೆ ಹಾಜರಾಗದೇ ಮುಷ್ಕರ ಹೂಡಿದ್ದಾರೆ. ಅವರಿಬ್ಬರೂ ನಿನ್ನೆ ಬೆಳಗ್ಗೆ ನಗರದ ಪ್ರಮುಖ ರಸ್ತೆಗಳಲ್ಲಿ ಮೆರವಣಿಗೆ ಹೊರಟು ಪ್ರದರ್ಶನ ನಡೆಸಿದರು. ವಿದ್ಯಾರ್ಥಿ ಕಾಂಗ್ರೆಸ್ಸಿನವರು ಕಾಲೇಜ್ ಮುಂಭಾಗದಲ್ಲಿ ಸಭೆಸೇರಿ ಮುಷ್ಕರದ ಬಗ್ಗೆ ತಮ್ಮ ಸಹಾನುಭೂತಿಯನ್ನು ವ್ಯಕ್ತಪಡಿಸಿದರು. ನಗರದ ಕಾರ್ಮಿಕರೂ ಸಹ ತಮ್ಮ ಸಹಾನುಭೂತಿಯನ್ನು ತೋರಿಸಿರುವರು. ಅಂಚೆ ಇಲಾಖಾಧಿಕಾರಿಗಳು ಪರಿಸ್ಥಿತಿಯನ್ನು ಎದುರಿಸುವ ಉದ್ದೇಶದಿಂದ ನಗರದ ನಾನಾ ಭಾಗಗಳಲ್ಲಿ ೬೬ ಕೇಂದ್ರಗಳನ್ನು ತೆಗೆದು ಆ ಸ್ಥಳಗಳಲ್ಲಿ ಅಂಚೆ ಪಂಚಿಕೆಗೆ ವ್ಯವಸ್ಥೆ ಮಾಡಿದ್ದಾರೆ.

ಈ ದಿನ ಬೆಳಗ್ಗೆ ಮುಷ್ಕರದವರು ಕಾಂಗ್ರೆಸ್ ಆಫೀಸಿನಿಂದ ಮೆರವಣಿಗೆ ಹೊರಟು ಇರ್ವಿನ್ ರಸ್ತೆ ನಡವಾಕಿನಲ್ಲಿ ಮತ್ತು ಅಂಚೆಕಚೇರಿಗಳಲ್ಲಿ ಸುತ್ತಿ ಕೊನೆಗೆ ಕಾಂಗ್ರೆಸ್ ಆಫೀಸಿಗೆ ಬಂದರು. ನಿನ್ನೆ ಮುಷ್ಕರದಲ್ಲಿ ಸೇರದಿದ್ದವರು ಈ ದಿನ ಸೇರಿದರು. ಅಂಚೆಕೊಪ್ಪಲ್‌ನಲ್ಲಿ ಶ್ರೀ ಮ. ತಿ. ಚ... ರವರ ... ಮುಷ್ಕರಗಾರರ ಪಂಗಡ ... ಸಹಾಯ ಪುಸ್ತಕವನ್ನು ಕೊಟ್ಟರು.

ಅಂಚೆ ಮುಷ್ಕರದ ಬಗ್ಗೆ ಸಹಾನುಭೂತಿ ಸೂಚಿಸಲು ಸಾರ್ವಜನಿಕ ಸಭೆಯೊಂದನ್ನು ಇಂದು ಸಂಜೆ ೭ ಘಂಟೆಗೆ ಟೌನ್‌ಹಾಲ್ ಮೈದಾನದಲ್ಲಿ ಶ್ರೀ ಹಿಂಡಳ್ಳಿ ಹಾಲಪ್ಪನವರ ಅಧ್ಯಕ್ಷತೆಯಲ್ಲಿ ಏರ್ಪಡಿಸಲಾಗಿದೆ.

ಮುಮ್ಮಡಿಯವರ ಜಯಂತಿ

ಮೈಸೂರು ೧೭

ನಿನ್ನೆ ಸಂಜೆ ಸ್ನಾತಕೋತ್ತರ ... ಶ್ರೀ ಮುಮ್ಮಡಿ ಕೃಷ್ಣರಾಜ ಒಡೆಯರ ಜಯಂತ್ಯುತ್ಸವವು ಶ್ರೀ ಸಿ. ... ನವರ ಅಧ್ಯಕ್ಷತೆಯಲ್ಲಿ ನಡೆಯಿತು. ಪ್ರಾರ್ಥನೆಯಾದ ನಂತರ ಶ್ರೀ ... ಸ್ವಾಗತ ಭಾಷಣ ಮಾಡಿದರು. ... ಮುಮ್ಮಡಿ ಕೃಷ್ಣರಾಜ ಒಡೆಯರ ಜೀವನ ಚರಿತ್ರೆ ... ಎಂದು ... ತಿಳಿಸಿದರು. ... ರಾಜಭಾಷೆಯನ್ನು ... ಅವರು ... ಕೊಟ್ಟ ... ಮಾಡಿದರು.

ಜವಾಬ್ದಾರಿ ಸರಕಾರ ಸ್ಥಾಪನೆಯಾಗಬೇಕು

ರಾಮಸ್ವಾಮಿ ಮೊದಲಿಯಾರರ ನೇಮಕದ ಬಗ್ಗೆ ವಿರೋಧ

ಸ್ವಂ. ವು. ಪ್ರೋ॥] ಬೆಂಗಳೂರು ೧೭

ಮೈಸೂರು ಸಂಸ್ಥಾನದ ದಿವಾನರಾಗಿ ಸರ್ ಎ. ರಾಮಸ್ವಾಮಿ ಮೊದಲಿಯಾರರನ್ನು ನೇಮಕ ಮಾಡುವ ವಿಚಾರದಲ್ಲಿ ಶ್ರೀಮನ್ಮಹಾರಾಜರಿಗೆ ಸಲಹೆ ಕೊಟ್ಟಿರುವವರು, ದೇಶಕ್ಕೂ, ಜನಗಳಿಗೂ ದ್ರೋಹ ಮಾಡಿದ್ದಾರೆ. ಬರಲಿರುವ ಕಾಲದಲ್ಲಿ ಮೈಸೂರಿನ ಆಡಳಿತ ಸೂತ್ರ ವಹಿಸುವವರಿಗೆ ದೇಶದ ಪ್ರಜೆಗಳ ಬೆಂಬಲ ಅತ್ಯಾವಶ್ಯಕ. ಹೊರಗಿನಿಂದ ಬರುವವರಿಗೆ ಆ ಬೆಂಬಲ ಎಲ್ಲಿ ದೊರಕುವುದು? ನಮ್ಮ ದೇಶದಲ್ಲಿ ಸುವ್ಯವಸ್ಥಿತವಾದ ರಾಜಕೀಯ ಪಕ್ಷಗಳಿವೆ. ಈಗಲಲ್ಲಿ ಜವಾಬ್ದಾರಿ ಸರ್ಕಾರ ಸ್ಥಾಪಿಸಲು ಕಾಲ ಪಕ್ವವಾಗಿದೆ. ಆದ್ದರಿಂದ ಶ್ರೀ ಎಸ್. ನಾಗಪ್ಪರಾಯರು ತಮ್ಮ ಅಧಿಕಾರವಧಿಯ ಕಾಲವನ್ನು ಉಪಯೋಗಿಸಿಕೊಳ್ಳುವಂತೆ ಮಾಡಿ, ದೇಶದಲ್ಲಿ ಪ್ರಜಾ ಪ್ರಭುತ್ವದ ತತ್ವದಂತೆ ಜವಾಬ್ದಾರಿ ಸರ್ಕಾರ ಸ್ಥಾಪಿಸಿ ಚುನಾಯಿತ ಮಂತ್ರಿಗಳಿಗೆ ಅವರು ಅಧಿಕಾರ ವಹಿಸಿಕೊಡುವಂತೆ ಏರ್ಪಾಡು ಮಾಡಬೇಕು. ... ಎಂಬುದಾಗಿ ಶ್ರೀ ... ಎ. ಗುಂಡಪ್ಪನವರು ಒಂದು ಹೇಳಿಕೆ ಇತ್ತಿದ್ದಾರೆ.

ಪತ್ರಿಕೋದ್ಯೋಗಿಗಳ ಅಸಮ್ಮತಿ

ಸರ್ ಎ. ರಾಮಸ್ವಾಮಿ ಮೊದಲಿಯಾರರನ್ನು ದಿವಾನರಾಗಿ ನೇಮಿಸುವ ವಿಚಾರದಲ್ಲಿ ತಮ್ಮ ಅಸಮ್ಮತಿಯನ್ನು ಸೂಚಿಸಿ ಶ್ರೀಮನ್ಮಹಾರಾಜರು ಇದನ್ನು ಪುನಃ ಪರ್ಯಾಲೋಚಿಸಬೇಕೆಂದು ಕೋರುವ ಮತ್ತು ಪ್ರಕಟಣಾಕರ ಮೇಲೆ ಇತ್ತಿರುವ ನೋಟೀಸಿನ ಬಗ್ಗೆ ಸರ್ಕಾರದ ಧೋರಣೆಯನ್ನು ಖಂಡಿಸುವ ನಿರ್ಣಯವನ್ನು ಈ ಸಂಸ್ಥಾನದ ಪತ್ರಿಕೋದ್ಯೋಗಿ ಸಂಘದ ಆಡಳಿತ ಮಂಡಳಿ ಸಭೆಯಲ್ಲಿ ಅಂಗೀಕರಿಸಲಾಯಿತು.

ರಷ್ಯದ ಮೇಲೆ ಅಮೆರಿಕಾದ ಆಕ್ರೋಶ

ಅಮೆರಿಕದ ಪ್ರತಿನಿಧಿ ... ರಷ್ಯಾದ ಆರ್ಥಿಕ ... ಯೋಜನೆ ... ಅಮೆರಿಕೆ ... ವಿಫಲತೆ ... ರಷ್ಯವನ್ನು ... ವಿದೇಶಾಂಗ ಮಂತ್ರಿ ತೀವ್ರವಾಗಿ ಆಕ್ಷೇಪಿಸಿದ್ದಾರೆ. ... ರಷ್ಯದ ... ಯುದ್ಧ ... ಅನೇಕ ... ಇರಬಹುದು ...

... ಪ್ರತಿನಿಧಿ ... ಪ್ರಜೆಗಳ ... ಯುದ್ಧ ... ನೀತಿ ... ಮಾರ್ಗ ... ರಾಜ್ಯ ... ಈ ... ಮೈಸೂರು ...

ಸಾಧ್ವಿ

ಶುಕ್ರವಾರ ೧೭-೭-೪೬ ಬುಧವಾರ

ವಿಶ್ವಕರ್ಣಾಟಕಕ್ಕೆ ನೋಟೀಸು

ಮತ್ತೆ ವಿಶ್ವಕರ್ಣಾಟಕ ಪತ್ರಿಕೆಗೆ ನೋಟೀಸನ್ನು ಕೊಡಲಾಗಿದೆ. ಪತ್ರಿಕಾ ಶಾಸನದ ಪ್ರಕಾರ ಅದರ ಮೇಲೆ ಏಕೆ ಕಾರ್ಯ ಕ್ರಮವನ್ನು ಕೈಗೊಳ್ಳ ಬಾರದೆಂಬ ದಕ್ಕೆ ಕಾರಣವನ್ನು ಕೊಡಬೇಕೆಂದು ಕೇಳಲಾಗಿದೆ. ಇಂತಹ ಕಾರ್ಯಕ್ರಮಗಳು ವಿಶ್ವಕರ್ಣಾಟಕಕ್ಕೆ ಹೊಸದಲ್ಲ. ಇದುವರೆಗೆ ಅನೇಕಾವರ್ತಿ ಈ ಪತ್ರಿಕೆಯ ಮೇಲೆ ಶಾಸನ ಬಾಣದ ಪ್ರಯೋಗವಾಗಿದೆ. ಅವುಗಳಿಂದ ಚೇತರಿಸಿಕೊಂಡು ವಿಶ್ವಕರ್ಣಾಟಕವು ಮುಂದಕ್ಕೆ ಇದತ್ತ ಸಾರ್ವಜನಿಕ ಸೇವೆ ಯನ್ನು ಮಾಡ ಬಲ್ಲೆನೆಂದಿದೆ. ಆದ ಕಾರಣ ಈಗ ಒದಗಿರುವ ಘಟನೆಯಿಂದಲೂ ಪಾರಾಗಿ ಅದು ತನ್ನ ಸೇವೆಯನ್ನು ಮುಂದು ವರಿಸಲೆಂದು ನಾವು ಹಾರೈಸುತ್ತೇವೆ.

ಪತ್ರಿಕಾ ಶಾಸನದ ಕರಾಳ ಸ್ವರೂಪವನ್ನು ಜನರಿಗೆ ತಿಳಿಯಪಡಿಸುವುದರಲ್ಲಿ ವಿಶ್ವಕರ್ಣಾಟಕವು ಮಹತ್ತರವಾದ ಸೇವೆಯನ್ನು ಸಲ್ಲಿಸಿದೆ. ಪತ್ರಿಕಾ ಸ್ವಾತಂತ್ರ್ಯ ಹಕ್ಕು ಬಾಧ್ಯತೆಗಳಿಗಾಗಿ ನಡೆಸಿದ ಹೋರಾಟದ ಈ ಪ್ರಯತ್ನದಲ್ಲಿ ಅಪಾರವಾದ ಕಷ್ಟನಷ್ಟಗಳನ್ನೂ, ತ್ಯಾಗವನ್ನೂ ಅನುಭವಿಸಿದೆ. ವಿಶ್ವಕರ್ಣಾಟಕದ ಮೇಲೆ ಶಾಸನ ಬಾಣ ಪ್ರಯೋಗವಾಗಿರುವನ್ನು ಹಿಂದಿನ ಕಾಲದ ಬೇರಾವ ಪತ್ರಿಕೆಯ ಮೇಲೂ ಆಗಿಲ್ಲವೆಂದು ಹೇಳಬಹುದು. ಒಂದಾವರ್ತಿ ಅದು ಒಟ್ಟಿಗೆ ಮುದ್ರಣಾಲಯವನ್ನೆ ಕಳೆದುಕೊಂಡಿತು; ಮತ್ತೊಂದಾವರ್ತಿ ಮೂರು ತಿಂಗಳ ಬಹಿಷ್ಕಾರವನ್ನು ಅನುಭವಿಸಿತು. ಇನ್ನೊಮ್ಮೆ ಸಾವಿರಾರು ರೂಪಾಯಿಗಳ ಜಾಮೀನನ್ನು ಕೊಡಬೇಕಾಯಿತು. ಇಷ್ಟೇ ಅಲ್ಲದೆ ಇಂಥ ಶಾಸನ ಪ್ರಯೋಗದ ಸಂದರ್ಭಗಳಲ್ಲಿ ನಾನಾ ವಿಧವಾದ ಕಷ್ಟ ನಷ್ಟಗಳಿಗೆ ಈಡಾಗುತ್ತಲೇ ಇದ್ದರೂ ಅದು ತನ್ನ ಸೇವೆಯನ್ನು ಮಾತ್ರ ಬಿಡದೆ ದೃಢ ಸಂಕಲ್ಪದಿಂದ ಮುಂದುವರಿಸುತ್ತಲೇ ಇದೆ. ಕರ್ನಾಟಕ ಪತ್ರಿಕೋದ್ಯಮದಲ್ಲಿ ವಿಶ್ವಕರ್ಣಾಟಕಕ್ಕೆ ಒಂದು ಅನನ್ಯವಾದ ಸ್ಥಾನವು ಇದ್ದೇ ಇದೆ.

ಇತ್ತೀಚಿನಲ್ಲಿ ಪ್ರಕಟವಾದ ಲೇಖನಗಳಿಗಾಗಿ ಇದರಿಂದ ಸಮಾಧಾನವನ್ನು ಏಕೆ ಕೇಳಬಾರದೆಂದು ಸರ್ಕಾರದವರು ನೋಟೀಸ್ ಕೊಟ್ಟಿದ್ದಾರೆ. ಈ ಲೇಖನಗಳ [illegible] ಪ್ರಸ್ತಾಪಿಸಿರುವ [illegible] ವನ್ನು ತಿಳಿಸಬೇಕು ಅವುಗಳ ಬಗ್ಗೆ ಪತ್ರಿಕಾ [illegible] ವಿಚಾರಣೆಯನ್ನು ಕೊಡಬೇಕಾಗಿದ್ದಿತು. ಸರ್ಕಾರದವರ ಆರೋಪಣೆಗಳ [illegible] ಅದರ [illegible] ಸರ್ಕಾರದವರ [illegible]

[illegible]

ನ್ಯಾಯದ ಬಗ್ಗೆ ವಿಮರ್ಶೆ ಮಾಡುವುದು ಈಗ ಅಗತ್ಯವಾಗಿದೆ. ಸರ್ಕಾರದವರು ಪತ್ರಿಕಾ ಕರ್ತರೊಡನೆ ಆಲೋಚನೆ ಮಾಡಿದ್ದಾರೆ. ಅವರು ಫಿರ್ಯಾದಿ ಸ್ಥಾನದಲ್ಲಿದ್ದಾರೆ. ಪತ್ರಿಕಾ ಕರ್ತರಿಂದ ಒದಗಬಹುದಾದ ಸಮಾಧಾನಗಳನ್ನು ಸರ್ಕಾರದವರೇ ವಿಲೆ ಮಾಡುತ್ತಾರೆ. ಹೀಗೆ ಮಾಡುವುದರಲ್ಲಿ ಅವರು ನ್ಯಾಯಾಧೀಶರ ಸ್ಥಾನವನ್ನೂ ವಹಿಸುತ್ತಾರೆ. ಇದು ನ್ಯಾಯ ನಿರ್ಣಯದ ಮೂಲ ನೀತಿಗೆ ವಿರುದ್ಧವಾದುದು. ಫಿರ್ಯಾದಿಯೇ ನ್ಯಾಯಾಧಿಪತಿಯಾಗುವುದು ನ್ಯಾಯ ನಿರ್ಣಯದ ವಿಡಂಬನೆಯಾಗುವುದು. ಆದರೆ ಇಂದಿನ ಶಾಸನದಲ್ಲಿ ಇದಕ್ಕೆ ಅವಕಾಶ ಕಲ್ಪಿಸಲಾಗಿದೆ. ಆದುದರಿಂದಲೇ ಈ ಕರಾಳ ಶಾಸನವನ್ನು ತೊಡೆದು ಹಾಕಬೇಕೆಂದು ಸಕಲರೂ ಒತ್ತಾಯ ಪಡಿಸುತ್ತಿರುವರು.

ಪ್ರಕೃತದಲ್ಲಿ ಆಕ್ಷೇಪಣೀಯವೆಂದು ಹೇಳಲಾಗಿರುವ ಲೇಖನಗಳ ವಿಮರ್ಶೆಯನ್ನು ನಾವು ಮಾಡುವುದಿಲ್ಲ. ಆದರ ಬಗ್ಗೆ ಸರ್ಕಾರದವರ ತೀರ್ಪು ಹೇಗಿರಬಹುದೆಂಬುದನ್ನು ಊಹಿಸುವುದಿಲ್ಲ. ಆದರೆ ಇಂತಹ ಸಂದರ್ಭಗಳನ್ನು ಸಂಶೋಧಿಸುವ ರೀತಿಯ ವಿಚಾರದಲ್ಲಿ ಮಾತ್ರ ನಮ್ಮ ಅಸಮಾಧಾನವನ್ನು ಸೂಚಿಸುವೆವು.

ಪತ್ರಿಕೆಗಳೆಂದರೆ ಒಂದು ಸಂಸ್ಥೆ. ಅವುಗಳು ಕೇವಲ ಒಬ್ಬ ವ್ಯಕ್ತಿಯ ವ್ಯವಹಾರವಲ್ಲ. ಅವುಗಳಿಗೆ ಒದಗುವ ತೊಂದರೆಗಳು ಒಬ್ಬ ವ್ಯಕ್ತಿಗೆ ಮಾತ್ರವೇ ಅಲ್ಲದೆ ಅದರ ಸಂಬಂಧಿಕರಿಗೆ, ಸಕಲರಿಗೂ ಅನ್ವಯಿಸುತ್ತವೆ. ಒಂದು ವೇಳೆ ಒಬ್ಬ ಸಂಪಾದಕನಾಗಲೀ, ಪ್ರಕಟಣಕಾರನಾಗಲೀ, ಮುದ್ರಣಕಾರನಾಗಲೀ ಒಂದು ಅಪರಾಧವನ್ನು ಮಾಡಿದನೆಂದೇ ಭಾವಿಸೋಣ. ಅದಕ್ಕಾಗಿ ಇಡೀ ಸಂಸ್ಥೆಗೇ ತೊಂದರೆಕೊಡುವುದು ಸರಿಯೆ? ಸರ್ವಥಾ ಸರಿಯಲ್ಲ. ಪ್ರಜಾಪ್ರಭುತ್ವದಲ್ಲಿ ತೊಳಲುತ್ತಿರುವ ಬಡ ಭಾರತವನ್ನು ಬಿಟ್ಟರೆ ಇನ್ನೆಲ್ಲಿಯೂ ಪತ್ರಿಕೆಗಳ ಮೇಲೆ ಈ ಬಗೆಯ ಆಘಾತವು ನಡೆಯುತ್ತಿಲ್ಲ. ಇದನ್ನು ಎಷ್ಟು ಬೇಗ ತಪ್ಪಿಸಿದರೆ ಸಾರ್ವಜನಿಕ ಜೀವನದ ಉನ್ನತಿಗೆ ಅಷ್ಟು ಒಳ್ಳೆಯದು.

ವಿಶ್ವಕರ್ಣಾಟಕವು ಇದುವರೆಗೆ ಅನುಭವಿಸಿರುವ ಅಗ್ನಿಪರೀಕ್ಷೆಯಂತಹ ಕಷ್ಟ ಪರಂಪರೆಗಳು ಎಲ್ಲರ ಕಣ್ಣನ್ನೂ ತೆರೆದು ಈ ಕರಾಳ ಶಾಸನವನ್ನು ಶಾಸನಸಭೆಯ ಕಡತದಿಂದ ತೊಡೆದು ಹಾಕುವಂತೆ ಪ್ರೇರೇಪಿಸಲೆಂದು ಹಾರೈಸುತ್ತೇವೆ.

ಮಾನನಷ್ಟ ಮೊಕದ್ದಮೆ

ಮೈಸೂರು ೧೭.

ರಾಜಸೇವಾಸಕ್ತ ಶ್ರೀ ನವರತ್ನ ರಾಮರಾಯರು ಮತ್ತು ಅವರ ಮಗ ಮಾಧವರಾವ್ ಇವರುಗಳ ಮೇಲೆ ಮೈಸೂರು ಸಿರಿಕಲ್ಚರ್ ಸೂಪರಿಂಟೆಂಡೆಂಟರಾದ ಶ್ರೀ ಆರ್. ಎಸ್. ಉಲ್ಲಾಮುಕ್ಕಿಯವರು ಮಾನನಷ್ಟ ಮೊಕದ್ದಮೆಯೊಂದನ್ನು ಹೂಡಿದ್ದಾರೆ. ವಿಚಾರಣೆ ಆಗಸ್ಟ್ ೫ ನೇ ತಾ|| ನಡೆಯುವುದು.

ನಿಮ್ನ ವರ್ಗದವರ ಸತ್ಯಾಗ್ರಹ

ಬ್ರಿ|| ನಿಯೋಗದವರು ಸೂಚಿಸಿರುವ ಸಲಹೆಗಳು ಕಾಂಗ್ರೆಸ್ ಕುಯುಕ್ತಿಯಿಂದ ಕೂಡಿದೆಯೆಂದೂ, ಅವು ನಿಮ್ನ ವರ್ಗದವರಿಗೆ ತುಂಬಾ ಅನ್ಯಾಯವನ್ನು ಮಾಡಿದೆಯೆಂದೂ ಸೂಚಿಸಿ ಆ ಸಲಹೆಗಳ ಪ್ರತಿಭಟನೆಗಾಗಿ ಅಂಬೇಡ್ಕರ್ ಪಂಗಡದವರು ಮೊನ್ನೆಯಿಂದ ಪೂನಾದಲ್ಲಿ ಶಾಸನ ಸಭೆಯ ಮುಂದೆ ಸತ್ಯಾಗ್ರಹ ಆರಂಭಿಸಿದ್ದಾರೆ. ಮೊದಲನೇ ತಂಡದ ೬ ಮಂದಿ ಸತ್ಯಾಗ್ರಹಿಗಳು ಭವನದ ಮುಂದೆ ಕರೀ ಬಾವುಟ ಹಿಡಿದು 'ಬ್ರಿ|| ಸಾಮ್ರಾಜ್ಯಶಾಹಿ ನಾಶವಾಗಲಿ' 'ಕಾಂಗ್ರೆಸ್ಸು ನಾಶವಾಗಲಿ' 'ಪೂನಾ ಒಪ್ಪಂದ ರದ್ದಾಗಲಿ' ಎಂದು ಕೂಗಿಕೊಳ್ಳುತ್ತಾ ಇದ್ದರು. ಇವರೆಲ್ಲರ ದಸ್ತಗಿರಿ ಆಗಿದೆ. ಇವರಿಗೆ ೫೦ ರೂ ಜುಲ್ಮಾನೆ, ತಪ್ಪಿದಲ್ಲಿ ೧೫ ದಿನ ಸಜಾ ವಿಧಿಸಲ್ಪಟ್ಟಿತು.

ಪ್ರಸಿದ್ಧ ಪತ್ರಿಕೆ

ಶ್ರೀರಂಗಪಟ್ಟಣದ ಮುನಿಸಿಪಲ್ ಪ್ರೆಸಿಡೆಂಟರವರ ಆಫೀಸಿನಿಂದಾ

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ:

ಈ ಟೌನಿನಲ್ಲಿ ಸರ್ಕಾರದವರ ಹುಕುಂ ಪ್ರಕಾರ ಈ ಸಾಲಿಗೆ ಮುನಿಸಿಪಲ್ ಹೈಸ್ಕೂಲ್ ಪ್ರಾರಂಭವಾಗಿ(I Form) ೪ ನೇ ತರಗತಿ ನಡೆಯುವುದರಿಂದ ಹೈಸ್ಕೂಲಿಗೆ ಸೇರತಕ್ಕ ವಿದ್ಯಾರ್ಥಿಗಳು ಅಪ್ಲಿಕೇಷನ್‌ಗಳನ್ನು ಮುನಿಸಿಪಲ್ ಪ್ರೆಸಿಡೆಂಟರವರ ಆಫೀಸಿಗೆ ೨೦-೭-೪೬ ರ ಒಳಗಾಗಿ ದಾಖಲ್ ಮಾಡಿಕೊಳ್ಳತಕ್ಕದ್ದು.

ಶ್ರೀರಂಗಪಟ್ಟಣ ಸಿ. ವಿ. ಕೃಷ್ಣಸ್ವಾಮಿ
೧೬-೭-೪೬ ಪ್ರೆಸಿಡೆಂಟ್,
ಶ್ರೀರಂಗಪಟ್ಟಣದ ಮ್ಯುನಿಸಿಪಾಲಿಟಿ

Edited, printed and published by A. S. Nrijaraju at the Sadhvi Press D. Subbiah Road, Mysore

ವಿಶ್ವಕರ್ಣಾಟಕಕ್ಕೆ 'ಷೋಕಾಸ್' ನೋಟೀಸು

ವಿಶ್ವಕರ್ಣಾಟಕ ಪತ್ರಿಕೆಯಲ್ಲಿ ಜೂನ್ ೨೫, ೨೭, ೨೭ ಮತ್ತು ಜುಲೈ ೧ ರಲ್ಲಿ ಬರೆದ ಅಗ್ರ ಲೇಖನಗಳು ಆಕ್ಷೇಪಣೀಯವಾಗಿವೆಯೆಂದು ಆ ಪತ್ರಿಕೆಯ ಸಂಪಾದಕರು ಮತ್ತು ಪ್ರಕಟಣಕಾರರಿಬ್ಬರಿಂದ ಜಾಮೀನನ್ನು ಏಕೆ ಕೇಳಬಾರದೆಂದು ಸರ್ಕಾರದವರು 'ಷೋಕಾಸ್' ನೋಟೀಸ್ ಜಾರಿ ಮಾಡಿದ್ದಾರೆ.

ರಾಜ್ಯಾಂಗ ರಚನಾ ಸಭೆಗೆ ಮೈಸೂರು ಕಾಂ|| ಅಧ್ಯಕ್ಷರು

ಬೊಂಬಾಯಿ ಶಾಸನ ಸಭೆಯಿಂದ ರಾಜ್ಯಾಂಗ ರಚನಾ ಸಭೆಗೆ ಮೈಸೂರು ಕಾಂಗ್ರೆಸ್ಸಿನ ಮತ್ತು ಕರ್ನಾಟಕ ಪ್ರಾಂತ್ಯ ಕಾಂಗ್ರೆಸ್ ಸಮಿತಿಯ ಅಧ್ಯಕ್ಷರಾದ ಶ್ರೀ ಸಿದ್ದನಹಳ್ಳಿ ನಿಜಲಿಂಗಪ್ಪನವರು ಅವಿರೋಧವಾಗಿ ಆರಿಸಲ್ಪಟ್ಟಿದ್ದಾರೆ.

ಪ್ರಸಿದ್ಧ ಪತ್ರಿಕೆ

ಶ್ರೀರಂಗಪಟ್ಟಣದ ಮುನಿಸಿಪಲ್ ಪ್ರೆಸಿಡೆಂಟರವರ ಆಫೀಸಿನಿಂದಾ.

ಇದರಿಂದ ಸಮಸ್ತ ಜನರಿಗೂ ತಿಳಿಯಪಡಿಸುವುದೇನೆಂದರೆ —

ಈ ಟೌನಿನಲ್ಲಿ ಸರ್ಕಾರದವರ ಹುಕುಂ ಪ್ರಕಾರ ಈ ಸಾಲಿಗೆ ಮುನಿಸಿಪಲ್ ಹೈಸ್ಕೂಲ್ ಪ್ರಾರಂಭವಾಗುವುದರಿಂದ(I Form) ೪ ನೇ ತರಗತಿಗೆ ಉಪಾಧ್ಯಾಯರುಗಳು ಬೇಕಾಗಿರುವುದರಿಂದ ಇಷ್ಟವುಳ್ಳವರು ೨೦-೭-೪೬ ರ ಒಳಗಾಗಿ ಮುನಿಸಿಪಲ್ ಆಫೀಸಿಗೆ ಉಪಾಧ್ಯಾಯರ ಸ್ಥಾನಕ್ಕೆ ಅರ್ಜಿಗಳನ್ನು ಹಾಕಬಹುದೆಂದು, ಮೊದಲು ಪ್ರಕಟಿಸಿರುತ್ತೆ. ನಂತರ ಬರುವ ಅಪ್ಲಿಕೇಷನ್‌ಗಳನ್ನು ಅಂಗೀಕರಿಸುವುದಿಲ್ಲ.

ಶ್ರೀರಂಗಪಟ್ಟಣ ಸಿ. ವಿ. ಕೃಷ್ಣಸ್ವಾಮಿ
೧೬-೭-೪೬ ಪ್ರೆಸಿಡೆಂಟ್,
ಶ್ರೀರಂಗಪಟ್ಟಣದ ಮ್ಯುನಿಸಿಪಾಲಿಟಿ

ಕ್ಯಾಟಲಾಗಿನಲ್ಲೇನಿದೆ

"ಕೊನೆಯಲ್ಲಿ ಒಂದು ಮಾತು. ಬಹುಕಾಲ ಸಂಬಂಧದ ಹೊಟ್ಟೆನೋವಿನ ದೆಸೆಯಿಂದ ಪರಿಶ್ರಮಪಟ್ಟು ಇದಕ್ಕೆ ಮನಿ "ಸಂತಾನ ಸಿಂಧೂರ" ಕ್ರಿಂತಲೂ ಪ್ರಶಸ್ತವಾದ ಔಷಧವು ಪ್ರಪಂಚದಲ್ಲಿ ಎಲ್ಲೂ ಇಲ್ಲವೆಂದು ಹೊಗಳಿಕೊಳ್ಳಲು ನನಗೆ ಇಷ್ಟವಿಲ್ಲದಿದ್ದಾಗ್ಯೂ, ಕಳೆದ ೮೭ ವರ್ಷಗಳಿಂದಲೂ ನಮ್ಮ ಮನೆತನದಲ್ಲಿ ಚಾಲ್ತಿಯಲ್ಲಿರತಕ್ಕ ಈ ಚಿಕಿತ್ಸೆಯಿಂದ ಫಲವಾಗದಿದ್ದಲ್ಲಿ ಮುಖ್ಯವ ಇಂಗ್ಲೀಷ್, ಯುನಾನಿ, ಕರ್ನಾಟಕ ಚಿಕಿತ್ಸೆಯಿಂದಲೂ ಖಂಡಿತ ಫಲವಾಗಲಾರದೆಂಬ ಸಂಗತಿಯನ್ನು ಮಾತ್ರ ಅನುಭವಪೂರ್ವಕವಾಗಿಯೂ ನಿರ್ಭೀತಿಯಿಂದಲೂ ಹೇಳುತ್ತೇನೆ."

ಇನ್ನೂ ಏನೇನೋ ಇದೆ. ಬರೆದು ಬೇಕಾದರೆ.

ಎ. ರಾಮಸ್ವಾಮಿ ಅಯ್ಯಂಗಾರ್
ಪ್ರೊಪ್ರೈಟರ್, "ಸಂತಾನ ಸಿಂಧೂರ"
ಆಫೀಸ್, ೮ ಒಳೆ, ೮ ಲೇನ್,
[illegible]

ರಾಜ್ ಕಮಲ್ ಟಾಕೀಸ್, ಮೈಸೂರು

1946 ನೇ ಜುಲೈ 17 ನೇ ಬುಧವಾರದಿಂದ ಪ್ರತಿ ವಾರ

ರಾಜ್ ಕಮಲ್ ರವರ

- ಪಬ್ಲಿಕ್ ಶೋ ಪೆ ಅಪ್ಪನ ಡೇರ -

ನ.. ವಿ. ಕೂಮಾರೆಂಪಲ್ಲಿ, ನಾನೇವಾಸಿ, ಉಬ್ಲ್ಯಾನ್ — ದಿಗ್ದರ್ಶಕರು: ಪ್ರತಿ|| ಶಾಂತಾರಾಮ್

[illegible]

ಪ್ರದರ್ಶನ [illegible]

[illegible] — [illegible]

[illegible]

[illegible] ಮೈಸೂರು.

[illegible]

ಫೋನ್ ನಂ. 302 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ 3 ಕಾಸು

ಸಂಪುಟ ೪] ಗುರುವಾರ ೧೮—೭—೪೬. [ಸಂಚಿಕೆ ೨೬೧

ಇನ್ನು ೨-೩ ದಿನಗಳಲ್ಲಿ ಮುಷ್ಕರದ ಮುಕ್ತಾಯ

ದೇವರೇ ಸೂಚಕರು ದೇಶವೇ ಅನುಮೋದಕರು

ಬೊಂಬಾಯಿಂದ ರಾಜ್ಯಾಂಗ ರಚನಾ ಸಭೆಗೆ ಉಮೇದುವಾರಿಕೆ ಸಲ್ಲಿಸಿದ್ದವರ ಪೈಕಿ ಶ್ರೀ ಕೆ. ಎನ್. ಬೆನೆಗಾರಿ ಎಂಬುವರ ಉಮೇದುವಾರಿಕೆಯನ್ನು ತಳ್ಳಿಹಾಕಲಾಗಿದೆ. ಅವರ ಅರ್ಜಿಯ ಸೂಚಕರು ಎಂಬ ಕಾಲಂನಲ್ಲಿ 'ದೇವರು' ಎಂದೂ, ಅನುಮೋದಕರ ಕಾಲಂನಲ್ಲಿ 'ದೇಶ' ಎಂದೂ ನಮೂದಿಸಿರುವುದರಿಂದ, ದೇವರು ಮತ್ತು ದೇಶ ಇವರಿಬ್ಬರೂ ಶಾಸನ ಸಭಾ ಸದಸ್ಯರಲ್ಲವೆಂದು ಹೇಳಿ ಬೊಂಬಾಯಿ ಅಸೆಂಬ್ಲಿ ಕಾರ್ಯದರ್ಶಿಗಳು ಆ ಅರ್ಜಿಯನ್ನು ತಿರಸ್ಕರಿಸಿದ್ದಾರೆ.

ಹರಿಜನರಿಗೆ ಅನ್ಯಾಯವಾಗಿದೆಯೆಂದು ಉಪವಾಸ ಮುಷ್ಕರ

ಮದ್ರಾಸಿನಿಂದ ಭಾರತ ರಾಜ್ಯಾಂಗ ರಚನಾ ಸಭೆಗೆ ಹರಿಜನರಿಗೆ ಸರಿಯಾದ ಪ್ರಾತಿನಿಧ್ಯ ಕೊಟ್ಟಿಲ್ಲವೆಂದು ಹೇಳಿ, ಅದನ್ನು ಸರಿಪಡಿಸದಿದ್ದಲ್ಲಿ, ತಾವು ಆಮರಣಾಂತರ ಉಪವಾಸ ಮಾಡುವುದಾಗಿ ರಾಮನಾಡಿನ ಶ್ರೀ ಆರುಳಪ್ಪ ಎಂಬ ಹರಿಜನ ಯುವಕನು ಮೊನ್ನೆ ಬೆಳಗಿನಿಂದ ಪ್ರಧಾನಿಗಳ ಕಛೇರಿ ಮುಂಭಾಗದಲ್ಲಿ ಉಪವಾಸ ಮುಷ್ಕರವನ್ನು ಆರಂಭಿಸಿದ್ದಾನೆ. ಕಾಂಗ್ರೆಸ್ ಅಧ್ಯಕ್ಷ ಪಂ॥ ನೆಹರೂರವರಿಗೆ ಈ ಬಗ್ಗೆ ವಿವರವಾದ ತಂತಿ ಸಹ ಕಳಿಸಿದ್ದಾನೆ.

ಶಾಂತಿ ಸಮ್ಮೇಳನಕ್ಕೆ ಭಾರತದ ಪರ ಯಾರು ?

ವಿಶ್ವಶಾಂತಿ ಸಮ್ಮೇಳನಕ್ಕೆ ಭಾರತದ ಪರವಾಗಿ ಯಾರನ್ನು ಕಳುಹಿಸಬೇಕೆಂಬ ಬಗ್ಗೆ ವೈಸರಾಯರು ಆಲೋಚನಾ ಮಗ್ನರಾಗಿರುವುದಾಗಿ ಗೊತ್ತಾಗಿದೆ. ಕೇಂದ್ರದಲ್ಲಿ ತಾತ್ಕಾಲಿಕ ಸರ್ಕಾರದ ರಚನೆಯೇನಾದರೂ ಆದರೆ ಆಗ್ಗೆ ಪಂ॥ ನೆಹರು ಮತ್ತು ಮಿ॥ ಜಿನ್ನಾರವರು ಭಾರತವನ್ನು ಪ್ರತಿನಿಧಿಸಬಹುದು. ಯಾವ ಪಕ್ಷಕ್ಕೂ ಸೇರದ ಸರ್ ಎ. ರಾಮಸ್ವಾಮಿ ಮೊದಲಿಯಾರರನ್ನು ಕಳಿಸಬಹುದೆಂದು ಒಂದು ಸಲಹೆ. ಕಾಂಗ್ರೆಸ್ ಮತ್ತು ಲೀಗ್ ಅಧ್ಯಕ್ಷರನ್ನು ಆರಿಸಬೇಕೆಂದು ಮತ್ತೊಂದು ಸಲಹೆ ಬಂದಿದೆ.

ಪುನಃ ರೈಲ್ವೆ ಮುಷ್ಕರದ ಸಂಭವ

ಅಧಿಕಾರಿಗಳು ಭರವಸೆ ಕೊಟ್ಟಿದ್ದಂತೆ ತಾತ್ಕಾಲಿಕವಾದ ಪರಿಹಾರಗಳನ್ನು ಕೊಡದೆ ಈಗಿರುವ ರಿಯಾಯಿತಿಗಳನ್ನೂ ಕಡಿಮೆ ಮಾಡುತ್ತಿರುವುದರಿಂದ ಸದ್ಯದಲ್ಲಿಯೇ ಅಖಿಲ ಭಾರತ ರೈಲ್ವೆ ಕೆಲಸಗಾರರು ಮುಷ್ಕರದ ಪ್ರಸಂಗವನ್ನು ಕೈಗೊಳ್ಳಬಹುದೆಂದು ಅ॥ಭಾ॥ ರೈಲ್ವೆ ಕೆಲಸಗಾರರ ಸಂಘದ ಸದಸ್ಯರಾದ ಶ್ರೀ ಶಿವನಾಥ ಬ್ಯಾನರ್ಜಿಯವರು ಹೇಳಿರುವರು.

ಬಿಳಿಯರ ಮೇಲೆ ಸ್ವಾ॥ಭಾರತದ ಯುದ್ಧ

ದ॥ ಆಫ್ರಿಕದ ಬಿಳಿಯರ ದುರಹಂಕಾರವು ನಮ್ಮನ್ನು ಪ್ರತಿಭಟನೆಗೆ ಪ್ರೇರೇಪಿಸುತ್ತಿದೆ. ಬಹಳಕಾಲ ಅಹಿಂಸೆಯಿಂದಲೇ ನಾವು ಪ್ರತಿಭಟಿಸುತ್ತಿರಲಾರೆವು. ಸ್ವತಂತ್ರ ಭಾರತವು ಶಕ್ತಿಯನ್ನು ಪಡೆದ ದ॥ ಆಫ್ರಿಕದ ಬಿಳಿಯರನ್ನು ಅವರ ಸ್ವಂತ ದೀಪಗಳಿಗೆ ಓಡಿಸಬಹುದು. ಆದರೆ ಹಾಗೆ ಆಗದಿರಲೆಂದು ನಾನು ಹಾರೈಸುತ್ತೇನೆ— ಎಂಬುದಾಗಿ ಶ್ರೀ ಕೆ. ಟಿ. ಭಾಷ್ಯಂರವರು ಮಾಡಿದ ಒಂದು ಭಾಷಣದಲ್ಲಿ ಹೇಳಿರುವುದಾಗಿ ವರದಿಯಾಗಿದೆ.

ದ॥ ಆಫ್ರಿಕಾದ ಬಗ್ಗೆ ಮದ್ರಾಸ್ ಗವರ್ನರ ವಿರೋಧ

ದ॥ ಆಫ್ರಿಕಾದಲ್ಲಿ ಬಿಳಿಯರು ಭಾರತೀಯರ ಬಗ್ಗೆ ವರ್ತಿಸುತ್ತಿರುವ ನೀತಿಯನ್ನು ಖಂಡಿಸಬೇಕಲ್ಲವೇ ? ಎಂದು ಒಬ್ಬ ಯುವಕನು ಗುಂಟೂರಿನಲ್ಲಿ ಮದ್ರಾಸ್ ಗವರ್ನರನ್ನು ಪ್ರಾರ್ಥಿಸಿದಾಗ, ಅವರು ಕೂಡಲೇ ಉತ್ತರವಿತ್ತು "ನಾನು ನಿಮ್ಮ ಅಭಿಪ್ರಾಯವನ್ನು ಒಪ್ಪುತ್ತೇನೆ" ಎಂದಿದ್ದಾರೆ.

ಸತ್ಯಾಗ್ರಹಿಗಳಿಗೆ ಸಹಾಯ ಮಾಡಿದ್ದಕ್ಕೆ ಜುಲ್ಮಾನೆ

ಭಾರತೀಯ ಸತ್ಯಾಗ್ರಹಿಗಳಿಗೆ ಆಹಾರ ವಸ್ತುಗಳು, ಹಣ್ಣುಗಳು, ಸಿಗರೇಟು ಮತ್ತು ವೃತ್ತಪತ್ರಿಕೆಗಳನ್ನು ಒದಗಿಸಿದರೆಂಬ ಆಪಾದನೆ ಮೇಲೆ ಡರ್ಬಾನಿನ ನ್ಯಾಯಾಧೀಶರು ಇಬ್ಬರು ಮಹಿಳೆಯರಿಗೆ ತಲಾ ೩ ಪೌಂಡು ಜುಲ್ಮಾನೆ ವಿಧಿಸಿದರು.

ಗಾಂಧೀಜಿಯೇ ಹರಿಜನರ ದೇವರು

ಸೈಲ್‌ಕೋಟೆ ಜಿಲ್ಲಾ ಹರಿಜನ ಸಂಘದವರು ನಡೆಸಿದ ಹರಿಜನ ಸಮ್ಮೇಳನದಲ್ಲಿ ಅವರ ಜಿಲ್ಲೆಯಲ್ಲಿ ಒಂದು ದೇವಾಲಯವನ್ನು ಕಟ್ಟಿ ಗಾಂಧೀಜಿಯವರ ವಿಗ್ರಹವನ್ನು ಅಲ್ಲಿ ಪ್ರತಿಷ್ಠಿಸಿ ಹರಿಜನರಿಗಾಗಿ ಅವರು ಸಲ್ಲಿಸಿರುವ ಸೇವೆಗೆ ಕೃತಜ್ಞತೆಯನ್ನು ಅರ್ಪಿಸಬೇಕೆಂದು ತೀರ್ಮಾನಿಸಲಾಗಿದೆ.

---

* ಪ್ರಜಾಪ್ರತಿನಿಧಿ ಸಭೆಯ ದಸರಾ ಅಧಿವೇಶನವು ಸೆಪ್ಟೆಂಬರ್ ೩೦ ನೇ ತಾ॥ ಸೋಮವಾರದಿಂದ ಮೈಸೂರು ಜಗನ್ಮೋಹನ ಭವನದಲ್ಲಿ ಜರುಗುವುದು.
* ಸಿಂಧ್ ಮಂತ್ರಿಮಂಡಲದ ಮೇಲೆ ಅವಿಶ್ವಾಸ ನಿರ್ಣಯ ಮಂಡಿಸಲು ಅಲ್ಲಿನ ಗವರ್ನರು ಅವಕಾಶ ಕೊಡದಿರುವುದನ್ನು ಫೆಡರಲ್ ನ್ಯಾಯಾಸ್ಥಾನದ ಪರಿಶೀಲನೆಗೆ ವಿರೋಧಪಕ್ಷದವರು ಒಪ್ಪಿಸುವರೆಂದು ಗೊತ್ತಾಗಿದೆ.
* ಒಂದೂ ಮಹಾಸಭೆಯ ಮಾಜಿ ಅಧ್ಯಕ್ಷರಾದ ವೀರ ಸಾವರ್ಕರರ ದೇಹಸ್ಥಿತಿ ಚಿಂತಾಜನಕವಾಗಿದೆಯೆಂದು ವಾರ್ತೆ ಬಂದಿದೆ.
* ಪಂಜಾಬ್ ಪ್ರಾಂತ್ಯದ ಕಾಂಗ್ರೆಸ್ಸಿನವರಾದ ಮೌಲಾನಾ ದಾವೂದ್ ಗಜ್ನವಿಯವರು ಕಾಂಗ್ರೆಸ್ ಬಿಟ್ಟು ಲೀಗಿಗೆ ಸೇರಿದರು.
* ಚಿತ್ತಗಾಂಗಿನಲ್ಲಿ ಮಳೆಯಿಂದ ಉಂಟಾದ ಅನಾಹುತದಲ್ಲಿ ೧ ಕೋಟಿ ರೂ. ಗಳ ನಷ್ಟ ಸಂಭವಿಸಿರುವುದಾಗಿ ಗೊತ್ತಾಗಿದೆ.

ಅಂಚೆ ನೌಕರರ ಮುಷ್ಕರ

ಮೈಸೂರು ೧೮

ರಾಜಧಾನಿಯ ಅಂಚೆ ಮತ್ತು ಕೆಳದರ್ಜೆಯ ನೌಕರರು ಮುಷ್ಕರ ಹೂಡಿ ಇಂದಿಗೆ ಮೂರು ದಿನವಾಯಿತು. ಈ ದಿನ ಇವರೆಲ್ಲರೂ ಬೆಳಗ್ಗೆ ಒಂಭತ್ತು ಘಂಟೆಗೆ ಕಾಂಗ್ರೆಸ್ ಕಛೇರಿಯಿಂದ ಮೆರವಣಿಗೆಯಲ್ಲಿ ಸಯ್ಯಾಜಿರಾವ್ ರಸ್ತೆಯಿಂದ ಹೊರಟು ನಗರದ ನಾನಾ ಕಡೆಗಳಿಗೆ ಹೋಗಿದ್ದರು. ಸಂಸ್ಕೃತಿ ಪುರದಲ್ಲಿ ಶ್ರೀ ವಿ. ತಿ. ಪುಟ್ಟಣ್ಣನವರು ಅಂಚೆ ನೌಕರರಿಗೆಲ್ಲಾ ಸರಬತ್ತು ಕೊಟ್ಟಿದ್ದಲ್ಲದೆ ೨೫ ರೂಗಳನ್ನೂ, ಪೋಲಿಸ ಅಂಗಡಿಯ ಶ್ರೀ ಒಸಪ್ಪ ಎಂಬುವರು ೫ ರೂಗಳನ್ನೂ ಸಹ ಕೊಟ್ಟಿರುವರು.

ಕಾಗದದ ಅಭಾವ

ರಾಜಧಾನಿಯಲ್ಲಿ ಕಾಗದದ ಅಭಾವವು ಹೆಚ್ಚಿದೆ. ಶಾಲಾ ವಿದ್ಯಾರ್ಥಿಗಳ ಪರದಾಟ ಅಸಾಧ್ಯವಾಗಿದೆ. ಸರ್ಕಾರದವರು ಆಯಾ ಶಾಲೆಗೆ ಅವಶ್ಯಕವಾದಷ್ಟು ಕಾಗದಗಳನ್ನು ಕಳಿಸಿಕೊಟ್ಟು ಅವುಗಳು ಅಲ್ಲೇ ಹಂಚಿಕೆ ಆಗಲು ವ್ಯವಸ್ಥೆ ಮಾಡಬೇಕು—ಎಂದು ಶ್ರೀ ಜೆ. ಸ್ವಾಮಿದಾಸರು ಪ್ರಾರ್ಥಿಸಿದ್ದಾರೆ.

ಸಿಖ್ಖರ ತೀರ್ಮಾನದ ಬಗ್ಗೆ ಪಂಡಿತ ನೆಹರೂರವರು

ಪಾಂಥಿಕ್ ಅಕಾಲಿ ಸಮ್ಮೇಳನದ ತೀರ್ಮಾನದಂತೆ ಕಾಂಗ್ರೆಸ್ ಸಿಖ್ಖರೂ ಸಹ ರಾಜ್ಯಾಂಗ ರಚನಾ ಸಭೆಗೆ ಸಲ್ಲಿಸಿದ್ದ ಉಮೇದುವಾರಿಕೆಯನ್ನು ವಾಪಸು ತೆಗೆದುಕೊಂಡ ಬಗ್ಗೆ ಕಾಂಗ್ರೆಸ್ ಅಧ್ಯಕ್ಷ ಪಂ॥ ಜವಹರಲಾಲರು ಹೇಳಿಕೆಯೊಂದನ್ನಿತ್ತು ಅಂಚೆ ನೌಕರರ ಮುಷ್ಕರದಿಂದಾಗಿ ಅವರಿಗೂ ಪಂಜಾಬ್ ಸಿಖ್ ಪ್ರಮುಖರಿಗೂ ಕಾಲಕ್ಕೆ ಸರಿಯಾಗಿ ಪತ್ರ ವ್ಯವಹಾರಗಳು ತಲುಪದಿದ್ದುದರಿಂದ ಈ ಪರಿಸ್ಥಿತಿ ಉಂಟಾಗಿದೆಯೆಂದೂ, ಕಾಂಗ್ರೆಸ್ ಸಿಖ್ಖರು ಕಾಂಗ್ರೆಸ್ ನಿರ್ಧಾರದಂತೆ ನಡೆಯಬೇಕೆಂದೂ ಸೂಚಿಸಿದ್ದಾರೆ.

ಹೈದರಾಬಾದಿನಲ್ಲಿ ಜಿನ್ನಾರವರ ಪರಾಜಯ

ಹೈದರಾಬಾದಿನ ಪ್ರಧಾನಿಯನ್ನಾಗಿ ಸರ್ ಮಿರ್ಜಾರವರನ್ನು ನೇಮಕ ಮಾಡುವುದನ್ನು ತಪ್ಪಿಸುವ ಸಲುವಾಗಿ ಮಿ॥ ಜಿನ್ನಾರವರು ನಿಜಾಮರನ್ನು ಬಲವಂತ ಪಡಿಸಿದರೆಂದೂ ಆದರೆ ಅವರ ಪ್ರಯತ್ನ ಫಲಿಸಲಿಲ್ಲವಾಯಿತೆಂದೂ ವರದಿಯಾಗಿದೆ. ಸರ್ ಮಿರ್ಜಾರವರು ಬರುವ ಆಗಸ್ಟ್ ೧೫ ನೇ ತಾ॥ ಜಯಪುರದ ಅಧಿಕಾರದಿಂದ ನಿವೃತ್ತರಾಗಿ ಹೈದರಾಬಾದಿಗೆ ತೆರಳುವರೆಂದು ಗೊತ್ತಾಗಿದೆ.

ಇನ್ನು ೨-೩ ದಿನಗಳಲ್ಲೇ ಅಂಚೆ ಮುಷ್ಕರದ ಸಮಾಪ್ತಿಯೆ ?

ಕೇಂದ್ರ ಶಾಸನ ಸಭೆಯ ಕಾಂಗ್ರೆಸ್ ಪಕ್ಷದ ಪ್ರಧಾನ 'ವಿಪ್' ಆದ ಶ್ರೀ ಸತ್ಯನಾರಾಯಣ ಸಿನ್ಹರವರು ಪೋಸ್ಟ್‌ಮಾಸ್ಟರ್ ಜನರಲ್‌ರವರಾದ ಶ್ರೀ ಕೃಷ್ಣಪ್ರಸಾದರನ್ನು ನಿನ್ನೆ ದಿನ ಭೇಟಿಮಾಡಿ ಅಂಚೆ ನೌಕರರ ಮುಷ್ಕರದ ವಿಚಾರದಲ್ಲಿ ಚರ್ಚೆ ನಡೆಸಿದರೆಂದು ಗೊತ್ತಾಗಿದೆ. ಶ್ರೀ ಪ್ರಸಾದರು ವರ್ತನೆ ಬಗ್ಗೆ ಸಮಾಧಾನ ಸೂಚಿಸಿ, ಕೆಲಸಗಾರರ ಬೇಡಿಕೆಗಳಲ್ಲಿ ಬಹುಭಾಗವನ್ನು ಸರ್ಕಾರದವರು ಒಪ್ಪಿಕೊಳ್ಳಬಹುದೆಂದು ತಿಳಿಸಿ, ಅಂಚೆ ನೌಕರರ ಮುಷ್ಕರವು ಇನ್ನು ಎರಡು ಮೂರು ದಿನಗಳಲ್ಲೇ ಮುಕ್ತಾಯಗೊಳ್ಳುವುದು-ಎಂದು ಶ್ರೀ ಸಿನ್ಹರವರು ತಿಳಿಸಿದ್ದಾರೆ.

ಶಾಂತಿ ಸಮ್ಮೇಳನಕ್ಕೆ ಸಂಸ್ಥಾನಗಳ ಪ್ರತಿನಿಧಿ

ಭೂಪಾಲ್ ಸಂಸ್ಥಾನದ ರಾಜೀನಾಮೆ ಕೊಟ್ಟ ದಿವಾನರಾದ ಸರ್ ಜೋಸೆಫ್ ಭೋರ್‌ರವರನ್ನು ಪ್ಯಾರಿಸ್ಸಿನಲ್ಲಿ ನಡೆಯುವ ವಿಶ್ವಶಾಂತಿ ಸಮ್ಮೇಳನಕ್ಕೆ ಭಾರತದ ದೇಶೀಯ ಸಂಸ್ಥಾನಗಳ ಪ್ರತಿನಿಧಿಯನ್ನಾಗಿ ನರೇಂದ್ರ ಸಮ್ಮೇಳನದ ಅಧ್ಯಕ್ಷರಾದ ಭೂಪಾಲ್ ನವಾಬರು ನೇಮಿಸಿದ್ದಾರೆ.

ಬ್ರಿಟನ್ನಿನಲ್ಲಿ ಹೆಚ್ಚು ಪೆಟ್ರೋಲ್ ಹಂಚಿಕೆ

ಬ್ರಿಟನ್ನಿನಲ್ಲಿ ಕೊಡುತ್ತಿರುವ ಪೆಟ್ರೋಲ್ ರೇಷನನ್ನು ಶೇ॥ ೫೦ ರಷ್ಟು ಹೆಚ್ಚಿಸಲಾಗಿದೆ. ಅಕ್ಟೋಬರ್ ತಿಂಗಳಿಂದಾಗಿ ಈ ರೀತಿ ಮಾಡಲಾಗಿದೆಯೆಂದು ಹೇಳಲಾಗಿದೆ.

ಅಗಸ್ಟ್ ೯ ಕ್ಕೆ ಭಾರತದಾದ್ಯಂತ ಹರತಾಳ

'ಕ್ವಿಟ್ ಇಂಡಿಯಾ' ನಿರ್ಣಯ ಅಂಗೀಕಾರವಾದ ಆಗಸ್ಟ್ ೯ ನೇ ತಾ॥ ಭಾರತದಾದ್ಯಂತ ಸಂಪೂರ್ಣ ಹರತಾಳವನ್ನು ನಡೆಸಲು ಕಾಂಗ್ರೆಸ್ ಸಮಾಜವಾದಿ ಪಕ್ಷವು ವ್ಯವಸ್ಥೆ ಮಾಡುತ್ತಿದೆ. ಈ ಬಗ್ಗೆ ಶ್ರೀ ಜಯಪ್ರಕಾಶರು ಸದ್ಯದಲ್ಲೇ ವಿವರವಾದ ಒಂದು ಹೇಳಿಕೆಯನ್ನು ಕೊಡಲಿದ್ದಾರೆ.

ತಾತ್ಕಾಲಿಕ ಸರ್ಕಾರದ ಬಗ್ಗೆ ಮತ್ತೆ ಸಂಧಾನಾರಂಭವೇ ?

ಕೇಂದ್ರದಲ್ಲಿ ತಾತ್ಕಾಲಿಕ ಸರ್ಕಾರವನ್ನು ಸ್ಥಾಪಿಸುವ ಬಗ್ಗೆ ಪುನಃ ಸಂಧಾನವನ್ನು ವೈಸರಾಯ್ ಲಾರ್ಡ್ ವೇವೆಲ್ ಮೊದಲನೇ ವಾರದಲ್ಲಿ ಆರಂಭಿಸುವರೆಂದು ತಿಳಿದುಬಂದಿದೆ. ಸಂಧಾನ ಆರಂಭವಾದ ನಂತರ ಅವಶ್ಯಕತೆ ತೋರಿದರೆ ಬ್ರಿಟಿಷ್ ಮಂತ್ರಿಗಳಲ್ಲಿ ಹಲವರು ಭಾರತಕ್ಕೆ ಬರಬಹುದೆಂದೂ ಹೇಳಲಾಗಿದೆ.

ಮೇಹಲಿಯಲ್ಲಿ ಕಾಂಗ್ರೆಸ್ ಅಧಿವೇಶನ

ಅಖಿಲ ಭಾರತ ಕಾಂಗ್ರೆಸ್ಸಿನ ಮುಂದಿನ ಅಧಿವೇಶನವು ಮೇಹಲಿಯಲ್ಲಿ ನಡೆಯುವಂತೆ ಮುಂದಿನ ಕಾರ್ಯಕಾರಿ ಸಮಿತಿ ಸಭೆಯಲ್ಲಿ ತೀರ್ಮಾನವಾಗುವುದಾಗಿ ಹೇಳಲಾಗಿದೆ.

ಗೋವಾ ನಾಯಕರ ದಸ್ತಗಿರಿ

ಗೋವಾ ಕಾಂಗ್ರೆಸ್ ಸಮಿತಿಯ ಪ್ರಧಾನ ಕಾರ್ಯದರ್ಶಿಗಳನ್ನು ದಸ್ತಗಿರಿ ಮಾಡಿ ಮಾರ್ಮ ಗೋವಾದಲ್ಲಿ ಸೆರೆ ಇಡಲಾಗಿದೆ. [illegible] ದರ್ಶಿಗಳ [illegible] ಗೊತ್ತಾಗಿದೆ

ಸಾಧ್ವಿ
ತಾ|| ೧೮-೭-೪೬ ಗುರುವಾರ

ಮೈಸೂರಿನ ದಿವಾನಗಿರಿ

ನಮ್ಮ ಸಂಸ್ಥಾನದ ಹಿಂದಿನ ದಿವಾನರಾಗಿ ಸರ್ ಎ. ರಾಮಸ್ವಾಮಿ ಮೊದಲಿಯಾರ್‌ರವರ ಬರುವ ವಿಚಾರವಾಗಿ ಈಗಾಗಲೇ ವಿಶೇಷ ಚರ್ಚೆ ನಡೆದಿದೆ. ಹಲವು ಪ್ರಮುಖರು ತಮ್ಮ ಅಭಿಪ್ರಾಯಗಳನ್ನು ವ್ಯಕ್ತಪಡಿಸಿದ್ದಾರೆ. ಮೈಸೂರಿನವರಲ್ಲದವರನ್ನು ದಿವಾನಗಿರಿಗೆ ತರುವ ವಿಚಾರದಲ್ಲಿ ಹೆಚ್ಚಾಗಿ ಟೀಕೆ ಮಾಡಲ್ಪಟ್ಟಿದೆ.

ಸಂಸ್ಥಾನದ ಅನೇಕ ಉನ್ನತಾಧಿಕಾರಿಗಳ ಸ್ಥಾನಕ್ಕೆ ಹೊರಗಿನವರನ್ನು ನೇಮಿಸುತ್ತಿರುವ ವಿಚಾರವಾಗಿಯೂ ಅಸಮ್ಮತವಾದ ಖಂಡನೆಗಳು ಬಂದಿವೆ. ಸಚಿವರಾದ ಶ್ರೀ ಪುಲ್ಲರೆಡ್ಡಿ, ಶ್ರೇಷ್ಠ ನ್ಯಾಯಾಧೀಶರಾದ ಶ್ರೀ ವೆಂಕಟರಮಣರಾವ್ ನಾಯ್ಡು, ಆರಕ್ಷಕಾಧಿಕಾರಿಗಳಾದ ಶ್ರೀ ನಾರಿ, ಚೀಫ್ ಕಮ್ಯಾಂಡೆಂಟ್, ಲಂಡನ್ ಟ್ರೇಡ್ ಕಮೀಷನರ್ ಮಿ|| ಬೆಸ್ಟರ್ ಇವರೇ ಮುಂತಾದ ಹೊರಗಿನವರ ನೇಮಕದ ಬಗ್ಗೆ ಶಾಸನ ಸಭೆಗಳಲ್ಲಿಯೂ, ಹೊರಗೂ ಬಹಳ ಪ್ರತಿಭಟನೆಗಳು ಬಂದಿವೆ. ಆದರೂ ಇಂಥಹ ನೇಮಕಗಳು ಇನ್ನು ಮುಂದೆ ನಿಲ್ಲುವುವೆಂದು ಹೇಳುವ ಚಿಹ್ನೆಗಳಿಲ್ಲ.

ಸಾಮಾನ್ಯ ಅಧಿಕಾರಿಗಳ ನೇಮಕದ ವಿಚಾರದಲ್ಲಿ ಸ್ವಲ್ಪಮಟ್ಟಿಗೆ ವ್ಯತ್ಯಾಸವಾಗಲು ಅವಕಾಶವಿರಬಹುದೆಂದು ಹೇಳಬಹುದು. ವಾಣಿಜ್ಯಾಧಿಕ ಪರಿಸ್ಥಿತಿ [illegible] ಸಂದರ್ಭಗಳಲ್ಲಿ ಮಾತ್ರ ತಾತ್ಕಾಲಿಕವಾಗಿ ಹೊರಗಿನವರನ್ನು ತೆಗೆದುಕೊಳ್ಳಬೇಕಾದ ಆವಶ್ಯಕತೆಯು ಬರಬಹುದು. ಪ್ರಗತಿಯನ್ನು ಬಯಸುವ ಕಾಲದಲ್ಲಿ ಈ ವಿಷಯದಲ್ಲಿ [illegible] ಅನುಸರಿಸುವುದು. ಇತರ ಸಂದರ್ಭಗಳಲ್ಲಿ ಭಾರತೀಯರಾದ ನಿಪುಣರನ್ನು ಕರೆದುಕೊಂಡರೆ [illegible] ಭಾರತ ರಾಷ್ಟ್ರೀಯ ಪ್ರವೃತ್ತಿಯೆ. [illegible] ನಿಪುಣರನ್ನು ತೆಗೆದುಕೊಳ್ಳುವುದು ತಪ್ಪಾಗಲಾರದು.

ಮಂತ್ರಿಗಳ ಮತ್ತು ದಿವಾನರ ನೇಮಕದ ವಿಚಾರವೇ ಬೇರೆ. ಕೇವಲ ವಾಣಿಜ್ಯ [illegible] ಕೆಲಸಗಳನ್ನು ಕೊಡುವುದು. ಮಂತ್ರಿಗಳ ಕೆಲಸದಲ್ಲಿ ಕೇವಲ ಆಡಳಿತ ದಕ್ಷತೆ ಸಾಧಕವಾಗಿಯೂ, ಪ್ರಜಾಭಿಪ್ರಾಯ ಮತ್ತು ಪ್ರತಿಬಿಂಬಿಸಬೇಕಾದ್ದಾಗಿಯೂ, ಪ್ರಜೆಗಳ ಸ್ವಾತಂತ್ರ್ಯವನ್ನು [illegible] ಹೊಂದಿರುವ ಪ್ರಜಾ ಪ್ರಾತಿನಿಧ್ಯವನ್ನು ಅನುಸರಿಸುವ ಪ್ರಜಾ [illegible] ಸಾಕ್ಷರರಾಗಿರುವ ಪ್ರಜಾ ನಾಯಕರೇ ಸಚಿವ ಸ್ಥಾನಗಳನ್ನು ಹೊಂದಬೇಕೆಂಬುದು ಸಕಲ ಅಂಗೀಕಾರ ಯೋಗ್ಯ ತತ್ವವಾಗಿರುವ ರಾಜನೀತಿ. ಇಂಥಲ್ಲಿ ವ್ಯಕ್ತಿಗಳಿಗೆ ಕೇವಲ [illegible] ಆಗಲೀ ಭಾವನೆಗೇ ಆಗಲೀ ಪ್ರಾಧಾನ್ಯವಿರುವುದಿಲ್ಲ. ಅಂಗೀಕೃತವಾದ ರಾಜನೀತಿ ತತ್ವಗಳಿಗೆ ಮಾತ್ರ ಪ್ರಾಧಾನ್ಯವಿರುತ್ತದೆ. ಮುಂದುವರಿದ ರಾಷ್ಟ್ರಗಳೆಲ್ಲಲ್ಲ ಇದೇ ತತ್ವವನ್ನೇ ಅನುಸರಿಸಿ ಮಂತ್ರಿಮಂಡಲಗಳನ್ನು ರಚಿಸಲಾಗುವುದು. ಇದನ್ನು ನಮ್ಮ ದೇಶದಲ್ಲೂ ಜಾರಿಗೆ ತರುವುದಕ್ಕಾಗಿಯೇ ಸಕಲರೂ ಪ್ರಯತ್ನಿಸುತ್ತಿರುವರು.

ನಮ್ಮ ಸಂಸ್ಥಾನದಲ್ಲಿ ಜಾರಿಯಲ್ಲಿರುವ ಪದ್ಧತಿಯು ಯಾವ ಉದಾತ್ತ ರಾಜನೀತಿಗೂ ಅನ್ವಯಿಸಿರುವುದಿಲ್ಲ. ಓಬೀರಾಯನ ಕಾಲದ ಮಾದರಿಯಂತೆ ಹೊರಗಿನ, ಯಾವ ಸ್ಥಾನಕ್ಕೋ ಒಂದಕ್ಕೆ ಬಂದವರು. ಈ ಪದ್ಧತಿಯು ತಪ್ಪಿ ಪ್ರಜೆಗಳಿಂದ ಚುನಾಯಿತರಾದವರೇ ಮಂತ್ರಿ ಪದವಿಗೆ ಬರಬೇಕೆಂಬುದು ಮೊದಮೊದಲಿನ ಸಕಲ ದೇಶಾಭಿಮಾನಿಗಳ ಅಭಿಮತ. ಈ ದೃಷ್ಟಿಯಿಂದ ನೋಡಿದರೆ ದಿವಾನರಿಗೆ ಯಾರನ್ನು ನೇಮಿಸಿದರೂ ಅದು ಅಸಮರ್ಪಕವಾಗಿಯೇ ಇರುವುದು. ಪ್ರಜೆಗಳಿಂದ ಚುನಾಯಿತರಾದ ದಿವಾನರು, ಮಂತ್ರಿಗಳು ನೇಮಕವಾದಾಗಲೇ ಪ್ರಜೆಗಳಿಗೆ ಸಮಾಧಾನವಾಗುವುದು.

ಆದುದರಿಂದ ನಾವು ಸರ್ ರಾಮಸ್ವಾಮಿ ಮೊದಲಿಯಾರರ ನೇಮಕಕ್ಕೆ ತತ್ವದ ದೃಷ್ಟಿಯಿಂದ ನಮ್ಮ ಪ್ರತಿಭಟನೆಯನ್ನು ಸೂಚಿಸುತ್ತೇವೆ. ಮೈಸೂರಿನಲ್ಲಿ ಈಗ ಜಾರಿಯಲ್ಲಿರುವ ರಾಜ್ಯಾಂಗದಂತೆ ದಿವಾನರನ್ನೂ, ಇತರ ಮಂತ್ರಿಗಳನ್ನೂ ಶಾಸನಸಭೆಯ ಚುನಾಯಿತ ಸದಸ್ಯರಿಂದಲೇ ಭರ್ತಿ ಮಾಡಲು ಅವಕಾಶವಿರುವುದೆಂದು ಮಾಜಿ ದಿವಾನರಾದ ಸರ್ ಮಿರ್ಜಾ ಇಸ್ಮೇಲರು ಹೇಳಿ ಅನೇಕ ವರ್ಷಗಳಾದುವು. ಆದರೆ ಒಬ್ಬಿಬ್ಬರು [illegible] ಮಂತ್ರಿಗಳನ್ನು ನೇಮಿಸುವುದರಲ್ಲಿಯೇ ಪರ್ಯವಸಾನವಾಗಿದೆ. ಇದು ತಪ್ಪಿ ಪ್ರಜಾ ವಿಶ್ವಾಸಕ್ಕೆ ಪಾತ್ರರಾದವರೇ ಮಂತ್ರಿ ಪದವಿಗೆ ಬರುವಂತೆ ವಿಚಾರ ಮಾಡಬೇಕು. ದಿವಾನರು, ಮಂತ್ರಿಗಳೂ, ಪ್ರಜೆಗಳ ಪ್ರತಿನಿಧಿಗಳಿಗೆ ಜವಾಬ್ದಾರರಾಗಿರಬೇಕು. ದೇಶಾಭಿಮಾನಿಗಳಾದ ಮೈಸೂರಿನ ಪ್ರಮುಖ ಪ್ರಜಾ ನಾಯಕರಿಗೆ ಮಾತ್ರ ಇದು ಸಾಧ್ಯ. ಸರ್ ರಾಮಸ್ವಾಮಿ ಮೊದಲಿಯಾರರಂತಹವರಿಗೆ ಸಾಧ್ಯವಿಲ್ಲ.

ರಾಜ್ಯಾಂಗ ರಚನಾ ಸಭೆಗೆ ಸಿಖ್ಖರ ಒಮ್ಮತ ಬಹಿಷ್ಕಾರ

ಅಮೃತಸರದಲ್ಲಿ ನಡೆದ ಪಾಂಥಿಕ್ ಸಭೆಯು ರಾಜ್ಯಾಂಗ ರಚನಾ ಸಭೆಯನ್ನು ಬಹಿಷ್ಕರಿಸಬೇಕೆಂದು [illegible] ಕಾಂಗ್ರೆಸ್ [illegible] ಅಕಾಲಿ [illegible]

ಅಂಚೆ ನೌಕರರಿಗೆ ಸಹಾನುಭೂತಿ

ಮೈಸೂರು ೧೮

ಮೈಸೂರು ನಗರದಲ್ಲಿ ನಡೆಯುತ್ತಿರುವ ಅಂಚೆ ನೌಕರರ ಮುಷ್ಕರಕ್ಕೆ ಸಹಾನುಭೂತಿ ಪ್ರದರ್ಶಿಸಲು ಶ್ರೀ ಹೆಚ್. ಸಿ. ದಾಸಪ್ಪನವರ ಅಧ್ಯಕ್ಷತೆಯಲ್ಲಿ, ನೆನ್ನೆ ಸಾಯಂಕಾಲ ಟೌನ್‌ಹಾಲ್ ಮೈದಾನದಲ್ಲಿ ಒಂದು ಬಹಿರಂಗ ಸಭೆಯು ನಡೆಯಿತು. ಆರಂಭದಲ್ಲಿ, ಶ್ರೀ ಎ. ರಾಮಣ್ಣನವರು ಮಾತನಾಡಿ, ಅಂಚೆ ನೌಕರರ ವಿಚಾರದಲ್ಲಿ ನಗರದ ಸಾರ್ವಜನಿಕರ ಸಹಾನುಭೂತಿ ವ್ಯಕ್ತಪಡಿಸುವುದಕ್ಕಾಗಿ ಸಭೆಯನ್ನು ಕೂಡಿಸಲಾಗಿದೆಯೆಂದು ತಿಳಿಸಿದರು. ಅಂಚೆ ನೌಕರರಲ್ಲಿ ಒಬ್ಬರಾದ ಶ್ರೀ ಆರ್. [illegible]ನವರು ತಾವು ಅನುಭವಿಸುತ್ತಿರುವ ಕಷ್ಟ ನಿಷ್ಠೂರಗಳನ್ನು ಅಂಕಿ ಅಂಶಗಳ ಮೂಲಕ ತಿಳಿಯಪಡಿಸಿದರು. ಶ್ರೀ ಹೆಚ್. ಎಸ್. ದೊರೆಸ್ವಾಮಿಯವರು ಮಾತನಾಡಿ, ಸರ್ಕಾರಿ ಯಂತ್ರವು ಸರಿಯಾಗಿ ನಡೆಯಲು ಈ ಮುಷ್ಕರವು ಹೆಚ್ಚು ಅಡ್ಡಿ ಆತಂಕಗಳನ್ನು ಒಡ್ಡಿ, ನೌಕರರ ಕಷ್ಟಗಳು ಸರ್ಕಾರದ ಗಮನಕ್ಕೆ ಬರುವಂತಾಗಿದೆ; ಈ ಮುಷ್ಕರದಿಂದ ಸಾರ್ವಜನಿಕರಿಗೆ ಅಲ್ಪಸ್ವಲ್ಪ ತೊಂದರೆಗಳು ಬಂದಿರುವುದು ನಿಜ, ಆದರೂ ಅವುಗಳನ್ನು ಸೈರಿಸಿ ನೌಕರರ ವಿಷಯದಲ್ಲಿ ಸಹಕಾರ ಸಹಾನುಭೂತಿ ವ್ಯಕ್ತಪಡಿಸುವುದು ಪೌರರ ಧರ್ಮ ಮತ್ತು ಕರ್ತವ್ಯವೆಂದು ತಿಳಿಸಿದರು.

ಶ್ರೀ ಟಿ. ಎಸ್. ಉಪಾಧ್ಯಾಯರು ಮಾತನಾಡಿ, ಅಂಚೆ ನೌಕರರು ಶೀಘ್ರ ಕೆಲಸಕ್ಕೆ ಬರಲೆಂದು ಉತ್ಸಾಹ ಮಾಡದೆ ಅವರು ಹೂಡಿರುವ ಮುಷ್ಕರಕ್ಕಾಗಿ ಪ್ರಜೆಗಳು ಸಹಾನುಭೂತಿ ತೋರಿಸುವುದು ಯುಕ್ತವಾಗಿದೆ ಎಂದು ಹೇಳಿ, ಉದಾರವಾಗಿ ಧನ ಸಹಾಯ ಮಾಡಿ, ಸಂಸಾರ ಕಾರ್ಯಗಳನ್ನು ಯಶಸ್ವಿಯಾಗಿ ನಡೆಸಲು ನೆರವಾಗಬೇಕೆಂದು ಪ್ರಾರ್ಥಿಸಿದರು.

ಶ್ರೀ ದಾಸಪ್ಪನವರು ಮಾತನಾಡುತ್ತಾ, ಟೌನ್‌ಹಾಲಿನ ಆವರಣದಲ್ಲಿ ಈ ಬಗೆಯ ಬಹಿರಂಗ ಸಭೆ ನಡೆಸಲು ಕೆಲವು ವರ್ಷಗಳಿಂದ ಅವಕಾಶ ಸಿಗದೆ, ಈ ಅಂಚೆ ನೌಕರರ ಮುಷ್ಕರದ ಸಂಬಂಧದಲ್ಲಿ ಬಹಿರಂಗ ಸಭೆ ನಡೆಸಲು ಅವಕಾಶ ಸಿಕ್ಕಿದುದಕ್ಕಾಗಿ [illegible] ಮುಷ್ಕರಕಾರರನ್ನು ಅಭಿನಂದಿಸಿದರು. [illegible] ಕಾಂಗ್ರೆಸ್ಸಿನವರು ಅನೇಕ ವರ್ಷಗಳಿಂದ ಚಳವಳಿ ನಡೆಸಿ ಪಡೆದ ಗುಣಯುತವಾದ ಪರಿಣಾಮಗಳನ್ನು, ಮೈಸೂರು ಕಾಂಗ್ರೆಸ್ಸಿನವರು ಕೇವಲ ೫-೬ ದಿನಗಳಲ್ಲಿಯೇ ಉಂಟುಮಾಡಿ ಭಾರತದ ಯಶಸ್ಸು ಮೆಚ್ಚುಗೆಯನ್ನು ಪಡೆದಿದ್ದಾರೆ. [illegible] ಅಖಿಲ ಭಾರತ ಅಂಚೆ ಸಂಘದ ಆಣತಿ ಪ್ರಕಾರ ಇಡೀ ಭಾರತದಲ್ಲಿ ಏಕಕಾಲದಲ್ಲಿಯೇ ಮುಷ್ಕರ ನಡೆದಿದೆ. ಈ ಹೊತ್ತಿಗೆ ಸರ್ಕಾರದವರು ಎಚ್ಚೆತ್ತು ನೌಕರರ ಬೇಡಿಕೆಗಳಿಗೆ ಮಾನ್ಯತೆ ಕೊಡುವರೆಂದು ವ್ಯಕ್ತಪಡಿಸಿದರು. ಈಗಲೂ ನೌಕರರೆಲ್ಲರೂ ಸುಸಂಘಟಿತರಾಗಿ ನಾಯಕರು ಹೇಳಿದಂತೆ ಒಮ್ಮನಸ್ಸಿನಿಂದ ನಡೆದು, ಸಂಘ ಶಕ್ತಿಯನ್ನು ವ್ಯಕ್ತಪಡಿಸಿ ನೌಕರರ ಬೇಡಿಕೆಗಳು ಶೀಘ್ರದಲ್ಲಿಯೇ ನೆರವೇರುವುದರಲ್ಲಿ ಸಂಶಯವಿಲ್ಲವೆಂದು ಹೇಳಿ ಅವರ ಉದ್ಯಮವು ಯಶಸ್ವಿಯಾಗಲೆಂದು ಹಾರೈಸಿದರು.

ಸಾರ್ವಜನಿಕರ ಸಹಾನುಭೂತಿ ಪಡೆಸಿಯೂ ನೌಕರರ ಬೇಡಿಕೆಗಳನ್ನು ಈಡೇರಿಸಿ, ಸಾರ್ವಜನಿಕರಿಗೆ ಉಂಟಾಗಿರುವ ತೊಂದರೆಗಳನ್ನು ಕೂಡಲೆ ಹೋಗಲಾಡಿಸಬೇಕೆಂದು ಇಂಡಿಯಾ ಸರ್ಕಾರವನ್ನು ಕೋರಿಯೂ ಮತ್ತು ಮುಷ್ಕರವು ಮುಂದುವರಿದಲ್ಲಿ ಮುಷ್ಕರಕಾರರಿಗೆ ಪರಿಹಾರ ಕೆಲಸ ಧನ ಸಹಾಯವನ್ನು ಉದಾರ ಮನಸ್ಸಿನಿಂದ ಮಾಡಬೇಕೆಂದು ಸಾರ್ವಜನಿಕರ ಬೇಡಿಯ ನಿರ್ಣಯಗಳು ಅಂಗೀಕೃತವಾದುವು.

ಈಸೂರಿನವರೊಬ್ಬರ ಬಿಡುಗಡೆ

ಈಸೂರು ದುರಂತದಲ್ಲಿ ಶಿಕ್ಷೆಗೊಳಗಾಗಿದ್ದ ಸಾಹುಕಾರ್ ರುದ್ರಪ್ಪನವರ ಮಗ [illegible] ವೀರಪ್ಪನವರು ತಮ್ಮ ೮ ವರ್ಷ ಕಠಿಣ ಶಿಕ್ಷೆಯ ನಂತರ ನಿನ್ನೆ ಬಿಡುಗಡೆಯಾದರು.

ಮೈಸೂರು ಸಿಟಿ ಮುನಿಸಿಪಲ್ ಇಂಜನೀಯರ್ ರವರ ಆಫೀಸಿನಿಂದ, ಮೈಸೂರು, ತಾ|| ೬-೭-೪೬

ಹರಾಜು ನೋಟೀಸು

ಮೈಸೂರು ಸಿಟಿ ಚಾಮುಂಡಿ ರೋಡ್ [illegible] ಕೃಷ್ಣರಾಜವನದಲ್ಲಿ ಮೈಸೂರು ಸಿಟಿ ಮುನಿಸಿಪಾಲಿಟಿಯವರು ಬೆಳೆಸಿರುವ ೧೬ ಮಾವಿನ ಮರಗಳ ಫಲವನ್ನು ತಾರೀಖು ೨೫-೭-೪೬ ನೇ ದಿನ ಬೆಳಿಗ್ಗೆ ೧೧ ಗಂಟೆಗೆ ಸದರಿ ಮರಗಳ ಬಳಿ ಬಹಿರಂಗ ಹರಾಜು ಮಾಡಲ್ಪಡುವ [illegible] ಇಷ್ಟವುಳ್ಳವರು [illegible]

[illegible]
ಮುನಿಸಿಪಲ್ ಇಂಜನೀಯರು

ರಂಜಿತ್
೧೮—೭—೪೬ ರಿಂದ
* ದೂಲ್ಹಾ *
(ಸಾಮಾಜಿಕ)
[illegible]
ಪ್ರತಿದಿನ [illegible]

ಚಾಮುಂಡೇಶ್ವರೀ
ಟಾಕೀಸಿನಲ್ಲಿ
15—7—46 ರಿಂದ
ಪ್ರತಿದಿನ ೩ ಆಟಗಳು
ನಿಮ್ಮ ಪ್ರೀತಿ ಪಾತ್ರನಾದ
ಯಾಕೂಬ್
ನಟಿಸಿರುವ ಅಮೋಘ
ಯತೀಂ
YATEEM
(ಹಿಂದಿ)
- ಸಹಾಯಕ ನಟವರ್ಗ -
* ಚಂದ್ರ ಪ್ರಭ,
* ಉದಯ ಕುಮಾರಿ
* ಲಲಿತ ಪವಾರ್,
ಇ. ಬಿಲಿಮೋರಿಯಾ
A [illegible] Film's Re[illegible]
[illegible]

Edited, printed and published [illegible] at the Sadhvi [illegible] D. Subbaiah Road, Mysore.

ಫೋನ್ ನಂ. 392 ‖ ವಂದೇ ಮಾತರಂ ‖ ಇಂದಿನ ಪತ್ರಿಕೆ ೩ ಕಾಸು

ಸಂಪುಟ ೪] ಶುಕ್ರವಾರ ೧೯—೭—೪೬ [ಸಂಚಿಕೆ ೨೬೨

ಅಂಚೆ ನೌಕರರ ಬಗ್ಗೆ ಪಂಚಾಯಿತರ ಶಿಫಾರಸ್ಸು

ಎಸ್. ಎಸ್. ಎಲ್. ಸಿ. ಪರೀಕ್ಷೆ

ಹೆಚ್ಚಿಗೆ ೫ ನಂಬರುಗಳನ್ನು ಸೇರಿಸಲು ಸರ್ಕಾರಕ್ಕೆ ಶಿಫಾರಸು

ಸ್ವಂ. ಸು ಫೋ[ನ್] ಬೆಂಗಳೂರು ೧೮

ಮೊನ್ನೆ ನಡೆದ ಎಸ್. ಎಸ್. ಎಲ್ ಸಿ. ಪರೀಕ್ಷೆ ಫಲಿತಾಂಶಗಳು ಅಷ್ಟು ಉತ್ತೇಜನಕರವಾಗಿಲ್ಲವೆಂದು ಹೇಳಲಾಗಿದೆ. ಆದ್ದರಿಂದ ಈ ವಿಚಾರವನ್ನು ಎಸ್. ಎಸ್. ಎಲ್ ಸಿ. ಬೋರ್ಡಿನವರು ಪರಿಶೀಲಿಸಿ, ಚರಿತ್ರೆ ಮತ್ತು ಭೂಗೋಳ ಮತ್ತು ಒಂದೆರಡು ವಿಷಯಗಳಲ್ಲಿ ಅನೇಕ ವಿದ್ಯಾರ್ಥಿ, ವಿದ್ಯಾರ್ಥಿನಿಯರು ಉತ್ತೀರ್ಣರಾಗದೇ ಇರುವರೆಂದೂ, ಆದ್ದರಿಂದ ಆ ವಿಷಯಗಳಲ್ಲಿ ಉತ್ತೀರ್ಣರಾಗಲು ಕನಿಷ್ಠವಾಗಿ ಎಷ್ಟು ನಂಬರುಗಳು ಬರಬೇಕೋ ಅಷ್ಟು ನಂಬರುಗಳನ್ನು ಪಡೆಯದೇ ಇರುವ ವಿದ್ಯಾರ್ಥಿ ವಿದ್ಯಾರ್ಥಿನಿಯರಿಗೆ ೫ ನಂಬರುಗಳನ್ನು ಸೇರಿಸಿಕೊಟ್ಟು ಇ ಸ. ಸಿ. ಎಸ್ ಕೊಡಬಹುದೆಂದೂ, ಬೋರ್ಡಿನವರು ಸರ್ಕಾರಕ್ಕೆ ಶಿಫಾರಸು ಮಾಡಿರುವುದಾಗಿ ಗೊತ್ತಾಗಿದೆ.

ಪ್ರತಿನಿಧಿ ಸಭಾ ಸದಸ್ಯರಿಗೆ ಪ್ರಯಾಣದ ಭತ್ಯ ಹೆಚ್ಚಿಕೆ

ಪ್ರಜಾ ಪ್ರತಿನಿಧಿ ಸಭಾ ಸದಸ್ಯರಿಗೂ, ನ್ಯಾಯವಿಧಾಯಕ ಸಭಾಸದಸ್ಯರಿಗೆ ಕೊಡುತ್ತಿರುವ ದರದಲ್ಲಿ, ಪ್ರತಿನಿಧಿ ಸಭಾಧಿವೇಶನದ ಕಾಲದಲ್ಲಿ ಪ್ರಯಾಣ ಭತ್ಯವನ್ನು (ರೈಲ್ವೆ ಮೊದಲನೇ ತರಗತಿ ಭತ್ಯ) ಕೊಡಬೇಕೆಂದು ಸಭೆಯ ಹೌಸ್ ಕಮಿಟಿಯು ಮಾಡಿರುವ ಸಲಹೆಯನ್ನು ಸರ್ಕಾರದವರು ಅಂಗೀಕರಿಸಿದ್ದಾರೆ.

ಮೈಸೂರು ಕಾಂಗ್ರೆಸ್ ಪ್ರಗತಿ ಪಕ್ಷ

ಕಳೆದ ೬ ವರ್ಷಗಳಿಂದ ಮೈಸೂರು ದೇಶದ ರಾಜಕೀಯವನ್ನು ಗಮನಿಸಿ ಮೈಸೂರು ಕಾಂಗ್ರೆಸ್ಸಿನ ಅನೇಕ ಕೆಲಸಗಾರರು ನೊಂದು, ಕಾಂಗ್ರೆಸ್ಸಿನ ಧ್ಯೇಯ, ತತ್ವ ಮತ್ತು ನೀತಿಗಳನ್ನು ಬಿಟ್ಟುಕೊಡದೆ ಕಾಂಗ್ರೆಸ್ಸಿನಲ್ಲಿ ನಿಷ್ಠೆಯಿಂದ ದುಡಿಯುವ ಮತ್ತು ಆ ಮೂಲಕ ಸಂಸ್ಥೆಯ ಕಾರ್ಯ ಚಟುವಟಿಕೆಗಳನ್ನು ಚುರುಕುಗೊಳಿಸುವ ಸಲುವಾಗಿ ಮೈಸೂರು ಕಾಂಗ್ರೆಸ್ ಪ್ರಗತಿ ಪಕ್ಷವನ್ನು ಶ್ರೀ ಕಣ್ಣೂರವರ ಕಾರ್ಯದರ್ಶಿತ್ವದಲ್ಲಿ ಶ್ರೀ ಕೆ. ಎಸ್ ಕುಮಾರನ್ ಮುಂದಾಳತ್ವದಲ್ಲಿ ಸ್ಥಾಪಿಸಿದ್ದಾರೆ

ಅಂಚೆ ಮುಷ್ಕರ

ಅಂಚೆ ನೌಕರರ ಮುಷ್ಕರದ ಬಗ್ಗೆ ಮಿ॥ ಜಿನ್ನಾರವರು ತಮ್ಮ ಸಹಾನುಭೂತಿ ವ್ಯಕ್ತಪಡಿಸಿದ್ದಾರೆ. ಅಂಚೆ ನೌಕರರ ಪರವಾಗಿ ಸಂಧಾನ ನಡೆಸಲು ಶ್ರೀ ವಲ್ಲಭಭಾಯಿ ಪಟೇಲರಿಗೆ ಅಧಿಕಾರವಿದೆಯೆಂದೂ, ದಿವಾನ್ ಚಮನಲಾಲರು ಸಂಧಾನ ನಡೆಸಕೂಡದೆಂದೂ ಮುಷ್ಕರ ಸಮಿತಿಯವರು ತಿಳಿಸಿದ್ದಾರೆ. [illegible] ಅಂಚೆ ನೌಕರರ [illegible] ಕೆಲಸದಿಂದ ವಜಾ ಮಾಡಿದ್ದಾರೆ. ಮದ್ರಾಸ್, ಲಾಹೋರ್ ಮತ್ತು [illegible] ಕೇಂದ್ರಗಳಲ್ಲಿ ಎಲ್ಲಾ [illegible] ಅಧಿಕಾರಿಗಳು [illegible] ಹೊಸ ಅಂಚೆ ನೌಕರರೊಬ್ಬರಿಗೆ [illegible] ಪರಿಣಾಮವಾಗಿದೆ. [illegible] ನವರು [illegible] ಭಾಗವಹಿಸಿದ್ದಾರೆ.

ಸಹಾನುಭೂತಿ

ಮೈಸೂರು ೧೮

ರಾಜ ಧಾನಿ ಯ ವಿದ್ಯಾರ್ಥಿನಿಯರು ಮೊನ್ನೆ ಮಹಾರಾಣಿ ಹೈಸ್ಕೂಲಿನಲ್ಲಿ ಸಭೆ ಸೇರಿ ಅಖಿಲ ಭಾರತದಲ್ಲಿ ನಡೆಯುತ್ತಿರುವ ಅಂಚೆ ನೌಕರರ ಮುಷ್ಕರಕ್ಕೆ ಸಂಪೂರ್ಣ ಸಹಾನುಭೂತಿ ವ್ಯಕ್ತಪಡಿಸಿದರು. ಭಾರತ ರಾಜ್ಯಾಂಗ ರಚನಾ ಸಭೆಗೆ ಸಂಸ್ಥಾನದ ಪ್ರಜೆಗಳಿಂದ ಚುನಾಯಿತರಾದ ಪ್ರತಿನಿಧಿಗಳನ್ನು ಕಳುಹಿಸಬೇಕೆಂದೂ ನಿರ್ಣಯಿಸಿದರು. ಕಾಶ್ಮೀರದ ಜನತಾ ಚಳುವಳಿಗೆ ತಮ್ಮ ಸಂಪೂರ್ಣ ಬೆಂಬಲವನ್ನು ವ್ಯಕ್ತಪಡಿಸಿದರು

ಕಾಲೇಜಿನಲ್ಲಿ ಮೆಡಿಕಲ್ ಫೀಜು

ಮೈಸೂರು ಇಂಟರ್ ಕಾಲೇಜಿನಲ್ಲಿ ೧೯೪೫-೪೬ ನೇ ಸಾಲಿನ ಎಲ್ಲ ವಿದ್ಯಾರ್ಥಿಗಳಿಂದಲೂ ಮೆಡಿಕಲ್ ಫೀಜನ್ನು ತೆಗೆದುಕೊಂಡು, ಕೆಲವು ವಿದ್ಯಾರ್ಥಿಗಳಿಗೆ ವೈದ್ಯ ಪರೀಕ್ಷೆಯೇ ನಡೆಸಿಲ್ಲ. ಹೀಗಿದ್ದಾಗ್ಯೂ ೪೬-೪೭ ನೇ ಸಾಲಿಗೆ ಅದೇ ವಿದ್ಯಾರ್ಥಿಗಳಿಂದ ಪುನಃ ಮೆಡಿಕಲ್ ಫೀಜನ್ನು ತೆಗೆದುಕೊಂಡಿದ್ದಾರೆ. ಹೀಗೆ ಸುಮ್ಮನೆ ಹಣ ವಸೂಲ್ಮಾಡುವುದು ನ್ಯಾಯವಲ್ಲ. ಆದ್ದರಿಂದ ಹೋದವರ್ಷ ವೈದ್ಯ ಪರೀಕ್ಷೆ ಆಗದ ವಿದ್ಯಾರ್ಥಿಗಳ ಹಣವನ್ನು ವಾಪಸ್ ಕೊಡಬೇಕೆಂದು ಒಬ್ಬ ವಿದ್ಯಾರ್ಥಿ ಪತ್ರಿಕೆಗೆ ಬರೆಯುತ್ತಾರೆ.

ಅಂಚೆ ನೌಕರರ ಮುಷ್ಕರ

ಈ ದಿವಸವೂ ಅಂಚೆ ನೌಕರರು ಬೆಂಗಳೂರು ಇಟ್ಟಿಗೆ ಗೂಡು ಪ್ರದೇಶಗಳಲ್ಲಿ ಮೆರವಣಿಗೆಯಲ್ಲಿ ತೆರಳಿದರು. ವಿಲೇಜ್ ಪೋಸ್ಟ್ ಮಾಸ್ಟರ್ ಶ್ರೀ ಸುಬ್ಬರಾಯರ ಮನೆಯಲ್ಲಿ ಉಪಹಾರ ಸ್ವೀಕರಿಸಿದರು. ಪರಿಹಾರ ನಿಧಿಗೆ ಶ್ರೀ ರಾಜು ಚೆಟ್ಟಿ [illegible] ಕೊಟ್ಟಿದ್ದಾರೆ

ಸಂಸ್ಥಾನದಲ್ಲೆಲ್ಲಾ ಬಟ್ಟೆ ಹಂಚಿಕೆ ಯೋಜನೆ

ಸಂಸ್ಥಾನದ ಜಿಲ್ಲಾ ಮತ್ತು ತಾಲ್ಲೂಕು ಪ್ರದೇಶಗಳಿಗೆ ಇನ್ನು ಮುಂದೆ ನೇರವಾಗಿ ಬಟ್ಟೆಗಳನ್ನು ಕಳುಹಿಸಲಾಗುವುದು. ಸರ್ಕಾರದಿಂದ ಆರಿಸಲ್ಪಡುವ ಮುಖ್ಯ ವರ್ತಕರು ಆ ಬಟ್ಟೆಗಳನ್ನು ತಮ್ಮ ಪ್ರಾಂತ್ಯಗಳಲ್ಲಿ ಹಂಚುವರು. ಇದರಿಂದ ಚಿಲ್ಲರೆ ಬಟ್ಟೆ ಅಂಗಡಿಗಳವರ ಮೇಲೆ ಸ್ಥಳೀಯ ಅಧಿಕಾರಿಗಳು ನಿಗಾ ಇಡಲು ಅನುಕೂಲವಾಗುವುದಲ್ಲದೆ ಆಯಾ ಪ್ರದೇಶಗಳಿಗೆ ಬೇಕಾದ ಬಟ್ಟೆಯನ್ನು ಒದಗಿಸಲು ವರ್ತಕರಿಗೆ ಸುಲಭವಾಗುತ್ತದೆ.

ಮೈಸೂರಿನ ದಿವಾನಗಿರಿ

ನ್ಯಾಯವಿಧಾಯಕ ಸಭೆಯ ಕಾಂಗ್ರೆಸ್ ಪಕ್ಷದ ಉಪನಾಯಕರಾದ ಶ್ರೀ ಟಿ. ಮರಿಯಪ್ಪನವರು ಈ ರೀತಿ ಹೇಳಿಕೆ ಇತ್ತಿದ್ದಾರೆ:—

ಸರ್ ಎ. ರಾಮಸ್ವಾಮಿ ಮೊದಲಿಯಾರರನ್ನು ದಿವಾನರನ್ನಾಗಿ ನೇಮಕ ಮಾಡಲಾಗುವುದೆಂಬ ಸುದ್ದಿ ನಿಜವಾಗಿದ್ದ ಪಕ್ಷದಲ್ಲಿ ಅದು ಜನಗಳಿಗೆ ಸಿಡಿಲು ಬಡಿದಂತಾಗುವುದರಲ್ಲಿ ಸಂದೇಹವಿಲ್ಲ. ಇದು ಜನರ ಆಶೋತ್ತರಗಳನ್ನು ಭಂಗಪಡಿಸುತ್ತದೆ. ಹೊಸ ಸುಧಾರಣೆಗಳನ್ನು ಜಾರಿಗೆ ತರುವಾಗ ಸರ್ ಮಿರ್ಜಾರವರು ಮೈಸೂರು ಮಂತ್ರಿಮಂಡಲದ ಎಲ್ಲಾ ಮಂತ್ರಿಗಳೂ ಮತ್ತು ದಿವಾನರೂ ಕೆಲವು ಕಾಲದಲ್ಲೇ ಶಾಸನ ಸಭೆಗಳಿಂದ ತೆಗೆದುಕೊಳ್ಳಲ್ಪಡಬಹುದೆಂದು ಹೇಳಿ ಮುದನ್ನು ಉಪೇಕ್ಷಿಸಲಾಗಿದೆ. ಮೈಸೂರಿನ ಶಾಸನ ಸಭೆಯ ವಿಶ್ವಾಸವನ್ನು ಗಳಿಸದವರನ್ನು ನೇಮಕ ಮಾಡುವುದರಿಂದ ದೇಶದ ಮುನ್ನಡೆಗೆ ಭಕ್ತಿ ಸಂದಂತೆಯೇ ಸರಿ. ಇದರಿಂದ ಅಶಾಂತಿ ಹೆಚ್ಚಿ ರಾಜಕೀಯ ಬಿಕ್ಕಟ್ಟು ಪ್ರಾಪ್ತವಾಗಬಹುದು. ಇದು ಸ್ವಷ್ಟವಾಗಿ [illegible] ಮಂತ್ರಿಮಂಡಲದ ಸ್ಥಾನಗಳಿಗೆ ನೇಮಿಸುವಾಗ ಅನುಸರಿಸಬೇಕಾದ ತತ್ವದ ವಿಚಾರ. ರಾಜಕೀಯ ಪ್ರಗತಿ ಸಾಧನೆ ಆಗುತ್ತಿರುವ ಮತ್ತು ಮೈಸೂರು ಭಾರತದ ಸಂಸ್ಥಾನದೊಡನೆ ಸೇರಬೇಕಾದ ಈ ಕಾಲದಲ್ಲಿ ಸರ್ಕಾರದ ಇಂತಹ ನೀತಿಯನ್ನು ಪ್ರತಿಭಟಿಸಲೇಬೇಕಾದ [illegible] ಮಹಾನಗರ [illegible] ಪ್ರಗತಿ ವಿರೋಧ ನೀತಿಯಿಂದ ಮೈಸೂರಿನ ಅಭಿವೃದ್ಧಿಗೆ ಹಾನಿಯಾಗದಂತೆ ಮಾಡಬೇಕಾಗಿದೆ. ಮೈಸೂರಿನಲ್ಲಿ ಪ್ರಜಾ ವಿಶ್ವಾಸವನ್ನು ಗಳಿಸಿದ್ದರೆ ಅದು ಅವರ [illegible] ಅನುಭವಿಸುವುದರಲ್ಲಿ ಸಂದೇಹವಿಲ್ಲ. ಮೈಸೂರಿನ ಪ್ರಜೆಗಳು ಎಚ್ಚತ್ತಿದ್ದಾರೆ. ಜವಾಬ್ದಾರಿ ಸರ್ಕಾರಕ್ಕಾಗಿ ತೀವ್ರ ಕಾರ್ಯಕ್ರಮ ಕೈಗೊಳ್ಳಲು ತಯಾರಿದ್ದಾರೆ. ಈ ಹೋರಾಟದಲ್ಲಿ ಸ್ವೇಚ್ಛಾಚಾರವರೆಗೂ ಎಡವಿ ಹೋಗಬಹುದು. ವಿವೇಕಯುತ [illegible] ಪರಿಸ್ಥಿತಿಯನ್ನು ಉತ್ತಮಪಡಿಸಬೇಕಾಗಿದೆ

ಮದ್ರಾಸ್ ಪ್ರಾಂತ್ಯದಲ್ಲಿ [illegible] [illegible] ತರಬೇತಿ [illegible] ಗೊತ್ತಾಗಿದೆ.

ಅಂಚೆ ನೌಕರರ ಬೇಡಿಕೆ ಬಗ್ಗೆ ಪಂಚಾಯಿತಿ ತೀರ್ಮಾನ

ಅಂಚೆ ನೌಕರರ ಬೇಡಿಕೆಗಳನ್ನು ಶ್ರೀ ರಾಜಾಧ್ಯಕ್ಷರ ಪರಿಶೀಲನೆಗೆ ಒಪ್ಪಿಸಲಾಗಿತ್ತು. ಅವರು ಸರ್ಕಾರಕ್ಕೆ ತಮ್ಮ ತೀರ್ಪನ್ನು ಇತ್ತಿದ್ದಾರೆ. ಅದರಲ್ಲಿ ಅಂಚೆ ನೌಕರರಿಗೆ ಕೂಡಲೇ ೭೫ ಲಕ್ಷ ರೂ.ಗಳು ಸಾಧಾರಣವಾಗಿಯೂ ೧೦೫೦೦೦೦೦ ರೂ. ಗಳನ್ನು ವಾರ್ಷಿಕ ರೀತಿಯಾಗಿಯೂ ಒದಗಿಸಬೇಕೆಂದು ಸೂಚಿಸಿದ್ದಾರೆ. ಇದರಿಂದ ಅಂಚೆ ಕೆಲಸಗಾರರಿಗೆ ಶೇಕಡ ೧೫ ರಿಂದ ೫೦ ರವರೆಗೆ ಭತ್ಯ ಕೊಡಲಾಗುವುದು. ಪೋಸ್ಟ್ ಮಾಸ್ಟರು ಮತ್ತು ಸಬ್ ಇನ್ಸ್‌ಪೆಕ್ಟರುಗಳಿಗೆ ಶೇಕಡ ೫ ರಷ್ಟು ಜಾಸ್ತಿ, ಪೋಸ್ಟ್‌ಮನ್, ಲೈನ್‌ಮನ್, ಕಾನ್ಸ್‌ಟೇಬಲ್ಸ್, ಮೇಟ್ಸ್, ಮೇಸ್ತ್ರಿಗಳಿಗೆ ಶೇಕಡ ೬೦ ರಷ್ಟು, ಗನ್ನರ್ಸ್, ಅಟೆಂಡರ್ಸ್, ಪೋರ್ಟರ್ಸ್, ಚಾಯ್ ಮೆಸೆಂಜರ್ಸ್ ಮತ್ತು ವ್ಯಾನ್‌ಗಳವರಿಗೆ ಶೇಕಡ ೫೫ ರಷ್ಟು, ಜರೂರು ಕೆಲಸಗಾರರಿಗೆ ಶೇಕಡ ೬೦ ರಷ್ಟು ಭತ್ಯೆ ಕೊಡಲಾಗುವುದು. ಇದನ್ನು ೧೯೪೬ ನೇ ಜನವರಿ ತಿಂಗಳಿಂದ ಕೊಡಬೇಕೆಂದು ಅವರು ಸೂಚಿಸಿದ್ದಾರೆ. (ಒಟ್ಟು ೧೮ ತಿಂಗಳು) ಧಾನ್ಯದ ರಿಯಾಯಿತಿಯನ್ನು ಹೊಸದಾಗಿ ಸೇರಿದವರಿಗೂ ಕೊಡಲಾಗುವುದು. 'ಸಿ' ತರಗತಿಯ ಕೆಲಸಗಾರರಿಗೆ ತುಟ್ಟಿಭತ್ಯವನ್ನು ಎರಡು ರೂ. ಹೆಚ್ಚಿಸಲಾಗಿದೆ.

ಎರಡನೇ ಅಣು ಬಾಂಬು

ಜುಲೈ ೨೫ ನೇ ತಾ॥ ಬೆಳಿಗ್ಗೆ ಆಟ್ಲಾಂಟಿಕ್ ಸರಿಯಾಗಿ ಬಿಕಿನಿ ದ್ವೀಪದ ೬೪ ೨೫ ಭಾರಿ ಹಡಗುಗಳೂ ಮತ್ತು ೧೬ ಸಣ್ಣ ಹಡಗುಗಳು [illegible] ಕೇಂದ್ರದಲ್ಲಿ ಅಣುಬಾಂಬನ್ನು ನೀರಿನಲ್ಲಿ ಬಿಡಲಾಗುವುದು. ಅದು ನೀರಿನಲ್ಲಿ ೩೦ ಅಡಿ ಒಳಗಡೆ ಸಿಡಿಯುವುದು

ದಕ್ಷಿಣ ಆಫ್ರಿಕದವರಿಗೆ ಬಹಿಷ್ಕಾರ

ಸ್ವಂ ಸು. ಫೋ[ನ್] ಬೆಂಗಳೂರು ೧೮

ದಕ್ಷಿಣ ಆಫ್ರಿಕದ ಪ್ರಜೆಗಳು ಬೆಂಗಳೂರಿನಲ್ಲಿದ್ದರೆ ಅವರನ್ನು ಆಕ್ಷೇಪದ [illegible] ಸರ್ಕಾರದವರು ತಕ್ಕ ಕಾರ್ಯಕ್ರಮವನ್ನು ಕೈಗೊಳ್ಳಬೇಕೆಂಬ ನಿರ್ಣಯ [illegible] ಸಭೆಯಲ್ಲಿ ಅಂಗೀಕರಿಸಲ್ಪಟ್ಟಿತು. ದಕ್ಷಿಣ ಆಫ್ರಿಕದ ಭಾರತೀಯರಿಗೆ ಸಹಾನುಭೂತಿಯನ್ನೂ ತೋರಲಾಯಿತು

[illegible]

ಮೈಸೂರು ಸಿಟಿ ಮುನಿಸಿಪಲ್ ಕಮಿಷನರ್ ರವರ ಆಫೀಸಿನಿಂದ,

ಮೈಸೂರು, ತಾ॥ ೩೦-೬-೪೬

ಹರಾಜು ನೋಟೀಸು

ಮೈಸೂರು [illegible] ಮೈಸೂರು ಸಿಟಿ [illegible] ೧೬-೭-೪೬ ನೇ ದಿವಸ ದಿವಾ ೧೧ ಗಂಟೆಗೆ [illegible] ಹರಾಜು ಮಾಡಲ್ಪಡುವುದು [illegible]

[illegible]

ಸಾಧ್ವಿ

ತಾ|| ೧೯-೭-೪೬ ಶುಕ್ರವಾರ

ರೈಲ್ವೆ ಮುಷ್ಕರದ ಸೂಚನೆ

ಇಡೀ ಹಿಂದೂಸ್ಥಾನದ ರೈಲ್ವೆ ಕೆಲಸಗಾರರು ಜೂನ್ನ್ ೨೭ನೇ ಅಖಿಲ ಭಾರತ ಮುಷ್ಕರವನ್ನು ನಡೆಸುವುದಾಗಿ ಸೂಚನೆ ಕೊಟ್ಟು ಅನಂತರ ನಿಲ್ಲಿಸಿದ್ದರೆ ಈಗ ಅವರು ಮತ್ತೆ ಮುಷ್ಕರವನ್ನು ಆರಂಭಿಸುವ ಸೂಚನೆಗಳು ಪುನಃ ಕಂಡುಬರುತ್ತಿವೆ. ಕಮ್ಯೂನಿಸ್ಟರು ತಮ್ಮ ನಿರ್ಧಾರವನ್ನು ಪ್ರಕಟಿಸಿ ಅವರು ತಮ್ಮ ನಿರ್ಧಾರವನ್ನು ಬದಲಾಯಿಸಿಕೊಂಡರೆ ಅದು ಅಸಾಧ್ಯವಾಗಲಾರದೆಂದೂ, ಅಂಚೆ ನೌಕರರ ಮುಷ್ಕರವನ್ನು ಬಲಪಡಿಸಲು ಅವರೂ ಮುಷ್ಕರ ಹೂಡಬೇಕಾಗಬಹುದೆಂದೂ, ಅಖಿಲ ಭಾರತ ರೈಲ್ವೆ ಫೆಡರೇಷನ್ನಿನ ಪ್ರಧಾನ ಕಾರ್ಯದರ್ಶಿ ಶ್ರೀ ಗುರುಸ್ವಾಮಿಯವರು ತಿಳಿಸಿದ್ದಾರೆ. ಹೀಗೆ ಅವರು ಮುಷ್ಕರವನ್ನು ಹೂಡಲೇಬೇಕಾದ ಸಂದರ್ಭ ಒದಗಿದರೆ ದೇಶದಲ್ಲೆಲ್ಲಾ ಅತ್ಯಂತ ಅನರ್ಥವುಂಟಾಗುವುದರಲ್ಲಿ ಸಂದೇಹವಿಲ್ಲ.

ಅಂಚೆ ನೌಕರರ ಸಂಬಳ ನಾರಿಗೆ ವಿಚಾರವನ್ನು ಪಂಚಾಯಿತರ ಸಲಹೆಯಂತೆ ತೀರ್ಮಾನ ಮಾಡಿದ ನಂತರ ಸರ್ಕಾರದವರು ಎಲ್ಲಾ ನೌಕರರ ಸಂಬಳದ ವಿಚಾರವನ್ನೂ ಪರಿಶೀಲಿಸದಿದ್ದರೆ ರೈಲ್ವೆ ನೌಕರರು ಮುಷ್ಕರ ಹೂಡಿಯೇ ತೀರುವರೆಂದೂ ಶ್ರೀ ಗುರುಸ್ವಾಮಿಯವರು ಹೇಳಿರುವರು. ಪಂಚಾಯಿತರ ತೀರ್ಪನ್ನು ಸರ್ಕಾರದವರು ಇನ್ನೂ ಪ್ರಕಟಿಸದಿರುವುದರಿಂದ ಇಲ್ಲದ ಸಲ್ಲದ ಅಸಮಾಧಾನಕ್ಕೆ ಅವಕಾಶವಾಗಿರುತ್ತದೆ ಮತ್ತು ವೃಥಾ ಕಾಲಹರಣವಾಗುತ್ತಿರುವುದಕ್ಕಾಗಿಯೂ ಕೆಲಸಗಾರರು ಬೇಸರಗೊಂಡಿದ್ದಾರೆ.

